
ವಾಸಿಷ್ಠ ವೈಭವಂ



ಭಗವಾನ್ ರಮಣಮಹರ್ಷಿಗಳ ಶಿಷ್ಯ
ಶ್ರೀವಾಸಿಷ್ಠ ಗಣಪತಿ ಮುನಿಗಳ ಬದುಕು-ಬರಹ

ಓಂ

"ವಾಸಿಷ್ಠ ವೈಭವಂ"

(ಭಗವಾನ್ ರಮಣ ಮಹರ್ಷಿಗಳ ಶಿಷ್ಯ ಶ್ರೀ ವಾಸಿಷ್ಠ ಗಣಪತಿಮುನಿಗಳ ಬದುಕು-ಬರಹ)

ಮೂಲ ಸಂಸ್ಕೃತರಚನೆ :–
ವೇ॥ ಬ್ರಹ್ಮ॥ಶ್ರೀ॥ ಕಪಾಲಿಶಾಸ್ತ್ರಿಗಳವರು.

ಕನ್ನಡ ಅನುವಾದ :–
ಹರಿಹರಪುರ ಬಿ. ಸುಬ್ರಹ್ಮಣ್ಯಂ
ಸಾಹಿತ್ಯ ಭೂಷಣ-ಜ್ಯೋತಿಷ್ಯ ರತ್ನಂ (ಅಯೋಧ್ಯಾ)
ನಂ.11, ಮಾಡಲ್ ಹೌಸ್ ಬ್ಲಾಕ್, (ಶಾಮಣ್ಣ ಪಾರ್ಕ್ ಮುಂಭಾಗ)
ಬಸವನಗುಡಿ ಅಂಚೆ, ಬೆಂಗಳೂರು-560004

ಪ್ರಕಾಶಕರು:–
ಜೀವನ್ಮುಕ್ತ ಪ್ರಕಾಶನ
ನಂ. 527, 11ನೇ ಮುಖ್ಯರಸ್ತೆ, ಜಯನಗರ, ಬೆಂಗಳೂರು-560 041

'Vasistha Vaibhavam' Kannada Version of the same sanskrit writing of Ve. Bram. Sri Kapali Shasthry. Kannada Version :- By Hariharapura B. Subramanyam 'Sahitya Bhushana'

1st Edition : 1991
Copies : 1000


Pages : 24 + 247 = 271
PRICE : Rs. 55

Publishers and Copy right:- JIEVDHAN PRAKASHANA,
No. 527, 11th Main, 5th Block,
Jayanagar, Bangalore-560 041.

ಪ್ರಥಮ ಮುದ್ರಣ : 1991 ಪುಟಗಳು 24 + 247 = 271
ಪ್ರತಿಗಳು : 1000 ಬೆಲೆ ; ರೂ. 55

ಮುದ್ರಕರು :

ಪ್ರಾಚಿ ಪ್ರಿಂಟರ್ಸ್ (ಪ್ರೈ.) ಲಿಮಿಟೆಡ್
1861, 38ನೇ ಅಡ್ಡ ರಸ್ತೆ, 11ನೇ ಎ ಮುಖ್ಯ ರಸ್ತೆ,
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು-560 041



Sri. Vasistha Ganapathi Muni

ಮುನ್ನುಡಿ ಸಂದೇಶ

ಎಂ. ಪಿ. ಪಂಡಿತ್.
ದೂರವಾಣಿ : 25067

ಶ್ರೀ ಅರವಿಂದಾಶ್ರಮ,
ಪಾಂಡಿಚೆರಿ. 605 002,
(ಇಂಡಿಯಾ)

ಈ ಶತಮಾನದ ಪ್ರಾರಂಭದ ದಶಕಗಳಲ್ಲಿ ಭಾರತೀಯ ಕಲೆ-ವಿದ್ಯೆಗಳ ಪುನರುತ್ಥಾನದ ದಿಗಂತದಲ್ಲಿ ಬೆಳಗಿದ ಉಜ್ವಲ ನಕ್ಷತ್ರವೆಂದರೆ **ವಾಸಿಷ್ಠಗಣಪತಿಮುನಿಗಳು**. ಆಧ್ಯಾತ್ಮಿಕ ಕ್ಷೇತ್ರ-ಯೋಗ ಶಾಸ್ತ್ರ-ವೈದಿಕ ಪರಂಪರೆಯ ಪುನರುಜ್ಜೀವನ-ಜ್ಯೋತಿಷ್ಯ ಶಾಸ್ತ್ರದ ಅಂತರ್ಗತಪರಿಜ್ಞಾನ-ಸಂಸ್ಕೃತವಾಙ್ಮಯ-ರಾಜಕೀಯ ಸಾಮಾಜಿಕ ವಿಚಾರಧಾರೆಗಳಿಗೆ ಅವರ ಕೊಡುಗೆ ಅಪ್ರತಿಮವಾದದ್ದು. ಭಗವಾನ್ ರಮಣ ಮಹರ್ಷಿಗಳ ಅನುಭಾವದ ಮಹತ್ವಿಕೆಯನ್ನು ಜಗತ್ತಿಗೆ ಕಾಣಿಸಿಕೊಟ್ಟವರೇ ಅವರು. ಸಂಸ್ಕೃತ ಅಶುಕವಿತಾ ಪ್ರಕಾರದಲ್ಲಿ ಹಲವು ಪ್ರಶಸ್ತಿಗಳನ್ನು ಗಳಿಸಿದ ಅವರ ಪ್ರತಿಭಾ ಸಂಪನ್ನತೆಗೆ ಸರಿಸಾಟಿಯಾದವರು ಇಂದಿಗೂ ಬೇರೆ ಯಾರೂ ಕಂಡು ಬಂದಿಲ್ಲ. ಅವರ ಅದ್ವಿತೀಯ ಶಿಷ್ಯ **ಶ್ರೀ ಕಪಾಲಿ ಶಾಸ್ತ್ರಿಯವರು "ವಾಸಿಷ್ಠವೈಭವಂ"** ಹೆಸರಿನಲ್ಲಿ ರಚಿಸಿರುವ ಅವರ ಜೀವನ ಇತಿಹಾಸವು ಈ ಕಾಲಕ್ಕೆ ಸಂಸ್ಕೃತಭಾಷಾವ್ಯಕ್ತಿಚಿತ್ರಣಕಲೆಯಲ್ಲಿಯೇ ಒಂದು ಹೆಗ್ಗುರುತು. ದುರದೃಷ್ಟವಶಾತ್ ಈ ಪುರಾತನ ಭಾಷೆಯ ಪರಿಚಯ ಬಹಳಷ್ಟು ಜನರಿಗೆ ಇಲ್ಲವಾಗಿ, ಈ ಗ್ರಂಥದ ವಿಷಯಗಳು ಸಾಮಾನ್ಯ ಓದುಗರ ಗಮನಕ್ಕೆ ಬಾರದೆ ಉಳಿದು ಬಿಟ್ಟಿವೆ.

ಪರಿಪರಪುರ ಬಿ॥ ಸುಬ್ರಹ್ಮಣ್ಯಂರವರ ಶ್ರೇಣಿಯ **ಸಹೃದಯಿ ಬರಹಗಾರರೊಬ್ಬರು** ಈ ಶ್ರೇಷ್ಠ ಸಾಹಿತ್ಯವನ್ನು ಕನ್ನಡಕ್ಕೆ ಸಮರ್ಪಿಸಲು ಆಯ್ದುಕೊಂಡಿರುವುದು ಸುದೈವವೇ ಸರಿ. ಅವರ ಸಾರಾಂಶ ಗರ್ಭಿತ ಅನುವಾದ ವೈಖರಿಯು ಯಾವ ಕೊರತೆಯನ್ನೂ ಉಳಿಸದೆ ಮೂಲಗ್ರಂಥದ ಸೌರಭವನ್ನು ತನ್ನೊಡನೆ ಕೊಂಡೊಯ್ದಿದೆ. ಶ್ರೀ॥ ಸುಬ್ರಹ್ಮಣ್ಯಂರವರ ಪಾಲಿಗೆ ಇದೊಂದು ಶ್ರದ್ಧೆ-ವಾತ್ಸಲ್ಯ ಪೂರ್ಣ ಪರಿಶ್ರಮವಾಗಿದ್ದು ಕನ್ನಡದ ಓದುಗರಿಗೆ **"ಈ ವೈಭವದ"** ಪರಿಚಯ ಸುಲಭ ಸಾಧ್ಯವಾಗುವಂತೆ ಮಾಡಿರುವ ಅವರ ಗಮನಾರ್ಹ ಸೇವೆಗಾಗಿ ವಾಸಿಷ್ಠಮುನಿಗಳ ಅಭಿಮಾನೀ ಬಳಗವು ಅವರಿಗೆ ಚಿರಋಣಿಯಾಗಿದೆ. ಕನ್ನಡ ಮತ್ತು ಸಂಸ್ಕೃತಗಳೆರಡರಲ್ಲಿಯೂ ಅವರಿಗೆ ಇರುವ ಪರಿಶ್ರಮ ವಿಶಿಷ್ಟವಾದುದೆಂಬುದಕ್ಕೆ ಅವರು ಕಥಾನಕವನ್ನು ಕೊಂಡೊಯ್ಯುವ ಕ್ರಮವೇ ಸಾಕ್ಷಿಯಾಗಿದೆ. ಅವರ ಅನುವಾದ ಸ್ವತಂತ್ರ ರಚನೆಯಂತೆಯೇ ಓದಿಸಿಕೊಂಡು ಹೋಗುತ್ತದೆ.

ಇದೊಂದು ಪ್ರಾಮಾಣಿಕ-ಮನೋಹರ-ಆಸಕ್ತಿಜನಕ ಬರಹ.

ದಿನಾಂಕ : 24-3-91.

ಎಂ. ಪಿ. ಪಂಡಿತ್.

ಕವಿ-ಕಾವ್ಯ ಪರಿಚಯ

ಕವಿಯ ಬಗೆಗೆ :-

"ವಾಸಿಷ್ಠ ವೈಭವಂ" ಸಂಸ್ಕೃತ ಗದ್ಯ-ಪದ್ಯಾತ್ಮಕ ಜೀವನಚಿತ್ರಣ ವೇ॥ ಬ್ರಂ॥ ಶ್ರೀ॥ ಕಪಾಲಿ ಶಾಸ್ತ್ರಿಗಳ ರಚನೆ. ಶಾಸ್ತ್ರಿಗಳು ಹುಟ್ಟಿದುದು 3-9-1886ರಂದು ಮದರಾಸಿನ ಮೈಲಾಪುರದಲ್ಲಿ. ಪರಂಪರೆಯಿಂದ ಸಂಸ್ಕೃತ ಪಾಂಡಿತ್ಯ-ಶ್ರೀ ವಿದ್ಯಾ ಉಪಾಸನೆ-ವೈದಿಕ ಅನುಷ್ಠಾನಗಳಿಗೆ ಹೆಸರಾಂತ ಮನೆತನ ಅವರದ್ದು. ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸರೂ, ಶ್ರೀ ವಿದ್ಯಾ ಉಪಾಸಕರೂ ಆಗಿದ್ದ ಅವರ ತಂದೆ ಶ್ರೀ ವಿಶ್ವೇಶ್ವರ ಶಾಸ್ತ್ರಿಗಳು ಮಗ ಕಪಾಲಿ ಶಾಸ್ತ್ರಿಗೆ ಬಾಲ್ಯದಲ್ಲಿಯೇ ಇವುಗಳ ಪರಿಚಯ ಮಾಡಿಕೊಟ್ಟರು. ಭಾರದ್ವಾಜ ಗೋತ್ರದ ಇವರು ಸಾಮವೇದಿಗಳಾದುದರಿಂದ ಸಾಮವೇದದ ಅಧ್ಯಯನವೂ ನಡೆಯಿತು. ಪೂಜೆ-ಪಾರಾಯಣ-ಮಂತ್ರ-ಜಪಾನುಷ್ಠಾನಗಳನ್ನು ಬಾಲ್ಯದಲ್ಲಿಯೇ ಮೈಗೂಡಿಸಿಕೊಂಡ ಈ ಮೇಧಾವೀ ಬಾಲಕ 12ನೇ ವಯಸ್ಸಿಗೇ ಶ್ರೀರಾಮಾಯಣವನ್ನು 12ಸಲ ಸಮಗ್ರವಾಗಿ ಪಾರಾಯಣಮಾಡಿ ಪಟ್ಟಾಭಿಷೇಕಗಳನ್ನು ನಿರ್ವಹಿಸಿದ್ದುಂಟು. ಪ್ರತಿದಿನ ಪ್ರಾತಃ ಕಾಲ ಶ್ರೀ ಲಲಿತಾತ್ರಿಪುರ ಸುಂದರಿಯ ಅಧಿಷ್ಠಾನದ ಮುಂದೆ ನಿಂತು ಶ್ರೀ ವಿದ್ಯಾ ಮಂತ್ರವನ್ನು 1008 ಸಲ ಜಪಿಸುವುದು ಅವರ ಒಂದು ಪದ್ಧತಿ. ಸುಪ್ರಸಿದ್ಧ ರೈಟ್-ಆನರಬಲ್ ಶ್ರೀನಿವಾಸ ಶಾಸ್ತ್ರಿಯವರು ಮುಖ್ಯೋಪಾಧ್ಯಾಯರಾಗಿದ್ದ ಮದರಾಸಿನ ಹಿಂದೂ ಹೈಸ್ಕೂಲ್‌ನಲ್ಲಿ ಅವರ ಆಂಗ್ಲ ಪ್ರೌಢ ವಿದ್ಯಾಭ್ಯಾಸ ನಡೆಯಿತು.

20ನೇ ಶತಮಾನದ ಅರುಣೋದಯವಾದಾಗ ಕಪಾಲಿಶಾಸ್ತ್ರಿಗಳ ವಯಸ್ಸು 14 ವರ್ಷ. ಆದರೆ ಆ ವೇಳೆಗಾಗಲೇ ಅವರ ಬುದ್ಧಿಯು ಎತ್ತರವನ್ನು ಏರಿ-ಗಾಢವಾದ ಆಳಕ್ಕೆ ಹೊಕ್ಕು ಬೇಕಾದುದನ್ನು ತಿಳಿಯುವಲ್ಲಿ ಸಮರ್ಥವಾಗುತ್ತ ನಿಶಿತಗೊಳ್ಳುತ್ತಿತ್ತು. ಆ ವಯಸ್ಸಿಗಾಗಲೇ ಅವರು ಪಂಡಿತರ ಮತ್ತು ಆಧ್ಯಾತ್ಮ ಚಿಂತಕರ ಪ್ರಪಂಚದಲ್ಲಿ ಉಜ್ವಲ ಭವಿಷ್ಯದ ಸ್ಥಿರವಾದ ನಿಲುವನ್ನು ಸಂಪಾದಿಸಿ ಬಿಟ್ಟಿದ್ದರು.

ಈ 20ನೇ ಶತಮಾನದ ಮೊದಲ ಮೂರು ದಶಕಗಳು ಈ ಕ್ರಾಂತಿಕಾರಕ ಯುಗದ ಅರುಣೋದಯದ ದಿನಗಳಾಗಿದ್ದವು.

ಶ್ರೀ ರಾಮಕೃಷ್ಣ ಪರಮಹಂಸರು–ಶ್ರೀ ವಿವೇಕಾನಂದರು ಈ ಉಜ್ವಲ ದಶಕಗಳ ಅರುಣೋದಯವನ್ನು ತೀವ್ರಗೊಳಿಸಿದ್ದರು. ಕಲೆ–ಸಾಹಿತ್ಯ ಕ್ಷೇತ್ರದಲ್ಲಿ ಟಾಗೋರರು-ಭಾರತಿಯವರು, ವೈಜ್ಞಾನಿಕ ಪ್ರಕಾರದಲ್ಲಿ ರಾಮನ್ ಮತ್ತು ಬೋಸ್, ಯೋಗ-ಸಂಸ್ಕೃತಿಗಳಲ್ಲಿ ಶ್ರೀರಮಣ ಮಹರ್ಷಿ ಮತ್ತು ಅರವಿಂದರು, ರಾಜಕೀಯದಲ್ಲಿ ತಿಲಕ ಮತ್ತು ಗಾಂಧೀಜಿ ಇವರುಗಳು ಈ ನೂತನ ಅರುಣೋದಯದ ಪ್ರಥಮ ಪ್ರಕಾಶವನ್ನು ಹಿಡಿದಿಟ್ಟುಕೊಂಡು ಅದು ನಡು ಹಗಲಿನ ಪರಿಪೂರ್ಣತೆ ಪಡೆಯುವ ನಿಟ್ಟಿನಲ್ಲಿ ಶ್ರಮಿಸಿದರು.

ಶ್ರೀ॥ ಕಪಾಲಿ ಶಾಸ್ತ್ರಿಗಳು ಪ್ರತಿಭಾಶಾಲಿಯಾಗಿ ಮುನ್ನಡೆಯುತ್ತಿದ್ದುದ ಇದೇ ದಿನಗಳಲ್ಲಿ. ವೇದ ಮಂತ್ರಗಳನ್ನು ಪರಂಪರಾಗತ ಕ್ರಮದಲ್ಲಿ ಪಠನ ಮಾಡುವುದು, ವಿಧಿ-ಅನುಷ್ಠಾನಗಳಲ್ಲಿ ಮಂತ್ರಗಳನ್ನು ಉಪಯೋಗಿಸುವುದು, ಇವೆಲ್ಲದರ ಶಿಕ್ಷಣ ಶಾಸ್ತ್ರಿಗಳಿಗೆ ದೊರೆತಿತ್ತು. ಆದರೆ ಪ್ರಾಚೀನ ತಾಳೆಗರಿ ಗ್ರಂಥಗಳು ಉಪನಿಷತ್ತುಗಳಿಂದ ಹಿಡಿದು ಪುರಾಣಗಳವರೆಗೆ ಪವಿತ್ರ ಮೂಲ ಪಾಠಗಳನ್ನೆಲ್ಲಾ ಅವಲೋಕಿಸಿದ ಮೇಲೆ "ವೇದಗಳು ಎಲ್ಲ ಆಧ್ಯಾತ್ಮಿಕ ಸಾಧನೆಗೆ ಅಧಿಕೃತ ಮೂಲವನ್ನು ಹೊಂದಿವೆಯೆಂಬ" ಮಾತು ಅವುಗಳ ಈಗಿನ ತೋರಿಕೆಯ ಅರ್ಥಗಳಿಂದ ಪ್ರತಿಪಾದಿತವಾಗಲಾರದೆಂಬುದನ್ನು ಶಾಸ್ತ್ರಿಗಳು ಮನಗಂಡರು. ಈ ಅವಧಿಯಲ್ಲಿ ಅವರು ವೇದ ಮಂತ್ರಗಳ ರಹಸ್ಯಗಳನ್ನು ಕುರಿತು ಮತ್ತೆ ಮತ್ತೆ ಚಿಂತನೆ ನಡೆಸಿದರು. ಸಾಯಣ ವೇದ ಭಾಷ್ಯಗಳನ್ನು ಓದಿದರು. ಯಾವುದರಿಂದಲೂ ಶಾಸ್ತ್ರಿಗಳ ಮಂತ್ರ ರಹಸ್ಯಗಳನ್ನು ಅರಿಯುವ ಕುತೂಹಲ ತಣಿಯಲಿಲ್ಲ. ಅವರು ಈ ನಿಟ್ಟಿನಲ್ಲಿ ಸಮರ್ಥವಾಗಿ ಮಾರ್ಗದರ್ಶನ ಮಾಡಬಲ್ಲ ಬೆಳಕಿನ ಪ್ರತೀಕ್ಷೆಯಲ್ಲಿಯೇ ಇದ್ದರು.

ಇದೇ ಸಂದರ್ಭದಲ್ಲಿ 1906ರಲ್ಲಿ ಶಾಸ್ತ್ರಿಗಳಿಗೆ ಕಾವ್ಯಕಂಠ ಗಣಪತಿಶಾಸ್ತ್ರಿ ಅಂದರೆ ವಾಸಿಷ್ಠ ಗಣಪತಿಮುನಿಗಳ ಪ್ರಥಮ ಭೇಟಿ ಲಭಿಸಿತು. ಒಬ್ಬ ಗ್ರೀಕನನ್ನು ಇನ್ನೊಬ್ಬ ಗ್ರೀಕನು ಭೇಟಿಯಾದಂತೆ ಎಂಬ ಆಂಗ್ಲ ಗಾದೆಗೆ ಸರಿಹೋಗುವ ಸಂದರ್ಭ ಅದು. ತಾನು ಹಂಬಲಿಸುತ್ತಿದ್ದ ಮಾರ್ಗದರ್ಶನ ಇವರಿಂದ ದೊರೆಯುತ್ತದೆಯೆಂಬ ನಂಬಿಕೆ ಶಾಸ್ತ್ರಿಗಳಿಗೆ ಆ ಕ್ಷಣದಲ್ಲಿ ಉಂಟಾಯಿತು. ಆಗಲೇ ವಾಸಿಷ್ಠಮುನಿಗಳ ಶಿಷ್ಯತ್ವ ಪಡೆದುಕೊಂಡ ಶಾಸ್ತ್ರಿಗಳು 1910ರ ವೇಳೆಗೆ ವೈದಿಕ-ಔಪನಿಷದಿಕ-ತಾಂತ್ರಿಕ-ಪೌರಾಣಿಕ ಪರಂಪರಾಗತ ಬೆಳಕಿನ ರಹಸ್ಯಗಳನ್ನು ಗುರುವಿನ ಸಹಾಯದಿಂದ ಚೆನ್ನಾಗಿ ಅರಿತರು. ನಂತರ ವಾಸಿಷ್ಠಮುನಿಗಳು ಶಾಸ್ತ್ರಿಗಳನ್ನು ತಮ್ಮ ಗುರುಗಳಾದ ರಮಣಮಹರ್ಷಿಗಳ ಬಳಿಗೆ ಕರೆದೊಯ್ದಾಗ ಮಹರ್ಷಿಗಳ ಅನು

ಗ್ರಹವೂ ಲಭಿಸಿತು. ವಾಸಿಷ್ಠಮುನಿಗಳನ್ನು "ನಾಯನಾ" (ತೆಲುಗು ಭಾಷೆಯಲ್ಲಿ ತಂದೆ ಎಂಬ ಅರ್ಥ) ಎಂದು ವಾತ್ಸಲ್ಯದಿಂದ ಕರೆಯುತ್ತಿದ್ದ ಭಗವಾನ್ ರಮಣರು ಶಾಸ್ತ್ರಿಗಳನ್ನು "ಚಿನ್ನ ನಾಯನಾ" ಎಂದು ಪ್ರೀತಿಯಿಂದ ಹೆಸರಿಸಿದ್ದುಂಟು.

ಶ್ರೀ॥ ಶಾಸ್ತ್ರಿಗಳವರಿಗೆ ಈ ಕಾಲದ ಅವಶ್ಯಕತೆಗೆ ತಕ್ಕಂತೆ ಪೌರ್ವಾತ್ಯ ಜ್ಞಾನಭಂಡಾರದ ರಹಸ್ಯಗಳನ್ನು ಪಾಶ್ಚಾತ್ಯ ವಿಜ್ಞಾನದ ನಿಕಷದಲ್ಲಿ ಒರೆ ಹಚ್ಚಿ ಅವುಗಳ ಮಹತ್ವಿಕೆಯನ್ನು ಪ್ರಚುರಪಡಿಸುವ ಆಸೆ ಬಹಳವಾಗಿತ್ತು. ಮಹರ್ಷಿ ಅರವಿಂದರ "ಆರ್ಯ" ಪತ್ರಿಕೆಯ ಸಂಚಿಕೆ ಅಕಸ್ಮಾತ್ ಅವರಿಗೆ ದೊರೆತು ಮುಂದೆ ಆ ಪತ್ರಿಕೆಯ ಸಂಚಿಕೆಗಳಲ್ಲಿ ಬರುತ್ತಿದ್ದ "ವೇದ ರಹಸ್ಯ" (Secret of the Veda) ಲೇಖನ ಮಾಲಿಕೆ ಅವರ ಆಸೆಗೆ ಶಕ್ತಿವರ್ಧಕದಂತೆ ಪರಿಣಮಿಸಿತು.

1917ರಲ್ಲಿ ಪಾಂಡಿಚೆರಿ ಶ್ರೀ ಶಂಕರಜಯಂತೀ ಸಭೆಯಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲ್ಪಟ್ಟ ಕಪಾಲಿಶಾಸ್ತ್ರಿಗಳು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಮಹರ್ಷಿ ಅರವಿಂದರ ಸಂದರ್ಶನ ಪಡೆದಾಗ ಹೊಸ ಬೆಳಕೊಂದನ್ನು ಕಂಡುಕೊಂಡ ಅನುಭವವಾಯಿತು. ಆಗಾಗ ಪಾಂಡಿಚೆರಿಗೆ ಬಂದು ಗುರು ಅರವಿಂದರನ್ನು ಸಂದರ್ಶಿಸುತ್ತಿದ್ದ ಶಾಸ್ತ್ರಿಗಳು ಪಾಂಡಿಚೆರಿಯಲ್ಲಿ "ಅರವಿಂದಾಶ್ರಮ" ಪ್ರಾರಂಭವಾದಾಗ ಅಲ್ಲಿಯೇ ನೆಲೆಯಾಗಿ ನಿಂತರು. ಶ್ರೀ ವಾಸಿಷ್ಠ ಗಣಪತಿ ಮುನಿಗಳಂತೆ ವೇದ-ಉಪನಿಷತ್ತು ಯೋಗ-ಮಂತ್ರ-ತಂತ್ರ-ಆಯುರ್ವೇದ- ರಸಶಾಸ್ತ್ರ-ಸಂಸ್ಕೃತ ವಾಙ್ಮಯ-ಜ್ಯೋತಿಷ್ಯ ಮುಂತಾದ ಪ್ರಕಾರಗಳಲ್ಲಿ ವಿಶೇಷ ಪಾಂಡಿತ್ಯ-ಪ್ರಾಯೋಗಿಕ ಅನುಭವಗಳನ್ನು ಸಾಧಿಸಿದ್ದ ಶ್ರೀ ಶಾಸ್ತ್ರಿಗಳು ಹೆಚ್ಚಿನದಾಗಿ ಆಂಗ್ಲಭಾಷೆಯಲ್ಲಿಯೂ ಪರಿಣತಿ ಸಂಪಾದಿಸಿದ್ದರು. ಆಶ್ರಮದ ಸೇವೆಯಲ್ಲಿದ್ದ ಈ ಮೇಧಾವೀ ವ್ಯಕ್ತಿತ್ವದ ಶಾಸ್ತ್ರಿಗಳ ಬಗ್ಗೆ ಮಹರ್ಷಿ ಅರವಿಂದರಿಗೆ ವಿಶೇಷ ವಾತ್ಸಲ್ಯ-ಮೆಚ್ಚುಗೆಗಳಿದ್ದವು. ಶ್ರೀ ಅರವಿಂದರು ಆಗಾಗ ಜ್ಯೋತಿಷ್ಯ- ಸಂಸ್ಕೃತ ವ್ಯಾಕರಣಕ್ಕೆ ಸಂಬಂಧ ಪಟ್ಟ ವಿಷಯಗಳ ಬಗ್ಗೆ ನಿರ್ಣಯಕ್ಕಾಗಿ ಶಾಸ್ತ್ರಿಗಳಿಗೆ ಬರೆದು ಕಳಿಸುತ್ತಿದ್ದುದುಂಟು.

ಮಹರ್ಷಿ ಅರವಿಂದರ ವಿಚಾರಧಾರೆಯ ಬೆಳಕಿನಲ್ಲಿ ಋಗ್ವೇದದ ಪ್ರಥಮ ಅಷ್ಟಕಕ್ಕೆ ಕಪಾಲಿಶಾಸ್ತ್ರಿಗಳು ರಚಿಸಿದ "ಸಿದ್ಧಾಂಜನ"ವೆಂಬ ಭಾಷ್ಯ ಎಲ್ಲ ದೃಷ್ಟಿಯಿಂದಲೂ ಉತ್ಕೃಷ್ಟವೆನಿಸಿ-ಕೆಲವು ವಿಶ್ವವಿದ್ಯಾನಿಲಯಗಳ ಉಚ್ಚತರಗತಿಗಳಿಗೆ ಪಠ್ಯಪುಸ್ತಕವಾಗಿ ಮಾನ್ಯತೆ ಪಡೆದಿದೆ. ಉಪನಿಷತ್ತುಗಳು-ತಂತ್ರಶಾಸ್ತ್ರ-ಸಂಸ್ಕೃತ ವ್ಯಾಕರಣದ ತತ್ತ್ವಗಳ ಬಗ್ಗೆ ಅವರ ರಚನೆಗಳು ಪ್ರಮಾಣ ಗ್ರಂಥಗಳೆನಿಸಿವೆ. ಶ್ರೀ ವಾಸಿಷ್ಠಗಣಪತಿ ಮುನಿಗಳ ಶ್ರೇಷ್ಠರಚನೆಗಳಾದ ಉಮಾಸಹಸ್ರಂ-ರಮಣ ಗೀತಾ–

ಸತ್‌ದರ್ಶನಗಳಿಗೆ ಶಾಸ್ತ್ರಿಗಳು ಬರೆದಿರುವ ವ್ಯಾಖ್ಯಾನಗಳು ಶ್ರೀರಮಣ ಮಹರ್ಷಿಗಳು-ವಾಸಿಷ್ಠಮುನಿಗಳು ಹೊಂದಿದ್ದ ಅಂತರ್ದೃಷ್ಟಿಯನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತಿವೆ. ಶಾಸ್ತ್ರಿಗಳು ಬರೆದಿರುವ "ವಾಸಿಷ್ಠ ವೈಭವಂ" ಸಂಸ್ಕೃತ ಗ್ರಂಥ (ವಾಸಿಷ್ಠ ಮುನಿಗಳ ಜೀವನ ಚಿತ್ರಣ)ವು ಈಗಿನ ಸತ್ವಪೂರ್ಣ ಶೈಲಿಯನ್ನನುಸರಿಸಿ-ಚಿಕ್ಕ ಸಂಸ್ಕೃತವಾಕ್ಯಗಳ ಬಳಕೆಯವಿಷಯದಲ್ಲಿ ಒಂದು ಹೊಸ ಆಯಾಮವನ್ನೇ ತೆರೆದಿಟ್ಟಿದೆ. ಶ್ರೀ ಅರವಿಂದರು ಮತ್ತು ಶ್ರೀ ಮಾತೆಯವರ ಕೃತಿಗಳು ಕೆಲವನ್ನು ಶಾಸ್ತ್ರಿಗಳು ತೆಲುಗು-ತಮಿಳುಗಳಲ್ಲಿ ಭಾಷಾಂತರಿಸಿದ್ದು ಅವು ಈಗಲೂ ಜನಪ್ರಿಯವಾಗಿದೆ. ಸಂಸ್ಕೃತ-ಇಂಗ್ಲೀಷ್-ತೆಲುಗು-ತಮಿಳು ಭಾಷೆಗಳನ್ನು ಸಮರ್ಥವಾಗಿ ಬಳಸುವಲ್ಲಿ ಅವರಿಗಿದ್ದ ಪ್ರೌಢಿಮೆಯನ್ನು ಅವರ ಕೃತಿಗಳಲ್ಲಿ ಕಾಣಬಹುದು.

ಅವರು ಮಂತ್ರಶಾಸ್ತ್ರದ ಪರಮನಿಷ್ಠ ಉಪಾಸಕರು. ಅದರಲ್ಲಿ ಅವರು ಗಳಿಸಿದ್ದ ಸಾಮರ್ಥ್ಯ ಕೂಡ ಎಣೆಯಿಲ್ಲದ್ದು. ಯಾತನೆಯಿಂದ ನರಳುತ್ತಿದ್ದ ಅನೇಕರ ಸಂಕಷ್ಟಗಳನ್ನು ತಮ್ಮ ಮಂತ್ರಜಪದ ಪ್ರಭಾವದಿಂದ ಕಪಾಲಿ ಶಾಸ್ತ್ರಿಗಳು ಪರಿಹರಿಸಿ ಅವರುಗಳ ಬದುಕು ಸಹ್ಯವಾಗುವಂತೆ ಮಾಡಿರುವ ವಿಷಯಗಳು ಅಧಿಕೃತ ದಾಖಲೆಗಳೇ ಆಗಿ ಉಳಿದಿವೆ. ಅವರು ಧ್ಯಾನಸ್ಥರಾಗಿ ದೇವತಾ ಮಂತ್ರವೊಂದರ ಪಠನೆಯ ಮೂಲಕ ಆ ದೇವತಾತತ್ತ್ವವನ್ನು ಜಾಗ್ರತಗೊಳಿಸಿದಾಗ ಬಹುತೇಕ ಭೌತಿಕವಾಗಿಯೇ ಆ ದೇವತಾ ಸಾನ್ನಿಧ್ಯ ಕಂಡುಬಂದು ಅದರ ಪರಿಣಾಮ ಕೂಡ ವಾಸ್ತವಿಕ ಅನುಭವಕ್ಕೆ ಬರುತ್ತಿತ್ತೆಂಬುದನ್ನು ಅರವಿಂದಾಶ್ರಮದ ಮಾತೆಯವರೇ ಖಚಿತಪಡಿಸಿದ್ದಾರೆ. ವೇದಮೂರ್ತಿಗಳಾಗಿದ್ದ ಕಪಾಲಿಶಾಸ್ತ್ರಿಗಳ ಭೌತಿಕ ಶರೀರ ಕಣ್ಮರೆಯಾಗಿ ಹೋಗಿದ್ದರೂ ವ್ಯಕ್ತಿತ್ವ-ಸಾಧನೆ-ಕೃತಿಗಳಿಂದ ಅವರು ಎಂದಿಗೂ ಅಮರರೇ ಸರಿ. ಆ ಮಹನೀಯರ ಬಗ್ಗೆ ಇದು ಸಂಕ್ಷಿಪ್ತ ಪರಿಚಯ ಅಷ್ಟೇ.

ಕಾವ್ಯದ ಕುರಿತು :

ಶ್ರೀ ಕಪಾಲಿಶಾಸ್ತ್ರಿಗಳು ರಚಿಸಿರುವ "ವಾಸಿಷ್ಠ ವೈಭವಂ" ಸಂಸ್ಕೃತ ಕೃತಿಯು ಗದ್ಯ-ಪದ್ಯಾತ್ಮಕವಾದ ಚಂಪೂಕಾವ್ಯ, ಕ್ರೌನ್ $\frac{1}{4}$ ಸೈಜಿನ 154 ಪುಟಗಳಲ್ಲಿ ದೇವನಾಗರಿ ಲಿಪಿಯಲ್ಲಿ ಮುದ್ರಿತವಾಗಿರುವ ಈ ರಚನೆಯಲ್ಲಿ 211 ಸಂಸ್ಕೃತ ಶ್ಲೋಕಗಳು ಗದ್ಯ ಭಾಗದ ನಡುವೆ ಅಲ್ಲಲ್ಲಿ ಅಳವಡಿಸಲ್ಪಟ್ಟಿವೆ. ಇದರ ಹೊರತು ಪ್ರತಿ ಪ್ರಕರಣದ ವಿಷಯದ ತಿರುಳನ್ನು ಪ್ರತಿಬಿಂಬಿಸಬಲ್ಲ ವಿವಿಧ ಕಾವ್ಯ-ನಾಟಕಗಳಿಂದ ಆಯ್ದ ಸೂಕ್ತಿಗಳು-ಶ್ಲೋಕಗಳು 70 ಇದ್ದು ಕವಿಯ ತಿಳುವಳಿಕೆಯ-ಅಗಲ ಆಳಗಳ ಪರಿಚಯ ಮಾಡಿಕೊಡುತ್ತವೆ. ಮತ್ತೆ ವೇದದ ಋಕ್ಕು

ಗಳು-ವಾಸಿಷ್ಠ ಮುನಿಗಳು ರಚಿಸಿದ-ಉದಹರಿಸಿದ ಶ್ಲೋಕಗಳೂ ಇವೆ. ಶ್ರೀ ಕಾವ್ಯ ಕಂಠ ವಾಸಿಷ್ಠ ಗಣಪತಿ ಮುನಿಗಳ ಜನನದಿಂದ ಹಿಡಿದು ವಿದೇಹ ಮುಕ್ತಿಯ ವರೆಗಿನ ಸಾಧನೆ-ಬರಹಗಳ ವಿವರ ಇದರಲ್ಲಿ ಅಡಕವಾಗಿದೆ. ಇನ್ನೊಂದು ವೈಶಿಷ್ಟ್ಯ :- ಈ ಗ್ರಂಥದಲ್ಲಿ ಕೆಲವು ಪ್ರಸಂಗಗಳು ವಾಸಿಷ್ಠ ಮುನಿಗಳ ಮಾತಿನಲ್ಲಿಯೇ ಇರುವುದರಿಂದ ಈ ಅದ್ವಿತೀಯ ಗುರು-ಶಿಷ್ಯರಿಬ್ಬರ ಪ್ರೌಢ-ಸರಳ-ಮನೋಹರ ಸಂಸ್ಕೃತ ಭಾಷಾ ಶೈಲಿಯ ವೈಶಿಷ್ಟ್ಯ ನಮ್ಮ ಅರಿವಿಗೆ ಬರುತ್ತದೆ. ಪುರಾತನ ಕಾವ್ಯಗಳನ್ನು ವೈದರ್ಭೀ ಮುಂತಾದ ಶೈಲಿಗಳಿಂದ ಗುರುತಿಸುವಂತೆ ಈ "ವಾಸಿಷ್ಠ ವೈಭವ"ದ ವಿನೂತನ ಶೈಲಿಯನ್ನು ವಾಸಿಷ್ಠಶೈಲಿ - ಕಪಾಲಿಶೈಲಿ ಎಂದೇ ಹೆಸರಿಸಬಹುದು. ಸಂಸ್ಕೃತ ಕೃತಿಯು ಪಾಂಡಿಚೆರಿಯ ಶ್ರೀ ಅರವಿಂದಾಶ್ರಮದ-ದೀಪ್ತಿ ಪ್ರಕಾಶನದ ಮೂಲಕ ಪ್ರಕಟಿಸಲ್ಪಟ್ಟಿದೆ. ಗ್ರಂಥಸ್ವಾಮ್ಯ ಶ್ರೀ ಅರವಿಂದಾಶ್ರಮದ ಈಗಿನ ಮುಖ್ಯಸ್ಥ ಸನ್ಯಾಸ್ಯ ಎಂ.ಪಿ. ಪಂಡಿತರಿಗೆ ಸೇರಿದೆ. ಸಂಸ್ಕೃತಬಲ್ಲವರಿಗಂತೂ ರಸಗವಳದಂತಿದೆ; ಈ ಕಾವ್ಯ.

ಅನುವಾದಕ



Sri. T.V. Kapali Sastriar

ಮುನ್ನುಡಿ

ಶ್ರೀ ವಾಸಿಷ್ಠ ಗಣಪತಿ ಶಾಸ್ತ್ರಿಗಳು ಈ ಇಪ್ಪತ್ತನೇ ಶತಕದಲ್ಲಿ ಬೆಳಗಿದ ಒಬ್ಬ ಮಹಾ ವಿಭೂತಿ ಪುರುಷರು. ತಮ್ಮ ತಪೋಬಲ-ವಿದ್ಯಾಬಲ ಕವಿತಾ-ಬಲಗಳಲ್ಲಿ ಅಸಾಧಾರಣ ಕೀರ್ತಿಯನ್ನು ಗಳಿಸಿದವರು. ತಪಸ್ಸು ಆವರ ಜೀವನ ಶಕ್ತಿಯಾಗಿತ್ತು. ಬಾಲ್ಯದಿಂದಲೂ ಬೆಳೆದು ಬಂದ ತಪಸ್ಸಿನ ಗೀಳು ಉಸಿರಾಟದಂತೆ ಸಹಜವಾಗಿ ನೆಲೆಸಿದ್ದರಿಂದ ವಾಸಿಷ್ಠ ಗಣಪತಿ ಮುನಿಗಳೆಂದೂ 'ವಾಸಿಷ್ಠ'ರೆಂದೂ ಪ್ರಖ್ಯಾತರಾದರು. ವೇದಾದಿ ಸಮಸ್ತಶಾಸ್ತ್ರಗಳಲ್ಲಿ ಪರಿಣತಿ, ಅಭೂತ ಪೂರ್ವವಾದ ಕವಿತಾ ಶಕ್ತಿ ಇವು ಅವರ ತಪಃಕಾಂಡದಿಂದ ಅಂಕುರಿಸಿದ ಎರಡು ದೊಡ್ಡ ಕೊಂಬೆಗಳು ; ತಪೋನದಿಯಿಂದ ಕವಲೊಡೆದ ಎರಡು ಮಹಾ ಪ್ರವಾಹಗಳು. ವೇದಾರಣ್ಯಗಳ ಗೊಂಡಾರಣ್ಯದಲ್ಲಿ ಸಿಂಹಗತಿಯಿಂದ ಸಂಚರಿಸಿ, ವೇದಾರ್ಥಗಳನ್ನು ಕರತಲಾಮಲಕವಾಗಿ ಮಾಡಿಕೊಂಡಿದ್ದ ವಸಿಷ್ಠ ಗೋತ್ರೋದ್ಭವರಾದ ವಾಸಿಷ್ಠರು ಕಲಿಯುಗದ ವಸಿಷ್ಠಮುನಿಗಳೋ ಎಂಬಂತೆ ಪ್ರಕಾಶಿಸಿದರು.

ಅವರ ವಿದ್ಯಾಭ್ಯಾಸದ ವಿವರ ನಮಗೆ ಸರಿಯಾಗಿ ದೊರೆಯುವುದಿಲ್ಲ. ವೇದಾಂತ-ವ್ಯಾಕರಣಾದಿ ಶಾಸ್ತ್ರಗಳನ್ನು ಸನಾತನ ಪದ್ಧತಿಯಂತೆ ಕ್ರಮವಾಗಿ ಅಧ್ಯಯನ ಮಾಡಿದ್ದರೇ ? ಎಂಬುದು ಸ್ಪಷ್ಟವಿಲ್ಲ. ಅತ್ಯಂತ ಮೇಧಾವಿಗಳೂ, ಏಕಸಂಧಿ ಗ್ರಾಹಿಗಳೂ ಆದ ವಾಸಿಷ್ಠರು ನಿಖಿಲ ಶಾಸ್ತ್ರಗಳಲ್ಲಿ ಅಪಾರವಾದ ಪಾಂಡಿತ್ಯವನ್ನು ಸ್ವಾಧ್ಯಾಸಂಗದಿಂದಲೇ ಗಳಿಸಿದ್ದರೆ ಆಶ್ಚರ್ಯವೂ ಇಲ್ಲ. ಬಾಲ್ಯದಲ್ಲಿ ಸಂಸ್ಕೃತ ಭಾಷಾಧ್ಯಯನವೂ, ಕಾವ್ಯಪಾಠವೂ ಕ್ರಮವಾಗಿಯೇ ನಡೆದಿದ್ದವು. ಕಾವ್ಯ-ನಾಟಕಗಳ ಅಭ್ಯಾಸದಿಂದ ಸಂಸ್ಕೃತ ಭಾಷೆಯಲ್ಲಿ ಪ್ರಭುತ್ವವು ದೊರಕಿತ್ತು. ವೇದಗಳಲ್ಲಿ ಋಗ್ವೇದವು ವಾಸಿಷ್ಠರಿಗೆ ಅತ್ಯಂತ ಪ್ರಿಯವಾದದ್ದು. ಸಮಸ್ತ ವೇದಭಾಷ್ಯಗಳನ್ನೂ ಉಪನಿಷದ್ಭಾಷ್ಯಗಳನ್ನೂ ಅಧ್ಯಯನ ಮಾಡಿದ ವಾಸಿಷ್ಠರು ಅವುಗಳ ರಹಸ್ಯಾರ್ಥಗಳನ್ನು ವಿಸ್ಮಯಕರವಾಗಿ ಬಿಡಿಸಿಹೇಳುತ್ತಿದ್ದುದುಂಟು. ತಂತ್ರಾಗಮಗಳಲ್ಲಿ, ಮಂತ್ರಶಾಸ್ತ್ರದಲ್ಲಿ, ಜ್ಯೋತಿಷ, ವೈದ್ಯಕಗಳಲ್ಲಿ ಸಹ ಅವರಿಗಿದ್ದ ವೈದುಷ್ಯ ಅಸದೃಶವಾದದ್ದು. ಇವೆಲ್ಲಕ್ಕೂ ಶೇಖರಪ್ರಾಯವಾಗಿ-ಕೀರ್ತಿ ಕಳಶವಾಗಿ ಶೋಭಿಸಿದ್ದು ವಾಸಿಷ್ಠರ ಅಭೂತ ಪೂರ್ವ ಕವಿತಾಶಕ್ತಿ.

ನವನವೋನ್ಮೇಷಶಾಲಿನಿಯಾದ ಪ್ರತಿಭೆ ಕಾವ್ಯ ಹೇತುಕವನ್ನುತ್ತಾರೆ; ಕಾವ್ಯ ಮೀಮಾಂಸಕರು. ಈ ಕಾವ್ಯ ಪ್ರತಿಭೆ ವಾಸಿಷ್ಠ ಮುನಿಗಳಿಗೆ

ದೇವದತ್ತವಾಗಿ ಲಭಿಸಿತ್ತು. ಬಾಲ್ಯದಲ್ಲಿಯೇ ಮಿಂಚಿದ ಕಾವ್ಯ ರಚನಾಶಕ್ತಿ ಮುಂದೆ ವಿದ್ಯಾಬಲ-ತಪೋಬಲಗಳಿಂದ ಅಪೂರ್ವಕಾಂತಿಯನ್ನು ಪಡೆದು ರಂಜಿಸಿ ಸಹೃದಯರ ಹೃದಯುವನ್ನು ಮಿಡಿಯಿತು. ಅಷ್ಟಾವಧಾನವು ಅವರಿಗೊಂದು ಲೀಲೆಯಾಗಿತ್ತು. ಮದ್ರಾಸಿನಲ್ಲಿ ನಡೆದ ಅಷ್ಟಾವಧಾನದ ಅಂಗವಾಗಿ ಘಂಟಾಶತಕವನ್ನು ಗೊತ್ತು ಮಾಡಲಾಗಿತ್ತು. ಅಷ್ಟಾವಧಾನದ ನಡುವೆ ಒಂದು ಘಂಟೆಯಲ್ಲಿ ನೂರು ಶ್ಲೋಕಗಳನ್ನು ರಚಿಸಿ ಯಾವುದಾದರೊಂದು ವಸ್ತುವನ್ನು ವರ್ಣಿಸಬೇಕೆಂಬುದು ಅದರ ನಿಯಮ. ವಾಸಿಷ್ಠರು ಆರು ನಿಮಿಷಗಳಲ್ಲಿ ಇಪ್ಪತ್ತೈದು ಶ್ಲೋಕಗಳನ್ನು ನಿರರ್ಗಳವಾಗಿ ಹೇಳಿದರು. ಛಂದೋಬದ್ಧವಾದ ಶ್ಲೋಕಗಳಿಂದಲೇ ಸಂಭಾಷಣೆ ಮಾಡುವ ಲೋಕೋತ್ತರ ಶಕ್ತಿ ವಾಸಿಷ್ಠ ಮುನಿಗಳಿಗೆ ಮೀಸಲಾದದ್ದು. ಶತಾವಧಾನವನ್ನೂ ಯಶಸ್ವಿಯಾಗಿ ನಡೆಸಿದರೆಂದರೆ ಅವರ ಧಾರಣಾಶಕ್ತಿ ಎಂತಹದೆಂದು ಊಹಿಸಿಕೊಳ್ಳಬಹುದು.

ಸ ತಪೋऽತಪ್ಯತ। ಸ ತಪಸ್ತಪ್ತ್ವಾ। ಆನಂದೋ ಬ್ರಹ್ಮೇತಿ ವ್ಯಜಾನಾತ್ ॥
-ಭೃಗುವಲ್ಲೀ-

ಬರಿಯ ವೈದುಷ್ಯದಿಂದಾಗಲೀ, ತಪಸ್ಸಿನಿಂದಾಗಲೀ ಬ್ರಹ್ಮ ಜ್ಞಾನವಾಗದು. ಆಚಾರ್ಯರಿಂದ ಬ್ರಹ್ಮೋಪದೇಶವು ಅವಶ್ಯಕ. "ಆಚಾರ್ಯಾದ್ಧ್ಯೇವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪತ್"(ಛಾಂದೋಗ್ಯ) ವಾಸಿಷ್ಠರು ಅಂತಹ ಗುರುವನ್ನು ಅನ್ವೇಷಿಸುತ್ತ ತಿರುವಣ್ಣಾಮಲೆಗೆ ಬಂದು ರಮಣ ಮಹರ್ಷಿಗಳಿಂದ ಉಪದೇಶವನ್ನು ಪಡೆದರು. ತಾವು ಕೃತಕೃತ್ಯರಾದೆವೆಂದು ಅವರಲ್ಲಿ ಸಂತೃಪ್ತಿ ಮೂಡಿತು. ತಮ್ಮ ಗುರುವಿಗೆ 'ರಮಣ' ಎಂದು ನಾಮಕರಣ ಮಾಡಿದವರು ವಾಸಿಷ್ಠರೇ.

ಅಹಮಿತಿ ಸ್ಫುರತಿಃ ಕ್ವನು ವಿಭಾಸತೇ।
ಇತಿ ವಿಚಿಂತಯತಾಂ ಸಪದಿ ಲೀಯತೇ॥

ಎಂಬುದಾಗಿ ಸ್ವರಚಿತವಾದ ರಮಣ ಗೀತೆಯಲ್ಲಿ ವಾಸಿಷ್ಠರು ಹಾಡಿದ್ದಾರೆ.

ಗೃಹಸ್ಥರಾದರೂ ಸದಾ ಪರಿವ್ರಾಜಕರಂತೆ ಸಂಚರಿಸುತ್ತಲೇ ಇದ್ದ ವಾಸಿಷ್ಠ ಗಣಪತಿ ಮುನಿಗಳು ಆಂಧ್ರ ದೇಶೀಯರು. ತಿರುವಣ್ಣಾಮಲೈಗೆ ಹೋದಾಗ ಹತ್ತು ದಿನಗಳಲ್ಲಿ ತಮಿಳು ಭಾಷೆಯನ್ನು ಕಲಿತರು. ಕನ್ನಡ ನಾಡಿನ ಗೋಕರ್ಣಕ್ಕೆ ಬಂದಾಗ ಕನ್ನಡವನ್ನು ಸುಲಭವಾಗಿ ಕಲಿತು ಅಚ್ಚಕನ್ನಡಿಗರೋ ಎಂಬಂತೆ ಮಾತನಾಡಬಲ್ಲವರಾದರು. ಶಿರಸಿ ಪಟ್ಟಣದಲ್ಲಿ ಸುಪ್ರಸಿದ್ಧರಾದ ಡಿ. ಎಸ್. ವಿಶ್ವಾಮಿತ್ರ ಎಂಬ ನ್ಯಾಯವಾದಿಗಳು ವಾಸಿಷ್ಠ ಮುನಿಗಳ ಪರಮ ಭಕ್ತರು. ಅವರ

ಮನೆಯಲ್ಲಿ ವಾಸಿಷ್ಠರು ಕೆಲವು ಕಾಲ ತಂಗಿದ್ದರು. ನಾನು ಬಾಲ್ಯದಲ್ಲಿ ನನ್ನ ಆಪ್ತ ಬಂಧುಗಳ ಮುಖದಿಂದ ವಾಸಿಷ್ಠರ ವಿದ್ಯಾ ಪ್ರೌಢಿಮೆಯನ್ನು ಹಲವುಬಾರಿ ಕೇಳಿದ್ದೇನೆ. ಆ ಬಂಧುಗಳು ಆಗಾಗ ಗೋಕರ್ಣ ಪ್ರಾಂತಕ್ಕೆ ಹೋಗಿ ವಾಸಿಷ್ಠ ಮುನಿಗಳನ್ನು ಕಂಡು ಅವರೊಡನೆ ಇದ್ದು ಬಂದವರು. ನನಗೆ ಮಾತ್ರ ವಾಸಿಷ್ಠರ ಪ್ರತ್ಯಕ್ಷ ದರ್ಶನದ ಭಾಗ್ಯ ದೊರಕಲಿಲ್ಲ.

ನಾನು ಶಿರಸಿಗೆ ಹೋಗಿ ವಿಶ್ವಾಮಿತ್ರರನ್ನು ಕಂಡು ವಾಸಿಷ್ಠ ಮುನಿಗಳ ವಿಷಯವಾಗಿ ಅನೇಕ ಸಲ ಅವರೊಡನೆ ಮಾತನಾಡಿದ್ದೇನೆ. ಆಗ ವಾಸಿಷ್ಠರು ತಮ್ಮ ಭೌತಿಕ ದೇಹವನ್ನು ತ್ಯಜಿಸಿದ್ದರು. ಶ್ರೀ ವಿಶ್ವಾಮಿತ್ರರಿಗೆ ವಾಸಿಷ್ಠಮುನಿಗಳಲ್ಲಿದ್ದ ನಿ:ಸೀಮ ಭಕ್ತಿಯನ್ನು ಕಂಡು ಚಕಿತನಾಗಿದ್ದೇನೆ. ವಾಸಿಷ್ಠರ ವಿಷಯ ಮಾತನಾಡುವಾಗ ಶ್ರೀ ವಿಶ್ವಾಮಿತ್ರರು ಕಣ್ಣೀರು ತುಂಬಿ ನಡು ನಡುವೆ ಧ್ಯಾನ ಮಗ್ನರಾಗಿಬಿಡುತ್ತಿದ್ದರು. ಭವ್ಯವಾದ ತಮ್ಮ (ವಿಶ್ವಾಮಿತ್ರರ) ಭವನದ ಮಹಡಿಯಲ್ಲಿ ವಾಸಿಷ್ಠರು ಇರುತ್ತಿದ್ದರಂತೆ. ಅವರು ಕುಳಿತುಕೊಳ್ಳುತ್ತಿದ್ದ ಆಸನ-ಹಾಸಿಗೆ-ಮೊದಲಾದ ಪರಿಕರಗಳನ್ನು ವಿಶ್ವಾಮಿತ್ರರು ಅಚ್ಚಳಿಯದಂತೆ ಸ್ಮಾರಕವಾಗಿ ಉಳಿಸಿಕೊಂಡಿದ್ದರು. (ಶ್ರೀ ವಿಶ್ವಾಮಿತ್ರರು ಈಗ ನಮ್ಮ ನಡುವೆ ಇಲ್ಲ) ಅವರ ಮನೆಯಲ್ಲಿ ರಾತ್ರಿಯ ಹೊತ್ತು ಒಂದು ವಿನೋದಗೋಷ್ಠಿಯನ್ನು ವಾಸಿಷ್ಠರು ನಡೆಸುತ್ತಿದ್ದರಂತೆ. ಶ್ರೋತೃಗಳ ಮನೋರಂಜನೆಗಾಗಿ ಚಮತ್ಕಾರದ ಕಥೆಗಳನ್ನು ತಾವೇ ಕಟ್ಟಿ ಹೇಳುತ್ತಿದ್ದರಂತೆ. ಒಂದೊಂದು ಕಥೆಯೂ ಧಾರಾವಾಹಿಯಾದ ಕಾದಂಬರಿಯಂತೆ ಮುಂದುವರಿಯುತ್ತಿತ್ತೆಂದೂ ಚಿತ್ತಾಕರ್ಷಕವಾದ ಆ ಕಥೆಗಳನ್ನು ಕೇಳುವುದಕ್ಕಾಗಿಯೇ ಬಹಳಜನ ಬಂದು ಸೇರುತ್ತಿದ್ದರೆಂದೂ ವಿಶ್ವಾಮಿತ್ರರು ನನಗೆ ಹೇಳಿದರು.

ಶ್ರೀ ವಾಸಿಷ್ಠರು ರಚಿಸಿದ ಉಮಾಸಹಸ್ರ-ರಮಣಗೀತೆ-ಮಹಾ ವಿದ್ಯಾ ಸೂತ್ರಗಳೆಂಬ ಗ್ರಂಥಗಳನ್ನೂ ಶ್ರೀಕಪಾಲಿಶಾಸ್ತ್ರಿಗಳು ರಚಿಸಿದ 'ವಾಸಿಷ್ಠವೈಭವಂ' ಎಂಬ ಗ್ರಂಥವನ್ನೂ ಶ್ರೀ ವಿಶ್ವಾಮಿತ್ರರು ನನಗೆ ಕಾಣಿಕೆಯಾಗಿ ಕೊಟ್ಟರು. ಸಂಸ್ಕೃತದಲ್ಲಿ ಸಾಕಷ್ಟು ಪರಿಶ್ರಮ ಪಡೆದಿದ್ದ ಈ ವಿಖ್ಯಾತ ನ್ಯಾಯವಾದಿ ವಿಶ್ವಾಮಿತ್ರರು ಪುಸ್ತಕಗಳನ್ನು ನನಗೆ ಕೊಡುವ ಮೊದಲು ''ವಾಸಿಷ್ಠ ವೈಭವ''ದಲ್ಲಿ ಸ್ವೋಪಜ್ಞವಾದ ಒಂದು ಶ್ಲೋಕವನ್ನು ಬರೆದರು. ಅದು ಹೀಗಿದೆ:—

ಭೋ ಭೋ ಭಾರತ ಪುಣ್ಯಭೂಸುರವರಾ ಬ್ರಹ್ಮರ್ಷಿವಂಶೋದ್ಭವಾಃ
ಸವ್ಯೋ ವಿಶ್ವಸುವೋ ನಿಧಿರ್ಮಧುಮಯೋ ಧಾರಾಸಹಸ್ರೈಃಸರನ್ ।
ವ್ಯಕ್ತಿಃ ಶ್ರೀ ರಮಣಸ್ಯ ದಿವ್ಯತಪಸಃ ಸಾರೋ ಮನುಷ್ಯಾಕೃತಿಃ
ವಾಸಿಷ್ಠೋ ನಿಜಧರ್ಮ ಜೀವನವಿಧೌ ಚಿಂತಾಮಣಿಃ ಸೇವ್ಯತಾಂ ॥

(ಶಿರಸಿ, 23-5-1951. ಡಿ. ಎಸ್. ವಿಶ್ವಾಮಿತ್ರ)

ವಾಸಿಷ್ಠ ವೈಭವವು ಬ್ರಹ್ಮಶ್ರೀ ಕಪಾಲಿ ಶಾಸ್ತ್ರಿಗಳಿಂದ ಸಂಸ್ಕೃತ ಭಾಷೆಯಲ್ಲಿ ವಿರಚಿತವಾಗಿದೆ. ಕಪಾಲಿ ಶಾಸ್ತ್ರಿಗಳು ವಾಸಿಷ್ಠಗಣಪತಿ ಮುನಿಗಳ ಅಂತರಂಗದ ಶಿಷ್ಯರು. ಅವರಿಗೆ ಸ್ವತಃ ವಾಸಿಷ್ಠರೇ ತಮ್ಮ ವೃತ್ತಾಂತವನ್ನು ವಿಭಿನ್ನ ಸಂದರ್ಭಗಳಲ್ಲಿ ತಿಳಿಸಿದ್ದಾರೆ. ಅವೆಲ್ಲವನ್ನೂ ಕ್ರೋಢೀಕರಿಸಿ ಅತ್ಯಂತ ರಸವತ್ತಾಗಿ ಹೆಣೆದು ಚಿತ್ರಿಸಿದ ಕೀರ್ತಿ ಕಪಾಲಿ ಶಾಸ್ತ್ರಿಗಳಿಗೆ ಸಲ್ಲುತ್ತದೆ. ಸಂಸ್ಕೃತ ಭಾಷೆಯಲ್ಲಿ ಎಷ್ಟು ಲಲಿತ ರಮಣೀಯವಾಗಿ ಬರೆಯಬಹುದೆಂಬುದಕ್ಕೆ ಈ ಗ್ರಂಥವು ಸಾಕ್ಷಿಯಾಗಿ ನಿಲ್ಲುತ್ತದೆ. ಶ್ರೀ ಕಪಾಲಿ ಶಾಸ್ತ್ರಿಗಳ ಮೋಹಕವಾದ ಸುಭಗ ಭಾಷಾ ಶೈಲಿ, ಕಥಾವಸ್ತುವಿನ ಸಹಜ ಸೌಂದರ್ಯ, ಇವುಗಳಿಂದ ಈ ಚರಿತ್ರ ಚಿತ್ರಣ ಒಂದು ಮಹಾಕಾವ್ಯವಾಗಿ ಪರಿಣಮಿಸಿದೆ. ಇನ್ನೊಂದು ವೈಶಿಷ್ಟ್ಯವೆಂದರೆ :– ಕೆಲವೆಡೆ ವಾಸಿಷ್ಠರೇ ತಮ್ಮ ಆತ್ಮಕಥೆಯನ್ನು ಹೇಳಿಕೊಂಡಿರುವಂತೆ, ಕೆಲವೆಡೆ ಲೇಖಕರು ಸ್ವೋಕ್ತಿಗಳಿಂದ ವಿವರಿಸಿದಂತೆ ಔಚಿತ್ಯಾನುಗುಣವಾಗಿ ಬರವಣಿಗೆಯನ್ನು ಬದಲಾಯಿಸಿರುವುದು. ಲೇಖಕರು ಸಂಸ್ಕೃತ ಭಾಷಾ ಪರಿಣತರೂ, ಕಥಾನಾಯಕರಂತೆ ಉತ್ತಮ ಕವಿಗಳೂ, ವಿದ್ವಾಂಸರೂ ಆಗಿದ್ದರೆಂಬುದು ನಿಃಸಂಶಯ. ಅಲ್ಲಲ್ಲಿ ಮನೋಜ್ಞವಾದ ಸ್ವೋಪಜ್ಞ ಪದ್ಯಗಳಿಂದ ವಸ್ತುಕಥನ ಮಾಡುತ್ತ ಹೋಗಿರುವ ಶ್ರೀ ಕಪಾಲಿ ಶಾಸ್ತ್ರಿಗಳು ಪ್ರಶಂಸನೀಯವಾದ ಒಂದು ಉತ್ತಮ ಚಂಪೂ ಕಾವ್ಯವನ್ನೇ ನಿರ್ಮಿಸಿ ಕೊಟ್ಟಿದ್ದಾರೆ. ಪದ್ಯಗಂಧಿಯಾದ ಕಾವ್ಯ ಕಲಾಕೃತಿ ಇದು. ವಾಸಿಷ್ಠರೇ ರಚಿಸಿದ ಸಮಸ್ಯಾ ಪೂರ್ತಿ ಮುಂತಾದ ಶ್ಲೋಕಗಳು ಸುವರ್ಣಾಭರಣದಲ್ಲಿ ಖಚಿತವಾದ ರತ್ನಗಳಂತೆ ಶೋಭಿಸುತ್ತವೆ. ಒಂದೊಂದು ಪ್ರಕರಣದ ಆರಂಭದಲ್ಲಿ ಅದಕ್ಕೆ ಅನುರೂಪವಾದ ಸೂಕ್ತಿಗಳನ್ನು ಪ್ರಾಚೀನ ಮಹಾಕಾವ್ಯಗಳಿಂದ ಆರಿಸಿಕೊಟ್ಟಿದ್ದಾರೆ. ವಾಸಿಷ್ಠವೈಭವವೆಂಬ ಗ್ರಂಥದ ಅಂಕಿತವೂ ಅನ್ವರ್ಥವಾದುದು. ಸಹೃದಯರು ಅವಶ್ಯ ಓದಬೇಕಾದ ಸುಂದರ ಕೃತಿ ಇದು. ಅಂತೆಯೇ ವಾಸಿಷ್ಠರ ಉಮಾಸಹಸ್ರವು ಅಧ್ಯಯನ ಯೋಗ್ಯವಾದ ಒಂದು ದಾರ್ಶನಿಕ ಮಹಾಕಾವ್ಯ. ಇದಕ್ಕೆ ಸ್ವತಃ ಶ್ರೀ ಕಪಾಲಿ ಶಾಸ್ತ್ರಿಗಳೇ ಸರಳವಾದ ವ್ಯಾಖ್ಯಾನ ಬರೆದಿದ್ದಾರೆ.

ವಾಸಿಷ್ಠ ದರ್ಶನ :–

ಕಾವ್ಯಕಂಠ ಬಿರುದಾಂಕಿತರಾದ ಶ್ರೀ ಗಣಪತಿಶಾಸ್ತ್ರಿಗಳ ಕವಿತಾ ವೈಭವವನ್ನು ಕುರಿತು ವಿಚಾರ ಮಾಡಿದರೆ ತುಂಬಾ ವಿಸ್ತಾರವಾಗುತ್ತದೆ. ಅವರ ದಾರ್ಶನಿಕ ಅಭಿಮತವನ್ನು ಕುರಿತು ನಾಲ್ಕು ಮಾತುಗಳನ್ನಿಲ್ಲಿ ಬರೆಯಬಹುದು. ಅದರಿಂದ ಅವರ ವ್ಯಕ್ತಿತ್ವದ ಒದಂಶವಾದರೂ ಗೊತ್ತಾಗುತ್ತದೆ. ವಿಶೇಷವಾಗಿ ಚತುರ್ವೇದಗಳಲ್ಲಿ ಕೃತ ಪರಿಶ್ರಮರೂ, ಸಕಲ ಶಾಸ್ತ್ರಪಾರದೃಷ್ವರೂ, ತಪಸ್ವಿಗಳೂ, ಅಂತ

ರ್ಮುಖಿಗಳೂ ಆದವರ ವಿಚಾರ ಪ್ರವಣತೆ ಯಾವ ದಿಕ್ಕಿಗೆ ಎಂಬುದನ್ನರಿಯುವುದರಿಂದ ಪ್ರಯೋಜನ ಉಂಟು. ಮುಂದಿನ ನಾಲ್ಕು ಮಾತುಗಳಿಗೆ ವಾಸಿಷ್ಠರ ಉಪಲಬ್ಧ ಗ್ರಂಥ ವಾಙ್ಮಯವೂ ಅವರಿಗೆ ನಿಕಟವರ್ತಿಗಳಾಗಿದ್ದವರ ಆಪ್ತ ವಚನಗಳೂ ಆಧಾರವಾಗಿರುತ್ತವೆ.

ವಾಸಿಷ್ಠಮುನಿಗಳು ವೇದಾರ್ಥ ವಿಜ್ಞಾನದಲ್ಲಿ ತೀವ್ರವಾದ ಆಸಕ್ತಿಯನ್ನು ತಳೆದಿದ್ದರು. ವೇದಗಳ ವಿಷಯದಲ್ಲಿ ಪರಮ ಪ್ರಾಮಾಣ್ಯ ಬುದ್ಧಿ ಇತ್ತು. ಅವರು ಕರ್ಮಠರು; ಆದರೆ ಕರ್ಮ ಜಡರಲ್ಲ. ಋಷಿ ಪ್ರಣೀತ ಗ್ರಂಥಗಳಲ್ಲಿ ಪೂಜ್ಯಭಾವನೆಯನ್ನಿಟ್ಟಿದ್ದ ವಾಸಿಷ್ಠರು ಸನಾತನ ಧರ್ಮವಾದಿಗಳೇ ಸರಿ. ವರ್ಣಾಶ್ರಮ ವಿಭಾಗವನ್ನು ಪೂರ್ಣವಾಗಿ ಒಪ್ಪಿದವರು, ತಾವು ರಮಣ ಮಹರ್ಷಿಗಳ ಶಿಷ್ಯರೆಂದು ಹೆಮ್ಮೆಯಿಂದ ಹೇಳಿಕೊಂಡಿರುವ ಅವರು ಶ್ರೀ ಶಂಕರ ಭಗವತ್ಪಾದರ ಅದ್ವೈತ ದರ್ಶನವನ್ನು ಶ್ರದ್ಧೆಯಿಂದ ನಂಬಿದವರು. ಸ್ಮೃತಿಗಳಲ್ಲಿಯೂ ಪುರಾಣಗಳಲ್ಲಿಯೂ ವೇದ ವಿರುದ್ಧವಾದ ಪ್ರಕ್ಷೇಪಗಳಿವೆಯೆಂದೂ ಅವು ಅಪ್ರಮಾಣವೆಂದೂ ಹೇಳುತ್ತಿದ್ದರು. ಅಕ್ಷತಯೋನಿಯಾದ ವಿಧವೆಯನ್ನು ಮದುವೆಯಾಗುವುದು ಶಾಸ್ತ್ರನಿಷಿದ್ಧವಲ್ಲವೆಂದು ಅವರ ಅಭಿಪ್ರಾಯವಾಗಿದ್ದಿತಂತೆ. ಅಸ್ಪೃಶ್ಯರೆಂದು ಗಣಿಸಲ್ಪಡುತ್ತಿದ್ದ ಹರಿಜನರು ಸಂಕೀರ್ಣ ಜಾತಿಯವರೆಂದೂ ಅವರು ಅಸ್ಪೃಶ್ಯರಲ್ಲವೆಂದೂ ವಾಸಿಷ್ಠರ ಸಿದ್ಧಾಂತವಾಗಿತ್ತು. 'ಪಂಚಮ ಚಂಡಾಲ ಮೀಮಾಂಸೆ' ಎಂಬ ಶೀರ್ಷಿಕೆಯಲ್ಲಿ ಇದರ ವಿವರವು ಈ ಗ್ರಂಥದ ಅನುಬಂಧದಲ್ಲಿ ಬಂದಿದೆ. ಅನುಬಂಧದಲ್ಲಿರುವ ಅವತಾರತತ್ತ್ವ ಎಂಬ ವಿಷಯವೂ ಅವಶ್ಯ ನೋಡಬೇಕಾದದ್ದು. ಮಂತ್ರಗಳಲ್ಲಿಯೂ ತಂತ್ರಗಳಲ್ಲಿಯೂ ವಾಸಿಷ್ಠರಿಗೆ ಬಹುಮುಖವಾದ ಪಾಂಡಿತ್ಯವಿತ್ತು. ಮಂತ್ರಸಿದ್ಧಿಯಿಂದ ಹಲವು ಅದ್ಭುತಗಳನ್ನು ಅವರು ತೋರಿಸಿದ್ದೂ ಉಂಟು. ಪುನರ್ಜನ್ಮದಲ್ಲಿ ನಂಬಿಕೆಯಿಟ್ಟಿದ್ದ ಅವರು ಸ್ವಪ್ನ-ಶಕುನಗಳಲ್ಲಿ ಸಹ ವಿಶ್ವಾಸತಳೆದಿದ್ದರು.

ಜಗತ್ತಿಗೆ ಈಶ್ವರನೊಬ್ಬನೇ. ಬ್ರಹ್ಮ, ವಿಷ್ಣು, ಮಹೇಶ್ವರರೂ ಸರಸ್ವತಿ, ಲಕ್ಷ್ಮಿ, ಪಾರ್ವತಿಯರೂ ಪರಬ್ರಹ್ಮದ ಸಗುಣ ಮೂರ್ತಿಗಳು. ವೇದ ಪ್ರತಿಪಾದ್ಯರಾದ ಇಂದ್ರ, ಅಗ್ನಿ ಮೊದಲಾದ ದೇವತೆಗಳೆಲ್ಲ ಪರಮೇಶ್ವರನ ಅನಂತ ವಿಭೂತಿಗಳು. ಶಬ್ದ ತತ್ತ್ವವೇ ಗಣಪತಿಯ ಮೂರ್ತಿಯಾಗಿದೆ. ಬ್ರಹ್ಮಣಸ್ಪತಿ ಎಂದರೆ ಗಣಪತಿಯೇ ಸರಿ. ಸ್ಕಂದನು ಜೀವತತ್ತ್ವ. ಪರಮಾತ್ಮನು ನಿರ್ಗುಣ-ನಿರಾಕಾರನೂ ಆಗಿದ್ದರೂ ಉಪಾಸಕರ ಅನುಗ್ರಹಕ್ಕಾಗಿ ನಾನಾ ರೂಪಗಳನ್ನು ತಳೆಯುತ್ತಾನೆ. ಉಮಾಸಹಸ್ರದ ಈ ಶ್ಲೋಕಗಳನ್ನು ನೋಡಬಹುದು :–

ಭಕ್ತಾನನುಗೃಹ್ಣನ್ ದಿವ್ಯಾದ್ಭುತಲೀಲಃ।
ತದ್ವಿಗ್ರಹ ಬಂಧೋ ಬೋಧ್ಯೋ ಲಸದರ್ಥಃ ॥

ಸ್ತ್ರೀತ್ವಂ ಯದಿ ನೇಷ್ಟಂ ಪುಂಸ್ತ್ವಂ ಕುತ ಇಷ್ಟಂ ।
ಸಾ ವಾ ಕಿಮು ನಾರೀ ನ ಸ್ಯಾದನುಮೇಯಾ ॥

ತಸ್ಮಾತ್ ಪಿತರೌ ತೌ ವಾಚ್ಯೌ ಮತಿಮಂತೌ ।
ಸೂಕ್ಷ್ಮಾವಪಿ ಭೂಯೋ ಲೀಲಾತನುಮಂತೌ ।

ಸ್ತಬಕ ೩- ಶ್ಲೋ. ೧೪-೧೫-೧೬.

ಋಗ್ವೇದದಲ್ಲಿ ವಾಸಿಷ್ಠರಿಗೆ ವಿಶೇಷವಾದ ಆದರ. ವೇದಗಳ ರಹಸ್ಯಾರ್ಥವು ಬೇರೆಯೇ ಆಗಿದೆಯೆಂದೂ ವೇದಭಾಷ್ಯಕಾರರು ಅವುಗಳ ಸ್ಥೂಲಾರ್ಥವನ್ನು ಮಾತ್ರ ವಿವರಿಸಿದ್ದಾರೆಂದೂ ವಾಸಿಷ್ಠರ ಪ್ರತಿಪಾದನೆಯಾಗಿತ್ತು.

ಪ್ರಸಂಗವಶದಿಂದ ಇನ್ನೊಂದು ವಿಷಯವನ್ನು ಇಲ್ಲಿ ಹೇಳಬೇಕೆನಿಸುತ್ತದೆ. ಗೋಕರ್ಣದಲ್ಲಿ ವಾಸವಿದ್ದ ದೈವರಾತರು ವೈದಿಕವಂಶದಲ್ಲಿ ಜನಿಸಿದವರು. ಅವರಿಗೆ ಬಾಲ್ಯದಲ್ಲಿಯೇ ತಪಃಸಿದ್ಧಿಯನ್ನು ಗಳಿಸಬೇಕೆಂಬ ಉತ್ಕಟ ಆಕಾಂಕ್ಷೆ ಉದಯಿಸಿತ್ತು. ಯಾರಿಂದಲೋ ಕೇಳಿ ತಿಳಿದಂತೆ ಯೋಗಾಭ್ಯಾಸ ಮಾಡುತ್ತ, ಧ್ಯಾನಸ್ಥರಾಗಿರುತ್ತ, ಸದ್ಗುರುವಿನ ಮಾರ್ಗ ದರ್ಶನಕ್ಕಾಗಿ ಕಾದಿದ್ದರು. ಆ ಸಮಯದಲ್ಲಿ ದೈವಯೋಗದಿಂದ ವಾಸಿಷ್ಠರು ಗೋಕರ್ಣಕ್ಕೆ ಬಂದು ಕೆಲವು ದಿವಸಗಳಿದ್ದರು. ದೈವರಾತರು ವಾಸಿಷ್ಠರ ಮಹಿಮೆಯಿಂದ ಆಕರ್ಷಿತರಾಗಿ ಅವರ ಆಪ್ತ ಶಿಷ್ಯರಾದರು. ವಾಸಿಷ್ಠರಿಗೆ ದೈವರಾತರಲ್ಲಿ ಅನುಗ್ರಹ ಬುದ್ಧಿಯುಂಟಾಯಿತು. ಕೃಪಾ-ವಾತ್ಸಲ್ಯಗಳು ಬೆಳೆದವು. ವಾಸಿಷ್ಠರ ಶಿಷ್ಯರಾಗಿ ಅವರೊಡನೆ ಅರುಣಾಚಲಕ್ಕೆ ಹೋಗಿ ರಮಣ ಮಹರ್ಷಿಗಳ ದರ್ಶನವನ್ನು ಪಡೆದು ಶ್ರೀ ರಮಣರಂತೆ ತಾವೂ ತಪೋನಿಷ್ಠರಾದರು. ಕಡೆಗೆ ವಾಸಿಷ್ಠರೊಡನೆ ತಮಿಳುನಾಡಿನಲ್ಲಿರುವ ಶ್ರೀರೇಣುಕಾಂಬಾ ಕ್ಷೇತ್ರವಾದ ಪಡವೇಟಿ ಗ್ರಾಮಕ್ಕೆ ಬಂದು, ಮಂತ್ರ ಯೋಗ ಪೂರ್ವಕವಾಗಿ ಕಠೋರ ತಪಸ್ಸಿನಲ್ಲಿ ನಿರತರಾದರು. ಜೊತೆಗೆ ವಾಸಿಷ್ಠರೂ ಇದ್ದರು. ಆ ಸಮಯದಲ್ಲಿ ಧ್ಯಾನಯೋಗದಿಂದ ಸಮಾಧಿ ಸ್ಥಿತಿಯಲ್ಲಿದ್ದ ದೈವರಾತರ ಮುಖದಿಂದ ಕೆಲವು ಶಬ್ದಗಳು ಹೊರಡಲಾರಂಭಿಸಿದವಂತೆ. ಅದೇನಿರಬಹುದೆಂದು ಕುತೂಹಲದಿಂದ ಗಮನಿಸುತ್ತಿದ್ದ ವಾಸಿಷ್ಠರಿಗೆ "ಇವು ಛಂದೋಮಯವಾದ ವೇದವಾಣಿಗಳು" ಎಂದು ನಿಶ್ಚಯವಾಗಿ, ಯಥಾಶ್ರುತವಾದಂತೆ ಬರೆದು

ಕೊಳ್ಳುತ್ತಿದ್ದರು. ಹೀಗೆ ಹದಿನಾರು ದಿನಗಳವರೆಗೆ ನಡೆಯಿತು. ಉದಾತ್ತಾದಿ ಸ್ವರ ಸಹಿತವಾಗಿ ಪ್ರಕಾಶಗೊಂಡ ಈ ವಾಙ್ಮಯವು ವೇದವೆಂದೇ ವಾಸಿಷ್ಠರು ನಿಶ್ಚಯಿಸಿದರು. ಇದನ್ನು ಎಂಟು ಅನುವಾಕಗಳಾಗಿ ವಿಂಗಡಿಸಿ ''ಛಂದೋದರ್ಶನ'' ಎಂದು ಹೆಸರಿಟ್ಟ ವಾಸಿಷ್ಠಮುನಿಗಳೇ ಅದಕ್ಕೆ ಅನ್ವಯ ಭಾಷ್ಯ ಎಂಬ ವ್ಯಾಖ್ಯಾನವನ್ನು ಬರೆದಿದ್ದಾರೆ. ದೈವರಾತರ ಮುಖದಿಂದ ಈ ಅದ್ಭುತವು ನಡೆದಿದ್ದು ಕ್ರಿ. ಶ. 1917 ರಲ್ಲಿ. ಆಗ ದೈವರಾತರಿಗೆ 25 ವರ್ಷ ವಯಸ್ಸು. 'ದೈವರಾತರಿಗೆ ಸಂಸ್ಕೃತ ಭಾಷೆಯೇ ಸರಿಯಾಗಿ ಬರುತ್ತಿರಲಿಲ್ಲ. ವೈದಿಕ ಶಬ್ದಗಳ ಗಂಧವೂ ಇರಲಿಲ್ಲ'ವೆಂದು, ವಾಸಿಷ್ಠರೇ ತಮ್ಮ ಅನ್ವಯಭಾಷ್ಯದ ಪೀಠಿಕೆಯಲ್ಲಿ ಹೇಳಿದ್ದಾರೆ.

ಕಲಿಯುಗದಲ್ಲಿ ಮಂತ್ರದ್ರಷ್ಟಾರನಾದ ಋಷಿ ಇಲ್ಲವೆಂಬ ನಂಬಿಕೆ ನಮ್ಮಲ್ಲಿ ದೃಢವಾಗಿ ತಳವೂರಿದೆ. ಇದಕ್ಕೆ ವಾಸಿಷ್ಠಮುನಿಗಳು ಹೇಳುವುದೇನೆಂದರೆ:– ''ಕಲಿಯುಗದಲ್ಲಿ ವಾಙ್ಮನಸಾತೀತವಾದ ಪರಬ್ರಹ್ಮವನ್ನು ಜ್ಞಾನಿಯು ಸಾಕ್ಷಾತ್ಕಾರಮಾಡಿಕೊಳ್ಳಬಲ್ಲನೆಂದು ವೇದಾಂತಿಗಳು ಒಪ್ಪಿದ್ದಾರೆ. ಹೀಗಿರುವಾಗ ಶಬ್ದಬ್ರಹ್ಮವಾದ ವೇದವನ್ನು ತಪೋಬಲದಿಂದ ಕಂಡುಕೊಳ್ಳಲು ಏಕೆ ಶಕ್ಯವಾಗದು ? 'ಅನಂತಾ ವೈ ವೇದಾ: ' ಎಂಬ ವಚನ ಪ್ರಾಮಾಣ್ಯದಿಂದ ವೇದಗಳು ಪರಾಕಾಶದಲ್ಲಿ ಪ್ರತಿಷ್ಠಿತವಾಗಿಯೇ ಇವೆ. ವಸ್ತುಸಿದ್ಧವಾದ ಆ ತತ್ತ್ವವನ್ನು ಋಷಿಯು ತಪೋಮಹಿಮೆಯಿಂದ ಈಗಲೂ ಸಾಕ್ಷಾತ್ಕರಿಸಿಕೊಳ್ಳಲು ಶಕ್ಯವಿದೆ."

ಇದಾನೀಮಪಿ ಮಂತ್ರಾಖ್ಯಾಂ ಸತ್ಯಸ್ಯಂಧೋ ಮಹಾಯಶಾಃ ।
ಪ್ರದಿಶನ್ ಆತ್ಮದೃಷ್ಟಿಭ್ಯೋ ದೈವರಾತಃ ಪ್ರಶಸ್ಯತೇ ॥

ಎಂದು ಹೇಳುತ್ತಾರೆ. ಈ ಛಂದೋದರ್ಶನವನ್ನು ಅನ್ವಯಭಾಷ್ಯ ಸಹಿತ ಭಾರತೀಯ ವಿದ್ಯಾಭವನ, ಮುಂಬಯಿ–ಇವರು ಮುದ್ರಿಸಿ ಪ್ರಕಟಿಸಿದ್ದಾರೆ.

ತಸ್ಮಾದವರೇಷು ಋಷಯೋ ನ ಜಾಯಂತೇ ನಿಯಮಾತಿಕ್ರಮಾತ್"
(ಶಾಸ್ತ್ರೀಯ ನಿಯಮಗಳನ್ನು ಉಲ್ಲಂಘಿಸುವುದರಿಂದ ಈ ಕಾಲದ ಜನರಲ್ಲಿ ಮಂತ್ರದ್ರಷ್ಟಾರರಾದ ಋಷಿಗಳು ಹುಟ್ಟುವುದಿಲ್ಲ) ಎಂಬ ಧರ್ಮ ಸೂತ್ರವೀಗ ಸ್ಮರಣೆಗೆ ಬರುತ್ತಿದೆ. ಇದು ಬೋಧಾಯನರದೋ, ಆಪಸ್ತಂಬರದೋ ಆಗಿರಬೇಕು. ಶಾಸ್ತ್ರೀಯ ನಿಯಮಗಳನ್ನು ಪಾಲಿಸಿದಲ್ಲಿ ಈಗಲೂ ಋಷಿಗಳು ಜನಿಸಬಹುದೆಂದು ವಾಸಿಷ್ಠರ ಅಭಿಮತ. ಅವರು ದೈವರಾತರನ್ನು ಬ್ರಹ್ಮರ್ಷಿಯೆಂದು ಮಾನ್ಯ ಮಾಡಿದರು.

'ಮಹಾಭಾರತ ವಿಮರ್ಶಃ' ಎಂಬ ಒಂದು ವಿಸ್ತಾರವಾದ ಗ್ರಂಥವನ್ನು ವಾಸಿಷ್ಠರು ರಚಿಸಿದ್ದರಂತೆ. ಆದರ ಸಂಕ್ಷಿಪ್ತ ನಿರೂಪಣೆಯು ಈ ಕನ್ನಡ ವಾಸಿಷ್ಠವೈಭವದ 221ನೆಯ ಪುಟದಲ್ಲಿ ಒಂದಿದೆ. ಅಲ್ಲಿರುವ ವಿಚಾರಸರಣಿ ವಿವಾದಗ್ರಸ್ತವೆಂದು ನನಗೆ ತೋರುತ್ತದೆ.

ಒಟ್ಟಿನಲ್ಲಿ ಶ್ರೀ ವಾಸಿಷ್ಠಗಣಪತಿ ಶಾಸ್ತ್ರಿಗಳು ಈ ಯುಗದ ವಿಭೂತಿ ಪುರುಷರಲ್ಲೊಬ್ಬರು. ಇವರ ವಿಸ್ಮಯಕರಚರಿತೆಯನ್ನು ಶ್ರೀ ಕಪಾಲಿ ಶಾಸ್ತ್ರಿಗಳು ಸಂಗ್ರಹಿಸಿ ಜಿಜ್ಞಾಸು ಲೋಕಕ್ಕೆ ಮಹೋಪಕಾರವನ್ನೆಸಗಿದ್ದಾರೆ. ಈ ಸಂಸ್ಕೃತ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟಿರುವ ಶ್ರೀ ಹರಿಹರಪುರ ಬಿ. ಸುಬ್ರಹ್ಮಣ್ಯಂ ಅವರು ಎಲ್ಲ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಇದೊಂದು ಶ್ರೇಷ್ಠವಾದ ಕಾಣಿಕೆ.

ಶ್ರೀ ಸುಬ್ರಹ್ಮಣ್ಯಂ ಅವರ ಲೇಖನಿಯು "ತೋರು ಬೆಳಕು-ಮಾತಿನ ತೋರಣ-ಯಾತ್ರಿಕನ ಅನುಭವಗಳು-ಕನ್ನಡ ಕಾರ್ಮಿಕ ಕಂಡ ಜರ್ಮನಿ"ಮುಂತಾದ ಗ್ರಂಥಗಳನ್ನು ಬರೆದು ಪಳಗಿದೆ. ಕನ್ನಡದ ಶೈಲಿ ಬರಿಯ ಭಾಷಾಂತರವಾಗದೆ ತನ್ನ ಸಹಜತೆಯನ್ನು ಉಳಿಸಿಕೊಂಡಿದೆ. ಓದುಗರಿಗೆ ಅರ್ಥ ಮಾಡಿಕೊಳ್ಳುವಾಗ ಕಷ್ಟವನ್ನೇನೂ ಕೊಡದಿರುವ ಸ್ವಚ್ಛವಾದ ಬರಹ ಇಲ್ಲಿದೆ. ಈ ಪುಸ್ತಕದ 139ನೆಯ ಪುಟದಲ್ಲಿ :-

ಕಿಂ ವಾs ಭವಿಷ್ಯದರುಣಸ್ತಮಸಾಂ ವಿಭೇತ್ತಾ
ತಂ ಚೇತ್ ಸಹಸ್ರಕಿರಣೋ ಧುರಿ ನಾಕರಿಷ್ಯತ್ ॥

ಎಂಬ ಅಭಿಜ್ಞಾನ ಶಾಕುಂತಲದ ಶ್ಲೋಕಾರ್ಧವನ್ನು "ಸಹಸ್ರಕಿರಣ ನಾದ ಸೂರ್ಯನು ತನ್ನ ರಥಾಗ್ರದಲ್ಲಿ ಕುಳ್ಳಿರಿಸಿಕೊಳ್ಳದೇಹೋಗಿದ್ದರೆ ಅರುಣನು ಕತ್ತಲೆಯನ್ನು ಹೊಡೆದೋಡಿಸಲು ಸಮರ್ಥನಾಗುತ್ತಿದ್ದನೇ ?" ಎಂದು ಕನ್ನಡಿಸಬೇಕಾಗಿತ್ತು.

ಇರಲಿ ! ವಾಸಿಷ್ಠ ವೈಭವವು ಒಬ್ಬ ವ್ಯಕ್ತಿಯ ಜೀವನ ಚರಿತ್ರವಾಗಿದ್ದರೂ ಸರಸವಾದ ಕಾದಂಬರಿಯಂತೆ ಆದ್ಯಂತವಾಗಿ ಓದಿಸಿಕೊಂಡು ಹೋಗುತ್ತದೆ. ಒಬ್ಬ ಮಹಾಪುರುಷನ ಆದರ್ಶಗಳನ್ನೂ ಸಿದ್ಧಿ-ಸಾಧನೆಗಳನ್ನೂ ತೋರಿಸಿಕೊಟ್ಟು ಸತ್ಯಾನ್ವೇಷಣೆಗಾಗಿ ವಾಚಕರನ್ನು ಹುರಿದುಂಬಿಸುತ್ತದೆ. ಹೃದಯದಲ್ಲಿ ಆಸಿಕ್ತ.

ಭಾವವನ್ನು ಬೆಳೆಸಿ, ವೇದ ವಾಙ್ಮಯದ-ಅಂತೆಯೇ ಮತ್ತಿತರ ಸಂಸ್ಕೃತ ಸಾಹಿತ್ಯದ ಗರಿಮೆಯನ್ನು ಅಭಿವ್ಯಂಜಿಸುತ್ತದೆ. ನಾನು ಮೆಚ್ಚಿಕೊಂಡಿದ್ದ ಈ ಗ್ರಂಥವನ್ನು ಕನ್ನಡಿಸಿರುವುದಾಗಿ ಮಾನ್ಯ ಶ್ರೀ ಹರಿಹರಪುರ ಬಿ. ಸುಬ್ರಹ್ಮಣ್ಯಂ ಅವರು ಹೇಳಿದಾಗ ನನಗೆ ಕೌತುಕವೂ, ಸಂತೋಷವೂ ಆಯಿತು. ಅನಂತರ ಇದಕ್ಕೊಂದು ಮುನ್ನುಡಿಯನ್ನು ಬರೆದುಕೊಡಬೇಕೆಂದು ಆಗ್ರಹ ಪಡಿಸಿದರು. ನನ್ನಲ್ಲಿ ಆದರ-ವಿಶ್ವಾಸಗಳನ್ನು ವ್ಯಕ್ತಪಡಿಸಿದ ಶ್ರೀಯುತರಿಗೆ ನನ್ನ ಹಾರ್ದವಾದ ಪ್ರಣಾಮಗಳನ್ನು ಅರ್ಪಿಸುತ್ತೇನೆ. ಕನ್ನಡ ಅನುವಾದ ಸಾಹಿತ್ಯದಲ್ಲಿ ಗಣ್ಯಸ್ಥಾನವನ್ನು ಗಳಿಸಬಲ್ಲ ಈ ಕೃತಿಯನ್ನು ಕನ್ನಡಿಗರು ಪ್ರೀತಿ-ಗೌರವಗಳಿಂದ ಸ್ವಾಗತಿಸುತ್ತಾರೆಂದು ನಂಬಿರುತ್ತೇನೆ.

ವಾಸಿಷ್ಠಃ ಕವಿಶೇಖರಃ ಕುಲಪತಿಃ ಸಾಹಿತ್ಯವಿದ್ಯಾಗುರುಃ
ಸರ್ವಾಮ್ನಾಯವಿದಗ್ರಣೀಃ ಶ್ರುತಿಶಿರೋಮಾಲಾಜಟಾಲೋ ಮುನಿಃ ।
ವಾಗ್ಮೀ ವಾದಿಗಜಾಂಕುಶಃ ಕಲಿಯುಗವ್ಯಾಸಸ್ತಪೋದೇಹಭೃ-
ದ್ವೇದಾನಾಮವನಾಯ ಪಾವನಯಶಾ ಆವಿರ್ಬಭೂವಾವನೌ ॥

ಬೆಂಗಳೂರು.
೩೦-೬-೧೯೯೦

ಎನ್. ರಂಗನಾಥಶರ್ಮಾ

ಶ್ರೀ ಜಯಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯದ
ವ್ಯಾಕರಣ ವಿಭಾಗದ ನಿವೃತ್ತ ಪ್ರಾಧ್ಯಾಪಕರು.
831, 4ನೇ ಮುಖ್ಯರಸ್ತೆ
ವಿಜಯನಗರ-ಬೆಂಗಳೂರು-560040

–: ನಿವೇದನೆ :–

ಸುಮಾರು 58 ವರ್ಷಗಳ ಹಿಂದೆ ಶೃಂಗೇರಿ ಶ್ರೀ ಜಗದ್ಗುರು ಪೀಠದ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಕಲಿಯುತ್ತಿದ್ದಾಗ ಆ ಕಾಲಕ್ಕೆ ಅಪ್ರತಿಮ ಪ್ರತಿಭಾ ಸಂಪನ್ನರೆಂದು ಖ್ಯಾತಿಗಳಿಸಿದ್ದ ಕಾವ್ಯಕಂಠ ಗಣಪತಿ ಶಾಸ್ತ್ರಿಗಳ ಹೆಸರು ಅವರು ಸಮಸ್ಯಾಪೂರ್ತಿಗಾಗಿ ರಚಿಸಿದ್ದ ಸಂಸ್ಕೃತ ಶ್ಲೋಕಗಳ ಚಮತ್ಕಾರಿಕ-ಲಲಿತ-ಮನೋಹರ ಸ್ವಾರಸ್ಯಗಳ ಬಗ್ಗೆ ಕೆಲವೇ ಅಂಶಗಳನ್ನು ಸಾಹಿತ್ಯಪಂಡಿತರೊಬ್ಬರು ತಿಳಿಸಿದ್ದರು. ಮುಂದೆ ಆ ಶ್ಲೋಕಗಳ ತುಣುಕುಗಳಷ್ಟೇ ಆಗಾಗ ನೆನಪಿಗೆ ಬರುತ್ತ ಅವುಗಳನ್ನು ಪೂರ್ಣವಾಗಿ ತಿಳಿಯುವ ಹಂಬಲ-ಶಾಸ್ತ್ರಿಗಳ ಬದುಕನ್ನು ಅರಿಯುವ ಕುತೂಹಲ - ಉಂಟಾಗಿ ಮತ್ತೆ ಮರೆಯಾಗಿ ಹೋಗುತ್ತಿತ್ತು.

ಈಗ್ಗೆ ಆರು ವರ್ಷದ ಹಿಂದೆ "ಉಮಾ ಸಹಸ್ರಂ''ಎಂಬ ಗ್ರಂಥವೊಂದು ಆಕಸ್ಮಾತ್ ಕಣ್ಣಿಗೆ ಬಿದ್ದು ಅದು ವಾಸಿಷ್ಠ ಗಣಪತಿಮುನಿ (ಇದೇ ಕಾವ್ಯಕಂಠ ಗಣಪತಿಶಾಸ್ತ್ರಿ)ಗಳ ಕೃತಿಯೆಂದು ತಿಳಿಯಿತು. ಕುತೂಹಲದಿಂದ ಪ್ರಾರಂಭದ ಪುಟಗಳ ಮೇಲೆ ಕಣ್ಣಾಡಿಸಿದಾಗ "ಕವಿ-ಕಾವ್ಯ ಪರಿಚಯ"ದಲ್ಲಿ ಅವರು ಬಂಗಾಲದ ನವದ್ವೀಪಕ್ಕೆ ಹೋಗಿ ವಿದ್ವತ್ಸಭೆಯಲ್ಲಿ ಕಾವ್ಯಕಂಠ ಪ್ರಶಸ್ತಿ ಪಡೆದುದು-ಸಮಸ್ಯಾಪೂರ್ತಿಮಾಡಿ ಅವರು ರಚಿಸಿದ ಶ್ಲೋಕಗಳು-ಅನುಪಮ ಭಾಷಾಸಂಪತ್ತಿನಿಂದ ಕೂಡಿದ ಅವರ ವ್ಯಾಖ್ಯಾನವೈಖರಿಯ ಕುರಿತು ಒಂದಿಷ್ಟು ಮಾಹಿತಿ ದೊರೆಯಿತು. ಆದರೆ ವಾಸಿಷ್ಠರ ಬಗ್ಗೆ ಹೆಚ್ಚಿನ ವಿವರಗಳೇನೂ ದೊರೆಯಲಿಲ್ಲ.

ಈಗ ದೊರತಷ್ಟು ಸ್ವಾರಸ್ಯ ಪೂರ್ಣ ವಿಷಯವನ್ನೇ ಕನ್ನಡಕ್ಕೆ ಅನುವಾದಿಸಿ ಒಂದು ಲೇಖನ ಬರೆದು ಪತ್ರಿಕೆಗಳಿಗೆ ಪ್ರಕಟಣೆಗಾಗಿ ಕಳಿಸಬೇಕೆಂಬ ಸಂಕಲ್ಪ ಉಂಟಾಯಿತು. ಅದೇ ಸಂದರ್ಭದಲ್ಲಿ ಆಕಸ್ಮಾತ್ ಸಹೃದಯಿ ಸ್ನೇಹಿತರೊಬ್ಬರು ಭೆಟ್ಟಿಯಾಗಿ-ಮಾತನಾಡುತ್ತ ನಾನು ಈ ಮೇಲೆ ಕಂಡ ವಿಷಯ ಪ್ರಸ್ತಾಪಿಸಿದೆ. "ವಾಸಿಷ್ಠ ವೈಭವಂ'' ಎಂಬ ಸಂಸ್ಕೃತ ಚಂಪೂಕಾವ್ಯವು ಶ್ರೀ ವಾಸಿಷ್ಠಮುನಿಗಳ ಸಮಗ್ರ ಜೀವನ ಚರಿತೆಯಾಗಿದ್ದು ನಾನು ಅವಶ್ಯ ಅದನ್ನು ನೋಡಬೇಕೆಂದು ಸಲಹೆ ಮಾಡಿದ್ದಲ್ಲದೆ ಅವರಲ್ಲಿದ್ದ ಆ ಪುಸ್ತಕವನ್ನು ನನಗೆ ಕಳಿಸಿ ಕೊಟ್ಟರು. ಅದರಲ್ಲಿರುವ ಸರಳ ಮಂಜುಲ ಸಂಸ್ಕೃತ ಭಾಷಾಶೈಲಿ-ಶ್ರೀ ವಾಸಿಷ್ಠಗಣಪತಿ ಮುನಿಗಳ ವ್ಯಕ್ತಿತ್ವದ ನಿರೂಪಣೆಗಳಿಂದ ಪ್ರಭಾವಿತನಾದ ನನಗೆ ಈ ಸಮಗ್ರ ಕೃತಿಯನ್ನೇ ಕನ್ನಡಕ್ಕೆ ಅನುದಾದಿಸಿ ಬಿಡಬೇಕೆಂಬ ನಿರ್ಧಾರ ಹುಟ್ಟಿಕೊಂಡಿತು.

ಈ ಕೃತಿಯ ಸರ್ವಸ್ವಾಮ್ಯ ಹೊಂದಿದವರು-ಈಗ ಅರವಿಂದಾಶ್ರಮದ (ಪಾಂಡಿಚೆರಿ)ಮುಖ್ಯಸ್ಥರಾಗಿರುವ ಸನ್ಮಾನ್ಯ ಎಂ.ಪಿ. ಪಂಡಿತ್ ಅವರು. ಮೂಲತಃ ಕನ್ನಡನಾಡಿನ ಶಿರಸಿ ಪಟ್ಟಣದವರಾದ ಸನ್ಮಾನ್ಯ ಪಂಡಿತ್ ಅವರಿಗೆ ವಿಜ್ಞಾಪನಾ ಪತ್ರಬರೆದು ನನ್ನ ಹಂಬಲವನ್ನು ನಿವೇದಿಸಿಕೊಂಡೆ. ಅವರು ಅನುಮತಿಯ ಆಶೀರ್ವಾದದೊಡನೆ ತಮ್ಮ ಸಹಕಾರದ ಭರವಸೆಯನ್ನು ನೀಡಿ ''ವಾಸಿಷ್ಠ ವೈಭವಂ" ಪ್ರತಿಯನ್ನು ನನಗೆ ಕಳಿಸಿದರು. ನಾನು ಸಂಸ್ಕೃತ ಭಾಷೆ-ಶಾಸ್ತ್ರಾದಿಗಳಲ್ಲಿ ವಿದ್ವತ್ ಪದವಿ ಸಂಪಾದಿಸಿದವನಲ್ಲ. ಇವುಗಳಲ್ಲಿ ನನ್ನ ಪರಿಶ್ರಮ ತೀರಾ ಪರಿಮಿತವಾದುದು. ಕನ್ನಡದಲ್ಲಿಯೂ ನಾನು ಬರೆದಿರುವುದು ಹೆಚ್ಚೇನಿಲ್ಲ. ಆದರೂ ಈ ಅಪೂರ್ವ ಸಂಸ್ಕೃತ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯದಲ್ಲಿ ಅದಮ್ಯ ಉತ್ಸಾಹದಿಂದ ತೊಡಗಿದ ನನಗೆ ಶ್ರೀವಾಸಿಷ್ಠ ಮುನಿಗಳ ದಿವ್ಯಚೇತನವೇ ಬೆಂಬಲ ನೀಡಿ ಈ ಮಹತ್ಕಾರ್ಯವನ್ನು ಪೂರ್ಣಗೊಳಿಸಿದೆಯೆಂಬುದು ನನ್ನ ದೃಢ ನಂಬಿಕೆ.

ಮೂಲ ಸಂಸ್ಕೃತ ಕಾವ್ಯ "ವಾಸಿಷ್ಠ ವೈಭವಂ" ರಾಯಲ್ $\frac{1}{4}$ ಅಳತೆಯ 154 ಪುಟಗಳಲ್ಲಿ ದೇವನಾಗರಿ ಲಿಪಿಯಲ್ಲಿ ಮುದ್ರಣಗೊಂಡಿದೆ. ಇದರಲ್ಲಿ ಗದ್ಯ ಭಾಗವಲ್ಲದೆ-ಪದ್ಯಗಳೂ ಇವೆ. ಈ ಪದ್ಯಗಳಲ್ಲಿ ಗ್ರಂಥಕರ್ತ ವೇ॥ ಕಪಾಲಿ ಶಾಸ್ತ್ರಿಗಳು ರಚಿಸಿದ ಶ್ಲೋಕಗಳು 210, ಪ್ರತಿ ಪ್ರಕರಣದ ಪ್ರಾರಂಭದಲ್ಲಿ ಆ ಪ್ರಕರಣದ ವಿಷಯಕ್ಕೆ ಹೊಂದಿಕೆಯಾಗುವಂತಹ ಭಾವವನ್ನು ಪ್ರತಿಬಿಂಬಿಸುವ ಪುರಾತನ ಕಾವ್ಯ-ನಾಟಕಾದಿಗಳಿಂದ ಆಯ್ದ ಪೂರ್ಣ ಶ್ಲೋಕ ಮತ್ತು ತುಣುಕುಗಳು 71; ವೇದದ ಋಕ್ಕು ಹಾಗೂ ತುಣುಕುಗಳು 16; ವಾಸಿಷ್ಠರು ಬೇರೆ ಬೇರೆ ಸಂದರ್ಭಗಳಲ್ಲಿ ರಚಿಸಿದ ಮತ್ತು ಬೇರೆ ಕಾವ್ಯದಿಂದ ಉದಾಹರಿಸಿದ ಹಾಗೂ ತಾವೇ ಸಮಸ್ಯಾಪೂರ್ತಿಗಾಗಿ ಮಾಡಿದ ಶ್ಲೋಕಗಳು :- 70, ಹೀಗೆ ಇವೆ.

ಮೂಲಗ್ರಂಥದ ಸೌರಭ್ಯ-ಸೌಂದರ್ಯ-ಲಾಲಿತ್ಯಭಾವಾಭಿ-ವ್ಯಕ್ತಿಯನ್ನು ಅನುವಾದದಲ್ಲಿ ಹಿಡಿದುತರುವುದು ತೀರಾಕಷ್ಟಸಾಧ್ಯವೆಂಬುದು ಎಲ್ಲರಿಗೂ ತಿಳಿದಿದೆ. ನಾನು ಈ ಸಂಸ್ಕೃತ ಕೃತಿಯನ್ನು ಕನ್ನಡಿಸುವಾಗ-ಭಾವಾನುವಾದ, ಸರಳಾನುವಾದದ ಮಾರ್ಗವನ್ನು ಹೆಚ್ಚಾಗಿಯೂ, ಪದಶಃ ಅರ್ಥಾನುವಾದದ ರೀತಿಯನ್ನು ತೀರಾಕಡಿಮೆಯಾಗಿಯೂ ಆಶ್ರಯಿಸಿ ಮೂಲದ ಸ್ವಾರಸ್ಯ ಅಷ್ಟಿಷ್ಟಾದರೂ ಕನ್ನಡ ಓದುಗರಿಗೆ ದೊರೆಯಲೆಂದು ಶ್ರಮಿಸಿದ್ದೇನೆ. ನನಗೆ ಸ್ವಾರಸ್ಯವೆನಿಸಿದ ಕೆಲವು ಶ್ಲೋಕಗಳನ್ನು ಪೂರ್ತಿಯಾಗಿ ಕೊಟ್ಟು ಅವುಗಳ ಭಾವವನ್ನು ಕನ್ನಡದಲ್ಲಿ ಕೊಟ್ಟಿದ್ದೇನೆ.

ಮುದ್ರಣದಲ್ಲಿ 270 ಪುಟಗಳಿರುವ ಈ ಅನುವಾದದ ಪ್ರಕಟಣೆ ಈಗಿನ ದಿನಗಳಲ್ಲಿ ತುಂಬಾ ಸಾಹಸದ ಕೆಲಸ. ಆದರೆ ಈಗ್ಯೆ 2ವರ್ಷದ ಹಿಂದೆ "ಯಾತ್ರಿಕನ ಅನುಭವಗಳು" ಎಂಬ ನನ್ನ ಪ್ರವಾಸ ಸಾಹಿತ್ಯ ಕೃತಿಯನ್ನು ಮುದ್ರಣ ಮಾಡಿಸಿ-ಪ್ರಕಟಿಸಿ-ವಿತರಣೆ ಮಾಡಿದ-ನನ್ನ ಹುಟ್ಟೂರು ಹರಿಹರಪುರದ ಸೂರಳಿ ಸ್ಥಳದವರಾಗಿ ಬೆಂಗಳೂರಿನಲ್ಲಿ ನೆಲೆಸಿರುವ ಚಿ॥ ಎಸ್.ಆರ್. ನರಸಿಹ್ಮ ಮೂರ್ತಿ ಮತ್ತು ಚಿ॥ಸೌ॥ಭಗವತಿ ದಂಪತಿಗಳೇ ಈ ಪುಸ್ತಕವನ್ನೂ ತಮ್ಮ "ಜೀವ್ದಾನ್"ಪ್ರಕಾಶನದ ಮೂಲಕ ಲಾಭನಷ್ಟಗಳಿಲ್ಲದ ತಳಹದಿಯ ಮೇಲೆ ಪ್ರಕಟಿಸಿ-ವಿತರಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಇದು ನನ್ನ ಸುದೈವವಷ್ಟೇ ಅಲ್ಲ! ಕನ್ನಡ ಓದುಗರ ಅದೃಷ್ಟ ವಿಶೇಷವೂ ಕೂಡಾ! "ಜಗನ್ನಿಯಾಮಕ ಶಕ್ತಿಯ ಕೃಪೆಯೊಡನೆ ಈ ಕನ್ನಡ ಕೃತಿಯ ಓದುಗರ ಸಧ್ಭಾವನೆಯು ಈ ಯುವ ದಂಪತಿಗಳು ಮತ್ತು ಕುಟುಂಬದವರಿಗೆ ಸದಾಶ್ರೀರಕ್ಷೆಯಾಗಿರಲಿ" ಎಂದು ಹೃತ್ಪೂರ್ವ ಹಾರೈಸುತ್ತೇನೆ.

ಪಾಂಡಿಚೆರಿಯ ಶ್ರೀ ಅರವಿಂದಾಶ್ರಮದ ಸನ್ಮಾನ್ಯ ಎಂ. ಪಿ. ಪಂಡಿತ್ ಅವರು ಈ ಅನುವಾದವನ್ನು ಓದಿ ನೋಡಿ ಸಂಕ್ಷಿಪ್ತ-ಸುಂದರ-ಮುನ್ನುಡಿ ಸಂದೇಶವನ್ನು ನೀಡಿದ್ದಾರೆ. ಈ ಪುಸ್ತಕದ ಪ್ರತಿಗಳಿಗೆ ಬೇಕಾಗುವಷ್ಟು ಶ್ರೀ ವಾಸಿಷ್ಠ ಮುನಿಗಳ-ಮತ್ತು ಮೂಲ ಕೃತಿಯ ಕವಿ ವೇ. ಬ್ರಂ. ಶ್ರೀ. ಕಪಾಲಿ ಶಾಸ್ತ್ರಿಗಳ ಅಂದವಾದ ಭಾವ ಚಿತ್ರಗಳನ್ನು ಸಿದ್ಧಮಾಡಿಸಿ ಕಳಿಸಿಕೊಟ್ಟಿದ್ದಾರೆ, ಮುದ್ರಿತ ಪುಸ್ತಕದ ಒಂದಿಷ್ಟು ಪ್ರತಿಗಳನ್ನು ಕೊಳ್ಳುವ ಭರವಸೆಯನ್ನೂ ನೀಡಿದ್ದಾರೆ. ಈ ಪುಸ್ತಕದ ಪ್ರಕಾಶಕರ ಬಗ್ಯೆ ಅವರು ವ್ಯಕ್ತಪಡಿಸಿದ ಹಾರ್ದಿಕ ಸದ್ಭಾವನೆ-ತೀರಾ ಸಾಮಾನ್ಯ ಬರಹಗಾರನಾದ ನನಗೆ ನೀಡಿರುವ ಪ್ರೋತ್ಸಾಹ ಯಾವಾಗಲೂ ನೆನಪಿನಲ್ಲಿ ಉಳಿಯುವಂತಹದು. ಪಂಡಿತ್ ಅವರಿಗೆ ನನ್ನ ಗೌರವ ಪೂರ್ಣ ಹಾರ್ದಿಕ ಅಭಿವಂದನೆ ಸಮರ್ಪಿಸಿ ಕೃತಕೃತ್ಯನಾಗುತ್ತಿದ್ದೇನೆ.

ಕನ್ನಡದ ಹಿರಿಯ ಸಾಹಿತಿಗಳೊಬ್ಬರಿಂದ ಈ ಗ್ರಂಥಕ್ಕೆ ವಿವರವಾದ ಮುನ್ನುಡಿಯನ್ನು ಪಡೆದು ಪ್ರಕಟಿಸಬೇಕೆಂಬ ಉದ್ದೇಶದಿಂದ ನಮ್ಮ ಪ್ರಕಾಶಕರಿಗೆ ಪರಿಚಿತರಾದ ಮಾನ್ಯಪು॥ ತಿ॥ನರಸಿಂಹಾಚಾರ್ಯರನ್ನು ಭೇಟಿಮಾಡಿ ವಿಜ್ಞಾಪಿಸಿಕೊಂಡೆವು. ಈಚೆಗಿನ ದಿನಗಳಲ್ಲಿ ತಮ್ಮ ಸಾಧನೆಗಳಿಂದ ದೊಡ್ಡವರೆಂದು ಹೆಸರು ಪಡೆದಿದ್ದರೂ ಅದಕ್ಕೆ ತಕ್ಕಂತಹ ನಿಷ್ಕಲಂಕ ಮನೋವೃತ್ತಿಯ ದೊಡ್ಡ ಗುಣ ಉಳ್ಳವರು ತೀರಾ ವಿರಳ. ಆದರೆ ವಯಸ್ಸು-ಪಾಂಡಿತ್ಯ-ಸಾಧನೆ-ಸಿದ್ಧಿಗಳಲ್ಲಿ ಹಿರಿಯರೆನಿಸಿ, ಪದ್ಮಶ್ರೀ ಪ್ರಶಸ್ತಿ ಭೂಷಿತರಾಗಿರುವ ಮಾನ್ಯ ಪು. ತಿ. ನ. ಅವರ ದೊಡ್ಡ ಗುಣದ ಪರಿಚಯ ನಮಗೆ ಲಭಿಸಿತು. ನಮ್ಮ ವಿನಂತಿಯನ್ನು ಆಲಿಸುತ್ತಲೇ ಪುಸ್ತಕದ ವಿಷಯಗಳನ್ನು ಅಲ್ಲಲ್ಲಿ ಅವಲೋಕಿಸಿ ಪು. ತಿ. ನ. ಅವರು ಹೇಳಿದ ಮಾತುಗಳು ಇವು :– "ವೇದ-

ಶಾಸ್ತ್ರ-ಸಾಹಿತ್ಯಗಳಲ್ಲಿ ವಿಶೇಷ ಪರಿಶ್ರಮವಾಗಲೀ, ಮೂಲ ಸಂಸ್ಕೃತ ಗ್ರಂಥದ ಪರಿಚಯವಾಗಲೀ ಇಲ್ಲದ ನಾನು ಈ ಅನುವಾದಕ್ಕೆ ಮುನ್ನುಡಿ ಬರೆಯುವುದು ಉಚಿತವಲ್ಲ. ಬೇರೆ ಯಾವುದೇ ಪ್ರಕಾರದ ಬರಹವಾಗಿದ್ದರೂ ನಾನು ಸಂತೋಷದಿಂದ ಮುನ್ನುಡಿ ಬರೆದು ಕೊಡುತ್ತಿದ್ದೆ. ಈಬಗೆಯ ಗ್ರಂಥ ವನ್ನು ಚೆನ್ನಾಗಿ ಪರಿಶೀಲಿಸಿ ತಕ್ಕ ಮುನ್ನುಡಿಯನ್ನು ಬರೆಯಬಲ್ಲ-ಇಂದಿಗೆ ಕರ್ನಾಟಕದ ಏಕೈಕ ವ್ಯಕ್ತಿಯೆಂದರೆ-ವಿದ್ವಾನ್ ರಂಗನಾಥ ಶರ್ಮಾ ಅವರು. ನೀವು ಅವರನ್ನು ಕಂಡು ನನ್ನ ವಿನಂತಿ–ವಂದನೆಗಳನ್ನು ಅವರಿಗೆ ತಿಳಿಸಿ ಅವರಿಂದ ಮುನ್ನುಡಿ ಪಡೆದು ಪ್ರಕಟಿಸಿದರೆ ಅದು ಈ ಪುಸ್ತಕಕ್ಕೆ ಭೂಷಣವೆನಿಸುತ್ತದೆ." "ಪದ್ಮಶ್ರೀ"ಯೂ ಸೇರಿದಂತೆ ಹಲವಾರು ಪ್ರಶಸ್ತಿಗಳಿಸಿ–ಕನ್ನಡನಾಡಿನ ಗೌರವ -ಆದರಗಳಿಗೆ ಪಾತ್ರರಾಗಿದ್ದರೂ ತಾನು ಸರ್ವಜ್ಞನಲ್ಲವೆಂಬ ಪು. ತಿ. ನ. ಅವರ ಪ್ರಾಮಾಣಿಕ ಅಭಿವ್ಯಕ್ತಿ, ಬೇರೊಬ್ಬ ವಿದ್ವಾಂಸರ ಯೋಗ್ಯತೆಯನ್ನು ಎತ್ತಿ ಹಿಡಿ ಯುವ ನಿಷ್ಕಲಂಕ ಹೃದಯ ವೈಶಾಲ್ಯಗಳನ್ನು ಕಂಡು ಹೃದಯ ತುಂಬಿ ಬಂದಿತು.

ವಿದ್ವಾನ್ ರಂಗನಾಥ ಶರ್ಮಾ ಅವರನ್ನು ಭೇಟಿಮಾಡಿ ಪುಸ್ತಕದ ಮುದ್ರಿತ ಕರಡು ಪ್ರತಿಯನ್ನು ಕೊಟ್ಟು ವಿಷಯಗಳನ್ನು ವಿಜ್ಞಾಪಿಸಿಕೊಂಡೆ. ಶ್ರೀವಾಸಿಷ್ಠ ಮುನಿಗಳ ಪರಮ ಪ್ರಿಯ ಭಕ್ತರಾಗಿದ್ದ ಶಿರಸಿಯ ಖ್ಯಾತ ನ್ಯಾಯವಾದಿ ಶ್ರೀಡಿ. ಎಸ್. ವಿಶ್ವಾಮಿತ್ರರೆಂಬವರನ್ನು ಶ್ರೀ॥ ಶರ್ಮಾ ಅವರು ಕೆಲವು ಸಲ ಸಂದರ್ಶಿಸಿ ಶ್ರೀವಾಸಿಷ್ಠರ ಬಗ್ಗೆ ಅನೇಕ ವಿಷಯಗಳನ್ನು ತಿಳಿದು ಕೊಂಡವರು. ಅಷ್ಟೇ ಅಲ್ಲದೆ ವೇ॥ಕಪಾಲಿ ಶಾಸ್ತ್ರಿಗಳು ರಚಿಸಿದ ಸಂಸ್ಕೃತ "ವಾಸಿಷ್ಠ ವೈಭವಂ" ಮತ್ತು ''ಉಮಾ ಸಹಸ್ರವೇ" ಮೊದಲಾದ ವಾಸಿಷ್ಠ ಮುನಿಗಳ ಕೆಲವು ಕೃತಿಗಳ ಅಧ್ಯಯನವನ್ನೂ ಮಾಡಿದವರು. ಮಾನ್ಯ ಪು. ತಿ. ನ. ಅವರ ಅಮೂಲ್ಯ ಸಲಹೆಯಿಂದ ನಮಗೆ ಆದ ಲಾಭವೆಂದರೆ:– ಈ ಕನ್ನಡ ಅನುವಾದವು ಶ್ರೀ ರಂಗನಾಥ ಶರ್ಮರಂತಹ ನುರಿತ ಸಮರ್ಥ ವಿದ್ವಾಂಸರ (ಶ್ರೀಯುತರು ಶ್ರೀವಾಲ್ಮೀಕಿ ರಾಮಾಯಣದಂತಹ ಬೃಹತ್ ಸಂಸ್ಕೃತ ಕಾವ್ಯ ಕಥಾನಕವನ್ನು ಕನ್ನಡಕ್ಕೆ ಅನುವಾದಿಸಿ ಹೆಸರು ಪಡೆದವರು) ಪರಾಮರ್ಶೆಗೆ ಒಳಪಟ್ಟು ವಸ್ತುನಿಷ್ಠ-ವಿಮರ್ಶಾತ್ಮಕ ಮುನ್ನುಡಿ ದೊರೆತಿರುವುದು. ಶ್ರೀ॥ ರಂಗನಾಥ ಶರ್ಮಾ ಅವರ ವೈದುಷ್ಯದ ಹಿರಿಮೆಯನ್ನು ಹಿರಿಯರಾದ ಮಾನ್ಯ ಪು. ತಿ. ನ. ರವರೇ ಗುರುತಿಸಿರುವುದರಿಂದ ಆ ಕುರಿತು ನಾನಿಲ್ಲಿ ಬರೆಯಬೇಕಾದುದೇನೂ ಇಲ್ಲ. ಆದರೆ ಒಂದು ಮಾತನ್ನು ಹೇಳಬೇಕಾದ್ದಿದೆ :— "ತುಂಬಿದ ಕೊಡ ತುಳುಕುವುದಿಲ್ಲ" ಎಂಬ ಸೂಕ್ತಿ ಶ್ರೀರಂಗ ನಾಥ ಶರ್ಮಾರಂತಹ ವ್ಯಕ್ತಿಗಳಿಂದಾಗಿಯೇ ಚಾಲತಿಗೆ ಬಂದಿರಬೇಕು. ಅವರಂತಹ ಸರಳ-ಸೌಜನ್ಯ-ಮೃದು-ಮಧುರ ವ್ಯಕ್ತಿತದ ವಿದ್ವತ್ಸಂಪನ್ನರು ಈಗಿನ ದಿನಗಳಲ್ಲಿ

ತೀರಾ ವಿರಳ, ನನ್ನಂತಹ ಸಾಮಾನ್ಯ ಬರಹಗಾರನೊಬ್ಬನ ಈ ಅನುವಾದಿತ ಪುಸ್ತಕಕ್ಕೆ ಉತ್ತಮ ಮುನ್ನುಡಿ ಬರೆದು ಕೊಟ್ಟು ಕೃತಿಯ ಮೌಲ್ಯವನ್ನು ಹೆಚ್ಚಿಸಿದ ಅವರ "ದೊಡ್ಡತನಕ್ಕೆ" ನನ್ನ ಗೌರವ ಪೂರ್ಣ-ಹಾರ್ದ-ಅಭಿವಂದನೆಗಳನ್ನು ಅರ್ಪಿಸುತ್ತೇನೆ.

ಈ ಗ್ರಂಥದ ಮುಖಪುಟಕ್ಕೆ ವಿನ್ಯಾಸದ ಬಗ್ಗೆ ಯೋಚಿಸುತ್ತಿದ್ದಾಗ ನಾಯನಾ (ಶ್ರೀ ವಾಸಿಷ್ಠರು) ಎಂಬ ಇಂಗ್ಲಿಷ್ ಪುಸ್ತಕದಲ್ಲಿದ್ದ ಚಿಹ್ನೆಯೊಂದು ಗಮನಸೆಳೆಯಿತು. ಅದನ್ನು ನಮ್ಮ ಪುಸ್ತಕಕ್ಕೆ ಬಳಸಿಕೊಳ್ಳಲು ಅನುಮತಿ ಕೋರಿ ಸಂಬಂಧ ಪಟ್ಟ ''ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿ ಟ್ರಸ್ಟ್'' ಮದರಾಸು., ಇವರಿಗೆ ಬರೆದಿದ್ದಾಯಿತು. ಆ ಟ್ರಸ್ಟಿನ ಶ್ರೀಮತಿ ಜೆ. ವಿ. ಎಸ್.ಲಕ್ಷ್ಮಿಯವರು ಒಪ್ಪಿಗೆ ಸೂಚಿಸಿ ಪತ್ರ ಬರೆದಿದ್ದಾರೆ. ಅವರಿಗೆ ಶುಭಾಶಯ ಸಲ್ಲಿಸುತ್ತೇನೆ.

ಆ ಚಿಹ್ನೆಯನ್ನು ಮುದ್ರಣಕ್ಕೆ ತಕ್ಕುದಾದ ಆಕಾರದಲ್ಲಿ ಸಿದ್ಧಪಡಿಸಿದ ನನ್ನ ಚಿರಂಜೀವಿ ಹೆಚ್.ಎಸ್.ರಾಮಕೃಷ್ಣನಿಗೆ ಆಶೀರ್ವಾದವೂ ಚಿತ್ರವನ್ನು ಪರಿಷ್ಕರಿಸಿದ ಕಲಾವಿದ ಶ್ರೀ ಸುರೇಶ್ ರವರಿಗೆ ನನ್ನ ಶುಭ ಕಾಮನೆಯೂ ಸಲ್ಲುತ್ತಿವೆ.

ಗ್ರಂಥ ಮುದ್ರಣದಲ್ಲಿ ಆಸಕ್ತಿ ವಹಿಸಿದ ಪ್ರಾಚೀ ಪ್ರಿಂಟರ್ಸ್‌ನ ಸಹೃದಯಿ ಶ್ರೀ.ಪಿ. ಎಸ್. ಹೆಗಡೆಯವರು, ಅಚ್ಚು ಕೂಟದ ಬಳಗದವರಿಗೆ ನನ್ನ ಹಾರ್ದಿಕ ಶುಭಾಶಯಗಳು.

ಈ ಪುಸ್ತಕವನ್ನು ಪಡೆದು ಓದಿದವರು ನಮ್ಮ ಆರ್ಷೇಯ ಭಾರತೀಯ ಸಂಸ್ಕೃತಿಯ ಮೂರ್ತಸ್ವರೂಪರಾದ ಶ್ರೀ ವಾಸಿಷ್ಠರು-ಅವರ ಆಶ್ಚರ್ಯಕರ ಸಾಧನೆ.-ಸಂಸ್ಕೃತ ಭಾಷಾ ಸಾಹಿತ್ಯದ ಸ್ವೋಪಜ್ಞತೆಗಳ ಬಗ್ಗೆ ಸ್ವಲ್ಪಮಟ್ಟಿಗಾದರೂ ಆಸಕ್ತಿ ತಳೆದಲ್ಲಿ ನಾನು ಧನ್ಯ.

ಬೆಂಗಳೂರು- ಅನುವಾದಕ

ವಿ. ಸೂ :– (ಈ ಗ್ರಂಥದ ಅರ್ಥ 139ನೇ ಪುಟದ ಪ್ರಾರಂಭದ ಶ್ಲೋಕದ ಅರ್ಥ ಮುನ್ನುಡಿಯಲ್ಲಿ ಕಂಡಂತೆ ಇದೆ.)

ವಾಸಿಷ್ಠಮುನಿಗಳ ಜಾತಕ

ಬಹುಧಾನ್ಯ ಸಂವತ್ಸರದ ಕಾರ್ತಿಕ ಬಹುಳ ಅಷ್ಟಮೀ ಮಘಾನಕ್ಷತ್ರ ಮೊದಲ ಪಾದ-ಸೂರ್ಯೋದಯಾನಂತರ ೧೯ ಘಳಿಗೆ ಕಳೆದು ಜನನ (೧೯–೧೧–೧೮೭೮) ಕೇತುದಶೆಯಲ್ಲಿ ಉಳಿದುದು 6 ವರ್ಷ 11 ತಿಂಗಳು. ಕುಂಭಲಗ್ನ.

ಸನ್ಯಕುಂಡಲೀ

ಶನಿ			
ಲಗ್ನಂ	**ರಾಶಿಚಕ್ರಂ**		ಕೇತು
ಗುರು ರಾಹು			ಚಂದ್ರ
	ಸೂರ್ಯ ಬುಧ	ಕುಜ ಶುಕ್ರ	

ಇದು ವಾಸಿಷ್ಠ ಮುನಿಗಳ ಹಿರಿಯರು ಸಿದ್ಧಾಂತರೀತ್ಯಾ ಸಿದ್ಧಪಡಿಸಿದ ಹಳೆಯ ಜಾತಕ. ಈ ಜಾತಕದಂತೆ–ಗಣಪತಿ ಶಾಸ್ತ್ರಿಗಳಿಗೆ ವಿವಾಹ–ವಿದ್ಯಾಪ್ರಭಾವ–ಕಾವ್ಯಕಂಠ ಪ್ರಶಸ್ತಿ-ಪುತ್ರಪ್ರಾಪ್ತಿ–ಮೊಟ್ಟಮೊದಲ ಅರುಣಾಚಲವಾಸ-ಮಹರ್ಷಿ ರಮಣರ ದರ್ಶನಗಳು ಶುಕ್ರದಶಾ ಕಾಲದಲ್ಲಿ ಸಂಘಟಿಸಿದವು. ಕುಜದೆಶೆಯಲ್ಲಿ ಕಪಾಲಭೇದ-ಪತ್ನೀ ವಿಯೋಗ ಉಂಟಾಯಿತು. ರಾಹು ಮಹಾದಶೆ–ಗುರುಭುಕ್ತಿಯಲ್ಲಿ ಶರೀರಾವಸಾನ.

ಸಾಯನ ರೀತ್ಯಾ ಜಾತಕ

(ಕಾಲಾನಂತರ ವಾಸಿಷ್ಠಮುನಿಗಳು ತಮ್ಮ ಜಾತಕವನ್ನು ಸಂಸ್ಕರಿಸಿ ರಚಿಸಿದ ಪತ್ರ ಖಂಡದಲ್ಲಿರುವ ಗ್ರಹಸ್ಥಿತಿ)

ರೈವತ ಪಕ್ಷದಂತೆ ಅಯನಾಂಶಗಳು: 1೯–11. ಚೈತ್ರಪಕ್ಷದಂತೆ ಅಯನಾಂಶಗಳು; 22-6

ರವ್ಯಾದಿ ಸಾಯನ ಸ್ಫುಟಗಳು :

ರವಿ : ೭-೨೪-೫೬
ಚಂದ್ರ : ೪-೨೦-೪೧
ಕುಜ : ೫-೪-೪೮
ಬುಧ : ೧೦-೧-೫೩
ಗುರು ; ೧೦-೧-೫೩

ಶುಕ್ರ : ೭-೨೦-೨೮
ಶನಿ : ೧೧-೨೬-೧೨ ವಕ್ರೀ
ರಾಹು ; ೧೦-೫-೩೫
ಲಗ್ನಂ : ೧೧-೨೮-೪೩
ರಾಜ್ಯಂ : ೮-೨೬-೩೬

ಸವ್ಯಕುಂಡಲೀ

ಲಗ್ನಂ 12 ಶನಿ 11				
ಗುರು 7 ರಾಹು 9				
				ಚಂದ್ರ 7 ಕೇತು 3
ಬುಧ 3	ರವಿ 11 ಕುಜ 5 ಶುಕ್ರ 10			

ಅಪಸವ್ಯಕುಂಡಲೀ

		ಲಗ್ನಂ ಶನಿ ಗುರು ರಾಹು
ಚಂದ್ರ ಕೇತು		ಬುಧ ರವಿ ಕುಜ ಶುಕ್ರ

ವಾಸಿಷ್ಠ ವೈಭವಂ

ಕನ್ನಡ ಬರಹದ ಪ್ರಾರಂಭದಲ್ಲಿ ಸಂಸ್ಕೃತ ಪ್ರಸ್ತಾವನಾ ಶ್ಲೋಕ ಮಾಲಿಕೆ

ರಚನೆ :- **ಹರಿಹರಪುರ ಬಿ. ಸುಬ್ರಹ್ಮಣ್ಯಂ**

ಉಮಾಮಹೇಶಮುಖಪಂಕಜಭಾಸ್ಕರಸ್ಯ ಸರ್ವಾಂತರಾಯದಮನಾಯ ಧೃತಾಂಕುಶಸ್ಯ ।
ಜ್ಞಾನಾಂಬುಧೇರ್ಗಣಪತೇರ್ವದನಾರವಿಂದಂ ಸಂಭಾವಯಾಮಿ ಸತತಂ ಜಗದೇಕ ವಂದ್ಯಂ ॥೧॥

ಬ್ರಹ್ಮನಿಷ್ಠಾ ತಪಶ್ಚರ್ಯಂ ಕೃತಿನಿರ್ಮಾಣಕೌಶಲಂ ।
ಅಷ್ಟಾವಧಾನ ನೈಪುಣ್ಯಂ ಜ್ಯೋತಿರ್ವಿಜ್ಞಾನಪಾಟವಂ ॥೨॥

ನಿರಂತರ ಮಧುಸ್ಯಂದಿ ಕವಿತಾಲಾಸ್ಯವೈಭವಂ ।
ಸ್ಥಿರಧಾರಣಧೀಶಕ್ತಿಃ ಶ್ರವಣಾದ್ವೀಕ್ಷಣಾತ್ ಸಕೃತ್ ॥೩॥

ಶ್ರುತಿ ಸ್ಮೃತಿ ಪುರಾಣಾನಾಂ ನವಾವ್ಯಾಖ್ಯಾನವೈಖರೀ ।
ಮಂತ್ರಶಾಸ್ತ್ರೇ ತಥಾ ತಂತ್ರೇಽಪ್ಯಾಗಮೇಽಪಿ ಚ ನಿಷ್ಣತಾ ॥೪॥

ಸ್ವದೇಶೀ ಭಾವನಾ ಲೋಕ-ಯಾತ್ರಾನುಭವ ಇತ್ಯಮೀ ।
ಸರ್ವೇಽಪ್ಯೇಕತ್ರ ದೃಶ್ಯಂತೇ ವಾಸಿಷ್ಠಮುನಿ ಪುಂಗವೇ ॥೫॥

ಅರುಣಾದ್ರಿಗುಹಾವಾಸ ಬ್ರಾಹ್ಮಣಸ್ವಾಮಿನಾ ತ್ವಯಂ ॥
ಜ್ಞಾತವಾನ್ ತಪಸೋಮರ್ಮ ವಾಸಿಷ್ಠಃ ಸುಕೃತೀ ಸ್ವಯಂ ॥೬॥

ಮಹೀಯಸೇ ಬ್ರಾಹ್ಮಣಯೋಗಿನೇಽಸೌ ಚಕಾರ ರಮ್ಯಂ ರಮಣೇತಿ ನಾಮ ।
ಮಹೀಯತೇ ಯದ್ಭುವನೇಷ್ವಿದಾನೀಂ ತದ್ಭಕ್ತವೃಂದೇಽಪಿ ಪವಿತ್ರನಾಮ ॥೭॥

ವಾಸಿಷ್ಠ ಗಣಪತಿ ಮುನೇಶ್ಚರಿತಂ ಸುಚಿತ್ರಂ ।
ತಸ್ಯಾನುಗೋರಚಿತವಾಕ್ಯ ಕಪಾಲಿಶಾಸ್ತ್ರೀ ॥
ಗೀರ್ವಾಣ ರಮ್ಯ ಪದಲಾಸ್ಯಸಮುಲ್ಲಸಂತಂ
ವಾಸಿಷ್ಠವೈಭವಮಿದಂ ಪ್ರಥಿತಂ ಪೃಥಿವ್ಯಾಂ ॥೮॥

ಅಧಿಕೃತ್ಯ ಕೃತಿಂಚೈನಂ ಕರ್ಣಾಟೇ ವಚನೇತ್ವಿದಂ ।
ವಾಸಿಷ್ಠ ಮುನಿಭಕ್ತೇನ ಲೇಖನಂ ಮಧುರಾನ್ವಿತೇ ॥೯॥

ನವಪ್ರಸೂನಸಂಯುಕ್ತಾ ನವೇಽಯಂ ಸುಮಮಾಲಿಕಾ ।
ಸುಬ್ರಹ್ಮಣ್ಯಸುಸಂಬದ್ಧಾ ಚಾರ್ಪಿತಾ ಮುನಿಸನ್ನಿಧೌ ॥

- ಶುಭಂ -

ಸಂಸ್ಕೃತ ಪ್ರಸ್ತಾವನಾ ಶ್ಲೋಕಗಳ ತಾತ್ಪರ್ಯ.

ಉಮಾ-ಮಹೇಶ್ವರರ ಮುಖಕಮಲಗಳಿಗೆ ಸೂರ್ಯನಂತಿರುವ (ಅಂದರೆ ಸೂರ್ಯೋದಯವಾದೊಡನೆ ಕಮಲಗಳು ಅರಳುವಂತೆ ಗಣೇಶನನ್ನು ಕಂಡೊಡನೆ ಉಮಾಮಹೇಶ್ವರರ ಮುಖಗಳು ಸಂತೋಷದಿಂದ ಅರಳುತ್ತವೆ.) ಎಲ್ಲ ಅಡ್ಡಿ-ಆತಂಕಗಳನ್ನು ಹತ್ತಿಕ್ಕಲೆಂದೇ ಅಂಕುಶ ಧರಿಸಿರುವ-ಜ್ಞಾನಸಮುದ್ರನೇ ಆಗಿರುವ ಗಣಪತಿಯ (ಇಲ್ಲಿ ವಾಸಿಷ್ಠ ಗಣಪತಿ ಮುನಿಗಳ ಎಂಬ ಧ್ವನಿಯೂ ಇದೆ) ಮುಖಮಂಡಲವನ್ನು ಸದಾ ಧ್ಯಾನಿಸುತ್ತೇನೆ. (೧)

ಬ್ರಹ್ಮನಿಷ್ಠೆ-ತಪಸ್ಸು-ಕೃತಿರಚನೆಯ ಕೌಶಲ್ಯ-ಅಷ್ಟಾವಧಾನ ನಿರ್ವಹಣೆಯಲ್ಲಿ ನೈಪುಣ್ಯ-ಜ್ಯೋತಿಷ್ಯದಲ್ಲಿ ಪರಿಣತಿ-ಸತತವಾಗಿ ಜೇನಿನ ಸವಿಯನ್ನು ಸ್ರವಿಸುವ ಕವಿತಾ ರಚನಾ ಸಾಮರ್ಥ್ಯ - ಒಮ್ಮೆ ಕೇಳಿದ್ದನ್ನು, ನೋಡಿದ್ದನ್ನು ಸ್ಥಿರವಾಗಿ ನೆನಪಿಟ್ಟುಕೊಳ್ಳಬಲ್ಲ ಬುದ್ಧಿಶಕ್ತಿ-ಶ್ರುತಿ, ಸ್ಮೃತಿ, ಪುರಾಣಗಳ ಅಂತರಾರ್ಥವನ್ನು ಹೊಸ ಶೈಲಿಯಲ್ಲಿ ವ್ಯಾಖ್ಯಾನಿಸುವ ರೀತಿ - ದೇಶಭಕ್ತಿ - ದೇಶಪರ್ಯಟನದಿಂದ ಪಡೆದ ಪ್ರಾಪಂಚಿಕ ಅನುಭವ ಮುಂತಾದವುಗಳೆಲ್ಲ ಒಂದೇ ವ್ಯಕ್ತಿಯಲ್ಲಿ ಮೇಳ ವಿಸಿದ್ದುದೆಂದರೆ ಅದು ವಾಸಿಷ್ಠ ಗಣಪತಿ ಮುನಿಗಳಲ್ಲಿ. (೨-೩-೪-೫)

ಅರುಣಾಚಲದ ಗುಹೆಯಲ್ಲಿ ವಾಸಮಾಡುತ್ತಿದ್ದ ಬ್ರಾಹ್ಮಣಸ್ವಾಮಿಯೊಬ್ಬ ರಿಂದ ಪುಣ್ಯವಂತರಾದ ಈ ವಾಸಿಷ್ಠಮುನಿಗಳು ತಪಸ್ಸಿನ ಮರ್ಮವನ್ನು ಅರಿತು ಕೊಂಡರು. (೬)

ಮಹಾತ್ಮರಾದ ಈ ಬ್ರಾಹ್ಮಣಸ್ವಾಮಿಗಳಿಗೆ "ರಮಣ" ಎಂಬ ಸುಂದರ ಹೆಸರೊಂದನ್ನು ಇವರೇ ಕೊಟ್ಟರು. ಈಗ ಆ ಹೆಸರು (ಭಗವಾನ್ ರಮಣ ಮಹರ್ಷಿ) ಪ್ರಪಂಚದಲ್ಲಿಯೇ ಪ್ರಖ್ಯಾತಿ ಪಡೆದಿದೆ. ಮಹರ್ಷಿಗಳ ಭಕ್ತಸಮೂಹಕ್ಕೆ ಅದು ಅತ್ಯಂತಪವಿತ್ರವೆನಿಸಿದೆ. (೭)

ಹಲವು ವೈಶಿಷ್ಟ್ಯಗಳಿಂದ ಕೂಡಿದ ವಾಸಿಷ್ಠಗಣಪತಿ ಮುನಿಗಳ ಭವ್ಯ ಜೀವನವನ್ನು ಕುರಿತು ಅವರ ಶಿಷ್ಯ ಕಪಾಲಿಶಾಸ್ತ್ರಿಗಳು ಮನೋಹರವಾದ "ವಾಸಿಷ್ಠ ವೈಭವಂ" ಸಂಸ್ಕೃತ ಗ್ರಂಥ ರಚಿಸಿದ್ದಾರೆ. ರಮ್ಯ ಸಂಸ್ಕೃತ ಪದ ಜೋಡಣೆಯಿಂದ ಮನೋಹರ ಲಾಸ್ಯವಿಲಾಸವನ್ನು ಹೊರಸೂಸುವ ಈ ಕೃತಿ ಪ್ರಸಿದ್ಧಿ ಪಡೆದಿದೆ. (೮)

ಈ ಕೃತಿಯನ್ನು ಆಧರಿಸಿ ಮಧುರ ಕನ್ನಡ ನುಡಿಯಲ್ಲಿ ಲೇಖನ ಮತ್ತು ಒಂಭತ್ತು ಪುಷ್ಪಗಳನ್ನುಳ್ಳ ಈ ಹೊಸ ಹೂಮಾಲಿಕೆ ವಾಸಿಷ್ಠ ಭಕ್ತ ಸುಬ್ರಹ್ಮಣ್ಯಂನಿಂದ ಕಟ್ಟಲ್ಪಟ್ಟು ವಾಸಿಷ್ಠಮುನಿಸನ್ನಿಧಿಯಲ್ಲಿ ಸಮರ್ಪಿಸಲ್ಪಟ್ಟಿದೆ. (೯)

— ಶುಭಂ —

ವಾಸಿಷ್ಠ ವೈಭವಂ (ಮೊದಲ ಭಾಗ)

ಪ್ರಕರಣ–1
ಪ್ರಾದುರ್ಭಾವ (ಹುಟ್ಟು)

ಕ್ವ ಪ್ರಭಾತರಲಂ ಜ್ಯೋತಿರುದೇತಿ ವಸುಧಾತಲಾತ್ ।
(ಶಾಕುಂತಲಂ) (1–22)

(ಈ ಮನೋಹರ ಕಾಂತಿಯ ಬೆಳಕು ಭೂಲೋಕದಲ್ಲಿ ಹುಟ್ಟಿಬರುವುದು ಎಲ್ಲಿ ಸಾಧ್ಯ ?)

ಭವೋ ಹಿ ಲೋಕಾಭ್ಯುದಯಾಯ ತಾದೃಶಾಂ ।
(ಅಂತಹವರ ಬದುಕು ಲೋಕದ ಒಳಿತಾಗಿಯೇ ಇರುತ್ತದೆಯಷ್ಟೆ!)

ಪುಣ್ಯಕ್ಷೇತ್ರ ಅರಸವಳ್ಳಿ; ಆಂಧ್ರಪ್ರದೇಶದ ಉತ್ತರಭಾಗದಲ್ಲಿದೆ. ತನ್ನ ಮಂಗಳಕರ ಕಿರಣ ಪ್ರಸಾರದಿಂದ ದಿನವೂ ಜಗತ್ತಿನ ಜೀವಿಗಳ ಜಡತ್ವವನ್ನು ಹೊಡೆದೋಡಿಸಿ ಹೊಸಚೈತನ್ಯ ತುಂಬುತ್ತಿರುವ ಭಗವಾನ್ ಸೂರ್ಯ

ನಾರಾಯಣನೇ ಈ ಕ್ಷೇತ್ರದ ಅಧಿಷ್ಠಾತೃ. ತಮ್ಮ ಕಷ್ಟಕೋಟಲೆಗಳ ನಿವಾರಣೆಗಾಗಿ ಈ ಸೂರ್ಯ ಭಗವಾನನಿಗೆ ಬಗೆ-ಬಗೆಯ ಹರಕೆ ಕಟ್ಟಿಕೊಳ್ಳುವವರು ಬಹಳ ಮಂದಿ. ಹರಕೆ ತೀರಿಸಲು ಹಾಗೂ ಸೂರ್ಯನಾರಾಯಣನ ಅನುಗ್ರಹಕ್ಕೆ ಪಾತ್ರರಾಗಲು ಈ ಕ್ಷೇತ್ರಕ್ಕೆ ಬರುವ ಯಾತ್ರಾರ್ಥಿಗಳ ಸಂಖ್ಯೆಯೂ ದೊಡ್ಡದು. ಈಶ್ವರ ಸಂವತ್ಸರದ (ಈಗ್ಗೆ ಸುಮಾರು 113 ವರ್ಷಗಳ ಹಿಂದೆ) ಮಾಘಮಾಸದ ಶುಕ್ಲ ಸಪ್ತಮಿ. ಅಂದು ರಥಸಪ್ತಮಿಯ ಪುಣ್ಯದಿನ, ಹಬ್ಬದ ಸಡಗರ. ಸೂರ್ಯನಾರಾಯಣನ ಆರಾಧನೆಗೆ ಬಹಳ ಪ್ರಶಸ್ತವೆನಿಸಿಕೊಂಡಿರುವ ದಿವಸ ಇದು. ಅರಸವಳ್ಳಿಯ ಸೂರ್ಯನಾರಾಯಣ ದೇಗುಲದಲ್ಲಿ ಜಾತ್ರೆಯ ಸಂಭ್ರಮ. ಕುಲಶೀಲ ಸಂಪನ್ನಳಾದ ಸುಮಾರು 25 ವರ್ಷ ವಯಸ್ಸಿನ ಬ್ರಾಹ್ಮಣ ಗೃಹಿಣಿಯೊಬ್ಬಳು 4 ವಯಸ್ಸಿನ ಪುಟ್ಟಬಾಲಕನೊಂದಿಗೆ ದೇವಾಲಯವನ್ನು ಪ್ರವೇಶಿಸುತ್ತಿದ್ದಂತೆಯೇ ಭಕ್ತಿಭಾವದಿಂದ ಕಣ್ಣು ತುಂಬಿ ಬಂದು ಕಂಬನಿ ಕಾಣಿಸಿಕೊಳ್ಳುತ್ತದೆ. ತನ್ನ ಪತಿದೇವನಿಂದ ಉಪದೇಶಿಸಲ್ಪಟ್ಟ ಸೌರ ಅಷ್ಟಾಕ್ಷರ ಮಹಾ ಮಂತ್ರ; ಎಲ್ಲ ರೋಗಗಳನ್ನು ಪರಿಹರಿಸಿ ಪ್ರಭಾಕರನ ಪ್ರಸಾದ ದೊರಕಿಸಿ ಕೊಡಬಲ್ಲ ಈ ಮಹಾಮಂತ್ರವನ್ನು ಮನನ ಮಾಡುತ್ತ ಸ್ವಾಮಿಯ ಸಮ್ಮುಖದಲ್ಲಿ ಕೈಜೋಡಿಸಿ ನಿಂತು ನಿವೇದಿಸಿಕೊಳ್ಳುತ್ತಾಳೆ :- ಇದೋ! ಸ್ವಾಮಿ! ಬಂದು ಬಿಟ್ಟಿದ್ದೇನೆ. ನಿನ್ನ ಕಟಾಕ್ಷದಿಂದ ಬದುಕಿ ಉಳಿದ ಈ ಮಗುವಿನ ಮುಡಿಯನ್ನು ನಿನ್ನ ಕ್ಷೇತ್ರದಲ್ಲಿ ತೆಗೆಸುವ ಹರಕೆ ಹೊತ್ತಿದ್ದುದನ್ನು ತೀರಿಸಿ ನಿನ್ನ ದರ್ಶನ-ಸೇವೆಗಳಿಂದ ಕೃತಾರ್ಥಳಾಗಲು ಬಂದಿದ್ದೇನೆ. ನಿನ್ನ ಕೃಪೆಯಿಂದ ಉಳಿದುಕೊಂಡಿರುವ ಈ ಬಾಲಕ ದೀರ್ಘಾಯುವಾಗುವಂತೆ ಅನುಗ್ರಹಿಸು, ನಾನು ಎಂದೆಂದಿಗೂ ನಿನ್ನನ್ನೇ ನಂಬಿದವಳು. ಕರುಣೆತೋರು! ಕೃಪೆ ಮಾಡು! ಹೀಗೆ ಪ್ರಾರ್ಥಿಸುತ್ತ ಕೂದಲು ತೆಗೆಸಲ್ಪಟ್ಟ ಮಗನೊಂದಿಗೆ ಪ್ರದಕ್ಷಿಣೆ ಬಂದು ಸಮರ್ಪಣಾ ಭಾವದಿಂದ ಸಾಷ್ಟಾಂಗ ನಮಸ್ಕಾರ ಸಲ್ಲಿಸುತ್ತಾಳೆ.

ದೇವರ ಸನ್ನಿಧಿಯಲ್ಲಿ ಯಥೋಚಿತ ಕೈಂಕರ್ಯ ನಡೆಸಿದ ಆ ಗೃಹ ಸ್ವಾಮಿನಿ ಅಂದು ಅಲ್ಲಿಯೇ ಉಳಿದುಕೊಂಡಳು. ರಾತ್ರಿ ದೇಗುಲದ ಹೊರ ಪ್ರಾಂಗಣದಲ್ಲಿ ಮಲಗಲು ಅವಕಾಶ ಮಾಡಿಕೊಂಡಳು. ದೇವತಾ ಸ್ಮರಣೆ ಮಾಡಿ ಮಗುವಿಗೆ ನಿದ್ರೆ ಹತ್ತಿದ ಮೇಲೆ ತಾನೂ ನಿದ್ರಾವಶಳಾದಳು.

ರಾತ್ರಿ ಕಳೆಯುತ್ತ ಬಂದಿದೆ. ಬೆಳಗಿನ ಝಾವದ ಸಮಯ, ಗಾಢ ನಿದ್ರೆಯಲ್ಲಿರುವ ಅವಳಿಗೆ ಕನಸೊಂದು ಕಟ್ಟಿದೆ. ದೇಗುಲದ ಪ್ರಾಕಾರದ ಆಚೆಯಿಂದ ಹೊನ್ನಿನ ಮೈಕಾಂತಿಯ ದಿವ್ಯ-ಸುಂದರ ಸ್ತ್ರೀಯೊಬ್ಬಳು ಕಾಣಿಸಿಕೊಂಡಳು. ಜ್ವಲಿ

ಸುತ್ತಿರುವ ಅಗ್ನಿಸಹಿತವಾದ ಕಲಶವನ್ನು ಕೈಯ್ಯಲ್ಲಿ ಹಿಡಿದ ಆ ದೇವತೆ ಈ ಗೃಹಿಣಿಯ ಕಡೆಗೇ ಬರುತ್ತಿದ್ದಾಳೆ. ಅವಳ ದೇಹದಿಂದ ಹೊರಸೂಸುತ್ತಿರುವ ಯಾವುದೋ ಪ್ರಸನ್ನ ಪ್ರಭೆ ಈ ಗೃಹಿಣಿಯಲ್ಲಿ ಅವ್ಯಕ್ತ ಆನಂದವನ್ನುಂಟು ಮಾಡುತ್ತಿದೆ. ದೇಗುಲದ ಚಾವಡಿಯಲ್ಲಿ ಈ ನೋಟವನ್ನು ಅನುಭವಿಸುತ್ತಿದ್ದ ಗೃಹಿಣಿಯ ಬಳಿ ಸಾರಿದ ಆ ದಿವ್ಯ ಸ್ತ್ರೀ ತಾನು ಹಿಡಿದಿದ್ದ ಅಗ್ನಿಭಾಂಡವನ್ನು ಇವಳ ಕೈಯಲ್ಲಿರಿಸಿ ಮಂದಹಾಸ ಬೀರುತ್ತ ಅದೃಶ್ಯಳಾದಳು. ಇವಳ ಕೈಗೆ ಕಲಶ ಬರುತ್ತಿದ್ದಂತೆಯೇ ಅದು ಗಂಡುಶಿಶುವಿನ ರೂಪ ತಳೆಯಿತು. ಈ ವಿಚಿತ್ರ ಅನುಭವ ಆಗುತ್ತಿದ್ದಂತೆಯೇ ಸೌಮ್ಯ ಸ್ವಭಾವದ ಆ ಗೃಹಿಣಿಯ ಮನಸ್ಸು ಸಂತಸ-ಆಶ್ಚರ್ಯಗಳಿಂದ ತುಂಬಿ ಹೋಯಿತು. ನಿದ್ದೆಯ ಮಂಪರು ಹರಿದು ಆಕೆ ಎದ್ದು ಕುಳಿತಳು. ಅದೇ ಸುಂದರ-ಶುಭಸೂಚಕ ಸ್ವಪ್ನವನ್ನು ಮತ್ತೆ ಮತ್ತೆ ಮತ್ತೆ ನೆನಪಿಸಿಕೊಂಡಳು. ಕನಸಿನಲ್ಲಿ ಕಾಣಿಸಿಕೊಂಡ ದೇವತಾಸ್ವರೂಪಳಾದ ಸ್ತ್ರೀಯನ್ನು, ಭಕ್ತರ ಅಭೀಷ್ಟ ಪೂರ್ತಿಮಾಡುವಲ್ಲಿ ಪ್ರಖ್ಯಾತನಾದ ಕ್ಷೇತ್ರಾಧಿದೈವ ಸೂರ್ಯನಾರಾಯಣನನ್ನು ಮೇಲಿಂದ ಮೇಲೆ ಸ್ಮರಿಸುತ್ತಿದ್ದಂತೆಯೇ ಕತ್ತಲೆ ಕಳೆದು ಬೆಳಕು ಮೂಡಿತು. ಈ ಸ್ವಪ್ನದ ಮೂಲಕ ಭಾವೀ ಶುಭ ಸೂಚನೆ ನೀಡಿದ ಆ ಸ್ಥಳವನ್ನು ಒಡನೆಯೇ ಬಿಟ್ಟುಹೋಗಲಾರದೆ ಅಲ್ಲಿಯೇ ಮೆಲ್ಲ ಮೆಲ್ಲನೆ ಹೆಜ್ಜೆ ಹಾಕುತ್ತ ಅಡ್ಡಾಡಿ ಕೊನೆಗೊಮ್ಮೆ ಸ್ಥಳದೇವತೆಯನ್ನು ಭಕ್ತಿಯಿಂದ ಪೊಡಮಟ್ಟು ಮಗನೊಡನೆ ತನ್ನ ಗ್ರಾಮದ ಹಾದಿಯನ್ನು ಹಿಡಿದಳು.

ಅವಳ ಗ್ರಾಮದ ಹೆಸರು ಕುಮುದೋಪಲ. (ಕಲುವರಾಯಿ) ಅವಳು ಸಂಭ್ರಮದಿಂದ ಮಗನೊಡನೆ ಮನೆಯನ್ನು ಪ್ರವೇಶಿಸಿದಳು. ಅವಳ ಪತಿದೇವರು ಮಗನೊಡನೆ ಕ್ಷೇತ್ರಯಾತ್ರೆ ನಿರ್ವಹಿಸಿಕೊಂಡು ಮರಳಿ ಬಂದ ಸತಿಯನ್ನು ಸಂತಸದಿಂದ ಸ್ವಾಗತಿಸಿ ಕುಶಲ ಪ್ರಶ್ನೆಮಾಡಿದರು. ತಮ್ಮ ಮಗ ಭೀಮನು ಶೈಶವದಲ್ಲಿ ಭಯಂಕರ ಹೊಟ್ಟೆಬೇನೆಯಿಂದ ಬಳಲುತ್ತಿದ್ದಾಗ ಅರಸವಳ್ಳಿ ಕ್ಷೇತ್ರದಲ್ಲಿ ಮಗುವಿನ ಮುಡಿ ಒಪ್ಪಿಸುವ ಹರಕೆ ಹೊತ್ತಿದ್ದರು. ಹಾಗೆ ಹರಕೆ ಕಟ್ಟಿಕೊಂಡ ಕೆಲವೇ ದಿನಗಳಲ್ಲಿ ಮಗುವಿನ ರೋಗ ವಾಸಿಯಾಗಿ ಆರೋಗ್ಯದಿಂದ ಮಗು ಬೆಳೆಯಿತು. ಈಗ 4 ವರ್ಷ ತುಂಬಿದಾಗ ಮಗುವಿನ ಮೊದಲ ಮುಡಿಯನ್ನು ಕ್ಷೇತ್ರದಲ್ಲಿ ತೆಗೆಸಿ ಕಟ್ಟಿಕೊಂಡಿದ್ದ ಹರಕೆಯನ್ನು ತೀರಿಸಿ ಬಂದಿದ್ದೂ ಆಯಿತು. ತಾಯಿ ತಂದೆಗಳಿಗೆ ತಮ್ಮ ಕರ್ತವ್ಯವೊಂದನ್ನು ನೆರವೇರಿಸಿದ ತೃಪ್ತಿ. ಆ ಗೃಹಸ್ಥರು ತಮ್ಮ ಪತ್ನಿಯನ್ನು ಕ್ಷೇತ್ರಯಾತ್ರೆಯ ವಿವರಗಳನ್ನು ಕುರಿತು ವಿಚಾರಿಸಿದರು. ತನ್ನ ಅನುಭವ ವಿಶೇಷವನ್ನು ಪತಿದೇವನಿಗೆ ವರದಿ ಮಾಡಿ ಅದರ ಅರ್ಥವನ್ನು ತಿಳಿಯುವ ತವಕದಿಂದಿದ್ದ ಅವಳು ತಾನು ಕಂಡ ಕನಸನ್ನು

ಬಣ್ಣಿಸಿದಳು. ಸ್ವಲ್ಪಕಾಲ ಮೌನದಿಂದ ಚಿಂತಿಸಿದ ಆ ಬ್ರಾಹ್ಮಣೋತ್ತಮರು ತಮ್ಮ ಸತಿಯೊಡನೆ ಹೇಳಿದರು :- "ನೀನು ಕಂಡ ಕನಸಿನ ಹಿಂದೆ ದೈವೀ ಪ್ರೇರಣೆ ಇದೆ. ಆದ್ದರಿಂದ ಅದು ಹುಸಿಯಾಗಲಾರದೆಂದೇ ತೋರುತ್ತದೆ. ಶೀಘ್ರವೇ ನಿನ್ನಲ್ಲಿ ಗರ್ಭಲಕ್ಷಣಗಳುಕಾಣಿಸಿಕೊಳ್ಳಬಹುದು."

ಈ ಘಟನೆ ನಡೆದು ಸುಮಾರು 9 ತಿಂಗಳು ಕಳೆಯುತ್ತಿರುವಾಗ ಅಂದರೆ ಬಹುಧಾನ್ಯ ಸಂವತ್ಸರದ ಕಾರ್ತಿಕ ಮಾಸದಲ್ಲಿ ಕುಮುದೋಪಲಗ್ರಾಮದ ಈ ಬ್ರಾಹ್ಮಣೋತ್ತಮರೇ ಕಾಶೀ ಕ್ಷೇತ್ರವನ್ನು ತಲುಪಿದ್ದಾರೆ. ಕಾಶೀ ವಿಶ್ವೇಶ್ವರ ಘಾಟಿನ ಬಳಿ ಇರುವ ಧುಂಡಿಗಣಪತಿಯ ಸನ್ನಿಧಿಯಲ್ಲಿ ಧ್ಯಾನಸ್ಥರಾಗಿ ಕುಳಿತು ಸಿದ್ಧಿಪ್ರದವಾದ ಮಹಾಗಣಪತಿ ಮಂತ್ರ ಪುರಶ್ಚರಣೆಯಲ್ಲಿ ತೊಡಗಿದ್ದಾರೆ.

ಒಂದು ದಿನ ಅವರು ಧ್ಯಾನ ಮಗ್ನರಾಗಿದ್ದಾಗಲೇ ಗಣಾಧಿಪನ ವಿಗ್ರಹ ದಿಂದ ಹೊರಬಂದ ಶಿಶುವೊಂದು ಅಂಬೆಗಾಲಿಕ್ಕುತ್ತ ಅವರನ್ನು ಸಮೀಪಿಸಿ ಅವರ ತೊಡೆಯನ್ನೇರಿ ಅದೃಶ್ಯವಾಯಿತು. ಕೂಡಲೇ ಧ್ಯಾನದಿಂದ ಎದ್ದು ಎಷ್ಟು ಹುಡುಕಿದರೂ ಆ ಪರಿಸರದಲ್ಲಿ ಯಾವ ಶಿಶುವೂ ಕಾಣಲಿಲ್ಲ. ಶಾಸ್ತ್ರವೇತ್ತರಾದ ಅವರು ಯೋಚಿಸಿದರು :- "ನಿಶ್ಚಯವಾಗಿಯೂ ಇದು ಮಂಗಳಕರವಾದ ಇಷ್ಟ ಪ್ರಾಪ್ತಿಯ ಸಂಕೇತವೇ ಸರಿ. ಹೀಗೆ ದೈವೀ ಕೃಪೆಯ ಸಂಕೇತವನ್ನು ಕಣ್ಣಾರೆ ಕಂಡ ನಾನು ಧನ್ಯ" ಎಂದುಕೊಂಡರು.

ಈ ಬ್ರಾಹ್ಮಣೋತ್ತಮರ ಹೆಸರು ನರಸಿಂಹಶಾಸ್ತ್ರಿ. ಇವರ ಧರ್ಮಪತ್ನಿ ನರಸಮ್ಮಾಂಬಾ. ಮೇಲೆ ಕಂಡಂತೆ ನರಸಿಂಹಶಾಸ್ತ್ರಿಗಳು ಕಾಶೀ ಕ್ಷೇತ್ರದಲ್ಲಿ ದೈವೀ ಕೃಪೆಯ ಅನುಭವ ಪಡೆದ ಹೊತ್ತಿನಲ್ಲಿಯೇ ಅಂದರೆ ಬಹುಧಾನ್ಯ ಕಾರ್ತಿಕ ಬಹುಳ ಅಷ್ಟಮಿ (ದಿನಾಂಕ 17-11-1878) ಭಾನುವಾರ ಸಂಜೆ 5 ಘಂಟೆಗೆ ಮಘಾ ನಕ್ಷತ್ರ ವಿರುವಾಗ ಹೆರಿಗೆಗಾಗಿ ತವರುಮನೆಗೆ ಹೋಗಿದ್ದ ಅವರ ಪತ್ನಿ ಸೌ॥ ನರಸಮ್ಮಾಂಬಾರವರು ಗಂಡು ಶಿಶುವಿಗೆ ಜನ್ಮವಿತ್ತರು. ಈ ದಂಪತಿಗಳಿಗೆ ಈ ಮಗು 2ನೆಯ ಸಂತಾನ. ಈಗಾಗಲೇ ವಿವರಿಸಿದಂತೆ ತಾಯಿ-ತಂದೆಯರಿಬ್ಬರಿಗೂ ಶುಭ ಸಂಕೇತಗಳು ದೊರೆತ ಹಿನ್ನೆಲೆಯಲ್ಲಿ ಹುಟ್ಟಿದ ಮಗು ಇದು.

ಕಾಶಿಯಲ್ಲಿ ವರದಾಯಕ ವಿನಾಯಕನ ಅನುಗ್ರಹ ಕಂಡುಬಂದ ಒಡನೆಯೇ ನರಸಿಂಹಶಾಸ್ತ್ರಿಗಳು ಊರಿಗೆ ವಾಪಾಸು ಹೊರಟರು. ಪ್ರಯಾಣ ಸೌಕರ್ಯ ತುಂಬಾ ಸೀಮಿತವಾಗಿದ್ದ ಕಾಲ ಅದು. ರೈಲು ಪ್ರಯಾಣದ ಸೌಕರ್ಯವಿರುವಲ್ಲಿ ರೈಲು ಗಾಡಿಯಲ್ಲಿ ಶೀಘ್ರ ಪ್ರಯಾಣ ಮಾಡಿದರೂ ಆ ಸೌಕರ್ಯ ಇಲ್ಲದ ದಾರಿ

ಯನ್ನು ಕಾಲು ನಡಿಗೆಯಿಂದಲೇ ಕ್ರಮಿಸಬೇಕಾಗಿದ್ದು ಅನಿವಾರ್ಯವಾಗಿತ್ತು. ಆದ್ದರಿಂದ ನರಸಿಂಹಶಾಸ್ತ್ರಿಗಳು ಕಾಶಿಯಿಂದ ಹೊರಟು ಇಲ್ಲಿ ಮಾವನ ಮನೆಯಿರುವ ಹಳ್ಳಿಗೆ ತಲುಪುವಾಗ 1½ ತಿಂಗಳು ಕಳೆದಿತ್ತು. ತಮಗೆ ಗಣಪತಿಯ ಸನ್ನಿಧಿಯಲ್ಲಿ ಶುಭ ಸೂಚನೆ ಕಂಡುಬಂದ ವೇಳೆಗೇ ಇಲ್ಲಿ ಪುತ್ರೋತ್ಸವವಾಗಿರುವುದನ್ನು ಖಚಿತಪಡಿಸಿಕೊಂಡ ಅವರು ಮಗುವಿಗೆ "ಗಣಪತಿ" ಎಂದು ನಾಮಕರಣ ಮಾಡಿದರು. (ತಾಯಿಗೆ ಸೂರ್ಯ ಭಗವಾನನ ಅನುಗ್ರಹವೂ ತಂದೆಯವರಿಗೆ ಗಣಪತಿಯ ಅನುಗ್ರಹವೂ ದೊರೆತುದರಿಂದ "ಸೂರ್ಯ ಗಣಪತಿ" ಎಂದು ಹೆಸರು ಇಟ್ಟಿದ್ದುದಾಗಿಯೂ, ಮುಂದೆ ಹುಡುಗನು ಪ್ರವರ್ಧಮಾನಕ್ಕೆ ಬಂದಾಗ ತಾವು ವಸಿಷ್ಠ ಗೋತ್ರದವರಾದುದರಿಂದ "ಸೂರ್ಯ ಗಣಪತಿ" ಎಂಬುದನ್ನು ಬದಲಾಯಿಸಿ "ವಾಸಿಷ್ಠ ಗಣಪತಿ" ಎಂದು ಇಟ್ಟುಕೊಂಡುದಾಗಿಯೂ ತಿಳಿದು ಬರುತ್ತದೆ. ಅದರಂತೆ "ವಾಸಿಷ್ಠ ಗಣಪತಿ ಮುನಿ"ಗಳೆಂದೇ ಅವರ ಹೆಸರು ಪ್ರಸಿದ್ಧಿ ಪಡೆದಿದೆ.)

ಹುಟ್ಟಿ 5 ವರ್ಷ ಕಳೆದರೂ ಈ ಬಾಲಕನಿಗೆ ಮಾತು ಬರಲೇ ಇಲ್ಲ. ಕೇವಲ ಜಡನಂತೆ ಇದ್ದ ಈತನಿಗೆ ಪ್ರಚಂಡ ಸಪ್ಪಳ ಮಾಡಿದರೂ ಕೇಳಿಸುತ್ತಿರಲಿಲ್ಲ. ಆದರೆ 6ನೇ ವಯಸ್ಸು ಬರುತ್ತಿದ್ದಂತೆಯೇ ಶುದ್ಧ ಜಡ-ಬಧಿರನಂತಿದ್ದ ಈ ಹುಡುಗನ ಚರ್ಯೆಯೇ ಬದಲಾಗಿ ಹೋಯಿತು. ಅದುವರೆಗೆ ಈತನನ್ನು ಆವರಿಸಿಕೊಂಡಿದ್ದ ಪೂರ್ವಜನ್ಮದ ಪಾಪಶೇಷ - ಅರಿಷ್ಟಗಳು ಕಳೆದುಹೋದವು. ಈತನ ನಾಲಿಗೆಯನ್ನೇ ತನ್ನ ನಾಟ್ಯರಂಗವಾಗಿ ಮಾಡಿಕೊಂಡ ಭಾಷಾ ಸರಸ್ವತಿಯ ಲೀಲೆಗಳು ಎಲ್ಲರನ್ನೂ ಸಂಮೋಹಿನಿಗೆ ಒಳಪಡಿಸಿ ವಿಚಿತ್ರವನ್ನೇ ಉಂಟುಮಾಡಿದವು. ಆ ವಯಸ್ಸಿಗೇನೆಯೇ ಶಾಶ್ವತ ದೈವೀ ಕೃಪೆಗಾಗಿ ತಪಸ್ಸಿನ ಹಂಬಲವನ್ನು ಹಚ್ಚಿಕೊಂಡ ಈ ಬಾಲಕ ಮುಂದೆ ಮುನಿಶ್ರೇಷ್ಠನೆನ್ನಿಸಿಕೊಂಡ. ತಾರುಣ್ಯ ಕಾಲಿಡುವ ಮೊದಲೇ ನವದ್ವೀಪ (ಬಂಗಾಲ)ಕ್ಕೆ ಹೋಗಿ ಪಂಡಿತ ಪರಿಷತ್ತಿನಲ್ಲಿ ತುಂಬ ಕಷ್ಟ ಸಾಧ್ಯವೂ-ಶ್ರೇಷ್ಠವೂ ಆದ 'ಕಾವ್ಯಕಂಠ' ಪ್ರಶಸ್ತಿಯನ್ನು ಸಂಪಾದಿಸಿದ; ಪ್ರಾಪಂಚಿಕ ಪರಿಸರದಿಂದ ಆಧ್ಯಾತ್ಮಿಕ ವಲಯವನ್ನು ಪ್ರವೇಶಿಸುವಲ್ಲಿ ಅನೇಕ ಹಿರಿಯರಿಗೆ ಕಿರಿಯನಾದ ಈತನೇ "ದೇವದತ್ತ"ನಂತೆ ನೇತಾರನೆನಿಸಿಕೊಂಡ; ಸಾಹಿತ್ಯದ ಸಾರಸರ್ವಸ್ವವೇ ಮೈತಳೆದಂತೆ, ಮಾತಿನ ನೈಪುಣ್ಯತೆಯೇ ಮೂರ್ತಿವೆತ್ತು ಬಂದಂತೆ ಇದ್ದ ಆತ ಸಹಸ್ರಾರು ಸಂಖ್ಯೆಯ ಗದ್ಯಪದ್ಯಗಳ ಮಾಲೆಯನ್ನು ಕಟ್ಟಿ ದೇವವಾಣಿಯನ್ನು ಆರಾಧಿಸಿದ; ಅದರ ವೈಭವ ವಿಲಾಸವನ್ನು ಹೊರ ಸೂಸುವ ಪುಣ್ಯ ಪುರುಷರ ವಿಷಯಕವಾದ - ಸಹೃದಯರಿಗೆ ಆಹ್ಲಾದ ನೀಡುವ ನಿರುಪಮ ಭಕ್ತಿಗೀತೆಯನ್ನು ಆಗಾಗ ಅವಕಾಶ - ಅನುಕೂಲಗಳು ದೊರೆ

ತಾಗಲೆಲ್ಲಾ ಭಾರತೀಯರಲ್ಲಿ ನಿಶ್ಚಲವಾಗಿರುವಂತೆ ನೆಲೆಗೊಳಿಸಿದ; ನಿಗಮ–ಆಗಮ ದೇವತಾತತ್ತ್ವ - ಮಂತ್ರರಹಸ್ಯಗಳ ವಿವರಣೆಯ ಮೂಲಕ ಮೂಲೆ-ಮೂಲೆಯೂ ಪ್ರಕಾಶಮಾನವಾಗಿರುವಂತೆ ಮತ್ತು ವಿವಿಧ ಪ್ರಕಾರದ ಸಾಹಿತ್ಯ ಸೃಷ್ಟಿಯಿಂದ ಯಾರು ಬೇಕಾದರೂ ಹತ್ತಿ ಹೋಗಬಹುದಾದ ಸೋಪಾನ ಶ್ರೇಣಿಗಳಿರುವಂತೆ ಭವ್ಯ ಸಾರಸ್ವತ ಪ್ರಾಸಾದವನ್ನು ನಿರ್ಮಿಸುವ ಮೂಲಕ ಸ್ವತಃ ಸತ್ವಶಾಲಿಯೂ ಅಳಿವಿಲ್ಲದ ನಿತ್ಯನೂತನವೂ ಆಗಿರುವ ಪುರಾತನ ಗೀರ್ವಾಣ ಭಾಷಾ ಪ್ರಪಂಚ ವನ್ನು ಸಮೃದ್ಧವನ್ನಾಗಿ ಮಾಡಿದ.

ಮಾತಿನ ವೈಖರಿ–ಭಾಷಾ ಸಮೃದ್ಧಿ ಅವರಿಗೆ ಸಹಜವಾಗಿ ಬಂದದ್ದು. ಆಶುಕವಿತಾ ನಿರ್ಮಾಣ - ಒಮ್ಮೆ ಕೇಳಿದ್ದನ್ನು - ಓದಿದ್ದನ್ನು ನೆನಪಿನಲ್ಲಿ ಶಾಶ್ವತ ವಾಗಿ ಉಳಿಸಿಕೊಳ್ಳುವ ಸಾಮರ್ಥ್ಯ - ಸಕಲ ಶಾಸ್ತ್ರಗಳಲ್ಲಿ ಪರಿಣತಿಗಳನ್ನು ಪೂರ್ವಜನ್ಮದ ಪುಣ್ಯದಿಂದಲೂ, ಸಾಧನೆಯಿಂದಲೂ ಸಂಪಾದಿಸಿಕೊಂಡವರು ಅವರು. "ಭಾರತ ಭೂಖಂಡವನ್ನು ಎಲ್ಲ ಬಗೆಯಿಂದಲೂ ಆವರಿಸಿಕೊಂಡಿರುವ ದಾಸ್ಯದ ವಿಮೋಚನಾ ಕಾರ್ಯವೇ. ಮಹಾಮೋಕ್ಷ" ಎಂದು ನಿರ್ಧರಿಸಿ ತನ್ನ ಬಾಳಿನಲ್ಲಿ ಅದನ್ನೇ ಮಹಾವ್ರತವಾಗಿ ಸ್ವೀಕರಿಸಿದವರು. ಮಂತ್ರಮೂರ್ತಿಯೂ ಮಹಾನುಭಾವರೂ ಆಗಿದ್ದ ಆ ವಾಸಿಷ್ಠ ಗಣಪತಿ ಮುನಿಗಳ ಬದುಕು ವೈಭವೋ ಪೇತವೆನಿಸಿಕೊಂಡುದು ಹಣ ಇತ್ಯಾದಿಗಳಿಂದ ಅಲ್ಲ. ಅನರ್ಘ್ಯ ಸಾರಸ್ವತ ಪ್ರತಿಭೆ ಮತ್ತು ತಪೋಧನಗಳಿಂದ. ಅಂತಹ ಮುನಿಯರ್‍ೊಬ್ಬರ ಜೀವನ ವೃತ್ತಾಂತವನ್ನು ನಿರೂಪಿಸುವ ಕಥೆ ಇದು.

ಪ್ರಕೃತ ಕೀರ್ತಿಕಾಯರಾಗಿರುವ ಗಣಪತಿ ಮುನಿಗಳು ತಮ್ಮ ಜೀವಿತ ಕಾಲ ದಲ್ಲಿ ಅಲ್ಲಲ್ಲಿ, ಆಗಾಗ, ತೆಲುಗು–ಕನ್ನಡ–ತಮಿಳು ಭಾಷೆಗಳಲ್ಲಿ ಸ್ವತಃ ನಿರೂ ಪಿಸಿದ ತಮ್ಮ ಬದುಕಿನ ವಿವರಗಳನ್ನು ಸಂಗ್ರಹಿಸಿ ಅವರ ಶಿಷ್ಯ ವಿದ್ವದ್ವರೇಣ್ಯಾ ವೇ॥ ಬ್ರಂ॥ ಶ್ರೀ ಕಪಾಲಿಶಾಸ್ತ್ರಿಗಳು ಸಂಸ್ಕೃತ ಭಾಷೆಯಲ್ಲಿ ರಚಿಸಿರುವ ಚಂಪೂ ಕಾವ್ಯವೇ "ವಾಸಿಷ್ಠ ವೈಭವಂ". ಅದನ್ನು ಆಧರಿಸಿ ಕನ್ನಡದ ಓದುಗರಿಗಾಗಿ ಈ ಕನ್ನಡ ಬರಹ ರಚಿತವಾಗಿದೆ.

ಪ್ರಕರಣ–2

"ತತ್ಕ್ಷಣಂ ಕಿನ್ನು ಕುರ್ಯಾದ್ಧಿ ಪ್ರಸಾದಃ ಪಾರಮೈಶ್ವರಃ" ?

(ಕಥಾ ಸರಿತ್ಸಾಗರಂ)

(ಪರಮೇಶ್ವರನ ಅನುಗ್ರಹವು ಆ ಕ್ಷಣದಲ್ಲಿ ಏನು ಮಾಡಿತು ?)

ಬಾಲ್ಯ-ವಿದ್ಯಾವೈಭವ

"ಅನಂತ ಪುಷ್ಪಸ್ಯ ಮಧೋರ್ಹಿ ಚೂತೆ ದ್ವಿರೇಫಮಾಲಾ ಸವಿಶೇಷಸಂಗಾ"
(ಕುಮಾರ ಸಂಭವಂ 1–27)

(ಚೈತ್ರ ಮಾಸದಲ್ಲಿ ಅರಳಿ ನಿಂತ ಬಗೆ ಬಗೆಯ ಪುಷ್ಪರಾಶಿಯ ಸೌರಭ ವಿದ್ದರೂ ಮಧುಕರನಿಕರಕ್ಕೆ (ಜೇನು ಹುಳಗಳ ಗುಂಪು) ಮಾವಿನ ಹೂಗಳಲ್ಲಿಯೇ ವಿಶೇಷ ಆಸಕ್ತಿ)

"ತೇಜಸಾಂ ಹಿ ನ ವಯಃ ಸಮೀಕ್ಷ್ಯತೇ"
(ರಘುವಂಶಂ 11–1)

(ತೇಜಸ್ವಿಗಳ ವಿಷಯದಲ್ಲಿ ವಯಸ್ಸು ಪರಿಗಣನೆಗೆ ಬರುವುದಿಲ್ಲ.)

ಗಣಪತಿ ಶಾಸ್ತ್ರಿಗಳು ತಮ್ಮ ಬಾಲ್ಯವನ್ನು ಕುರಿತು ಸ್ವತಃ ಹೇಳಿರುವ ಮಾತುಗಳು ಹೀಗಿವೆ:- ಶುಭ ಸೂಚನೆ - ದೈವಾನುಗ್ರಹಕ ಹಿನ್ನೆಲೆಯಲ್ಲಿ ಹುಟ್ಟಿದ ನನ್ನ ವಿಷಯದಲ್ಲಿ ಅಲೌಕಿಕ ಬಾಲಲೀಲೆಗಳನ್ನು ನಿರೀಕ್ಷಿಸುತ್ತಿದ್ದ ನನ್ನ ತಂದೆ-ತಾಯಿಗಳಿಗೆ ನನ್ನ ಶೈಶವಾವಸ್ಥೆ ಒಂದಿಷ್ಟು ಆಶಾಭಂಗವನ್ನೇ ಉಂಟು ಮಾಡಿತೆನ್ನಬೇಕು. ಅದಕ್ಕೆ ಕಾರಣ :- 6ನೇ ವಯಸ್ಸು ಬರುವವರೆಗೂ ನಾನು ಕೇವಲ ಮಂಕು ಹಿಡಿದವನಂತೆ ಇದ್ದೆ. ಕೆಲವೊಮ್ಮೆ ಇದ್ದಕ್ಕಿದ್ದಂತೆ ರಚ್ಚೆ ಹಿಡಿದು ರೋದಿಸುತ್ತಿದ್ದೆ. ದ್ರವರೂಪದ ಆಹಾರ ನನಗೆ ಸೇರುತ್ತಲೇ ಇರಲಿಲ್ಲ. ಅನ್ನ ಅಥವಾ ಯಾವುದೇ ತಿನಿಸು ಉಂಡೆಯರೂಪದಲ್ಲಿದ್ದರೆ ಮಾತ್ರ ಸೇವಿಸುತ್ತಿದ್ದೆ. ಮೇಲಿಂದ ಮೇಲೆ ಎಚ್ಚರ ತಪ್ಪಿಹೋಗುವಿಕೆ ಪಿತ್ತಾಶಯದ ಕಾಯಿಲೆ, ಗುಲ್ಮ ರೋಗ, ಬಾವು, ಜ್ವರ ಹೀಗೆ ಹಲವು ರೀತಿಯ ಬಾಲಗ್ರಹಕ್ಕೆ ನನ್ನ ಶರೀರವೇ ಆಶ್ರಯ ಸ್ಥಾನವಾಗಿತ್ತು. ಮುಂದೆ ಶೈವಾವಸ್ಥೆಯನ್ನು ಕಳೆದು ಬಾಲ್ಯಕ್ಕೆ ಕಾಲಿಡುತ್ತಿದ್ದಂತೆಯೇ ನೆಪಮಾತ್ರದ ಚಿಕಿತ್ಸೆಯೊಂದರಿಂದ ನನ್ನ ಶರೀರದ ತೊಂದರೆಗಳೆಲ್ಲ ಹೇಳಹೆಸರಿಲ್ಲದೆ ಹೋಗಿ ಬಿಟ್ಟವು. ಆ ಚಿಕಿತ್ಸೆ ಮೊದಲು ತಾಳಲಾಗದ ನೋವು ಕೊಟ್ಟರೂ ಕೊನೆಯಲ್ಲಿ ಒಳ್ಳೆಯ ಪರಿಣಾಮ ನೀಡುವಂತಹದು. ಆ ಚಿಕಿತ್ಸೆ ತೀರಾ ಸಾಮಾನ್ಯವಾದುದು ಕೂಡ. ಕಬ್ಬಿಣದ ಚಿಕ್ಕ ವಸ್ತುವನ್ನು ಕಾಯಿಸಿ ಕೈ-ಕಾಲು-ಕೆನ್ನೆ-ಹಣೆ-ಪೃಷ್ಠ-ಪಕ್ಕೆಗಳ ಮೇಲೆ ಒತ್ತಿ ಬರೆ ಹಾಕುವುದು. (ಈ ಪ್ರಯೋಗ ನಮ್ಮ ಕನ್ನಡ ನಾಡಿನಲ್ಲಿಯೂ ಹಿಂದೆ ಬಳಕೆಯಲ್ಲಿದ್ದು ಚಿಕ್ಕ ಮಕ್ಕಳಿಗೆ ಅದನ್ನು ಮಾಡುವಾಗ "ಚಿಟಕಿ ಹಾಕುವುದು" ಎಂದೂ, ಸಣ್ಣ ಜಾನುವಾರುಗಳಿಗೆ ಅದನ್ನು "ಬರೆಹಾಕುವುದು" ಎಂದೂ ಕರೆಯುತ್ತಿದ್ದರು. ನಾನು (ಈ ಕನ್ನಡ ಲೇಖಕ) ಚಿಕ್ಕವನಿದ್ದಾಗ ಬಾಲಗ್ರಹ

ಪೀಡಿತಗಳಾಗಿದ್ದ ತನ್ನ ತಂಗಿಗೆ ನನ್ನ ತಂದೆಯವರು ಈ ಪ್ರಯೋಗ ನಡೆಸಿದ್ದನ್ನು ಸ್ವತಃ ಕಂಡಿದ್ದೇನೆ. ಸ್ವಲ್ಪ ದೊಡ್ಡ ಕಬ್ಬಿಣದ ಮೊಳೆಯ ಹಿಂಬಾಗವನ್ನು ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಿ ಶಿಶುವಿನ ಶರೀರದ ಮೇಲೆ ಹೇಳಿದ ಭಾಗಗಳ ಮೇಲೆ ಒತ್ತಿ ತಾಗಿಸಿ ಕೂಡಲೆ ಹಿಂದಕ್ಕೆ ತೆಗೆಯುವುದು. ಅಸಹ್ಯ ವೇದನೆಯಿಂದ ಮಗು ಕೈ-ಕಾಲು ಕೊಡವದಂತೆ ಬಿಗಿಯಾಗಿ ಹಿಡಿದು ಕೊಳ್ಳುವವರೊಬ್ಬರು, ಚಿಟಿಕೆ ಹಾಕುವವರು ಇನ್ನೊಬ್ಬರು. ಹಾಲು ಹಸುಳೆಗಳ ಮೇಲೆ ಈ ಕ್ರೂರಪ್ರಯೋಗ ನಡೆಸಲು ಹೆತ್ತವರಿಂದ ಸಾಧ್ಯವಾಗದಿದ್ದಾಗ ಹಳ್ಳಿಗಳಲ್ಲಿ ಇರುತ್ತಿದ್ದ ಪಳಗಿದ ವ್ಯಕ್ತಿಗಳನ್ನು ಕರೆತಂದು ಅವರಿಂದ ಈ ಪ್ರಯೋಗ ಮಾಡಿಸುತ್ತಿದ್ದರು. ಇದು ಒಂದು ಬಗೆಯ ರಕ್ಕಸ ಪ್ರಯೋಗವೇ ಆದರೂ ಮಕ್ಕಳ ಕಾಹಿಲೆಗಳು ಸರ್ವ ಸಾಮಾನ್ಯವಾಗಿದ್ದ ಆಕಾಲದಲ್ಲಿ-ಅದೂ ಅಲ್ಲದೆ-ಹಳ್ಳಿಯ ಪ್ರದೇಶಗಳಲ್ಲಿ ಬೇರೆ ದಾರಿಯಿಲ್ಲದೆ ಬಾಲಗ್ರಹ ತೀರ ಉಲ್ಬಣಿಸಿದಾಗ ಈ ನಾಟಿ ಪ್ರಯೋಗ ಅನಿವಾರ್ಯವೂ ಆಗಿತ್ತು.)

ಈ ಚಿಕಿತ್ಸೆಯ ನಂತರ ನನ್ನಲ್ಲಿ ಹೊಸ ಚೈತನ್ಯ ತುಂಬಿಕೊಂಡು ದೇಹವು ಕಾಂತಿಯುಕ್ತವಾಯಿತು. ನನಗೆ ಅಕ್ಷರಾಭ್ಯಾಸ—ಉಪನಯನ ಸಂಸ್ಕಾರಗಳೂ ಆದವು. ಅದರ ಜೊತೆಗೇ ನನ್ನ ಬುದ್ಧಿಶಕ್ತಿ ವಿಕಾಸಗೊಳ್ಳಲಾರಂಭಿಸಿತು. ಮೊದಲಿಗೆ ನಾನು ಕಲಿತುದು ರಾಮಾಯಣ ಕಾವ್ಯದ ಮೊದಲನೆಯ ಸರ್ಗ ಬಾಲರಾಮಾಯಣವನ್ನು, ಅದು ಶೀಘ್ರದಲ್ಲಿಯೇ ನನಗೆ ಬಾಯಿಪಾಠವಾಗಿ ಹೋಯಿತು. ಮತ್ತೆ ಶಿವಸಹಸ್ರನಾಮವನ್ನು ಮುಖೋದ್ಗತ ಮಾಡಿಕೊಂಡೆ. ಕೇವಲ 7ವರ್ಷದವನಾದ ನನ್ನಗ್ರಹಣ-ಧಾರಣ ಸಾಮರ್ಥ್ಯ ಅನನ್ಯ ಸಾಧಾರಣವೆನಿಸಿ ಕೊಂಡಿತು. ಒಮ್ಮೆ ಕೇಳಿದ್ದನ್ನು ಸ್ಥಿರವಾಗಿ ನೆನಪಿನಲ್ಲಿಟ್ಟುಕೊಳ್ಳುತ್ತಿದ್ದ ನಾನು ನಮ್ಮ ಪಾಠ ಶಾಲೆಯಲ್ಲಿ ಹೆಸರುಗಳಿಸಿದೆ. ಪರೀಕ್ಷೆ ಹತ್ತಿರ ಬಂದಾಗಲೂ ಸ್ವಲ್ಪವೂ ಅಧೀರನಾಗದೆ 10ದಿನಗಳ ಕಾಲ ಗಣಿತ—ಆಂಧ್ರಭಾಷೆ—ಮೊದಲಾದ ಪಠ್ಯ ವಿಷಯಗಳನ್ನು ಒಬ್ಬನೇ ಕುಳಿತು ಸಾವಧಾನವಾಗಿ ಓದಿಕೊಂಡು ಸಲೀಸಾಗಿ ಪರೀಕ್ಷೆಗಳಲ್ಲಿ ಉತ್ತೀರ್ಣನಾಗುತ್ತಿದ್ದೆ. ಆದರೆ ಬೇರೆ ಸಮಯವನ್ನೆಲ್ಲಾ ಆಟ—ಚೇಷ್ಟೆಗಳಲ್ಲಿಯೇ ಕಳೆಯುತ್ತಿದ್ದುದಕ್ಕಾಗಿ ಶಿಕ್ಷಕರಿಂದ ಶಿಕ್ಷೆಗೂ ಗುರಿಯಾಗುತ್ತಿದೆ.

ನಮ್ಮ ಗ್ರಾಮದ ಬಾಲಕರಿಗೆ ನಾನೇ ನಾಯಕ. ಎಲ್ಲ ಆಟಗಳಲ್ಲಿಯೂ ಒಂದು ಪಂಗಡಕ್ಕೆ ನೇತಾರನಾಗಿರುತ್ತಿದ್ದ ನಾನು ಯಾವಾಗಲೂ ನನ್ನ ಪಕ್ಷಕ್ಕೇ ಗೆಲುವನ್ನು ಗಳಿಸಿಕೊಡುತ್ತಿದ್ದೆ.

* ನಮ್ಮ ವಂಶದ ಹಿರಿಯರಂತೆ ನನ್ನತ ಂದೆಯವರಾದ ನರಸಿಂಹಶಾಸ್ತ್ರಿಗಳೂ ಆಯುರ್ವೇದ-ಜ್ಯೋತಿಷ್ಯ ಮಂತ್ರಶಾಸ್ತ್ರ ಮುಂತಾದವುಗಳಲ್ಲಿ ಒಳ್ಳೆಯ ಪರಿಣತಿ ಪಡೆದವರು, ಲೌಕಿಕ ವ್ಯವಹಾರಗಳಲ್ಲಿ ಕೂಡ ಬೇರೆಯವರಿಗೆ ಮಾರ್ಗದರ್ಶನ ಮಾಡುವ ಸಾಮರ್ಥ್ಯವಿದ್ದವರು, ಶ್ರೋತ್ರಿಯರಾಗಿ ಭೂಮಿಯ ಒಡೆಯರೂ ಆಗಿದ್ದುದರ ಜೊತೆಗೆ ಗ್ರಾಮಾಧಿಕಾರಿಯೂ ಆಗಿದ್ದ ಅವರು ಪ್ರಾಪಂಚಿಕ ರೀತಿ ನೀತಿಗಳಲ್ಲಿ ಪಳಗಿದವರು. ನನ್ನಲ್ಲಿ ಹೆಚ್ಚಿನ ಮಮತೆ ಅವರಿಗೆ. ಹಾಗಾಗಿ ಅವರು ಎಂದೂ ನನ್ನನ್ನು ಹೊಡೆದು ಶಿಕ್ಷಿಸಿದ್ದಿಲ್ಲ. ಚಿತ್ರ-ವಿಚಿತ್ರ ಕಥೆ-ಸನ್ನಿವೇಶಗಳನ್ನು ಹೇಳುವ ಮೂಲಕ ನನ್ನ ಬದುಕಿನ ದಾರಿಯನ್ನು ನಿರ್ದೇಶಿಸಿ ನನ್ನ ತಿಳಿವಳಿಕೆಯನ್ನು ಹೆಚ್ಚಿಸಿದರು. ಆದರೆ ನನಗೆ ಉಪಾಧ್ಯಾಯರಾಗಿದ್ದ ಚಿಕ್ಕಪ್ಪ ಪ್ರಕಾಶ ಶಾಸ್ತ್ರಿಗಳು ಮಾತ್ರ ಕಾವ್ಯ - ಗಣಿತಗಳ ಅಭ್ಯಾಸ ಕಾಲದಲ್ಲಿ ನನಗೆ ಆಗಾಗ್ಯೆ ಏಟುಕೊಡುತ್ತಿದ್ದುದು ನೆನಪಿಗೆ ಬರುತ್ತದೆ. ಆದರೆ ಈ ಏಟುಗಳನ್ನು ನಾನು ತಿನ್ನಬೇಕಾಗಿ ಬಂದುದು ನನ್ನ ಚೇಷ್ಟೆ-ತುಂಟಾಟಗಳಿಂದಾಗಿಯೇ ಹೊರತು ಪಾಠಗಳಲ್ಲಿ ಹಿಂದೆ ಬಿದ್ದೆನೆಂದು ಅಲ್ಲ. ನನ್ನ 10ನೇ ವಯಸ್ಸಿನಲ್ಲಿ ಕವಿತೆ ಕಟ್ಟುವ ಅಭ್ಯಾಸದಲ್ಲಿ ತೊಡಗಿ ರಚಿಸಿದ ಮೊದಲ ಶ್ಲೋಕ ಇದು.

ಜಗದ್ಗುರೂನಹಂ ವಂದೇ ಬ್ರಹ್ಮ-ವಿಷ್ಣು-ಮಹೇಶ್ವರಾನ್ ।
ವಾಣೀ-ಲಕ್ಷ್ಮೀ-ಶಿವಾನಾಥಾನ್ ಸೃಷ್ಟಿಸ್ಥಿತ್ಯಂತಕಾರಿಣಃ ॥

* (ಲೋಕಕ್ಕೆ ಗುರು ಸ್ವರೂಪರೂ ಜಗತ್ತಿನ ಹುಟ್ಟು-ಬದಕು ನಾಶಗಳಿಗೆ ಕಾರಣರೂ ಆದ ವಾಣೀಪತಿ (ಬ್ರಹ್ಮ) ಲಕ್ಷ್ಮೀಶ (ವಿಷ್ಣು) ಉಮಾನಾಥ (ಮಹೇಶ್ವರ) ಇವರಿಗೆ ವಂದನೆಗಳು)

---

* ವಾಸಿಷ್ಠಮುನಿಗಳ ಸ್ವಂತ ಕೈಬರಹದ ಹಾಳೆಗಳ ಪೈಕೀ ಒಂದರಲ್ಲಿ ಅವರ ವಂಶದಬಗ್ಗೆ ಈವಿವರಗಳ ಕಾಣಬರುತ್ತವೆ :- ನನ್ನ ತಂದೆಯವರು ನರಸಿಂಹ ಶಾಸ್ತ್ರಿಗಳು ತಾಯಿಯವರು ನರಸಮಾಂಬಾ, ಹಿರಿಯ ಸಹೋದರ ಭೀಮಶಾಸ್ತ್ರಿ, ಇವರಿಗೆ ಈ ಶಾಸ್ತ್ರಿ ಉಪಾಧಿಯು ಹಿರಿಯರ ಪರಂಪರೆಯಿಂದ ನಾಮ ಮಾತ್ರಕ್ಕೆ ಬಂದುದೇ ಹೊರತು, ಸ್ವತಃ ಶಾಸ್ತ್ರಗಳನ್ನು ಓದಿ ಪಡೆದುದಲ್ಲ. ಸಹೋದರಿ ಅನ್ನಪೂರ್ಣಾ. ತಮ್ಮ ಶಿವರಾಮ. ಇವನನ್ನು ನನ್ನ ಚಿಕ್ಕತಂದೆ ಪ್ರಕಾಶ ಶಾಸ್ತ್ರಿಗಳು ದತ್ತು ತೆಗೆದು ಕೊಂಡರು, ನನ್ನ ಇನ್ನೊಬ್ಬ ಚಿಕ್ಕ ತಂದೆ ಸರ್ವೇಶ್ವರ ಶಾಸ್ತ್ರಿಗಳು. ಅವರ ಮೊದಲಮಗ ಸೂರ್ಯನಾರಾಯಣ ನನಗಿಂತ ಹಿರಿಯ. ನಾವು "ಅಯ್ಯಲ ಸೋಮಯಾಜಿ" ಎಂಬ ವಿಶೇಷ ಉಪನಾಮಧೇಯವುಳ್ಳವರು. ಪೆರೂರು ದ್ರಾವಿಡರಾದ ನಮ್ಮದು ಕೌಂಡಿನ್ಯಗೋತ್ರ. ನಾವು ವಾಸಿಷ್ಠರಾದುದರಿಂದ ನಾನು "ವಾಸಿಷ್ಠ ಗಣಪತಿ" ಎಂದು ನನ್ನನ್ನು ಹೆಸರಿಸಿ ಕೊಂಡಿದ್ದೇನೆ. ಇದಿಷ್ಟು ಅವರ ಬರಹವಾದರೆ ಈ ಮುಂದಿನ ವಿಷಯ ಅವರ ಮುಖದಿಂದಲೇ

ಅದೇ ವರ್ಷ ಲಘು ಪಾರಾಶರೀ-ಶ್ರೀಪತಿ ಗ್ರಂಥಗಳ ಪಾಠವಾಯಿತು. ಜ್ಯೋತಿಷ್ಯ ಸಿದ್ಧಾಂತದಲ್ಲಿ ನವಾಂಶ ಮೊದಲಾದವನ್ನು ಕಂಡು ಹಿಡಿಯಲು ಅನುಕೂಲವಾಗುವಂತೆ ಸರಳ ಗಣಿತ ಸೂತ್ರವನ್ನು ಹೊಸದಾಗಿ ರಚಿಸಿದೆ. ಅದರ ಪಥಕಗಳನ್ನು ಕಂಡು ಹಿಡಿದು ಬರೆದಿಟ್ಟಿದ್ದೆ. ಆದರೆ ದುರದೃಷ್ಟವಶಾತ್ ಆ ಬರಹಗಳು ಭೂಗತವಾಗಿ ಹೋದವು, ನವೀನ ಗಣಿತಶಾಸ್ತ್ರದಲ್ಲಿ ನಾನು ನಮ್ಮ ಗುರಗಳಿಗೇ ಮಾರ್ಗ ದರ್ಶನ ಮಾಡಬಲ್ಲವನಾಗಿದ್ದೆ. ಅದೇ ಹತ್ತನೇ ವಯಸ್ಸಿನಲ್ಲಿಯೇ ನಾನು ಜಾತಕಗಳನ್ನು ಕರಾರುವಾಕ್ಕಾಗಿ ಗುಣಿಸುವುದು, ಜಾತಕಗಳನ್ನು ನೋಡಿ ಖಚಿತ ಭವಿಷ್ಯ ಫಲಗಳನ್ನು ಹೇಳುವುದು ಇವುಗಳಲ್ಲಿ ನಿಪುಣನಾಗಿದ್ದೆ. ಒಮ್ಮೆ ನಮ್ಮ ತಾಯಿಯ ಜನ್ಮಕುಂಡಲಿಯನ್ನು ನೋಡಿ ಅವರ ಮರಣದ ಬಗ್ಗೆ ಸಂಕೋಚವಿಲ್ಲದೆ ಭವಿಷ್ಯ ನುಡಿದುಬಿಟ್ಟೆ. ಆರೋಗ್ಯವಾಗಿಯೇ ಇದ್ದ ತಾಯಿಯವರ ಈ ಕೆಟ್ಟ ಭವಿಷ್ಯ ಕೇಳಿಯೂ ವಿಚಲಿತರಾಗಲಿಲ್ಲ.

ಕೇವಲ ಬಾಲಕನಾಗಿದ್ದರೂ ನಾನು ನುಡಿದ ಭವಿಷ್ಯವಾಣಿ ಮಾತ್ರ ಬಾಲಿಶವೆನಿಸದೆ ದೈವವಾಣಿಯಾಗಿಯೇ ಪರಿಣಮಿಸಿತು. ತುಂಬು ಗರ್ಭಿಣಿಯಾಗಿದ್ದ ನನ್ನ ತಾಯಿಯವರು ಹೆರಿಗೆಗೆ 1 ಘಂಟೆ ಮುಂಚೆ ತತ್ಕಾಲೀನ ಗ್ರಹಸ್ಥಿತಿಯ ಬಗ್ಗೆ ನನ್ನನ್ನು ಕೇಳಿದ್ದರಿಂದ "ಆ ಸಮಯದಲ್ಲಿ ಮಗುವನ್ನು ಹೆರುವ ತಾಯಿ ಮತ್ತು

---

* ಕೇಳಿ ತಿಳಿದದ್ದು :— ನಮ್ಮದು ಶ್ರೀವಿದ್ಯಾ ಉಪಾಸಕರ ಮನೆತನ ಇದರಲ್ಲಿ ನಾನು 6ನೆ ತಲೆಮಾರಿನವನು. ನಮ್ಮ ಹಿರಿಯರು ಶ್ರೋತ್ರಿಯರಾಗಿ ಭೂಮಿಯ ಒಡೆತನವನ್ನೂ ಹೊಂದಿದ್ದವರು. ಅವರು ಜೀವನ ನಿರ್ವಹಣೆಗಾಗಿ ಬೇರೆ ಉದ್ಯೋಗವನ್ನೇನೂ ಆಶ್ರಯಿಸಬೇಕಾಗಿರಲಿಲ್ಲ. ಕಳೆದ 3ತಲೆಮಾರಿನಿಂದ ವಿಶಾಖಪಟ್ಟಣ ವಿಭಾಗಕ್ಕೆ ಸೇರಿದ ಬೊಬ್ಬಿಲಿ ಸಂಸ್ಥಾನದ ಸಮೀಪವಿರುವ ಕಲುವರಾಯಿ (ಕುಮುದೋಪಲ) ಗ್ರಾಮವು ನಮ್ಮ ವಾಸಸ್ಥಳ. ಅದಕ್ಕೂ ಹಿಂದಿನವರು ಪೂರ್ವಗೋದಾವರಿ ಪ್ರದೇಶದ ಅಮಲಾಪುರ; ಆ ಮೊದಲಿನವರು ಈಗ ದತ್ತ ಮಂಡಲದಲ್ಲಿ ಸೇರಿರುವ ನಂದಿಯಾಲದಲ್ಲೂ ವಾಸವಿದ್ದವರು. ಜಾನಕೀ ಪರಿಣಯ ನಾಟಕ ಕರ್ತೃ ರಾಮ ಭದ್ರ ದೀಕ್ಷಿತರು ನಮ್ಮ ವಂಶದವರು. ಇನ್ನೂ ಪೂರ್ವದಲ್ಲಿ ಚೋಳ ಮಂಡಲದ ಕುಂಭ ಕೋಣದ ಬಳಿ ವಲಂಗೈಮಾನ್ ಅಗ್ರಹಾರವು ನಮ್ಮ ವಂಶಸ್ಥರ ವಾಸಸ್ಥಳವಾಗಿತ್ತು. ಆದ್ದರಿಂದ ದಾಕ್ಷಿಣಾತ್ಯರಾದ ನಾವು ದ್ರಾವಿಡದೇಶದಿಂದ ಆಂಧ್ರದೇಶಕ್ಕೆ ಬಂದು ನೆಲೆಸಿದವರು. ಸ್ಮಾರ್ತ (ವಡಮ) ಬ್ರಾಹ್ಮಣರಾದ ನಾವು ಋಗ್ವೇದಿಗಳು,

ಹೆತ್ತ ಸಂತಾನ ಬದುಕಿ ಉಳಿಯುವುದಿಲ್ಲ" ಎಂಬುದೇ ನಾನು ಹೇಳಿದ ಭವಿಷ್ಯ. ಮತ್ತೆ ಆದುದೂ ಹಾಗೆಯೇ. ಅವಳಿ ಮಕ್ಕಳಿಗೆ ಜನ್ಮ ನೀಡಿದ ತಾಯಿಯು ಮಕ್ಕಳ ಸಹಿತ ದೈವಾಧೀನರಾದರು. ಇಡೀ ಕಟುಂಬ ದುಃಖದಿಂದ ಕಣ್ಣೀರಿ ಡುತ್ತಿದ್ದರೂ ನಾನು ಮಾತ್ರ ಪ್ರಕಟವಾಗಿ ರೋದಿಸಲಿಲ್ಲ. ಆದರೆ ಒಂದು ಬಗೆಯು ನಿಷ್ಕ್ರಿಯತೆ ನನ್ನನ್ನು ಆವರಿಸಿ ನಾನು ಮಂಕುಬಡಿದವನಂತೆ ಇದ್ದೆ. ಬಹಳ ದಿನಗಳ ನಂತರ ಈ ಒಳ ಬೇಗುದಿ ಮಾಯವಾಗಿ ಮೊದಲಿನಂತೆ ಆದೆ.

ಹನ್ನೊಂದು ವರ್ಷ ತುಂಬುವ ಮೊದಲೇ ರಘುವಂಶ ಕಾವ್ಯದಲ್ಲಿ 7 ಸರ್ಗ ಕುಮಾರ ಸಂಭವದಲ್ಲಿ 3ಸರ್ಗ, ಮೇಘದೂತ, ಶಬ್ದ ರೂಪ-ಧಾತುರೂಪ ಸಮಾಸಗಳು ಇವೆಲ್ಲವನ್ನು ಕಲಿತೆ.

12ನೇ ವಯಸ್ಸಿನಲ್ಲಿ ಪಂಡಿತ ಶ್ರೇಷ್ಠ ವೆಂಕಟೇಶರವರ ಸನ್ನಿಧಿಯಲ್ಲಿ ಅರ್ಥ ಗಾಂಭೀರ್ಯದಿಂದ ಶೋಭಿಸುವ - ಬಿಗಿಯಾದ ರಚನೆಯುಳ್ಳ ಭಾರವಿ ಕಾವ್ಯ (ಕಿರಾತಾರ್ಜುನೀಯ) ವನ್ನು ಪೂರ್ಣಅಧ್ಯಯನ ಮಾಡಿ ನನ್ನ ತಂದೆಯವರಿಗೆ ಸಂತಸ ಉಂಟುಮಾಡಿದೆ. ಈ ಸಂದರ್ಭದಲ್ಲಿ ನನ್ನ ವಿಶೇಷ ಬುದ್ಧಿ ಚಾತುರ್ಯ-ಸಾಧನೆಗಳಿಂದ ಪ್ರಭಾವಿತರಾದ ಬಂಧುವರ್ಗದವರು ನನ್ನ ಗುರುಗಳ ಅನುಮತಿ ಪಡೆದು ಆ ಚಿಕ್ಕ ವಯಸ್ಸಿನಲ್ಲಿಯೇ ನನಗೆ ವಿವಾಹವನ್ನು ನಿರ್ಧರಿಸಿ ಬಿಟ್ಟರು. ಮದುವೆಯಾಗುವ ಮೊದಲು ಹೇಗೋ ಹಾಗೆಯೇ ಮದುವೆಯ ನಂತರವೂ ನನಗೆ ಕವಿತೆಯ ರಚನೆಯಲ್ಲಿ ಹಿಂಗಲಾರದ ಆಸಕ್ತಿ !

ಮೇಘದೂತವನ್ನು ಅನುಸರಿಸಿ ಭೃಂಗದೂತವೆಂಬ ಹೊಸ ಕಾವ್ಯವನ್ನ ರಚಿಸಿದೆ. ಆದರೆ ನನ್ನ ಈ ಬಾಲಿಶ ತನದ ರಚನೆ ಎತ್ತ ? ಮಹಾಕವಿ ಕಾಳಿದಾಸನ ಕಾವ್ಯವೆತ್ತ ? ಈ ಅಜ-ಗಜಾಂತರವನ್ನು ಪರಿಗಣಿಸಿ ನನಗೇ ನಾಚಿಕೆಯೆನಿಸಿತು. ನಿರ್ಗಂಧ ಕುಸುಮದಂತಿದ್ದ ನನ್ನ ಬರಹವನ್ನು ಹರಿದು ಒಗೆದಿದ್ದೂ ಆಯಿತು. ಹೀಗೆಯೇ ನಾನು ಕಟ್ಟಿದ ಸಾವಿರಾರು ಖಂಡ ಪದ್ಯಗಳನ್ನು ಹರಿದು ನಾಶ ಪಡಿಸುತ್ತಿದ್ದೆನೆಂಬುದು ಅತಿಶಯೋಕ್ತಿಯೇನಲ್ಲ.

ಆದರೆ ಪ್ರತಿದಿನವೂ ಎಂಬಂತೆ ಹೊಸ ಹೊಸ ರಚನೆಗಳ ಮೂಲಕ ಕವಿತೆಯನ್ನು ಎಡೆಬಿಡದೆ ಉಪಾಸನೆ ಮಾಡಿದ್ದರ ಫಲವಾಗಿ 14ನೇ ವಯಸ್ಸಿಗೇ ನನ್ನಲ್ಲಿ ನಿರರ್ಗಳವಾಗಿ ಆಶು ಕವಿತೆಗಳನ್ನು ಹೆಣೆದು ಹೇಳುತ್ತ ಹೋಗಬಲ್ಲ ಸಾಮರ್ಥ್ಯ

ಕಾಣಿಸಿ ಕೊಂಡಿತು. ಅಷ್ಟರಲ್ಲಿ ನಾನು5ಕಾವ್ಯಗಳನ್ನು ಅಭ್ಯಾಸ ಮಾಡಿದ್ದೆ. ಚಂಪೂ ರಾಮಾಯಣ, ಶಾಕುಂತಲ, ಉತ್ತರ ರಾಮಚರಿತೆ, ಚಂದ್ರಾಲೋಕ. ಪ್ರತಾಪರುದ್ರೀಯ, ಕುವಲಯಾನಂದ ಮುಂತಾದ ಸಾಹಿತ್ಯಶಕ್ತಿಯನ್ನು ತುಂಬಿಕೊಡುವ ಕೃತಿಗಳ ಪಾಠವೂ ಆಗಿತ್ತು. ಸಂಸ್ಕೃತದಲ್ಲಿ ಸರಳವಾಗಿ ಸಂಭಾಷಿಸುವುದು, ಗದ್ಯವಾಗಲೀ ಪದ್ಯವಾಗಲೀ, ನಿಂತಮಟ್ಟಿಗೇ ರಚಿಸುವುದು ಇವುಗಳಲ್ಲಿ ನಿಪುಣನೆನ್ನಿಸಿಕೊಂಡಿದ್ದೆ.

14ನೇ ವಯಸ್ಸಿನಿಂದ 18ವರ್ಷ ತುಂಬುವ ತನಕ ಬೊಬ್ಬಿಲಿ ಸಂಸ್ಥಾನದ ಪಾಠಶಾಲೆಯಲ್ಲಿಯೂ, ನಮ್ಮ ಗ್ರಾಮದಿಂದ 25ಮೈಲಿ ಅಂತರದಲ್ಲಿರುವ ಲೋಕೀಶ ಅಗ್ರಹಾರದಲ್ಲಿ (ಈ ಗ್ರಾಮದಲ್ಲಿಯೇ ಗಣಪತಿ ಶಾಸ್ತ್ರಿಗಳ ತಾಯಿಯ ವಂಶದವರು ವಾಸವಾಗಿದ್ದುದು; ಇವರು ಹುಟ್ಟಿದ್ದು ಈ ಗ್ರಾಮದಲ್ಲಿಯೇ.) ಬೇರೆ ಬೇರೆ ಆಚಾರ್ಯರ ಬಳಿಯಲ್ಲಿಯೂ ವ್ಯಾಕರಣ ಗ್ರಂಥ ಸಿದ್ಧಾಂತ ಕೌಮುದಿಯನ್ನು ಅಭ್ಯಾಸ ಮಾಡಿದೆ. ಈ ಕಾಲದಲ್ಲಿ ಮಧ್ಯೆ ಮಧ್ಯೆ ಅನೇಕ ಅಡಚಣೆಗಳು, ವಾರದಮನೆಯ ಊಟ ಮುಂತಾದ ಕಷ್ಟಗಳನ್ನೆಲ್ಲಾ ಅನುಭವಿಸಿದ್ದಾಯಿತು. ವ್ಯಾಕರಣ-ಅಲಂಕಾರ ಶಾಸ್ತ್ರಗಳ ಅಧ್ಯಯನದ ಜೊತೆಗೇ ರಾಮಾಯಣ-ಮಹಾಭಾರತಗಳನ್ನು ಸಾವಧಾನದಿಂದ ಓದಿ ಮನನ ಮಾಡಿಕೊಂಡೆ. ಮಹಾಭಾರತವನ್ನಂತೂ ಅನೇಕ ಸಲ ಪುನರಾಲೋಕನೆ ಮಾಡಿದೆ.

ಪ್ರಕರಣ 3
– ತಪಸ್ಸಿನ ಕಡೆಗೆ ಸೆಳೆತ –

"ಮಹೇಶ್ವರಮನಾರಾಧ್ಯ ನ ಸಂಶೀಪ್ಸಿತ ಸಿದ್ಧಯಃ" (ಕಥಾಸರಿತ್ಸಾಗರಂ
(ಈಶ್ವರನನ್ನು ಪೂಜಿಸದೆ ಇಷ್ಟಾರ್ಥ ಸಿದ್ಧಿ ಸಲಾರದು)
"ಸ್ವಯಮೇವ ಹಿ ವಾತೋಽಗ್ನೇಃ ಸಾರಥ್ಯಂ ಪ್ರತಿಪದ್ಯತೆ" (ರಘು ವಂಶಂ)
(10-40)

ವಾಯುವು (ಗಾಳಿ) ತಾನಾಗಿಯೇ (ಬೆಂಕಿ) ಅಗ್ನಿಯ ಸಾರಥ್ಯ ವಹಿಸುತ್ತಾನೆ)

ಇಲ್ಲಿ ಇನ್ನೂ ಒಂದಿಷ್ಟು ಹೇಳುವುದಿದೆ. ನನಗೆ ಸ್ಪಷ್ಟ ಅರಿವಿಲ್ಲದಂತೆಯೇ ನನ್ನ ಜನ್ಮಕ್ಕೆ ಅಂಟಿಕೊಂಡು ಬಂದ ಯಾವುದೋ ಒಂದು ಆಂತರಿಕ ಆಕಾಂಕ್ಷೆ ನನ್ನ 10ನೇ ವಯಸ್ಸಿನಲ್ಲಿ ಸ್ವಲ್ಪ ಮಟ್ಟಿಗೆ ವ್ಯಕ್ತವಾಗಿ ಕಾಣಿಸಿಕೊಳ್ಳಲಾರಂಭಿಸಿತು.

ಪ್ರಾಚೀನ ಋಷಿ-ಮುನಿಗಳಂತೆ ಮಂತ್ರಸಾಧನೆ-ತಪಸ್ಸುಗಳಿಂದ ಈಶ್ವರಾನುಗ್ರಹ ಪಡೆದು ವಿಶೇಷ ಜ್ಞಾನದಿಂದ ಉಜ್ವಲವಾದ ಶಕ್ತಿಯನ್ನು ಸಂಪಾದಿಸಿ ಕೊಳ್ಳಬೇಕೆಂದು ನನ್ನ ಅಂತರಂಗ ಹಾತೊರೆಯಲಾರಂಭಿಸಿತು. ವಯಸ್ಸು ಆದಂತೆ ನನ್ನ ಈ ಹಂಬಲ ಮತ್ತಷ್ಟು ಹೆಚ್ಚುತ್ತ ಹೋಯಿತು. ರಾಮಾಯಣ-ಮಹಾಭಾರತಗಳ ಅಭ್ಯಾಸದಿಂದ ನನ್ನ ಈ ಒಳಗುದಿ ಇನ್ನಷ್ಟು ಜಾಸ್ತಿಯಾಯಿತು. ಹತ್ತಿಕ್ಕಲು ಸಾಧ್ಯವಾಗದಷ್ಟು ಮಟ್ಟಿಗೆ ಅದು ನನ್ನ ಬದುಕಿನ ಉಸಿರೇ ಆಗಿಬಿಟ್ಟಿತು. ಪುರಾಣ-ಮಹಾ ಪುರುಷರ ಜೀವನ ಚರಿತ್ರೆಗಳ ಅವಲೋಕನ, ಸತ್ಕಥಾ ಪ್ರಸಂಗ, ಧ್ಯಾನಗಳಿಂದ ನನ್ನ ಈ ತಪೋವ್ಯಸನ ಧೃಢವಾಯಿತು.

ತಂದೆಯವರಂತೂ ನನ್ನ ಈ ಹಂಬಲಕ್ಕೆ ಉತ್ತೇಜನ ನೀಡಿದರು. ಅವರು ಶ್ರೀ ವಿದ್ಯಾ ಉಪಾಸಕರು; ಶುದ್ಧ ಪಂಚಾಕ್ಷರೀಮಂತ್ರವನ್ನು ನಿತ್ಯವೂ ಜಪಿಸುತ್ತಿದ್ದವರು; ಅನೇಕ ಮಹಾ ಮಂತ್ರಗಳ ಪುರಶ್ಚರಣೆಯುಳ್ಳವರು; ಮಂತ್ರ ಸಮೂಹವೇ ಮೈತಳೆದು ಬಂದಂತೆ ಇದ್ದ ಅವರು 13ನೇ ವಯಸ್ಸಿನಲ್ಲಿಯೇ ನನಗೆ ಮಹಾಗಣಪತಿ ಮಂತ್ರೋಪದೇಶ-ಶ್ರೀ ವಿದ್ಯಾ ಉಪಾಸನೆಯ ದೀಕ್ಷೆಗಳನ್ನು ನೀಡಿದರು. ಬೇರೆ ಬೇರೆ ಮಹಾ ಮಂತ್ರಗಳ ಉಪದೇಶ ಕೂಡಾ ನಮ್ಮ ತಂದೆಯವರಿಂದ ನನಗೆ ದೊರೆಯಿತು. ಪಂಚಾಕ್ಷರೀ-ಮೇಧಾ ದಕ್ಷಿಣಾಮೂರ್ತಿ-ನಾರಾಯಣಅಷ್ಟಾಕ್ಷರೀ-ಸೌರಅಷ್ಟಾಕ್ಷರೀ-ಚಂಡೀನವಾಕ್ಷರೀ-ಬಾಲಾ-ವಾರಾಹೀ-ಮಾತಂಗಿ ಭುವನೇಶ್ವರೀ-ಷೋಡಶೀ ಮುಂತಾದ ಮಂತ್ರಗಳ ಸಾಧನೆಯಿಂದ ನನ್ನ ಹೃದಯದಲ್ಲಿ ಹುದುಗಿದ್ದ ತಪೋಭಿಲಾಷೆಯ ಅಗ್ನಿ ಉಜ್ವಲಗೊಳ್ಳುತ್ತ ಹೋಯಿತು. ತಪಸ್ಸಿಗೆ ತಕ್ಕುದಾದ ಸ್ಥಳವನ್ನು ಆಯ್ದುಕೊಂಡು ಸಾಧನೆಯಲ್ಲಿ ತೊಡಗಲು ಸೂಕ್ತ ಸಮಯದ ನಿರೀಕ್ಷಣೆಯಲ್ಲಿದ್ದೆ. ದೈವೀ ಪ್ರೇರಣೆಯಿಂದ ಉಂಟಾದ ನನ್ನ ಈ ಉತ್ತಮ ಉದ್ದೇಶ ಸಾಧನೆಗೆ ತಕ್ಕ ವಯಸ್ಸು-ಸನ್ನಿವೇಶಗಳು ಸನ್ನಿಹಿತವಾದವು.

ನನಗೆ 18 ವರ್ಷ ತುಂಬಿ ನನ್ನ ಬಾಳಸಂಗಾತಿಯೂ ದೊಡ್ಡವಳಾದುದರಿಂದ ನಿಷೇಕಕಾರ್ಯ ನೆರವೇರಿ ಕೆಲವು ದಿನಗಳ ನಂತರ ಅವಳು ತವರು ಮನೆಗೆ ಹೊರಟು ಹೋದಳು. ಪರಮೇಶ್ವರನ ಪ್ರಸಾದ ಸಿದ್ಧಿಗಾಗಿ ತಪಸ್ಸು ಆಚರಿಸಲು ಇದೇ ಸರಿಯಾದ ಅವಕಾಶವೆಂದು ನಿರ್ಧರಿಸಿದೆ. ಸ್ವಗ್ರಾಮವನ್ನು ಬಿಟ್ಟು ದೂರದ ಸೂಕ್ತ ಸ್ಥಳಕ್ಕೆ ಹೋಗಿ ತಪಸ್ಸು ನಡೆಸುವ ನನ್ನ ಯೋಜನೆಯನ್ನು ಅಣ್ಣ ಭೀಮಶಾಸ್ತ್ರಿ ಮತ್ತು ಆತ್ಮೀಯ ಗೆಳೆಯ ವೆಂಕಟೇಶ ಇವರಿಗೆ ತಿಳಿಸಿದೆ. ಇಬ್ಬರೂ ನನ್ನ ಅಭಿಪ್ರಾಯವನ್ನು ಬಹುಮಟ್ಟಿಗೆ ಒಪ್ಪಿ ತಾವೂ ನನ್ನೊಡನೆ

ಬರಲು ಸಿದ್ಧರಾದರು. ಮನೆಯ ಹಿರಿಯರಿಗಾಗಲೀ, ಗ್ರಾಮದ ಬೇರೆಯವರಿಗಾಗಲೀ ಸ್ವಲ್ಪವೂ ತಿಳಿಯದಂತೆ ಎಚ್ಚರಿಕೆವಹಿಸಿ ಗುಟ್ಟಾಗಿ ಗ್ರಾಮವನ್ನು ಬಿಟ್ಟು ಹೊರಟೆವು.

ಗೋದಾವರಿಯನ್ನು ಸೇರುವ ಉದ್ದೇಶವಿಟ್ಟುಕೊಂಡು ನಾವು ಮೂವರು ರಾಜ ಮಹೇಂದ್ರಿಗೆ ಬಂದೆವು. ಅಷ್ಟರಲ್ಲಿಯೇ ಅಣ್ಣ ಭೀಮಶಾಸ್ತ್ರಿಯ ಮನೋ ನಿರ್ಧಾರ ಸಡಿಲ ಗೊಂಡಿತ್ತು, "ಪುರಾತನ ಯುಗಕ್ಕೆ ಹೇಳಿಸಿದ ತಪಸ್ಸೆಲ್ಲಿ ? ಈ ಕಲಿಯುಗದ ಸಾಮಾನ್ಯ ಜನರಾದ ನಾವೆಲ್ಲಿ ? ಈ ಹುಂಬತನದ ಹಂಬಲ ಕೈ ಬಿಟ್ಟು ಹಳ್ಳಿಗೆ ಹಿಂತಿರುಗೋಣ" ಎಂಬ ಆತನ ಸಲಹೆಗೆ ನಾವು ಕಿವಿಗೊಡಲಿಲ್ಲ. ಕಷ್ಟ ಸಾಧ್ಯವಾದ ತಪಸ್ಸಿಗೆ ಹೆದರಿದ ಆತ ಊರಿಗೆ ವಾಪಸು ಹೊರಟು ಹೋದ.

ಜನ ಜಂಗುಳಿಯಿಂದ ಕೂಡಿದ ರಾಜ ಮಹೇಂದ್ರಿ ನಮ್ಮ ಕಾರ್ಯ ಸಾಧನೆಗೆ ತಕ್ಕ ಸ್ಥಳವಾಗಿರಲಿಲ್ಲ. ಏಕಾಂತದಲ್ಲಿ ತಪಸ್ಸು ನಡೆಸಲು "ಕೋನಸೀಮ" ಎಂಬ ಸ್ಥಳವನ್ನು ನಾನೂ ಗೆಳೆಯ ವೆಂಕಟೇಶನೂ ಆಯ್ಕೆ ಮಾಡಿಕೊಂಡು ಅತ್ತ ಕಡೆಗೆ ಹೊರಟೆವು.

ಗೋದಾವರೀ ನದಿಯ ಏಳು ಶಾಖೆಗಳಲ್ಲಿ ಕೌಶಿಕೀ ಎಂದು ಪ್ರಸಿದ್ಧವಾದ ಪುಣ್ಯವಾಹಿನಿಯ ದಡದಲ್ಲಿ "ಪೇರಮೂ" ಅಗ್ರಹಾರಕ್ಕೆ ಬಂದು ಅಲ್ಲಿ 2ತಿಂಗಳು ಉಳಿದೆವು. ನಾನು ಮಹಾಗಣಪತಿ ಮಂತ್ರ- ಶಿವಪಂಚಾಕ್ಷರಿಗಳನ್ನು ನಿಷ್ಠೆಯಿಂದ ಜಪಿಸುತ್ತಿದ್ದೆ. ಆದರೆ ನನ್ನ ಸಾಧನೆಯನ್ನು ಉತ್ತೇಜಿಸುವಂತಹದೇನೂ ಅನುಭವಕ್ಕೆ ಬರಲಿಲ್ಲ. ಈ ನಡುವೆ ನನ್ನ ಸ್ನೇಹಿತ ವೆಂಕಟೇಶನು ನಮ್ಮ ಗ್ರಾಮಕ್ಕೆ ಪತ್ರ ಬರೆದು ನಮ್ಮ ವಿಳಾಸವನ್ನು ತಿಳಿಸಿ ಬಿಟ್ಟಿದ್ದ. ಇದರ ಪರಿಣಾಮ ;- ನಾವು ಕೂಡಲೇ ಊರಿಗೆ ಹಿಂತಿರುಗುವಂತೆ ಹಿರಿಯರಿಂದ ಆದೇಶರೂಪವಾದ ಪತ್ರ ನಮಗೆ ಬಂದಿತು. ಸರಿ. ! ಆ ಸ್ಥಳವನ್ನು ಬಿಟ್ಟು "ಸಿಕಟಾ" ರೈಲು ನಿಲ್ದಾಣಕ್ಕೆ ಬಂದು ಅಲ್ಲಿಂದ ನಮ್ಮ ಗ್ರಾಮದ ಕಡೆಗೆ ಪ್ರಯಾಣ ಮಾಡಿದೆವು.

ರೈಲಿನಿಂದಿಳಿದು ಪಾದಚಾರಿಗಳಾಗಿ ಪಯಣಿಸುತ್ತ ಕೊನೆಗೊಮ್ಮೆ ನಮ್ಮ ಗ್ರಾಮದ ಸಮೀಪಕ್ಕೆ ಬಂದೆವು. ಧೈರ್ಯ ಶಾಲಿಯೂ ಗಟ್ಟಿಮನಸ್ಸಿನವನೂ ಆದ ನಾನು ಮನೆಗೆ ಮರಳಿ ಹೋಗಲು ಇಚ್ಛಿಸದೆ ವೆಂಕಟೇಶನನ್ನು ಗ್ರಾಮಕ್ಕೆ

ಕಳಿಸಿ ನಾನು ಬೇರೆ ದಾರಿಯನ್ನು ಹಿಡಿದು ಹೊರಟೆ. ನನ್ನ ಬಳಿ ಹಣವೇನೂ ಇರಲಿಲ್ಲ. ಆದರೂ ನಾನು ಗುರಿಸಾಧನೆಯ ಮಾರ್ಗದಿಂದ ಹಿಂದೆ ಸರಿಯಲಿಲ್ಲ. ಪುಣ್ಯಕ್ಷೇತ್ರ ಕಾಶಿಗೆ ಹೋಗಬೇಕೆಂಬುದು ನನ್ನ ಹಂಬಲವಾಗಿತ್ತು.

ಪ್ರಕರಣ-4

ನಂದಿ ಗ್ರಾಮ - ಅಭ್ಯುದಯ

ಶನೈರ್ವಿದ್ಯಾಂ ಶನೈರರ್ಥಾನಾರೋಹೇತ್ಪರ್ವತಂ ಶನೈ : ।
ಶನೈರಧ್ವಸು ವರ್ತೇತ ಯೋಜನಾ ನ್ನಪರಂ ವ್ರಜೇತ್ ॥

(ವಿದ್ಯೆ-ಹಣ ಸಂಪಾದಿಸುವಾಗ, ಕಡಿದಾದ ಬೆಟ್ಟವೇರುವಾಗ ಸಾವಧಾನ ದಿಂದಲೇ ಮುಂದುವರಿಯಬೇಕು. ದೂರದ ದಾರಿಯನ್ನು ಕೂಡ ಸಾವಧಾನ ವಾಗಿಯೇ ಕ್ರಮಿಸಬೇಕು. ದಿನಕ್ಕೆ 1 ಯೋಜನಕ್ಕೂ ಹೆಚ್ಚಿಗೆ ನಡೆಯ ಕೂಡದು.)

ಅಗಚ್ಛನ್ ವೈನತೇಯೋಽಪಿ ಪದಮೇಕಂ ನ ಗಚ್ಛತಿ ॥
(ವೇಗಕ್ಕೆ ಹೆಸರಾದ ಗರುಡನೇ ಆದರೂ ಹೊರಡದೆ ಉಳಿದರೆ ಒಂದು ಹೆಜ್ಜೆಯನ್ನೂ ಕ್ರಮಿಸಲಾರ.)

ತತ ಃ ಕೋಕವಧೂಬಂಧುರ್ಬಂಧೂಕ ಕುಸುಮಪ್ರಿಯ ; ।
ಉದಯಾದ್ರಿಶಿರೋರತ್ನಮುದ್ಯಯೌ ತೇಜಸಾಂ ನಿಧಿ ಃ॥)ಶಾರ್ಙ್ಗಧರ ಪದ್ಧತಿ

(ನಂತರ ಕೋಗಿಲೆಯೆಂಬ ಪಕ್ಷಿ ವಧುವಿನ ನೆಂಟನೂ, ದಾಸವಾಳ ಕುಸುಮ ಪ್ರಿಯನೂ ಆದ ಸೂರ್ಯಭಗವಾನನು ಉದಯಾಚಲ ಶಿಖರ ವೇರಿದನು.)

ಕಾರ್ತಿಕ ಮಾಸದ ಶುಕ್ಲ ದ್ವಾದಶಿ. ಕ್ಷೀರಾಬ್ಧಿ ಹಬ್ಬದ ದಿನ, ನಾನು ಆಂದು ದೂರದ ರಾಮಚಂದ್ರಪುರ ಅಗ್ರಹಾರಕ್ಕೆ ತಲುಪಿದೆ. ಅಲ್ಲಿ ಗೃಹಸ್ಥ ರೊಬ್ಬರ ಮನೆಯಲ್ಲಿ ಮಧ್ಯಾನ್ಹದ ಭೋಜನದ ಜೊತೆಗೆ 2 ಆಣೆ (ಈಗಿನ 10ಪೈಸೆ) ದಕ್ಷಿಣೆಯೂ ದೊರೆಯಿತು. ಬರಿಗೈಯ್ಯಲ್ಲಿ ಕಾಶೀಯಾತ್ರೆಯ ಸಾಹಸ ಕೈಗೊಂಡಿದ್ದ ನನಗೆ "ಕ್ಷಣಶ ಃ ಪಣಶಶ್ಚೈವ ವಿದ್ಯಾಮರ್ಥಂ ಚ ಸಾಧಯೇತ್" "ಪ್ರತಿ ಕ್ಷಣದಲ್ಲಿಯೂ ಅಭ್ಯಾಸ ಮಾಡುತ್ತ ಮಾಡುತ್ತ ವಿದ್ಯೆಯನ್ನೂ ಒಂದೊಂದು

ಕಾಸನ್ನು ಕೂಡಿಸುತ್ತ ಹಣವನ್ನೂ ಸಾಧಿಸಬೇಕು" ಎಂಬ ಉಪಯುಕ್ತ ನೀತಿ ನೆನಪಿಗೆ ಬಂದಿತು. (ಈ ಶ್ಲೋಕದ ಉತ್ತರಾರ್ಧ :- ಕ್ಷಣೇನಷ್ಟೇ ಕುತೋ ವಿದ್ಯಾ ಕಣೇ ನಷ್ಟೇ ಕುತೋ ಧನಂ"ಪ್ರತಿಯೊಂದು ಕ್ಷಣ-ಪ್ರತಿಯೊಂದು ಕಾಳು ಕೈತಪ್ಪಿಹೋಗುತ್ತಿದ್ದರೆ ಅವುಗಳ ಸಂಗ್ರಹ ಹೇಗೆ ಸಾಧ್ಯವಾದೀತು ?") ಸ್ವಲ್ಪವೇ ಆಗಿದ್ದರೂ ದಕ್ಷಿಣೆಯಾಗಿ ದೊರೆತ ಈ ಪುಡಿಗಾಸನ್ನೇ ಮಹತ್ತರವಾಗಿ ಪರಿಗಣಿಸಿದೆ.

ಅದರಲ್ಲಿ ಸ್ವಲ್ಪ ಖರ್ಚುಮಾಡಿ ಸಮೀಪದ "ಧೂಸಿ" ಎಂಬ ಸ್ಥಳವನ್ನು ತಲುಪಿದೆ. ಅಲ್ಲಿ ಸಾಧು-ಸಂತರು-ಯಾತ್ರಾರ್ಥಿಗಳ ಬಗೆಗೆ ಅಭಿಮಾನವುಳ್ಳ ಶ್ರೀಮಂತರೊಬ್ಬರು ಇದ್ದರು. ಅವರ ಬಳಿಗೆ ಹೋದ ನಾನು ನನ್ನ ನಿಜವಾದ ಗುರಿಯನ್ನು ಪ್ರಕಟಿಸುವ ಇಚ್ಛೆಯಿಲ್ಲದೆ "ವಿದ್ಯಾರ್ಜನೆಗಾಗಿ ಕಾಶೀ ಕ್ಷೇತ್ರಕ್ಕೆ ಹೊರಟಿದ್ದೇನೆ, ಪ್ರಯಾಣಕ್ಕೆ ಸಹಾಯ ಮಾಡಿ" ಎಂದು ಕೇಳಿಕೊಂಡೆ. ಕ್ಷೇತ್ರಯಾತ್ರಾರ್ಥಿಗಳನ್ನು ಶ್ರದ್ಧೆ-ಆದರಗಳಿಂದ ಕಾಣುತ್ತಿದ್ದ ಆ ಶ್ರೀಮಂತರು "ಆಂಧ್ರ ಮಹಾಭಾರತ" ಪಾರಾಯಣ ಪ್ರವಚನ ನಡೆಸುವಂತೆ ಕೇಳಿಕೊಂಡರು. ಕಾಲ ಹರಣ ಮಾಡಬಾರದೆಂದು ನಿರ್ಧರಿಸಿ ಭಾರತ ವಾಚನ ಪ್ರಾರಂಭಿಸಿ ಹತ್ತು ದಿನಗಳಲ್ಲಿಯೇ ಶಾಂತಿ ಪರ್ವದವರೆಗೆ ಮುಗಿಸಿದೆ. ಮುಂದೆ ಪಟ್ಟಾಭಿಷೇಕದ ಪ್ರಕರಣವನ್ನೂ ಪೂರ್ತಿಮಾಡಿದರೆ ಅದರ ಮಂಗಳ ಕಾರ್ಯ ಸಮಾರಂಭದ ಖರ್ಚು ಬರುವುದರಿಂದ ಶಾಂತಿ ಪರ್ವ ಮುಗಿಸಿದ್ದೇ ಸಾಕೆಂದು ಆ ಶ್ರೀಮಂತರು ಹೇಳಿ ನನಗೆ 6/- ರೂಗಳನ್ನು ನೀಡಿ ಸತ್ಕರಿಸಿ ಬೀಳ್ಕೊಟ್ಟರು.

ಅಲ್ಲಿಂದ ಹೊರಟ ನಾನು ಸಂಜೆಯ ವೇಳೆಗೆ ತೆಕ್ಕಲಿರಾಮನಾಥ ಪುರಕ್ಕೆ ತಲುಪಿ ಸಂಪನ್ನ ಗೃಹಸ್ಥರೊಬ್ಬರ ಮನೆಗೆ ಹೋದೆ. ರಾತ್ರಿ ಊಟವಾದ ನಂತರ ಹೊರಚಾವಡಿಯಲ್ಲಿ ಕುಳಿತಿದ್ದೆ. ಅಲ್ಲಿ ಬೇರೆ ಕೆಲವರು ಯಾತ್ರಾರ್ಥಿಗಳೂ ಸೇರಿದ್ದರು. ಅವರ ಪೈಕೀ ತಮಿಳುನಾಡಿನ ರಾಮಸ್ವಾಮಿಯವರು ಮತ್ತು ಕೃಷ್ಣಾತೀರವಾಸಿಗಳಾದ ಆಂಧ್ರ ಬ್ರಾಹ್ಮಣರೊಬ್ಬರು ಹೀಗೆ ಇಬ್ಬರು ಕಾಶೀಯಾತ್ರಿಕರೊಡನೆ ಪರಿಚಯ ಉಂಟಾಯಿತು. ಬಾಲ್ಯದಿಂದಲೇ ಚದುರಂಗ ಪಗಡೆ ಹಾಸು-ಗುರಿಹೊಡೆಯುವುದು-ದಶಾವತಾರ ಈ ಬಗೆಯ ಆಟಗಳಲ್ಲಿ ಕೌಶಲ್ಯ ಪಡೆದವನು ನಾನು. ಪ್ರಸಂಗ ವಶಾತ್ ನಮ್ಮ ಸಂಭಾಷಣೆಯಲ್ಲಿ ಆಟಗಳ ವಿಷಯ ಪ್ರಸ್ತಾಪಕ್ಕೆ ಬಂದು ಆಟದ ಕಡೆಗೆ ನಮ್ಮ ಮನಸ್ಸು ಹೊರಳಿತು. ಇಸ್ಪೀಟು ಎಲೆಗಳ ಆಟವನ್ನು ಪ್ರಾರಂಭಿಸಿ ಪರಸ್ಪರ ಸಂಭಾಷಣೆಯ ಸಂಗಡ ಆಟವೂ ಮುಂದುವರಿಯಿತು.

ನಮ್ಮ ಮಾತು-ಕತೆ, ಆಟಗಳು ನಡೆಯುತ್ತಿದ್ದಾಗಲೇ ಸಮೀಪದಲ್ಲಿ ಕುಳಿತ್ತಿದ್ದ ಯಾತ್ರಿಕರ ಇನ್ನೊಂದು ಗುಂಪು ಜ್ಯೋತಿಷ್ಯವಿಷಯ-ಜಾತಕ ಫಲ ಗಳ ಬಗೆಗೆ ಚರ್ಚೆಯಲ್ಲಿ ತೊಡಗಿತ್ತು. ಆ ಮಾತುಗಳ ಕಡೆಗೂ ನನ್ನ ಲಕ್ಷ್ಯ ವಿತ್ತು. ಅವರ ಪೈಕೀ ವೃದ್ಧರೊಬ್ಬರು ಜಾತಕದ ಫಲವನ್ನು ಅಸಮರ್ಪಕ ವಾಗಿ ವಿವರಿಸುತ್ತಿದ್ದುದು ಜ್ಯೋತಿಷ್ಯವನ್ನು ಬಲ್ಲ ನನ್ನ ಕಿವಿಗೆ ಬಿದ್ದಿತು. ನಾನು ಆಟ ಮುಂದುವರಿಸುತ್ತಲೇ ಹೇಳಿದೆ:- ಈ ವೃದ್ಧ ಮಹನೀಯರಿಗೆ ಜ್ಯೋತಿಷ್ಯದ ವಿಷಯವಾಗಿ ತಿಳಿವಳಿಕೆ ಇಲ್ಲ ಎಂಬುದು ಸ್ಪಷ್ಟ"

ನನ್ನ ಈ ಆಕ್ಷೇಪಣೆಯನ್ನು ಕೇಳಿ ಚಕಿತರಾದ ಅವರು" ಏನಪ್ಪಾ ! ಜಾತಕ ಫಲ ಹೇಳುವುದು ನಿನಗೆ ಗೊತ್ತಿದೆಯಾ ? ಎಂದು ಕೇಳಿದರು.

ನಾನು ಉತ್ತರಿಸಿದೆ :- "ಚೆನ್ನಾಗಿಯೇ ಗೊತ್ತಿದೆ. ಬೇಕಿದ್ದರೆ ಯಾವು ದಾದರೂ ಜಾತಕ ಕೊಟ್ಟು ನೋಡಿ"

ಅದರಂತೆ ಅವರು ಕೊಟ್ಟ ಜಾತಕಗಳ ಫಲಗಳನ್ನು ವಿವರಿಸಿದೆ. ಜಾತಕ ಫಲನಿರೂಪಣೆಯಲ್ಲಿ ನನಗಿರುವ ಕರಾರುವಾಕ್ಕಾದ ಪರಿಶ್ರಮವನ್ನು ಮನಗಂಡ ಆ ವೃದ್ಧ ಮಹಾಶಯರು ನನ್ನ ಬಗ್ಗೆ ಅಭಿಮಾನ ತಳೆದು ನನ್ನ ಪೂರ್ವೋತ್ತರ ಗಳನ್ನು ವಿಚಾರಿಸಿದರು. ನನ್ನ ಯಾತ್ರೆ ಮುಂದುವರಿಸಲು ಇವರಿಂದ ಸಹಕಾರ ದೊರೆಯುವ ಲಕ್ಷಣಗಳನ್ನು ಗ್ರಹಿಸಿದ ನಾನು ನನ್ನ ವಿಷಯ ಅವರಿಗೆ ತಿಳಿ ಸಿದೆ. ಮರುದಿನ ಅವರು ನನ್ನನ್ನು ಸಮೀಪದ ನಂದಿಗ್ರಾಮಕ್ಕೆ ಕರೆದೊಯ್ದರು.

ಹಿಂದಿನ ರಾತ್ರಿ ನನ್ನೊಡನೆ ಆಟದಲ್ಲಿ ಪಾಲ್ಗೊಂಡಿದ್ದ ಆ ಇಬ್ಬರು ಯಾತ್ರಾರ್ಥಿಗಳಿಗೆ ತಪಸ್ಸಿನಲ್ಲಿ ಆಸಕ್ತಿ ಹುಟ್ಟುವಂತೆ ಮಾಡಿದ್ದೆ. ಅವರು ನನ್ನ ಮೇಲಿನ ಅಭಿಮಾನದಿಂದ ಒಪ್ಪಿಗೆ ಸೂಚಿಸಿ ಈಗ ನನ್ನೊಡನೆ ನಂದಿಗ್ರಾಮಕ್ಕೆ ಬಂದರು. ಅಲ್ಲಿಯ ಧರ್ಮಶಾಲೆಯಲ್ಲಿ ಉಳಿದು ಕೊಂಡ ನನಗೆ ಅಲ್ಲಿ ಕೆಲವು ದಿನಗಳಿಂದ ಇದ್ದ ಘಾರಣಾಸಿ ಅಚ್ಯುತರಾಮಶಾಸ್ತ್ರಿಗಳೆಂಬ ವಿದ್ವಾಂಸರ ಪರಿ ಚಯವಾಯಿತು. ನನ್ನನ್ನು ಅಲ್ಲಿಗೆ ಕರೆದೊಯ್ದ ವೃದ್ಧರಾಮದಾಸರು ಈ ಅಚ್ಯುತರಾಮಶಾಸ್ತ್ರಿಗಳಿಗೂ, ನಂದಿ ಗ್ರಾಮದ ಶ್ರೀಮಂತ ಜಮೀನ್ದಾರ ಕೃಷ್ಣ ನಾಯಕರಿಗೂ ಪರಿಚಿತರಾಗಿದ್ದು ಆಂಧ್ರ ಭಾಷಾ ಕವಿ ಅಚ್ಯುತರಾಮಶಾಸ್ತ್ರಿಗಳು ಕೂಡಾ ಕೃಷ್ಣ ನಾಯಕರ ಪರಿಚಯವುಳ್ಳವರು. ಅಚ್ಯುತರಾಮಶಾಸ್ತ್ರಿಗಳು ನನ್ನನ್ನು ಕಂಡೊಡನೆಯೇ ಪೂರ್ವ ಪರಿಚಯವಿದ್ದವರಂತೆ ಆದರದಿಂದ ಸ್ವಾಗತಿಸಿ ಸತ್ಕರಿಸಿ

ಸಿದರು, ನನ್ನ ಶಾಸ್ತ್ರ ಪಾಂಡಿತ್ಯ-ಕೌಶಲ್ಯಗಳು ಅವರಿಗೆ ಮೊದಲೇ ತಿಳಿದಿತ್ತೆಂದು ತೋರುತ್ತದೆ. ನಾನು ಅಲ್ಲಿಗೆ ಹೋಗುವ ಮೊದಲು ಅವರಿಗೆ ಆದ ವಿಶೇಷ ಅನುಭವವೊಂದನ್ನು ಅವರು ನನಗೆ ತಿಳಿಸಿದರು :- "ಹಿಂದಿನ ರಾತ್ರಿ ಅವರು ನಿದ್ರಾವಶರಾಗಿದ್ದಾಗ ಶಾಂತಸ್ವಭಾವದ ಪಳಗಿದ ಆನೆಯೊಂದು ಧರ್ಮಶಾಲೆಯನ್ನು ಪ್ರವೇಶಿಸಿ ಅವರ ಮುಂದೆ ನಿಂತಂತೆ ಕನಸು ಬಿದ್ದಿತ್ತು. ಈಗ ಧರ್ಮಶಾಲೆಗೆ ಬಂದಿರುವ ನನ್ನ ಹೆಸರು "ಗಣಪತಿ" ಎಂದಿರುವುದರಿಂದ ಇದು ನನ್ನ ಆಗಮನದ ಮುನ್ಸೂಚನೆ-ಶುಭ ಸಂಕೇತ."

ಅವರ ಸ್ನೇಹಿತ ಕೃಷ್ಣನಾಯಕರು ಭಾರೀ ಜಮೀನಿನ ಒಡೆಯರು. ಕಳಿಂಗಜಾತಿಯ-ಉಪವೀತಧಾರಿಯಾದ ಈ ಶ್ರೀಮಂತರು ತುಂಬಾ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಅವರಿಗೆ ಮೊದಲ ಹೆಂಡತಿಯಲ್ಲಿ ಸಂತಾನವಿರಲಿಲ್ಲ. ಮಕ್ಕಳನ್ನು ಪಡೆಯುವ ಬಯಕೆಯಿಂದ ಸ್ವಲ್ಪ ಮುಂಚೆ ಎರಡನೆ ಮದುವೆ ಮಾಡಿಕೊಂಡಿದ್ದರು. ಈ ವಿಷಯಗಳನ್ನೆಲ್ಲಾ ನನಗೆ ತಿಳಿಸಿದ ಅಚ್ಯುತರಾಮ ಶಾಸ್ತ್ರಿಗಳು ನನ್ನ-ಕೆಲವು ಯೋಗ್ಯತೆಗಳನ್ನು ಆ ಶ್ರೀಮಂತರಿಗೂ ವಿವರಿಸಿದ್ದರು. ಅಸ್ವಸ್ಥರಾಗಿ ಹಾಸಿಗೆ ಹಿಡಿದಿದ್ದ ಅವರು ನನ್ನನ್ನು ಕಾಣುವ ಬಗ್ಗೆ ಕಾತರರಾಗಿದ್ದುದರಿಂದ ನನ್ನನ್ನು ಅವರ ಮನೆಗೆ ಕರೆದೊಯ್ಯುವ ವ್ಯವಸ್ಥೆಯಾಯಿತು,

ಆ ಶ್ರೀಮಂತ ಜಮೀನ್ದಾರರ ಸೌಧದಲ್ಲಿ ನನ್ನ ಸ್ವಾಗತಕ್ಕಾಗಿ ಎಲ್ಲವನ್ನು ಸಿದ್ಧಪಡಿಸಿಕೊಂಡಿದ್ದರು. ಅವರ ಪರಿಜನರು ನನ್ನನ್ನು ಗೌರವ-ಆದರಗಳಿಂದ ಬರಮಾಡಿಕೊಂಡರು. ನನಗಾಗಿ ಸಿದ್ಧಪಡಿಸಿದ್ದ ಉಚಿತ ಆಸನದಲ್ಲಿ ಕುಳಿತುಕೊಂಡೆ. ರೋಗಪೀಡಿತರಾಗಿ ಹಾಸಿಗೆಯಲ್ಲಿ ಮಲಗಿದ್ದ ಕೃಷ್ಣ ನಾಯಕರನ್ನು ಮೊದಲಬಾರಿಗೆ ನೋಡಿದೆ.

ಎರಡನೆಯ ಮದುವೆ ಮಾಡಿಕೊಂಡ ನಂತರ ಕಾಹಿಲೆ ಮಲಗಿದ ಇವರ ರೋಗ, ಬಗೆ ಬಗೆಯ ಚಿಕಿತ್ಸೆಗಳಿಂದಲಾಗಲೀ, ನವಗ್ರಹ ಮಂತ್ರಶಾಂತಿಯಿಂದಾಗಲೀ ವಾಸಿಯಾಗುವ ಬದಲು ಉಲ್ಬಣಗೊಳ್ಳುತ್ತ ಇವರನ್ನು ಸಾವಿನ ಬಳಿಗೆ ತಂದು ನಿಲ್ಲಿಸಿಬಿಟ್ಟಿತ್ತು.

ಮರಣ ಪಾಶದಿಂದ ಬಿಡುಗಡೆ ಹೊಂದಿದಂತೆ-ಪುನಃ ಬಾಲ್ಯವನ್ನು ಪಡೆಯುವ ಆಶೆಯುಳ್ಳವರಂತೆ-ಅವರ ಬದುಕಿನ ಭವಿಷ್ಯ (ಜೀವಂತರಾಗಿ ಉಳಿಯುವಿಕೆ) ನನ್ನ ನಿಯಂತ್ರಣದಲ್ಲಿಯೇ ಇದೆಯೆಂಬಂತೆ-ಅವರು ಮಲಗಿದ್ದಂತೆಯೇ

ಕೈ ಜೋಡಿಸಿ ನನ್ನನ್ನು ನಮಸ್ಕರಿಸಿದರು. ತುಂಬ ನೋವನ್ನು ಅನುಭವಿಸುತ್ತಿದ್ದ ಅವರು ಹತಾಶೆಯಿಂದ ಕೂಡಿದ ಕ್ಷೀಣ ಸ್ವರದಲ್ಲಿ ಅವರ ಭವಿಷ್ಯ ತಿಳಿಸುವಂತೆ ಕೇಳಿಕೊಂಡರು.

ಕೂಡಲೇ ಅವರ ಜನ್ಮಕುಂಡಲಿಯನ್ನು ಪರಿಶೀಲಿಸಿದೆ. ಅವರು ಕಾಹಿಲೆಯಿಂದ; ಗುಣಮುಖರಾಗಿ ಬದುಕಿ ಉಳಿಯುವರೆಂಬುದನ್ನು ಗ್ರಹಸ್ಥಿತಿಗಳ ಮೂಲಕ ತಿಳಿದುಕೊಂಡೆ, ಈಗ ದಿನಗಳನ್ನೆಣಿಸುತ್ತಿದ್ದ ಅವರ ಆಯುರ್ಬಲ ಚೆನ್ನಾಗಿದೆಯೆಂಬುದು ಮನದಟ್ಟಾಯಿತು.

ಅವರಿಗೆ ಹೇಳಿದೆ :– ಈಗ ನಿಮ್ಮನ್ನು ಪ್ರಬಲವಾಗಿ ಕಾಡುತ್ತಿರುವ ಈ ರೋಗಗಳು ಜಾಗ್ರತೆ ಮಾಯವಾಗಿ ನೀವು ಆರೋಗ್ಯವಂತರಾಗುತ್ತೀರಿ. ಅಷ್ಟೇ ಅಲ್ಲ! ನಿಮಗೆ ಒಬ್ಬ ಮಗಳು ಹುಟ್ಟುತ್ತಾಳೆ. ಗಂಡು ಮಗುವೊಂದನ್ನು ನೀವು ಪುತ್ರಕಕ್ಕೆ ಪಡೆಯುತ್ತೀರಿ.

ನನ್ನ ಮಾತುಗಳಿಂದ ಅವರಲ್ಲಿ ಭವಿಷ್ಯದ ಬಗ್ಗೆ ಭರವಸೆಮೂಡಿತು. ಕಾಶೀಯಾತ್ರೆಗೋಸ್ಕರ ನನ್ನ ಮಾತಿಗೆ ಕಟ್ಟುಬಿದ್ದು ಸಂಗಡ ಬಂದಿದ್ದ ಗೆಳೆಯರಿಬ್ಬರಿಗೂ ಕೃಷ್ಣನಾಯಕಕರು ಸಂಭಾವನೆ ನೀಡಿ ಬಿಳ್ಕೊಟ್ಟರು. ನನ್ನನ್ನು ಅಲ್ಲಿಯೇ ಉಳಿಸಿ ಕೊಂಡು ವಿಶೇಷ ಸತ್ಕಾರ ನೀಡಿ ಗೌರವ ಆದರಗಳಿಂದ ನೋಡಿಕೊಂಡರು.

ತೊಂದರೆಗಳ ಸುಳಿಯಲ್ಲಿ ಸಿಕ್ಕಿ ಮುಳುಗಿ ಹೋಗುತ್ತಿದ್ದವನಿಗೆ ಅದರಿಂದ ಪಾರಾಗುವ ಅವಕಾಶ ದೊರೆತಂತೆ ಕೃಷ್ಣನಾಯಕರಿಗೆ ನನ್ನ ವಾಕ್ಯಗಳು ಬದುಕಿನ ಭರವಸೆಯ ಊರುಗೋಲಿನಂತೆ ಪರಿಣಮಿಸಿದವು, ಅವರಿಗೆ ಪೂರ್ಣ ಆರೋಗ್ಯ ಲಭಿಸಲು 3 ತಿಂಗಳು ಬೇಕೆಂದು ನಾನು ಜಾತಕ ಗುಣಿಸಿ ಹೇಳಿದ್ದೆ. ಆ ಅವಧಿಯನ್ನು ನಾನು ಅಲ್ಲಿ ಅವರಿಂದ ಎಲ್ಲ ಅನುಕೂಲಗಳನ್ನು ಪಡೆದು ಸುಖವಾಗಿ ಕಳೆದೆ.

ಕಾಶಿಗೆ ಹೋಗಿಯೇ ತಪಸ್ಸು ನಡೆಸುವ ನನ್ನ ಆಶಯವನ್ನು ಭವಿಷ್ಯದ ಪಾಲಿಗೆ ಬಿಟ್ಟುಕೊಟ್ಟೆ. ದಿನೇ ದಿನೇ ಆರೋಗ್ಯ ಹೊಂದುತ್ತ ಬಂದ ಕೃಷ್ಣನಾಯಕರು ಅವರ ಬಂಧು-ಬಳಗ-ಸ್ನೇಹಿತರು ಇವರೆಲ್ಲರ ಅಭಿಮಾನ-ಆದರ ವಿಶ್ವಾಸಗಳಿಗೆ ಪಾತ್ರನಾಗಿ ನಂದಿ ಗ್ರಾಮದಲ್ಲಿ ಉಳಿದುಕೊಂಡಿದ್ದ ನನಗೆ ಅಲ್ಲಿಯ

ರಸಿಕರ-ವಿದ್ವಜ್ಜನರ ಪರಿಚಯ-ಸ್ನೇಹಗಳು ಲಭಿಸಿವು. ಅವರುಗಳೊಡನೆ ಸಂಭಾಷಣೆ-ಚರ್ಚೆ-ಚದುರಂಗದ ಆಟವೇ ಮೊದಲಾದ ವಿನೋದಗಳು ಹೀಗೆ ದಿನಗಳು ಸಂತೋಷದಿಂದ ಸರಿಯುತ್ತಿದ್ದವು. ನನ್ನ ಪ್ರತಿಭೆ-ಪರಿಣತಿ ಕೌಶಲ್ಯಗಳಲ್ಲಿ ಕೆಲವನ್ನು ಅಲ್ಲಿಯ ಅಭಿಮಾನಿಗಳಿಗೆ ಪರಿಚಯ ಮಾಡಿಕೊಟ್ಟೆ.

ಯಾರಾದರೂ ಹೊಸದಾಗಿ ರಚಿಸಿ ಹೇಳುವ ದೊಡ್ಡ ಶ್ಲೋಕವನ್ನು ಒಮ್ಮೆ ಮಾತ್ರ ಕೇಳಿಸಿಕೊಂಡು ಒಡನೆಯೇ ಅದನ್ನು ಬರೆದು ಕೊಡುತ್ತಿದ್ದೆ. ಮತ್ತೊಮ್ಮೆ ಆ ಪದ್ಯವನ್ನು ನೋಡದೇ ಅದರ ಕೊನೆಯ ಅಕ್ಷರದಿಂದಾರಂಭಿಸಿ ಹಿಂದು ಹಿಂದಕ್ಕೆ ಮೊದಲ ಅಕ್ಷರದವರೆಗೂ ಬರೆದು ಪೂರ್ತಿಮಾಡಿ ಕೊಡುವ ಸಾಮರ್ಥ್ಯ ನನಗಿತ್ತು. ಈಗಲೂ ಅದನ್ನು ಮಾಡಬಲ್ಲೆ. ಯಾವುದಾದರೂ ಪುಸ್ತಕವನ್ನು ತೆರೆದು ಸ್ವಲ್ಪ ಮೇಲಕ್ಕೆ ಹಾರಿಸಿ-ನೆಲಕ್ಕೆ ಬೀಳದಂತೆ ಹಿಡಿದು ಅದೇ ರೀತಿ ಸತತವಾಗಿ ಮೇಲೆ-ಕೆಳಗೆ ತಿರುಗಿಸುತ್ತ ಪುಸ್ತಕ ಕೈಗೆ ಬರುವಾಗ ಪ್ರತಿಸಲವೂ ಕಾಣುವ ಪುಟದ ಎರಡೂ ಮಗ್ಗುಲುಗಳನ್ನು ಅಡೆತಡೆಯಿಲ್ಲದೆ ಕ್ರಮವಾಗಿ ಓದಿ ಹೇಳಬಲ್ಲವನಾಗಿದ್ದೆ.

ಹೀಗೆ ವಿವಿಧ ಕೌಶಲ್ಯಗಳನ್ನು ಪ್ರದರ್ಶಿಸುತ್ತ ನನ್ನ ಪ್ರಜ್ಞಾಶಕ್ತಿ ಮತ್ತಷ್ಟು ಪ್ರಕಾಶಗೊಳ್ಳುತ್ತ ಹೋಯಿತು. ಮಾತಿನ ಇಂಪು-ಕಂಪು-ಚಮತ್ಕಾರ ಅಭಿವೃದ್ಧಿಗೊಂಡಿತು. ಒಮ್ಮೆ ಕೇಳಿದ್ದನ್ನು ಸ್ಥಿರವಾಗಿ ನೆನಪಿಟ್ಟುಕೊಂಡು ಬೇಕೆಂದಾಗ ಹೇಳಬಲ್ಲ ಸಾಮರ್ಥ್ಯ ಮತ್ತಷ್ಟು ಬೆಳೆಯಿತು.

ಹೀಗೆಯೇ ಮೂರು ತಿಂಗಳು ಕಳೆಯಿತೆನ್ನುವಾಗ ಕೃಷ್ಣ ನಾಯಕರು ಸಂಪೂರ್ಣ ಚೇತರಿಸಿ ಕೊಂಡರು. ನನ್ನ ಹಿತಚಿಂತಕರಾಗಿ ಅವರು ನನ್ನ ಬಗ್ಗೆ ಹೀಗೆ ಯೋಚಿಸಿಕೊಂಡರು :— "ಇನ್ನೂ ಯೌವನಕ್ಕೆ ಕಾಲಿಡುತ್ತಿರುವ ಈತ (ನಾನು) ಒಳ್ಳೆಯ ಬುದ್ಧಿ ಪಾಟವ ಹೊಂದಿದ್ದು ಉತ್ತಮ ಸಾಧಕನಾಗಿದ್ದಾನೆ. ಇನ್ನೂ ಹೆಚ್ಚು ಪ್ರವರ್ಧಮಾನಕ್ಕೆ ಬರಬೇಕಾದ ಇವನು ಈಗಲೇ ಕಾಶೀಯಾತ್ರೆಯಂತಹ ಶ್ರಮಸಾಧ್ಯ ವಿಷಯಗಳಲ್ಲಿ ಪ್ರವೃತ್ತನಾಗುವುದು ಸರಿಯಲ್ಲ". ತಮ್ಮ ಈ ನಿರ್ಧಾರವನ್ನು ನನ್ನ ತಂದೆಯವರಿಗೆ ಬರೆದು ತಿಳಿಸಿ ನಂದಿಗ್ರಾಮಕ್ಕೆ ಬರಮಾಡಿ ಕೊಂಡರು.

ನನ್ನ ತಂದೆಯವರು ನನ್ನ ತಪಸ್ಸಿಗೆ ತಾನೇ ಅವಕಾಶ ಮಾಡಿ ಕೊಡುವವರಾಗಿದ್ದರೂ ಈಗ್ಗೆ ಸ್ವಗ್ರಾಮಕ್ಕೆ ಹಿಂತಿರುಗಬೇಕೆಂದೂ ನನಗೆ ಸೂಚನೆ ನೀಡಿ

ದರು. ನಾನಾಗಿಯೇ ಊರಿಗೆ ಹಿಂದಿರುಗಿ ಹೋಗುವ ವಿಷಯದಲ್ಲಿ ಕೃಷ್ಣ ನಾಯಕರಿಗೆ ಸಂಶಯವಿತ್ತು. ಆದ್ದರಿಂದಲೇ ನನ್ನ ತಂದೆಯವರನ್ನು ಬರಮಾಡಿ ಕೊಂಡು ಅವರಿಗೆ ಆ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದರು.

ತಂದೆ-ಮಕ್ಕಳನ್ನು ಆ ಶ್ರೀಮಂತರು ಯಥೋಚಿತವಾಗಿ ಸತ್ಕರಿಸಿದರು. ನನಗೆ 100/- ರೂಗಳ ಸಂಭಾವನೆ ನೀಡಿ ನಮಸ್ಕರಿಸಿ ನಮ್ಮನ್ನು ಬೀಳ್ಕೊಡುತ್ತ;- ಇನ್ನು ಮುಂದೆ ಪ್ರತಿ ವರ್ಷವೂ 50/- ರೂ ಸಂಭಾವನೆ ನೀಡುವ ಆಶ್ವಾಸನೆ ಯಿತ್ತರು. ಸಜ್ಜನರಾದ ಅವರು ಬದುಕಿದ್ದಷ್ಟು ಕಾಲ ಅದನ್ನು ಪಾಲಿಸಿದ ರೆಂಬುದು ಉಲ್ಲೇಖನೀಯ.

ಪ್ರಕರಣ 5

ತಪೋ ಯಾತ್ರೆ

ತಮುದಯಾಯ ನ ವಾ ನವಯೌವನಾ ಪ್ರಿಯತಮಾ ಯತಮಾನಮಪಾ ಹರತ್ । (ರಘುವಂಶಂ) (9-7)

(ತನ್ನ ಉತ್ಕರ್ಷಕ್ಕಾಗಿ ಪ್ರಯತ್ನಿಸುತ್ತಿದ್ದ ಆತ (ದಶರಥ ಮಹಾರಾಜ) ನನ್ನು ತನ್ನ ಕಡೆಗೆ ಸೆಳೆದುಕೊಳ್ಳುವುದು ಅದೇತಾನೇ ಯೌವನಕ್ಕೆ ಕಾಲಿಟ್ಟಿದ್ದ ಆತನ ಪ್ರಿಯತಮೆಯಿಂದಲೂ ಸಾಧ್ಯವಾಗಲಿಲ್ಲ.)

"ಬಹ್ವಾಶ್ಚರ್ಯಾ ಹಿ ಮೇದಿನೀ"

ಈ ಜಗತ್ತು ಬಹಳಷ್ಟು ಆಶ್ಚರ್ಯಗಳಿಂದ ತುಂಬಿ ಕೊಂಡಿದೆ.

ತಂದೆಯವರೊಡನೆ ನಂದಿ ಗ್ರಾಮದಿಂದ ಹೊರಟು ಸ್ವಗ್ರಾಮಕ್ಕೆ ಬಂದೆ. ತವರಿಗೆ ಹೋಗಿದ್ದ ನನ್ನಪತ್ನಿ ವಾಪಸು ಬಂದಳು. ಮತ್ತಷ್ಟು ತೇಜಸ್ವಿ ಯಾಗಿ ಪ್ರವಾಸದಿಂದ ಮರಳಿ ಬಂದ ನನಗೆ ಪ್ರಿಯತಮೆಯ ಒಡನಾಟ ತುಂಬಾ ಹಿತವೆನಿಸಿತು. ರಾತ್ರಿಯೆಲ್ಲ ನನ್ನ ಸಾಧನೆಯ ಸಂಗತಿಗಳನ್ನು ಕೇಳುತ್ತ ನನ್ನ ಪ್ರೇಯಸಿಯ ಮುಖಕಮಲವು ಅರುಣೋದಯದ ಪ್ರಭೆಯಿಂದ ಅರಳಿದಂತೆ ಕಾಂತಿಯುಕ್ತವಾಗುತ್ತಿತ್ತು.

ತತ್ಕಾಲಕ್ಕೆ ನನ್ನ ತಪೋಭಿಲಾಷೆ ತಣ್ಣಗಾಗಿತ್ತು. ವ್ಯಾಕರಣ ಚಿಂತನೆ- ಮಹಾಭಾರತದ ಅವಲೋಕನ-ಇತರ ಪುರಾಣಗಳ ಓದುವಿಕೆ-ಚದುರಂಗದ ಆಟವೇ

ಮುಂತಾದ ಆಮೋದ-ಪ್ರಮೋದಗಳಲ್ಲಿ ಕೆಲವು ಕಾಲ ಕಳೆಯಿತು. ಸ್ಥಗಿತ ಗೊಂಡಿದ್ದ ತಪೋಭಿಲಾಷೆ ಮತ್ತೆ ಮೇಲಕ್ಕೆ ಬಂದು ಮನಸ್ಸನ್ನು ಕಾಡಲು ಆರಂಭಿಸಿತು. ಒಂದು ಬಗೆಯಲ್ಲಿ ಧರ್ಮ ಸಂಕಟಕ್ಕೂ ಗುರಿಯಾದೆ.

ಏಕತ : ಸುಂದರೀ ಕಾಂತಾ ಪ್ರಾಣೇಭ್ಯೋಽಪಿ ಗರೀಯಸೀ ।
ಅನ್ಯತ : ತಾಪಸೀಕಾಂಕ್ಷಾ ವಿಶ್ವಸ್ಮಾದಪಿ ಭೂಯಸೀ ॥

ಒಂದುಕಡೆ ಪ್ರಾಣಕ್ಕಿಂತ ಪ್ರಿಯಳಾದ ಸುಂದರ ಸಂಗಾತಿ, ಮತ್ತೊಂದು ಕಡೆಗೆ ಎಲ್ಲದಕ್ಕಿಂತಲೂ ಹೆಚ್ಚಿನದಾದ ತಪೋ ವ್ಯಸನ, ಅಂತರಂಗದಲ್ಲಿ ಈ ಎರಡೂ ವ್ಯಸನಗಳ ನಡುವೆ ಘರ್ಷಣೆ. ಹೀಗೆಯೇ ಒಂದು ವರ್ಷ ಕಳೆಯಿತು. ಆಗ ನನಗೆ ಉಂಟಾದ ಅನುಭವ ವಿಶೇಷವೊಂದು ನನ್ನಲ್ಲಿದ್ದ ತಪೋಭಿಲಾಷೆಯ ಮನೋಧರ್ಮವೇ ಮೇಲುಗೈ ಸಾಧಿಸಲು ಕಾರಣವಾಯಿತು.

ಒಮ್ಮೆ ನಾನು ಕಣ್ಣು ಮುಚ್ಚಿಕೊಂಡು ಸ್ಥಿರಚಿತ್ತನಾಗಿ ಕುಳಿತಿರುವಾಗ ನನ್ನ ಸಂಕಲ್ಪವಿಲ್ಲದೆಯೇ ಇದ್ದಕ್ಕಿದಂತೆ ಶ್ವೇತಕಾಂತಿಯಿಂದ ಬೆಳಗುವ ವ್ಯಕ್ತಿಯೊಬ್ಬನ ಚಿತ್ರ ನನ್ನ ಮನಃ ಪಟಲದ ಮೇಲೆ ಸ್ಪಷ್ಟವಾಗಿ ಮೂಡಿತು. ಅಷ್ಟೇ ಅಲ್ಲ; ಆ ವ್ಯಕ್ತಿ ನನ್ನನ್ನು ಉದ್ದೇಶಿಸಿ ಈ ಮಾತುಗಳನ್ನೂ ಹೇಳಿದ.

ಅಯಮಹಂ ಜನನಾಂತರ ಬಾಂಧವಸ್ತವ ಚಿಂತನಕೃಛ್ರತಪಸ್ಸಖಃ ।
ಚರ ತಪೋಽಭಿಧಯಾಽಸ್ಮಿ ಚ ಭದ್ರಕೋ ಗಣಕ ಇತ್ಯಸಿ ಭೋರಿತಿ ಸೋಽಭಣತ್ ॥

"ನಾನು ನಿನ್ನ ಜನ್ಮಾಂತರದ ಬಂಧು ; ಚಿರಕಾಲದಿಂದ ಶ್ರಮ ಸಾಧ್ಯವಾದ ತಪಸ್ಸಿನ ಸಾಧನೆಯಲ್ಲಿ ನಿನ್ನ ಗೆಳೆಯನಾಗಿದ್ದವನು. ನನ್ನ ಹೆಸರು ಭದ್ರಕ. ನಿನ್ನ ಹೆಸರು ಗಣಕ. ನೀನು ತಪಸ್ಸನ್ನು ಆಚರಿಸು." ಹೀಗೆ ದ್ರಾವಿಡ ಭಾಷೆಯಲ್ಲಿ ನನಗೆ ತಿಳಿಸಿ ಆ ವ್ಯಕ್ತಿ ಮಾಯವಾಯಿತು.

ನನಗೆ ಮಂತ್ರೋಪದೇಶ ನೀಡಿದವರೂ, ತಿಳಿದವರೂ ಆದ ತಂದೆಯವರಿಗೆ ಈ ವಿವರಗಳನ್ನು ತಿಳಿಸಿದೆ.

ಇದೇ ವೇಳೆಗೆ ನಂದಿಗ್ರಾಮಕ್ಕೆ ಹೋಗಿದ್ದ ಸಹೋದರ ಶಿವರಾಮ

ಶಾಸ್ತ್ರಿಯಿಂದ ತಂದೆಯವರಿಗೆ ಪತ್ರವೊಂದು ಬಂದಿತು. ಆ ಪತ್ರದಲ್ಲಿ ಆತ ತಾನು ಕಂಡ ಸ್ವಪ್ನವೊಂದನ್ನು ವಿವರಿಸಿ ಅದರ ಸಂಕೇತವನ್ನು ತಿಳಿಸಲು ತಂದೆಯವರಲ್ಲಿ ಮನವಿ ಮಾಡಿ ಕೊಂಡಿದ್ದ. ಶ್ವೇತಕಾಂತಿಯುಳ್ಳ ಪುರುಷನೊಡನೆ ನಾನು (ಗಣಪತಿ ಶಾಸ್ತ್ರಿ) ಬಿಳಿಯ ಆನೆಯನ್ನೇರಿ ಎಲ್ಲಿಗೋ ಹೊರಟಿದ್ದಂತೆಯೂ ಇದನ್ನು ಕಂಡ ಅವನು 'ಇಬ್ಬರೂ ಏನು ಉದ್ದೇಶದಿಂದ ಹೊರಟಿರುವಿರಿ?' ಎಂದು ಪ್ರಶ್ನಿಸಿದಾಗ ತಪಸ್ಸಿಗೆ ಎಂದು ನಾವು ಉತ್ತರಿಸಿದುದಾಗಿಯೂ ಕನಸು ಕಂಡೆ. ಇದರ ಸಂಕೇತ ಏನಿರಬಹುದು." ಇದು ಅವನ ಪತ್ರದ ಸಾರಾಂಶ.

ಇಲ್ಲಿ ನನಗೆ ಆದ "ಶ್ವೇತ ಪುರುಷ ದರ್ಶನ"ದ ವಿಷಯ ನಂದಿಗ್ರಾಮ ದಲ್ಲಿದ್ದ ಶಿವರಾಮನಿಗೆ ತಿಳಿದಿದ್ದಿಲ್ಲ. ನನ್ನ ಅನುಭವ ಹಾಗೂ ಶಿವರಾಮನಿಗೆ ಕಂಡ ಕನಸಿನ ವೃತ್ತಾಂತಗಳನ್ನು ಕುರಿತು ಯೋಚಿಸಿ ನಿರ್ಧಾರಕ್ಕೆ ಬಂದ ನನ್ನ ತಂದೆಯವರು "ಇದು ತಪಸ್ಸಿನ ಸಂಕೇತವನ್ನೊಳಗೊಂಡ ಸ್ವಪ್ನ" ಎಂದು ಶಿವ ರಾಮನಿಗೆ ಉತ್ತರಬರೆದರು. ಅದರೊಡನೆಯೇ ಎರಡು ನಿಬಂಧನೆಗಳಿಗೆ ಒಳಪಟ್ಟು ನಾನು ತಪಸ್ಸಿಗೆ ಹೊರಡಲು ಒಪ್ಪಿಗೆಯನ್ನು ನೀಡಿದರು. ನನ್ನ ಪತ್ನಿ ತವರು ಮನೆಗೆ ಹೋದ ನಂತರ ನಾನು ತಪಸ್ಸಿಗೆ ಹೊರಡಬೇಕು. ಮನೆಗೆ ಬರುವಂತೆ ತಂದೆಯವರು ಪತ್ರ ಬರೆದ ಕೂಡಲೇ ನಾನು ವಾಪಸು ಬಂದುಬಿಡಬೇಕು. ಇವೇ ಆ ಎರಡು ನಿಬಂಧನೆಗಳು. ಆ ಸಮಯದಲ್ಲಿ ನಾನು ಈ ಷರತ್ತುಗಳಿಗೆ ಒಪ್ಪಿಕೊಂಡೆನಾದರೂ ತಪಸ್ಸಿನಲ್ಲಿ ಸಿದ್ಧಿ ಪಡೆದ ಹೊರತು ಊರಿಗೆ ವಾಪಸು ಬರ ಲಾರೆನೆಂಬುದು ನನ್ನ ಒಳ ನಿರ್ಧಾರವಾಗಿತ್ತು.

ತವರು ಮನೆಗೆ ಹೊರಟು ನಿಂತ ನನ್ನ ಹೆಂಡತಿಯು ನನ್ನೊಡನೆ "ನೀವು ತಪಸ್ಸಿಗಾಗಿ ದೂರ ಪ್ರದೇಶಕ್ಕೆ ಹೋಗಿಬಿಡಬೇಡಿ. ಸ್ವಲ್ಪ ಸಮಯದ ನಂತರ ನಾನೂ ನಿಮ್ಮನ್ನು ಅನುಸರಿಸುತ್ತೇನೆ." ಎಂದು ಕೇಳಿಕೊಂಡಳು. ಅದಕ್ಕೆ ಸಮ್ಮತಿಸಿದೆ. ನನ್ನ ಹುಟ್ಟು ಹಬ್ಬದ ಮರುದಿನ ತಂದೆಯವರಿಂದ ಆಶೀರ್ವಾದ ವನ್ನೂ ಪ್ರಯಾಣದ ಖರ್ಚಿಗೆ ಹಣವನ್ನೂ ಪಡೆದು ಪ್ರಯಾಗ ಕ್ಷೇತ್ರವನ್ನು ಸೇರುವ ಉದ್ದೇಶವಿಟ್ಟುಕೊಂಡು ಮನೆಯಿಂದ ಹೊರಟೆ. ಆದರೆ ದಾರಿಯಲ್ಲಿ ಸಿಡುಬು ರೋಗ ತಪಾಸಣೆಯ ಶಿಬಿರವೊಂದರಲ್ಲಿ ಒಂದು ವಾರ ನಾನು ಉಳಿಯಬೇಕಾಯಿತು.

ಅಲ್ಲಿಂದ ಹೊರಟು ಪ್ರಯಾಗವನ್ನು ಸೇರಿದೆ. ಅಲ್ಲಿ ವಿದ್ವಾಂಸರಾದ ವೈದ್ಯನಾಥ ಶಾಸ್ತ್ರಿಗಳೆಂಬವರ ಪರಿಚಯ ಲಭಿಸಿತು. ಅವರೊಡನೆ ಮಾತನಾ

ಮತ್ತೆ ನನ್ನ ಪಂಚಾಕ್ಷರೀ ಮಂತ್ರ ಜಪ-ತಪಸ್ಸುಗಳ ವಿಷಯ ಪ್ರಸ್ತಾಪಕ್ಕೆ ಬಂದಿತು. ನಾವು ಮಾತನಾಡುತ್ತಿದ್ದಾಗಲೇ ಹಸ್ತಸಾಮುದ್ರಿಕ ತಿಳಿದವರೊಬ್ಬರು ಅಲ್ಲಿಗೆ ಬಂದರು. ನನ್ನ ಕೈಗಳನ್ನು ನೋಡಿ ಶಂಖ ಚಕ್ರ ರೇಖೆಗಳನ್ನು ಗುರುತಿಸಿ" ಅವುಗಳು ನನ್ನ ಬದುಕಿನವೈಶಿಷ್ಟ್ಯ ಸೂಚಿಸುತ್ತವೆ; ನನಗೆ ಶುಭಯೋಗಗಳಿವೆ" ಎಂದು ಭವಿಷ್ಯ ನುಡಿದರು.

ಗಂಗೆಯ ಆಚೆ ಪಡವಲ್ಲಿರುವ ಶಂಖ ಮಾಧವ ದೇವಾಲಯ ತಪಸ್ಸಿಗೆ ತಕ್ಕ ಸ್ಥಳವೆಂದು ನಿರ್ಧರಿಸಿ ಅರ್ಧರೂಪಾಯಿಗೆ (ಈಗಿನ 0-50 ಪೈಸೆ) ಅವಲಕ್ಕಿಯನ್ನು ಕೊಂಡು ಕೊಂಡು ಗಂಗೆಯನ್ನ ದಾಟಿ ಆ ದೇಗುಲವನ್ನು ಸೇರಿದೆ. ಆ ದೇವಾಲಯದ ಸುತ್ತಲೂ ಒಂದು ಮೈಲಿಯಲ್ಲಿ ಜನ ವಸತಿ ಇರಲಿಲ್ಲ; ಪ್ರಶಾಂತವಾಗಿದ್ದ ಆ ಪ್ರದೇಶವಲ್ಲಿ ಒಳ್ಳೆ ಹುರುಪಿನಿಂದ ಶಿವಪಂಚಾಕ್ಷರೀ ಮಂತ್ರ ಜಪವನ್ನು ಪ್ರಾರಂಭಿಸಿದೆ.

ಹಗಲು-ರಾತ್ರಿ ಅಲ್ಲಿಯೇ ನನ್ನ ವಾಸ. ಸೂರ್ಯೋದಯಕ್ಕೆ 3 ಘಳಿಗೆ ಮುನ್ನ ನಿದ್ದೆಯಿಂದ ಏಳುವುದು. ಗಂಗೆಯಲ್ಲಿ ಮಿಂದು ಅಲ್ಲಿಯೇ ಒಂದೆಡೆ ಕುಳಿತು ಸೂರ್ಯ ಮುಳುಗುವತನಕ ಶಿವ ಪಂಚಾಕ್ಷರಿಯನ್ನು ನಿಷ್ಠೆಯಿಂದ ಜಪಿಸುವುದು. ರಾತ್ರಿಯ ಥಂಡಿ ಗಾಳಿಯನ್ನು ತಡೆದು ಕೊಳ್ಳಲು ಕಂಬಳಿಯೊಂದೇ ಆಧಾರ. (ಈ ಕಂಬಳಿಯು ಜೊತೆಗೆ ಸ್ವಲ್ಪ ಹಣ ಕೂಡ ಆ ನಿರ್ಜನ ಪ್ರದೇಶವಲ್ಲಿ ರಾತ್ರಿ ಬೆಳಗಾಗುವುದರೊಳಗೆ ಕಾಣೆಯಾಯಿತೆಂದೂ, ಯಾರೂ ಸುಳಿಯಲಾರದ ಈ ಸ್ಥಳದಲ್ಲಿ ಹೀಗಾದುದು ವಿಚಿತ್ರವೆಂದೂ, ಬಹುಶಃ ತಪಸ್ಸಿನ ಬಗ್ಗೆ ಅವರ ಮನಸ್ಥೈರ್ಯವೆಷ್ಟೆಂಬುದರ ಪರೀಕ್ಷೆಗಾಗಿಯೇ ಹೀಗಾಗಿದೆಯೆಂದೂ ಅವರು ತಿಳಿಯುವಂತಾಯಿತು) ಇನ್ನು ಆಹಾರದ ವಿಷಯ :-

> ಪರಿಕ್ಲಿನ್ನಂ ನೀರೆ ಪೃಥುಕ ಮಘಸಂ ಪ್ರತ್ಯಹಮಹಂ
> ಜಪಸ್ಯಾಂತೆ ಸಾಯಂ ಪರಮಶಿವಮಂತ್ರಸ್ಯ ಮಹತಃ ।
> ತದೇವಾಭೂನ್ನೀರಂ ಮಧುರತರ ಪಾನೀಯಮಪಿ ಮೆ
> ಕೃಪಾಲಾಭೆ ಶಂಭೋರ್ಭಜಕ ಇಹ ಕಿಂ ಕಿಂ ನ ಕುರುತೆ ॥

ಅವಲಕ್ಕಿಯನ್ನು ಬೆಳಿಗ್ಗೆ ನೀರಿನಲ್ಲಿ ನೆನೆಹಾಕಿ ಸಂಜೆ ಮಂತ್ರ ಜಪ ಮುಗಿದ ಮೇಲೆಯೇ ಅದನ್ನು ಚೆನ್ನಾಗಿ ಕಿವುಚಿ ಸೇವಿಸುವುದು; ಅದೇ ಅಮೃತಕ್ಕೆ ಸರಿಯಾದ ಪಾನೀಯಕೂಡಾ. ಈಶ್ವರಾನುಗ್ರಹ ಸಂಪಾದನೆಗಾಗಿ ಭಕ್ತನು ಈ ಪ್ರಪಂಚದಲ್ಲಿ ಏನೆಲ್ಲ ಕಷ್ಟಗಳನ್ನು ಅನುಭವಿಸುತ್ತಾನೆ?

ರಾತ್ರಿ ನಿಯಮಿತವಾದ ನಿದ್ರೆ. ಸ್ವಪ್ನದಲ್ಲಿ ಪರಶಿವನ ದರ್ಶನ ಈಗ ಲಭಿಸೀತು ! ಇನ್ನೊಂದು ಕ್ಷಣದಲ್ಲಿ ಶಿವನನ್ನು ಕಂಡೇನು ! ಎಂದು ತುಂಬ ಕಾತರತೆಯಿಂದ ಕಾಯುತ್ತ 10 ದಿನಗಳ ಕಾಲ ಮಂತ್ರ ಪುರಶ್ಚರಣೆ ಮಾಡಿದೆ, ಆದರೆ ನನಗೆ ಶಂಕರನ ಸಂದರ್ಶನವಾಗಲೀ, ಅವನ ಅನುಗ್ರಹದ ಸಂಕೇತವಾಗಲಿ ದೊರೆಯಲೇ ಇಲ್ಲ. ಮನಸ್ಸು ಬಹಳ ವ್ಯಾಕುಲಕ್ಕೆ ಒಳಗಾಯಿತು. ಮುಂದೇನು ಮಾಡಲಿ ? ಯಾವುದೂ ತೋಚದೆ ದಿಕ್ಕುಕೆಟ್ಟಂತಾಯಿತು.

ಹುಚ್ಚು ಹಿಡಿದವನಂತೆ ಚಡಪಡಿಸುತ್ತ ಜಪಮಾಡಲೂ ಸಾಧ್ಯವಾಗದೆ ಮುಂಜಾನೆ ಆ ಸ್ಥಳವನ್ನು ಬಿಟ್ಟು ಗೊತ್ತು ಗುರಿಯಿಲ್ಲದೆ ನಡೆಯತೊಡಗಿದೆ. ಅದೃಷ್ಟವಶಾತ್ ಯಾರಾದರೊಬ್ಬ ಪುಣ್ಯಾತ್ಮ ಕಣ್ಣಿಗೆ ಬೀಳಬಹುದು. ತಪಸ್ಸಿನ ಮರ್ಮವನ್ನು ಅವರಿಂದ ಅರಿತುಕೊಂಡೇನು; ಎಂದು ಗಂಗಾತೀರದಲ್ಲಿ ಅಲೆಯು ತ್ತಿದ್ದಂತೆಯೇ ಸೂರ್ಯ ಮುಳುಗಿ ಹಗಲು ಕಳೆಯಿತು. ಆದರೆ ನನ್ನ ನಿರಾಶೆ ಮಾತ್ರ ಕಳೆಯದೆ ಹಾಗೆಯೇ ಉಳಿಯಿತು. ಆ ಹೊತ್ತಿಗೆ ಬಳಿಯಲ್ಲಿಯೇ ಆಶ್ರಮವೊಂದು ಕಾಣಿಸಿ ಅತ್ತಕಡೆಗೆ ನಡೆದೆ.

ಆಶ್ರಮದ ಒಳಗೆ ಜಟಾಧಾರಿಯಾಗಿ ಮೈಗೆಲ್ಲಾ ಭಸ್ಮ ಬಳಿದುಕೊಂಡ ಸಾಧು ಒಬ್ಬರು ಧ್ಯಾನಮಗ್ನರಾಗಿ ಕುಳಿತಿದ್ದನ್ನು ಕಂಡೆ. ನಾನು ಅವರ ಬಳಿ ಯಲ್ಲಿ ಕುಳಿತು ಅನೇಕ ವಿಷಯಗಳನ್ನು ಪ್ರಶ್ನಿಸಿದೆ. ಆದರೆ ಆ ಸಾಧುಗಳು ನನ್ನ ಪ್ರಶ್ನೆಗಳಿಗೆ ಕೆಲವೊಮ್ಮೆ ಹಸ್ತ ಸಂಜ್ಞೆಗಳಿಂದ- ಕೆಲವೊಮ್ಮೆ ಹಿಂದೀ ಭಾಷೆ ಯಲ್ಲಿ ಉತ್ತರ ನೀಡಿದರು. ಆ ರಾತ್ರಿ ಅವರು ನನಗೆ ಜವೆಗೋಧಿಯ ರೊಟ್ಟಿ ಹಾಲುಗಳನ್ನು ಒದಗಿಸಿ ಕೊಟ್ಟರು.

ಇಬ್ಬರೂ ಮಾತನಾಡುತ್ತ ಕುಳಿತಿದ್ದೇವೆ. ಅರ್ಧ ರಾತ್ರಿಯ ಸಮಯ. ಆ ಸಾಧು ಮಹಾಶಯ ಹಟಾತ್ತನೆ ಎದ್ದು ಒಂದು ಬಿಂದಿಗೆಯಷ್ಟು ನೀರನ್ನು ಒಂದೇ ಸಮನೆ ಕುಡಿಯುವುದಕ್ಕೆ ಪ್ರಾರಂಭಿಸಿದರು. ನಾನು ಕೇಳಿದೆ :-" ಏನಿದು ಮಹಾ ಶಯ ? ಈ ಅಕಾಲದಲ್ಲಿ ಹೀಗೆ ನೀರು ಕುಡಿಯುತ್ತಿರೇಕೆ ?" ಅದಕ್ಕೆ ಉತ್ತರವಾಗಿ ಅವರು ಹೀಗೆ ಹೇಳಿದರು :

ಅಜೀರ್ಣೇ ಭೇಷಜಂ ವಾರಿ ಜೀರ್ಣೇ ವಾರಿ ಬಲಪ್ರದಂ ।
ಭೋಜನಾಂತೇಽಮೃತಂ ವಾರಿ ಭೋಜನಾದೌ ವಿಷಂ ಸ್ಮೃತಂ ॥

ಅಜೀರ್ಣವಾದಾಗ ಸೇವಿಸುವ ನೀರು ಔಷಧದಂತೆ ಕೆಲಸ ಮಾಡುತ್ತದೆ.

ಜೀರ್ಣವಾದ ಮೇಲೆ ನೀರು ಕುಡಿಯುವುದರಿಂದ ಶಕ್ತಿ ಹೆಚ್ಚುತ್ತದೆ. ಊಟವಾದ ಮೇಲೆ ಕುಡಿಯುವ ನೀರು ಅಮೃತಕ್ಕೆ ಸಮಾನ. ಊಟಕ್ಕೆ ಮೊದಲು ಕುಡಿಯುವ ನೀರು ವಿಷವೆಂದು ತಿಳಿಯಬೇಕು.

ರಾತ್ರಿ ಕಳೆದು ಬೆಳಗಾಯಿತು. ನನ್ನ ಒಡಲಿನಲ್ಲಿ ಉಂಟಾಗಿದ್ದ ಬೇಗುದಿ ಕಡಿಮೆಯಾಗಲೇ ಇಲ್ಲ, ಶಂಖಮಾಧವ ದೇಗುಲಕ್ಕೆ ಪುನಃ ಹೋಗಲೆಂದು ಹೊರಟು ಮಧ್ಯದಲ್ಲಿ ಯಾವುದಾದರೂ ಸರಿಯಾದ ಸ್ಥಳ-ಆಶ್ರಮ ಸಿಗಬಹುದೇನೋ ಎಂದು ಹುಡುಕುತ್ತ ನಡೆಯುತ್ತಿದ್ದೆ. ನಿರ್ಜನವಾಗಿದ್ದ ಆ ಪ್ರದೇಶದಲ್ಲಿ ಸ್ವರ್ಗದಿಂದ ಧರೆಗಿಳಿದು ಬಂದವನಂತೆ ಬ್ರಾಹ್ಮಣ ಬ್ರಹ್ಮಚಾರಿಯೊಬ್ಬ ಸಿಕ್ಕಿದ. ತಪಸ್ಸಿಗೆ ಯೋಗ್ಯ ಸ್ಥಳವನ್ನು ಆತನಲ್ಲಿ ವಿಚಾರಿಸಿ-ಅವನ ಸೂಚನೆಯಂತೆ ಅಯೋಧ್ಯೆಯ ಮಹಾರಾಜರಿಂದ ಸ್ಥಾಪಿತವಾದ "ಹಂಸತೀರ್ಥ" ಪಾಠಶಾಲೆಯನ್ನು ತಲುಪಿದೆ.

ಅಲ್ಲಿಯ ವ್ಯಾಕರಣ ಪಂಡಿತರೊಡನೆ ಮಾತನಾಡುತ್ತ ತಪಸ್ಸಿಗೆ ಸರಿಯಾದ ಜಾಗದ ಬಗ್ಗೆ ಕೇಳಿದೆ. "ಅವರು ಇಲ್ಲಿಯೇ ತಪಸ್ಸು ನಡೆಸಬಹುದು" ಎಂದು ತಿಳಿಸಿದರು. ಆ ರಾತ್ರಿ ಭೋಜನಕ್ಕೆ ಬೆಲ್ಲದಿಂದ ಬೇಯಿಸಲ್ಪಟ್ಟ ರುಚಿಕರವಾದ ಗೆಡ್ಡೆಯ ಆಹಾರವನ್ನು ನೀಡಿದರು. ಅಲ್ಲಿಯೇ ಇದ್ದು ಹಗಲು ಉಪವಾಸ; ಮಂತ್ರ ಜಪ; ರಾತ್ರಿಗೆ ಇದೇ ಗೆಡ್ಡೆಯ ಆಹಾರ; ಹೀಗೆ ಹತ್ತು ದಿನ ನಡೆಯಿತು. ಈಗಲೂ ಪರಶಿವನ ದರ್ಶನ ಲಭಿಸಲಿಲ್ಲ. ಹೀಗೆಯೇ ಇರುವಾಗ ಮಕರ ಮಾಸ ಸಮೀಪಿಸಿತು. ಸೂರ್ಯ ಸಂಕ್ರಾಂತಿಯ ಪುಣ್ಯಸ್ನಾನ ನಿರ್ವಹಣೆಗಾಗಿ ಆ ಪಾಠಶಾಲೆಯವರೆಲ್ಲರೂ ಕಾಶೀಕ್ಷೇತ್ರಕ್ಕೆ ಹೊರಟರು. ನಾನೂ ಆ ಸ್ಥಳವನ್ನು ಬಿಟ್ಟು ಹೊರಟು ನಂದಾ ಭಗವತೀ ಕ್ಷೇತ್ರವಾದ ವಿಂಧ್ಯಾಚಲವನ್ನು ಸೇರಿದೆ. ದೇವಿಯ ಸನ್ನಿಧಿಯಲ್ಲಿ ತಪಸ್ಸನ್ನು ಪ್ರಾರಂಭಿಸಿದೆ.

"ನಾನು ಹುಟ್ಟುವಾಗ ನಮ್ಮ ತಂದೆಯವರಿಗೆ ಕಾಶಿಯಲ್ಲಿ ಆದ ವಿಶೇಷ ದರ್ಶನ-ನನ್ನ ಅನುಭವಗಳು-ಮಾನಸಿಕ ಸಂವೇದನೆ-ಪ್ರತ್ಯಕ್ಷ ನಿದರ್ಶನಗಳು ಇವೆಲ್ಲದರಿಂದ "ಗಣಪತಿ" ಎಂಬ ನನ್ನ ಹೆಸರಿನಲ್ಲಿ ಸತ್ವವಿಲ್ಲದಿರುವುದು ಸಾಧ್ಯವಿಲ್ಲ; ಪರಮೇಶ್ವರನೇ ನನ್ನ ತಂದೆ" ಎಂದು ಮನಸ್ಸಿನಲ್ಲಿ ದೃಢ ನಿಶ್ಚಯ ಮಾಡಿಕೊಂಡೆ.

ಈ ನನ್ನ ತಂದೆ ಪರಶಿವನು ನನಗೆ ದರ್ಶನವನ್ನೇ ಕೊಡುತ್ತಿಲ್ಲವಲ್ಲ ? ಎಂದು ಪರಿತಾಪ ಪಡುತ್ತ ದೇವಿಯ ಸನ್ನಿಧಿಯಲ್ಲಿ ಮಲಗಿದೆ. ರಾತ್ರಿ ನನ್ನನ್ನು

ಯಾವುದೋ ಸೂಕ್ಷ್ಮ ಶಕ್ತಿ ಗಾಳಿಯಲ್ಲಿ 15 ಅಡಿ ಮೇಲಕ್ಕೆ ತೂರಿ ನಿಧಾನವಾಗಿ ವಾಪಸು ಕೆಳಗಿಳಿಸಿತು. ಈ ವಿಚಿತ್ರ ಪರಿಸ್ಥಿತಿಯಿಂದ ನಾನು ಹೆದರಲಿಲ್ಲ, ಇದೂ ಒಂದು ಬಗೆಯ ಲೀಲೆಯೆಂದೇ ತಿಳಿದುಕೊಂಡೆ. ದೇವಿಯನ್ನು ಸ್ತುತಿಸುತ್ತ ಉಳಿದರಾತ್ರಿಯನ್ನು ಜಾಗರಣೆಯಿಂದಲೇ ಕಳೆದೆ. ಆ ಸಂದರ್ಭದಲ್ಲಿ ನಾನು ದೇವಿಯನ್ನು ಈ ರೀತಿ ಸ್ತೋತ್ರಮಾಡಿದೆ.

ಅವಂಧ್ಯವಿಂಧ್ಯಭೂಮಿಭೃತ್ತಟಾಲಯಾ ದಯಾವತೀ ।
ವಿಚಾರ ಧೌತ ಚೇತಸಾಮಿಯಂ ಭಯಂ ವ್ಯಪೋಹತಿ ॥

ಪರಿಶುದ್ಧವಾದ ವಿಂಧ್ಯ ಪರ್ವತದಲ್ಲಿ ನೆಲೆಸಿರುವ ದಯಾಪೂರ್ಣಳಾದ ದೇವಿಯು ವಿಚಾರ ಪರತೆಯಿಂದ ನಿರ್ಮಲಗೊಂಡ ಮನಸ್ಸುಳ್ಳವರಿಗೆ ಒದಗಿದ ಭಯವನ್ನು ನಿವಾರಿಸುತ್ತಾಳೆ.

ಬೆಳಗಾದ ಮೇಲೆ ಇದು ಭೂತಚೇಷ್ಟೆಯಿರುವ ಸ್ಥಳವೆಂದು ನಿರ್ಧರಿಸಿ ನಾರಾಯಣ ಪುರಕ್ಕೆ ಹೋಗಲು ರೈಲು ಟಿಕೇಟ್ ತೆಗೆದುಕೊಂಡೆ. ನಾರಾಯಣ ಪುರವನ್ನು ಸೇರಿ ಅಲ್ಲಿಂದ ಕಾಲ್ನುನಡಿಗೆಯಲ್ಲಿ 9ಘಂಟೆಗಳ ಕಾಲ ಪಯಣಿಸಿ ರಾಮನಗರವನ್ನು ತಲುಪಿದೆ. ನನ್ನಲ್ಲಿದ್ದ 4/-ರೂ ಬೆಲೆ ಬಾಳುವ ಬಟ್ಟೆಗಳನ್ನು 2ಆಣೆಗಳಿಗೆ ವಿಕ್ರಯಿಸಿ ಸ್ವಲ್ಪ ತಿಂಡಿಯಿಂದ ಹಸಿವೆಯನ್ನು ಹಿಂಗಿಸಿಕೊಂಡು ದೋಣಿಯಲ್ಲಿ ಪ್ರಯಾಣ ಮಾಡಿ ಕಾಶೀ ಕ್ಷೇತ್ರಕ್ಕೆ ತಲುಪಿದೆ. ಅಲ್ಲಿ ನನ್ನ ತಂದೆಯವರ ಸೋದರಮಾವನ ಮನೆಯಲ್ಲಿ ಒಂದು ತಿಂಗಳು ಇದ್ದೆ. ತಪಸ್ಸು ಮುಂದುವರಿಯಲಿಲ್ಲ. ವಿದ್ವಾಂಸರೊಡನೆ ಚರ್ಚೆ-ಸ್ವಾರಸ್ಯ ಸಂಭಾಷಣೆಗಳಲ್ಲಿಯೇ ಕಾಲಕಳೆಯಿತು.

ವಿದೇಹ ಪ್ರಾಂತ್ಯದಲ್ಲಿರುವ ದರ್ಭಾಂಗಾ ಸಂಸ್ಥಾನ ಮಹಾರಾಜರ ಪಾಠ ಶಾಲೆಯ ಅಧ್ಯಾಪಕರೂ ವಿಶ್ರುತ ವಿದ್ವಾಂಸರೂ ಆದ ಬಾಲಾಶಾಸ್ತ್ರಿಗಳವರ ಶಿಷ್ಯ ಶಿವಕುಮಾರ ಪಂಡಿತರೆಂಬ ವಿದ್ವಾಂಸರು ನನ್ನ ಪಾಂಡಿತ್ಯ–ಆಶು ಕವಿತಾ ಸಾಮರ್ಥ್ಯಗಳನ್ನು ತುಂಬಾ ಮೆಚ್ಚಿಕೊಂಡರು. ಬಂಗಾಲದ ನವದ್ವೀಪದಲ್ಲಿ ಜರುಗುವ ವಿದ್ವತ್ಸಭಾ ಪರೀಕ್ಷೆಗೆ ನಾನು ಹೋಗಲೇ ಬೇಕೆಂದು ಸಲಹೆ ನೀಡಿದರು. ಆ ಸಂದರ್ಭಕ್ಕೆ ಉಪಯೋಗವಾಗುವಂತೆ ನನ್ನ ವಿಷಯದಲ್ಲಿ ಪ್ರಶಂಸಾ ಪತ್ರವನ್ನು ಬರೆದು ನವ ದ್ವೀಪದ ಮಹಾವಿದ್ವಾಂಸರಾದ ಶಿತಿಕಂಠವಾಚಸ್ಪತಿಗಳಿಗೆ ಕೊಡಲು ತಿಳಿಸಿದರು.

ಕಾಶಿಯಲ್ಲಿರುವಾಗ ನನಗೆ ಸೂರ್ಯ ನಾರಾಯಣ ಯೋಗಿಗಳೆಂಬವರ ಭೆಟ್ಟಿಯಾಯಿತು. ಅವರು ಹೇಳಿದರು :–

ಅಹಂ ಸುಕೇತುರ್ಗಣಕಸ್ತ್ವಂ ಚಾ ವಾಂ ತಾಪಸೌ ಪುರಾ ।
"ಲೋಕಕ್ಷೇಮಾಯ ಜಾತಾಃ ಸ್ಮೋ ವಯಂ ಷೋಡಶ ಪೂರುಷಾಃ ॥

"ನಾನು ಸುಕೇತು; ನೀನು ಗಣಕ; ನಾವು ಹಿಂದೆ ತಪಸ್ವಿಗಳಾಗಿದ್ದವರು. ಲೋಕ ಕ್ಷೇಮದ ಸಾಧನೆಗಾಗಿ ನಾವು ಹದಿನಾರು ಜನರು ಹುಟ್ಟಿಬಂದಿದ್ದೇವೆ."

"ಆ ಹದಿನಾರು ವ್ಯಕ್ತಿಗಳಲ್ಲಿ ನಾವಿಬ್ಬರಾದರೆ ಇನ್ನಿಬ್ಬರ ಹೆಸರುಗಳು ದೈವ ರಾತ, ಸ್ಥೂಲಶಿರ ಎಂದು" ಅವರೂ ನಾನೂ ಇಡೀ ರಾತ್ರಿ ಅನೇಕ ವಿಷಯಗಳನ್ನು ಚರ್ಚಿಸಿದೆವು. ಬೆಳಿಗ್ಯೆ ನಾನು ಅವರೊಡನೆ :– "ನಮ್ಮ ಈ ತಪೋರಹಸ್ಯದ ವಿಷಯವನ್ನು ನೀವೇ ನಮ್ಮ ತಂದೆಯವರಿಗೆ ಬರೆದು ತಿಳಿಸಿ" ಎಂದೆ. ಅವರು "ನಿಮ್ಮ ಮಗ ತಪಸ್ಸು ನಡೆಸಲಿ,ಮನೆಯಲ್ಲಿಯೇ ಇರಬೇಕೆಂಬ ನಿರ್ಬಂಧವನ್ನು ಆತನಿಗೆ ವಿಧಿಸಬೇಡಿ"ಎಂದು ಬರೆದು ಲಕೋಟೆಯ ಮೇಲು ವಿಳಾಸವನ್ನೂ ಬರೆದು ನನ್ನ ಕೈಗೆ ಕೊಟ್ಟರು. ನಾನು ಪತ್ರವನ್ನು ನೋಡಿ ಅದನ್ನು ಲಕೋಟೆ ಯೊಳಗೆ ಹಾಕಿ ಅಂಟಿಸಿ ಪುನಃ ಅವರ ಕೈಗೇ ಕೊಟ್ಟೆ. ಅವರೇ ಅದನ್ನು ಅಂಚೆ ಪೆಟ್ಟಿಗೆಗೆ ಹಾಕಿದರು. ಈ ವಿಷಯಕ್ಕೆ ಸಂಬಂಧಿಸಿದ ಆಶ್ಚರ್ಯಕರ ಘಟನೆಯ ವಿವರ ಮುಂದೆ ಬರುತ್ತದೆ.

ಪ್ರಕರಣ - 6

ನಾಸಿಕಾ

"ತ್ರಾಣಾಭಾವೇ ಹಿ ಶಾಪಾಸ್ತ್ರಾಃ ಕುರ್ವಂತಿ ತಪಸೋ ವ್ಯಯಂ ।
(ರಘುವಂಶಂ)15-3

(ತಮ್ಮನ್ನು ರಕ್ಷಿಸುವವರು ಯಾರೂ ಇಲ್ಲದಿದ್ದಾಗ ಮಾತ್ರ ತಪೋ ನಿಷ್ಠರು ತಮ್ಮ ತಪಸ್ಸಿನ ಶಕ್ತಿಯನ್ನು ಬಳಸುತ್ತಾರೆ)

"ರಜನೀಮವಾಪ್ಯ ರುಚಿಮಾಪ ಶಶೀ ಸಪದಿ ವ್ಯಭೂಷಯದಸಾಪತಿ ತಾಂ ।" (ಮಾಘಃ)

(ಚಂದ್ರನು ನಿಶಾದೇವಿಯನ್ನು ಸೇರಿ ಪ್ರಕಾಶಮಾನನಾದುದರ ಜೊತೆಗೆ ಆಕೆ ಯನ್ನು ಅಲಂಕರಿಸಿ ಶೋಭಿಸುವಂತೆ ಮಾಡಿದನು.)

ಆ ಪತ್ರ ನಮ್ಮ ತಂದೆಯವರ ಕೈಸೇರಿದೊಡನೆ ಅವರು ತಂತಿ ಮೂಲಕ "ರಾಮನಗರ-ದುರ್ಗಾಮಂದಿರದಲ್ಲಿ ಸೂರ್ಯ ನಾರಾಯಣ ಯೋಗಿಗಳನ್ನು ನೋಡು. ನೀನು ಮಾಡಬೇಕಾದುದನ್ನು ಅವರಿಂದ ತಿಳಿದುಕೋ" ಎಂದು ನನಗೆ ಸೂಚನೆ ನೀಡಿದರು. ಆದರೆ ಅಷ್ಟರಲ್ಲಿ ಆ ಸ್ಥಳವನ್ನು ಬಿಟ್ಟುಹೋಗಿದ್ದ ಆ ಯೋಗಿಗಳು ಪುನಃ ನನಗೆ ಕಾಣಲು ಸಿಗಲೇ ಇಲ್ಲ.

ಈ ತಂತೀ ಸಂದೇಶ ನನಗೆ ತಲುಪಿದ ಹಿಂದಿನ ರಾತ್ರಿಯ ಕೊನೆಯಲ್ಲಿ ಒಬ್ಬ ಬ್ರಾಹ್ಮಣ ಕನಸಿನಲ್ಲಿ ಕಾಣಿಸಿಕೊಂಡ. "ಎಲ್ಲಿಂದ ಬಂದಿದ್ದೀಯೆ ?" ಎಂಬ ನನ್ನ ಪ್ರಶ್ನೆಗೆ 'ನಾಸಿಕ-ತ್ರ್ಯಂಬಕ ಕ್ಷೇತ್ರದಿಂದ ಬಂದಿದ್ದೇನೆ. ಅದು ತಪಸ್ಸಿಗೆ ಉತ್ತಮವಾದ ಸ್ಥಳ" ಎಂದು ಉತ್ತರಿಸಿದ. ನಾನು ತಂದೆಯವರಿಗೆ ಇದೆಲ್ಲವನ್ನು ಬರೆದು ತಿಳಿಸಿ, ನಾಸಿಕಕ್ಕೆ ಹೋಗಲು ಪ್ರಯಾಣದ ವೆಚ್ಚಕ್ಕೆ ಹಣ ಕಳಿಸುವಂತೆ ಕೇಳಿಕೊಂಡೆ. ಅವರಿಂದ ತಂತೀ ಮನಿಯಾರ್ಡರು ಮೂಲಕ ಹಣ ಬಂದ ಕೂಡಲೇ ನಾನು ಅಲ್ಲಿಂದ ಹೊರಟು ನಾಸಿಕವನ್ನು ಸೇರಿದೆ. ಅಲ್ಲಿ ಸಾಂಕ್ರಾಮಿಕ ರೋಗ ಪರೀಕ್ಷೆಯ ಶಿಬಿರದಲ್ಲಿ ಅಧಿಕಾರಿಗಳಿಂದ ತಡೆಯಲ್ಪಟ್ಟು ಊರ ಹೊರವಲಯದಲ್ಲಿಯೇ 1 ದಿನವನ್ನು ಕಳೆಯಬೇಕಾಗಿ ಬಂದಿತು.

ರಾತ್ರಿಯಾಯಿತು, ಆ ಶಿಬಿರದ ಹೊರಗಡೆ ವಿಶಾಲವಾದ ಬಯಲಿನಲ್ಲಿ ಹೋಗಿ ನಿಂತೆ. ಎಲ್ಲೆಲ್ಲಿಯೂ ಹಾಲು ಚೆಲ್ಲಿದಂತೆ ಬೆಳದಿಂಗಳು ಹರಡಿದೆ. ಮನಸ್ಸಿಗೆ ಮುದನೀಡುವ ವಾತಾವರಣ. ಆದರೆ ಇಲ್ಲಿಗೆ ಬಂದು ನಿರ್ಬಂಧಕ್ಕೆ ಸಿಕ್ಕಿಕೊಂಡಿರುವ ಕಷ್ಟವನ್ನು ಮರೆಯಲೋಸ್ಕರ ಕಾವ್ಯವನ್ನು ಕುರಿತು ಯೋಚಿಸುತ್ತಿದ್ದಂತೆಯೇ ರಘುವಂಶ ಕಾವ್ಯದ ಶ್ಲೋಕವೊಂದು ನೆನಪಿಗೆ ಬಂದಿತು.

ಸರಸ-ಗಂಭೀರ-ಮನೋಹರ ಸ್ವರದಲ್ಲಿ ಶ್ಲೋಕವನ್ನು ಸ್ವಚ್ಛಂದವಾಗಿ ಹಾಡಲು ಪ್ರಾರಂಭಿಸಿದೆ. ತರುಣ ಕಂಠದಿಂದ ಹೊರಹೊಮ್ಮುತ್ತಿದ್ದ ಮಧುರ ನಾದವು ಪ್ರಶಾಂತವಾದ ಆ ರಾತ್ರಿಯಲ್ಲಿ ಎಲ್ಲೆಲ್ಲಿಯೂ ತುಂಬಿಕೊಳ್ಳುತ್ತಿತ್ತು. ಸಂಸ್ಕೃತವನ್ನು ಬಲ್ಲ ರಸಿಕನಾದ ಆ ಶಿಬಿರಾಧಿಕಾರಿಯ ಕಿವಿಗೆ ಇದು ಬೀಳುತ್ತಿದ್ದಂತೆಯೇ ಆತ ಶಿಬಿರದಿಂದ ಹೊರಬಂದು ನನ್ನ ಬಳಿ ನಿಂತುಕೊಂಡ. ಆಗ ನಾನು ಹಾಡುತ್ತಿದ್ದುದು ರಘುವಂಶ ಕಾವ್ಯದ 5ನೇ ಸರ್ಗದ ಈ ಪದ್ಯವನ್ನು :—

ನಿದ್ರಾವಶೇನ ಭವತಾಽಪ್ಯನವೇಕ್ಷ್ಯಮಾಣಾ
ಪರ್ಯುತ್ಸುಕತ್ವಮಬಲಾ ನಿಶಿ ಖಂಡಿತೇವ ।

ಲಕ್ಷ್ಮೀರ್ವಿನೋದಯತಿ ಯೇನ ದಿಗಂತಲಂಬೀ
ಸೋಽಪಿ ತ್ವದಾನನರುಚಿಂ ವಿಜಹಾತಿ ಚಂದ್ರ ; ॥

ಸರಸಿಯಾದ ಆ ಬ್ರಾಹ್ಮಣ ಅಧಿಕಾರಿ ಈ ಶ್ಲೋಕವನ್ನು ವ್ಯಾಖ್ಯಾನಿಸುವಂತೆ ಕೇಳಿ ಕೊಂಡ. ನನ್ನ ವ್ಯಾಖ್ಯಾನ ಹೀಗಿತ್ತು :–

ರಘುಮಹಾರಾಜನ ಮಗನಾದ ಅಜನು ಆ ಪ್ರಾತಃಕಾಲ ಸ್ವಯಂವರ ಮಂಟಪಕ್ಕೆ ಹೋಗ ಬೇಕಾಗಿದೆ. ಮುಂಜಾನೆ ನಿದ್ದೆಯಲ್ಲಿರುವ ಆತನನ್ನು ಎಚ್ಚರಿಸುವ ಸಲುವಾಗಿ ವಂದಿಮಾಗಧರು ಈ ರೀತಿ ಹೇಳುತ್ತಾರೆ :– "ರಾಜನೇ ! ನಿನ್ನ ಅನು ರಾಗಕ್ಕಾಗಿ ಹಾತೊರೆಯುತ್ತಿರುವ ಲಕ್ಷ್ಮಿದೇವಿಯು ರಾತ್ರಿ ನಿನ್ನಬಳಿಗೆ ಬಂದಾಗ ನೀನು ಗಾಢ ನಿದ್ರೆಯಲ್ಲಿ ಮಗ್ನನಾಗಿದ್ದೆ. ಇದನ್ನು ಕಂಡ ಅವಳಿಗೆ ನೀನು ಅವಳನ್ನು ತಿರಸ್ಕರಿಸಿರುವಿಯೆಂಬ ಭಾವನೆ ಹುಟ್ಟಿ ಅವಳು ಚಂದ್ರನೊಡನೆ ಸರಸವಾಡುತ್ತ ಮನಸ್ಸನ್ನು ರಂಜಿಸಿಕೊಂಡಳು. ಆ ಚಂದ್ರನು ಇದೀಗ ನಿನ್ನ ಮುಖ ಮಂಡಲದ ಸಾದೃಶ್ಯವನ್ನು ಬಿಟ್ಟು ಅಸ್ತನಾಗಿದ್ದಾನೆ! ಆದ್ದರಿಂದ ನೀನು ನಿದ್ದೆಯನ್ನು ಕಳೆದೆದ್ದು ಲಕ್ಷ್ಮೀದೇವಿಯನ್ನು ಪರಿಗ್ರಹಿಸುವವನಾಗು. ಈ ಶ್ಲೋಕದಲ್ಲಿ ಬರುವ "ಅನವೇಕ್ಷ್ಯಮಾಣಾ" ಶಬ್ದದ ವಿಶೇಷಾರ್ಥ ಹೀಗಿದೆ :–

"ಭವತಾ ಉಪೇಕ್ಷ್ಯಮಾಣಾ ಲಕ್ಷ್ಮೀ : ಪರ್ಯುತ್ಸುಕತ್ವಂ-ವಿರಹವೇದನಾಂ ವಿನೋದಯತಿ ಅಪನೋದಯತಿ" ಅಂದರೆ "ನಿನ್ನ ಉಪೇಕ್ಷೆಯಿಂದ ಉಂಟಾದ ವಿರಹವೇದನೆಯನ್ನು ಲಕ್ಷ್ಮಿಯು ಹೋಗಲಾಡಿಸಿಕೊಳ್ಳುತ್ತಾಳೆ."

ಅರವಿಂದ ಪುಷ್ಪ-ಚಂದ್ರಬಿಂಬ-ರಾಜನ ಮುಖ ಮಂಡಲ ಇವು ಮೂರು ಲಕ್ಷ್ಮಿದೇವಿಯ ನಿವಾಸ ಸ್ಥಾನಗಳು ಎಂಬ ಅಲಂಕಾರಿಕ ಲೋಕೋಕ್ತಿಯ ವೈಶಿಷ್ಟ್ಯ ವನ್ನು ವ್ಯಕ್ತಗೊಳಿಸಲು ಮಹಾಕವಿ ಕಾಳಿದಾಸನ ಈ ಶ್ಲೋಕ ಪ್ರವೃತ್ತವಾಗಿದೆ.

ಕಾವ್ಯರಸಾಸ್ವಾದದಿಂದ ಸಂತೃಪ್ತನಾದ ಆ ಅಧಿಕಾರಿಯು ನನ್ನನ್ನು ಅಭಿನಂದಿಸುತ್ತ ಈ ಸಂಬಂಧದಲ್ಲಿ ಆಕ್ಷೇಪರೂಪವಾದ ಪ್ರಶ್ನೆಯೊಂದನ್ನು ಕೇಳಿದ :- "ಪರಪುರು ಷನೊಡನೆ ಸರಸವಾಡಲು ಹೋದ ಲಕ್ಷ್ಮಿಯನ್ನು ಅಜ ಮಹಾರಾಜನು ತಿರುಗಿ ಸ್ವೀಕರಿಸುವುದಾದರೂ ಹೇಗೆ ? ಇದರಿಂದ ವಿರಸಕ್ಕೆ ಅವಕಾಶವಾಗುತ್ತದೆ."

ಸಹೃದಯನಾದ ಆತನಿಗೆ ನಾನು ಮರು ಪ್ರಶ್ನೆ ಹಾಕಿದೆ :- ಕ್ಷೀರಸಾಗರದಲ್ಲಿ ಹುಟ್ಟಿದ ಲಕ್ಷ್ಮಿಗೆ ಚಂದ್ರ ಪರಪುರುಷ ಹೇಗಾದಾನು ?" ಆ ಅರ್ಥವನ್ನು ಪ್ರತಿಬಿಂಬಿ ಸುವ ಈ ಶ್ಲೋಕ ಆ ಕ್ಷಣದಲ್ಲಿ ಥಟಿತವಾಗಿ ನನ್ನ ಮುಖದಿಂದ ಹೊರ ಬಂದಿತು.

ಕ್ಷೀರಾಬ್ಧಿಜನ್ಮಾ ಪ್ರಥಿತಾ ಹಿ ಲಕ್ಷ್ಮೀಃ
ಕ್ಷೀರಾಬ್ಧಿಜನ್ಮಾ ಕಿಲ ಸೋಽಪಿ ಚಂದ್ರಃ ।
ಸೋದರ್ಯಗೇಹೇ ವಿರಹೆ ವಸಂತೀ
ಕಥಂನು ದೋಷೇಣ ವಿದೂಷಿತಾ ಸ್ಯಾತ್ ॥

ಲಕ್ಷ್ಮೀ-ಚಂದ್ರ ಇಬ್ಬರೂ ಕ್ಷೀರಸಾಗರದಲ್ಲಿ ಹುಟ್ಟಿಬಂದು ಸೋದರಸಂಬಂಧ ಉಳ್ಳವರು. ಲಕ್ಷ್ಮಿಯು ವಿರಹವೇದನೆಗೆ ಗುರಿಯಾದಾಗ ಸಹೋದರನ ಮನೆಯಲ್ಲಿ ಇದ್ದರೆ ಆದರಿಂದ ನಿಂದೆಗೆ ಗುರಿಯಾಗುವುದು ಹೇಗೆ ಸಾಧ್ಯ ?

ಸಮಯೋಚಿತವೂ ಸ್ವಾರಸ್ಯ ಪೂರ್ಣವೂ ಆದ ಈ ನನ್ನ ವಿವರಣೆಯಿಂದ ತುಂಬಾ ಸಂತೋಷಗೊಂಡ ಆ ಶಿಬಿರಾಧಿಕಾರಿಯು ಆ ಕ್ಷಣದಲ್ಲಿಯೇ ನನ್ನನ್ನು ಶಿಬಿರವಾಸ ನಿರ್ಬಂಧದಿಂದ ಮುಕ್ತಗೊಳಿಸಿದ.

ನಾಸಿಕಾ ಪಟ್ಟಣವು ತಪಸ್ಸಿಗೆ ಯೋಗ್ಯವಾದುದಲ್ಲವೆಂದು ನಿರೀಕ್ಷಿಸಿ ಅಲ್ಲಿಂದ ಸುಮಾರು 20 ಮೈಲಿದೂರದ ತ್ರ್ಯಂಬಕ ಕ್ಷೇತ್ರಕ್ಕೆ ಆಗಲೇ ಹೊರಟು ಮರುದಿನ ಅಲ್ಲಿಗೆ ತಲುಪಿದೆ. ಬರುವಾಗ ದಾರಿಯಲ್ಲಿ ಗಣಪತಿ ದೇವಾಲಯದಲ್ಲಿ ರಾತ್ರಿಯನ್ನು ಕಳೆದೆ.

ತ್ರ್ಯಂಬಕ ಕ್ಷೇತ್ರದ ಬಳಿಯಲ್ಲಿಯೇ ಇರುವ ಬ್ರಹ್ಮಗಿರಿಯು ಗೋದಾವರಿ ನದಿಯ ಉಗಮಕ್ಷೇತ್ರ. ಇಲ್ಲಿ ಹನಿ ಹನಿಯಾಗಿ ತೊಟ್ಟಿಕ್ಕುವ ಮೂಲಕ ತನ್ನ ಹುಟ್ಟನ್ನು ಪ್ರಕಟಗೊಳಿಸಿ ಮೆಲ್ಲ ಮೆಲ್ಲನೆ ಮುಂದಕ್ಕೆ ಹರಿಯುತ್ತಾಳೆ ಗೋದಾವರೀ. ಆ ಪುಣ್ಯ ಸ್ಥಳದಲ್ಲಿ 2ತಾಸು ಧ್ಯಾನಾಸಕ್ತನಾಗಿದ್ದು ಅಲ್ಲಿಂದ ಕುಶಾವರ್ತವೆಂಬ ವಿಶಾಲ ತಟಾಕದಿಂದ ಶೋಭಿಸುವ ಸ್ಥಳಕ್ಕೆ ಬಂದೆ. ಅಲ್ಲಿ ಕೆಲವು ಪಂಡಿತರೊಡನೆ ಶಾಸ್ತ್ರ ವಿಚಾರದಲ್ಲಿ ಚರ್ಚೆನಡೆಯುತ್ತಿದ್ದಾಗ ಅವರ ಪೈಕೀ ಒಬ್ಬರು ಮಹನೀಯರು ನನಗೆ ಆ ರಾತ್ರಿ ಊಟ-ವಸತಿಗಳನ್ನು ಒದಗಿಸಿದರು. ಒಂದೇ ಸಮನೆ ಕಾಲು ನಡಿಗೆಯಲ್ಲಿ ಪಯಣಿಸಿ ಬಹುವಾಗಿ ಬಳಲಿದ್ದ ನಾನು ಆ ರಾತ್ರಿ ಹೊರ ಜಗುಲಿಯಲ್ಲಿ ಮಲಗಿದವನು ಮರುದಿನ ಮುಂಜಾನೆ ಕಳೆದು ಬಿಸಿಲು ಹೊರಟ ಮೇಲೂ ನಿದ್ದೆಯಿಂದ ಏಳಲಿಲ್ಲ. ಇದನ್ನು ನೋಡಿದ ಆ ಗೃಹಸ್ಥರು :-

ಬ್ರಾಹ್ಮೇ ಮುಹೂರ್ತೇ ಯಾ ನಿದ್ರಾ ಸಾ ಪುಣ್ಯಕ್ಷಯಕಾರಿಣೀ
ತಪೋರ್ಥಮಾಗತಸ್ತ್ವಂತು ನಿದ್ರಾಂ ಅದ್ಯಾಪಿ ನೋಜ್ಝಸಿ ॥

ಮುಂಜಾನೆ ಅರುಣೋದಯದ ಸಮಯವಾದರೂ ಎಚ್ಚರಗೊಳ್ಳದೆ ನಿದ್ರಿಸುವುದ ರಿಂದ ಪುಣ್ಯ ಫಲ ನಾಶವಾಗುತ್ತದೆ. ತಪಸ್ಸಿಗಾಗಿ ಬಂದಿರುವ ನೀನಾದರೋ ಇಷ್ಟು ವೇಳೆಯಾಗಿದ್ದರೂ ನಿದ್ದೆಯಿಂದ ಎದ್ದಿಲ್ಲ" ಎಂದು ಹೇಳಿದರು.

ದೇಹಾಲಸ್ಯದಿಂದ ಬಳಲಿದ್ದ ನನಗೆ ಅಲ್ಲಿಯ ವೈದ್ಯರೊಬ್ಬರು ಸ್ನಾನಕ್ಕೆ ಬಿಸಿ ನೀರನ್ನು, ಕುಡಿಯಲು ಹಾಲು ಬೆರೆಸಿ ಕಾಯಿಸಿದ ಗಂಜಿಯನ್ನೂ ನೀಡಿ ಉಪಚರಿಸಿದರು.

ಅಲ್ಲಿಯೇ ನೀಲಾಚಲವೆಂಬಲ್ಲಿ ನೀಲಾದೇವಿಯ ದೇಗುಲವಿದೆ. ಮರು ದಿನದಿಂದಲೇ ಆ ದೇವಿಯ ಸನ್ನಿಧಿಯಲ್ಲಿ ನನ್ನ ಪಂಚಾಕ್ಷರೀ ಪುರಶ್ಚರಣೆ ಪ್ರಾರಂಭವಾಯಿತು. ಮುಂಜಾನೆಯಿಂದ ಸಂಜೆಯ ತನಕ ಜಪಾನುಷ್ಠಾನ, ಸಂಜೆಯ ನಂತರ ಕೇವಲ ಹಾಲಿನ ಸೇವನೆ. ಹಗಲು ನಿರಾಹಾರ. ಹೀಗೆ 14 ವಾರಗಳ ಕಾಲ ನನ್ನ ಅನುಷ್ಠಾನ ಸಾಗಿತು.

ನನಗೆ ಆತಿಥ್ಯ ನೀಡುತ್ತಿದ್ದ ಆ ವೈದ್ಯಮಹಾಶಯರ ಮನೆಯಲ್ಲಿ ಸಂಜೆ ಯಾದ ನಂತರ ಸೇರುತ್ತಿದ್ದ ಸಹೃದಯರ ಕೂಟದಲ್ಲಿ ನನ್ನ ಮೊಟ್ಟ ಮೊದಲ ಅಷ್ಟಾವಧಾನ ಪ್ರದರ್ಶನ ನಡೆಯಿತು.

ನಕ್ತಂ ದಿವಂ ಮಯಿ ಹರಾಂಘ್ರಿಸರೋಜಸಕ್ತೇಽಪ್ಯಷ್ಟಾವಧಾನ ಪಟುತಾ
ಪ್ರಥನೇ ಪ್ರಸಕ್ತೆ ।
ಪ್ರಾದರ್ಶಯಂ ಸದಸಿ ತತ್ರ ಮದೀಯಕಾವ್ಯ ಶಕ್ತಿಂ ನಿರರ್ಗಲ ವಿನಿರ್ಗಲ
ದಾಶುಧಾರಾಂ॥

"ಹಗಲು ರಾತ್ರಿ ಕೇವಲ ಶಿವಧ್ಯಾನ ತತ್ಪರನಾಗಿದ್ದರೂ ಅಷ್ಟಾವಧಾನ ನಿರ್ವಹಿಸ ಬೇಕಾಗಿ ಬಂದಾಗ ಸಭೆಯಲ್ಲಿ ಅಡೆ ತಡೆಯಿಲ್ಲದೆ. ಆಶು ಕವಿತಾಧಾರೆಯನ್ನು ಹರಿಸಿ ನನ್ನ ಕಾವ್ಯ ಶಕ್ತಿಯನ್ನು ಪ್ರದರ್ಶಿಸಿದೆ.

ನನ್ನ ಅಷ್ಟಾವಧಾನ ಪ್ರದರ್ಶನವನ್ನು ನೋಡಿದ್ದ ರಾಮ ಭಾವು ಎಂಬ ರಸಿಕರೊಬ್ಬರ ಒತ್ತಾಯದಿಂದ ನಾಸಿಕಕ್ಕೆ ಹೊರಡಲು ಸಿದ್ಧನಾದೆ. ಅಲ್ಲಿಯ ತನಕ ನನಗೆ ಆಶ್ರಯ ನೀಡಿದ್ದ ವೈದ್ಯಮಹಾಶಯರು ಮತ್ತು ಅವರ ಗೆಳೆಯರು ನನ್ನನ್ನು ಬೀಳ್ಕೊಡುವ ಮುನ್ನ ಸತ್ಕಾರ ಕೂಟ ಏರ್ಪಡಿಸಿದರು. ಹಣದ

ಕಾಣಿಕೆಯನ್ನು ನೀಡಿದರು. ಛಾಯಾ ಚಿತ್ರಗಳನ್ನೂ ತೆಗೆಯಲಾಯಿತು. ಆ ಎಲ್ಲ ಸಹೃದಯರಿಂದ ಬೀಳ್ಕೊಂಡು ರಾಮಭಾವು ಅವರೊಡನೆ ನಾಸಿಕಕ್ಕೆ ಬಂದು ಅವರ ಮನೆಯಲ್ಲಿ ಕೆಲವು ದಿನಗಳನ್ನು ಕಳೆದೆ.

ತುಂಬ ಶ್ರಮದಿಂದ ಬಳಲಿದ್ದ ನನ್ನ ದೇಹಕ್ಕೆ ಆರೈಕೆ ದೊರಯಿತು. ರಸಿಕರೂ ವಿದ್ವಾಂಸರೂ ಆಗಿದ್ದ ಅನೇಕರ ಪರಿಚಯ ಉಂಟಾಗಿ ವಿಶ್ವಾಸ-ಸ್ನೇಹ ಬೆಳೆಯಿತು. ಚದುರಂಗದ ಆಟ ಮತ್ತು ಇತರ ವಿನೋದಗಳಿಂದ ದಿನಗಳು ಕಳೆದುದೇ ತಿಳಿಯಲಿಲ್ಲ.

ತಪಸ್ಸಿಗೆ ಅನುಕೂಲವಾದ ಸ್ಥಳದ ಬಗ್ಗೆ ರಾಮಭಾವು ಅವರನ್ನು ಮೇಲಿಂದ ಮೇಲೆ ವಿಚಾರಿಸುತ್ತಲೇ ಇದ್ದೆ. ಆದರೆ ನನ್ನನ್ನು ತಮ್ಮ ಮನೆಯಿಂದ ಬೀಳ್ಕೊಡಲು ಇಷ್ಟವಿಲ್ಲದ ಅವರು ವಿಷಯವನ್ನು ಕಿವಿಗೆ ಹಾಕಿ ಕೊಳ್ಳಲೇ ಇಲ್ಲ. ಇದು ನನ್ನ ರಿವಿ ಬಂದಮೇಲೆ ನಾ ಕಾ ನಗರದಲ್ಲಿರುವ ಅವರ ಮನೆಯಿಂದ ಹೊರಟು ನಗರದ ಹೊರ ವಲಯದಲ್ಲಿ ಯೋಗ್ಯವಾದ ಸ್ಥಳವನ್ನು ಅರಸಲು ಆರಂಭಿಸಿದೆ. ಹಾಗೆಯೇ ಸುತ್ತಾಡುತ್ತ ನಗರದ ಜನ ಜಂಗುಳಿಯಿಂದ ದೂರವಾದ ಲಕ್ಷ್ಮಣ ದೇವಾಲಯವಿರುವ ಪ್ರದೇಶಕ್ಕೆ ಬಂದೆ. ಕುತೂಹಲದಿಂದ ನೋಡುತ್ತ ದೇವಾಲಯದ ಹೊರ ಪೌಳಿಯನ್ನು ಪ್ರವೇಶಿಸಿದೆ.

ನಾನಿನ್ನೂ ಒಳಗೆ ಕಾಲಿಡುತ್ತಿದ್ದೇನೆ ಎನ್ನುವಾಗಲೇ ಪಟಾತ್ತನೆ ಬಿರುಗಾಳಿಯಂತೆ ನನ್ನ ಮೇಲೆ ಎರಗಿದ ಆ ದೇಗುಲದ ಅರ್ಚಕ ತೀರ ಕೆಟ್ಟ ಶಬ್ದಗಳಿಂದ ನನ್ನನ್ನು ನಿಂದಿಸುತ್ತ ನನ್ನನ್ನು ಮನಬಂದಂತೆ ಥಳಿಸಿ ಅರೆಜೀವವನ್ನಾಗಿ ಮಾಡಿಬಿಟ್ಟ. ಅಷ್ಟಕ್ಕೇ ಬಿಡದೆ ಆ ರಕ್ಕಸನು ನನ್ನ ರಟ್ಟೆಗೆ ಕೈ ಹಚ್ಚಿ ಬಲಾತ್ಕಾರವಾಗಿ ಎಲ್ಲಿಗೋ ನನ್ನನ್ನು ಸೆಳೆದೊಯ್ಯ ತೊಡಗಿದ. ಯಾಕಾಗಿ ನನ್ನ ಮೇಲೆ ಈ ಬಗೆಯ ದೌರ್ಜನ್ಯ-ದುರಾಕ್ರಮಣ ನಡೆಯುತ್ತಿದೆಯೆಂಬುದು ಸ್ವಲ್ಪವೂ ಅರ್ಥವಾಗದೆ ಭ್ರಾಂತಿ ಗೊಳಗಾದ ನಾನು ದೀನನಾಗಿ ಇವೆಲ್ಲವನ್ನೂ ಸಹಿಸಿಕೊಳ್ಳಬೇಕಾಯಿತು. ನಾನು ಮಾತನಾಡುವುದಕ್ಕೂ ಆಸ್ಪದ ಕೊಡದೆ ಆ ದುರಾತ್ಮನು ನನ್ನನ್ನು ಬಡಿಯುತ್ತಲೇ ಎಳೆದೊಯ್ಯುವುದನ್ನು ಮುಂದುವರಿಸಿದ.

ಅವನ ಉದ್ದೇಶ ನನ್ನನ್ನು ಅಲ್ಲಿಯ ಗ್ರಾಮಾಧಿಕಾರಿಯ ಮುಂದೆ ಕೊಂಡೊಯ್ಯುವುದಾಗಿತ್ತು. ಆದರೆ ಮಧ್ಯದಾರಿಯಲ್ಲಿಯೇ ನನ್ನ ಪರಿಚಯ ಚೆನ್ನಾಗಿರುವ ಸಾಧುಗಳೊಬ್ಬರು ಅಕಸ್ಮಾತ್ ಎದುರಾದರು. ಪರಿಸ್ಥಿತಿಯನ್ನು ನೋಡಿ

ಒಮ್ಮೆ ಸ್ತಬ್ಧರಾಗಿ ನಿಂತ ಅವರು ಆ ಅರ್ಚಕನ ಈ ಉಪದ್ವ್ಯಾಪವನ್ನು ಪ್ರತಿಭಟಿಸಿ ನಾನು ಯಾರೆಂಬ ವಿವರವನ್ನು ಆತನಿಗೆ ತಿಳಿಸಿದರು. ನನ್ನನ್ನು ಅವನ ಹಿಡಿತದಿಂದ ಬಿಡಿಸಿದರು. ಈ ಸಂದರ್ಭದ ಹಿನ್ನೆಲೆ ಹೀಗಿದ್ದಿತು:- ಸ್ವಲ್ಪ ಮುಂಚೆ ಆ ದೇವ ವಿಗ್ರಹದ ಒಡವೆ-ವಸ್ತುಗಳನ್ನು ಶುದ್ಧಿಗೊಳಿಸಲು ಹೊರಗಡೆಗೆ ತಂದಿಟ್ಟ ಆ ಅರ್ಚಕ ಪುನಃ ದೇಗುಲದ ಒಳಗೆ ಹೋಗಿ ಹೊರಕ್ಕೆ ಬಂದು ನೋಡಿದಾಗ ಕೆಲವು ವಸ್ತುಗಳು ಕಾಣೆಯಾಗಿದ್ದವು. ಅದನ್ನು ಯಾರೋ ಕದ್ದು ಒಯ್ದಿರಬೇಕೆಂದೂ, ಉಳಿದವುಗಳನ್ನೂ ಅಪಹರಿಸಲು ಆ ಕಳ್ಳ ಇನ್ನೊಮ್ಮೆ ಬಂದೇ ಬರುವನೆಂದೂ ಯೋಚಿಸಿದ ಆ ಅರ್ಚಕ ದೇವಾಲಯದ ಮೂಲೆಯಲ್ಲಿ ಅಡಗಿ ನಿಂತು ಹೊಂಚು ಹಾಕುತ್ತಿದ್ದ. ಅದೇ ವೇಳೆಗೆ ಸರಿಯಾಗಿ ಅಲ್ಲಿಗೆ ಬಂದ ನನ್ನನ್ನೇ ಕಳ್ಳನೆಂದು ನಿರ್ಧರಿಸಿ ಹಿಂದು ಮುಂದಿನ ವಿಚಾರ-ವಿವೇಚನೆಯಿಲ್ಲದೆ ನನ್ನ ಮೇಲೆ ಆಕ್ರಮಣ ಮಾಡಿ ದೌರ್ಜನ್ಯ ನಡೆಸಿದ್ದ.

ಈ ಪ್ರಸಂಗದಲ್ಲಿ ನಾನು ಅನುಭವಿಸಿದ ಮಾನಸಿಕ ಚಿತ್ರಹಿಂಸೆಯು ನೋವು ದೇಹದ ಮೇಲೆ ಆದ ಪ್ರಬಲ ಆಘಾತದ ಯಾತನೆಗಿಂತ ತೀವ್ರವೆನಿಸಿತು. ಆತನೇನೋ ನನ್ನ ಬಗ್ಗೆ ನಿಜವಾದ ವಿವರಗಳನ್ನು ತಿಳಿದಮೇಲೆ ತನ್ನ ಕೃತ್ಯಕ್ಕಾಗಿ ಪಶ್ಚಾತ್ತಾಪ ವ್ಯಕ್ತಪಡಿಸಿದ. ಆದರೆ ಅದರಿಂದ ನನ್ನ ಮನಸ್ಸು ಸಮಾಧಾನ ಹೊಂದಲಿಲ್ಲ. ತೀವ್ರ ಸಂತಾಪಕ್ಕೆ ಗುರಿಯಾದ ನನ್ನ ಮುಖದಿಂದ ಈ ಶಾಪವಾಣಿ ಹೊರ ಬಂದು ಬಿಟ್ಟಿತು:-

ಧ್ವಸ್ತಪ್ರಧ್ವಸ್ತಮನುಜಾ ಕ್ಷತವಿಕ್ಷತವಿಗ್ರಹಾ ।
ಕೀರ್ಣಪ್ರಕೀರ್ಣ ಪರ್ಯಂತಾನಾಸಿಕೇಽಯಂ ಭವಿಷ್ಯತಿ ॥

'ಈ ನಾಸಿಕದ ನಿವಾಸಿಗಳು ಧೂಳೀಪಟವಾಗಿ ಹೋಗುತ್ತಾರೆ. ನುಚ್ಚುನೂರಾಗುವಂತೆ ಈ ನಾಸಿಕದ ಸ್ವರೂಪ ಛಿದ್ರವಾಗಿ ಹೋಗಲಿದೆ"

ನನ್ನ ಈ ಶಾಪ ತಟ್ಟಿ ನಾಸಿಕಾ ಹಾನಿಗೊಳಗಾಯಿತು. ಹಾಗೆಯೇ ನನ್ನ ತಪೋಬಲವೂ ನಾಶವಾಗಿ ಹೋಯಿತು. ಸುಮಾರು 70 ದಿನ ನಾಸಿಕಾದಲ್ಲಿ ಮಾರೀಬೇನೆ ಹರಡಿ ಹಲವರನ್ನು ಬಲಿ ತೆಗೆದುಕೊಂಡಿತು. ಆ ಅರ್ಚಕ ಕುಟುಂಬ ಸಹಿತ ಮಾರೀಜ್ವರಕ್ಕೆ ಬಲಿಯಾಗಿ ಹೋದ. ನನ್ನ ಶಾಪವೇ ಇದಕ್ಕೆಲ್ಲಾ ಕಾರಣವಾಯಿತು. ಅಬ್ಬಾ ! ವಿಧಿ ವಿಲಾಸವೇ ! ಕಳ್ಳ ತನದ ಆರೋಪಕ್ಕೆ ಗುರಿಯಾಗಿ ಮಾಂಡವ್ಯನಂತೆ ನಾನು ಕೂಡ ದೌರ್ಜನ್ಯಕ್ಕೆ ಒಳಗಾದೆ.

ಕೂಡಲೇ ಆ ಪ್ರದೇಶವನ್ನು ತ್ಯಜಿಸಿ ಏಳುವರೆ ಮೈಲಿದೂರದ "ನವಚೂತಿ" ಎಂಬ ಸ್ಥಳಕ್ಕೆ ತಪಸ್ಸು ನಡೆಸಲು ಬಂದೆ. ವಿಷಯಗಳನ್ನೆಲ್ಲಾ ತಿಳಿದುಕೊಂಡ ರಾಮಭಾವು ನಾನಿದ್ದ ನವಚೂತಿ ಸ್ಥಳಕ್ಕೆ ಬಂದು ನನ್ನನ್ನು ಪುನಃ ತಮ್ಮ ಮನೆಗೆ ಕರೆದೊಯ್ಯಲು ಸಾಕಷ್ಟು ಪ್ರಯತ್ನಿಸಿದರು. ಏನಾದರೂ ನಾನು ಈ ಸ್ಥಳಬಿಟ್ಟು ಹೊರಡಲಿಲ್ಲ. ನನ್ನ ನಿಶ್ಚಯ ಧೃಢವಾದುದೆಂಬುದು ಮನವರಿಕೆಯಾದಾಗ ರಾಮಭಾವು ಅವರೇ ಈ ಸ್ಥಳದಲ್ಲಿ ನನ್ನ ತಪಸ್ಸಿಗೆ ಅನುಕೂಲವಾಗುವಂತೆ ಪರ್ಣ ಶಾಲೆಯೊಂದನ್ನು ನಿರ್ಮಾಣ ಮಾಡಿಸಿದರು. ನನ್ನ ರಾತ್ರಿಯ ಆಹಾರಕ್ಕಾಗಿ ಹಾಲು ಮತ್ತು ಗೋಧಿ ಹಿಟ್ಟಿನಿಂದ ತಯಾರಿಸಿದ ತಿನಿಸನ್ನು ಪ್ರತಿದಿನವೂ ಒದಗಿ ಸುವ ವ್ಯವಸ್ಥೆ ಮಾಡಿದರು.

ಈ ನವಚೂತಿ ಆಶ್ರಮದಲ್ಲಿ 70ದಿನಗಳ ಕಾಲ ಹಗಲು ಆಹಾರ-ವ್ಯವಹಾರ ಗಳನ್ನೆಲ್ಲ ಬಿಟ್ಟು ಮೌನದಿಂದ ಏಕಾಸನದಲ್ಲಿ ಸ್ಥಿರವಾಗಿ ಕುಳಿತು ಪಂಚಾಕ್ಷರೀ ಜಪದಿಂದ ಪರಮೇಶ್ವರನನ್ನು ನಿಷ್ಠೆಯಿಂದ ಆರಾಧಿಸಿದೆ. 70ನೆಯ ರಾತ್ರಿ ನನ್ನ ಕನಸಿನಲ್ಲಿ ದಿಗಂಬರನೊಬ್ಬ ಪ್ರತ್ಯಕ್ಷನಾದ.

ಉಪಾಸರ್ಪತ್ ತ್ರಿವಾರಂ ಮಾಂ ಪುರುಷೋ ಧವಲಪ್ರಭಃ ।
ಅಸ್ತಿ ಕಾರ್ಯಂ ಗೃಹಂ ಗಚ್ಛೇತ್ಯಾಂಧ್ರವಾಣ್ಯಾಽಭಣತ್ತದಾ ॥

ಶುಭ್ರ ಕಾಂತಿಯುಳ್ಳ ಆ ವ್ಯಕ್ತಿ 3 ಸಲ ನನ್ನ ಬಳಿಗೆ ಬಂದು "ನೀನು ಮನೆಗೆ ಹೋಗ ಬೇಕು. ಅಲ್ಲಿ ನಿನಗೆ ಕರ್ತವ್ಯ ಕಾದಿದೆ" ಎಂದು ತೆಲುಗು ಭಾಷೆಯಲ್ಲಿ ಆದೇಶ ನೀಡಿದ.

ಕೂಡಲೇ ಎಚ್ಚರಗೊಂಡ ನನಗೆ "ಕನಸಿನಲ್ಲಿ ಕಂಡಾತ ಭಗವಾನ್ ಪರಶಿವನೇ ಎಂಬ ಅರಿವು ಉಂಟಾಯಿತು. ತತ್ಕಾಲಕ್ಕೆ ತಪಸ್ಸನ್ನು ಸಮಾಪ್ತಿಗೊಳಿಸಿದೆ. ನನ್ನ ವ್ರತ ಸಾಧನೆಯ ಉತ್ತರಾಂಗ ರೂಪವಾಗಿ ರಾಮಭಾವು ಅವರು 500ಜನರ ಸಂತರ್ಪಣೆಯನ್ನು ವ್ಯವಸ್ಥೆಗೊಳಿಸಿದರು. ಮುಂದೆ ಭದ್ರಾಚಲಕ್ಕೆ ಪ್ರಯಾಣ ಮಾಡಲಿದ್ದ ನನಗೆ "ಈತನಲ್ಲಿ ಸಾಂಕ್ರಾಮಿಕ ರೋಗದ ಲಕ್ಷಣಗಳೇನೂ ಇಲ್ಲ. ಇವನು ಇತ್ತೀಚೆಗೆ ನಾಸಿಕಾಕ್ಕೆ ಬಂದವನು" ಎಂಬ ದೃಢೀಕರಣ ಪತ್ರವನ್ನೂ ಒದಗಿಸಿ ಕೊಟ್ಟರು. ರೈಲು ಪ್ರಯಾಣಕ್ಕೆ ಟಿಕೆಟ್ ಪಡೆಯಲು ಈ ಅಧಿಕೃತ ದಾಖಲೆ ಬೇಕೇ ಬೇಕು.

ಅಲ್ಲಿಂದ ಹೊರಡುವ ಮೊದಲು ತಂದೆಯವರಿಗೆ ಪತ್ರ ಬರೆದು :-

"ತಮ್ಮನಾದ ಶಿವರಾಮನೊಡನೆ ನೀವು ಸಿಂಹಚಲಕ್ಕೆ ಬನ್ನಿ. ಹೈದರಾಬಾದ್ ನಗರದಲ್ಲಿ ನಾವು ಸಂಧಿಸೋಣ. ನಾನು ಮನೆಗೆ ಬರಬೇಕೆಂದು ಬಲವಂತ ಮಾಡಬೇಡಿ. ನಮ್ಮ ಹುಟ್ಟು - ಬದುಕುಗಳು ತಪಸ್ಸಿಗಾಗಿಯೇ ಹೊರತು ಹೆಂಗೆಳೆಯರೊಡನೆ ಪ್ರೇಮಾರಾಧನೆ ನಡೆಸುವುದಕ್ಕೆ ಅಲ್ಲ." ನನ್ನ ಪತ್ರದಂತೆ ತಂದೆಯವರು ಶಿವರಾಮನೊಡನೆ ಸಿಕಂದರಾಬಾದಿನಲ್ಲಿ ನನ್ನನ್ನು ಕೂಡಿ ಕೊಂಡರು.

ತಪಸ್ಸಿಗೋಸ್ಕರ ಕಾಶಿಗೆ ಮಕ್ಕಳನ್ನು ಕರೆದೊಯ್ಯಲು ಸಿದ್ಧರಾಗಿ ತಂದೆಯವರು ಬಂದಿದ್ದಾರೆಂದು ನಾನು ಎಣಿಸಿದ್ದೆ. ಆದರೆ ನನ್ನ ಊಹೆ ತಪ್ಪಾಗಿತ್ತೆಂಬುದು ನಂತರ ತಿಳಿಯಿತು. "ಸಿಕಟಾ" ರೈಲು ನಿಲ್ದಾಣವನ್ನು ತಲುಪಿದಾಗ ನನ್ನ ತಂದೆಯವರು ಮೆಲ್ಲು ನುಡಿಯಲ್ಲಿ ಹೇಳಿದರು :- "ಕರುಣಾಮಯನಾದ ರುದ್ರನು ನಿನ್ನಲ್ಲಿ ಮಹತ್ತರ ತೇಜಸ್ಸನ್ನು ನೆಲೆಗೊಳಿಸಿದ್ದಾನೆ. ನೀನು ಮನೆಗೆ ಹೋಗಿ ಪುತ್ರವಂತನಾಗಬೇಕೆಂಬುದೇ ನಿನಗೆ ಕಂಡ ಸ್ವಪ್ನದ ಸಂದೇಶ."

ತಮ್ಮ ಮೂವರು ಗಂಡು ಮಕ್ಕಳಲ್ಲಿಯೂ ವಂಶಾಭಿವೃದ್ಧಿಗಾಗಿ ಇದುವರೆಗೆ ಸಂತಾನ ಪ್ರಾಪ್ತಿಯನ್ನು ಕಾಣದೆ ಕಾತರಗೊಂಡಿರುವ ತಂದೆಯವರ ಅಭೀಷ್ಟ ನೆರವೇರಿಸುವುದು ನನ್ನ ಕರ್ತವ್ಯ" ಎಂದು ನಿರ್ಧರಿಸಿದೆ. ಹಿಂದೆ ದುರ್ಗಾ ಮಂದಿರದಲ್ಲಿ ನನ್ನ ಸಲಹೆಯಂತೆ ಸೂರ್ಯ ನಾರಾಯಣ ಯೋಗಿಗಳು ತಂದೆಯವರಿಗೆ ಬರೆದಿದ್ದ ಪತ್ರವನ್ನು ಈಗ ತಂದೆಯವರು ನನಗೆ ತೋರಿಸಿದರು. ಆದರೆ ಏನಾಶ್ಚರ್ಯ ! ಹಳದಿ ಬಣ್ಣದ ಕಾಗದದಲ್ಲಿ ಆ ಪತ್ರ ಬರೆಯಲಾಗಿತ್ತೆಂಬುದು ನನಗೆ ಖಚಿತವಾಗಿ ಗೊತ್ತು. ಆದರೆ ತಂದೆಯವರ ಕೈಯ್ಯಲ್ಲಿರುವ ಅದೇ ಪತ್ರ ಈಗ ಬಿಳಿಯ ಬಣ್ಣದಲ್ಲಿದೆ. ಅಷ್ಟೇ ಅಲ್ಲ ! ನನ್ನ ದೇಹದ ಉತ್ತರಾರ್ಧ ಈ ಪತ್ರದಲ್ಲಿ ಸೀಸದ ಕಡ್ಡಿಯಿಂದ ಚಿತ್ರಿತವಾಗಿದೆ. ಇದಂತೂ ಕಾಶಿಯಿಂದ ಕಾಗದ ಅಂಚೆಗೆ ಹಾಕುವಾಗ ಇರಲೇ ಇಲ್ಲ. ಕಾರಣಗಳನ್ನು ಊಹಿಸಲಾಗದ ಈ ವಿಷಯಗಳು ಇಂದಿಗೂ ಒಗಟಾಗಿಯೇ ಉಳಿದಿವೆ.

ಪ್ರಕರಣ-7

ಭುವನೇಶ್ವರ-ಪುತ್ರಜನ್ಮ-ರಾಜಶಿಷ್ಯಲಾಭ

"ಅಹೋ ನವನವಾಶ್ಚರ್ಯನಿರ್ಮಾಣೇ ರಸಿಕೋ ವಿಧಿಃ
(ಸೃಷ್ಟಿಕರ್ತನು ಹೊಸಹೊಸ ವಿಸ್ಮಯ ಜಾಲ ನಿರ್ಮಾಣದಲ್ಲಿ ತುಂಬಾ ರಸಿಕ)
(ಕಥಾ ಸರಿತ್ಸಾಗರ)

ದಿಗ್ವಾಸಸಂ ಗತವ್ರೀಡಂ ಜಟಿಲಂ ಧೂಳಿಧೂಸರಂ ।
ಪುಣ್ಯಾಧಿಕಾ : ಪ್ರಪಶ್ಯಂತಿ ಗಂಗಾಧರಮಿವಾತ್ಮಜಂ ॥

"ದಿಗಂಬರನಾಗಿ ಲಜ್ಜೆಯನ್ನು ಹೊಡೆದಟ್ಟಿ ಮಲಿನ ದೇಹಿಯಾದ ಜಟಾಧಾರಿ ಗಂಗಾಧರನನ್ನು ತನ್ನ ಮಗನಾಗಿ ಕಾಣುವುದು ತುಂಬಾ ಪುಣ್ಯಶಾಲಿಗಳಿಂದ ಮಾತ್ರ ಸಾಧ್ಯ.

"ಅಹೋ ಸಹಂತೆ ಚಿತ ನೋ ಪರೋದಯಂ"
(ಬೇರೆಯವರ ಏಳಿಗೆಯನ್ನು ಕಂಡು ಸಹಿಸಲಾರರಲ್ಲವೆ ?)

ನಾನು ಮನೆ ಸೇರುತ್ತಿದ್ದಂತೆಯೇ ನನ್ನ ಪತ್ನಿಯೂ ತವರು ಮನೆಯಿಂದ ಬಂದಳು. ನಾನು 4 ತಿಂಗಳಕಾಲ ಮನೆಯಲ್ಲಿಯೇ ಇದ್ದೆ. ಗರ್ಭಿಣಿಯಾದ ನನ್ನ ಹೆಂಡತಿ ಮೊದಲ ಹೆರಿಗೆಗಾಗಿ 5ನೇ ತಿಂಗಳಲ್ಲಿ ತವರು ಮನೆಗೆ ಹೊರಡಲು ಸಿದ್ಧಳಾದಳು. ತಪಸ್ಸಿನ ವಿಷಯದಲ್ಲಿ ನನ್ನ ಅಂತರ್ಯವನ್ನೆಲ್ಲಾ ಕೇಳಿಕೊಂಡ ಅವಳು ಮನಃಪೂರ್ವಕ ಒಪ್ಪಿಗೆ ನೀಡಿದಳು.

ನಂತರ ತಂದೆಯವರ ಆಶೀರ್ವಾದ ಪಡೆದು ಹೊರಟ ನಾನು ಈ ಸಲ ಬಂದು ಸೇರಿದ್ದು ಓಢ್ರದೇಶದ ಸುಪ್ರಸಿದ್ಧ ಶಿವಕ್ಷೇತ್ರ ಭುವನೇಶ್ವರವನ್ನು. ದಾರಿಯಲ್ಲಿ ನಂದಿ ಗ್ರಾಮಕ್ಕೆ ಹೋದೆ. ಕೃಷ್ಣ ನಾಯಕನ ವಾರ್ಷಿಕ ಸಂಭಾವನೆಯ ಮೊತ್ತ ಕೈಸೇರಿ ಪ್ರಯಾಣದ ಖರ್ಚಿಗೆ ಅನುಕೂಲವಾಯಿತು. ನನ್ನಿಂದ ಮಂತ್ರ ದೀಕ್ಷೆ ಪಡೆದಿದ್ದ ನನ್ನ ಸಹೋದರನ ಭಾವ ರಾಮಶಾಸ್ತ್ರಿ ಮತ್ತು ನಮ್ಮ ತಂದೆಯವರ ಸೋದರ ಮಾವನ ಮಗ ಲಕ್ಷ್ಮೀನಾರಾಯಣಶಾಸ್ತ್ರಿ (ಇವರೇ ಅಯ್ಯಲ ಸೋಮಯಾಜಿ ಲಕ್ಷ್ಮೀನಾರಾಯಣ ಕವಿಗಳು. ಶಿವಕಥಾ ಸುಧಾರಸವೆಂಬ ಹೆಸರಿನ ಆಂಧ್ರಕಾವ್ಯ ರಚಿಸಿದವರು) ನಿಷ್ಠೆಯಿಂದ ತಪಸ್ಸು ನಡೆಸುವ ಉದ್ದೇಶವಿಟ್ಟುಕೊಂಡು ನನ್ನೊಡನೆ ಬಂದಿದ್ದರು.

ತಪಸ್ಸನ್ನು ಪ್ರಾರಂಭಿಸುವ ಮುಂಚೆ ಮಹಾಭಾರತ ಪಠನ ನಡೆಯಿತು. ತಪಸ್ಸಿಗಾಗಿ ಕುಳಿತ ಮೊದಲ ದಿನವೇ ಉಪವಾಸವಿರಲಾರದೇ ಒಬ್ಬರು; ಸತತ ಧೂಮಪಾನ ಬಿಡಲಾಗದೇ ಇನ್ನೊಬ್ಬರು ಹೀಗೆ ತಪಸ್ಸಿನ ಕಠಿಣ ನಿಬಂಧನೆಗೆ ತಮ್ಮ ಚಿತ್ತವನ್ನು ತೊಡಗಿಸಿಕೊಳ್ಳಲಾಗದ ಇಬ್ಬರೂ ತಪೋನಿರ್ಧಾರವನ್ನು ಕೈಬಿಟ್ಟರು.

ನಂತರ ಉಳಿದ ನಾನೊಬ್ಬನೇ ಅನುಷ್ಠಾನವನ್ನು ಮುಂದುವರಿಸಿದೆ;

ಅಕಾರಿ ಭುವನೇಶ್ವರೆ ಸ್ಥಲವರೆ ಯಥಾರ್ಹಂ ಜಪೋಽ-
ಪ್ಯಪಾಠಿ ಲಲಿತಾಂಬಿಕಾಪರಸಹಸ್ರನಾಮಾವಲೀ ।
ಅಲೋಕಮಧು ಮೇಽದದಾತ್ ತ್ರಿಭುವನಾಂಬಿಕಾತ್ವೇಕದಾ
ತದಾಪ್ರಭೃತಿ ಮಾಧುರೀ ಕೃತಿಷು ಮೇ ದರೀದೃಶ್ಯತೇ ॥

ಕ್ಷೇತ್ರಶ್ರೇಷ್ಠವೆನಿಸಿರುವ ಭುವನೇಶ್ವರದಲ್ಲಿ ಜಪಾನುಷ್ಠಾನದ ಜೊತೆಗೆ ಲಲಿತಾ ಸಹಸ್ರ ನಾಮಾವಳಿಯನ್ನು ಪಠಿಸುತ್ತ ಬಂದೆ. ಒಮ್ಮೆ ಮೂರು ಲೋಕದ ಒಡೆಯಳಾದ ಅಂಬಿಕೆಯು ನನಗೆ ದಿವ್ಯಮಧುವನ್ನು (ಜೇನು) ನೀಡಿದಳು. ಅಲ್ಲಿಂದ ಮುಂದೆ ನನ್ನ ರಚನೆಗಳು ಮಾಧುರ್ಯ ಪೂರ್ಣವಾಗಿರುವುದನ್ನು ಕಾಣಬಹುದು. *

ಆ ಸಂದರ್ಭದಲ್ಲಿ 70 ವರ್ಷವಯಸ್ಸಿನ ಸ್ಥಳೀಯ ವೃದ್ಧೆಯೊಬ್ಬರಿಗೆ ನನ್ನ ಸಂಬಂಧವಾಗಿ ಕಂಡ ಕನಸಿನ ವಿವರ ಹೀಗಿದೆ:-

---

* ವಾಸಿಷ್ಠಮುನಿಗಳು ಶ್ಲೋಕದ ಉತ್ತರಾರ್ಧದಲ್ಲಿ ಸಂಕ್ಷಿಪ್ತವಾಗಿ ಹೇಳಿರುವ ದೇವೀ ಅನುಗ್ರಹ ವಿಶೇಷದ ವಿವರಗಳು ಹೀಗಿವೆ :- ಗಣಪತಿ ಮುನಿಗಳು 9 ವಾರ ಕಾಲ ಪ್ರತಿರಾತ್ರಿ 9ಸಲ ಲಲಿತಾಸಹಸ್ರನಾಮ ಪಾರಾಯಣ, ಹಗಲು ಜಪಾನುಷ್ಠಾನಗಳನ್ನು ಶ್ರದ್ಧೆ-ನಿಷ್ಠೆಗಳಿಂದ ನಡೆಸಿದರು. 9 ವಾರ ಪೂರ್ತಿಯಾಗುವ ದಿನ ಅವರಿಗೆ ದಿವ್ಯದರ್ಶನವೊಂದು ಉಂಟಾಯಿತು. "ಹಾಲು ಚೆಲ್ಲಿದಂತೆ ಬೆಳದಿಂಗಳು ಹರಡಿದ ಆ ರಾತ್ರಿ ಗಣಪತಿ ಮುನಿಗಳು ಶಿಲೆಯೊಂದರ ಮೇಲೆ ಕುಳಿತು ವಿಶ್ರಾಂತಿ ಪಡೆಯುತ್ತಿದ್ದಾರೆ. ಮಧುರ ಮಂದಹಾಸ ಬೀರುತ್ತ ಎದುರಿಗೆ ಕಾಣಿಸಿಕೊಂಡ ಭುವನೇಶ್ವರೀದೇವಿಯು ಅವರಿಗೆ ಒಂದು ಬಟ್ಟಲು ಜೇನು ತುಪ್ಪವನ್ನು ನೀಡಿದ್ದಾಳೆ. ಅದನ್ನು ಅವರು ಹನಿಯಾಗಿ ಚಪ್ಪರಿಸಿ ಸೇವಿಸುತ್ತಿದ್ದಂತೆ ಅದರ ಸವಿಯ ಜೊತೆಗೆ ದೇವಿಯ ನಸುನಗೆಯ ಕಟಾಕ್ಷ ವೀಕ್ಷಣೆ ಅವರಿಗೆ ಅನಿರ್ವಚನೀಯ ಆನಂದ-ಧನ್ಯತೆಯ ಭಾವನೆಗಳನ್ನುಂಟುಮಾಡುತ್ತಿದೆ.

ಬಹಳ ಹಿಂದೆಯೇ ದಿವಂಗತರಾಗಿದ್ದ ಆ ವೃದ್ಧೆಯ ಪತಿ ಲಂಬೋದರ ದಾಸರು ನಿಜರೂಪದಿಂದ ಆಕೆಯ ಕನಸಿನಲ್ಲಿ ಕಾಣಿಸಿಕೊಂಡು-ನೋಡ ನೋಡುತ್ತಿದ್ದಂತೆಯೇ ಗಣಪತಿಯ ಆಕಾರವನ್ನು ತಳೆದರು. ಇದೇ ರೀತಿ 2-3ಸಲ ಪರ್ಯಾಯವಾಗಿ ಕಾಣಿಸಿಕೊಂಡು "ಈಗ ನಾನು ವಾಸುದೇವ ಆಲಯದ ಪಶ್ಚಿಮದ ಕಡೆ ಇದ್ದೇನೆ" ಎಂದು ಆಕೆಗೆ ಹೇಳಿದರು. ಮರುದಿನ ಬೆಳಿಗ್ಗೆ ತಮ್ಮ ಮಗ ಭಾಸ್ಕರನಿಗೆ ಈ ವಿಷಯ ತಿಳಿಸಿದ ಆ ತಾಯಿಯು ಆತನನ್ನು ದೇಗುಲಕ್ಕೆ ಕಳಿಸಿದರು. "ಬಹುಶಃ ಗಣಪತಿ ದೇವರ ವಿಗ್ರಹ ದೊರೆಯುವ ಸೂಚನೆ ಇದು" ಎಂದು ನಿರ್ಧರಿಸಿ ದೇವಾಲಯಕ್ಕೆ ಬಂದ ಭಾಸ್ಕರದಾಸನು ಅಲ್ಲಿ ನನ್ನನ್ನು ಕಂಡು ಆಕರ್ಷಿತನಾಗಿ ನನ್ನ ಹೆಸರು-ಪರಿಚಯ ಮುಂತಾದ ವಿವರಗಳನ್ನು ವಿಚಾರಿಸಿ ತಿಳಿದುಕೊಂಡ. ನನ್ನ ಹೆಸರು ಗಣಪತಿ ಎಂದೇ ಇದ್ದ ಈ ವಿಚಿತ್ರವನ್ನು ಅವನು ತಾಯಿಗೆ ವರದಿ ಮಾಡಿದ. ಎಲ್ಲವನ್ನೂ ಕೇಳಿದ ಆ ವೃದ್ಧೆಯು "ದೇಗುಲದಲ್ಲಿ ಅನುಷ್ಠಾನ ನಿರತನಾಗಿರುವ ನನ್ನ ಅವಶ್ಯಕತೆಗಳನ್ನು ಪೂರೈಸುತ್ತ ಪರಿಚರ್ಯೆ ನಡೆಸುವಂತೆ" ಮಗನಿಗೆ ಆದೇಶವಿತ್ತಳು. ಸುಸಂಸ್ಕೃತನಾದ ಭಾಸ್ಕರದಾಸನು ತಾಯಿಯ ಆದೇಶವನ್ನು ಪಾಲಿಸಿದ. ಹೀಗೆಯೇ 4ತಿಂಗಳು ಕಳೆಯಿತು.

ಒಂದು ರಾತ್ರಿ ಮಲಗಿದ್ದ ನಾನು ಹಸುವೊಂದು ಗಂಡು ಕರುವನ್ನು ಈಯುತ್ತಿರುವ ಕನಸು ಕಂಡೆ. ಮರುದಿನವೇ ಊರಿನಿಂದ ನನಗೆ ಪುತ್ರೋತ್ಸವವಾಗಿರುವ ಸಂದೇಶವನ್ನುಳ್ಳ ಪತ್ರ ಬಂತು. ಕೂಡಲೇ ಹೊರಟು ಊರಿಗೆ ಬರುವಂತೆ ನನಗೆ ತಿಳಿಸಲಾಗಿತ್ತು.

ಈ ದಿವ್ಯದರ್ಶನ ಮುಗಿದು! ವಾಸ್ತವಿಕತೆಗೆ ಮರಳಿದ ಅವರು ಅದನ್ನು ಮತ್ತೆ ಮತ್ತೆ ಮೆಲಕು ಹಾಕುತ್ತಾರೆ. ಇದೀಗ ನಿಜವಾಗಿಯೂ ಅವರ ತುಟಿಗಳಲ್ಲಿ ಇನ್ನೂ ಅಂಟಿಕೊಂಡಿದ್ದ ಜೇನಿನ ಸವಿ ಅವರ ನಾಲಿಗೆಗೆ ಹತ್ತುತ್ತದೆ. ಈ ಅನುಭವ ಅವರಿಗಾದನಂತರ ಅವರು ರಚಿಸಿದ ಗದ್ಯ-ಪದ್ಯಗಳು ಲಲಿತ-ಮಧುರ ಗುಣವಿಶೇಷದಿಂದ ಕೂಡಿವೆಯಲ್ಲದೆ ಅವರ ಬುದ್ಧಿ ಚಾತುರ್ಯ ಮತ್ತಷ್ಟು ಪ್ರಖರಗೊಂಡಿತು. ದೇವಿಯ ಆ ಮಧುರ ಮಂದಹಾಸ ಮತ್ತು ದಿವ್ಯ ಮಧುವಿನ ಆಸ್ವಾದದ ಅಲೌಕಿಕ ನೆನಪು ಅವರ ಮದುಳಿನಲ್ಲಿ ನಿರಂತರವಾಗಿ ಹರಿಯುತ್ತ ಅವರ ರಚನೆಗಳಲ್ಲಿ ಅದರ ಪ್ರಭಾವ ಹಲವು ಬಗೆಯಲ್ಲಿ ವ್ಯಕ್ತವಾದುದು ಕಂಡು ಬರುತ್ತದೆ)

ನಾನು ಊರಿನಿಂದ ಪ್ರವಾಸ ಹೊರಡುವ ಮುನ್ನ ನನ್ನ ಗರ್ಭಿಣಿ ಹೆಂಡತಿಯನ್ನು ತವರುಮನೆಗೆ ಕಳಿಸುವ ಸಂದರ್ಭದಲ್ಲಿ "ಪುಂಸವನ (ಪುತ್ರಲಾಭಕ್ಕಾಗಿ ನಡೆಸುವ ಧಾರ್ಮಿಕ ಸಮಾರಂಭ-ಹೋಮ-ಹವನ)ವನ್ನು ನಿರ್ವಹಿಸಿದ್ದಾಗಿತ್ತು. ಆದರೆ "ಸೀಮಂತೋನ್ನಯನ" ಆಗಿರಲಿಲ್ಲ. "ಸಧ್ಯದಲ್ಲಿಯೇ ಗ್ರಾಮಕ್ಕೆ ಬರುತ್ತೇನೆ" ಎಂದು ತಂದೆಯವರಿಗೆ ಜವಾಬ್ ಬರೆದು-ಭಾಸ್ಕರದಾಸನನ್ನೂ ಅವರ ತಾಯಿಯವರನ್ನೂ ನಮ್ಮೂರಿಗೆ ಬರಲು ಆಹ್ವಾನ ನೀಡಿ ಭುವನೇಶ್ವರದಿಂದ ಹೊರಟೆ. ಮಾರ್ಗದಲ್ಲಿ ಸುಪ್ರಸಿದ್ಧ ವಿರಜೋಂಬಿಕಾ-ಸಿದ್ಧೇಶ್ವರರ ಕ್ಷೇತ್ರವಾದ ಜಾಜೀಪುರದಲ್ಲಿ ಇಳಿದು ಅಲ್ಲಿ 2ತಿಂಗಳು ಇದ್ದು ತಪಶ್ಚರ್ಯೆ ನಡೆಸಿದೆ. ವಿಶೇಶ ಸಿದ್ಧಿಯ ಲಕ್ಷಣ ಯಾವುದೂ ಅನುಭವಕ್ಕೆ ಬರಲಿಲ್ಲ. ಅಲ್ಲಿಂದ ಹೊರಟು ನೇರವಾಗಿ ಸ್ವಗ್ರಾಮವನ್ನು ಸೇರಿದೆ.

ನಾಸಿಕಾದ ಬಳಿ ನಪಚೂತೀ ಕ್ಷೇತ್ರದಲ್ಲಿ ತಪಸ್ಸು ನಡೆಸಿದಾಗ ನನಗೆ ಉಂಟಾದ ದಿವ್ಯಸೂಚನೆಯಿಂದ ನನಗೆ ಈಶ್ವರನ ಪ್ರಸಾದರೂಪವಾಗಿಯೇ ಗಂಡು ಮಗ ಹುಟ್ಟಿದ್ದಾನೆಂದು ನಿರ್ಧರಿಸಿ ಮಗನಿಗೆ "ಮಹಾದೇವ"ನೆಂದು ಹೆಸರಿಡಲಾಯಿತು. ಮನೆಯಲ್ಲಿ 6ತಿಂಗಳು ಉಳಿದುಕೊಂಡೆ.

ಆಗ್ಯೆ ನನ್ನ ವಯಸ್ಸು 20ವರ್ಷ ತುಂಬಿ ಕೆಲವು ತಿಂಗಳುಗಳಾಗಿತ್ತು. ನಾನು ಪುನಃ ಪ್ರಯಾಣವನ್ನು ನಿರ್ಧರಿಸಿ ಹೆಂಡತಿಯನ್ನು ಮಗ ಮಹಾದೇವನೊಡನೆ ತವರು ಮನೆಗೆ ಬೀಳ್ಕೊಟ್ಟು ಮನೆಯಿಂದ ಹೊರಟು ನವಾಗ್ರಹಾರ (ಕ್ರೊತ್ತಪೇಟ) ಎಂಬಲ್ಲಿಗೆ ಬಂದೆ. ಅಲ್ಲಿ ಸುಮಾರಾಗಿ ನನ್ನ ಸಮವಯಸ್ಕರೇ ಆಗಿದ್ದ ತರುಣರಿಬ್ಬರು ತಪಸ್ಸಿಗಾಗಿ ನನ್ನೊಡನೆ ಹೊರಟರು. ನಾವು ಮೂವರೂ ಅಲ್ಲಿಂದ ಗೋದಾವರೀತೀರದ ಧವಳೇಶ್ವರಕ್ಕೆ ಬಂದೆವು.

ತಪಸ್ಸಿಗಾಗಿ ಅಲ್ಲಿಗೆ ಸಮೀಪವಿರುವ ಒಂದು ದ್ವೀಪವನ್ನು ಸೇರಿದೆವು. ಅಲ್ಲಿ ಬಾಳೆಯಹಣ್ಣುಗಳ ಹೊರತು ಬೇರಾವ ಆಹಾರವೂ ದೊರೆಯುವುದಿಲ್ಲ. ನಾವು ಹಗಲೆಲ್ಲಾ ತಪಸ್ಸು ನಡೆಸಿ ಸಂಜೆಯಾದಮೇಲೆ ಬಾಳೆಹಣ್ಣುಗಳನ್ನು ಆಹಾರವಾಗಿ ಸೇವಿಸತಕ್ಕದ್ದೆಂಬುದು ನಮ್ಮ ನಿಯಮ. ತಪಸ್ಸಿನ ಪ್ರಾರಂಭದ ದಿನವೇ ಹಗಲೆಲ್ಲಾ ನಿರಾಹಾರದಿಂದಿರಲಾರದ ಆ ನನ್ನ ಸ್ನೇಹಿತರಿಬ್ಬರಿಗೂ ತಪಸ್ಸಿನ ಬಗ್ಯೆ ಆಸಕ್ತಿ-ಉತ್ಸಾಹ-ಕಡಿಮೆಯಾಗಿಬಿಟ್ಟಿತು. ಅದರ ಜೊತೆಗೆ ರಾತ್ರಿ ನಿದ್ದೆ ಕೆಡಿಸುವಂತೆ. ಗಾಳಿಗೆ ಬಲವಾಗಿ ತುಯ್ಯುವ ಮರ-ಗಿಡಗಳ ಸಪ್ಪಳ, ನರಿಗಳ ಊಳಿಡುವಿಕೆ ಇವೂ ಸೇರಿಕೊಂಡು ತುಂಬಾ ಭೀತಿಗೆ ಒಳಗಾದ ಅವರಿಬ್ಬರೂ ತಪಸ್ಸಿನ

ಹವ್ಯಾಸ ಕೈಬಿಡಲು ನಿರ್ಧರಿಸಿದರು. ಅವರನ್ನು ಬೀಳ್ಕೊಟ್ಟು ಆ ಏಕಾಂತವಲ್ಲಿ ನಾನೊಬ್ಬನೇ 1ವಾರ ಶಿವ ಪಂಚಾಕ್ಷರೀ ಜಪಾನುಷ್ಠಾನ ನಡೆಸಿದೆ.

ಆ ದಿನಗಳಲ್ಲಿ ಕೇವಲ ಬಾಳೆಹಣ್ಣುಗಳೇ ನನ್ನ ಆಹಾರ. ಹಿಂಗಲಾರದ ಹಸಿವೆಯಿಂದಾಗಿ ಬಾಳೆಯಹಣ್ಣಿನ ಸಿಪ್ಪೆಗಳನ್ನೂ ತಿಂದು ಮುಗಿಸುತ್ತಿದ್ದೆ. ಅದರ ಫಲವಾಗಿ ರಕ್ತಭೇದಿ ಕಾಹಿಲೆ ಹತ್ತಿಕೊಂಡಿತು. ತಪಸ್ಸನ್ನು ನಿಲ್ಲಿಸಿ ಅಲ್ಲಿಂದ ಹೊರಟು ಸಮೀಪದಲ್ಲಿ ನನ್ನ ಮಾವನ ಬಂಧುಗಳ ಮನೆಯನ್ನು ಸೇರಿ ಸ್ವಲ್ಪ ಕಾಲ ಉಳಿದು ಆರೋಗ್ಯ ಸುಧಾರಿಸಿಕೊಂಡೆ. ನಂತರ ಸ್ವಗ್ರಾಮ ಕುಮುದೋಪಲಕ್ಕೆ ವಾಪಸು ಹೊರಟುಹೋದೆ.

ಈ ಸಲ ಮನೆಯಲ್ಲಿ 1ವರ್ಷ ಇದ್ದು ಪುರಾತನ ಗ್ರಂಥಗಳ ಅವಲೋಕನ ಮಾಡಿದೆ. ಪಾಣಿನಿಯ ಗ್ರಂಥವನ್ನು ಪರಿಶೀಲಿಸುತ್ತ ಬೇರೆ ಯಾವ ಸಹಾಯದ ಅಪೇಕ್ಷೆಯಿಲ್ಲದೆ ಪಾತಂಜಲ ಮಹಾಭಾಷ್ಯವನ್ನು ಅಧ್ಯಯನ ಮಾಡಿದೆ. ಮತ್ತೆ ನನ್ನ ಪತ್ನಿಯು ಮಗನೊಡನೆ ತವರುಮನೆಗೂ ನಾನು ತಪಸ್ಸಿಗಾಗಿಯೂ ಹೊರಟಿದ್ದಾಯಿತು.

ಆಂಧ್ರ-ಉತ್ಕಲ ದೇಶಗಳ ನಡುವೆ "ಮಂದಾಸಾ" ಎಂಬ ಚಿಕ್ಕ ಸಂಸ್ಥಾನವಿದೆ. ಅಲ್ಲಿಯ ಮಹಾರಾಜನ ಭೇಟಿಯಾಯಿತು. ಪಂಡಿತ-ರಸಿಕ-ಸಹೃದಯರಿಂದ ತುಂಬಿದ ಆ ರಾಜನ ಆಸ್ಥಾನದಲ್ಲಿ ಅಷ್ಟಾವಧಾನ ನಡೆಸಿದೆ. ಸಾವಧಾನದಿಂದ ವೀಕ್ಷಿಸಿ ಸಂತಸಗೊಂಡ ಮಹಾರಾಜನು ನನ್ನನ್ನು ಸತ್ಕರಿಸಿದ್ದೇ ಅಲ್ಲದೆ "ಜೀವಮಾನ ಪೂರ್ತಿ ಅವರ ಆಸ್ಥಾನದಲ್ಲಿಯೇ ಇರಬೇಕೆಂದು" ಒತ್ತಾಯಮಾಡಿ ಪ್ರಾರ್ಥಿಸಿದ. ಆಗ್ಗೆ ಯುವರಾಜನಾಗಿದ್ದ ಆ ರಾಜನ ಮಗನ ಅಪೇಕ್ಷೆಯಂತೆ ಅವನಿಗೆ ಶಿವ ಪಂಚಾಕ್ಷರೀ ಮಂತ್ರೋಪದೇಶ ನೀಡಿದೆ. ಗುರುಭಕ್ತನಾದ ಆ ರಾಜಪುತ್ರನ ಕೋರಿಕೆಯಿಂದಲೇ ಅವನಿಗೆ ನಾನು ಮಂತ್ರದೀಕ್ಷೆ ಕೊಟ್ಟೆನಾದರೂ ಆಸ್ಥಾನದಲ್ಲಿದ್ದ ಇತರ ವೈಷ್ಣವಗುರುಗಳಲ್ಲಿ ಇದು ಅಸೂಯೆಯ ಕಿಚ್ಚನ್ನು ಉಂಟು ಮಾಡಿತು.

ಅಲ್ಲಿ ಸತ್ಯನಾರಾಯಣ-ವೆಂಕಟರಾಯ-ಕಾಶೀನಾಥರೆಂಬ ಮೂವರು ನನಗೆ ಕಾಶೀಯಾತ್ರೆಯ ಸಹಚರರಾಗಿ ದೊರೆತರು. ಭಿಕ್ಷಾಟನೆಯಿಂದ ಜೀವಿಸುತ್ತ ಎಲ್ಲ ಬಗೆಯ ನಿಯಮ ಪಾಲನೆಯಲ್ಲಿ ದೃಢಮನಸ್ಸುಳ್ಳವರಾಗಿ ತಪೋವ್ರತವನ್ನು ಚೆನ್ನಾಗಿ ಮೈಗೂಡಿಸಿಕೊಂಡಿದ್ದವರು ಇವರು. ಯಾತ್ರಾಭಿರುಚಿಯೇ ಅವರಲ್ಲಿದ್ದ ಸಂಪತ್ತು.

ಅವರುಗಳೊಡನೆ ಹೊರಟು ಕಾಳೀಘಟ್ಟ (ಕಲ್ಕತ್ತಾ ನಗರ)ವನ್ನು ತಲುಪಿದೆ. ಆ ಮೂವರ ಪೈಕೀ ಸತ್ಯನಾರಾಯಣನಿಗೆ ಒಬ್ಬ ಧನಿಕರು ಕಾಶೀಯಾತ್ರೆಗೆ ಬೇಕಾದ ಧನಸಹಾಯ ನೀಡಿದ್ದರಿಂದ ಆತ ಕಾಶಿಗೆ ಹೊರಟುಹೋದ. ಉಳಿದ ಇಬ್ಬರೊಡನೆ ನಾನು ದೋಣಿಯಲ್ಲಿ ಪಯಣಿಸಿ ನವದ್ವೀಪವನ್ನು ಸೇರಿದೆ.

ಪ್ರಕರಣ-8

ನವದ್ವೀಪ-ಕಾವ್ಯಕಂಠಪ್ರಶಸ್ತಿ

"ಚಿತ್ರಂ ಮಹಾನೇಷ ಬತವತಾರಃ ಕ್ವ ಕಾಂತಿರೇಷಾಽಭಿನವೈವ ಭಂಗಿಃ ।
ಲೋಕೋತ್ತರಂ ಧೈರ್ಯಮಹೋ ಪ್ರಭಾವಃ ಕಾಪ್ಯಾಕೃತಿರ್ನೂತನ
ಏಷ ಸರ್ಗಃ ॥"

ಇದೆಂತಹ ಆಶ್ಚರ್ಯಕರವಾದ ಆವಿರ್ಭಾವ ? ಮಹತ್ತರವಾದ ಈ ಕಾಂತಿಯೇನು! ತೀರ ಹೊಸದಾದ ಈ ನಿಲುವೇನು! ಅಲೌಕಿಕ ಧೈರ್ಯ-ಪ್ರಭಾವಗಳೇನು! ನಿಜವಾಗಿಯೂ ಈ ಆಕಾರವೊಂದು ಹೊಸ ಸೃಷ್ಟಿಯೇ ಸರಿ.)

"ಅನುಹುಂಕುರುತೇ ಘನಧ್ವನಿಂ ನ ಹಿ ಗೋಮಾಯುರುತಾನಿ ಕೇಸರೀ ।"
(ಮಾಘಃ)

(ಸಿಂಹ ಯಾವಾಗಲೂ ಮೇಘ ಘರ್ಜನೆಯನ್ನು ಅನುಕರಿಸಿ ಹುಂಕಾರ ಮಾಡುತ್ತದೆಯೇ ಹೊರತು ನರಿಯಂತೆ ಊಳಿಡುವುದಿಲ್ಲ.)

ನಾನು ಅನೇಕ ವರ್ಷಗಳಿಂದ ದೇಶ ಸಂಚಾರ ಮಾಡುತ್ತ ಬೇರೆ ಬೇರೆ ಕಡೆಯ ಜನರ ರೀತಿ ನೀತಿಗಳು-ಸಾಮಾಜಿಕ-ಪ್ರಾಪಂಚಿಕ ವಿಷಯಗಳ ಅನುಭವ ಉಳ್ಳವನೆಂದು ಭಾವಿಸಿಕೊಂಡಿದ್ದೆ. ಆದರೆ ನವದ್ವೀಪದಲ್ಲಿ ನನಗೆ ಆದ ಅನುಭವ ತೀರಾ ಹೊಸ ಪರಿಯದು. ಅಲ್ಲಿಯ ವ್ಯಾಕರಣ ಪಾಠಶಾಲೆಗೆ ಹೋಗುವದಾರಿ ಯಾವುದೆಂದು ಎದುರಿಗೆ ಬಂದವರನ್ನೆಲ್ಲಾ ಪ್ರಶ್ನಿಸಿದರೂ ಯಾರೊಬ್ಬರೂ ಉತ್ತರವನ್ನೇ ಕೊಡಲಿಲ್ಲ. ಹಾದು ಹೋಗುವವರನ್ನು ಹಿಂಬಾಲಿಸಿ ವಿಚಾರಿಸಿದರೆ ಅವರೂ ಸಹ ಹಿಂದಿರುಗಿ ನೋಡದೆ ಹಾಗೆಯೇ ಹೊರಟು ಹೋಗುತ್ತಾರೆ. ಆತನನ್ನೇ ಹಿಂಬಾಲಿಸಿ ಇನ್ನೊಮ್ಮೆ ಕೇಳೋಣವೆಂದರೆ ಅದಕ್ಕೂ ಅವಕಾಶವಿಲ್ಲದಂತೆ ಆತ ವೇಗವಾಗಿ ಸರಿದು ಹೋಗಿಬಿಡುತ್ತಾನೆ. ಹೀಗೆ ಅಲ್ಲಿ ವ್ಯಾಕರಣ

ಪಾಠಶಾಲೆ ಇರುವ ಸ್ಥಳವನ್ನು ಪತ್ತೆ ಹಚ್ಚಿ ಅಲ್ಲಿಗೆ ಹೋಗಿ ಸೇರಲು ಒಂದು ಹಗಲು ಕಳೆದು ಅಂತೂ ಕೊನೆಗೊಮ್ಮೆ ಧನ್ಯನಾದೆ ಎಂದುಕೊಳ್ಳುವಂತಾಯಿತು. ಸಂಜೆ ಕಳೆಯುತ್ತಿರುವಾಗ ಮರುಭೂಮಿಯ ಮಧ್ಯೆ ಹಸಿರು ಕಣ್ಣಿಗೆ ಕಾಣಿಸಿ ದಂತೆ ಮೈಥಿಲೀ ಬ್ರಾಹ್ಮಣ ಪಂಡಿತರೊಬ್ಬರು ಎದುರಾದರು. ಉಪಕಾರ ಶೀಲರಾದ ಆ ಸಜ್ಜನರು ನಮ್ಮನ್ನು ಅವರ ವಸತಿಗೆ ಕರೆದೊಯ್ದು ಊಟ ವಸತಿ ಗಳಿಗೆ ಅವಕಾಶಮಾಡಿಕೊಟ್ಟರು. ವಿದ್ವಾಂಸರಾದ ಗುಲಾಬಿ ಝಾ ಎಂಬ ಆ ಮಹಾಶಯರೊಡನೆ ರಾತ್ರಿ ಕಾವ್ಯ-ಅಲಂಕಾರ-ವ್ಯಾಕರಣ ಶಾಸ್ತ್ರಗಳ ಬಗೆಗೆ ಸಂಭಾ ಷಣೆ-ಚರ್ಚೆ ನಡೆಸಿದೆ. ಅಲ್ಲಿ ನಡೆಯಲಿರುವ 'ಹರಿಸಭಾ' ಪಂಡಿತ ಪರಿಷತ್ತಿನ ಅಭ್ಯ ರ್ಥಿಯಾಗಲು ಬೇಕಾದ ಪಾಂಡಿತ್ಯದ ಅರ್ಹತೆ ನನಗಿದೆಯೆಂಬುದು ಆ ಪಂಡಿತರಿಗೆ ಮನವರಿಕೆಯಾಯಿತು.

ಹಿಂದೆ ಕಾಶಿಯಲ್ಲಿ ನಾನಿದ್ದಾಗ ಶಿವಕುಮಾರ ಪಂಡಿತರೆಂಬುವರು ನವ ದ್ವೀಪದಲ್ಲಿ ಜರುಗುವ ಈ ವಿದ್ವತ್ಪರೀಕ್ಷಾ ಪರಿಷತ್ತಿಗೆ ನಾನು ಹೋಗಲೇ ಬೇಕೆಂದು ಪ್ರೇರಣೆಯಿತ್ತು ಪರೀಕ್ಷೆಗೆ ಅಭ್ಯರ್ಥಿಯಾಗಿ ಪ್ರವೇಶ ಪಡೆಯಲು ನನಗೆ ಇರುವ ಅರ್ಹತೆಯ ಬಗ್ಗೆ ಪ್ರಶಂಸಾಪತ್ರ ನೀಡಿದ್ದುದು ಈ ಸಂದರ್ಭದಲ್ಲಿ ಉಪಯೋಗಕ್ಕೆ ಬಂತು. ಆ ಪತ್ರವನ್ನು ವಿದ್ವತ್ಪರಿಷತ್ತಿನ ಕಾರ್ಯನಿರ್ವಾಹಕ ರಾದ ಶಿತಿಕಂಠ ವಾಚಸ್ಪತಿಗಳವರಿಗೆ ಕೊಟ್ಟೆ. ಆ ಪತ್ರದ ಪ್ರಾರಂಭದಲ್ಲಿಯೇ ಶಿವಕುಮಾರ ಪಂಡಿತರು ಉಲ್ಲೇಖಿಸಿದ್ದ ವಾಲ್ಮೀಕಿರಾಮಾಯಣದ "ದೇವಾಸುರ ಸಮೀಕೇಷು ಬಹುಶೋ ದೃಷ್ಟವಿಕ್ರಮ:" (ದೇವ-ದಾನವ ಯುದ್ಧದಲ್ಲಿ ತನ್ನ ಪರಾಕ್ರಮವನ್ನು ಬಹುವಾಗಿ ಮೆರೆದವನು) ಎಂಬ ಹನುಮಂತನ ಪ್ರಶಂಸಾ ಪರ ವಾದ ಶ್ಲೋಕಾರ್ಧವನ್ನು ನೋಡಿಯೇ ಪ್ರಭಾವಿತರಾದ ಶಿತಿಕಂಠ ವಾಚಸ್ಪತಿ ಗಳು ನನ್ನ ಅರ್ಹತೆಯ ಬಗ್ಗೆ ಸಂಪೂರ್ಣ ತೃಪ್ತರಾಗಿ ನನ್ನ ಹೆಸರನ್ನು ಪರೀಕ್ಷಾ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೇರಿಸಿಕೊಂಡರು. ಪರೀಕ್ಷಾ ಪರಿಷತ್ತು ಪ್ರಾರಂಭ ವಾಗುವ ದಿನ ಸಮೀಪಿಸಿತು.

(ಇಲ್ಲಿಂದ ಮುಂದೆ ಈ ಪ್ರಕರಣದ ಕೊನೆಯವರೆಗಿನ ವಿವರಗಳು ಗ್ರಂಥ ಕರ್ತ ಕಪಾಲಿಶಾಸ್ತ್ರಿಗಳವರ ಮಾತುಗಳ ಕನ್ನಡ ಅವತರಣಿಕೆಯಾಗಿವೆ)

ನಮ್ಮ ಈ ಕಥಾನಾಯಕ ಗಣಪತಿ ಶಾಸ್ತ್ರಿ ತೆಳು ಶರೀರದವನಾದರೂ ಒಳ ಗಡೆ ಸಾಹಿತ್ಯ-ಸಾರಸ್ವತ ಸಂಪತ್ತು ತುಂಬಿಕೊಂಡಿದ್ದವನು. ಈ ತೇಜಸ್ವೀ ತರುಣ ವಿದ್ವಾಂಸನು ಜಗತ್ತನ್ನೇ ತೃಣಸಮಾನವಾಗಿ ಪರಿಗಣಿಸುವ ಭಾವವನ್ನು

ವ್ಯಕ್ತಪಡಿಸುತ್ತ ಪರೀಕ್ಷಾಭವನವನ್ನು ಸಮೀಪಿಸಿದ. ವಯಸ್ಸಿನಲ್ಲಿ ಕಿರಿಯನಾದ ಈತ ಒಳಗೆ ಕಾಲಿಡುತ್ತಿದ್ದಂತೆಯೇ ವೇದಿಕೆಯನ್ನು ಅಲಂಕರಿಸಿದ್ದ ಗಂಭೀರ ಆಕೃತಿಯ ವೃದ್ಧಮಹಾಶಯರ ಮೇಲೆ ಕಣ್ಣುಹಾಯಿಸಿದ. ಕುತೂಹಲದಿಂದ ತನ್ನ ಪಕ್ಕದಲ್ಲಿ ಬರುತ್ತಿದ್ದವರನ್ನು ಕೋಽಸೌ ಮಹಾಶಯಃ" (ಈ ಮಹನೀಯರು ಯಾರು?) ಎಂದು ಪ್ರಶ್ನಿಸಿದ. ಈಪ್ರಶ್ನೆ ನೇರವಾಗಿ ಆ ಮಹಾಶಯರ ಕಿವಿಗೇ ಕೇಳಿಸಿತು. ಅವರು ಖ್ಯಾತನಾಮರಾದ ಆಶುಕವಿ ಅಂಬಿಕಾದತ್ತರು. ಅವರು ಈ ಪ್ರಶ್ನೆಗೆ ತಾವೇ ಉತ್ತರ ನೀಡುವ ನೆಪದಲ್ಲಿ ಪರಿಕ್ಷೆಯನ್ನೇ ಪ್ರಾರಂಭಿಸಿಬಿಟ್ಟರು. ಬಾಲ್ಯದಿಂದಲೇ ಕವಿತಾಸಿದ್ಧಿಯನ್ನು ಮೈಗೂಡಿಸಿಕೊಂಡಿದ್ದ ಗಣಪತಿ ಶಾಸ್ತ್ರಿಯ ಕಾವ್ಯ ಚಮತ್ಕಾರ-ಸಾಮರ್ಥ್ಯಗಳನ್ನು ಸ್ಫುಟವಾಗಿ ತೋರಿಸುವ ರಸಮಯವಾದ ಘಟನೆಗಳ ವಿವರ ಇಲ್ಲಿದೆ :—

ಗಣಪತಿ ಶಾಸ್ತ್ರಿಯ ಪ್ರಶ್ನೆಗೆ ಅಂಬಿಕಾದತ್ತರು ಶ್ಲೋಕಾರ್ಧದ ಮೂಲಕ ಹೀಗೆ ಉತ್ತರ ನೀಡಿದರು :—

"ಸತ್ವರಕವಿತಾಸವಿತಾ "ಗೌಡೋಽಹಂ ಕಶ್ಚಿದಂಬಿಕಾದತ್ತಃ"
(ಆಶು ಕವಿತಾ ರಚನೆಯಲ್ಲಿ ಅಗ್ರಗಣ್ಯನೂ, ಗೌಡದೇಶೀಯನೂ, ಆದ ಅಂಬಿಕಾದತ್ತನೆಂಬುವನು ನಾನು.)

ಆಶುಕವಿತೆ ರಚನೆಯಲ್ಲಿ ತಮಗಿರುವ ಸಾಮರ್ಥ್ಯ, ತನ್ನದೇಶ, ಹೆಸರುಗಳನ್ನು ಪ್ರಾಸಬದ್ಧವಾಗಿ ಅರ್ಧ ಶ್ಲೋಕದಲ್ಲಿ ಅಳವಡಿಸಿ ಹೇಳಿರುವ ಆ ಪಂಡಿತರು ತಾನೂ ಅದೇ ಸಾಮರ್ಥ್ಯ ಹೊಂದಿರುವುದನ್ನು ಪರೀಕ್ಷಿಸಲೆಂದೇ ಹಾಗೆ ಮಾಡಿದ್ದಾರೆ" ಎಂದು ಗ್ರಹಿಸಿದ ಗಣಪತಿ ಶಾಸ್ತ್ರಿ ಒಡನೆಯೇ ಈ ರೀತಿ ಉತ್ತರಿಸಿದ :—

"ಗಣಪತಿರಿತಿ ಕವಿಕುಲಪತಿರತಿದಕ್ಷೋ ದಾಕ್ಷಿಣಾತ್ಯೋಽಹಂ" ॥
(ಕವಿಕುಲ ಶ್ರೇಷ್ಠನೂ, ಸಮರ್ಥನೂ, ದಕ್ಷಿಣದವನೂ ಆದ "ಗಣಪತಿ" ಎಂಬವನು ನಾನು.)

ಹೀಗೆ ಸಮರ್ಥರೀತಿಯಲ್ಲಿ ತನ್ನ ಪರಿಚಯವನ್ನು ಅರ್ಧಶ್ಲೋಕದ ಮೂಲಕ ಮಾಡಿ ಕೊಟ್ಟ ಗಣಪತಿಶಾಸ್ತ್ರಿ ಸಭೆಯೇ ಬೆಚ್ಚೆರಗಾಗುವಂತೆ ಹೇಳಿದ :— "ಭವಾನ್ ದತ್ತ್ಯಃ, ಅಹಂತ್ವೌರಸಃ" ನೀವು ಅಂಬಿಕೆಯ ದತ್ತು ಮಗ ಮಾತ್ರ! ನಾನಾದರೋ ದೇವಿಯ ಹೊಟ್ಟೆಯಲ್ಲಿ ಹುಟ್ಟಿಬಂದವನು.

ಅಂಬಿಕಾದತ್ತರು ಈ ತರುಣ ಕವಿಯನ್ನು ವೇದಿಕೆಗೆ ಆಹ್ವಾನಿಸಿದರು.

ಅಭ್ಯರ್ಥಿಯೊಬ್ಬನ ಪರಿಚಯದ ಸಂದರ್ಭವೇ ಪರೀಕ್ಷೆಯ ಉದ್ಘಾಟನೆಯಾಗಿ ಪರಿಣಮಿಸಿ ಪರೀಕ್ಷೆ ಮುಂದುವರಿಯಿತು. ಪರೀಕ್ಷಕರಾದ-ಆಶುಕವಿ ಅಂಬಿಕಾ ದತ್ತರು ಮೊದಲಿಗೆ ಪದ್ಯಪೂರ್ತಿಯ 2ಸಮಸ್ಯೆಗಳನ್ನು ಇಟ್ಟರು. ಅನುಷ್ಟುಪ್ ಛಂದಸ್ಸಿನ ಈ ಎರಡೂ ಪದ್ಯಗಳ ಕೊನೆಯ ಅರ್ಧದಲ್ಲಿ ಹಸ್ತಪ್ರತಿ ನೋಡಿರಿ. ಸಮಸ್ಯೆಯ ಸರಿಯಾದ ಉತ್ತರ ಅಡಕವಾಗಿರುವಂತೆ ಪದ್ಯದ ಮೊದಲ ಅರ್ಧ ವನ್ನು ಒಡನೆಯೇ ರಚಿಸಿ ಸಮಸ್ಯೆಯನ್ನು ಪೂರ್ಣಗೊಳಿಸಬೇಕು.

1ನೆಯ ಸಮಸ್ಯೆ :-

"ಸ್ತನವಸ್ತ್ರಂ ಪರಿತ್ಯಜ್ಯ ವಧೂಃಶ್ವಶುರಮಿಚ್ಛತಿ।"

(ಎದೆಯ ಮೇಲಿನ ಉಡುಪನ್ನು ಕಳಚಿ ಹಾಕಿದ ಸೊಸೆಯು ಮಾವನನ್ನು ಅಪೇಕ್ಷಿ ಸುತ್ತಾಳೆ) "ನತು ಅನವದ್ಯಚರಿತಾ" ಹೀಗೆ ತೆರೆದ ಎದೆಯುಳ್ಳವಳಾಗಿ ಮಾವನ ಬರುವಿಕೆಯನ್ನು ಅಪೇಕ್ಷಿಸುತ್ತಿದ್ದರೂ ಅವಳು ನೀತಿಗೆಟ್ಟ ಹೆಂಗಸೇನೂ ಅಲ್ಲ.

ಸ್ವಲ್ಪವೂ ವಿಳಂಬಿಸದೆ ಗಣಪತಿಶಾಸ್ತ್ರಿ ಶ್ಲೋಕದ ಮೊದಲರ್ಧವನ್ನು ಹೀಗೆ ರಚಿಸಿ ಹೇಳಿ ಸಮಸ್ಯೆಯನ್ನು ಸಮರ್ಪಕವಾಗಿ ಬಿಡಿಸಿದ.

"ಹಿಡಿಂಬಾ ಭೀಮದಯಿತಾ ನಿದಾಘೇ ಘರ್ಮ ಪೀಡಿತಾ॥"
(ಭೀಮ ಸೇನನ ಪ್ರೇಯಸಿ ಹಿಡಿಂಬೆಯು ಬೇಸಗೆಯ ಪ್ರಖರ ಸೆಖೆಯನ್ನು ತಾಳಲಾರದೆ-ಹಾಗೆ ಮಾಡುತ್ತಾಳೆ)

ಪೂರ್ಣಗೊಂಡ ಶ್ಲೋಕ :-

ಹಿಡಿಂಬಾ ಭೀಮದಯಿತಾ ನಿದಾಘೇ ಘರ್ಮಪೀಡಿತಾ।
ಸ್ತನವಸ್ತ್ರಂ ಪರಿತ್ಯಜ್ಯ ವಧೂಃ ಶ್ವಶುರಮಿಚ್ಛತಿ॥

ತಾತ್ಪರ್ಯ :- ಭೀಮಸೇನನ ಪ್ರೇಯಸಿ ಹಿಡಿಂಬೆಯು ಸೆಖೆಕಾಲದ ಬೇಗೆಯನ್ನು ಸಹಿಸಲಾಗದೆ ಉತ್ತರೀಯವನ್ನು ತೆಗೆದುಹಾಕಿ ಗಾಳಿಗೆ ಎದೆಯೊಡ್ಡುತ್ತಾಳೆ.

"ಭೀಮಸೇನನು ವಾಯುಪುತ್ರನೆಂಬುದು ಪ್ರಸಿದ್ಧವಾದ ವಿಷಯ. ಆದ್ದರಿಂದ ಭೀಮಸೇನನ ಪ್ರೇಯಸಿ ಹಿಡಿಂಬೆಗೆ ವಾಯು (ಗಾಳಿ) ಮಾವನಾಗುತ್ತಾನೆ. ಹಾಗಾಗಿ

ತೆರೆದ ಎದೆಯುಳ್ಳ ಹಿಡಿಂಬೆ ಮಾವನನ್ನು ಅಪೇಕ್ಷಿಸಿದ್ದಾಳೆ ಎಂಬುದರಿಂದ ಅವಳು ಚರಿತ್ರಹೀನಳೆಂದೇನೂ ಸಿದ್ಧವಾಗುವುದಿಲ್ಲ." ಎಂಬುದೇ ಇಲ್ಲಿ ಅಡಗಿರುವ ಅರ್ಥ ಸ್ವಾರಸ್ಯ.

ಇಲ್ಲಿ ಇನ್ನೂ ಒಂದು ವಿಶೇಷವಿದೆ. ಸಮಸ್ಯೆಯನ್ನು ನೀಡಿದ ಪರೀಕ್ಷಕ ಅಂಬಿಕಾದತ್ತರು "ದ್ರೌಪದೀ ಭೀಮದಯಿತಾ" ಹೀಗೆ ಪ್ರಾರಂಭಿಸಿ ಸಮಸ್ಯೆ ಪೂರ್ತಿಯಾಗ ಬೇಕೆಂಬ ನಿರೀಕ್ಷೆ ಇಟ್ಟುಕೊಂಡಿದ್ದರು.ಆದರೆ ಇಲ್ಲಿ ಹಾಗೆ ಹೇಳುವುದು ತೀರಾ ಅಸಮಂಜಸವೆಂಬುದೇ ಗಣಪತಿಯ ಪ್ರತಿಪಾದನೆ. ದ್ರೌಪದಿಯು ಭೀಮನೂ ಸೇರಿದಂತೆ ಪಂಚಪಾಂಡವರ ಪಟ್ಟದರಸಿಯೇ ಹೊರತು ಕೇವಲ 'ಭೀಮಸೇನ ದಯಿತಾ'' ಅಂದರೆ-ಭೀಮಸೇನನೊಬ್ಬನಿಗೆ ಮಾತ್ರ-ಹೆಂಡತಿಯಲ್ಲ. ಅದೂ ಅಲ್ಲದೆ ರಾಜಮಹಿಷಿಯೊಬ್ಬಳು ಸೆಕೆಯ ಪರಿತಾಪಕ್ಕೆ ಒಳಗಾದರೆ ಲಾಮಂಚದ ಬೀಸಣಿಕೆಯಿಂದ ಗಾಳಿ ಬೀಸಿ ತಂಪು ಉಂಟುಮಾಡಲು ಸೇವಕಿಯರು ಸಿದ್ಧರಿರುತ್ತಾರೆ. ಅದು ಬಿಟ್ಟು ಅವಳು ಮೇಲುದುವನ್ನು ಕಳಚಿಹಾಕಿ ತೆರೆದ ಎದೆಯನ್ನು ಗಾಳಿಗೆ ಒಡ್ಡುತ್ತಾಳೆ ಎಂಬ ಮಾತು ರಾಜ ಗಾಂಭೀರ್ಯಕ್ಕೆ-ಅರಮನೆಯ ಪದ್ಧತಿಗಳಿಗೆ ಶೋಭಿಸುವುದಿಲ್ಲ. ಆದ್ದರಿಂದ ಇಲ್ಲಿಯ ಸನ್ನಿವೇಶಕ್ಕೆ ರಕ್ಕಸಕುಲದವಳೂ, ಭೀಮಸೇನನ ಪ್ರೇಯಸಿಯೂ ಆದ ಹಿಡಿಂಬೆಯೇ ತಕ್ಕವಳು" ಎಂದು ನಿರೂಪಿಸಿದ. ಅಷ್ಟೇ ಅಲ್ಲ! ಸಮಸ್ಯೆಯನ್ನು ಕೊಡುವಾಗ "ವಸ್ತ್ರಂ ಪರಿತ್ಯಜ್ಯ" ಎಂಬುದಕ್ಕಿಂತ "ಉತ್ತರೀಯಂ ಪರಿತ್ಯಜ್ಯ" ಎಂಬ ವಾಕ್ಯವನ್ನು ಬಳಸಿದ್ದರೆ ಅದು ಇನ್ನೂ ಹೆಚ್ಚು ಕಾವ್ಯಗುಣಾತ್ಮಕವೂ-ರಂಜಕವೂ ಆಗಿರುತ್ತಿತ್ತೆಂದು ಸೂಚಿಸಿದ.

2ನೇಯಸಮಸ್ಯೆ:-

ವತ್ಸರಸ್ಯೈಕದಾ ಗೌರೀ ಪತಿವಕ್ತ್ರಂ ನ ಪಶ್ಯತಿ ।

(ವರ್ಷದಲ್ಲಿ ಒಮ್ಮೆ ಗೌರೀದೇವಿಯು ತನ್ನ ಪತಿದೇವನ ಮುಖ ನೋಡುವದಿಲ್ಲ)

"ಚತುರ್ಥ್ಯಾಂ ಭಾದ್ರ ಶುಕ್ಲಸ್ಯ ಚಂದ್ರದರ್ಶನಶಂಕಯಾ ॥"

ಭಾದ್ರಪದ ಶುಕ್ಲ ಚೌತಿ-ಅಂದರೆ-ಗಣೇಶ ಚತುರ್ಥಿಯಂದು ಚಂದ್ರದರ್ಶನವಾದೀತೆಂಬ ಕಾರಣಕ್ಕಾಗಿ ಗೌರೀದೇವಿ ಗಂಡನ ಮುಖ ನೋಡುವುದಿಲ್ಲ. ಪೂರ್ಣಗೊಂಡ ಶ್ಲೋಕ :-

ಚತುರ್ಥ್ಯಾಂ ಭಾದ್ರಶುಕ್ಲಸ್ಯ ಚಂದ್ರದರ್ಶನಶಂಕಯಾ ।
ವತ್ಸರಸ್ಯೈಕದಾ ಗೌರೀ ಪತಿವಕ್ತ್ರಂ ನ ಪಶ್ಯತಿ ॥

(ವರ್ಷದಲ್ಲಿ ಒಮ್ಮೆ ಗಣೇಶ ಚೌತಿಯಂದು ಚಂದ್ರದರ್ಶನವಾಗಿಬಿಟ್ಟೀತೆಂಬ ಕಾರಣದಿಂದ ಗೌರೀದೇವಿಯು ಗಂಡನ ಮುಖ ನೋಡುವದಿಲ್ಲ.)

ಅಂದರೆ ;– ಗಣೇಶ ಚೌತಿಯದಿನ ಚಂದ್ರನನ್ನು ನೋಡಿದರೆ ಮಿಥ್ಯಾಪವಾದ ಬರುವುದರಿಂದ ಅಂದು ಚಂದ್ರದರ್ಶನ ಮಾಡಬಾರದು ಎಂಬುದು ಪೌರಾಣಿಕ ಪ್ರತೀತಿ. ಪರಮೇಶ್ವರನು ಜಟೆಯಲ್ಲಿ ಚಂದ್ರನನ್ನು ಧರಿಸಿದ್ದು ಆ ದಿನ ಅವನ ಮುಖ ನೋಡಿದರೆ ಚಂದ್ರದರ್ಶನವೂ ಆಗಿಯೇ ಬಿಡುತ್ತದೆ. ಹಾಗೆಂದೇ ದೇವಿಯು ಆದೊಂದು ದಿನ ಮಾತ್ರ ಗಂಡನ ಮುಖ ನೋಡಲಾರಳು. ಇದು ಈ ಶ್ಲೋಕದ ತಾತ್ಪರ್ಯ.

ಇದಾದಮೇಲೆ ಅಂಬಿಕಾದತ್ತರು ಒಡ್ಡಿದ ಎರಡು ಸಮಸ್ಯೆಗಳು ಶ್ಲೋಕಗಳ ಕೊನೆಯ ಪಾದದಲ್ಲಿ ಇದ್ದು ಅವುಗಳಿಗೆ ತಕ್ಕ ಉತ್ತರಗಳನ್ನು ಶ್ಲೋಕಗಳ ಮೊದಲ 3 ಪಾದಗಳಲ್ಲಿ ಅಳವಡಿಸಿ ಹೇಳಬೇಕು.

3ನೆಯ ಸಮಸ್ಯೆ :

"ಸೂರ್ಯಃ ಶಶಾಂಕೇನ ಸಮಂ ವಿನಷ್ಟಃ ॥"

(ನ ತು ಅಮಾವಾಸ್ಯಾ)

(ಸೂರ್ಯನು ಚಂದ್ರನೊಡನೆ ಅಸ್ತಂಗತನಾಗಿದ್ದಾನೆ.)

(ಆದರೆ ಅಮಾವಾಸ್ಯೆತಿಥಿಯಲ್ಲ).

ಅಮಾವಾಸ್ಯೆಯಂದು ಸೂರ್ಯ-ಚಂದ್ರರಿಬ್ಬರೂ ಒಂದೇರಾಶಿಯಲ್ಲಿ ಇರುತ್ತಾರೆ. ಆದ್ದರಿಂದ ಅಮವಾಸ್ಯೆಯ ರಾತ್ರಿ ತಿಂಗಳಬೆಳಕು ಇಲ್ಲದೆ ಸಂಪೂರ್ಣ ಕತ್ತಲು ಕವಿದಿರುತ್ತದೆ. ಆದರೆ ಮೇಲೆಕಂಡ ಸಮಸ್ಯೆ ಆ ಅರ್ಥದಲ್ಲಿ ಕೊಡಲ್ಪಟ್ಟಿಲ್ಲವಾದ್ದರಿಂದ ಅದಕ್ಕೆ ಬೇರೆ ಸೂಕ್ತವಾದ ಕಾರಣವನ್ನೇ ಹೇಳಬೇಕು.

ಗಣಪತಿಶಾಸ್ತ್ರಿ ಸಮಸ್ಯೆಯನ್ನು ಹೀಗೆ ಪೂರ್ಣಗೊಳಿಸಿದ –

ರಾಹುಸ್ತ್ರಿಕೋಣೇ ಚ ಗುರುಸ್ತೃತೀಯೇ ಕಲತ್ರಭಾವೇ ಚ ಧರಾತನೂಜಃ ।
ಲಗ್ನೇ ಚ ಕೋಷ್ಟೇ ಯದಿ ಬಾಲಕಃ ಸ್ಯಾತ್ ಸೂರ್ಯಃ ಶಶಾಂಕೇನ ಸಮಂ ವಿನಷ್ಟಃ ॥

(ತ್ರಿಕೋಣದಲ್ಲಿ ರಾಹು, 3ನೇ ಭಾವದಲ್ಲಿ ಗುರು, 7ನೇ ಭಾವದಲ್ಲಿ ಕುಜ, ಜನ್ಮ ಲಗ್ನದಲ್ಲಿ ಚಂದ್ರಸಹಿತನಾದ ಸೂರ್ಯ, ಹೀಗೆ ಗ್ರಹಸ್ಥಿತಿ ಇರುವಾಗ ಹುಟ್ಟುವ ಮಗು ಬಾಲಾರಿಷ್ಟದಿಂದ ಕೂಡಲೇ ಸಾವನ್ನು ಅಪ್ಪುತ್ತದೆ.)

ಇಲ್ಲಿ ಒಂದು ವೈಶಿಷ್ಟವಿದೆ :– ಈ ಸಮಸ್ಯೆ ಪೌರಾಣಿಕ ಅಥವಾ ಕಾವ್ಯಾತ್ಮಕ ಚಮತ್ಕಾರದಿಂದ ಕೂಡಿಲ್ಲ. ಕೇವಲ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಪಟ್ಟ ವಿಷಯವನ್ನುಳ್ಳ ಸಮಸ್ಯೆ ಇದು. ಜ್ಯೋತಿಷ್ಯದಲ್ಲಿ ಆಳವಾದ ಪರಿಶ್ರಮವಿಲ್ಲದವರಿಂದ ಈ ಸಮಸ್ಯೆಯನ್ನು ಪೂರ್ಣಗೊಳಿಸುವುದು ಸಾಧ್ಯವಾಗದ ಕೆಲಸ. ಅಂದ ಮೇಲೆ ಈ ವಿದ್ವತ್ಸಭಾ ಪರೀಕ್ಷೆಗೆ ಅಭ್ಯರ್ಥಿಯಾಗಿ ಬರುವ ವ್ಯಕ್ತಿ ಕಾವ್ಯ-ಪುರಾಣ ಅಲಂಕಾರ-ವ್ಯಾಕರಣ-ಜ್ಯೋತಿಷ್ಯ ಮುಂತಾದ ಎಲ್ಲ ಪ್ರಕಾರಗಳಲ್ಲಿಯೂ ವಿಶೇಷ ಪಾಂಡಿತ್ಯ ಪಡೆದುಕೊಂಡಿರಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

4ನೆಯ ಸಮಸ್ಯೆ :–

"ಪಿಪೀಲಿಕಾ ಚುಂಬತಿ ಚಂದ್ರಮಂಡಲಂ ।"

(ಇರುವೆ ಚಂದ್ರಮಂಡಲವನ್ನು ಮುತ್ತಿಕ್ಕುತ್ತದೆ.)

ಗಣಪತಿಶಾಸ್ತ್ರಿ ಮುಂದೆಕಂಡಂತೆ ಇದನ್ನು ಪೂರ್ತಿಮಾಡಿದ :–

ಸತೀವಿಯೋಗೇನ ವಿಷಣ್ಣ ಚೇತಸಃ ಪ್ರಭೋಃ ಶಯಾನಸ್ಯ ಹಿಮಾಲಯೇ ಗಿರೌ।
ಶಿವಸ್ಯ ಚೂಡಾ ಕಲಿತಂ ಸುಧಾಶಯಾ ಪಿಪೀಲಿಕಾ ಚುಂಬತಿ ಚಂದ್ರಮಂಡಲಂ॥

ದಕ್ಷಯಜ್ಞದಲ್ಲಿ ದೇಹ ಸಮರ್ಪಣೆಮಾಡಿಕೊಂಡ ತನ್ನ ಸತಿಯ ವಿಯೋಗದಿಂದ ವಿಷಣ್ಣನಾದ ಶಂಕರನು ಹಿಮಾಲಯದಲ್ಲಿ ನೆಲಕ್ಕೆ ತಲೆಯಾನಿಸಿ ಮಲಗಿರಲು ಆತನ ಜಟೆಯಲ್ಲಿರುವ ಶುಭ್ರಶ್ವೇತ ಚಂದ್ರಬಿಂಬವನ್ನು ಹಾಲು ಎಂದು ಭ್ರಮಿಸಿದ ಇರುವೆ ಅದನ್ನು ಮುತ್ತಿಕ್ಕುತ್ತದೆ.

ಈ ನಾಲ್ಕು ಸಮಸ್ಯೆಗಳಲ್ಲಿ ಜ್ಯೋತಿಷ್ಯಶಾಸ್ತ್ರದ ಆಧಾರವುಳ್ಳ 3ನೆಯ ಸಮಸ್ಯೆಯೊಂದನ್ನು ಬಿಟ್ಟರೆ ಉಳಿದವು ಕೇವಲ ಕಲ್ಪನಾತ್ಮಕ ವಿಷಯಗಳನ್ನೊಳಗೊಂಡಿವೆ. ಪೌರಾಣಿಕ ಪ್ರಸಂಗಗಳನ್ನು ಈ ಕಲ್ಪನಾತ್ಮಕ ಸಮಸ್ಯೆಗಳಿಗೆ ಸರಿ ಹೊಂದಿಸಿ ಅವುಗಳನ್ನು ಪೂರ್ಣಗೊಳಿಸಿ ಅವುಗಳಿಗೆ ವಾಸ್ತವಿಕತೆಯ ಮೆರಗು ಕೊಡುವ ಆಶುಪ್ರತಿಭಾ ಪ್ರದರ್ಶನ ಅದ್ವಿತೀಯವೇ ಸರಿ.

ಒಂದು ರೀತಿಯಲ್ಲಿ ಇದು ಪರಕಾಯ ಪ್ರವೇಶದಂತಹ ಮಹತ್ಸಾಧನೆ ಎನ್ನಬೇಕು. ಪರೀಕ್ಷಕನ ಅಂತರಂಗವನ್ನು ಪ್ರವೇಶಿಸಿ ಅವನ್ನು ಗ್ರಹಿಸಿ ಕ್ಷಣಾರ್ಧದಲ್ಲಿ ತಕ್ಕ ಉತ್ತರ ನೀಡುವ ಸಾಮರ್ಥ್ಯವನ್ನು ಗಣಪತಿಶಾಸ್ತ್ರಿ ಪ್ರದರ್ಶಿಸಿದಾಗ ಅಲ್ಲಿ ಸೇರಿದ್ದ ವಿದ್ವಜ್ಜನ ಸಮೂಹವೇ ಒಂದು ಬಗೆಯ ಸಮ್ಮೋಹಿನಿಗೆ ಒಳಗಾಯಿತೆಂಬುದರಲ್ಲಿ ಆಶ್ಚರ್ಯವೇನು?

ಪರೀಕ್ಷೆ ಮುಂದುವರಿಯಿತು. ವಿಸ್ತಾರವಾದ ವ್ಯಾಖ್ಯಾನ ನೀಡುವ ಬಗ್ಗೆ ಪರೀಕ್ಷಕರು 2 ಶ್ಲೋಕಗಳನ್ನು ಗಣಪತಿಶಾಸ್ತ್ರಿಯ ಮುಂದೆ ಇಟ್ಟರು. ಅದರಲ್ಲಿ ಮೊದಲನೆಯದು :– ರಘುವಂಶ ಕಾವ್ಯದ ಒಂಭತ್ತನೆಯ ಸರ್ಗದ ಏಳನೆಯ ಶ್ಲೋಕ :–

ನ ಮೃಗಯಾಭಿರತಿರ್ನ ದುರೋದರಂ ನ ಚ ಶಶಿಪ್ರತಿಮಾಭರಣಂ ಮಧು ।
ತಮುದಯಾಯ ನ ವಾ ನವಯೌವನಾ ಪ್ರಿಯತಮಾ ಯತಮಾನಮಪಾಹರತ್॥

ಆ ಕಾಲದಲ್ಲಿ ಅಂದರೆ ರಾಮಾಯಣದ ಹಿಂದಿನ ದಿನಗಳಲ್ಲಿ-ಕೂಡ ಮಧು ಸೇವನೆಯ ಚಟ–ಜೂಜಾಟ–ಸುಂದರ ಹೆಣ್ಣುಗಳ ಒಡನಾಟ – ಬೇಟೆಯಮೋಜು ಇವೆಲ್ಲಾ ರಾಜಮನೆತನದವರಲ್ಲಿ ಸರ್ವಸಾಮಾನ್ಯವಾಗಿ ಇದ್ದ ಗೀಳುಗಳು. ರಘುವಂಶದ ತರುಣ ಅರಸು ಅಜನು ಪ್ರಗತಿಸಾಧನೆಯ ಪಥವನ್ನು ಹಿಡಿದು ಮುನ್ನಡೆಯುತ್ತಿದ್ದವನು. ಮಾನವನ ಅಭಿವೃದ್ಧಿಗೆ ಮಾರಕವಾಗಬಲ್ಲ ಈ ಚಟಗಳು ಯಾವುವೂ ಅಜನ ಪ್ರಗತಿಯನ್ನು ಕುಂಠಿತಗೊಳಿಸಲು ಸಮರ್ಥವಾಗಲಿಲ್ಲ. ಈ ತಾತ್ಪರ್ಯವನ್ನು ಸೊಗಸಾಗಿ ಪ್ರತಿಪಾದಿಸಿದ ಗಣಪತಿಶಾಸ್ತ್ರಿ ಕಾವ್ಯಪ್ರಕಾಶದಲ್ಲಿ ರಸಾಭಾಸಕ್ಕೆ ಉದಾಹರಣೆಯಾಗಿ ಬಂದಿರುವ "ಸ್ತುಮಃ ಕಂ ವಾಮಾಕ್ಷಿ" ಶ್ಲೋಕದ ವ್ಯಾಖ್ಯಾನ ಪ್ರಾರಂಭಿಸಿದ. ಪೂರ್ಣ ಶ್ಲೋಕ ಹೀಗಿದೆ :–

ಸ್ತುಮಃ ಕಂ ವಾಮಾಕ್ಷಿ ಕ್ಷಣಮಪಿ ವಿನಾ ಯಂ ನ ರಮಸೇ
ವಿಲೇಭೇ ಯಃ ಪ್ರಾಣಾನ್ ರಣಮಖಮುಖೇ ಯಂ ಮೃಗಯಸೇ ।
ಸುಲಗ್ನೇ ಕೋ ಜಾತಃ ಶಶಿಮುಖಿ ಯಮಾಲಿಂಗಸಿ ಬಲಾತ್
ತಪಃ ಶ್ರೀಃ ಕಸ್ಯೈಷಾ ಮದನನಗರಿ ಧ್ಯಾಯಸಿ ತು ಯಮ್ ॥

ಕಾಮಿನಿಯೊಬ್ಬಳು ತನ್ನ ಪ್ರಿಯತಮನನ್ನು ರಮಿಸುವ–ಮುದ್ದಿಸುವ–ಆಲಿಂಗಿಸುವ–ಧ್ಯಾನಿಸುವ ಬಹುವಿಧದ ಶೃಂಗಾರಕ್ರಿಯೆಗಳನ್ನು ನಾಲ್ಕು ವಾಕ್ಯಗಳಲ್ಲಿ ಚಿತ್ರಿಸುವ ಮೂಲಕ ಬಗೆಬಗೆಯ ಕಾಮುಕ ವಿಷಯಾಭಿಲಾಷೆ ಇಲ್ಲಿ ವ್ಯಕ್ತಪಡುತ್ತದೆ. ಒಬ್ಬನೇ ಪುರುಷನ ಬಗೆಗೆ ನಾಲ್ಕು ಪರಸ್ಪರ ವಿರುದ್ಧ ಕ್ರಿಯೆಗಳು ಅಸಂಭವವಾದುದರಿಂದ ಅಂತಹ ಅಭಿಲಾಷೆಗಳನ್ನು ವ್ಯಕ್ತಪಡಿಸುವಾಗ ಅದಕ್ಕೆ ಕಾರಣಭೂತವಾದ ವಿಪ್ರಲಂಭ ಶೃಂಗಾರವು ಇಲ್ಲಿ ಆಭಾಸವಾಗಿ ತೋರುತ್ತದೆ. ಈ ಶ್ಲೋಕದಲ್ಲಿ ಅನೇಕಸಲ ಬಳಸಲ್ಪಟ್ಟ "ಯತ್" ಶಬ್ದದಿಂದ ಮತ್ತು ಬಹುವಿಧದ ಕಾಮುಕ ವಿಷಯಾಭಿವ್ಯಕ್ತಿಯಿಂದ ಶೃಂಗಾರವು ಆಭಾಸವೆನ್ನಿಸಿದೆ.

ಹೀಗೆ ಶ್ಲೋಕದ ಭಾವಾರ್ಥವನ್ನು ನಿರೂಪಿಸಿದ ಗಣಪತಿಶಾಸ್ತ್ರಿ ವಿಸ್ತಾರವಾದ ವ್ಯಾಖ್ಯಾನವನ್ನು ಪ್ರಾರಂಭಿಸಿದ. ಅಡೆತಡೆಯಿಲ್ಲದೆ ಆತನ ಮುಖದಿಂದ ಹೊರಬೀಳುತ್ತಿರುವ ಮಾತಿನ ಮಧುರ ರಸವಾಹಿನಿಯು ಸಭಾಸದರ ಕಿವಿಗಳಿಗೆ ಇಂಪನ್ನೂ ಹೃದಯಗಳಿಗೆ ತಂಪನ್ನೂ ಎರೆಯುತ್ತ ಸಾಗುತ್ತಿದೆ. ತರುಣ ವಯಸ್ಕನಾದರೂ ಪ್ರಬುದ್ಧ ತೇಜಸ್ಸುಳ್ಳ ಗಣಪತಿಶಾಸ್ತ್ರಿಯ ನಾಲಿಗೆಯನ್ನೇ ತನ್ನ ನಾಟ್ಯರಂಗವಾಗಿ ಮಾಡಿಕೊಂಡ ಸರಸ್ವತಿಯ ಪದಗತಿಯಲ್ಲಿ ಅಕಸ್ಮಾತ್ ಚಿಕ್ಕ ತಪ್ಪೊಂದು ಆಗಿಹೋಯಿತು. "ಸರ್ವಾಸಾಂ" ಎಂದು ಸ್ತ್ರೀಲಿಂಗವನ್ನು ಉಪಯೋಗಿಸಬೇಕಾಗಿದ್ದ ಕಡೆ "ಸರ್ವೇಷಾಂ" ಎಂದು ಪುಲ್ಲಿಂಗವನ್ನು ಗಣಪತಿಶಾಸ್ತ್ರಿ ಬಾಯಿತಪ್ಪಿ ಪ್ರಯೋಗಿಸಿಬಿಟ್ಟಿದ್ದ. ಆದರೆ ತಕ್ಷಣದಲ್ಲಿಯೇ ತನ್ನ ತಪ್ಪಿನ ಅರಿವು ಆಗಿ ಅದನ್ನು ಸರಿಪಡಿಸಬೇಕೆನ್ನುವಷ್ಟರಲ್ಲಿಯೇ ಸ್ವತಃ ಆಶುಕವಿ ಸಿಂಹರೆನಿಸಿದ ಅಂಬಿಕಾದತ್ತರು "ಮಲಗಿದ್ದವನು ಹಟಾತ್ ಎಚ್ಚೆತ್ತು ಎದ್ದು ನಿಲ್ಲುವಂತೆ" ಈ ಕ್ಷುಲ್ಲಕ ತಪ್ಪನ್ನು ಗಮನಿಸಿಬಿಟ್ಟಿದ್ದರು. ಸಿಕ್ಕಿದ್ದೇ ಸಮಯ ಎಂದುಕೊಂಡ ಅವರು ಗಣಪತಿಶಾಸ್ತ್ರಿಗೆ ಮಾತನಾಡಲು ಅವಕಾಶವೇ ಕೊಡದೆ "ನಿಲ್ಲಿಸು ನಿನ್ನ ವ್ಯಾಖ್ಯಾನವನ್ನು" ಎಂದು ಆದೇಶನೀಡಿದರು. ಅಷ್ಟೇ ಅಲ್ಲ! ಈ ಮುಂದೆ ಕಂಡ ಪದ್ಯವನ್ನು ರಚಿಸಿ ಹೇಳುವ ಮೂಲಕ ಆತನನ್ನು ತೀವ್ರ ಆಕ್ಷೇಪಣೆಗೆ ಗುರಿ ಮಾಡಿದರು.

ಅನವದ್ಯೇ ನನು ಪದ್ಯೇ ಗದ್ಯೇ ಹೃದ್ಯೇಪಿ ತೇ ಸ್ಖಲತಿ ವಾಣೀ ।
ತತ್ಕಿಂ ತ್ರಿಭುವನಸಾರಾ ತಾರಾ ನಾರಾಧಿತಾ ಭವತಾ ॥

ನಿನ್ನ ಪದ್ಯರಚನೆ ಕಳಂಕರಹಿತ; ಗದ್ಯಕೂಡ ಮೋಹಕ; ಆದರೂ ಮಾತನಾಡುವಾಗ ಅಪಶಬ್ದ ಪ್ರಯೋಗಿಸುತ್ತಿರುವಿ! ಏನಿದು? ಮೂರು ಲೋಕದ ಸಾರಸರ್ವಸ್ವವೆನಿಸಿದ ದೇವಿ ಸರಸ್ವತಿಯನ್ನು ನೀನು ಆರಾಧಿಸಲೇ ಇಲ್ಲವೇ?

ಕೇವಲ ತನ್ನ ಒಂದು ಬಾಯಿತಪ್ಪಿನ ಸಣ್ಣ ಪ್ರಯೋಗವನ್ನು ಅಂಬಿಕಾದತ್ತರು ಇಷ್ಟೊಂದು ದೊಡ್ಡ ಪ್ರಮಾದವನ್ನಾಗಿ ಎತ್ತಿ ಎಣಿಸಬೇಕಾಗಿರಲಿಲ್ಲ ಎಂದು ಗಣಪತಿ ಶಾಸ್ತ್ರಿಗೆ ಅನಿಸಿದ್ದರೆ ಅದು ಸಹಜವೇ. ಅದೂ ಅಲ್ಲದೆ ಅಗ್ಗದ ಹೆಗ್ಗಳಿಕೆ ಪಡೆಯುವ ದೌರ್ಬಲ್ಯಕ್ಕೆ ಒಳಗಾದ ಅಂಬಿಕಾದತ್ತರು ಬಲವಾದ ಆಕ್ಷೇಪಣೆ ಮಾಡುವ ಭರದಲ್ಲಿ ಅತ್ತಿತ್ತ ಯೋಚಿಸದೆ ಮೇಲ್ಕಂಡ ಶ್ಲೋಕವನ್ನು ಹೇಳುವಾಗ ತಾವೇ ಸ್ವತಃ ವ್ಯಾಕರಣದ ತಪ್ಪು ಪ್ರಯೋಗ ಮಾಡಿದ್ದರು. ಚಿಕಿತ್ಸಕ ಬುದ್ಧಿಯ ಯುವಕ ಗಣಪತಿಶಾಸ್ತ್ರಿ ಇಲ್ಲಿ ಅವರ ಅಬದ್ಧ ಪ್ರಯೋಗವನ್ನು ಅವರ ಮುಖಕ್ಕೇ ಎತ್ತಿಹಿಡಿದು ತೋರಿಸುವ ಮೂಲಕ ಸರಿಯಾದ ಎದಿರೇಟು ಹಾಕಿದ. ಅಂಬಿಕಾದತ್ತರು ರಚಿಸಿ ಹೇಳಿದ ಮೇಲಿನ ಶ್ಲೋಕದಲ್ಲಿ "ತ್ರಿಭುವನಸಾರಾ ತಾರಾ" ಎಂಬಲ್ಲಿ ಈ ವ್ಯಾಕರಣದ ತಪ್ಪನ್ನು ಎಸಗಿದ್ದರು.

ಗಣಪತಿಶಾಸ್ತ್ರಿ ಹೇಳಿದ:- "ನೇಹ ಸಾರಶಬ್ದೋ ವಿಶೇಷ್ಯಲಿಂಗಃ। ಸಾರ ಇತಿ ವಕ್ತವ್ಯೇ 'ಸಾರಾ ತಾರಾ' ಇತಿ ಅನುಪ್ರಾಸಾಯ ಪ್ರಯುಕ್ತಮಸಾಧು ಭವತಾ। ಇಲ್ಲಿ ಸಾರಶಬ್ದವು ವಿಶೇಷ್ಯಲಿಂಗವನ್ನು - ಅಂದರೆ - ಮುಂದಿನ ಶಬ್ದ ತಾರಾ ಎಂಬ ವಿಶೇಷ್ಯ ಪದದ ಸ್ತ್ರೀಲಿಂಗವನ್ನು ಪಡೆಯುವದಿಲ್ಲ. 'ತ್ರಿಭುವನ ಸಾರ:' ಎಂದು ಪುಲ್ಲಿಂಗ ಪ್ರಯೋಗವೇ ಸರಿಯಾದುದು ಹೊರತು 'ತ್ರಿಭುವನ ಸಾರಾ' ಎಂದು ಸ್ತ್ರೀಲಿಂಗ ಪ್ರಯೋಗ ಮಾಡುವಂತಿಲ್ಲ. ಕೇವಲ ಶಬ್ದಾನುಪ್ರಾಸದ ಚಮತ್ಕಾರ ತೋರಿಸಲು ಹೊರಟ ನೀವು ಅಬದ್ಧ ಪ್ರಯೋಗ ಮಾಡಿದ್ದೀರಿ. ಇಷ್ಟು ಹೇಳಿದ ಗಣಪತಿಶಾಸ್ತ್ರಿ ಈ ಕೆಳಗೆಕಂಡ ಪದ್ಯವನ್ನು ರಚಿಸಿ ಹೇಳುವ ಮೂಲಕ ಪರೀಕ್ಷಕ ಅಂಬಿಕಾದತ್ತರನ್ನೇ ಆಕ್ಷೇಪಣೆಗೆ ಗುರಿಪಡಿಸಿದ:-

"ಸುಧಾಂ ಹಸನ್ತಿ ಮಧು ಚಾಕ್ಷಿಪನ್ತೀ ಯಶೋ ಹರಂತೀ ದಯಿತಾ
ಧರಸ್ಯ ।
ನ ತೇಽಲಮಾಸ್ಯಂ ಕವಿತಾಕರೋತಿ ನೋಪಾಸ್ಯತೇ ಕಿಂ ದಯಿತಾರ್ಧ
ದೇಹಃ ॥

ಕವಿತೆ ಎಂಬುದು ಎಷ್ಟೊಂದು ಮಧುರ ? ಆ ಮಾಧುರ್ಯದ ಮುಂದೆ ಮಕರಂದದ ರಸ ಕೂಡಾ ನಗೆಗೀಡಾಗುತ್ತದೆ. ಜೇನಿನ ಸವಿಯಂತೂ ತೃಣಸಮಾನವೆನಿಸುತ್ತದೆ. ಪ್ರಿಯತಮೆಯ ಅಧರಾಮೃತದ ಕೀರ್ತಿ ಸಹ ನಾಶವಾಗಿ ಹೋಗುತ್ತದೆ. ಇಂತಹ ಸೌರಭ ನಿಮ್ಮ ಕವಿತೆಯಲ್ಲಿ ಇಲ್ಲವೇಕೆ ? ನೀವು ಆ ಅರ್ಧನಾರೀಶ್ವರನನ್ನು ಉಪಾಸನೆ ಮಾಡಿಯೇ ಇಲ್ಲವೇನು ?

("ಕಿಂ ತಾರಾ ಸ್ತ್ರೀನೋಪಾಸಿತಾ ?" ಇತಿ ಮಾಂ ಪೃಚ್ಛಸಿ; "ತ್ವಯಾಕಿಂ ಪುಮರ್ಕಾಂತಾರ್ಧವಿಗ್ರಹೋನೋಪಾಸಿತಃ? ಇತಿ ಪ್ರತಿ ಪ್ರಶ್ನಃ)" ಸ್ತ್ರೀದೇವತೆಯಾದ ತಾರೆಯನ್ನು ಉಪಾಸನೆ ಮಾಡಿಲ್ಲವೆ ? ಎಂದು ನನ್ನನ್ನು ಕೇಳುತ್ತಿದ್ದೀರಿ! ಕಾಂತಾರ್ಧ ಶರೀರಿಯಾದ ಪುರುಷ ದೇವನನ್ನು ನೀವು ಆರಾಧಿಸಿಲ್ಲವೇ ? ಇದು ಗಣಪತಿಯ ಮರು ಪ್ರಶ್ನೆ.

ಪರೀಕ್ಷಾ ಅಭ್ಯರ್ಥಿ ಗಣಪತಿಶಾಸ್ತ್ರಿಯ ಈ ಗಂಭೀರ ಆಕ್ಷೇಪಣೆ ಅಂಬಿಕಾದತ್ತರನ್ನು ತುಂಬಾ ಕೆರಳಿಸಿತು. ಈ ಮುಂದಿನ ಶ್ಲೋಕದಿಂದ ಎಚ್ಚರಿಕೆ ನೀಡಿದರು.

ಉಚ್ಚೈಃ ಕುಂಜರ ಮಾಕಾರ್ಷೀಃ ಬೃಂಹಿತಾನಿ ಮದೋದ್ಧತ ।
ಕುಂಭಿಕುಂಭಾಮಿಷಾಹಾರೀ ಶೇತೇ ಸಂಪ್ರತಿ ಕೇಸರೀ ॥
ಎಲವೋ ಮದಾಂಧ ಆನೆಯೇ ? ವೃಥಾ ಘಟ್ಟಿಯಾಗಿ ಘೀಳಿಡಬೇಡ !

ನಿನ್ನ ಕುಂಭಸ್ಥಲದ ಮಾಂಸವನ್ನು ಬಗೆದು ತಿನ್ನುವ ಸಿಂಹ ಪ್ರಕೃತ ಮಲಗಿಕೊಂಡಿದೆ. (ಅದೇನಾದರೂ ಒಮ್ಮೆ ಕೆರಳಿ ಎದ್ದುನಿಂತು ನಿನ್ನ ಮೇಲೆ ಆಕ್ರಮಣ ಮಾಡಿತೆಂದರೆ ನಿನ್ನ ಕಥೆ ಮುಗಿದಂತೆಯೇ! ಎಂಬ ಎಚ್ಚರಿಕೆಯ ಧ್ವನಿ ಇಲ್ಲಿ ಇದೆ.)

ಯಾರೇ ಆಗಲಿ ಒಮ್ಮೆ ಸಿಟ್ಟಿಗೆ ವಶನಾಗಿ ಅದನ್ನು ಹತೋಟಿಗೆ ತಂದುಕೊಳ್ಳದೆ ಮತ್ತಷ್ಟು ಕೆರಳುತ್ತಲೇ ಹೋದರೆ ಆತ ಮೇಲಿಂದ ಮೇಲೆ ತಪ್ಪು ಮಾಡುವುದೇ ಆಗುತ್ತದೆ. ತುಂಬಾ ಆಕ್ರೋಶಗೊಂಡ ಅಂಬಿಕಾದತ್ತರು ಈ ಶ್ಲೋಕದಲ್ಲಿಯೂ ಅಬದ್ಧವನ್ನೇ ಪ್ರಯೋಗಿಸಿದ್ದರು. ಗಣಪತಿ ಶಾಸ್ತ್ರಿ ಒಡನೆಯೇ ಘೋಷಿಸಿದ: "ಪುನಶ್ಚ ದೋಷಃ। ನ ಕರ್ಮಧಾರಯಾನ್ಮತ್ವರ್ಥೀಯಃ। ಕುಂಭಿಕುಂಭಾಮಿಷಾಹಾರಃ ಇತಿ ಬಹುವ್ರೀಹಿಃ ಸ್ಯಾತ್। "ಹಾರೀ ಕೇಸರೀ" ಇತಿ ಅಸಾಧುಪ್ರಯುಕ್ತ ಮನುಪ್ರಾಸಾಯ।" ("ಪುನಃ ತಪ್ಪು ಶಬ್ದ ಪ್ರಯೋಗ! ಕುಂಭಿಕುಂಭಾಮಿಷಾಹಾರಃ' ಎಂದು ಬಹುವ್ರೀಹಿ ಸಮಾಸದ ಶಬ್ದ ಪ್ರಯೋಗಿಸಬೇಕಾದ ಕಡೆ ಕೇವಲ ಪದಾನುಪ್ರಾಸ ಪ್ರದರ್ಶನಕ್ಕಾಗಿ 'ಕುಂಭಾಮಿಷಾಹಾರೀ' ಎಂಬ ಕರ್ಮಧಾರಯ ಸಮಾಸ ಪದವನ್ನು ಬಳಸಿದ್ದೀರಿ. ಈ ಪ್ರಯೋಗ ಸರಿಯಲ್ಲ.")

ಈ ರೀತಿ ಪ್ರಮಾದವನ್ನು ಎತ್ತಿತೋರಿಸಿದ ಗಣಪತಿಶಾಸ್ತ್ರಿಯ ಮುಖದಿಂದ ಈ ಶ್ಲೋಕ ಹೊರಬಂದಿತ್ತು.

ಸಮಾಸೀನೋ ರಸಾಲೇ ಚೇತ್ ಮೌನಮಾವಹ ಮೌಕಲೇ ।
ಲೋಕ: ಕರೋತು ಸತ್ಕಾರಂ ಮತ್ವಾ ತ್ವಾಮಪಿ ಕೋಕಿಲಂ ॥

ಓ ಕಾಕ! (ಕಾಗೆ) ನೀನೊಮ್ಮೆ ಮಾವಿನ ಮರದಲ್ಲಿ ಕುಳಿತಿರುವಿಯಾದರೆ ಬಾಯಿಮುಚ್ಚಿ ಕೊಂಡಾದರೂ ಕುಳಿತಿರು. ನೀನೂ ಕೋಗಿಲೆಯೇ ಇರಬಹುದೆಂದು ಭಾವಿಸಿದ ಜನ ನಿನ್ನ ಬಗ್ಗೆ ಗೌರವ ತಳೆದಾರು!

ಮಾವಿನ ಮರದಲ್ಲಿ ಕುಳಿತು ಪಂಚಮದ ಇಂಪುದನಿಯಲ್ಲಿ ಕುಹೂರಾಗವನ್ನು ಹಾಡುವ ಕೋಗಿಲೆ ಜನರ ಗೌರವಕ್ಕೆ ಪಾತ್ರವಾಗುತ್ತದೆ. ಆದರೆ ಅದೇ ಮಾವಿನ ಮರದಲ್ಲಿ ಕುಳಿತು "ಬಾಯಿಬಿಟ್ಟರೆ ಬಣ್ಣಗೇಡು" ಎಂಬಂತೆ ಕ್ರಾ! ಕ್ರಾ! ಎಂದು ಕರ್ಕಶವಾಗಿ ಕೂಗುವ ಕಾಗೆಯನ್ನು ಜನರು 'ಹುಷ್' ಎಂದು ಬೆದರಿಸಿ ಕೈ ತಟ್ಟಿ ಓಡಿಸುತ್ತಾರೆ.

ಈ ಬಗೆಯ ತೆಗಳಿಕೆ - ಅದೂ ಒಬ್ಬ ಅಭ್ಯರ್ಥಿಯಿಂದ ತನ್ನ ಬಗ್ಗೆ ಬಂದಾಗ ಅಂಬಿಕಾದತ್ತರ ಕ್ರೋಧಕ್ಕೆ ಮೇರೆಯೇ ಉಳಿಯಲಿಲ್ಲ. ಸಂತಾಪದಿಂದ ಹೇಳಿದರು.

"ಜ್ಯೋತಿರಿಂಗಣ ಕಿಂ ನು ಮನ್ಯಸೇ ಯತ್ತ್ವಮೇವ ತಿಮಿರೇಷು ಲಕ್ಷ್ಯಸೇ!"

ಎಲೈ ಮಿಣುಕು ಹುಳ (ದೀಪದ ಹುಳ)ವೇ! ನೀನು ಕರಾಳ ಕತ್ತಲೆಯಲ್ಲಿ ಮಾತ್ರವೇ ಕಾಣಿಸಬಲ್ಲೆ ಎಂಬುದನ್ನು ತಿಳಿದಿಲ್ಲವೇನು ?

ಅಂಬಿಕಾದತ್ತರು ಶ್ಲೋಕದ ಪೂರ್ವಾರ್ಧದಿಂದ ಮಾಡಿದ ಈ ತೆಗಳಿಕೆಗೆ ಗಣಪತಿಶಾಸ್ತ್ರಿ ಉತ್ತರಾರ್ಧದ ಮೂಲಕ ಹೀಗೆ ಉತ್ತರಿಸಿದ.

'ಕಿಂನು ದೀಪ ಭವನೇ ವಿಭಾಸಸೇ ವಾಯುನಾ ಬಹಿರಹೋ ವಿಧೂಯಸೇ" ॥

ದೀಪವೆಂದು ನಿನ್ನನ್ನು ನೀನೇ ಭಾವಿಸಿಕೊಂಡಿರುವಿ : ಆದರೂ ನಿನ್ನ ಯೋಗ್ಯತೆ ಎಷ್ಟು ? ಕೇವಲ ಮನೆಯ ಒಳಗೆ ನಿನ್ನ ಪ್ರಭಾವ. ಹೊರಗೇನಾದರೂ ತರಲ್ಪಟ್ಟೆಯೋ ! ಗಾಳಿಗೆ ಸಿಕ್ಕಿ ತತ್ತರಿಸಿ ಹೇಳಹೆಸರಿಲ್ಲದೇ ಹೋಗುತ್ತೀಯೇ !

ಹೀಗೆ ಒಂದೇಸಮನೆ ಸಾಗುತ್ತಿದ್ದ ಬೌದ್ಧಿಕ ಮಲ್ಲರಿಬ್ಬರ ಈ ಕದನಕುತೂಹಲವನ್ನು ಕೊನೆಗಾಣಿಸಲು ನಿರ್ಧರಿಸಿದ ಶಿತಿಕಂಠ ವಾಚಸ್ಪತಿಗಳು "ನೀವಿಬ್ಬರೂ

ಪರಸ್ಪರ ವೈಯ್ಯಕ್ತಿಕ ದೂಷಣೆಮಾಡುತ್ತ ಮುಂದುವರಿಯುವುದಕ್ಕಿಂತಲೂ" ಗೌಡ ದಾಕ್ಷಿಣಾತ್ಯ' ಹೀಗೆ ನಿಮ್ಮ ನಿಮ್ಮ ಸಮೂಹವನ್ನೇ ತೆಗಳಿಕೆಗೆ ಗುರಿಮಾಡುವ ಮೂಲಕ ಈ ವಾಗ್ವಾದಕ್ಕೆ ಮಂಗಳ ಹಾಡಿಬಿಡುವುದು ಉತ್ತಮ" ಎಂದು ಸಲಹೆ ಮಾಡಿದರು.

ಈ ಸೂಚನೆ ಇಬ್ಬರಿಗೂ ಸರಿಯೆನಿಸಿತು. ಅಂಬಿಕಾದತ್ತರು ದಾಕ್ಷಿಣಾತ್ಯ ಬ್ರಾಹ್ಮಣ ಸಮೂಹವನ್ನೇ ಹೀಗೆಳೆಯುತ್ತಾ ಹೇಳಿದರು :-

ಭಟ್ಟೋಽಖಿಲೋಽಟ್ಟೋಪರಿ ವಾರವಧ್ವಾ ನಿಪೀಯ ಮಧ್ವಾರಭತೇ
ವಿಹಾರಂ !"

"ದಕ್ಷಿಣದೇಶದ ಭಟ್ಟರೆನಿಸಿಕೊಂಡ ಜನರೆಲ್ಲರೂ ವೇಶ್ಯಾಸ್ತ್ರೀಯೊಡನೆ ಉಪ್ಪರಿಗೆ (ಮಹಡಿ)ಯನ್ನೇರಿ ಸುರಾಪಾನ ಮಾಡಿ ಶೃಂಗಾರ ಕೇಳಿಯಲ್ಲಿ ತೊಡಗುತ್ತಾರೆ."

ಅದಕ್ಕೆ ಉತ್ತರವಾಗಿ ಗೌಡದೇಶೀಯ (ಬಂಗಾಲೀ) ಬ್ರಾಹ್ಮಣರ ಪಂಗಡವನ್ನೇ ತೆಗಳುತ್ತ ಗಣಪತಿಶಾಸ್ತ್ರಿ ಹೀಗೆ ಪದ್ಯವನ್ನು ಪೂರ್ತಿಮಾಡಿದ :-

"ಅಸುವ್ಯಯೋ ವಾಽಸ್ತು ವಸುವ್ಯಯೋ ವಾ ಆಮಿಷ ನ ಮೀನವ್ಯಸನಂ
ತ್ಯಜಂತಿ ॥"

"ಹಣ ಎಷ್ಟಾದರೂ ಹಾಳಾಗಲಿ ! ಪ್ರಾಣವೇ ಬೇಕಾದರೂ ಹೋಗಲಿ ! ಈ ಗೌಡದೇಶದ ಜನ (ಬ್ರಾಹ್ಮಣರು) ಮೀನು ತಿನ್ನುವ ಚಟ ಬಿಡಲಾರರು."

ಇಲ್ಲಿಗೆ ಗಣಪತಿಶಾಸ್ತ್ರಿಯ ಪರೀಕ್ಷೆ ಕೊನೆಗೊಂಡಿತು. ಸಮರ್ಥ ರೀತಿಯಲ್ಲಿ ಪರೀಕ್ಷೆಯನ್ನು ಎದುರಿಸಿ ಯಶಸ್ವಿಯಾದ ಯುವಕ ಗಣಪತಿ ಶಾಸ್ತ್ರಿಯನ್ನು ವಯೋವೃದ್ಧರೂ, ರಸಿಕ ಶ್ರೇಷ್ಠರೂ, ಸಹೃದಯರೂ ಆದ ಅಂಬಿಕಾದತ್ತರು ಅಭಿಮಾನ-ವಾತ್ಸಲ್ಯಗಳಿಂದ ತಬ್ಬಿಹಿಡಿದು ತಮ್ಮ ಹೃದಯವಂತಿಕೆ-ಸಂತಸಗಳನ್ನು ವ್ಯಕ್ತಪಡಿಸಿದರು. ಗಣಪತಿಶಾಸ್ತ್ರಿ ಕೂಡ ಸಹಜ ವಿನಯದಿಂದ ಹೀಗೆ ನಿವೇದಿಸಿಕೊಂಡ :-"ಈ ವಾಗ್ವಾದ ಸಮಯದಲ್ಲಿ ನಾನು ಮಾಡಿರುವ ಅಪರಾಧ-ಅಪಚಾರಗಳನ್ನು ಹಿರಿಯ ವಿದ್ವಾಂಸರಾದ ತಾವು ಮನ್ನಿಸೋಣವಾಗಲಿ."

ಅಂಬಿಕಾದತ್ತರು ತರುಣಕವಿಯ ಬೆನ್ನು ತಟ್ಟುತ್ತ ಹೇಳಿದರು :- ಈ ವಾಗ್ವಾದವೆಂಬುದು ಒಂದು ಬಗೆಯ ಆಟ. ಆಟವೆಂದಮೇಲೆ ಅದರಲ್ಲಿ ಇಷ್ಟು ಸೆಣಸಾಟಗಳು ಸಾಮಾನ್ಯವಾಗಿ ಇರತಕ್ಕವುಗಳೇ. ಒಂದು ವೇಳೆ ನೀನು ನನ್ನ ಬಗೆಗೆ ಮೇರೆ ಮೀರಿ ಮಾತನಾಡಿದಾಗ ನನಗೆ ಬೇಸರವಾಯಿತೆಂದೇ ಇಟ್ಟುಕೊಂಡರೂ ವಾದದ ಕೊನೆಯಲ್ಲಿ ಖಂಡನಾತ್ಮಕವಾಗಿ ನಾನು ರಚಿಸಿ ಹೇಳಿದ ಕೊನೆಯ ಶ್ಲೋಕದ ಮೊದಲ ಅರ್ಧಕ್ಕೆ ಪ್ರತ್ಯುತ್ತರವಾಗಿ ನೀನು ಹೇಳಿದ ಎರಡನೆಯ ಅರ್ಧದಲ್ಲಿ-ಶ್ಲೋಕದ ಕೊನೆಯ ಪಾದದಲ್ಲಿ ನೀನು ಜೋಡಿಸಿದ ಒಂದು ಜೊತೆ "ಮೀನು" ನಿನ್ನ ಅಪರಾಧವನ್ನೆಲ್ಲಾ ತೊಡೆದು ಹಾಕಿಬಿಟ್ಟಿದೆ. (ಶ್ಲೋಕದ ಕೊನೆಯ ಪಾದದಲ್ಲಿ **ಅಮೀನೆ ಮೀನ ವ್ಯಸನಂ ತ್ಯಜಂತಿ"** ಎಂಬಲ್ಲಿ ಎಡೆಬಿಡದೆ 2 ಮೀನಶಬ್ದಗಳ ಅಪೂರ್ವವಾದ ಪ್ರಯೋಗ)

ದತ್ತವಾನಂಬಿಕಾದತ್ತಜಾತಯೋ ಗೌಡನೀತಯೇ ।
ಮೀನದ್ವಯಂ ವಿವಾದಾಂತಪದ್ಯಪಾಠನಿವೇಶಿತಂ ॥

(ವಿವಾದದ ಕೊನೆಯ ಪದ್ಯದ ಕೊನೆಯಲ್ಲಿ ಒಂದು ಜೊತೆ ಮೀನನ್ನು ಗೌಡಬ್ರಾಹ್ಮಣರ ನಡವಳಿಕೆಗೇ ದಾನ ಮಾಡಿಬಿಟ್ಟಿದ್ದಾನೆ. ಗಣಪತಿಶಾಸ್ತ್ರಿ.)

ಪರೀಕ್ಷಾಪರಿಷತ್ತು ತನ್ನ ಕಲಾಪಗಳನ್ನು ಮುಗಿಸುವ ಮುನ್ನ ಗಣಪತಿ ಶಾಸ್ತ್ರಿಗೆ 'ಕಾವ್ಯಕಂಠ' ಪ್ರಶಸ್ತಿ ನೀಡುವ ವಿಷಯ ಪ್ರಕಟಿಸಿತು. ಸೇರಿದ ವಿದ್ವಾಂಸರೆಲ್ಲರೂ ಅದನ್ನು ಸಂತೋಷದಿಂದ ಅನುಮೋದಿಸಿದರು.

ಬಂಗಾಲಿ ಲಿಪಿಯಲ್ಲಿ ಸಂಸ್ಕೃತ ಭಾಷೆಯನ್ನು ಉಪಯೋಗಿಸಿ ಬರೆಯಲ್ಪಟ್ಟಿರುವ ಸರಸ-ಗಂಭೀರ- ಕಾವ್ಯಾತ್ಮಕ ಪ್ರಶಸ್ತಿ ಪತ್ರದ ಪೂರ್ಣ ಪಾಠ ಕೆಳಗಿನಂತೆ ಇದೆ.

ಶ್ರೀ ಶ್ರೀ ದುರ್ಗಾ ಶರಣ್ಯಾ ।
ಪ್ರಶಂಸಾ ಪತ್ರಮೇತತ್ ।
ಶ್ರೀಮತ್ ಗಣಪತಿಶಾಸ್ತ್ರಿನ್

ಸಂಸಾರೆ ಖಲ್ವಸ್ಮಿನ್‌ಕವಿತ್ವಮಿತ್ಯಸಮುದ್ರ ಸಮುತ್ಥಮಮೃತಂ॥ಸುದುರ್ಲಭಂ ಚ ತತ್ ಲೋಕಾಧಿಕಸೌಭಾಗ್ಯವಶಾತ್ ಸುಪ್ರಸನ್ನದೈವಾನು

ಕಂಪಯಾ ವಾ ಯಃ ಕಶ್ಚಿದಿಹ ಸಮಧಿಕುರುತೆ ಸ ಚ ಭೂಸ್ತೋಽಪಿ ಸ್ವರ್ಗೀಯ ಇತಿ ಸಸ್ಪೃಹಮಾಲೋಕ್ಯಮಾನೋ ಗುಣಪಕ್ಷಪಾತಿಭಿರ್ವಿದ್ವದ್ಭಿರ್ನಿತ್ರಾಮಾದ್ರಿಯತೆ ।

ಅತೋ ಯದದ್ಯ ಶ್ರೀಮದ್ಭಿರಸಾಧಾರಣಕಪಿತ್ವಮಿಹ ಪ್ರಕಟಯ್ಯ ಸುಧಿಯಃ ಸರ್ವೇ ಸಂತೋಷಮಾಪಾದಿತಾಃ ತೇನೈವ ಚರಿತಾರ್ಥಾಃ ನವದ್ವೀಪವಾಸಿನಃ ಕೋವಿದಾಃ ವಯಮಶೇಷಗುಣಧಾಮ್ನೇ ವಿಶಾಖಪತ್ತನ ಪ್ರದೇಶಾಂತರ್ಗತ ಕಲವರಾಯಿಗ್ರಾಮವಸತಯೇ ಶ್ರೀಮದ್ಗಣಪತಿ ಶಾಸ್ತ್ರಿಣೇ ತುಭ್ಯಂ ಆಶೀರ್ವಾದ ಪೂರ್ವಕಂ ಇದಂ ಶ್ಲೋಕಮುಪಹರಾಮಃ

ಪ್ರಾಚೀನೈಸ್ತೈಃ ಕವಿಕುಲವರ್ಯೈಃ ಕಾಳಿದಾಸಾದಿಭಿರ್ಯಾ
ಲಬ್ಧಾ ಕೀರ್ತಿರ್ಭಷದನುಗತಾ ಸೈವ ಭೂಯಾದಿದಾನೀಂ ।

ಸದ್ಭಿರ್ದತ್ತೋಯ ಇಹ ರುಚಿರಃ ಕಾವ್ಯಕಂಠೋಪಹಾರಃ
ತೇನ ಶ್ರೀರ್ಮಾ ಭವ ಭುವಿ ಭರ್ವಾ ಉಜ್ವಲಶ್ಚಾಪಿ ಭೂಯಾತ್॥

1823 ಶತಾಬ್ದೀಯ ಸೌರಜ್ಯೇಷ್ಠಸ್ಯ ಅಷ್ಟಮೇ ದಿವಸೇ. 2ನೇಜೂನ್ 1900.

ತರ್ಕಪಂಚಾನನೋಪಾಧಿಕ ಶ್ರೀ ಯುಕ್ತರಾಜಕೃಷ್ಣ ತರ್ಕಪಂಚಾನನಃ

ನವದ್ವೀಪವಾಸಿನಃ

ತರ್ಕರತ್ನೋಪಾಧಿಕ ಶ್ರೀ ಜಯನಾರಾಯಣ ಶರ್ಮಾಣಃ
ಶಿರೋಮಣ್ಯುಪಾಧಿಕ ಶ್ರೀಶಿವನಾರಾಯಣ ಶರ್ಮಾಣಃ
ವಾಚಸ್ಪತ್ಯುಪಾಧಿಕ ಶ್ರೀಶಿತಿಕಂಠ ಶರ್ಮಾಣಃ
ಚೂಡಾಮಣ್ಯುಪಾಧಿಕ ಶ್ರೀತಾರಾಪ್ರಸನ್ನ ಶರ್ಮಾಣಃ
ವಿದ್ಯಾವಂತೋಪಾಧಿಕ ಶ್ರೀರಜನೀಕಾಂತ ಶರ್ಮಾಣಃ
ವಿದ್ಯಾವಂತೋಪಾಧಿಕ ಶ್ರೀಪ್ರಸನ್ನಕುಮಾರ ಶರ್ಮಾಣಃ
ಶ್ರುತಿ ತೀರ್ಥೋಪಾಧಿಕ ಶ್ರೀದುರ್ಗಾಮೋಹನ ಶರ್ಮಾಣಃ
ಶ್ರೀ ಧ್ವಜರಾಜ ಶರ್ಮಾಣಃ
ಶ್ರೀ ಉಮೇಶಚಂದ್ರ ಶರ್ಮಾ ವಾಚಸ್ಪತ್ಯುಪಾಧಿಕ ಶ್ರೀಶಿವ ನಾರಾಯಣ ಶರ್ಮಾಣಃ

ಶ್ರೀ ಸ್ವಾಮಿ ಶಿವಗೋವಿಂದ ಭಾರತೀಭಿಃ
ನ್ಯಾಯರತ್ನೋಪಾಧಿಕ ಶ್ರೀ ಅವಿನಾಶ ಶರ್ಮಾಣಃ
ಸಾರ್ವಭೌಮೋಪಾಧಿಕಶ್ರೀಯದುನಾಥ ಶರ್ಮಾಣಃ
ವಿದ್ಯಾಭೂಷಣೋಪಾಧಿಕ ಶ್ರೀ ಅಹಿಭೂಷಣ ಶರ್ಮಾಣಃ

(ಪ್ರಶಸ್ತಿ ಪತ್ರದ ಕನ್ನಡ ಅನುವಾದ)

ಶ್ರೀ ಶ್ರೀ ದುರ್ಗಾ ಶರಣ್ಯಾ ।
ಪ್ರಶಂಸಾಪತ್ರಮೇತತ್ ।
"ಶ್ರೀಮದ್ ಗಣಪತಿ ಶಾಸ್ತ್ರಿನ್"

ಸಮುದ್ರಮಥನ ಕಾಲದಲ್ಲಿ ಹುಟ್ಟಿದುದಲ್ಲವಾದರೂ ಕವಿತೆ ಎಂಬುದು ಈ ಸಾಂಸಾರಿಕಬದುಕಿಗೆ ಅಮೃತ ಸಮಾನವಾದ್ದದ್ದು. ತುಂಬಾ ಕಷ್ಟಸಾಧ್ಯವಾದ ಈ ಕವಿತೆಯೆಂಬ ಅಮೃತವನ್ನು ಅಸಾಧಾರಣ ಪುಣ್ಯಪ್ರಭಾವದಿಂದಲಾಗಲೀ ದೈವೀ ಕೃಪೆಯಿಂದಲಾಗಲೀ ಯಾರು ಸಾಧಿಸಬಲ್ಲರೋ ಅಂತಹವರು ಈ ಭೂವಿಗೆ ಇಳಿದು ಬಂದು ಇಲ್ಲಿ ಇರುವ ದೇವತಾಪುರುಷರೇ ಸರಿ ಎಂಬುದಾಗಿ ಗುಣೈಕ-ಪಕ್ಷಪಾತಿಗಳಾದ ವಿದ್ವಾಂಸರು ಆತನ ಬಗ್ಗೆ ಅಭಿಮಾನತಳೆದು ಹಾರ್ದಿಕಗೌರವ ನೀಡುತ್ತಾರೆ.

ನೀವು ಈ ಸಭೆಯಲ್ಲಿ ನಿಮ್ಮ ಅನನ್ಯಸಾಧಾರಣ ಕವಿತಾಶಕ್ತಿಯನ್ನು ಪ್ರದರ್ಶಿಸಿದ್ದೀರಿ. ನಿಮ್ಮ ಈ ಕವಿತಾಸಾಮರ್ಥ್ಯವು ವಿದ್ಯೋಪಜೀವಿಗಳಾದ ಈ ನವದ್ವೀಪದ ಪಂಡಿತ ಸಮೂಹಕ್ಕೆ ಅತಿಶಯ ಸಂತೋಷವನ್ನುಂಟುಮಾಡಿದೆ. ಸಕಲ ಗುಣಸಂಪನ್ನರಾಗಿ ವಿಶಾಖ ಪಟ್ಟಣ ಪ್ರದೇಶಕ್ಕೆ ಸೇರಿದ ಕಲುವರಾಯಿ ಗ್ರಾಮ ನಿವಾಸಿಗಳಾದ ಶ್ರೀಮಾನ್ ಗಣಪತಿ ಶಾಸ್ತ್ರಿಗಳೆಂಬ ತಮಗೆ ಈ ಮುಂದೆ ಕಂಡ ಶ್ಲೋಕದಲ್ಲಿ ಅಡಕವಾಗಿರುವ ಪ್ರಶಸ್ತಿಯನ್ನು ನವದ್ವೀಪ ನಿವಾಸಿಗಳಾದ ವಿದ್ವತ್ಪರಿಷತ್ತಿನವರು ಆಶೀರ್ವಾದದೊಡನೆ ನೀಡುತ್ತಿದ್ದೇವೆ.

(ಶ್ಲೋಕದ ಭಾವಾರ್ಥ)

"ಹಿಂದಿನ ಕಾಲದಲ್ಲಿ ಕಾಳಿದಾಸನೇ ಮೊದಲಾದ ಕವಿಶ್ರೇಷ್ಠರು ಗಳಿಸಿದ್ದ ಕೀರ್ತಿ ವಿಶೇಷವು ಈ ಕಾಲಕ್ಕೆ ನಿಮ್ಮನ್ನು ಅನುಸರಿಸಿ ಬಂದಿದೆ. ಇಲ್ಲಿಯ ಸಜ್ಜನರು ಶೋಭಾಯಮಾನವಾದ "ಕಾವ್ಯಕಂಠ" ಪ್ರಶಸ್ತಿಯ ಭೂಷಣವನ್ನು ನೀಡಿ ನಿಮ್ಮನ್ನು ಅಲಂಕರಿಸಿದ್ದೇವೆ. ಲೋಕದಲ್ಲಿ ನೀವು ಸಂಪನ್ನರೆನಿಸಿಕೊಳ್ಳಿರಿ. ನಿಮ್ಮ ತೇಜಸ್ಸು ಉಜ್ವಲವಾಗಿ ಬೆಳಗಲಿ."

ತರ್ಕಪಂಚಾನನೋಪಾಧಿಕ
ಶ್ರೀಯುಕ್ತ ರಾಜಕೃಷ್ಣ ತರ್ಕ ಪಂಚಾನನ:
(ನವದ್ವೀಪವಾಸಿಗಳಾದ ಇನ್ನೂ 14 ಜನ ವಿದ್ವಾಂಸರ ಸಹಿ ಇದೆ.)
(ಗಣಪತಿಶಾಸ್ತ್ರಿಗಳು ಈ ಪ್ರಶಸ್ತಿ ಪತ್ರವನ್ನು ತಮ್ಮ ತಂದೆಯವರಿಗೆ ತಲುಪಿಸುವಂತೆ ಮಂದಾಸಾ ಸಂಸ್ಥಾನಾಧೀಶರಿಗೆ ಕಳಿಸಿದರು)

ಪ್ರಕರಣ-9

ಕಾಶ್ಯಾದಿ ಗಮನ-ದಕ್ಷಿಣ ದೇಶಯಾತ್ರೆ

"ನ ಖಲು ಧೀಮತಾಂಕಂಚಿದವಿಷಯೋನಾಮ" (ಶಾಕುಂತಲ)
(ಪ್ರಜ್ಞಾಶಾಲಿಗಳಾದವರಿಗೆ ತಿಳಿಯಲಾರದ ವಿಷಯ ಯಾವುದೂ ಇಲ್ಲ)
ಅಘಟಿತ ಘಟಿತಂ ಘಟಯತಿ ಸುಘಟಿತಘಟಿತಾನಿ ದುರ್ಘಟೀಕುರುತೆ।
ವಿಧಿರೇವ ತಾನಿ ಘಟಯತಿ ಯಾನಿ ಪುಮಾನ್ ನೈವ ಚಿಂತಯತಿ ॥

(ಅಸಾಧ್ಯವೆನಿಸಿದ್ದನ್ನು ಸಂಭವಿಸುವಂತೆ ಮಾಡುತ್ತದೆ. ಒಳ್ಳೆಯ ಘಟನೆಯನ್ನೇ ಕೆಟ್ಟದ್ದಾಗಿ ಬದಲಾಯಿಸಿ ಬಿಡುತ್ತದೆ. ಇದು ವಿಧಿಯ ಕೈವಾಡ. ಮನುಷ್ಯನ ಊಹೆಗೆ ಕೂಡ ನಿಲುಕದ ವಿಷಯಗಳು ಇವು.)

"ಉಹ್ಯಮಾನ ಇವ ವಾಹನೋಚಿತ: ಪಾದಚಾರಮಪಿ ನ ವ್ಯಭಾಯತ್"
(ರಘುವಂಶಂ 11-40)
(ವಾಹನವೇರಿಯೇ ಪಯಣಿಸುವ ಯೋಗ್ಯತೆಯುಳ್ಳ ಆ ರಾಘವನು ಕಾಲುನಡಿಗೆಯ ಬೇಸರ- ಶ್ರಮಗಳನ್ನು ಕೂಡ ಲೆಕ್ಕಿಸಲಿಲ್ಲ)

ನವದ್ವೀಪದಲ್ಲಿ ನನಗೆ ಆತ್ಮೀಯರಾಗಿ ದೊರಕಿದ ಪಂಡಿತ ಗುಲಾಬಿ ಝಾ ಅವರೊಡನೆ ಹೊರಟು ಮುರ್ಷಿದಾಬಾದ್ ನಗರಕ್ಕೆ ಬಂದೆ. ಗುಲಾಬಿ ಝಾ ಅಲ್ಲಿಯ ರಾಜಾಸ್ಥಾನದ ಪಂಡಿತರು. ಹಾಗಾಗಿ ಅಲ್ಲಿ ನನ್ನ ಗೌರವಾರ್ಥ ರಾಜಸಭೆ ವ್ಯವಸ್ಥೆಯಾಯಿತು. ಕಾವ್ಯದ ವಿಷಯದಲ್ಲಿ ಪ್ರವಚನ ನೀಡಿ ರಾಜ ಸನ್ಮಾನಕ್ಕೆ ಪಾತ್ರನಾದೆ. ಅವರ ಆಸ್ಥಾನದಲ್ಲಿಯೇ ಕೆಲವು ಕಾಲ ನನ್ನನ್ನು ನಿಲ್ಲಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ನನ್ನ ತಪಸ್ಸು ಕಳೆದ 1 ವರ್ಷದಿಂದ ನಿಂತು ಹೋಗಿದ್ದುದರಿಂದ ದೃಢಮನಸ್ಸುಮಾಡಿ ಅಲ್ಲಿಂದ ಹೊರಟು ಸುಪ್ರಸಿದ್ಧ ವೈದ್ಯನಾಥ ಕ್ಷೇತ್ರಕ್ಕೆ ಬಂದೆ. ಅಲ್ಲಿ ಶಿವ ಪಂಚಾಕ್ಷರೀ ಪುರಶ್ಚರಣೆ ಮಾಡುತ್ತ 15 ದಿನಗಳು ಕ್ಷಣದಂತೆ ಕಳೆದುಹೋದವು. (ಗಣಪತಿ ಶಾಸ್ತ್ರಿಗಳು ಇಲ್ಲಿ ಧ್ಯಾನಾಸ

ಕ್ತರಾಗಿದ್ದಾಗ ಅವರ ಬಳಿ ಇದ್ದ ಒಂದಿಷ್ಟು ಚಿಲ್ಲರೆ ಕಾಸುಗಳು-ಬಟ್ಟೆಗಳನ್ನು ಬಿಟ್ಟು ಉಳಿದ ಹಣವನ್ನೆಲ್ಲಾ ಯಾರೋ ಲಪಟಾಯಿಸಿ ಬಿಟ್ಟರು. ಸಂಜೆ ಧ್ಯಾನ ದಿಂದ ಬಹಿರ್ಮುಖರಾದ ನಂತರವೇ ಇದು ಅವರ ಗಮನಕ್ಕೆ ಬಂದಿತಾದರೂ ಅದರಬಗ್ಗೆ ಅವರು ಸ್ವಲ್ಪವೂ ಚಿಂತೆ ಹಚ್ಚಿಕೊಳ್ಳಲಿಲ್ಲ.)

ಇದೇ ಸಂದರ್ಭದಲ್ಲಿ ತಂತ್ರವಿದ್ಯಾನಿಪುಣರೂ-ಉಪಾಸಕರೂ ಆದ ಸುರೇಶ ಮಿಶ್ರರೆಂಬ ಸದ್ಗೃಹಸ್ಥರ ಪರಿಚಯ ಉಂಟಾಗಿ ಅವರ ಮನೆಯಲ್ಲಿ ನನ್ನ ವಸತಿಗೆ ಅವಕಾಶದೊರೆಯಿತು. ಅವರೊಡನೆ ಚರ್ಚೆ-ಸಂವಾದ ನಡೆಸುತ್ತಾ ಪರ ಸ್ಪರ ಆತ್ಮೀಯತೆ ಬೆಳೆಯಿತು. ಒಮ್ಮೆ ಮಂತ್ರ-ತಂತ್ರಗಳ ಕುರಿತು ಮಾತನಾಡುತ್ತಿದ್ದಾಗ ತಜ್ಞರಾದ ಅವರು "ಮಂತ್ರ ಮಹೋದಧಿ" ಗ್ರಂಥದಲ್ಲಿ ಕಾಣ ಬರುವ "ತಾರಾಮಂತ್ರ" ಸರಿಯಾದ ಕ್ರಮದಲ್ಲಿ ಇಲ್ಲ ಎಂಬುದನ್ನು ನನಗೆ ಮನಗಾಣಿಸಿ ಕೊಟ್ಟರು. ಪರಂಪರೆಯಿಂದ ಬಂದಿರುವ ಈ ಮಂತ್ರದ ನಿಜ ರಹಸ್ಯವನ್ನು ನನಗೆ ವಿಧಿಪೂರ್ವಕ ತಿಳಿಸಿಹೇಳಿದರು.

ತಪಸ್ಸು ನಡೆಸುತ್ತಿದ್ದ ಸಂದರ್ಭದಲ್ಲಿಯೇ ಒಂದು ರಾತ್ರಿ ಸ್ವಪ್ನದಲ್ಲಿ ಕಾಣಿಸಿಕೊಂಡ ಪರಶಿವನು ವಾಕ್ಯವೊಂದರ ಮೂಲಕ ನನಗೆ ಯಾವುದೋ ನಿರ್ದೇಶ ನೀಡಿದ್ದಾನೆ. ಎಚ್ಚರಗೊಂಡಮೇಲೂ ಆ ಸನ್ನಿವೇಶ ನನ್ನ ಮನಃಪಟಲದ ಮೇಲೆ ಮತ್ತೆ ಮತ್ತೆ ಮೂಡಿ ಬರುತ್ತಿದೆ. ಆದರೆ ಮಹಾದೇವನ ಮುಖದಿಂದ ಹೊರಬಂದ ಆ ನಿರ್ದೇಶ ಯಾವುದು ? ಎಷ್ಟೇ ಪ್ರಯತ್ನಿಸಿದರೂ ಆ ಮಾತು ನೆನಪಿಗೆ ಬರಲೇ ಇಲ್ಲ. ಅಂತೂ ಈ ಸ್ವಪ್ನದರ್ಶನ ನನಗೆ 2 ನೆಯ ಸಲ ದೊರೆತದ್ದು.

ಇದಾದ ನಂತರ ನಾನು ಭಗವಾನ್ ವಿಶ್ವನಾಥನ ಸಂದರ್ಶನಕ್ಕಾಗಿ ಕಾಶೀ ಕ್ಷೇತ್ರಕ್ಕೆ ಹೊರಟೆ. ಪ್ರಯಾಣದ ಖರ್ಚಿಗೆ ನನ್ನ ಬಳಿ ಹಣವೇನೂ ಇರಲಿಲ್ಲ. ನಾನು ತಪಸ್ಸು ನಡೆಸುತ್ತಿದ್ದ ವೈದ್ಯನಾಥ ಕ್ಷೇತ್ರಕ್ಕೆ ಗದ್ವಾಲ ಎಂಬ ಸಂಸ್ಥಾನವು ಸಮೀಪದಲ್ಲಿದ್ದುದರಿಂದ ಅಲ್ಲಿಯ ರಾಜನನ್ನು ಕಂಡು ಹಣ ಪಡೆಯಬಹುದೆಂದು ಎಣಿಸಿ ಅಲ್ಲಿಗೆ ಹೋದೆ. ಆ ರಾಜನಿಗೆ ಚದುರಂಗ ಆಟದಲ್ಲಿ ವಿಶೇಷ ಆಸಕ್ತಿ ಇದೆಯೆಂದೂ ಅವನ ಆಸ್ಥಾನದಲ್ಲಿ ಅಷ್ಟ ದಿಗ್ಗಜಗಳಂತೆ 8 ಮಂದಿ ಚದುರಂಗ ತಜ್ಞರು ಇರುವುದಾಗಿಯೂ ತಿಳಿಯಿತು.

ರಾಜನನ್ನು ಭೇಟಿಮಾಡಿದೆ. ಮಾತಿನ ಮಧ್ಯೆ ಚದುರಂಗದ ವಿಷಯವನ್ನು ಪ್ರಸ್ತಾಪಿಸಿದಾಗ ನನಗೆ ಅದರಲ್ಲಿ ಪರಿಶ್ರಮವಿದೆಯೆಂಬುದು ಆತನ ಗಮ

ನಕ್ಕೆ ಬಂದು ಆಟಕ್ಕೆ ಆಹ್ವಾನ ನೀಡಿದ. ಆಟಕ್ಕೆ ಮುಂಚೆ ನನ್ನ ಷರತ್ತುಗಳನ್ನು ಆತನ ಮುಂದೆ ಇಟ್ಟೆ :- ಆಟದಲ್ಲಿ ನಾನು ರಾಜನನ್ನೂ ಆತನ ಅಷ್ಟ ದಿಗ್ಗಜಗಳನ್ನೂ ಪ್ರತ್ಯೇಕವಾಗಿ ಸೋಲಿಸಿದರೆ ನನಗೆ ರಾಜನು 10/- ರೂಪಾಯಿ ಸಂಭಾವನೆ ನೀಡಬೇಕು. ಒಂದು ವೇಳೆ ನಾನು ಅವರ ಪೈಕೀ ಯಾರೊಬ್ಬರಿಗೆ ಸೋತರೂ ಈ ಬಹುಮಾನ ಪಡೆಯುವ ಅರ್ಹತೆ ನನಗೆ ಇರುವುದಿಲ್ಲ.

ಆಟವನ್ನು ಪ್ರಾರಂಭಿಸಿ ಎಲ್ಲರನ್ನೂ ಸೋಲಿಸಿದೆ. ಸಂತುಷ್ಟನಾದ ಆ ಉದಾರಿ ಸಂಸ್ಥಾನಿಕನು ಯಾತ್ರಾರ್ಥಿಯಾದ ನನ್ನನ್ನು ಅರ್ಹರೀತಿಯಲ್ಲಿ ಸನ್ಮಾನಿಸಲು ಸಿದ್ಧತೆ ನಡೆಸಿದ. ಆದರೆ ಪಣವಾಗಿ ನಿರ್ಧರಿಸಲಾಗಿದ್ದ ಹತ್ತು ರೂಪಾಯಿಗಳಿಗಿಂತ ಹೆಚ್ಚಾಗಿ ಪಡೆಯಲು ನಾನು ಸಿದ್ಧನಿರಲಿಲ್ಲ.

ದಶರೂಪ್ಯಾಧಿಕಂ ಮಾ ಭೂದಿತಿ ನ ಸ್ವೀಕೃತಂ ಮಯಾ।
ಪುಣ್ಯಾನಾಂ ದೂಷಣಾಯಾಲಮತ್ಯಾಶಾಪೂತಚೇತಸಾಂ॥

ಆಸೆ ಬಡಕುತನವೆಂಬುದು ಪರಿಶುದ್ಧ ಮನಸ್ಸಿನವರ ಪುಣ್ಯವಿಶೇಷಕ್ಕೆ ಕಂಟಕ ಪ್ರಾಯವಾದುದು. ಹತ್ತುರೂಪಾಯಿಗಿಂತ ಹೆಚ್ಚಿಗೆ ನನಗೆ ಬೇಡವೆಂದು ನಿರ್ಧರಿಸಿದೆ.

ಆ ರಾಜನಿಗೆ ಹೇಳಿದೆ :- "ಕಾಶಿಗೆ ಹೊರಟಿರುವ ನನ್ನ ಪ್ರಯಾಣದ ಖರ್ಚಿಗೆ ಹತ್ತು ರೂಪಾಯಿಗಳು ಸಾಕು. ಅವಕ್ಕಿಂತ ಹೆಚ್ಚೇನೂ ಬೇಕಾಗಿಲ್ಲ. ತಪ್ಪುತಿಳಿಯ ಬಾರದು." ಆತನಿಂದ ಬೀಳ್ಕೊಂಡು ಕಾಶಿಯ ಕಡೆಗೆ ಪಯಣಿಸಿದೆ.

ಕಾಶಿಗೆ ತಲುಪಿ ಅಲ್ಲಿಯ ಪರಿಸರ-ಪರಿಸ್ಥಿತಿಗಳನ್ನು ಗಮನಿಸಿದ ಮೇಲೆ ಅದು ತಪಾಚರಣೆಗೆ ತಕ್ಕ ಸ್ಥಳವೆಂದು ನನಗೆ ಅನಿಸಲಿಲ್ಲ. ಅಲ್ಲಿ ಇದ್ದ ನನ್ನ ಬಂಧು ಭವಾನಿಶಂಕರ ಎಂಬವರೊಡನೆ ಆಯೋಧ್ಯೆಗೆ ಹೋದೆ. ಅಯೋಧ್ಯೆಗೆ ತಲುಪುತ್ತಿದ್ದಂತೆಯೇ ಭವಾನೀಶಂಕರರಿಗೆ ಆಮಶಂಕೆ ಪ್ರಾರಂಭವಾಯಿತು. ಕಾಶಿಯಲ್ಲಿದ್ದವರು ಅಯೋಧ್ಯೆಗೆ ಬಂದು ಇಲ್ಲಿ ಸಾವನ್ನು ಅಪ್ಪುವುದಕ್ಕಿಂತಲೂ "ಕಾಶ್ಯಾಂತು ಮರಣಾನ್ಮುಕ್ತಿಃ" ಕಾಶಿಯಲ್ಲಿ ಮರಣಿಸಿದರೆ ಮುಕ್ತಿ ದೊರೆಯುತ್ತದೆ. ಎಂಬ ಸೂಕ್ತಿಯಂತೆ ವಾಪಸು ಹೋಗಬೇಕು ಎಂದು ಹಂಬಲಿಸ ತೊಡಗಿದರು. ಅವರ ಆಸೆ ಪೂರೈಸಲು ಅವರನ್ನು ಪುನಃ ಕಾಶಿಗೆ ಕರೆತಂದು ಬಿಟ್ಟು ನಾನು ಕಾನ್ಪುರಕ್ಕೆ ಹೋದೆ.

ಕಾನ್ಪುರದಲ್ಲಿ ಗಂಗೆಯ ತಡಿಯಲ್ಲಿ 3ತಿಂಗಳು ಇದ್ದು ತಪಸ್ಸು ನಡೆಸಿದೆ. ಆ ಸಂದರ್ಭದಲ್ಲಿ ಯೋಗಿಯೊಬ್ಬರ ಭೆಟ್ಟಿಯಾಯಿತು. ಹೊರತೋರಿಕೆಗೆ ಶುದ್ಧ ಹುಚ್ಚರಂತೆ ಕಾಣಿಸುತ್ತಿದ್ದರೂ-ಜ್ಞಾನಯೋಗಿಗಳಾಗಿದ್ದ ಲಕ್ಷ್ಮಣಶಾಸ್ತ್ರಿಗಳೆಂಬವರೇ ಅವರು. ವ್ಯಾಕರಣ-ವೇದಾಂತಗಳಲ್ಲಿ ತುಂಬಾ ಪರಿಣತರಾದ ಅವರೊಡನೆ ಸಂಭಾಷಣೆಯೂ ನಡೆಯಿತು. ಈ ನೆನಪಿಗಾಗಿ ಯಾವುದಾದರೂ ಉಪಯುಕ್ತ-ಉಪದೇಶ ವಾಕ್ಯವನ್ನು ನೀಡಬೇಕೆಂದು ಅವರಲ್ಲಿ ನಿವೇದಿಸಿಕೊಂಡೆ ಅವರು ಈ ವಾಕ್ಯವನ್ನು ಅನುಗ್ರಹಿಸಿದರು ;– "ಯದ್ಯತ್ಪಶ್ಯಸಿ ನೇತ್ರಾಭ್ಯಾಂ ತತ್ತದ್ಬ್ರಹ್ಮೇತಿ ಭಾವಯ" "ಕಣ್ಣಿನಿಂದ ನೀನು ನೋಡುವುದೆಲ್ಲವನ್ನೂ ಪರಬ್ರಹ್ಮವೆಂದೇ ತಿಳಿ."

ಈ ಸಂದರ್ಭದಲ್ಲಿ ನಮ್ಮ ತಂದೆಯವರಿಗೆ ಕಣ್ಣಿನ ಬೇನೆ ಕಾಣಿಸಿಕೊಂಡಿರುವುದಾಗಿಯೂ ನಾನು ಗ್ರಾಮಕ್ಕೆ ಹಿಂತಿರುಗಬೇಕೆಂದೂ ಪತ್ರಬಂತು. ಊರಿಗೆ ತಲುಪಿ ಒಂದು ವರ್ಷ ಮನೆಯಲ್ಲಿಯೇ ಉಳಿದುಕೊಂಡೆ. *

ನಂತರ ಹೆಂಡತಿ-ಮಗನೊಡನೆ ಮಂದಾಸಾಕ್ಕೆ ಹೋಗಿ ಕೆಲವು ದಿನ ಇದ್ದೆ, ಅಷ್ಟರಲ್ಲಿ ಹೆಂಡತಿಗೆ ಅನಾರೋಗ್ಯಉಂಟಾಯಿತು. ಮಗನೊಡನೆ ಅವಳನ್ನು ತವರು

---

* ಗಣಪತಿ ಶಾಸ್ತ್ರಿಗಳು ಉತ್ತರ ಭಾರತ ಯಾತ್ರೆಯಿಂದ ಊರಿಗೆ ಮರಳಿದುದು ಕ್ರಿ.ಶ. 1900ರ ಕೊನೆಯ ಭಾಗದಲ್ಲಿ. ಅದಕ್ಕೆ 6ತಿಂಗಳ ಮುಂಚೆ ನವದ್ವೀಪದಲ್ಲಿ ಅವರು ಸಂಪಾದಿಸಿದ "ಕಾವ್ಯಕಂಠ" ಪ್ರಶಸ್ತಿಯನ್ನು ತಮ್ಮ ತಂದೆಯವರಿಗೆ ತಲುಪಿಸುವ ಸಲುವಾಗಿ ಮಂದಾಸಾ ಮಹಾರಾಜರಿಗೆ ನವದ್ವೀಪದಿಂದಲೇ ಕಳಿಸಿದ್ದುದು ಸರಿಯಷ್ಟೆ ! ಅದು ಮಹಾರಾಜರ ಕೈಸೇರಿದೊಡನೆ ಗಣಪತಿಶಾಸ್ತ್ರಿಗಳ ತಂದೆ ನರಸಿಂಹ ಶಾಸ್ತ್ರಿಗಳನ್ನು ತಮ್ಮ ಆಸ್ಥಾನಕ್ಕೆ ಬರಮಾಡಿಕೊಂಡು ಸನ್ಮಾನಿಸಿ ಪ್ರಶಸ್ತಿ ಪತ್ರವನ್ನು ತಲುಪಿಸಿದ್ದ ವಿಷಯ ಊರಿಗೆ ಬಂದ ಮೇಲೆ ಗಣಪತಿ ಶಾಸ್ತ್ರಿಗಳಿಗೆ ತಿಳಿಯಿತು. ಈ ವೇಳೆಗಾಗಲೇ ನವದ್ವೀಪದಲ್ಲಿ ಅವರ ಅದ್ವಿತೀಯ ಪಾಂಡಿತ್ಯ ಪ್ರದರ್ಶನ-ಪ್ರಶಸ್ತಿಗಳಿಕೆ-ತಪಸ್ಸಾಧನೆಗಳ ಸುದ್ದಿ ಕಲವರಾಯಿ ಗ್ರಾಮ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವ್ಯಾಪಕವಾಗಿ ಹರಡಿತ್ತು. ಇಂತಹ ಸನ್ನಿವೇಶದಲ್ಲಿ ಸ್ವಗ್ರಾಮಕ್ಕೆ ಹಿಂದಿರುಗಿದ ಗಣಪತಿ ಶಾಸ್ತ್ರಿಗಳು ಎಲ್ಲರಿಗೂ ಒಂದು ರೀತಿಯಲ್ಲಿ ಆಕರ್ಷಣೆಯ ಕೇಂದ್ರವೆನಿಸಿದರು. ಅವರನ್ನು ನೋಡಲೆಂದೇ ಬರುವ ಬಂಧುಗಳು ಅಭಿಮಾನಿಗಳ ಬಳಗದಿಂದ ತುಂಬಿರುತ್ತಿದ್ದ ಮನೆಯಲ್ಲಿ ಹಬ್ಬದ ಸಡಗರದ ವಾತಾವರಣ. ಅವರ ತಂದೆ ನರಸಿಂಹಶಾಸ್ತ್ರಿಯವರಿಗೂ-ಹೆಂಡತಿ ವಿಶಾಲಾಕ್ಷಿಗೂ ಆದ ಆನಂದ ಹೇಳತೀರದು.

ಮನೆಗೆ ಕಳುಹಿಸಿ ನಾನು ಸಹೋದರ ಶಿವರಾಮನೊಡನೆ ಭುವನೇಶ್ವರಕ್ಕೆ ಹೋದೆ. ಅಲ್ಲಿ ದಂತವಾಣೀ ಸಂಸ್ಥಾನದ ರಾಜರ ಆಹ್ವಾನದಂತೆ ಅವರ ಅರಮನೆಗೆ ಹೋಗಿ ಅಲ್ಲಿಂದ ವಾಪಸು ಹೊರಟೆವು.

ಅಂದು ಭಾನುವಾರ ಮುಸ್ಸಂಜೆಯ ಸಮಯ. ಹೀಗೆ ಪಯಣಕ್ಕೆ ನಿಷಿದ್ಧವೆನಿಸಿದ ಮುಹೂರ್ತದಲ್ಲಿ ನಾವು ಹೊರಟಿದ್ದೇವೆ. ಇದ್ದಕ್ಕಿದ್ದಂತೆಯೇ ಆಗಸದಲ್ಲಿ ಕಾರ್ಮೋಡಗಳು ದಟ್ಟೈಸಿ ಕಾವಳ ತುಂಬಿದುದರ ಬೆನ್ನಿಗೇ ಕುಂಭ ದ್ರೋಣ ಮಳೆ ಸುರಿಯತೊಡಗಿತು. ಸೂರ್ಯ ಮುಳುಗುವ ಮುನ್ನವೆ ಕರಾಳ ಕತ್ತಲೆ ಕವಿದುದರ ಜೊತೆಗೆ ಭೂಮಿಯಲ್ಲಿ ಹಳ್ಳ-ತಿಟ್ಟು-ದಾರಿ ಏನೊಂದೂ ತಿಳಿಯಲಾಗದಂತೆ ಎಲ್ಲೆಲ್ಲೂ ನೀರು ತುಂಬಿ ಹರಿಯಲಾರಂಭವಾಯಿತು. ಕಣ್ಣು ಬಿಟ್ಟು ಕೊಳ್ಳುವುದೂ ಒಂದೇ ಮುಚ್ಚಿಕೊಳ್ಳುವುದೂ ಒಂದೇ ಹೊರಗಿನ ಯಾವುದೂ ಗೋಚರಕ್ಕೆ ಬಾರದಂತಹ ಕಗ್ಗತ್ತಲು. ಅದೇ ಸ್ಥಿತಿಯಲ್ಲಿ ನಾವು ಒಂದೊಂದೇ ಹೆಜ್ಜೆ ಎತ್ತಿ ಇಡುತ್ತ ಸಾಗುತ್ತಲೇ ಇದ್ದೇವೆ. ಕಣ್ಣು ಕೋರೈಸುವ ಮಿಂಚಿನ ಪ್ರಕಾಶವೊಂದು ಆ ಕ್ಷಣದಲ್ಲಿ ನಾವಿದ್ದ ಭಯಂಕರ ಪರಿಸ್ಥಿತಿಯನ್ನು

ಗಣಪತಿ ಶಾಸ್ತ್ರಿಗಳನ್ನು ತಮ್ಮ ಆಸ್ಥಾನದಲ್ಲಿಯೇ ಸ್ಥಿರವಾಗಿ ನಿಲ್ಲಿಸಿ ಕೊಳ್ಳಬೇಕೆಂಬುದು ಮುಂದಾಸಾ ಮಹಾರಾಜರ ನಿರ್ಧಾರ. ಇದನ್ನು ತಮ್ಮಲ್ಲಿಗೆ ಬಂದ ಗಣಪತಿ ಶಾಸ್ತ್ರಿಗಳಿಗೆ ಮಹಾರಾಜರು ತಿಳಿಸಿದಾಗ ಅವರು ಅದನ್ನು ಒಪ್ಪಿಕೊಳ್ಳಲಿಲ್ಲ. ತಮ್ಮ ತಂದೆ ನರಸಿಂಹ ಶಾಸ್ತ್ರಿಗಳು ಕಣ್ಣಿನ ಬೇನೆಯಿಂದ ಬಾಧೆ ಪಡುತ್ತಿರುವಾಗ ತಾವು ಅವರ ಸಂಗಡವೇ ಇದ್ದು ಯೋಗಕ್ಷೇಮ ನೋಡಿಕೊಳ್ಳಬೇಕಾದ್ದು ಕರ್ತವ್ಯವೆಂದು ನಿರ್ಧರಿಸಿದರು. ತಾಯಿ ನರಸಮಾಂಬಾರವರು ಬಹಳ ಹಿಂದೆಯೇ ಕಾಲವಶರಾದುದರಿಂದ ಅವರ ಸೇವೆಮಾಡಿ ಮಾತೃ ಋಣ ತೀರಿಸುವ ಅವಕಾಶ ತಪ್ಪಿ ಹೋಗಿತ್ತು. ತಮ್ಮ ಬಾಲ್ಯದಲ್ಲಿ 5 ವರ್ಷ ವಯಸ್ಸು ಆಗುವವರೆಗೂ ಹಲವು ಬಗೆಯ ರೋಗಗಳಿಗೆ ಒಳಗಾಗಿ ತಾಯಿ-ತಂದೆಗಳಿಗೆ ಆತಂಕಕ್ಕೆ ಕಾರಣವಾಗಿದ್ದ ನೆನಪು ಮರುಕಳಿಸಿತು. ಈಗ ತಂದೆಯವರಿಗೆ ತಮ್ಮ ನೆರವು-ಸೇವೆ ಅಗತ್ಯವಿದೆ. ಅದನ್ನು ಸಲ್ಲಿಸಿ ಪಿತೃಋಣವನ್ನು ಸ್ವಲ್ಪ ಮಟ್ಟಿಗಾದರೂ ತೀರಿಸಬೇಕೆಂಬ ಸಂಕಲ್ಪ ತೊಟ್ಟರು. ಹಟತೊಟ್ಟು ಆಯುರ್ವೇದವನ್ನು ಅಭ್ಯಾಸಮಾಡಿ ತಂದೆಯವರ ಕಣ್ಣುನೋವಿನ ಪರಿಹಾರಕ್ಕೆ ತಕ್ಕ ಚಿಕಿತ್ಸಾ ವಿಧಾನ ರೂಪಿಸಿಕೊಂಡು ಕೊನೆಗೆ ಆ ಪೀಡನೆಯಿಂದ ಅವರನ್ನು ಪಾರು ಮಾಡಿದರು. ನಂತರ ಎಲ್ಲರೂ ನಂದಿಗ್ರಾಮಕ್ಕೆ ಹೋಗಿ ಕೃಷ್ಣ ನಾಯಕರ ಆತಿಥ್ಯ ಪಡೆದು ಯುಗಾದಿ ಹಬ್ಬದ ಸಲುವಾಗಿ ಮುಂದಾಸಾಕ್ಕೆ ಹೋದರು.

ನಮ್ಮ ಕಣ್ಣಿಗೆ ಕಾಣಿಸಿ ಕೊಟ್ಟಿತು. ಇನ್ನು ನಾವು ಎತ್ತಿ ಇಡಲಿದ್ದ ಮುಂದಿನ ಹೆಜ್ಜೆಯೇ ನಮ್ಮನ್ನು ಮೃತ್ಯುಕೂಪಕ್ಕೆ ತಳ್ಳಿಬಿಡುವಂತೆ ನಮ್ಮ ಎದುರಿಗೆ ಬಾಯಿ ತೆಗೆದುಕೊಂಡ ಅಗಾಧಕಣಿವೆ. ಆದರೆ ಇಂದ್ರ ದೇವನ ಕರುಣೆ ನಮ್ಮ ಪಾಲಿಗೆ ಮಿಂಚಿನ ರೂಪದಲ್ಲಿ ಆ ಕ್ಷಣಕ್ಕೆ ಒದಗಿ ಬಂದು ನಮ್ಮನ್ನು ಪಾರು ಮಾಡಿತು. ನಾವು ಪ್ರಪಾತದ ಅಂಚಿನಿಂದ ಇತ್ತ ಕಡೆಗೆ ಸರಿದು ಮುಂದುವರಿಯಲಾರಂಭಿಸಿದೆವು. ಈಗ ನಾವು ರೈಲುವೇ ಹಳಿಗಳ ನಡುವೆ ಸಾಗುತ್ತಿದ್ದೇವೆ. ರೈಲುವೇ ಹಳಿಗಳನ್ನು ಬಿಟ್ಟು ಜನರು ನಡೆದಾಡುವ ದಾರಿಯನ್ನು ಹಿಡಿಯಲು ನಮ್ಮಿಂದ ಸಾಧ್ಯವಾಗುತ್ತಿಲ್ಲ. ಮತ್ತೊಮ್ಮೆ ಪ್ರಾಣಾಪಾಯ. ಗೂಡ್ಸ್‌ರೈಲೊಂದು ವೇಗವಾಗಿ ಬರುತ್ತಿರುವ ಸಪ್ಪಳ ಕಿವಿಗಳಿಗೆ ಅಪ್ಪಳಿಸುತ್ತಿದೆ. ರೈಲುವೇ ಹಳಿಗಳ ನಡುವೆಯೇ ಇರುವ ನಾವು ಆ ಗೂಡ್ಸ್‌ಗಾಡಿಯ ಅಡಿಗೆ ಸಿಕ್ಕಿ ಗುರುತು ಸಿಗದಂತೆ ಅಪ್ಪಚ್ಚಿಯಾಗಿ ಬಿಡಬೇಕು. ಅಷ್ಟರಲ್ಲಿ ಮತ್ತೊಂದು ಮಿಂಚು ಕೋರೈಸಿ ದಾರಿಯನ್ನು ಕಂಡುಕೊಂಡು ಪಕ್ಕಕ್ಕೆ ನೆಗೆದು ಹಾರಿದೆವು. ದೇವೇಂದ್ರ ಪುನಃ ನಮ್ಮ ಪ್ರಾಣಉಳಿಸಿದ್ದ.

ಸ್ವಲ್ಪ ಹೊತ್ತಿಗೆ ಮಳೆ ನಿಂತು ಹೋಯಿತು. ಆಕಾಶ ಸ್ವಚ್ಛವಾಯಿತು. ದಂತವಾಣಿ ನಿಲ್ದಾಣವನ್ನು ಸೇರಿ ರೈಲು ಹಿಡಿದು ಕಲ್ಕತ್ತಾ ನಗರವನ್ನು ತಲುಪಿದೆವು. ಅಲ್ಲಿ ಕಾಳಿಕಾ ಮಾತೆಯನ್ನು ಸಂದರ್ಶಿಸಿದೆವು. ಈ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಊರು-ಮನೆ-ಹೆಂಡತಿಯ ನೆನಪು ಕಾಡತೊಡಗಿತು. ಕುಟುಂಬವನ್ನು ಕೂಡಿಕೊಳ್ಳಬೇಕೆಂಬ ಹಂಬಲ ತೀವ್ರವಾಯಿತು. ತಪಸ್ಸು-ದೇಶ ಪರ್ಯಟನಗಳ ನಡುವೆ ಇಂತಹ ವ್ಯಾಮೋಹ ಹಿಂದೆಂದೂ ನನ್ನನ್ನು ಆವರಿಸಿದ್ದಿಲ್ಲ. ತಮ್ಮ

ಸಾಮಾನ್ಯವಾಗಿ ಈ ಅರಮನೆಗಳದು ಒಂದು ಬಗೆಯ ಉಸಿರು ಕಟ್ಟಿಸುವ ಗಂಭೀರ ವಾತಾವರಣ. ಇದು ಸರಳಜೀವಿಗಳೂ ತತ್ತ್ವೋಪಾಸಕರೂ ಆದವರಿಗೆ ಒಗ್ಗುವುದಿಲ್ಲ. ಆ ವೈಭವದ ವಾತಾವರಣ ಪರಮಶ್ರೇಷ್ಠವೆಂದು ತಿಳಿದುಕೊಂಡ ವಿಲಾಸಿಗಳು ತತ್ತ್ವಚಿಂತಕರ ಜೀವನ ಕ್ರಮವನ್ನೇ ವಿಪರೀತವಾಗಿ ಪರಿಗಣಿಸಿ ಬಿಡುತ್ತಾರೆ. ಮಂದಾಸಾ ರಾಣೀವಾಸದವರು ವಿಶಾಲಾಕ್ಷಿಯವರ ಬಗ್ಗೆ ಗೌರವ ತಳೆದು ಅದ್ದೂರಿಯ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರಾದರೂ ವಿಶಾಲಾಕ್ಷಿಯವರಿಗೆ ಅದರಿಂದ ಒಂದುರೀತಿಯಲ್ಲಿ ಮುಜಗರವೇ ಆಯಿತು. ವೈಭವೋಪೇತ ವ್ಯವಸ್ಥೆಗಳಿಗೆ ಅಳವಟ್ಟು ದಿನಗಳೆಯಲು ಸಾಧ್ಯವಿಲ್ಲ ! ಹಾಗೆಂದು ಅರಮನೆಯ ಸೌಕರ್ಯಗಳನ್ನು ನಿರಾಕರಿಸುವಂತೆಯೂ ಇಲ್ಲ ! ಎರಡೂ ಬೇಡವೆಂದು ಅವರು ತವರು ಮನೆಗೆ ಹೊರಟರು. ಗಣಪತಿಶಾಸ್ತ್ರಿಗಳು-ಶಿವರಾಮ ಭುವನೇಶ್ವರದ ದಾರಿ ಹಿಡಿದರು. ತಾವು ಅತಿಯಾದ ಮೆಹರ್ಬಾನಿಕೆಮಾಡದೇ ಇದ್ದಿದ್ದರೇ-ಗುರು ಹಾಗೂ ಗುರುಪತ್ನಿ

ಶಿವರಾಮನು ಪ್ರಯಾಗಕ್ಕೆ ಹೋಗಿ ತಪಸ್ಸು ಮುಂದುವರಿಸುವ ತೀರ್ಮಾನಕ್ಕೆ ಬಂದಿದ್ದ. ಆದರೆ ಅದನ್ನು ಬದಲಿಸಿ ನನ್ನೊಡನೆ ಶ್ರೀಕಾಕುಲಕ್ಕೆ ಬಂದ. ಅಲ್ಲಿ ರೈಲಿನಿಂದ ಇಳಿದ ನಾವು ನಮ್ಮ ಗ್ರಾಮಕ್ಕೆ ನಡೆದೇ ಹೋಗಬೇಕು. ಆದರೆ ಅಲ್ಲಿ ವಿಪರೀತ ಮಳೆ. ಶೀತಲ ವಾತಾವರಣ. ಮತ್ತೆ ನಮ್ಮ ನಿರ್ಧಾರವನ್ನು ಬದಲಾಯಿಸಿ ತಪಸ್ಸಿಗಾಗಿ ದಕ್ಷಿಣದ ಕಡೆಗೆ ಹೋಗಲು ತೀರ್ಮಾನಿಸಿದೆವು. ಸಧ್ಯದಲ್ಲಿಯೇ ಊರಿಗೆ ಬರುವುದಾಗಿ ಪತ್ರ ಬರೆದೆ. ಪವಿತ್ರವಾದ ಕಂಚಿ ಕ್ಷೇತ್ರಕ್ಕೆ ಹೋಗಬೇಕೆಂಬುದು ನಮ್ಮ ಉದ್ದೇಶ. ಆದರೆ ರೈಲು ಪ್ರಯಾಣದ ಖರ್ಚಿಗಾಗಿ ಹಣ ಹೊಂದಿಸಿಕೊಳ್ಳಬೇಕಾಗಿತ್ತು. ವಿಜಯವಾಡಕ್ಕೆ ಬಂದೆವು.

ಮೈಸೂರು ಪ್ರಾಂತ್ಯಕ್ಕೆ ಸೇರಿದ ಶಿವಗಂಗೆಯ ಮಠಾಧೀಶರು ಅಲ್ಲಿ ಬಿಡಾರ ಮಾಡಿದ್ದರು. ಅವರನ್ನು ಸಂಪರ್ಕಿಸಿ ಧನ ಸಹಾಯ ಪಡೆದುಕೊಂಡು ಕಾಳಹಸ್ತಿಯನ್ನು ಸೇರಿದೆವು. ಮುಂದೆ ಕಾಂಚೀ ಪುರಕ್ಕೆ ರೈಲಿನಲ್ಲಿ ಪ್ರಯಾಣ ಮಾಡಲು ಸಾಕಾಗುವಷ್ಟು ಹಣ ಉಳಿದಿರಲಿಲ್ಲ. ನನ್ನ ಬುದ್ಧಿ ಚುರುಕಾಗಿ ಕೆಲಸ ಮಾಡಿತು. ಕಲ್ಪನೆಯ ಕಥೆಯೊಂದನ್ನು ಹೆಣೆದು ಹೇಳುತ್ತ ಶಿವರಾಮನೊಡನೆ ಕಾಲು ನಡಿಗೆಯಿಂದಲೇ ಹೊರಟೆ. ನನಗೆ ಕಥೆಯನ್ನು ಹೇಳುವ ಉತ್ಸಾಹ. ಶಿವರಾಮನಿಗೆ ಕಥೆಯ ಮುಂದಿನ ಸ್ವಾರಸ್ಯ ಸನ್ನಿವೇಶ ತಿಳಿಯುವ ತವಕ. ಹೀಗಾಗಿ ಇಬ್ಬರಿಗೂ ಕಾಲುನಡಿಗೆಯ ದಣಿವು ಅರಿವಿಗೇ ಬಾರದೆ ರೇಣಿಗುಂಟಾ ತಲುಪಿದೆವು. ಅಲ್ಲಿಂದ ರೈಲು ಗಾಡಿಯಲ್ಲಿ ಪಯಣಿಸಿ ಕಾಂಚೀಪುರ ಸೇರಿದೆವು.

* ಅಲ್ಲಿ ಜ್ಯೋತಿಷ್ಯವನ್ನು ಬಲ್ಲ ನಾರಾಯಣ ಜೋಯಿಸರೆಂಬವರ ಪರಿಚಯ

ಯರನ್ನು ಇನ್ನೂ ಕೆಲವು ಕಾಲ ಅರಮನೆಯಲ್ಲಿ ಉಳಿಸಿ ಕೊಳ್ಳಬಹುದಾಗಿತ್ತೆಂದು ಅರಮನೆಯವರು ಪಶ್ಚಾತ್ತಾಪ ಪಟ್ಟರು)

* ನಾರಾಯಣ ಜೋಯಿಸರಿಂದ ಅರುಣಾಚಲದ ಹೆಸರು ಕೇಳಿದಾಗಲೆ ಗಣಪತಿ ಶಾಸ್ತ್ರಿಗಳಿಗೆ ಏನೋ ಒಂದು ಬಗೆಯ ಆಕರ್ಷಣೆ-ಆನಂದ ಪುಳಕ ಉಂಟಾಗಿತ್ತು. ಇಲ್ಲಿಗೆ ಬಂದ ಅವರು ಅರುಣಾಚಲೇಶ್ವರನನ್ನು ಸಂದರ್ಶಿಸುವ ಮೊದಲು ಅಪೀತ ಕುಚಾಂಬಾ ದೇಗುಲಕ್ಕೆ ಹೋಗಿ ದೇವಿಯ ದರ್ಶನ ಮಾಡಿದರು. ಆ ಸಂದರ್ಭದಲ್ಲಿ ಕ್ಷಣಕಾಲ ದೇವಿಯ ವಿಗ್ರಹದಿಂದ ಪ್ರಸಾದ ಪುಷ್ಪಗಳು ಸತತವಾಗಿ ಕೆಳಗೆ ಬಿದ್ದವು. ಇದು ಆ ಮಹಾತಾಯಿಯ ಕೃಪಾ ವಿಶೇಷವೆಂದು ಗಣಪತಿ ಶಾಸ್ತ್ರಿಗಳ ಮನಸ್ಸು ತುಂಬಾ ಮುದಗೊಂಡಿತು. ಆನಂದ ಬಾಷ್ಪದೊಡನೆ ಸ್ವಲ್ಪ ಹೊತ್ತು ಧ್ಯಾನಪರವಶರಾಗಿ ನಿಂತಿದ್ದು ನಂತರ

ಲಭಿಸಿತು. ಅವರ ಸಲಹೆಯಂತೆ ಆ ಕ್ಷೇತ್ರದಲ್ಲಿ ಕ್ಷೀರವತೀ-ವೇಗವತೀ ಎಂಬ ಎರಡು ನದಿಗಳ ನಡುವಣ ಹನುಮಾನ್ ದೇಗುಲದ ಪ್ರಶಾಂತ-ಪಾವನ ಪರಿಸರದಲ್ಲಿ ತಪಸ್ಸು ನಡೆಸಲು ನಿರ್ಧರಿಸಿದೆ. ನನಗೆ ಆತಿಥೇಯರಾಗಿರಲು ಅಪೇಕ್ಷಿಸಿದ್ದ ನಾರಾಯಣ ಜೋಯಿಸರು ನನ್ನಿಂದ ಜ್ಯೋತಿಷ್ಯದಲ್ಲಿ ಹೆಚ್ಚಿನ ತಿಳಿವಳಿಕೆ ಪಡೆಯುವ ಹಂಬಲ ವ್ಯಕ್ತಪಡಿಸಿದರು. ಹಗಲಿನಲ್ಲಿ ಉಪವಾಸವಿದ್ದು ಸಂಜೆಯತನಕ ನಿಷ್ಠೆಯಿಂದ ಮಂತ್ರದ ಪುರಶ್ಚರಣೆ, ಸಂಜೆಯಾದ ಮೇಲೆ ನಾರಾಯಣ ಜೋಯಿಸರ ಮನೆಯಲ್ಲಿ ಸಿದ್ಧವಾದ ಆಹಾರ ಸೇವನೆ–ರಾತ್ರಿ ಅವರಿಗೂ-ಮತ್ತಿಬ್ಬರಿಗೂ ಜ್ಯೋತಿಷ್ಯದ ಪ್ರಕಾರಗಳ ಬೋಧನೆ; ಹೀಗೆ 1ತಿಂಗಳು ಕಳೆಯಿತು. ಅಷ್ಟಕ್ಕೆ ನಾರಾಯಣ ಜೋಯಿಸರು ಕುಟುಂಬದೊಡನೆ ಸ್ವಗ್ರಾಮಕ್ಕೆ ಹೊರಟುನಿಂತರು. ತಪಸ್ಸಿಗೆ ಯೋಗ್ಯವಾದ ಸ್ಥಳದ ಬಗ್ಗೆ ಅವರನ್ನು ಪುತ್ತೆ ವಿಚಾರಿಸಿದೆ. ಅರುಣಾಚಲ ಕ್ಷೇತ್ರಕ್ಕೆ ಹೋಗುವುದು ಉತ್ತಮವೆಂದು ಅವರು ಸೂಚಿಸಿದರು. ಅವರು ಸ್ವಗ್ರಾಮದ ಕಡೆಗೂ ನಾವು ಅರುಣಾಚಲದ ಕಡೆಗೂ ಹೊರಟಿದ್ದಾಯಿತು. ಭಾದ್ರಪದ ಶುದ್ಧ ಏಕಾದಶಿಯದಿನ ಅರುಣಾಚಲಕ್ಕೆ ಬಂದೆವು.

ಪ್ರಕರಣ- 10.

ಅರುಣಾಚಲವಾಸ.

ಭಕ್ತಿರ್ಭವೇ ನ ವಿಭವೇ ವ್ಯಸನಂ ಶಾಸ್ತ್ರೇ ನ ಯುವತಿಕಾಮಾಸ್ತ್ರೇ ।
ಚಿಂತಾ ಯಶಸಿ ನ ವಪುಷಿ ಪ್ರಾಯಃ ಪರಿದೃಶ್ಯತೇ ಮಹತಾಂ ॥ (ಭಾರವಿಃ)

ಅರಣಾಚಲೇಶ್ವರನ ಸನ್ನಿಧಿಗೆ ತೆರಳಿದರು. ಹರ್ಷನಿರ್ಭರರಾದ ಅವರು ಅಲ್ಲಿ ಕೆಲವು ನಿಮಿಷ ಹೊರ ಜಗತ್ತಿನ ಅರಿವೇ ಇಲ್ಲದೆ ಭಾವಸಮಾಧಿಯಲ್ಲಿದ್ದರು. ಒಟ್ಟಿನಲ್ಲಿ ಇದು ಅವರಿಗೆ ಹೊಸ ಅನುಭವ. ದೇಗುಲದಿಂದ ಹೊರ ಬರುತ್ತ ತಮ್ಮನೊಡನೆ ಹೇಳಿದರು:– "ನನ್ನ ತಪಸ್ಸು ಈ ಪುಣ್ಯಕ್ಷೇತ್ರದಲ್ಲಿಯೇ ಫಲಿಸುವುದೆಂಬ ನಂಬಿಕೆ ನನಗೆ ಉಂಟಾಗುತ್ತಿದೆಯಾದ್ದರಿಂದ ನಾನು ಈ ಪುಣ್ಯ ಪ್ರದೇಶದಲ್ಲಿಯೇ ಇರಲು ನಿರ್ಧರಿಸಿದ್ದೇನೆ"

ಸಂಜೆಯಾದೊಡನೆ ಗಣಪತಿಶಾಸ್ತ್ರಿಗಳು ಅನುಷ್ಠಾನಕ್ಕೆ ತೊಡಗಿದರು. ಆದರೆ ಶಿವರಾಮನಿಗೆ ತಡೆಯಲಾಗದ ಹಸಿವು. ಶಾಸ್ತ್ರಿಗಳು ತಮ್ಮನಿಗೆ ಚಿಲ್ಲರೆ ಹಣ ನೀಡಿ ಬಾಳೆಹಣ್ಣು ಕೊಂಡು ತಿನ್ನಲು ತಿಳಿಸಿದರು. ತಮ್ಮ ಅನುಷ್ಠಾನಮುಗಿ

ಈಶ್ವರೋಪಾಸನೆಯಲ್ಲಿ ಶ್ರದ್ಧೆಯೇ ವಿನಾ ಸಂಪತ್ಸಾಧನೆಯಲ್ಲಿ ಅಲ್ಲ! ಶಾಸ್ತ್ರಗಳಅಂತರಾರ್ಥ ತಿಳಿಯುವುದರಲ್ಲಿ ಆಸ್ಥೆಯೇ ಹೊರತು ರಮಣಿಯರೊಡನೆ ಕಾಮಕೇಳಿ ನಡೆಸುವುದರಲ್ಲಿ ಅಲ್ಲ. ಯಶಸ್ಸು ಪಡೆಯುವ ಬಗೆಗೆ ಚಿಂತೆಯೇ ವಿನಃ ದೇಹವನ್ನು ಕುರಿತು ಅಲ್ಲ. ಈ ಗುಣಗಳನ್ನು ದೊಡ್ಡವರಲ್ಲಿ ಮಾತ್ರ ಕಾಣಲುಸಾಧ್ಯ.

ಅಂದು ಏಕಾದಶಿ ಇದ್ದುದರಿಂದ ಅಲ್ಲಿಯ ಅನ್ನಸತ್ರದಲ್ಲಿ ನಮಗೆ ಊಟ ದೊರೆಯಲಿಲ್ಲ. ಆದರೆ "ಅಯ್ಯನ್ ಕುಳ" ಬೀದಿಯಲ್ಲಿ ದಕ್ಷಿಣ ಪಾರ್ಶ್ವದಲ್ಲಿದ್ದ ಒಂದು ಮನೆಯವರು ಆ ರಾತ್ರಿ ನಮಗೆ ಊಟ ನೀಡಿದರು. ತೆಲುಗು ಮಾತನಾಡುತ್ತಿದ್ದ ಆ ಮನೆಯವರು ತುಂಬ ಸಜ್ಜನರಾಗಿದ್ದುದು ನಮ್ಮ ಅನುಭವಕ್ಕೆ ಬಂದಿತು. ಮನೆಯ ಮುಂದೆ ತುಳಸಿಯ ವಿಶಾಲ ವೇದಿಕೆ ಇತ್ತು. ಭೋಜನದ ನಂತರ ನಾವು ಧರ್ಮಶಾಲೆಗೆ ಹೋಗಿ ಮಲಗಿದೆವು. ಹಿಂದಿನ ರಾತ್ರಿ ಏಕಾದಶಿ ಇದ್ದರೂ ತುಂಬಾ ಹಸಿವೆಯಿಂದ ಆತುರನಾಗಿದ್ದ ಶಿವರಾಮನಿಗಾಗಿ ಅನ್ನದಾತೃವನ್ನು ಹುಡುಕಬೇಕಾಗಿ ಬಂದಿತ್ತು. ಈ ಮನೆಯವರು ಒಳ್ಳೆಯ ಭೋಜನ ನೀಡಿದ್ದರಿಂದ ಮರುದಿನ ಬೆಳಿಗ್ಗೆ ಅವರನ್ನು ಕಂಡು ಕೃತಜ್ಞತೆ ಸಲ್ಲಿಸಲೆಂದು ಅದೇ ಬೀದಿಯಲ್ಲಿ ಹೋದೆವು. ಸಂಜೆಯವರೆಗೆ ಹುಡುಕಿದರೂ ಆ ಮನೆ ಪತ್ತೆಯಾಗಲಿಲ್ಲ. ಆದರೆ ಹಿಂದಿನರಾತ್ರಿ ಹಸಿವೆ ಹಿಂಗಿಸಲು ದೇವತಾಕೃಪೆಯಂತೂ ಒದಗಿಬಂದಿತ್ತು.

ಕಾಂಚೀಪುರವನ್ನು ಬಿಟ್ಟುಬರುವ ವೇಳೆಗಾಗಲೇ ಅಲ್ಲಿಯವರೆಗೆ ನಾನು ಪೂರ್ಣಗೊಳಿಸಿದ್ದ ಮಂತ್ರಜಪದ ಸಂಖ್ಯೆ ಒಂದು ಕೋಟಿ. ಈಗ ಈ ಅರುಣಾಚಲ

ದೊಡನೆ ಶಿವರಾಮನೊಡನೆ ಆಹಾರ ಸಂಪಾದನೆಗಾಗಿ ಹೊರಟರು. ಬಾಳೆಹಣ್ಣುಗಳಿಂದ ಶಿವರಾಮನ ಹಸಿವು ಹಿಂಗಲಿಲ್ಲ. "ಒಬ್ಬ ಹುಡುಗನಿಗೆ ಈ ರಾತ್ರಿ ಊಟ ನೀಡಲು ಸಾಧ್ಯವೇ ? ಎಂದು ಮನೆ ಮನೆಗಳಲ್ಲಿ ವಿಚಾರಿಸುತ್ತ ಹೋದರು. ಅಂದು ಏಕಾದಶಿ ಇದ್ದುದರಿಂದ ಬಹಳಷ್ಟು ಮನೆಗಳಲ್ಲಿ ಆ ಹೊತ್ತು ಊಟ ತಯಾರಿಸಿಯೇ ಇರಲಿಲ್ಲ. ಅದೂ ಅಲ್ಲದೆ ರಾತ್ರಿ 9ಗಂಟೆಯಾಗಿದೆ. ಆ ವೇಳೆಯಲ್ಲಿ ಅನೇಕರು ಮನೆಯ ಮುಂಬಾಗಿಲು ಮುಚ್ಚಿ ನಿದ್ರಿಸುವ ಸಿದ್ಧತೆಯಲ್ಲಿದ್ದಾರೆ. ಅಷ್ಟರಲ್ಲಾಗಲೇ ಶಿವರಾಮ ಮತ್ತಷ್ಟು ಬಾಳೆಯ ಹಣ್ಣುಗಳನ್ನು ಕೊಂಡು ತಿಂದುದ್ದಾಗಿತ್ತು. 8 ಬಾಳೆಯ ಹಣ್ಣುಗಳನ್ನು ಮುಗಿಸಿದ ಮೇಲೆಯೂ ಆತನ ಜಠರಾಗ್ನಿ ಶಾಂತವಾಗಲಿಲ್ಲ. ಹೀಗೆ ಯಥ್ವಾ ತದ್ವಾ ತಿನ್ನುವುದು ಕಾಹಿಲೆಗೆ ಕಾರಣವಾದೀ ತೆಂದು ಶಾಸ್ತ್ರಿಗಳಿಗೆ ಆತಂಕ. ಆದರೂ ತತ್ಕಾಲದಲ್ಲಿ ಆತನಿಗೆ ಊಟ ಒದಗಿಸ ಬೇಕಾದ್ದು ಅನಿವಾರ್ಯವಾಗಿತ್ತು.

ಕ್ಷೇತ್ರದಲ್ಲಿ ನನಗೆ ಶಂಕರನ ಅನುಗ್ರಹದ ವಿಶೇಷ ಕುರುಹು ಲಭಿಸುತ್ತದೆಯೆಂಬದು ನನ್ನ ನಿರೀಕ್ಷೆ. ಬಾಲ್ಯದಿಂದ ನಾನು ಆಚರಿಸಿದ ತಪಸ್ಸು-ಅನುಷ್ಠಾನಗಳ ಫಲ ಇಲ್ಲಿ ಲಭಿಸುವುದೆಂದು ನನ್ನ ಅಂತರಂಗಕ್ಕೆ ಅನಿಸುತ್ತಿತ್ತು. ಇಲ್ಲಿಗೆ ಬಂದಮೇಲೆಯೂ ಪ್ರತಿ ರಾತ್ರಿ 5 ಸಹಸ್ರ ಸಂಖ್ಯೆಯಲ್ಲಿ ಶಿವಪಂಚಾಕ್ಷರಿಯನ್ನು ಜಪಿಸಲು ಪ್ರಾರಂಭಿಸಿದೆ.

ನಮ್ಮಿಬ್ಬರ ಊಟಕ್ಕೆ ವಾರದ ಮನೆಗಳನ್ನು ಹೊಂದಿಸಿಕೊಳ್ಳುವ ಪ್ರಯತ್ನ ಪೂರ್ಣಫಲಕಾರಿಯಾಗಲಿಲ್ಲ. 4 ವಾರಗಳು ಅದೂ ಮಧ್ಯಾಹ್ನದ ಒಂದು ಊಟ ಮಾತ್ರ ದೊರೆಯುವ ವ್ಯವಸ್ಥೆಯಾಯಿತು. ನಾನಂತೂ ದಿನದಲ್ಲಿ ಒಂದೇ ಊಟ ಮಾಡುತ್ತಿದ್ದೆ. ಆದರೆ ಶಿವರಾಮನಿಗೆ ರಾತ್ರಿಯ ಊಟವೂ ಅಗತ್ಯವಾಗಿತ್ತು. ಊಟ ದೊರೆಯದ ದಿನಗಳಲ್ಲಿ ಮತ್ತು ರಾತ್ರಿಯವೇಳೆ ನೀರುಮಾತ್ರವೇ ನಮ್ಮ ಆಹಾರ. ಅದೇ ಪರಿಸ್ಥಿತಿಯಲ್ಲಿಯೇ ಅನುಷ್ಠಾನ ನಡೆಸುತ್ತ ಒಂದು ಸಾವಿರ ಶ್ಲೋಕಗಳನ್ನು ರಚಿಸಿ ಅರುಣಾಚಲೇಶ್ವರನನ್ನು ಸ್ತುತಿಸಿದೆ. ಪ್ರತಿದಿನ ಎಷ್ಟು ಶ್ಲೋಕಗಳು ರಚಿತವಾಗುತ್ತವೆಯೋ ಅವುಗಳನ್ನು ಆಯಾಯ ದಿನ ದೇಗುಲದಲ್ಲಿ ನಂದಿಕೇಶ್ವರನ ಸಮ್ಮುಖದಲ್ಲಿ ನಿಂತು ಹಾಡುವ ಮೂಲಕ ದೇವರಿಗೆ ಸಮರ್ಪಿಸುತ್ತಿದ್ದೆ. ಅವುಗಳಲ್ಲಿ ಕೆಲವು ಶ್ಲೋಕಗಳು ಹೀಗಿವೆ :-

ಅರುಣಾಚಲರೂಪೇಣ ಪರಿಣಾಮಮುಪಾಗತಂ ।
ಜ್ಯೋತಿರ್ಮಯಂ ಪರಂಬ್ರಹ್ಮ ಜ್ಞಾನಾಯ ಮಮಕಲ್ಪತಾಂ ॥
(ಅರುಣಾಚಲರೂಪ ತಳೆದು ನಿಂತಿರುವ ಪ್ರಕಾಶಪೂರ್ಣವಾದ ಪರಬ್ರಹ್ಮನು ನನಗೆ ಜ್ಞಾನವನ್ನುಂಟುಮಾಡಲಿ)

ಶಾಸ್ತ್ರಿಗಳು ಮನೆಯೊಂದರ ಮುಂದೆ ನಿಂತು ತಮ್ಮ ಕರುಣಾ ಜನಕ ಸ್ಥಿತಿಯನ್ನು ಪದ್ಯರೂಪದಲ್ಲಿ ಹಾಡ ತೊಡಗಿದರು. ಮನೆಯ ಬಾಗಿಲು ಮುಚ್ಚಿದ್ದಿತಾದರೂ ಹೊರ ಜಗಲಿಯಲ್ಲಿ ಮಲಗಿದ್ದವರೊಬ್ಬರು ಎದ್ದು ಬಂದು ವಿಷಯವೇನೆಂದು ವಿಚಾರಿಸಿದರು. ವಿಷಯ ತಿಳಿದ ಬಳಿಕ "ಇದೀಗತಾನೆ ನನ್ನ ಹೆಂಡತಿ ದೇವತಾ ವ್ರತವೊಂದನ್ನು ಮುಗಿಸಿದ್ದಾಳೆ. ಅದರ ಸಂಬಂಧವಾಗಿ ಇಬ್ಬರು ಬ್ರಾಹ್ಮಣರಿಗೆ ಭೋಜನ ನೀಡಬೇಕು. ಆದರೆ ಈ ಏಕಾದಶಿಯ ಉಪವಾಸದ ದಿನ ಬ್ರಾಹ್ಮಣರು ಯಾರೂ ಸಿಗಲಿಲ್ಲ. ಇದೀಗ ನೀವಿಬ್ಬರು ಅತಿಥಿಗಳಾಗಿ ಅಕಸ್ಮಾತ್ ನಮ್ಮ ಬಾಗಿಲಿಗೆ ಬಂದಿದ್ದೀರಿ. ಒಳಕ್ಕೆ ದಯಮಾಡಿಸಿ" ಎಂದು ಕೇಳಿಕೊಂಡ. ಗಣಪತಿ ಶಾಸ್ತ್ರಿಗಳಿಗೇನೂ ಊಟ ಬೇಕಾಗಿರಲಿಲ್ಲ. ಆದರೆ ಆ ಗೃಹಸ್ಥನ ಬೇಡಿಕೆಯನ್ನು ತಿರಸ್ಕರಿಸುವಂತೆಯೂ ಇಲ್ಲ. ಅಂತೂ ಶಿವರಾಮನ ಸಂಗಡ ಅವರೂ ಭೋಜ

ಅರುಣಾಚಲ ರೂಪೋಽವ: ಕರುಣಾವರುಣಾಲಯ:।
ಭುವನಾಧಿಪತಿ: ಕಶ್ಚಿದವನಾಯ ಪ್ರಕಲ್ಪತಾಂ॥

(ಅರುಣಾಚಲ ರೂಪದಲ್ಲಿರುವ ಕರುಣಾಶಾಲಿಯೂ ಜಗದೊಡೆಯನೂ ಆಗಿರುವ ದೇವನೊಬ್ಬನು ನಮ್ಮನ್ನು ರಕ್ಷಿಸಲಿ)

ಇಹಾಲಂಕಾರ ಮಾಧುರ್ಯಧ್ವನಯ: ಸಂತಿ ವಾ ನವಾ।
ಏಕೋ ನಾಮಧ್ವನಿ: ಶಂಭೋರಸ್ತ್ಯಾಽದಾತುಂ ವಿದಾಂ ಮನ:॥

ಈ ಶ್ಲೋಕಗಳಲ್ಲಿ ಅಲಂಕಾರ–ಮಾಧುರ್ಯ ಪೂರ್ಣವಾದ ಧ್ವನಿ ವಿಶೇಷ ಇದೆಯೋ ಇಲ್ಲವೋ ತಿಳಿಯದು. ಆದರೆ ತಿಳಿದವರು ಸ್ವೀಕರಿಸಬಹುದಾದ ಶಂಭು ವಿನ ನಾಮಧ್ವನಿ ಮಾತ್ರ ಇಲ್ಲಿ ಇದೆ)

ಅಲಂಕ್ರಿಯಂತಾಂ ಚಿತ್ರಾರ್ಥೈ: ಪ್ರಾಚಾಂ ವಾಚೋ ವಿಪಶ್ಚಿತಾಂ।
ಯಶ ಏವ ಮಹೇಶಸ್ಯ ಭಾಷಾಯಾ ಮಮ ಭೂಷಣಂ॥

(ಪ್ರಾಚೀನ ಪಂಡಿತೋತ್ತಮರ ಉಕ್ತಿಗಳು ಬಗೆಬಗೆಯ ಅರ್ಥಾಲಂಕಾರ ಗಳಿಂದ ಶೋಭಿಸುತ್ತಿರಲಿ, ಆದರೆ ಪರಶಿವನ ಕೀರ್ತಿಯೇ ನನ್ನ ಭಾಷೆಗೆ ಭೂಷಣ ಪ್ರಾಯವಾದುದು)

ಅಸ್ತಿಪ್ರೇಮ ಮಹೇಶ್ವರ ತ್ವಯಿ ಮಹದ್ಧ್ಯಾತುಂ ಚ ವಾಂಛಾಮಿ ತೇ।
ಪಾದಾಂಭೋಜಯುಗಂ ತಥಾಪಿ ಚಲತಾಂ ಚೇತೋನ ಮೇ ಮುಂಚತಿ।
ಕಾಮಾ: ಸಂತಿ ಸಹಸ್ರಶ: ಪಶುಪತೆ ಪಶ್ಚಾದ್ವಿಪ್ರವೀಮ್ಯಗ್ರತ:
ಚಿತ್ತಸ್ಯ ಸ್ಥಿರತಾಂ ಪ್ರದೇಹಿ ಕರುಣಾ ಯದ್ಯಸ್ತಿ ತೇ ವಸ್ತುತ:॥

ನಕ್ಕೆ ಸಿದ್ಧರಾಗಬೇಕಾಯಿತು. ಮನೆಯನ್ನು ಪ್ರವೇಶಿಸುತ್ತಿದ್ದಂತೆಯೇ ಮುಂಭಾಗದಲ್ಲಿ ಜ್ಯೋತಿಗಳನ್ನು ಬೆಳಗಿಸಿ ಆಕರ್ಷಣೀಯವಾಗಿ ಅಲಂಕರಿಸಿದ ತುಳಸೀ ವೃಂದಾವನ. ಮನೆಯ ಒಳ ಆವರಣ ಕೂಡ ಸರಳವಾಗಿದ್ದರೂ ಸ್ವಚ್ಛವಾಗಿ ಆಕರ್ಷಕವಾಗಿದೆ. ಮನೆಯೊಡತಿ ಆದರ–ಉಪಚಾರಗಳಿಂದ ಇಬ್ಬರನ್ನೂ ಕೂರಿಸಿ ತೃಪ್ತಿಯಾಗುವಂತೆ ಉಣಬಡಿಸಿದರು. ಊಟದ ನಂತರ ತಾಂಬೂಲದೊಡನೆ ದಕ್ಷಿಣೆಯೂ ದೊರೆಯಿತು. ಇಬ್ಬರೂ ಅಲ್ಲಿಂದ ಛತ್ರಕ್ಕೆ ಬಂದು ಮೊಗಸಾಲೆಯಲ್ಲಿಯೇ ರಾತ್ರಿಯನ್ನು ಕಳೆದರು. ಬೆಳಿಗ್ಗೆ ನಿದ್ರೆಯಿಂದ ಎದ್ದು ಪ್ರಾತ: ಕೃತ್ಯಗಳನ್ನು

(ಹೇ! ಮಹೇಶ್ವರನೇ! ನಿನ್ನಲ್ಲಿ ನನಗೆ ಪ್ರೇಮವಿದೆ. ನಿನ್ನ ಶ್ರೇಷ್ಠ ಪಾದ ಕಮಲಗಳನ್ನೇ ಎಡೆಬಿಡದೆ ಧ್ಯಾನಿಸುತ್ತಿರಬೇಕೆಂಬ ಹಂಬಲವೂ ಇದೆ. ಆದರೆ ಚಂಚಲವಾದ ಮನಸ್ಸು ಅದಕ್ಕೆ ಅವಕಾಶ ಕೊಡುತ್ತಿಲ್ಲ. ಮನಸ್ಸಿನಲ್ಲಿರುವ ಆಶೆಗಳು ಸಾವಿರಾರು. ಆದನ್ನೆಲ್ಲಾ ಮುಂದೆ ನಿನ್ನ ಬಳಿ ನಿವೇದಿಸಿಕೊಳ್ಳುತ್ತೇನೆ. ನನ್ನ ಮೇಲೆ ನಿನಗೆ ನಿಜವಾಗಿಯೂ ಕರುಣೆ ಇರುವದಾದರೆ ನನಗ ಚಿತ್ತಸ್ಥೈರ್ಯ ವನ್ನು ದಯಪಾಲಿಸು.)

ಕಾರ್ತೀಕೋತ್ಸವ ಪ್ರಾರಂಭವಾಗುವ ಮುನ್ನವೇ ಈ "ಹರ ಸಹಸ್ರ" ಶ್ಲೋಕಾವಳಿಯನ್ನು ಮುಗಿಸಿದೆ.

ನನ್ನ ಶಿಷ್ಯರಲ್ಲಿ ಒಬ್ಬನಾದ ಕಲ್ಪಾಟ್ ರಾಮಸ್ವಾಮಿ ಎಂಬಾತ ಈ ಹರಸ ಹಸ್ರದ ಏಕೈಕ ಹಸ್ತಪ್ರತಿಯನ್ನು ನಕಲು ತೆಗೆದು ಕೊಡುವುದಾಗಿ ಹೇಳಿ ತನ್ನ ವಶದಲ್ಲಿಟ್ಟುಕೊಂಡು ತನ್ನ ಊರಿಗೆ ಹೋದವನು ಸೀದಾ ಸ್ವರ್ಗದ ದಾರಿಯನ್ನೇ ಹಿಡಿದನೆಂದು ತಿಳಿಯಿತು. ಆತನ ಬಂಧುಗಳಲ್ಲಿ ಈ ಹಸ್ತಪ್ರತಿಯ ಬಗ್ಗೆ ವಿಚಾರಿ ಸಿದಾಗ ಅದು ಯಾವುದೂ ಇಲ್ಲವೆಂದು ಹೇಳಿಬಿಟ್ಟರು. ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೇ ಕಳೆದುಕೊಂಡಷ್ಟು ವೇದನೆ ನನಗೆ ಆಯಿತು. ಕೇವಲ ನೆನಪಿನಲ್ಲಿ ಉಳಿದ ಕೆಲವೇ ಶ್ಲೋಕಗಳನ್ನು ಇಲ್ಲಿ ಹೇಳಿದ್ದೇನೆ.

ನಾನು ತಮಿಳು ಭಾಷೆಯನ್ನು ಆದುವರೆಗೆ ಅಭ್ಯಾಸ ಮಾಡಿರಲಿಲ್ಲ. ಆದರೂ ಅರುಣಾಚಲದ ಸಂಸ್ಕೃತ ಪಾಠಶಾಲೆಯವರು ಆಂಧ್ರದವನಾದ ನನಗೆ ಅಧ್ಯಾಪಕ ವೃತ್ತಿಯನ್ನು ನೀಡಲು ಮುಂದೆ ಬಂದರು. ಅಧ್ಯಾಪಕನೊಬ್ಬನು ಮಾಡುವ ಪಾಠ-ಪ್ರವಚನಗಳು ವಿದ್ಯಾರ್ಥಿಗಳಿಗೆ ಸರಿಯಾಗಿ ಮನದಟ್ಟಾಗಬೇಕಿದ್ದರೆ ಅವರ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿರುವುದು ಒಳ್ಳೆಯದು. ಆ ದೃಷ್ಟಿ

ಮುಗಿಸಿದರು. ಹಿಂದಿನ ರಾತ್ರಿ ತಮ್ಮನ್ನು ಪ್ರೀತಿ-ಆದರದಿಂದ ಸತ್ಕರಿಸಿ ಹಸಿ ವನ್ನು ಹಿಂಗಿಸಿದವರಿಗೆ ಕೃತಜ್ಞತೆ ಸಲ್ಲಿಸಿ ಬರೋಣವೆಂದು ಆ ಮನೆಯನ್ನು ಹುಡುಕಿಕೊಂಡು ಹೊರಟರು. ಆ ಬೀದಿಯನ್ನೆಲ್ಲಾ ಸಂಜೆಯ ತನಕ ಅನೇಕ ಸಲ ಸುತ್ತಾಡಿ ಶೋಧಿಸಿದರೂ ಸಹ ಹಿಂದಿನ ರಾತ್ರಿ ಅವರು ಭೋಜನ ಮಾಡಿದ ಆ ಮನೆ ಮಾತ್ರ ಸಿಗಲೇ ಇಲ್ಲ. ಯಾವ ಘಟನೆಯ ಹಿನ್ನೆಲೆಯಲ್ಲಿ ಯಾವ ಶಕ್ತಿಯ ಪ್ರೇರಣೆ ಇದೆಯೋ ತಿಳಿಯದು.

ಯಿಂದ ನಾನು ತಮಿಳು ಭಾಷೆ ಕಲಿಯಲು ನಿರ್ಧರಿಸಿದೆ. ಕೇವಲ ಹದಿನೈದು ದಿನಗಳಲ್ಲಿ ತಮಿಳು ಕಲಿಯುತ್ತೇನೆಂದು ಹೇಳಿದ ನಾನು ಹತ್ತೇ ದಿನಗಳಲ್ಲಿ ಆ ಭಾಷೆಯನ್ನು ಕರಗತಮಾಡಿಕೊಂಡು ಮಾತನಾಡಲು ಪ್ರಾರಂಭಿಸಿದೆ.

* ಸುಪ್ರಸಿದ್ಧ ಅರುಣಾಚಲ ಕ್ಷೇತ್ರದಲ್ಲಿ ನಾನು ತಪಸ್ಸಿಗೆ ಬದಲಾಗಿ ಜೀವನೋಪಾಯದ ವೃತ್ತಿಯನ್ನು ಪ್ರಾರಂಭಿಸಿದೆ.

ಸಹೋದರ ಶಿವರಾಮನು ತಪಸ್ಸಿಗಾಗಿ ಪಾಪನಾಶಂ ಕ್ಷೇತ್ರಕ್ಕೆ ಹೊರಟು ಹೋದ. ಒಬ್ಬೊಂಟಿಗನಾದ ನಾನು ಸಂಸ್ಕೃತ ಪಾಠ ಶಾಲೆಯಲ್ಲಿಯೇ ವಸತಿಹೂಡಿದೆ. ಒಂದು ದಿನ ಯೋಚನಾ ಮಗ್ನನಾಗಿ ಕುಳಿತಿದ್ದೆ. ಹಟಾತ್ತನೆ ಈ ಕೆಳಗಿನ ಶ್ಲೋಕ ನನ್ನ ಮುಖದಿಂದ ಹೊರಬಂದಿತು.

ವೃತ್ತಿದಾನವಿಮುಖೇನ ಕಿಂ ತ್ವಯಾ ದೀಯತೇ ನಿಜಮನಾಮಯಂ ಪದಂ।
ಕಿಂ ದದಾತಿ ಹರ ಸರ್ವಮಾಪಣಂ ವಿಣ್ಣಿಶಾಶಕಲದಾನದುರ್ಮನಾಃ ॥

ವಿಟ್ + ನಿಶಾ = ವಿಣ್ಣಿಶಾ

(ಹೇ! ಈಶ್ವರಾ! ಬದುಕಿಗೆ ಅಗತ್ಯವಾದ ವೃತ್ತಿಯೊಂದನ್ನು ಕೂಡ ಕೊಡಲಾರದ ನೀನು ನಿನ್ನದೇ ಆದ ಪರಮ ಕಲ್ಯಾಣ ಪದವಿಯನ್ನು ಅನುಗ್ರಹಿಸಬಲ್ಲೆಯಾ ? ಒಂದು ಅರಶಿನದ ಕೊಂಬನ್ನು ಸಹ ದಾನ ಮಾಡಲಾರದಷ್ಟು

---

* ಅರುಣಾಚಲ ನಿಜವಾಗಿಯೂ ಅಂತರಾತ್ಮನ ಅರಿವನ್ನು ಬೆಳಗಿಸುವ ಕ್ಷೇತ್ರ. ಈ ಪ್ರಕಾಶವನ್ನು ಒಳ ಅನುಭವದಿಂದ ಮಾತ್ರ ಕಾಣಬಹುದು. ಆ ವಿಷಯದಲ್ಲಿ ಕಾಳಜಿಇಲ್ಲದ ಸಾಮಾನ್ಯ ಭಕ್ತರ ಪಾಲಿಗೆ ಅರುಣಾಚಲೇಶ್ವನ ಲಿಂಗದಪ್ಪೆ ಈಶ್ವರ. ಪುಣ್ಯಮಯವಾದ ಅರುಣಾಚಲ (ಬೆಟ್ಟ)ದ ಪಾದ ತಲದಲ್ಲಿರುವ ದೇಗುಲದಲ್ಲಿ ದಿನ ನಿತ್ಯದ ಆರಾಧನೆಗಾಗಿ ಅರುಣಾಚಲದ ಸಂಕೇತವೇ ಈ ಶಿವಲಿಂಗ. ಅರುಣಾಚಲ ಶ್ರೀಚಕ್ರದ ಲಾಂಛನವೆನಿಸಿಕೊಂಡಿದ್ದು ಭಾವುಕರು ಪಾವಿತ್ರ್ಯದಿಂದ ಕೂಡಿರುವ ಈ ಪ್ರಸಿದ್ಧ ಪರ್ವತವನ್ನು ಪ್ರದಕ್ಷಿಣೆ ಬರುವ ಪದ್ಧತಿ ಇದೆ.

ಭೂಗರ್ಭಶಾಸ್ತ್ರಜ್ಞರು ಈ ಬೆಟ್ಟವು ಜಗತ್ತಿನ ಸೃಷ್ಟಿಯಲ್ಲಿ ತುಂಬಾ ಹಳೆಯದೆಂದೂ, ಇದರ ವಿಶೇಷ ಲಕ್ಷಣ-ಪರಿಸರಗಳು ಭೂಮಿಯ ಆವಿರ್ಭಾವದ ರಹಸ್ಯಗಳನ್ನು ಪ್ರಕಾಶ ಪಡಿಸುವ ಸಾಮರ್ಥ್ಯ ಪಡೆದಿವೆಯೆಂದೂ ಅಭಿಪ್ರಾಯ ಪಡುತ್ತಾರೆ.

ಜಿಪುಣತನವುಳ್ಳ ವರ್ತಕನೊಬ್ಬನು ತನ್ನ ಅಂಗಡಿಯ ಸರಕನ್ನೆಲ್ಲಾ ದಾನಮಾಡು ವುದುಂಟೇನು ?)

ಅರುಣಾಚಲದ ವಿರೂಪಾಕ್ಷ ಗುಹೆಯಲ್ಲಿರುವ ಬ್ರಾಹ್ಮಣ ಸ್ವಾಮಿಯೊಬ್ಬರ ದರ್ಶನಕ್ಕಾಗಿ ವಿಶ್ವನಾಥ ಅಯ್ಯರ್‌ರೆಂಬವರು ನನ್ನನ್ನು ಕರೆದೊಯ್ದಿದ್ದರು. ನಾವು ಹೋದಾಗ ಸ್ವಾಮಿಗಳು ಆ ಗುಹೆಯಲ್ಲಿ ಇರಲಿಲ್ಲ. ಪದ್ಮನಾಭ ಸ್ವಾಮಿಯ ಆಶ್ರಮದಲ್ಲಿ ಇದ್ದಾರೆ ಎಂದು ತಿಳಿಯಿತು. ಅಲ್ಲಿಗೇ ಹೋದೆವು. ಸ್ವಾಮಿಗಳ ದರ್ಶನ ದೊರೆಯಿತು.

ಅದ್ರಾಕ್ಷಂ ಪ್ರಥಮಮಹಂ ಮುನೀಂದ್ರಮೇನಂ
ಮಹಾತ್ಮ್ಯಜ್ವಲಿತಮಹೋ ವಿಸಾರಿ ಮೌನಂ ।
ವಿಶ್ವಸ್ಮಾತ್ಪೃಥಗಯಮಿತ್ಯಬುದ್ಧಿಬುಧ್ಯಾ
ಕಲ್ಯಾಣ್ಯಾ ದ್ವಿಜಯತಿನಂ ತದಾ ನತೋಽಹಂ ॥

ಆಂತರಿಕ ಶಕ್ತಿಯಿಂದ ಬೆಳಗುವ ಮೌನಮುದ್ರೆಯನ್ನು ಪ್ರಸರಿಸುತ್ತಿದ್ದ ಮುನಿವರ್ಯರೊಬ್ಬರನ್ನು ನಾನು ಕಂಡದ್ದು ಇದೇ ಮೊದಲು. ಇವರು ಸಾಮಾನ್ಯರಲ್ಲ. ಪ್ರಪಂಚಕ್ಕೆ ಹೊರತಾದ ವ್ಯಕ್ತಿ: ಎಂಬ ಸದ್ಭಾವನೆ ನನ್ನಲ್ಲಿ ಉಂಟಾಗಿ ಆ ಯತಿ ವರ್ಯರಿಗೆ ಪ್ರಣಾಮ ಸಲ್ಲಿಸಿದೆ. ಸ್ವಾಮಿಗಳೂ ನನ್ನ ಕಡೆಗೆ ತಮ್ಮ ಕಟಾಕ್ಷ ಬೀರಿದರು. ಪರಸ್ಪರ ದೃಷ್ಟಿ ಸಮಾಗಮವಾಗುತ್ತಿರುವಾಗಲೇ ಪದ್ಮನಾಭ ಸ್ವಾಮಿಗಳೆಂಬವರು ನನ್ನೊಡನೆ ಹೇಳಿದರು:—"ನೀವು ವಿದ್ವಾಂಸರಷ್ಟೆ! ಶುಕ್ಲಾಂಬರ ಧರಂ ವಿಷ್ಣುಂ" ಈ ಶ್ಲೋಕದ ವ್ಯಾಖ್ಯಾನವನ್ನು ವಿವರಿಸೋಣವಾಗಲಿ"

ನಾನು ಆ ಶ್ಲೋಕಕ್ಕೆ ಬ್ರಹ್ಮ-ವಿಷ್ಣು-ಗಣಪತಿ ದೇವರುಗಳ ಪರವಾಗಿ ಬೇರೆ-ಬೇರೆ ವ್ಯಾಖ್ಯಾನ ನೀಡಿದ ಮೇಲೆ "ಇಲ್ಲಿ ಕುಳಿತಿರುವ ಈ ಮಹಾವ್ಯಕ್ತಿಗೂ ಈ ಶ್ಲೋಕವನ್ನು ಅನ್ವಯಿಸಿ ವಿವರಿಸುತ್ತೇನೆ" ಎಂದು ಹೇಳಿ ಪ್ರಾರಂಭಿಸಿದೆ.

"ಈ ಬ್ರಾಹ್ಮಣ ಸ್ವಾಮಿಗಳು ಶುಭ್ರ ಕೌಪೀನಧಾರಿಯಾಗಿದ್ದಾರೆ. ಆದ್ದರಿಂದ "ಶುಕ್ಲಾಂಬರಧರತ್ವ" ಇವರಿಗೆ ಹೊಂದಿಕೆಯಾಗುತ್ತದೆ. ಸ್ವತಃ ಅಖಂಡ ಸ್ವರೂಪರಾಗಿರುವುದರಿಂದ ಇವರು ಸರ್ವತ್ರ ವ್ಯಾಪಿಯಾದ "ವಿಷ್ಣು"ವೂ ಹೌದು. ಪೂರ್ಣಚಂದ್ರಮನ ಪ್ರಭೆಯಂತೆ ಇವರ ದೇಹಕಾಂತಿ ಸುತ್ತಲೂ ಹರಡಿಕೊಳ್ಳುತ್ತಿ

ಝುವುದರಿಂದ "ಶಶಿವರ್ಣ" ಎಂಬುದು ಇವರಿಗೆ ಸರಿಹೋಗುತ್ತದೆ. ಮನಸ್ಸು-ಚಿತ್ತ-ಬುದ್ಧಿ-ಅಹಂಕಾರ ಈನಾಲ್ಕನ್ನೂ ತಮ್ಮಲ್ಲಿ ಅರಗಿಸಿ ಕೊಂಡು ಆತ್ಮಸ್ವರೂಪದಿಂದ ಇರುವ ಇವರು "ಚತುರ್ಭುಜ"ರೆನ್ನಿಸುತ್ತಾರೆ. ಹೀಗೆ ಬ್ರಾಹ್ಮಣ ಸ್ವಾಮಿಗಳಿಗೆ ಹೊಂದಿಕೆಯಾಗುವಂತೆ ಶ್ಲೋಕದ ಅರ್ಥವನ್ನು ಸಮನ್ವಯ ಮಾಡಿ ವ್ಯಾಖ್ಯಾನ ನೀಡಿದೆ. ಸ್ವಾಮಿಗಳು ನನ್ನ ಕಡೆಗೆ ಮಂದಹಾಸ ಪೂರ್ಣ ಕಟಾಕ್ಷ ಬೀರಿ ಅಭಿನಂದನೆ ಸೂಚಿಸಿದರು.

ಹಿಂದೆ ಕಾಶೀಕ್ಷೇತ್ರದಲ್ಲಿ ಸೂರ್ಯನಾರಾಯಣ ಯೋಗಿಗಳು ಹೇಳಿದ್ದ "ಸ್ಥೂಲ ಶಿರಃ" ಇವರೇ ಇರಬೇಕೆಂದು ನನಗೆ ಅನ್ನಿಸಿತು.

ಅದೇ ವರ್ಷ ನನ್ನ ಪತ್ನಿಯು ಮಗನೊಡನೆ ಇಲ್ಲಿಗೆ ಬಂದಳು. ಅವರ ಜೊತೆಗೆ 2ನೆಯ ಸಲ ಈ ಬ್ರಾಹ್ಮಣಸ್ವಾಮಿಗಳವರನ್ನು ಸಂದರ್ಶಿಸಿದೆ. ಕಣ್ಣು ಬೇನೆಯ ಚಿಕಿತ್ಸೆಗಾಗಿ ಮದರಾಸಿಗೆ ಬಂದಿದ್ದ ನನ್ನ ತಂದೆಯವರು ಇಲ್ಲಿಗೂ ಬಂದು ಸ್ವಾಮಿಗಳವರ ದರ್ಶನ ಪಡೆದು ಹೋದರೆಂಬುದು ನಂತರ ನನಗೆ ತಿಳಿಯಿತು.

ಈ ಮುನಿಗಳು ದೊಡ್ಡ ಸಾಧಕರೆಂಬುದನ್ನೇನೋ ನನ್ನ ಅಂತರಂಗ ಸಂಪೂರ್ಣವಾಗಿ ಒಪ್ಪಿತ್ತು. ಆದರೂ ಇವರಲ್ಲಿ ನನಗೆ ಅನನ್ಯಶರಣಭಾವ ಮಾತ್ರ ಇನ್ನೂ ಉಂಟಾಗಿರಲಿಲ್ಲ. "ಈ ಸ್ವಾಮಿಗಳು ವರ್ಣಾಶ್ರಮಧರ್ಮದ ಕಟ್ಟುಪಾಡುಗಳನ್ನು ತಪ್ಪಿನಡೆದವರು" ಇತ್ಯಾದಿಯಾಗಿ ಇವರ ಬಗೆಗೆ ಗೊಡ್ಡುಸಂಪ್ರದಾಯವಾದಿಗಳ ತೆಗಳಿಕೆಯ ಮಾತುಗಳು ನನಗಂತೂ ಸ್ವಲ್ಪವೂ ಹಿಡಿಸಲಿಲ್ಲ.

ಪ್ರಕರಣ–11

ಮದರಾಸಿನಲ್ಲಿ ಅಷ್ಟಾವಧಾನ ಪ್ರದರ್ಶನ

"ಪ್ರಕೃತಿಃ ಖಲು ಸಾ ಮಹೀಯಸಃ ಸಹತೇ ನಾನ್ಯಸಮುನ್ನತಿಂ ಯಯಾ"।
(ಭಾರವಿಃ)
(ಬೇರೊಬ್ಬರ ಉತ್ಕರ್ಷವನ್ನು ಸಹಿಸದಿರುವುದು ತೀರಾ ದೊಡ್ಡವರ ಸಹಜ ಗುಣವಷ್ಟೆ?)

ನನ್ನ ವಿಶ್ವಾಸಿಗಳ ಕೋರಿಕೆಯಂತೆ ಅರುಣಾಚಲದಿಂದ ಹೊರಟು ಮದರಾಸ್ ನಗರಕ್ಕೆ ಹೋದೆ. ಅಲ್ಲಿ ಸ್ನೇಹಿತರು ಮೂರು ಕಡೆ ನನ್ನ ಅಷ್ಟಾವಧಾನ ಪ್ರದರ್ಶನಗಳಿಗೆ ವ್ಯವಸ್ಥೆ ಮಾಡಿದರು.

ಮೊದಲನೆಯ ಪ್ರದರ್ಶನ "ತಿರುವಲ್ಲಿಕೇಣಿ ಪ್ರೌಢಶಾಲಾ ಸಭಾಂಗಣ"ದಲ್ಲಿ ನಡೆಯಿತು. ಸುಪ್ರಸಿದ್ಧ ವಿದ್ವಾಂಸ ಶ್ರೀನಿವಾಸಶಾಸ್ತ್ರಿಗಳವರು ಈ ಸಮಾರಂಭದ ಅಧ್ಯಕ್ಷರು. ಅವರೊಡನೆ ಪಾಂಡಿತ್ಯಕ್ಕೆ ಹೆಸರಾಂತ ನೀಲಮೇಘಶಾಸ್ತ್ರಿಗಳವರು, ಹಾಲಾಸ್ಯನಾಥಶಾಸ್ತ್ರಿಗಳೇ ಮೊದಲಾದವರು ಪರೀಕ್ಷಕರಾಗಿ ಸಭೆಯನ್ನು ಅಲಂಕರಿಸಿದ್ದರು. ಸಮಸ್ಯಾಪೂರಣ ಮುಂತಾದ ಅಷ್ಟಾವಧಾನದ ಪ್ರಕಾರಗಳನ್ನು ಈ ಸಭೆಯಲ್ಲಿ ಪ್ರದರ್ಶಿಸಿದೆ.

ಎರಡನೆಯ ಪ್ರದರ್ಶನ ಮೈಲಾಪುರದಲ್ಲಿ ನಡೆಯಿತು. ಸರಸಕವಿತಾ ಪ್ರಕಾರದಲ್ಲಿ ಅಗ್ರಗಣ್ಯರಾದ ವಿ. ಕೃಷ್ಣಸ್ವಾಮಿ ಅಯ್ಯರ್‌ರವರು ಶಾಸ್ತ್ರವೇತ್ತರಾದ ವಿದ್ವಾಂಸರ ಸಮೂಹದೊಡನೆ ಆಗಮಿಸಿ ಅಗ್ರಪೀಠದಲ್ಲಿ ವಿರಾಜಮಾನರಾಗಿದ್ದರು.

ಅವಧಾನದ ಒಂದು ಅಂಗವಾದ "ಘಂಟಾಶತಕ" (ಒಂದು ಘಂಟೆಯ ಅವಧಿಯಲ್ಲಿ ನೂರು ಶ್ಲೋಕಗಳನ್ನು ರಚಿಸಿ ಹೇಳುವುದು) ನಿರ್ವಹಿಸಲು ನನಗೆ ತಿಳಿಸಲಾಯಿತು. ಈ ಘಂಟಾಶತಕ "ನಳೋಪಾಖ್ಯಾನ"ದ ವಿಷಯದ ಮೇಲೆ ಇರಬೇಕೆಂದೂ ಸೂಚಿಸಿದರು.

ಕೂಡಲೆ ಪ್ರಾರಂಭಿಸಿದ ನಾನು 6 ನಿಮಿಷಗಳಲ್ಲಿಯೇ 25 ಪದ್ಯಗಳನ್ನು ರಚಿಸಿ ಹೇಳಿ ಮುಗಿಸಿದ್ದೆ. ಆದರೆ ನನ್ನ ಈ ರಚನೆಗಳನ್ನು ಬರವಣಿಗೆಯಲ್ಲಿ ದಾಖಲು ಮಾಡಿಕೊಳ್ಳುತ್ತಿದ್ದ ಲೇಖಕರಿಗೆ ನನ್ನ ಹೇಳಿಕೆಯ ವೇಗವನ್ನು ಅನುಸರಿಸಿ ಬರೆಯುತ್ತ ಹೋಗಲು ಸಾಧ್ಯವಾಗಲಿಲ್ಲ. ಇಡೀ ಸಭೆ ಆಶ್ಚರ್ಯದಲ್ಲಿ ಮುಳುಗಿತು. ಅಷ್ಟರಲ್ಲಿ ಅಧ್ಯಕ್ಷ ಮಹೋದಯರು "ನಿಲ್ಲಿಸೋಣವಾಗಲಿ, ಇಷ್ಟೇ ಸಾಕು. ನೀವು ಇದೇ ವೇಗದಲ್ಲಿ ಶ್ಲೋಕ ರಚಿಸುತ್ತ 1 ಘಂಟೆಯ ಅವಧಿಯಲ್ಲಿ 250 ಶ್ಲೋಕಗಳನ್ನು ಪೂರ್ಣಗೊಳಿಸಬಲ್ಲಿರಿ. ನಿಮ್ಮ ಈ ಅಸಾಧಾರಣ ಸಾಮರ್ಥ್ಯ ನಮಗೆ ಮನವರಿಕೆಯಾಗಿದೆ." ಎಂದು ಹೇಳಿ ಆಶ್ಚರ್ಯ - ಸಂತಸಗಳನ್ನು ಸೂಚಿಸಿ ನನ್ನನ್ನು ಅಭಿನಂದಿಸಿದರು.

(ಇಲ್ಲಿಂದ ಮುಂದೆ ಈ ಪ್ರಕರಣದ ಕೊನೆಯವರೆಗಿನ ವಿವರಗಳು
ಗ್ರಂಥಕರ್ತ ಕಪಾಲಿಶಾಸ್ತ್ರಿಗಳವರ ಮಾತಿನಲ್ಲಿವೆ)

ಮೂರನೆಯ ಅಷ್ಟಾವಧಾನವನ್ನು ಮದರಾಸ್ ನಗರದಲ್ಲಿ ಡಾ|| ಎಂ. ಡಿ. ಕೃಷ್ಣಸ್ವಾಮಿ ಅಯ್ಯರ್‌ರವರ ಮನೆಯಲ್ಲಿ ಏರ್ಪಡಿಸಿದ್ದರು. ಸಮಸ್ಯಾಪೂರಣವೇ ಮುಂತಾದ ಪ್ರಕಾರಗಳನ್ನು ಗಣಪತಿಶಾಸ್ತ್ರಿಗಳು ಪ್ರದರ್ಶಿಸಿದರು. ಈ ಸಭೆ ಸುಪ್ರಸಿದ್ಧ ಪಂಡಿತೋತ್ತಮರಿಂದ ತುಂಬಿದ್ದಿತು. ತಮ್ಮ 17ನೇ ವಯಸ್ಸಿನಲ್ಲಿಯೇ ಕಾವ್ಯರಚನೆಮಾಡಿ ಪಂಡಿತ ಮಂಡಲಿಗೆ ಮಾನನೀಯರೆನಿಸಿ ಕವಿತಾ ಚಮತ್ಕಾರ-ವಿಲಾಸ-ವೈಭವಗಳನ್ನು ಕರಗತ ಮಾಡಿಕೊಂಡಿದ್ದ ಬಾಲ ಸರಸ್ವತೀ-ಭಟ್ಟ ಶ್ರೀಪಾದ ಬಿರುದಾಂಕಿತ ನಾರಾಯಣ ಸುದರ್ಶನರು, ಕಾವ್ಯಕಂಠರ ಈ ಅಷ್ಟಾವಧಾನ ನಿರ್ವಹಣೆಯನ್ನು ಒರೆಗೆ ಹಚ್ಚಿ ಬೆಲೆಕಟ್ಟುವ ಭಾರವನ್ನು ನಿರ್ವಹಿಸಿದರು. ಸಭೆಗೆ ರತ್ನಪ್ರಾಯರಾಗಿದ್ದ ಈ ವಿದ್ವದ್ವರೇಣ್ಯರು ಮನೋಹರ - ಅಲೌಕಿಕ - ಕಾವ್ಯಾಮೃತಧಾರೆಯಿಂದ ಸಹೃದಯ ಸಭಾಸದರ ಮನತಣಿಸುವಲ್ಲಿ ಕುಶಲಿಗಳಾದ ಕಾವ್ಯಕಂಠ ಗಣಪತಿ ಮುನಿಗಳ ಉದ್ವೇಗರಹಿತವೂ, ಕ್ಷಿಪ್ರಗತಿಯ ಸಾರಸ್ವತಸಾರ ಪರಿಪೂರ್ಣವೂ ಆದ ಸಾಮರ್ಥ್ಯವನ್ನು ಆಕ್ಷೇಪಣೆಯ ಅಸ್ತ್ರ ಪ್ರಯೋಗದ ಮೂಲಕ ಚೆನ್ನಾಗಿ ಪರೀಕ್ಷಿಸಿ ನೋಡಿದರು.

ನಂತರ ಘಂಟಾಶತಕವನ್ನು ಪ್ರಾರಂಭಿಸಿದ ಗಣಪತಿಶಾಸ್ತ್ರಿಗಳು ಚುರುಕು ಗತಿಯಲ್ಲಿ ಸರಸ-ಗಂಭೀರ ಪದಗಳಿಂದ ಕೂಡಿದ ಕವಿತೆಗಳನ್ನು ರಚಿಸಿ ಹೇಳುತ್ತ ಹೋದರು. ಶಾಸ್ತ್ರಿಗಳ ಮುಖದಿಂದ ಹರಿದು ಬರುವ ಕವಿತಾಧಾರೆಯ ವೇಗವನ್ನನುಸರಿಸಿ ಬರೆಯುತ್ತ ಹೋಗುವುದು ಲಿಪಿಕಾರನಿಂದ ಸಾಧ್ಯವಾಗದಿದ್ದರೂ ಆತನು ಶಾಸ್ತ್ರಿಗಳ ಪ್ರತಿಯೊಂದು ರಚನೆ ಮುಗಿಯುತ್ತಿದ್ದಂತೆಯೇ "ಸರಿ! ಮುಂದೆ ಹೇಳಿ" ಎನ್ನುತ್ತಿದ್ದ. ಈ ಕ್ರಮ ಶಾಸ್ತ್ರಿಗಳಿಗೆ ಸಂಶಯ ಉಂಟು ಮಾಡಿತು. ಒಬ್ಬರು ಶ್ಲೋಕವೊಂದನ್ನು ಅತಿ ಶೀಘ್ರಗತಿಯಲ್ಲಿ ರಚಿಸಿ ಹೇಳುತ್ತಿದ್ದರೆ-ಅದಕ್ಕೂ ಮಿಗಿಲಾದ ವೇಗದಲ್ಲಿ ಬೇರೊಬ್ಬನು ಅದನ್ನು ಬರೆದು ಮುಗಿಸಿಬಿಡುವುದು ಹೇಗೆ ಸಾಧ್ಯ ? ಬಹುಶಃ ಇಲ್ಲಿ ಈ ಲಿಪಿಕಾರ ಯಾವುದೋ ಕುಟಿಲ ತಂತ್ರವನ್ನು ಅನುಸರಿಸುತ್ತಿರಬೇಕು ಎಂಬ ನಿರ್ಧಾರಕ್ಕೆ ಬಂದ ಶಾಸ್ತ್ರಿಗಳು ಸಭೆಯನ್ನುದ್ದೇಶಿಸಿ ''ಈ ಸಭೆಯಲ್ಲಿ ನನ್ನ ಆಶುಕವಿತೆಗಳನ್ನು ಬರೆದುಕೊಳ್ಳುತ್ತಿರುವವರು ಇದುವರೆಗೆ ದಾಖಲು ಮಾಡಿಕೊಂಡಿರುವುದನ್ನು ಒಮ್ಮೆ ಓದಿ ಹೇಳಲಿ!" ಎಂದು ಸೂಚಿಸಿದರು.

ಅದರಂತೆ ಲೇಖಕನು ತಾನು ಬರೆದುಕೊಳ್ಳುತ್ತಿದ್ದುದನ್ನು ಓದಿಹೇಳಲು ಪ್ರಾರಂಭಿಸಿದ. ಆದರೆ ಏನಾಶ್ಚರ್ಯ ! ಆತ ಓದಿ ಹೇಳುತ್ತಿದ್ದುದು ತನ್ನ ಸ್ವಂತ ಕವಿತೆಗಳೇ ಹೊರತು ಕಾವ್ಯಕಂಠರು ಇದುವರೆಗೆ ರಚಿಸಿ ಹೇಳಿದವುಗಳಲ್ಲವೆಂಬುದು ಸಭಾಸದರೆಲ್ಲರಿಗೂ ಸ್ಪಷ್ಟವಾಯಿತು. "ಇಂತಹ ಕ್ರಮ ಸರಿಯಲ್ಲ" ವೆಂದು ಸಭೆ

ಅಭಿಪ್ರಾಯ ಪಟ್ಟಿತು. ಸಹೃದಯ ವಿದ್ವಜ್ಜನ ಮನ್ನಣೆಗೆ ಪಾತ್ರರಾದ ಕಾವ್ಯ ಕಂತರ ಪ್ರಾಶಸ್ತ್ಯವನ್ನು ಕುಂಠಿತಗೊಳಿಸುವ ದುರುದ್ದೇಶದಿಂದಲೇ ಸ್ವತಃ ಕವಿಯಾದ ಆ ಲೇಖಕನು ಈ ವಾಮಮಾರ್ಗ ಹಿಡಿದಿದ್ದಾನೆಂಬುದು ಶಾಸ್ತ್ರಿಗಳ ಅನಿಸಿಕೆ. ಅದಕ್ಕೆ ಆ ಬರವಣಿಗೆಗಾರ ಹೇಳಿದ ಸಮಾಧಾನವೆಂದರೆ :-"ಆಶು ಕವಿತೆ ಕಟ್ಟುವ ಕಲೆ ಮಹತ್ವದ್ದೇನೂ ಅಲ್ಲವೆಂಬುದನ್ನು ನಿರೂಪಿಸಲು ನಾನು ಹೀಗೆ ಮಾಡಿದ್ದೇನೆ." ಆದರೆ "ಮಾನ್ಯರಾದ ಆಶುಕವಿಯೊಬ್ಬರ ಸಾಮರ್ಥ್ಯವನ್ನು ಕೆಳದರ್ಜೆಯದೆಂದು ನಿರೂಪಿಸುವ ಈ ಬಗೆಯ ಧೋರಣೆ ಸರ್ವಥಾ ಸಲ್ಲದು" ಎಂದೇ ಸಭೆಯಲ್ಲಿದ್ದವರು ಸ್ಪಷ್ಟವಾಗಿ ಅಭಿಪ್ರಾಯಪಟ್ಟರು.

ಆಂಧ್ರ-ಉತ್ಕಲ-ಮಗಧ-ಮಹಾರಾಷ್ಟ್ರ ಮೊದಲಾದ ವಿವಿಧ ಭಾಷೆಗಳಲ್ಲಿ ಪರಿಣತರಾದ ವಿದ್ವಜ್ಜನರ ಗೋಷ್ಠಿಗಳಲ್ಲಿ ಗಣಪತಿ ಶಾಸ್ತ್ರಿಗಳು ಅಷ್ಟಾವಧಾನಗಳನ್ನು ನಿರ್ವಹಿಸಿದ್ದರು. ಆದರೆ ಎಲ್ಲಿಯೂ ಈ ಬಗೆಯ ಕುಟಿಲ ತಂತ್ರ ಪ್ರಯೋಗ ತಮ್ಮ ಅರ್ಹತೆಯ ಬಗ್ಯೆ ಆದುದಿಲ್ಲ. ಎಂದೂ ಕಂಡರಿಯದ ಹೊಸ ಅನುಭವ ಇಲ್ಲಿ ಅವರಿಗೆ ಆಯಿತು. ಋಜು ಮಾರ್ಗ ಹಿಡಿದಿರುವ ಅಭ್ಯರ್ಥಿ-ವಾಮಮಾರ್ಗ ಅನುಸರಿಸುವ ಪರೀಕ್ಷಕ ಇವರ ನಡುವಣ ಸಂಘರ್ಷ ತಾತ್ಕಾಲಿಕ ವಿರಸಕ್ಕೆ ಕಾರಣವಾಯಿತು.

ನಂತರ ಅಷ್ಟಾವಧಾನದ ಅಂಗಗಳಲ್ಲಿ ಒಂದಾದ "ವ್ಯಸ್ತಾಕ್ಷರ ಲೇಖನ" ಪ್ರಾರಂಭವಾಯಿತು. ಪ್ರದರ್ಶನಕಾರನು ಅಷ್ಟಾವಧಾನದ ಬೇರೆ-ಬೇರೆ ಪ್ರಕಾರಗಳನ್ನು ನಿರ್ವಹಿಸುತ್ತಿರುವಂತೆಯೇ ಮಧ್ಯೆ ಸ್ವಲ್ಪ ಅವಕಾಶದಲ್ಲಿ ಪರೀಕ್ಷಕನು ಬೇರೆ ಬೇರೆ ಕಾಗದ ತುಂಡಿನ ಮೇಲೆ ಬರೆದು ತೋರಿಸುವ ಶ್ಲೋಕದ ಒಂದೊಂದೇ ಅಕ್ಷರವನ್ನು ಒಮ್ಮೆ ಮಾತ್ರ ನೋಡಿಕೊಳ್ಳಬೇಕು. ಶ್ಲೋಕದ ಎಲ್ಲಾ ಅಕ್ಷರಗಳನ್ನು ಹೀಗೆ ನೋಡಿಕೊಂಡ ಮೇಲೆ ಶ್ಲೋಕದ ಕೊನೆಯ ಅಕ್ಷರದಿಂದ ಪ್ರಾರಂಭಿಸಿ ಹಿಂದು ಹಿಂದಿನ ಅಕ್ಷರಗಳನ್ನು ಜೋಡಿಸುತ್ತ ಶ್ಲೋಕದ ಮೊದಲ ಅಕ್ಷರದವರೆಗೆ ಬರೆದು ಶ್ಲೋಕವನ್ನು ಪೂರ್ಣಗೊಳಿಸಬೇಕು. ಈ ಪ್ರಕಾರವೇ "ವ್ಯಸ್ತಾಕ್ಷರೀ," ಗಣಪತಿ' ಶಾಸ್ತ್ರಿಗಳು ತಮಗೆ ಕೊಡಲಾದ ಅಕ್ಷರದ ಚೀಟಿಯನ್ನು ಒಂದುಸಲ ನೋಡಿ ಬರೆದು ವಾಪಸು ಕೊಡುತ್ತಾ ಕೊನೆಗೆ ನೆನಪಿನಿಂದಲೇ ವ್ಯಸ್ತಾಕ್ಷರಿಯಲ್ಲಿ ಶ್ಲೋಕವನ್ನು ಬರೆದುಸಭೆಗೆ ತೋರಿಸಿದರು. ನಂತರ ಪಾದಾನುಕ್ರಮದಲ್ಲಿ ಶ್ಲೋಕವನ್ನು ಹೇಳಿದರು.

ಈ ಪದ್ಯವಾದರೋ ತುಂಬಾ ಉದ್ದವಾದ "ಸ್ರಗ್ಧರಾ" ವೃತ್ತದಲ್ಲಿದೆ. ಇಷ್ಟೊಂದು ದೊಡ್ಡ ಶ್ಲೋಕವನ್ನು "ವ್ಯಸ್ತಾಕ್ಷರೀ ಲೇಖನ"ಕ್ಕೆ ಕೊಡಲು ಕಾರಣ

ವೇನು ? ಈಗಾಗಲೇ "ಘಂಟಾಶತಕ"ದ ನಿರ್ವಹಣೆಯ ಸಂದರ್ಭದಲ್ಲಿ ಶಾಸ್ತ್ರಿಗಳಿಗೆ ಆದ ಕಹಿ ಅನುಭವದ ಪ್ರಕಾರ ಇದು ಅದರ ಪುನರಾವರ್ತನೆ. ಶಾಸ್ತ್ರಿಗಳ ''ಏಕ ಸಂಧಿಗ್ರಹಣ ಶಕ್ತಿ" (ಒಮ್ಮೆ ಕೇಳಿದ್ದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬಲ್ಲ ಸಾಮರ್ಥ್ಯ) ಯನ್ನು ಹೇಗಾದರೂ ಅಸ್ತವ್ಯಸ್ತಗೊಳಿಸಿ ಅಪವಾದಕ್ಕೆ ಈಡುಮಾಡುವ ಕುಟಿಲ ಉದ್ದೇಶವೇ ಇದರ ಹಿನ್ನೆಲೆಯಲ್ಲಿರುವುದು... ಹೊರತು ನಿಜವಾದ ಬೌದ್ಧಿಕ ಶಕ್ತಿಯನ್ನು ಒರೆಗೆ ಹಚ್ಚಿ ನ್ಯಾಯವಾದ ಬೆಲೆ ಕಟ್ಟಬಲ್ಲ ಪರೀಕ್ಷಾ ಕ್ರಮ ಇದಲ್ಲ. ಇದು ಶಾಸ್ತ್ರಿಗಳಿಗೆ ಮನದಟ್ಟಾಯಿತು. ಆ ಶ್ಲೋಕ ಹೀಗಿದೆ :–

ಅಪ್ಸಾಂ ದ್ರಪ್ಸಾಮಲಿಪ್ಸಾಂ ಚಿರತರಮಚರಂ ಕ್ಷೀರಮದ್ರಾಕ್ಷಮಿಕ್ಷುಂ
ದ್ರಾಕ್ಷಾಂ ಸಾಕ್ಷಾದಜಕ್ಷಂ ಮಧುರಸಮದಯಂ ದ್ರಾಗವಿಂದಂ ಮರಂದಂ।
ಮೋಚಾಮಾಚಾಮಮನ್ಯೋ ಮಧುರಿಮಗರಿಮಾ ಶಂಕರಾಚಾರ್ಯವಾಚಾಂ
ಆಚಾಂತೋ ಹಂತ ಕಿಂ ತೈರಲಮಪಿ ಚ ಸುಧಾಸ್ಸಾರಸೀ ಸಾರಸೀಮ್ನಾ ॥

ಅಷ್ಟಾವಧಾನದ ಕೊನೆಯ ಹಂತವಾಗಿ ಯಾವುದಾದರೂ ಮಹಾಕಾವ್ಯಾದಿಗಳಲ್ಲಿ ಬರುವ ಶ್ಲೋಕವೊಂದನ್ನು ವ್ಯಾಖ್ಯಾನಕ್ಕಾಗಿ ನೀಡುವ ವಾಡಿಕೆ ಇದೆ. ಆದರೆ ಇಲ್ಲಿ ಈ ಮೇಲೆ ಕಂಡ ''ಅಪ್ಸಾಂ ದ್ರಪ್ಸಾಂ" ಶ್ಲೋಕವನ್ನೇ ವ್ಯಾಖ್ಯಾನಕ್ಕಾಗಿ ಸೂಚಿಸಲಾಯಿತು. ಇದು ಪರೀಕ್ಷಕನು ತನ್ನ ಶಬ್ದಾನುಪ್ರಾಸ ಜೋಡಣೆಯ ಸಾಮರ್ಥ್ಯದ ಪ್ರದರ್ಶನಕ್ಕೆಂದೇ ಬಹು ಕಷ್ಟಪಟ್ಟು ತಿಣಿಕಿ ಹೆಣೆದ ದೀರ್ಘ ವೃತ್ತದ ಶ್ಲೋಕ. ವ್ಯಸ್ತಾಕ್ಷರಿಯಲ್ಲಿ ಪರೀಕ್ಷಕನು 2ನೆಯ ಬಾರಿಗೆ ತಮ್ಮ ಅಂತರಂಗವನ್ನು ಘಾಸಿಗೊಳಿಸಲು ಪ್ರಯತ್ನಿಸಿದುದು ಶಾಸ್ತ್ರಿಗಳ ಮನಸ್ಸಿಗೆ ಅರಿವಾಗಿದ್ದಿತಷ್ಟೆ? ಈಗ ವ್ಯಾಖ್ಯಾನಕ್ಕಾಗಿ ಇದೇ ಶ್ಲೋಕವನ್ನೇ ನಿರ್ದೇಶಿಸಿರುವುದು "ತಮ್ಮ ಸುದೈವವೇ ಸರಿ"ಎಂದು ಕೊಂಡರು ಶಾಸ್ತ್ರಿಗಳು.

ವ್ಯಾಖ್ಯಾನ ಪ್ರಾರಂಭಿಸಿದ ಶಾಸ್ತ್ರಿಗಳು ''ತಪ್ಪುಗಳ ಸರಮಾಲೆಯಾದ" ಈ ಶ್ಲೋಕದಲ್ಲಿನ ಅಸಾಧು ಶಬ್ದಪ್ರಯೋಗಗಳು–ಅವುಗಳಿಂದ ಹೊರಡುವ ಅಪಾರ್ಥ–ದೋಷಗಳನ್ನು ಎಳೆ–ಎಳೆಯಾಗಿ ಬಿಡಿಸುತ್ತ ತಮ್ಮ ಮಾತಿನ ಮಧುರ ರಸಧಾರೆಯಿಂದ ಈಗಾಗಲೇ ಘಟಿಸಿದ ವಿರಸವನ್ನು ಮರೆತುಬಿಡುವಂತೆ ಮಾಡಿದರು. ಅವರ ಮಾತಿನ ಮೋಡಿಗೆ ವಶರಾದ ಸಭಾಸದರು ತಲೆದೂಗುತ್ತ ಸಂತೋಷ ಸೂಚಿಸುತ್ತಿದ್ದರು. ಆ ಶ್ಲೋಕದಲ್ಲಿ ಗಣಪತಿ ಶಾಸ್ತ್ರಿಗಳು ಗುರುತಿಸಿದ ದೋಷಗಳ ಪೈಕೀ ಕೆಲವು ಹೀಗಿವೆ :–

ಇಲ್ಲಿ ಮೊದಲು ಕವಿ (ಅಂದರೆ ಪರೀಕ್ಷಕನಾಗಿ ಇದ್ದವನು) ಹೇಳುತ್ತಾನೆ:- "ಅಲಿಪ್ಸಾಂ ದ್ರಪ್ಸಾಂ ಅಪ್ಸಾಂ" ಎಂದು. ಶ್ರೀ ಶಂಕರಭಗವತ್ಪಾದರ ಮಾತಿನ ಮಾಧುರ್ಯ ಲೋಕೋತ್ತರವಾದುದೆಂದು ನಿರೂಪಿಸುವ ಉದ್ದೇಶ ಕವಿಯದು. ದ್ರಪ್ಸಾದಿಗಳ ರಸಗ್ರಹಣ ಕ್ರಿಯೆಯನ್ನು ಮತ್ತೆ ಮತ್ತೆ ಅದೇ ಅರ್ಥಕೊಡುವ (ಪುನರುಕ್ತಿ) ರೀತಿಯಲ್ಲಿ ಪ್ರಯೋಗಿಸಿ ರಸಗ್ರಹಣ ಕ್ರಿಯೆಗೆ ಕರ್ಮಭೂತಗಳಾದ ದ್ರಪ್ಸ(ಮೊಸರಿನರಸ) ಕ್ಷೀರ (ಹಾಲು) ಮೊದಲ್ಗೊಂಡು ಮೋಚಾ(ಬಾಳೇಹಣ್ಣು) ಸುಧಾ (ಮಕರಂದ) ದ ತನಕ ತಿನ್ನುವ-ಕುಡಿಯುವ ವಸ್ತುಗಳನ್ನು ಹೆಸರಿಸಿದ್ದಾನೆ.

"ಅಲಿಪ್ಸಾಂ ದ್ರಪ್ಸಾಂ ಅಪ್ಸಾಂ" ಎಂಬಲ್ಲಿ ಇರುವ "ಅಪ್ಸಾಂ" ಶಬ್ದದ ರೂಪನಿಷ್ಪತ್ತಿಯು "ಪ್ಸಾಭಕ್ಷಣೆ" ಎಂಬ ಅದಾದಿ ಧಾತುವಿನ "ಲಂಙ್" ಉತ್ತಮ ಪುರುಷ ಏಕವಚನದಲ್ಲಿ ಆಗುತ್ತದೆ. ಅಂದರೆ "ಅಪ್ಸಾಂ" (ಅಭಕ್ಷಯಂ) ತಿಂದೆನು ಎಂಬುದು ಇದರ ಅರ್ಥ. "ದ್ರಪ್ಸಂ ದಧಿ ಘನೇತರಂ" ಎಂಬ ಅಮರ ಕೋಶದ ಉಕ್ತಿಯ ಪ್ರಕಾರ ಮೊಸರಿನಲ್ಲಿ ಘಟ್ಟಿಯಾದ ಅಂಶವನ್ನು ಬಿಟ್ಟು ರಸ ರೂಪದಲ್ಲಿರುವ ಉಳಿದ ಭಾಗವನ್ನು ಸಂಸ್ಕೃತದಲ್ಲಿ "ದ್ರಪ್ಸಂ" ಎಂದು ನಪುಂಸಕ ಲಿಂಗದಲ್ಲಿ ಕರೆಯಲಾಗುತ್ತದೆ. ಆದರೆ ಇಲ್ಲಿ ಕವಿ "ದ್ರಪ್ಸಾಂ" ಎಂದು ಸ್ತ್ರೀಲಿಂಗ ದಲ್ಲಿ ಪ್ರಯೋಗಿಸಿಬಿಟ್ಟಿದ್ದಾನೆ. ಅದು ಹೇಗೂ ಇರಲಿ. ಆದರೆ "ಅಲಿಪ್ಸಾಂ" (ಇದಕ್ಕಿಂತ ಮಿಗಿಲಾದ ಆಶೆ ಇನ್ನೂ ಯಾವುದರಲ್ಲಿಯೂ ಇಲ್ಲವೆಂಬ ಅರ್ಥ ಕೊಡುವ) ದ್ರಪ್ಸ ಶಬ್ದದ ವಿಶೇಷಣಕ್ಕೆ ಏನು ಹೇಳೋಣ! ವ್ಯಾಕರಣ ಪ್ರಯೋಗ ರೀತ್ಯಾ ವಿಚಾರ ಮಾಡಿದಾಗ "ಕವಿ ಹೇಳಲು ಉದ್ದೇಶಿಸಿದ್ದೇ ಒಂದು; ಹೇಳು ತ್ತಿರುವುದು ಮತ್ತೊಂದು." ಇದು ಸರ್ವಥಾ ಸಲ್ಲದು.

ಇನ್ನು "ಕ್ಷೀರಂ ಚಿರತರಂ ಅಚರಂ" ಹಾಲನ್ನು ಬಹಳ ಹೊತ್ತು ಕುಡಿದೆನು, ಎಂಬ ಅರ್ಥದಲ್ಲಿ ಕುಡಿಯುವುದಕ್ಕೆ ಬದಲು "ಅಚರಂ"-ತಿಂದೆನು ಎಂದೇ ಹೇಳು ತ್ತಿದ್ದಾನೆ ಕವಿ. ಚರಶಬ್ದಕ್ಕೆ "ಭಕ್ಷಣ" ಎಂಬ ಅರ್ಥವೂ ಇದ್ದು ಪಶುಗಳು(ಜಾನು ವಾರುಗಳು) ಹುಲ್ಲು-ಸೊಪ್ಪು ಮೊದಲಾದವುಗಳನ್ನು ಮೇಯುವುದಕ್ಕೆ ಸಂಸ್ಕೃತ ದಲ್ಲಿ ಈ "ಚರ" ಶಬ್ದ ಬಳಕೆಯಾಗುತ್ತದೆ. ಹೊರತು ಮನುಷ್ಯರು ಹಾಲು ಇತ್ಯಾದಿ ಕುಡಿಯುವ ಕ್ರಿಯೆಗೆ (ನ ತು ಮಾನುಷಾಣಾಂ ಕ್ಷೀರಾದಿ ಪಾನೆ) ಅಲ್ಲ. ಉದಾಹರಣೆಗೆ "ಗೋಪೋ ಗಾಶ್ಚಾರಯತಿ" (ದನಗಾಹಿಯು ಹಸುಗಳನ್ನು ಮೇಯಿಸುತ್ತಾನೆ.) "ಸುಚಿರಂ ಹಿ ಚರನ್ ಸಸ್ಯಂ" (ಬಹು ಹೊತ್ತು ಹಸಿರು ಮೇಯುತ್ತಾ) ಇತ್ಯಾದಿ. ಹಾಗೆಯೇ "ಚರ" ಶಬ್ದಕ್ಕೆ ಇರುವ 2 ಅರ್ಥ (ಸಂಚ ರಿಸು, ಮೇಯು)ವನ್ನು ಈ ಮುಂದೆ ಕಾಣಬಹುದು;- "ನಷ್ಟಾ ಶಂಕಾ ಹರಿಣ

ಶಿಶವೋ ಮಂದಮಂದಂ ಚರಂತಿ"(ಭೀತಿ ತೊಲಗಿದ ಮೇಲೆ ಹುಲ್ಲೆಯ ಮರಿಗಳು ಮೆಲ್ಲಮೆಲ್ಲನೆ ಮೇಯುತ್ತಾ ಮುಂದೆ ಸಾಗತೊಡಗಿದವು.) "ಅತ್ರ "ಚರತಿಃ" ಗಮನೆ ಭಕ್ಷಣೇ ಚ ಇಲ್ಲಿ "ಚರ" ಶಬ್ದಕ್ಕೆ 'ಮೇಯುವುದು' ಮುಂದೆ ಸಾಗುವುದು" ಈ ಎರಡು ಅರ್ಥಗಳು ಇವೆ. ಈ ಬಗ್ಗೆ ಇಷ್ಟು ದೃಷ್ಟಾಂತಗಳು ಸಾಕು.

ಇನ್ನು ''ಇಕ್ಷುಮದ್ರಾಕ್ಷಂ'' (ಕಬ್ಬನ್ನು ಕಂಡೆ) ಎಂದು ಹೇಳಿಕೊಂಡಿರುವುದರಲ್ಲಿ ಕವಿಯ ಉದ್ದೇಶ ''ತಾನು ಕಬ್ಬಿನ ಹಾಲಿನ ರುಚಿಯನ್ನು ಬಲ್ಲವನೆಂದು'' ಲಕ್ಷಣಾತ್ಮಕವಾಗಿ ವ್ಯಕ್ತಪಡಿಸುವುದೇ ಆಗಿದೆ. ಇಲ್ಲಿ ಮುಖ್ಯವಿಷಯವಾದ ಕಬ್ಬನ್ನು ನೋಡುವುದು ಎಂಬುದು ಸರ್ವಸಾಮಾನ್ಯವಾಗಿ ಸಂಭವನೀಯವೇ ಹೊರತು ಅಸಾಧ್ಯದ ವಿಷಯವಲ್ಲವಾಗಿ – ಇಲ್ಲಿ ಲಕ್ಷಣಸಿದ್ಧಿ ಆಗುವದಿಲ್ಲ. ಆಂದಮೇಲೆ ಉದ್ದೇಶ ಸಿದ್ಧಿಯೂ ಇಲ್ಲವೇದಾಗುತ್ತದೆ.

ನಂತರ 'ದ್ರಾಕ್ಷಾಂ ಸಾಕ್ಷಾದಜಕ್ಷಂ' ಅಂದರೆ 'ದ್ರಾಕ್ಷಿಯನ್ನು ಪ್ರತ್ಯಕ್ಷವಾಗಿ ತಿಂದೆ' (ಸಾಕ್ಷಾತ್=ಪ್ರತ್ಯಕ್ಷಂ, ಜಕ್ಷಣಂ=ಭಕ್ಷಣಂ) ಇದೇನು ಪ್ರತ್ಯಕ್ಷವಾಗಿ ತಿನ್ನುವ ವಿಷಯ ? ಈ ತಿನ್ನುವ ಕಾರ್ಯಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷ ಅಂದರೆ ತನ್ನ ಅರಿವಿಗೆ ಬರುವಂತೆ ಮತ್ತು ಬಾರದಂತೆ ಎಂಬ 2 ವಿಧಾನಗಳು ಇರುವಲ್ಲಿ ಮಾತ್ರ ಈ "ಸಾಕ್ಷಾತ್" ಶಬ್ದ ಅರ್ಥಪೂರ್ಣವೆನಿಸೀತು. ಈ 2ನೆಯ "ತನ್ನ ಅರಿವಿಗೆ ಬಾರದಂತೆ ತಾನು ತಿನ್ನುವ" ವಿಧಾನವನ್ನು ಮನಸ್ಸು ಕೂಡ ಗ್ರಹಿಸಲಾರದು. ಆಂದ ಮೇಲೆ ಈ2ನೆಯ ವಿಧಾನವೇ ತಿಳಿದಿಲ್ಲದ ಮನುಷ್ಯ ಸಹಜ ಬುದ್ಧಿಯುಳ್ಳವರಿಗೆ ಇಲ್ಲಿ ''ಸಾಕ್ಷಾತ್'' ಪದಪ್ರಯೋಗವು ಕೇವಲ ಅಸಂಬದ್ಧ ಪ್ರಲಾಪವೇ ಹೊರತು ಬೇರೆಯಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಮುಂದಿನದು ''ಮಧುರಸಮಧಯಂ'' ಇದಕ್ಕೆ ಜೇನಿನ ಸವಿಯನ್ನು ಕುಡಿದೆನು ಎಂಬ ಅರ್ಥ ಬರುತ್ತದೆ. ''ಮಧುರಸ'' ಎಂಬಲ್ಲಿ ರಸ ಅಂದರೆ:– ಸವಿ ಅಥವಾ ರುಚಿಯು ಅರಿವಿಗೆ ಮಾತ್ರ (ಅನುಭವಕ್ಕೆ) ಬರವಂತಹದು. ಆದ್ದರಿಂದ ''ಕುಡಿದೆನು'' ಎಂಬ ಮಾತು ಇಲ್ಲಿ ಅಗತ್ಯವಿಲ್ಲ. 'ಮಧು'ವನ್ನು (ಜೇನನ್ನು) ಕುಡಿಯುವುದು ಎನ್ನಬಹುದೇ ಹೊರತು ಅನುಭವಕ್ಕೆ ಮಾತ್ರ ಬರುವ ಅದರ ಸವಿ ರುಚಿಯನ್ನು ಕುಡಿದೆನೆಂದು ಹೇಳುವುದು ಯುಕ್ತವಲ್ಲ.

ಆ ಮೇಲೆ 'ದ್ರಾಗವಿಂದಂ' 'ದ್ರಾಕ್' ಎಂದರೆ ಶೀಘ್ರವಾಗಿ ಎಂದು ಅರ್ಥ. ಇನ್ನು ಇಲ್ಲಿ 'ಮರಂದ' ಶಬ್ದವನ್ನು 'ಮದ್ಯ' ಪದದ ಪರ್ಯಾಯವಾಗಿಯೇ ತೆಗೆದುಕೊಳ್ಳಬೇಕಾಗುತ್ತದೆ. ಈ ಮೊದಲು ಯೋಗ್ಯವಾದ ಕ್ಷೀರ ಪಾನದ ವಿಷಯ ಹೇಳುವಾಗ ''ಅದನ್ನು ಬಹಳ ಹೊತ್ತು ಅಂದರೆ ನಿಧಾನವಾಗಿ ಕುಡಿದೆ'' ನೆಂದು ಹೇಳುವ ಕವಿ ಈಗ ''ಅಪೇಯಪಾನ'' ಮದ್ಯ (ಮರಂದ) ವಿಷಯಕ್ಕೆ ಬಂದಾಗ ಇದನ್ನು ''ಬೇಗ ಕುಡಿದೆನು'' ಎನ್ನುವ ಮೂಲಕ ಆತುರ ವ್ಯಕ್ತ ಪಡಿಸು ತ್ತಾನೆ. ಅಲ್ಲದೆ ''ಮರಂದ'' ಪದಕ್ಕೆ ಪುಷ್ಪರಸ (ಮಧುರಸ, ಜೇನು) ವೆಂಬ ಅರ್ಥವನ್ನು ಇಲ್ಲಿ ತೆಗೆದುಕೊಳ್ಳೋಣವೆಂದರೆ ಇದರ ಹಿಂದೆಯೇ ಅದನ್ನು ಹೇಳಿ ದ್ದಾಗಿದೆ. "ಮರಂದ'' ಶಬ್ದಕ್ಕೆ ಜೇನು, ಮದ್ಯ ಈ 2 ಅರ್ಥಗಳೂ ಇರುವುದ ರಿಂದ ಇಲ್ಲಿ 2ಕಡೆಗಳಲ್ಲಿ ಮಧುರಸ-ಮರಂದ ಎಂದು ಹೇಳಿರುವುದನ್ನು ಒಂದಕ್ಕೆ ಜೇನು ಎಂದೂ ಇನ್ನೊಂದಕ್ಕೆ ಮದ್ಯ ಎಂದೂ ಅರ್ಥ ಮಾಡುವುದು ಅನಿವಾರ್ಯ ವಾಗಿದೆ. ಹಾಗಿಲ್ಲವಾದರೆ ಪುನರುಕ್ತಿದೋಷ ಉಂಟಾಗುತ್ತದೆ. ಈ ರೀತಿ ವಿವೇ ಚನೆ ಮಾಡಿದಾಗ ಇದನ್ನು ರಚಿಸಿದ ಕವಿ ''ಮದ್ಯಪಾನದಿಂದ'' ಉನ್ಮತ್ತ ನಾಗಿದ್ದಿರಬೇಕು'' ಎಂಬುದು ಧ್ವನಿತವಾಗುತ್ತದೆ. ಹಾಗಿಲ್ಲವಾದರೆ ಕಾವ್ಯ ಸ್ವರೂಪವನ್ನು ಗುಣ-ದೋಷ ವಿವೇಕದೊಡನೆ ಅರಿತಿರುವ ಯಾವ ಕವಿ ತಾನೇ ಶಾಂತ-ಪ್ರಸನ್ನ-ಸಮಾಧಾನ ಮನಸ್ಥಿತಿಯಲ್ಲಿ ಇಂತಹ ಶ್ಲೋಕ ರಚಿಸಿ ಹೇಳಿ ಯಾನು ? ಕವಿಯ ಅಹಂಕಾರ ವಿಲಾಸ ವೈಭವವನ್ನು ಈ ಮುಂದಿನ ಪ್ರಸಂಗ ಗಳಿಂದಲೂ ನೋಡೋಣ :–

''ಮೋಚಾಂ ಆಚಾಮಮ್'' ಬಾಳೆಯ ಹಣ್ಣು ತಿಂದೆನೆಂದು ಹೇಳಬೇಕಾದರೆ ಕವಿ ''ಆಚಾಮಮ್'' ಎಂಬ ಕ್ರಿಯಾಪದ ಉಪಯೋಗಿಸುವ ಮೂಲಕ ಆಚಮನ ಮಾಡಿದೆ ಎಂದು ಬಿಟ್ಟಿದ್ದಾನೆ. ಅಂದರೆ ಬಾಳೆಯ ಹಣ್ಣಿನ ಭಕ್ಷಣವೆನ್ನುವುದು ಆಚಮನವೆಂದು ಕವಿಯ ಅಭಿಪ್ರಾಯವೇ? ನಿತ್ಯ ನೈಮಿತ್ತಿಕ-ಶೌಚ ಕರ್ಮಾದಿಗಳಲ್ಲಿ ಶುದ್ಧವಾದ ನೀರನ್ನು ಬಲ ಅಂಗೈ ಮಧ್ಯದಲ್ಲಿ (ಒಂದು ಉದ್ಧರಣೆಯಷ್ಟು) ಇಟ್ಟುಕೊಂಡು, ಅಥವಾ ತೀರ್ಥವೇ ಮೊದಲಾದ ಪವಿತ್ರ ದ್ರವ್ಯವನ್ನೋ ಕೆಲ ವೊಮ್ಮೆ ಔಷಧವನ್ನೋ ಅಲ್ಪಪ್ರಮಾಣದಲ್ಲಿ ಅಂಗೈಗೆ ಹಾಕಿಕೊಂಡು ಸೇವಿಸು ವುದಕ್ಕೆ ''ಆಚಮನ'' ಎಂಬುದು ಪ್ರಸಿದ್ಧವಿರುವಾಗ ಹಣ್ಣುಗಳನ್ನು ತಿನ್ನು ವುದನ್ನು ಕವಿಯು ಆಚಮನ ಎಂದು ಹೇಳಿರುವುದು ತೀರಾ ಹಾಸ್ಯಾಸ್ಪದವಷ್ಟೇ ಅಲ್ಲ ! ಸಹೃದಯರೆಲ್ಲರಿಗೂ ಜಿಗುಪ್ಸೆ ಉಂಟುಮಾಡಿ ಕವಿಯ ಬಗ್ಗೆ ಮರುಕ ಹುಟ್ಟಿಸುತ್ತದೆ.

ಮತ್ತೆ ''ಸುಧಾ ಸಾರಸೀ ಸಾರಾಸೀಮ್ನಾ ಅಲಂ'' ಇಲ್ಲಿ ಸಾರಸೀ ಎಂಬ ಪದಪ್ರಯೋಗ ಸರಿಯಲ್ಲ. ''ಗುಣವಚನ ಬ್ರಾಹ್ಮಣಾದಿಭ್ಯಃ ಕರ್ಮಣಿ ಚ'' ಎಂಬ ವ್ಯಾಕರಣ ಸೂತ್ರಕ್ಕೆ ಅನುಸಾರವಾಗಿ ಇಲ್ಲಿ ''ಸಾರಸ್ಯ ಎಂದೇ ಪ್ರಯೋಗಿಸತಕ್ಕದ್ದು ಹೊರತು ಸಾರಸೀ ಎನ್ನುವುದು ಸಲ್ಲದು. ಇದು ಶಬ್ದಗಳ ಯೋಗ್ಯ ಬಳಕೆಯಲ್ಲಿ ಕವಿಗೆ ಇರುವ ಅಜ್ಞಾನವನ್ನು ಎತ್ತಿ ತೋರಿಸುತ್ತದೆ.

ಇನ್ನು ಈ ಶ್ಲೋಕದಲ್ಲಿ ''ಆಚಾಮಂ''-ಆಚಾಂತಃ'' ಎಂಬುದಾಗಿ ''ಚಮು'' ಧಾತುವನ್ನು 2ಬಾರಿ ಉಪಯೋಗಿಸುವ ಮೂಲಕ ''ದ್ವಿರುಕ್ತಿ ದೋಷ" ಉಂಟಾಗಿದೆ. "ಅವಿಂದಂ"ಎಂಬಲ್ಲಿ ಅನ್ಯಾಯವಾಗಿ ''ಲಕ್ಷಣ"ವೇ ಆಶ್ರಯಿಸಲ್ಪಟ್ಟಿದೆ. ಹೀಗೆ ಇನ್ನೂ ಹಲವು ಅಸಂಬದ್ಧಗಳನ್ನು ವಿವರಿಸುತ್ತ ಹೋದರೆ ಅದಕ್ಕೆ ಕೊನೆಯೇ ಇಲ್ಲವಾದೀತು. ಆದ್ದರಿಂದ ಇಷ್ಟು ಹೇಳಿದ್ದು ಸಾಕು ! ಇಲ್ಲಿಗೆ ಮುಗಿಸುತ್ತಿದ್ದೇನೆ ಎಂದು ಹೇಳಿದರು ಗಣಪತಿ ಶಾಸ್ತ್ರಿಗಳು.

ಒಟ್ಟಿನಲ್ಲಿ ಅಲಂಕಾರಶಾಸ್ತ್ರದ ದೋಷಪ್ರದರ್ಶನ ಪರಿಚ್ಛೇದದಲ್ಲಿ ಉದಾಹರಿಸಲ್ಪಟ್ಟಿರುವ ಹಲವು ದೋಷಗಳಿಗೆ ಈ ಶ್ಲೋಕವೊಂದೇ ಆಶ್ರಯಸ್ಥಾನವಂತಿದೆ. ದೋಷಗಳನ್ನು ಎತ್ತಿತೋರಿಸಲೆಂದೇ ಮಮ್ಮಟ ಮೊದಲಾದವರು ಉದಾಹರಿಸುವ ಯಾವ ಒಂದು ಶ್ಲೋಕದಲ್ಲಿ ಹಲವು ದೋಷಗಳನ್ನು ಕಾಣಲಾರೆವು. ಒಂದೇ ಶ್ಲೋಕದ ಮೂಲಕ ಎಲ್ಲ ದೋಷಗಳನ್ನು ಗುರುತಿಸಿ ಹೇಳಬೇಕೆಂಬ ಅವಸರವಿದ್ದಲ್ಲಿ ಸುಲಭವಾಗಿ ಈ ಶ್ಲೋಕವನ್ನು ಉಲ್ಲೇಖಿಸಿಬಿಡಬಹುದು. ಬೇರೆ ಪದ್ಯಕ್ಕಾಗಿ ಹುಡುಕುತ್ತ ಪರದಾಡಬೇಕಾದ್ದಿಲ್ಲ.

ಅಷ್ಟಾವಧಾನ ಕಾರ್ಯಕ್ರಮ ಕೊನೆಗೊಂಡಾಗ ಭಟ್ಟ ಶ್ರೀ ನಾರಾಯಣ ಸುದರ್ಶನರೇ ಮೊದಲಾದ ಸಹೃದಯ ಸಭಾಸದರೆಲ್ಲರೂ ಕಾವ್ಯಕಂಠ ಗಣಪತಿ ಶಾಸ್ತ್ರಿಗಳ ಅಸಾಮಾನ್ಯ ಧಾರಣಾಶಕ್ತಿ, ಆಶುಕವಿತಾ ನಿರ್ಮಾಣ ಸಾಮರ್ಥ್ಯ, ಆಳವಾದ ಶಾಸ್ತ್ರಜ್ಞಾನ, ಮಹತ್ತರ ಸಾರಸ್ವತ ಸಂಪತ್ತುಗಳನ್ನು ಮುಕ್ತಕಂಠದಿಂದ ಕೊಂಡಾಡಿದರು. ನಡುವೆ ಉಂಟಾಗಿದ್ದ ವಿರಸ ಪ್ರಕರಣ ಮಾಯವಾಗಿ ರಸಿಕ ಸಹೃದಯರಿಗೆ ತಕ್ಕುದಾದ ಸೌಹಾರ್ದವಾತಾವರಣದಲ್ಲಿ ಕಾರ್ಯಕ್ರಮ ಸಂಪನ್ನಗೊಂಡಿತು. ಯಥೋಚಿತವಾಗಿ ಸಭೆಯಿಂದ ಸನ್ಮಾನಿತರಾದ ಕಾವ್ಯಕಂಠರು ಪುನಃ ಅರುಣಾಚಲಕ್ಕೆ ಹೊರಟು ಹೋದರು.

ಪ್ರಕರಣ- 12.

ನೆಲ್ಲೂರುವಾಸ

ಪವನಃ ಪುರಾವಗಾಹೀ ರಥ್ಯಾಸು ವರ್ಜ ರಜಸ್ವಲೋ ಭವತಿ॥
(ಪಟ್ಟಣವನ್ನು ಆವರಿಸಿಕೊಂಡಿರುವ ವಾಯುವು (ಗಾಳಿಯು) ರಾಜಮಾರ್ಗದಲ್ಲಿ ಬೀಸುತ್ತಾ ರಜಸ್ವಲ ಅಂದರೆ ಧೂಳಿಧೂಸರಿತನಾಗುತ್ತಾನೆ)

(ಈ ಪ್ರಕರಣ ವಾಸಿಷ್ಠಮುನಿಗಳ ಮಾತಿನಲ್ಲಿ ಮುಂದುವರಿಯುತ್ತದೆ) ಅರುಣಾಚಲದಲ್ಲಿದ್ದ ನಾನು ಹೆಂಡತಿ ಮಕ್ಕಳೊಡನೆ ಅಲ್ಲಿಂದ ಹೊರಟು ವೆಲ್ಲೂರಿಗೆ ಬಂದೆ. ಇಲ್ಲಿ "ಊರಿಸ್ ಕಾಲೇಜಿನಲ್ಲಿ" ಆಂಧ್ರಭಾಷಾ ಪಂಡಿತನಾಗಿ ಕೆಲಸ ಮಾಡುವಂತೆ ಮದರಾಸು ಕ್ರೈಸ್ತಕಾಲೇಜಿನ ''ದೇಶಭಾಷಾ ಅಧ್ಯಾಪನ ವಿಭಾಗದ'' ಅಧ್ಯಕ್ಷ ಶ್ರೀರಂಗಯ್ಯ ಶ್ರೇಷ್ಠಿಯವರು ಸಲಹೆ ಮಾಡಿದರು. ಅದರಂತೆ 3 ವರ್ಷ ಆ ಉದ್ಯೋಗದಲ್ಲಿ ಇದ್ದೆ. ತಪೋವ್ಯಸನಿಯಾದ ನನಗೆ ಈ ಬಗೆಯ ಬಂಧನದ ಬದುಕು ಒದಗಿದುದು ವಿಧಿವಿಲಾಸವೇ ಸರಿ. ತಪಸ್ಸಿನ ಸಾಧನೆಯನ್ನು ಬದಿಗೆ ಸರಿಸಿ ಕುಟುಂಬ ಭರಣದ ಚಿಂತೆ ಹಚ್ಚಿಕೊಂಡು ಉನ್ನತ ಮಟ್ಟದಿಂದ ಕೆಳಗಿನ ಅಂತಸ್ತಿಗೆ ಇಳಿಯಬೇಕಾಗಿ ಬಂದುದು ನನಗೆ ಲಜ್ಜೆಯನ್ನೂ ಶೋಕವನ್ನೂ ಉಂಟು ಮಾಡಿತು.

ಕೆಲಸಕ್ಕೆ ಸೇರಿಕೊಂಡ 15 ದಿನಗಳವರೆಗಂತೂ ಮನಸ್ಸು ತುಂಬಾ ಕೆಟ್ಟು ಹೋಗಿತ್ತು. ಈ ಬಗೆಯ ಪಾಂಡಿತ್ಯ ಜೀವನದಲ್ಲಿ ನನಗೆ ಕೊಂಚವೂ ಆಸಕ್ತಿಯಿರಲಿಲ್ಲ. ಹುಚ್ಚು ಹಿಡಿದವನಂತೆ ಇದ್ದೆ. ಆದರೆ ಬಾಲ್ಯದಿಂದಲೂ ನನ್ನ ಬಲಗೈಯಂತೆ ಇದ್ದು ಎಡಬಿಡದೆ ನನ್ನನ್ನು ಅನುಸರಿಸುತ್ತಿದ್ದ ನನ್ನ ತಮ್ಮ ಶಿವರಾಮ ನನ್ನ ವಿವೇಕವನ್ನು ಜಾಗ್ರತಗೊಳಿಸಿದ. ತಪಸ್ಸು ನನ್ನ ಸಹಜಗುಣವಾದರೂ ಅದಕ್ಕೆ ಅಡ್ಡಿಯಾಗದಂತೆ ಈ ಕೆಲಸವನ್ನು ನಡೆಸುವುದು ಅಗತ್ಯವೆಂಬ ಆತನ ಸಲಹೆಯಂತೆ ಕೆಲವುಕಾಲ ಈ ಆಧ್ಯಾಪಕ ಪದವಿಯನ್ನು ಮುಂದುವರಿಸಿಕೊಂಡು ಹೋಗುವ ನಿರ್ಧಾರಕ್ಕೆ ಬಂದಿದ್ದಾಯಿತು.

ಅಂತೂ 3 ವರ್ಷ ಹಾಗೂ ಹೀಗೂ ಈ ವೃತ್ತಿಯನ್ನು ನಿರ್ವಹಿಸಿದೆ. ಒಂದು ದಿನ ನನ್ನ ಸ್ವಪ್ನದಲ್ಲಿ ಕಾಣಿಸಿಕೊಂಡ "ಭದ್ರಕ" ಹೀಗೆ ಹೇಳಿದ:- ''ನನ್ನ ದೇಹಯಾತ್ರೆ ಮುಗಿಯಿತು. ನೀನು ಸಮಾಧಾನದಿಂದ ಇರು. ಇನ್ನು ಮುಂದೆ

ತಪಸ್ಸಿನೊಡನೆ ನಿನ್ನ ಸಂಬಂಧವು ತೀವ್ರಗತಿಯಲ್ಲಿ ಮುನ್ನಡೆಯುವುದಿದೆ'', ಆ ಕೂಡಲೇ ಎಚ್ಚರಗೊಂಡ ನಾನು ನನ್ನ ಶಿಷ್ಯ ಏಕಾಮ್ರನಿಗೆ * ಈ ಸ್ವಪ್ನದ ವಿಷಯ ತಿಳಿಸಿದೆ. ಒಂದು ಬಗೆಯ ಶೋಕ–ನಿರ್ವಿಣ್ಣತೆ ನನ್ನನ್ನು ಕವಿದು ಕೊಂಡಿತು. ಮರುದಿನ ಮದರಾಸಿನ ಪತ್ರಿಕೆಯೊಂದರಲ್ಲಿ ಬ್ರಹ್ಮಸಮಾಜದ ಅಧ್ಯಕ್ಷ ಕರ್ನಲ್ ಆಲ್‌ಕಾಟ್‌ರವರ ನಿಧನದ ವಿಷಯ ಪ್ರಕಟವಾಗಿತ್ತು. (ಕರ್ನಲ್ ಆಲ್‌ಕಾಟ್ 1907ರ ಫೆಬ್ರವರಿಯಲ್ಲಿ ಸ್ವರ್ಗಸ್ಥರಾದರು) ಈ ಸುದ್ದಿಯನ್ನು ಓದಿ ಕುತೂಹಲಗೊಂಡ ನಾನು ಅವರ ಆಕಾರ ಹೇಗಿದ್ದಿತೆಂದು ತಿಳಿಯಲೋಸ್ಕರ ಪ್ರಯತ್ನಪಟ್ಟು ಅವರ ಭಾವಚಿತ್ರ ತರಿಸಿದೆ. ಅದು ನನಗೆ ಪರಿಚಿತವಾಗಿದ್ದ ಮುಖ. ಅಂದರೆ ಆಗಾಗ ನನಗೆ ಕನಸಿನಲ್ಲಿ ಕಾಣಿಸಿಕೊಂಡು ಮಾತನಾಡಿ ಸಂತೋಷ ನೀಡುತ್ತಿದ್ದ ನನ್ನ ಜನ್ಮಾಂತರದ ಬಂಧು, ಹಿಂದಿನ ಜನ್ಮಗಳಲ್ಲಿ ನನ್ನ ತಪಸ್ಸಹ ಚರನಾಗಿದ್ದ ಸ್ನೇಹಿತ 'ಭದ್ರಕ'ನೇ ಇವರು ಎಂಬುದು ಯಾವ ಸಂದೇಹಕ್ಕೂ ಎಡೆಯಿಲ್ಲದಂತೆ ಖಚಿತಗೊಂಡಿತು. ಪೂರ್ವಜನ್ಮದ ಗೆಳೆಯನ ಈ ಜನ್ಮದ ವ್ಯಕ್ತಿ ಸ್ವರೂಪ ತಿಳಿದುದರಿಂದ ಆಶ್ಚರ್ಯವೂ ಆತನ ಅಗಲುವಿಕೆಯಿಂದ ಸ್ವಲ್ಪಕಾಲ ಮನಸ್ಸಿಗೆ ವ್ಯಾಕುಲವೂ ಆಯಿತು.

ನನ್ನ ತಂದೆಯವರ ಕಣ್ಣಿನ ಬೇನೆಗೆ ಚಿಕಿತ್ಸೆ ಕೊಡಿಸುವ ಉದ್ದೇಶದಿಂದ ಅವ ರೊಡನೆ ಲಕ್ಷ್ಮಣಪುರಕ್ಕೆ ಹೊರಟು ಪ್ರಯಾಗದಲ್ಲಿ ಇಳಿದು ಗಂಗಾಸ್ನಾನಾದಿ ಗಳನ್ನು ನಿರ್ವಹಿಸಿದ್ದಾಯಿತು. ಪವಿತ್ರ ಗಂಗಾಸ್ನಾನವನ್ನು ಈ ಪುಣ್ಯಕ್ಷೇತ್ರದಲ್ಲಿ ನಿರ್ವಹಿಸಿ ಸಂತುಷ್ಟರಾದ ತಂದೆಯವರು "ಸಾಕು! ನನಗೆ ತೃಪ್ತಿಯಾಯಿತು. ಇನ್ನು ಕಣ್ಣಿನ ಚಿಕಿತ್ಸೆ ಅಗತ್ಯವಿಲ್ಲ'' ಎಂದರು. ಅಲ್ಲಿಂದಲೇ ವಾಪಸು ಹೊರಟೆವು.

---

* ವೆಲ್ಲೂರಿನಲ್ಲಿ ವಾಸವಿದ್ದಾಗ ಗಣಪತಿಶಾಸ್ತ್ರಿಗಳಿಂದ ಅನೇಕ ಶಿಷ್ಯರು ಮಂತ್ರ ದೀಕ್ಷೆ ಪಡೆದರು. ಅವರಲ್ಲಿ ಮೊಟ್ಟಮೊದಲು ಹೆಸರಿಸಬೇಕಾದವರು ಸುಬ್ರಹ್ಮಣ್ಯ ಶಾಸ್ತ್ರಿಗಳು (ಅಪ್ಪು). ನಂತರ 'ಏಕಾಮ್ರ' ಎಂದು ಕರೆಯಲ್ಪಡುತ್ತಿದ್ದ ಎ. ಆರ್. ದೊರೆಸ್ವಾಮಿ ಅಯ್ಯರ್, ಸಿ.ವಿ.ಸುಬ್ರಹ್ಮಣ್ಯ ಅಯ್ಯರ್, ಎ.ಆರ್.ಪೊನ್ನುಸ್ವಾಮಿ ಅಯ್ಯರ್ ಇವರುಗಳಲ್ಲದೆ ಇನ್ನೂ ಹಲವರು ಆಚಾರ್ಯ ಗಣಪತಿ ಶಾಸ್ತ್ರಿಗಳನ್ನು ದೈವ ಸಮಾನರೆಂದು ಭಾವಿಸಿ ಅವರ ಪರಿಚರ್ಯೆ ನಡೆಸಿದರು. ಅನಂತರ ಬಂದ ಶಿಷ್ಯರುಗಳ ಪೈಕೀ ಈಗಾಗಲೇ ಕೀರ್ತಿಶೇಷರಾಗಿರುವ ಪಿ. ಟಿ. ಶಂಕರಶಾಸ್ತ್ರಿ, ಸುಂದರೇಶ ಅಯ್ಯರ್ ಇವರ ಹೆಸರು ಉಲ್ಲೇಖನೀಯ. ಎಲ್ಲ ಶಿಷ್ಯರೂ ಶಾಸ್ತ್ರಿ ಗಳನ್ನು "ನಾಯನಾ'' ಎಂದೇ ಕರೆಯುತ್ತಿದ್ದರು. ಈಗಲೂ ಆ ಹೆಸರು ರೂಢಿಯ ಲ್ಲಿದೆ. ತೆಲುಗಿನಲ್ಲಿ "ನಾಯನಾ'' ಎಂಬುದು ಪಿತೃವಾತ್ಸಲ್ಯ ಸೂಚಿಸುತ್ತದೆ.

ಮನೆಯಲ್ಲಿ ಮಗ ಮಹಾದೇವನಿಗೆ ಸಿಡುಬು ಬೇನೆ ತಗುಲಿ ತುಂಬಾ ಬಾಧೆ ಪಡುತ್ತಿದ್ದ. ನಾನು ರೋಗಗಳ ಅಧಿದೇವತೆಯಾದ ಶೀತಳಾ ದೇವಿಯನ್ನು ಹನ್ನೆರಡು ಪದ್ಯಗಳ ಮೂಲಕ ಸ್ತುತಿಸಿದೆ. ಆ ಸ್ತೋತ್ರದ ಪ್ರಭಾವದಿಂದ ರೋಗ ಬಾಧೆ ಬಾಲಕನನ್ನು ಬಿಟ್ಟು ಹೋಯಿತು. ಆ ದ್ವಾದಶ ಶ್ಲೋಕ ಈಗ ಲಭ್ಯವಿಲ್ಲ.

ಕಾಲಕಳೆಯುತ್ತಿದ್ದಂತೆ ನಾನು ತಪಸ್ಸಿನಿಂದ ದೂರ ಸರಿಯುತ್ತಿರುವುದನ್ನು ಎಣಿಸಿ ಮನಸ್ಸು ತುಂಬಾ ಬೇಸರಕ್ಕೆ ಒಳಗಾಯಿತು. ಅದೇ ವರ್ಷ (ಪ್ಲವಂಗ ಸಂವತ್ಸರ) ನನ್ನ ಹುಟ್ಟು ಹಬ್ಬದ ಮರುದಿನವೇ ಹಟಾತ್ತನೆ ನನ್ನ ಅಧ್ಯಾಪಕ ವೃತ್ತಿಗೆ ರಾಜೀನಾಮೆ ಸಲ್ಲಿಸಿ ನನ್ನ ಶಿಷ್ಯವರ್ಗಕ್ಕೂ-ಪತ್ನಿಗೂ ತಿಳಿಸಿ ಅಲ್ಲಿಂದ ಹೊರಟು ಅರುಣಾಚಲಕ್ಕೆ ಬಂದೆ. (3-11-1907)

ನನ್ನ ಬಳಿ ಹಿಂದೆ ಪ್ರ್ಯಾಸಂಗ ಮಾಡಿದ ವಾಸುದೇವ ಅರುಣಾಚಲದಲ್ಲಿಯೇ ಇದ್ದ. ತಪಸ್ಸಿಗೆ ತಕ್ಕ ಸ್ಥಳವನ್ನು ಕುರಿತು ಆತನನ್ನು ವಿಚಾರಿಸಿದೆ. ''ಮರಕತ ಶ್ಯಾಮಾ ಮಂದಿರ'' ಯೋಗ್ಯ ಸ್ಥಳವೆಂದು ಸಲಹೆ ನೀಡಿದ ವಾಸುದೇವ ನನ್ನನ್ನು ಅಲ್ಲಿಗೆ ಕರೆದು ಕೊಂಡು ಹೋದ. ಆ ದೇಗುಲವನ್ನು ಸೇರಿದ ನಾನು ಮೊದಲ ರಾತ್ರಿಯಲ್ಲಿಯೇ ಕೆಟ್ಟ ಅನುಭವಕ್ಕೆ ಒಳಗಾಗ ಬೇಕಾಯಿತು. ನಿರಾಹಾರದಿಂದ ಇದ್ದು ತಪಸ್ಸು ಆಚರಿಸಲೇ ? ಅಥವಾ ಧ್ಯಾನಮಗ್ನನಾಗಿ ಗುರಿಸಾಧಿಸಲೇ? ಎಂಬ ಯೋಚನೆಯಲ್ಲಿ ಮಲಗಿದ್ದ ನನಗೆ ಒಂದು ರೀತಿ ಜಾಗರೂಕತೆಯ ಜೊತೆಗೇ ನಿದ್ದೆಯ ಮಂಪರೂ ಆವರಿಸಿಕೊಂಡಿತ್ತು. ಆ ಸ್ಥಿತಿಯಲ್ಲಿ ಭಯಂಕರ ಸ್ವಪ್ನವೊಂದರ ಅನುಭವ ನನಗಾಯಿತು.

ಅವಾರೀನ್ಮಾಂ ಘೋರಂ ಘಣ ಘಣರಣತ್ತಾಂಡವಭರಂ
ವಿತಾನಂ ಭೂತಾನಾಂ ಕ್ಷಿತಿಭುವನಕಂಪಂ ದಧದಿವ ।
ವಿನಿದ್ರಾವಸ್ಥಾಯಾ ಅಪಿ ಬಹುತರಾಂ ಸತ್ಯಮಿವ ತತ್
ಸಮದ್ರಾಕ್ಷಂ ಜಾಗ್ರನ್ಮತಿರಮುಮನಿಷ್ಟಂ ವಿಸದೃಶಂ ॥

ಭೂಮಿಯೇ ಅದರುವಂತೆ ಕರ್ಕಶ ಘಣ ಘಣ ಶಬ್ದದೊಡನೆ ತಾಂಡವ ನರ್ತನ ಮಾಡುತ್ತಿದ್ದ ಭೂತಗಳ ಭಯಂಕರ ವ್ಯಾಪಾರವನ್ನು ನಿದ್ರಾವಸ್ಥೆಯಲ್ಲಿಯೂ ಜಾಗ್ರತನಾಗಿದ್ದ ನಾನು ನಿಜವಾಗಿಯೂ ಕಣ್ಣುಗಳಿಂದ ನೋಡಿ ಕಿವಿಗಳಿಂದ ಕೇಳಿ ಅನುಭವಿಸಿದೆ. ಕೂಡಲೇ ಎದ್ದು ಕುಳಿತು ದೇವಿಯನ್ನು ಸ್ತೋತ್ರ ಮಾಡಿದೆ:—

ಉಕ್ಷರಾಜ ವಾಹನಸ್ಯ ಜೀವಿತಾದ್ಧರೀಯಸೀ
ಪಕ್ಷಿರಾಜವಾಹನಾದಿವರ್ಣ್ಯಮಾನವೈಭವಾ।
ಕೇಕಿಲೋಕಚಕ್ರವರ್ತಿವಾಹನೇನ ಪುತ್ರಿಣೀ
ವಾರಣಾರಿ ಸಾರ್ವಭೌಮವಾಹನಾ ಗತಿರ್ಮಮ ॥

ನಂದಿವಾಹನನಾದ ಪರಶಿವನ ಪ್ರಾಣವಲ್ಲಭೆ ನೀನು: ಗರುಡ ವಾಹನ ವಿಷ್ಣುವೇ ಮೊದಲಾದವರಿಂದ ಸ್ತುತಿಸಲ್ಪಡುವ ವೈಭವ ನಿನ್ನದು: ನವಿಲುಗಳ ಗುಂಪಿಗೆ ಒಡೆಯನಾದ ಶ್ರೇಷ್ಠ ನವಿಲನ್ನುವಾಹನವಾಗಿ ಉಳ್ಳ ಕುಮಾರಸ್ವಾಮಿಯನ್ನೇ ಮಗನಾಗಿ ಹೊಂದಿದ್ದೀಯೆ; ಆನೆಗಳ ಪ್ರಬಲ ಶತ್ರು ಸಿಂಹರಾಜನನ್ನೇ ಆರೋಹಿಸಿರುವ ನೀನೇ ನನಗೆ ದಿಕ್ಕು

ಬೆಳಗಾಗುತ್ತಲೇ ಭೂತ ಚೇಷ್ಟಿತವಾದ ಈ ಜಾಗ ತಪಸ್ಸಿಗೆ ತಕ್ಕುದಲ್ಲವೆಂದು ನಿರ್ಧರಿಸಿ ಅಲ್ಲಿಂದ ಹೊರಟೆ. ನನ್ನ ಶಿಷ್ಯ ವಾಸುದೇವನಿಗೆ ತಿಳಿಸಿ ''ನಿರರುತಿಲಿಂಗ'' ವಿರುವ ಪ್ರದೇಶಕ್ಕೆ ಹೋದೆ.

ದಿನವೂ ಹಾಲನ್ನು ಮಾತ್ರ ಆಹಾರವಾಗಿ ಸೇವಿಸುತ್ತ ತಪಸ್ಸು ನಡೆಸಿದೆ. ಪಾಠಶಾಲೆಯ ವಿದ್ಯಾರ್ಥಿಗಳಲ್ಲಿ ಒಬ್ಬ ಪ್ರತಿದಿನವೂ ನನಗೆ ಹಾಲು ತಂದು ಕೊಟ್ಟು ಗಿರೀಂದ್ರನಿಗೆ ನಮಸ್ಕಾರ ಸಲ್ಲಿಸಿ ಪಾಠಶಾಲೆಗೆ ಹೋಗುತ್ತಿದ್ದ.

ಶಿವಾನುಗ್ರಹ ಲಾಭಕ್ಕೆ ಅನುಸರಿಸಬೇಕಾದ ರೀತಿಯನ್ನು ಅರಿಯುವ ಸಲುವಾಗಿ ಪರಬ್ರಹ್ಮನನ್ನು ಹೃದಯದಲ್ಲಿ ಧ್ಯಾನ ಮಾಡುತ್ತ ಮುಹೂರ್ತಕಾಲ ಮೌನವಾಗಿ ಇರುತ್ತಿದ್ದೆ. ನಂತರ ಜಪ, ಪಂಚಾಕ್ಷರೀ ಮಂತ್ರದ ಕೋಟಿ ಜಪದಿಂದ ಜಪಕಾಂಡ ಮುಗಿಯಿತು. ಇದರಿಂದ ತೃಪ್ತಿಯಾಗದೆ ಧ್ಯಾನವನ್ನು ಪ್ರಾರಂಭಿಸಿದೆ. ಈ ಸಂದರ್ಭದಲ್ಲಿಯೇ ಅರುಣಾಚಲದಲ್ಲಿ ಕೃತ್ತಿಕೋತ್ಸವ ಪ್ರಾರಂಭವಾಯಿತು.

7ನೆಯ ದಿನ ಬ್ರಹ್ಮೋತ್ಸವ. 'ಅಂದು ರಾತ್ರಿ ನನ್ನ ಸ್ವಪ್ನದಲ್ಲಿ ಅರುಣಾಚಲೇಶ್ವರನ ಅರ್ಚಕ ರಾಮಲಿಂಗಶಿವಾಚಾರ್ಯರು ಕಾಣಿಸಿಕೊಂಡು ಹೇಳಿದರು:- ''ಪರಮೇಶ್ವರನು ರಥಾರೂಢನಾಗಿದ್ದಾನೆ. (ದೇವರ ಮೂರ್ತಿಯನ್ನು ಅಲಂಕೃತವಾದ ದೊಡ್ಡರಥದಲ್ಲಿ ಕುಳ್ಳಿರಿಸಿ ರಥವನ್ನು ಎಳೆದುಕೊಂಡು ಹೋಗುವ ಉತ್ಸವ) ಆದರೆ ರಥವು ಮುಂದಕ್ಕೆ ಚಲಿಸುತ್ತಿಲ್ಲ. ನೀವು ಅಲ್ಲಿಗೆ ಬಂದರೆ ರಥ ಚಲಿಸಬಹುದು.''

ಕೂಡಲೇ ಎಚ್ಚರಗೊಂಡ ನನಗೆ ಈ ವಿಷಯ ನಿಜವಿರಬೇಕು ಅನ್ನಿಸಿತು. ಬೆಟ್ಟವಿಳಿದು ಊರಿನ ಒಳಗೆ ನೋಡುತ್ತಾ ಹೋದೆ. ಅನ್ನಸತ್ರ-ಶಾಸ್ತ್ರಪಾಠಶಾಲೆಗಳ ನಡುವೆ ರಥ ನಿಂತುಹೋಗಿರುವುದು ಕಾಣಿಸಿತು. ಉತ್ಸವಕ್ಕೆ ಸೇರಿದ್ದ ಭಕ್ತಸಂದಣಿ ಎಷ್ಟು ಪ್ರಯತ್ನಿಸಿದರೂ ರಥವನ್ನು ಮುಂದಕ್ಕೆ ಎಳೆಯಲು ಸಾಧ್ಯವಾಗದೇ ಅಲ್ಲಿಯೇ ಬಿಟ್ಟುಹೋಗಿದ್ದರು. ಆ ಅಪರ ರಾತ್ರಿಯ ವೇಳೆಯಲ್ಲಿ ಕಾವಲಿನ ಆಳುಗಳು ಹೊರತು ಬೇರೆ ಯಾರೂ ಅಲ್ಲಿ ಇರಲಿಲ್ಲ. ದೇವರಿಗೆ ನಮಸ್ಕಾರ ಸಲ್ಲಿಸಿ 'ಪ್ರಭು! ತುಂಬಾ ಬಳಲಿಕೆಯಿಂದ ಮನಸ್ಸು ವ್ಯಾಕುಲಗೊಂಡಿದೆ. ವಿಶ್ರಾಂತಿ ಪಡೆದು ಬೆಳಕುಹರಿದ ಮೇಲೆ ಮತ್ತೆ ಬರುತ್ತೇನೆ' ಎಂದು ಭಗವಂತನಲ್ಲಿ ನಿವೇದಿಸಿಕೊಂಡೆ.

ಪ್ರಾತಃಕಾಲ ಪುನಃ ನಾನು ಆ ಸ್ಥಳಕ್ಕೆ ಹೋದಾಗ ಭಕ್ತಸಮೂಹ ರಥವನ್ನು ಮುಂದಕ್ಕೆ ಎಳೆಯಲು ಶ್ರಮಿಸುತ್ತಿದ್ದರು. ದೇವರಿಗೆ ವಂದನೆ ಸಲ್ಲಿಸಿ "ಭಗವನ್! ಪುನಃ ಬಂದಿದ್ದೇನೆ. ನಿನ್ನ ಪಾದಗಳಿಗೆ ಮಣಿದಿದ್ದೇನೆ. ನಿನ್ನ ರಥ ಮುಂದೆ ಸಾಗಲಿ!" ಎಂದು ಬೇಡಿಕೊಂಡೆ. ರಥ ಮುಂದಕ್ಕೆ ಹೊರಟಿತು. ರಥವನ್ನೆಳೆಯುತ್ತಿದ್ದ ಭಕ್ತವೃಂದದ ಮುಗಿಲು ಮುಟ್ಟುವ ಜಯಘೋಷದೊಡನೆ ಉತ್ಸವ ಮುಂದುವರಿದು ರಥವು ತನ್ನ ನೆಲೆಯನ್ನು ಮುಟ್ಟಿತು.

ದೈವೀಶಕ್ತಿಯಲ್ಲಿ ನನಗೆ ಇದ್ದ ಶ್ರದ್ಧಾಪೂರ್ಣಭಕ್ತಿ ಮತ್ತಷ್ಟು ಬಲಗೊಂಡಿತು. ಅದ್ಭುತಗಳನ್ನು ಕಂಡಾಗ ಮನುಷ್ಯನ ಭಕ್ತಿಭಾವ ದೃಢವಾಗುತ್ತದೆ.

ಪ್ರಕರಣ–13

ಮಹರ್ಷಿಗಳ ಅನುಗ್ರಹ-ಉಮಾಸಹಸ್ರ

ಅನುದ್ಧತಾಕಾರತಯಾ ವಿವಿಕ್ತಾಂ ತನ್ವಂತಮಂತಃಕರಣಸ್ಯ ವೃತ್ತಿಂ।
ಮಾಧುರ್ಯವಿಸ್ರಂಭವಿಶೇಷಭಾಜಾ ಕೃತೋಪಸಂಭಾಷಮಿವೇಕ್ಷಿತೇನ॥

____ ।
____________________ ಸುಖೋಪವಿಷ್ಟಂ ಮುನಿಮಾಬಭಾಷೆ॥

ಭಾರವಿಃ-

ಈತನ ಚಿತ್ತಶುದ್ಧಿ ಎಂತಹದೆಂಬುದನ್ನು ಈತನ ಸೌಮ್ಯವಾದ ಹೊರಸ್ವರೂಪವೇ ವ್ಯಕ್ತಪಡಿಸುತ್ತಿದೆ. ಈತನು ಮಾಧುರ್ಯ ಹೊರಸೂಸುವ

ವಿಶಿಷ್ಟ ಕಣ್ಣಿನ ನೋಟದಿಂದಲೇ ಸಂಭಾಷಣೆ ನಡೆಸುವಂತೆ ಭಾಸವಾಗುತ್ತದೆ.

-- ಸ್ವಸ್ಥವಾಗಿ ಕುಳಿತಿರುವ ಮುನಿಯೊಡನೆ ಮಾತನಾಡಲು ತೊಡಗಿದನು.

ಉತ್ಸವದ ಸ್ಥಳದಿಂದ ಹೊರಟ ನಾನು ನನ್ನ ತಪಸ್ಸಿನ ಸ್ಥಳವಾಗಿದ್ದ ನಿರರುತಿ ಲಿಂಗ ದೇಗುಲಕ್ಕೆ ಹೋಗಲಿಲ್ಲ. ನನ್ನ ವಿಶ್ವಾಸಿಗಳಲ್ಲೊಬ್ಬರಾದ ವಿಶ್ವನಾಥ ಅಯ್ಯರ್‌ರವರ ಮನೆಗೆ ಹೋದೆ. ದೇಹದ ಆಲಸ್ಯವನ್ನು ಕಳೆಯಲು ಒಂದಿಷ್ಟು ವಿಶ್ರಾಂತಿ ಅಗತ್ಯವಾಗಿತ್ತು. ನಿತ್ಯದ ಆಹಾರ ಸೇವನೆಯ ನಂತರ ಸುಮ್ಮನೆ ಕುಳಿತು ತಪಸ್ಸಿನ ಗುರಿ ಸಾಧನೆಯ ಬಗೆಗೆ ಚಿಂತಿಸತೊಡಗಿದಾಗ ನನ್ನ ಮನಸ್ಸು ಸ್ವಲ್ಪ ಸಂಶಯಕ್ಕೆ ಒಳಗಾಯಿತು. ಬಾಲ್ಯದಿಂದ ಆರಂಭಿಸಿ ಇದುವರೆಗೆ ಪಂಚಾಕ್ಷರೀ ಮಂತ್ರವನ್ನು ಕೋಟಿ ಸಂಖ್ಯೆಯಲ್ಲಿ ಜಪಿಸಿದ್ದೇನೆ. ಶ್ರೀವಿದ್ಯಾ ಮೊದಲಾದ ಮಂತ್ರಗಳ ಪುರಶ್ಚರಣೆಯೂ ಆಯಿತು. ಒಪ್ಪೊತ್ತು ಊಟ-ಫಲಾಹಾರ-ಉಪವಾಸ ಮುಂತಾದ ಕಷ್ಟದಾಯಕ ವ್ರತ-ನಿಯಮಗಳಲ್ಲಿದ್ದುಕೊಂಡು ಭಗವಂತನ ಉಪಾಸನೆ ನಡೆಸಿದೆ. ಇಷ್ಟೆಲ್ಲಾ ಆದರೂ ದೇವರು ನನ್ನ ವಿಷಯದಲ್ಲಿ ಪ್ರಸನ್ನನಾಗಿಲ್ಲ. ಶಾಸ್ತ್ರದ ನಿರ್ದೇಶಗಳಂತೂ ಸುಳ್ಳಾಗಿರಲು ಸಾಧ್ಯವಿಲ್ಲ. ಹಾಗಿದ್ದರೆ, ನನ್ನ ಸಾಧನೆಯ ವಿಧಾನದಲ್ಲಿಯೇ ಏನೋ ನ್ಯೂನತೆ ಇರಬೇಕು. ವಿದ್ಯೆಯಲ್ಲಿ ಅಸಾಧಾರಣ ಪ್ರಾವೀಣ್ಯತೆ ಪಡೆದು ವೇದ-ಆಗಮ-ಶಾಸ್ತ್ರಗಳ ತತ್ವ ವಿಚಾರಗಳನ್ನು ಚೆನ್ನಾಗಿ ತಿಳಿದಿರುವ ನನಗೆ-ಅಥವಾ-ನನ್ನಂತಹವರಿಗೆ ಈ ತಪಸ್ಸಿನ ಮರ್ಮ ಇಷ್ಟೊಂದು ದೂರವಿದೆ ಎಂದಾದರೆ ಇನ್ನು ಯಾವ ರೀತಿಯಿಂದ ತಾನೇ ಆ ಮರ್ಮವನ್ನು ಭೇದಿಸಲು ಸಾಧ್ಯವಾದೀತು ?

> ಅಥವಾ ವಿದಿತಂ ತು ನೈವ ಸತ್ಯಂ ಮಮ ಶಾಸ್ತ್ರಾರ್ಥವಿದೋಽಪಿ ತದ್ರಹಸ್ಯಂ।
> ಇತಿ ಚಿಂತಯತೋ ಮಮಾಂತರಂಗಂ ನಿಭೃತಂ ಕಾಽಪಿ ಸಮುಜ್ಜ್ವಲಾಽ
> ವಿಶದ್ಧೀಃ ॥

ಅಥವಾ ಶಾಸ್ತ್ರಾರ್ಥಗಳನ್ನು ಬಲ್ಲ ನಾನು ತಪಸ್ಸಿನ ರಹಸ್ಯದ ಬಗ್ಗೆ ಇಟ್ಟುಕೊಂಡಿರುವ ತಿಳಿವಳಿಕೆಯೇ ತಪ್ಪಾಗಿದೆಯೆ ? ಹೀಗೆ ನನ್ನ ಅಂತರಂಗದಲ್ಲಿ ವಿಚಾರ ಮಂಥನ ನಡೆಯುತ್ತಿದ್ದಂತೆಯೇ ಮನಸ್ಸಿನ ಆಳದಲ್ಲಿ ಅಡಗಿದ್ದ ಭಾವನೆಯೊಂದು ಹಠಾತ್ತನೆ ಮೇಲಕ್ಕೆಬಂದು ಪ್ರಕಾಶಗೊಂಡಿತು.

"ಈ-ಬೆಟ್ಟದಲ್ಲಿ ಬ್ರಾಹ್ಮಣ ಸ್ವಾಮಿ ಎಂಬೊಬ್ಬರು ವಾಸವಿದ್ದಾರೆ. ಬಹುಕಾಲದಿಂದಲೂ ಮೌನವ್ರತಧರಿಸಿ ತಪಸ್ಸು ನಡೆಸುತ್ತಿದ್ದಾರೆ. ಸರಿ ! ಈಗಲೇ

ಹೋಗಿ ಅವರನ್ನು ಸಂದರ್ಶಿಸಿ ಕೃತಾರ್ಥನಾಗಬೇಕು" ಈ ಯೋಚನೆ ಹೊಳೆದ ಕ್ಷಣದಲ್ಲಿಯೇ ಅಲ್ಲಿಂದ ಹೊರಟು ಬೆಟ್ಟದ ಕಡೆಗೆ ನಡೆದೆ. ಅವತ್ತು ಸೋಮವಾರ. ಕಾರ್ತಿಕ ಶುಕ್ಲ ಚತುರ್ದಶೀ. ನಾನು ಬೆಟ್ಟಹತ್ತಿ ಸ್ವಾಮಿಗಳ ಗುಹೆಯನ್ನು ತಲುಪಿದಾಗ ಅಪರಾಹ್ಣ 2 ಗಂಟೆಯ ಸಮಯ. ಗುಹೆಯ ಹೊರಗಡೆಯೇ ಕುಳಿತಿದ್ದ ಸ್ವಾಮಿಗಳನ್ನು ಕಂಡೆ.

ರಥೋತ್ಸವದ ಜಾತ್ರೆಯ ಸಂಭ್ರಮದ ದಿನಗಳು ಅವು. ಎಲ್ಲೆಲ್ಲಿಯೂ ಜನ ಜಂಗುಳಿ. ಹಾಗೆ ಸ್ವಾಮಿಗಳ ವಸತಿಯಲ್ಲಿಯೂ ಸಂದರ್ಶಕರು-ಭಕ್ತರು ತುಂಬಿಕೊಂಡಿರಬೇಕಾಗಿತ್ತು. ಆದರೆ ಅಂದು ಅಲ್ಲಿ ಜನರೇ ಇಲ್ಲದೆ ಸ್ವಾಮಿಗಳೊಬ್ಬರೇ ಇದ್ದುದು ಕಂಡಾಗ ನಿಜಕ್ಕೂ ಆಶ್ಚರ್ಯವೆನಿಸಿತು. ನನಗೆ ದೈವಾನುಕೂಲವೂ ಉಂಟು ಎಂಬುದರ ಲಕ್ಷಣ ಇದು ಎಂದು ಕೊಂಡು ಧೈರ್ಯತಾಳಿದೆ. ಉತ್ಸಾಹ ಸಂಭ್ರಮಗಳಿಂದ ಸ್ವಾಮಿಗಳ ಬಳಿ ಸಾರಿದೆ. ಹತ್ತಿರ ಹೋಗಿ ಅವರನ್ನು ನೋಡುತ್ತಿದ್ದಂತೆಯೇ ಅವರ ಬಲ ಪಾದವನ್ನು ನನ್ನ ಬಲಹಸ್ತದಿಂದಲೂ ಎಡಪಾದವನ್ನು ಎಡಹಸ್ತದಿಂದಲೂ ಹಿಡಿದುಕೊಂಡು ಸಾಷ್ಟಾಂಗ ಪ್ರಣಾಮ ಸಲ್ಲಿಸಿ ಎದ್ದುನಿಂತು ವಿಜ್ಞಾಪಿಸಿ ಕೊಂಡೆ :-

ಶಾಸ್ತ್ರೈರಧೀತೈರನಪೋಹ್ಯಸಾರೈರಥಪ್ರಜಪ್ತೈರ್ಮನುಭಿರ್ಮಹದ್ಭಿಃ ।
ಶತೈರ್ವ್ರತಾನಾಂ ಸಮನುಷ್ಠಿತೈರ್ವಾ ನಾದ್ಯಾಪಿ ಭರ್ಗೋ ಭಗವಾನ್ ಪ್ರಸನ್ನಃ॥

ಶಾಸ್ತ್ರಗಳನ್ನೆಲ್ಲ ಓದಿ ಅವುಗಳ ಸಾರವನ್ನು ತಿಳಿದಿದ್ದಾಯಿತು. ಮಹಾಮಂತ್ರಗಳ ಜಪ-ಪುರಶ್ಚರಣೆಗಳೂ ಆದವು. ಹಲವು ವ್ರತ-ನಿಯಮಗಳಿಂದ ಅನುಷ್ಠಾನವನ್ನೂ ಮಾಡಿದ್ದಾಗಿದೆ. ಇಷ್ಟೆಲ್ಲಾ ಆದರೂ ಭಗವಾನ್ ಪರಶಿವನು ಪ್ರಸನ್ನನಾಗಲೇ ಇಲ್ಲ.

ಲುಪ್ತಂ ತಪಃ ಕಿಂನು ವಿದೂಷಿತಂನು ತಸ್ಯಸ್ವರೂಪಂ ವಿದಿತಂ ನ ವಾ ನು।
ತಸ್ಮಾತ್ಪ್ರಪನ್ನೋಽಸ್ಮಿ ಬುಧೋಽಪ್ಯಜಾನನ್ ವಿಜ್ಞೇಂದ್ರ ಜಾನಂತಮಹಂ ಭವಂತಂ।

ತಪಸ್ಸಿನಲ್ಲಿ ಲೋಪ-ದೋಷಗಳಿದ್ದವೆ ? ಅಥವಾ ತಪಸ್ಸಿನ ಸ್ವರೂಪವೇನೆಂಬುದನ್ನೇ ನಾನು ತಿಳಿಯಲಾರದೆ ಹೋದೆನೇ? ವಿದ್ವಾಂಸನಾಗಿಯೂ ಇದನ್ನೆಲ್ಲಾ

ಕಂಡುಕೊಳ್ಳಲಾಗದ ನಾನು ಎಲ್ಲ ಬಲ್ಲವರಾದ ತಮ್ಮ ಬಳಿಗೆ ಬಂದಿದ್ದೇನೆ. ದಯ ಮಾಡಿ ಈ ಶಿಷ್ಯನನ್ನು ಅನುಗ್ರಹಿಸೋಣವಾಗಲಿ.

ಈ ಮುನಿಶ್ರೇಷ್ಠರನ್ನು 2-3 ವರ್ಷಗಳ ಹಿಂದೆ ನಾನು ಅರುಣಾಚಲದಲ್ಲಿದ್ದಾಗ ಎರಡು ಸಲ ಸಂದರ್ಶಿಸಿದ್ದೆ. ಆದ್ದರಿಂದ ಆಂಧ್ರ ಸೀಮೆಯ ವಿದ್ವಾಂಸ ಕಾವ್ಯಕಂಠ ಗಣಪತಿ ಶಾಸ್ತ್ರಿ ನಾನು ಎಂಬುದನ್ನು ಅವರು ಬಲ್ಲರು. "ಶುಕ್ಲಾಂಬರ ಧರಂ" ಶ್ಲೋಕವನ್ನು ವ್ಯಾಖ್ಯಾನ ಮಾಡುತ್ತ ಕೊನೆಯಲ್ಲಿ ಆ ಶ್ಲೋಕದ ಅರ್ಥವನ್ನು ಇವರಿಗೂ ಅನ್ವಯವಾಗುವಂತೆ ವಿವರಿಸಿ ಹೇಳಿದ್ದೆ. ಅದನ್ನೇ ಅವರು ಈ ಕ್ಷಣದಲ್ಲಿ ನೆನಪಿಸಿಕೊಂಡರೆಂಬುದನ್ನು ಮುಂದೊಮ್ಮೆ ಅವರಿಂದಲೇ ನಾನು ತಿಳಿದೆ.

ಈಗ ಹೀಗೆ ಪರಿತಪ್ತನಾಗಿ ಅವರ ಬಳಿಗೆ ಬಂದು ಅವರ ಪಾದಗಳಿಗೆ ಮಣಿದು ಮಾರ್ಗದರ್ಶನಕ್ಕಾಗಿ ವಿಜ್ಞಾಪಿಸಿಕೊಳ್ಳುತ್ತಿರುವ ನನ್ನ ಮೇಲೆ ಅವರ ಕರುಣಾಪೂರ್ಣ ನೋಟ ಹರಿಯಿತು. ಅವರಾದರೋ ಇಂದ್ರಿಯಗಳನ್ನು ನಿಗ್ರಹಿಸಿದವರಲ್ಲಿ ಅಗ್ರಗಣ್ಯರು. ನನ್ನ ಅವಸ್ಥೆಯನ್ನು ಆ ಕ್ಷಣದಲ್ಲಿಯೇ ಅರಿತುಕೊಂಡ ಅವರು ಮುಹೂರ್ತಕಾಲ ಉನ್ಮೀಲಿತ ನೇತ್ರಗಳಿಂದ ತಂಪಾದ- ಪ್ರಸನ್ನತೆಯ ಧಾರೆಯನ್ನೇ ನನ್ನ ಮೇಲೆ ಸುರಿಸಿದರು.

ಆಯುಷೋನೂತನಂ ಕಾಂಡಮಾ ವಯೋಃ ಸಂಪ್ರವರ್ತಯನ್ ।
ಮುನೇರ್ವಾಗಮೃತಸ್ಯಂದೋ ಮಂದಂ ಮಂದಂ ವಿನಿಸೃತಃ ॥

ನಮ್ಮಿಬ್ಬರ ಬದುಕಿನಲ್ಲಿ ಹೊಸ ಅಧ್ಯಾಯವನ್ನು ತೆರೆಯುತ್ತಿರುವಂತೆ ಆ ಮುನಿಶ್ರೇಷ್ಠರ ಮುಖದಿಂದ ಮಾತಿನ ಅಮೃತವಾಹಿನಿ ಮೆಲ್ಲಮೆಲ್ಲನೆ ಹೊರ ಬಂದಿತು.

ಅವರು ಈ ಅನುಗ್ರಹವಚನಗಳನ್ನು ನನಗೆ ನೀಡಿದುದು ತಮಿಳುಭಾಷೆಯಲ್ಲಿ. ಅದರ ಸಂಸ್ಕೃತ ರೂಪ ಹೀಗಿದೆ:-

"ಅಹಮಿತಿ ಕುತ ಆಯಾತೀತಿ ವಿಚಾರಯನ್ ಉದಯಸ್ಥಲೇ ಲೀಯತೇ, ತದೇವ ತಪಃ । ಜಪಮಾನಸ್ಯ ಮಂತ್ರಸ್ಯ ನಾದಃ ಕುತ ಉದೇತೀತಿ ವಿಚಾರಿತೆ, ಉದಯಸ್ಥಾನೆ ಲೀನಂ ಭವೇನ್ಮನಃ । ತದೇವ ತಪಃ ।"

"ನಾನು ಎಂಬುದು ಎಲ್ಲಿಂದ ಬರುತ್ತಿದೆ ಎಂದು ವಿಚಾರ ಮಾಡುತ್ತ ಆ ಶಬ್ದದ ಹುಟ್ಟಿನ ಸ್ಥಳದಲ್ಲಿಯೇ ಮನಸ್ಸು ಲೀನವಾದರೆ ಅದೇ ತಪಸ್ಸು. ಜಪಿಸುತ್ತಿರುವ ಮಂತ್ರದ ನಾದ ಎಲ್ಲಿಂದ ಹುಟ್ಟಿ ಬರುತ್ತಿದೆ ಎಂದು ವಿಚಾರ ಮಾಡುತ್ತ ಹೊರಟರೆ ಆ ಶಬ್ದದ ಹುಟ್ಟಿನ ಮೂಲದಲ್ಲಿಯೇ ಮನಸ್ಸು ಮಗ್ನವಾಗುತ್ತದೆ. ಅದೇ ತಪಸ್ಸು." ಈ ಉಪದೇಶವಾಕ್ಯಗಳನ್ನು ಮುಂದೆ ನಾನು ಈ ರೀತಿ ಸಂಗ್ರಹಿಸಿ ಛಂದೋಬದ್ಧವಾದ ಪದ್ಯವನ್ನು ರಚಿಸಿದೆ:—

ಅಹಮಿತಿ ಸ್ಮೃತಿಃ ಕ್ವನು ವಿಭಾಸತೇ ।
ಇದಮನುಸ್ಮರೇತ್ತತ್ರ ಲೀಯತೇ ॥

ಸಮರ್ಥ ಗುರು ಮುಖದಿಂದ ಅನುಗ್ರಹಿಸಲ್ಪಟ್ಟ ಈ ಉಪದೇಶವನ್ನು ಪಡೆದು ನಾನು ತೃಪ್ತನಾದೆ. ಸ್ವಲ್ಪಕಾಲ ಸಂತೋಷಸಾಗರದಲ್ಲಿ ತೇಲುತ್ತಿದ್ದ ಅನುಭವ ನನ್ನದಾಯಿತು.

ಅಂದು ಸಂಜೆಯವರೆಗೂ ಗುರುಚರಣಾರವಿಂದದ ಬಳಿಯೇ ಕುಳಿತು ಧ್ಯಾನಸ್ಥನಾಗಿದ್ದೆ. ಅವರ ಪರಿಚರನೊಬ್ಬನನ್ನು ಬ್ರಾಹ್ಮಣಸ್ವಾಮಿಗಳ ಪೂರ್ವಾಶ್ರಮದ ಹೆಸರು ಏನೆಂದು ವಿಚಾರಿಸಿದೆ. "ವೆಂಕಟರಮಣ" ಎಂದಿದ್ದುದಾಗಿ ತಿಳಿಯಿತು. ಅದರ ಮೇಲೆ ಈ ಸ್ವಾಮಿಗಳ ಹೆಸರನ್ನು "ರಮಣ" ಎಂದು ಸಂಕ್ಷಿಪ್ತ ಸುಂದರ ರೂಪದಲ್ಲಿ ನಿರ್ಧರಿಸಿದೆ. ಮರುದಿನವೇ ನನ್ನ ಅಂತರಂಗ ಶಿಷ್ಯರುಗಳಿಗೆ ಪತ್ರದ ಮೂಲಕ ಹೀಗೆ ತಿಳಿಸಿದೆ:—

ವಿಶ್ರುತೋ ಬ್ರಾಹ್ಮಣಸ್ವಾಮಿತ್ಯರುಣಾದ್ರಿಗುಹಾಲಯಃ ।
ಮಮಾಸೌ ಗುರುರಾಡ್ಜಾತಃ ತಸ್ಯ ನಾಮತ್ವಿತಃ ಪರಂ ॥
ದೃಷ್ಟ್ವಾ ಮಹಾನ್ ಗುಣೇಚೇತಿ ಮಹರ್ಷಿರ್ಭಗವಾನಿತಿ ।
ಸಂಕ್ಷೇಪರಮಣೀಯೇನ ನಾಮ್ನಾ ರಮಣ ಇತ್ಯಪಿ ॥
ಆಹೂಯಾತಾಮಸ್ಮದೀಯೈರ್ಯಥಾಹಮಭಣಂ ಗುರುಂ।
ಏವಮಾದಿಷ್ಟವಾನಸ್ಮಿ ಪತ್ರಲೇಖೇನ ಮತ್ಪ್ರಿಯಾನ್ ॥

ಅರುಣಾಚಲದ ಗುಹೆಯಲ್ಲಿದ್ದುಕೊಂಡು ಬ್ರಾಹ್ಮಣಸ್ವಾಮಿಗಳೆಂದು ಕರೆಯಲ್ಪಡುತ್ತಿರುವ ತಪಸ್ವಿಗಳೊಬ್ಬರು ನನಗೆ ಗುರುವಾಗಿ ದೊರೆತಿದ್ದಾರೆ. ಇವರು ದೊಡ್ಡ ದಾರ್ಶನಿಕರು; ಸದ್ಗುಣಿಗಳು; ಮಹರ್ಷಿಗಳಾಗಿ ಭಗವಾನ್ ಎನಿಸಿಕೊಳ್ಳತಕ್ಕ

ವರು. ಚಿಕ್ಕದಾಗಿ-ಚೊಕ್ಕವಾಗಿ "ರಮಣ"ರೆಂದು ನಾನು ಈ ನನ್ನ ಗುರುವನ್ನು ಹೆಸರಿಸಿದ್ದು ಅದರಂತೆಯೇ ನನ್ನವರೂ ಕೂಡ ಕರೆಯಬೇಕೆಂದು ಪತ್ರದ ಮೂಲಕ ನನ್ನ ಶಿಷ್ಯ-ಅಭಿಮಾನಿವರ್ಗಕ್ಕೆ ತಿಳಿಸಿದ್ದೇನೆ.

ಈ ರೀತಿ "ಭಗವಾನ್ ರಮಣ ಮಹರ್ಷಿ" ಎಂದು ನಿರ್ದೇಶಿತವಾದ ಹೆಸರು ಲೋಕ ವಿಖ್ಯಾತಿಯನ್ನು (ಆಗ ಮತ್ತೆ ಈಗಲೂ ಸಹ) ಪಡೆದಿದೆ. ಅದೇ ದಿನವೇ ಮಹರ್ಷಿಗಳನ್ನು ಸ್ತುತಿಸುವ ಐದು ಶ್ಲೋಕಗಳನ್ನು (ಪಂಚಕ) ರಚಿಸಿ ಅವರ ಅನುಚರ ಪಳನಿ ಸ್ವಾಮಿಗಳ ಕೈಗೆ ಕೊಟ್ಟೆ. ಆದರೆ ಅವರ ಅಜಾಗರೂಕತೆಯಿಂದ ಅದು ಕಳೆದೇ ಹೋಯಿತು.

ಅಂದು ಸಂಜೆ ಪಳನಿಸ್ವಾಮಿಯೊಡನೆ "ತಪಸ್ಸಿಗೆ ಸರಿಯಾದ ಸ್ಥಳ ಯಾವುದೆಂದು" ವಿಚಾರಿಸಿದೆ. ಇದನ್ನು ಕೇಳಿಸಿಕೊಂಡ ಮಹರ್ಷಿಗಳು "ಇಲ್ಲಿಗೆ ಸಮೀಪದ ಆಮ್ರಗುಹೆ ತಪಸ್ಸಿಗೆ ಯೋಗ್ಯವಾದ ಸ್ಥಳ" ಎಂದು ತಾವೇ ಉತ್ತರ ದಯಪಾಲಿಸಿದರು. ಮಹರ್ಷಿಗಳ ಪರಿಜನರೊಬ್ಬರು ಆ ಗುಹೆಯ 'ಕೀಲಿ ಕೈ" ನನಗೆ ಕೊಟ್ಟರು. ಆಮ್ರ ಗುಹೆಯನ್ನು ನನ್ನ ವಾಸಸ್ಥಳವಾಗಿ ಮಾಡಿಕೊಂಡೆ.

ಜಗನ್ಮಾತೆಯ ಕೃಪೆಯಿಂದ ಸದ್ಗುರುಗಳೊಬ್ಬರು ದೊರೆತು ಕೃತಕೃತ್ಯನಾದೆ. ಉಮಾದೇವಿಯನ್ನು ಸಾವಿರ ಪದ್ಯಗಳಿಂದ ಸ್ತುತಿಸುವಂತೆ ನನ್ನ ಅಂತರ್ವಾಣಿ ನನ್ನನ್ನು ಪ್ರೇರಿಸತೊಡಗಿತು. ಗುರು ರಮಣರಲ್ಲಿ ಈ ವಿಷಯ ನಿವೇದಿಸಿಕೊಂಡಾಗ ಅವರು ಹಾರ್ದಿಕ ಪ್ರೋತ್ಸಾಹ ನೀಡಿದರು.

ಆಮ್ರಗುಹೆಯಲ್ಲಿ "ಉಮಾ ಸಹಸ್ರ"ದ ರಚನೆ ಪ್ರಾರಂಭವಾಯಿತು. ರಚನೆಯನ್ನು ಕೈಗೊಳ್ಳುವ ಮುನ್ನ ನಾನು ವಿಧಿಸಿಕೊಂಡ ನಿಯಮ ಹೀಗಿತ್ತು :-

ಪಯಃ ಪಾನಂ ರಾತ್ರ್ಯಾಮಹನಿ ತು ಮಮಾಽನ್ನಂ ಮಿತಭುಜೋ
ದಿನಾನಾಂ ವಿಂಶತ್ಯಾ ಸ್ತುತಿ ಪರಿಸಮಾಪ್ತಿಂ ವಿದಧತಃ ।
ಮಹರ್ಷಿಶ್ಚಾಸನ್ನೋ ಮುಹುರಪಿ ಗುಹಾಮೇತ್ಯ ಗುರುರಾಟ್
ಮದಂತರ್ಭೂಯಿಷ್ಠಂ ಮುದಭರಮಭಾರಂ ವಿಹಿತವಾನ್ ॥

ಹಗಲು ಮಾತ್ರ ಸ್ವಲ್ಪ ಅನ್ನದ ಊಟ; ರಾತ್ರಿಯಲ್ಲಿ ನೀರೇ ಆಹಾರ; 20ದಿನಗಳಲ್ಲಿ ಉಮಾದೇವಿಯನ್ನು ಸ್ತುತಿಸುವ ಸಾವಿರ ಪದ್ಯಗಳನ್ನು ರಚಿಸಿ ಮುಗಿಸುವುದು.

ಈ ದಿನಗಳಲ್ಲಿ ಮಹರ್ಷಿ ರಮಣರು ಆಗಾಗ್ಯೆ ನಾನಿದ್ದ ಗುಹೆಗೆ ಬಂದು ಕುಳಿತು ಅಂತರಂಗದಲ್ಲಿ ತುಂಬಿಕೊಂಡಿದ್ದ ಪ್ರಬಲ ಆಕಾಂಕ್ಷೆಯ ಭಾರವನ್ನು ಹಗುರಗೊಳಿಸಿದರು.

ಆ ದಿನಗಳಲ್ಲಿ ನನಗೆ ಆಹಾರ ಕಳಿಸಿಕೊಡುತ್ತಿದ್ದವರು "ಪಚ್ಚಮ್ಮಾಂಬಾ" ಎಂಬ ಸಾಧ್ವಿ ಹೆಂಗಸು. * ಒಮ್ಮೆ ಹೊತ್ತಲ್ಲದ ಹೊತ್ತಿನಲ್ಲಿ ನನಗೆ ಬ್ರಹ್ಮಾಂಡ ಹಸಿವೆ ಕಾಣಿಸಿಕೊಂಡಿತು. ಅದೇ ವೇಳೆಯಲ್ಲಿ ಪಚ್ಚಮಾಂಬಾರವರ ಮನೆಗೆ ಬಂದ ಹೆಂಗಸೊಬ್ಬಳು ಅವರೊಡನೆ ಹೇಳಿದಳು:—

ಧ್ಯಾಯತೀವ ಭೋಜನಂ ಸ ಬಾಧಿತೋ ಬುಭುಕ್ಷಯಾ
ಸಂಯತೋಗುಹಾಭುವಿ ಸ್ತವಪ್ರಬಂಧದೀಕ್ಷಯಾ ।
ಭೋಜಯಿತ್ರಿ ! ಭೋಜನಂ ವಿಧಾಯ ತಸ್ಯ ಸತ್ವರಂ
ಪ್ರೇಷ್ಯತಾಂ ಸ ಪೃಚ್ಛ್ಯತಾಂ ಚ ಕೋ ವಿಶೇಷ ಇತ್ಯಪಿ ॥

"ಗುಹೆಯಲ್ಲಿದ್ದುಕೊಂಡು ದೇವೀಸ್ತುತಿಯನ್ನು ರಚಿಸುವುದರಲ್ಲಿ ಮಗ್ನನಾಗಿರುವ ವ್ಯಕ್ತಿ ಇದೀಗ ತಡೆಯಲಾಗದ ಹಸಿವೆಗೆ ಗುರಿಯಾಗಿ ಊಟದ ಬಗ್ಯೆಯೇ ಚಿಂತಿಸುತ್ತಿದ್ದಾನೆ. ಅನ್ನದಾತಳಾಗಿರುವ ನೀನು ಈಗಲೇ ಆತನಿಗೆ ಊಟ ತಯಾರಿಸಿ ಕಳಿಸಿಕೊಡು. ಊಟತೆಗೆದುಕೊಂಡುಹೋದವನು ಆ ವ್ಯಕ್ತಿಯೊಡನೆ "ಏನು ವಿಶೇಷ ?" ಎಂದು ಪ್ರಶ್ನಿಸಲಿ" ಹೀಗೆ ತಿಳಿಸಿದ ಆ ಹೆಂಗಸು ಎತ್ತಲೋ ಹೊರಟು ಹೋದಳು.

ಸಾಧು-ಸಂತರ ಬಗೆಗೆ ಭಕ್ತಿಯುಳ್ಳ ಪಚ್ಚಮ್ಮಾಂಬಾ ಆ ಕೂಡಲೇ ಊಟ ಸಿದ್ಧಪಡಿಸಿ ವಿದ್ಯಾರ್ಥಿಯೊಬ್ಬನ ಕೈಲಿ ನನಗೆ ಕಳಿಸಿದಳು. ಆ ಕ್ಷಣದಲ್ಲಿ ದೊರೆತ

---

* ಈ ಹೆಂಗಸು ಪತಿವಿಯೋಗದ ನಂತರ ವಿರಕ್ತಳಾಗಿ ರಾಜಯೋಗ ಸಾಧನೆಯಲ್ಲಿ ತೊಡಗಿದ್ದವರು. ತ್ವರಿತವಾಗಿ "ಸಮಾಧಿ ಸ್ಥಿತಿಗೆ ಮುಟ್ಟುವ ಲಯಸಮಾಧಿ ಪ್ರಕಾರವನ್ನು ಈ ಮಹಿಳೆ ಸಾಧಿಸಿಕೊಂಡಿದ್ದರು. ನಂತರ ವಾಸಿಷ್ಠಗಣಪತಿ ಮುನಿಗಳ ಮೂಲಕ ಭಗವಾನ್ ರಮಣರ ಅನುಗ್ರಹ ಪಡೆದ ಆ ಸಾಧ್ವಿ ಹೆಂಗಸು "ಲಯ ಸಮಾಧಿಯ" ಮಾರ್ಗವನ್ನು ಬಿಟ್ಟು, ಜ್ಞಾನ ನಿಷ್ಠೆಯನ್ನು ಸಂಪಾದಿಸಿಕೊಂಡು ಈಗಲೂ (ಅಂದರೆ ಈ ಗ್ರಂಥ ಬರೆದ ಕಾಲಕ್ಕೆ) ರಮಣ ಮಹರ್ಷಿಗಳ ಅನುಯಾಯಿಗಳಲ್ಲಿ ಪ್ರಮುಖಳೆನಿಸಿ ಅರುಣಾಚಲ ಕ್ಷೇತ್ರದಲ್ಲಿ ಇದ್ದಾಳೆ.

ಊಟದಿಂದ ನನ್ನ ಹಸಿವೆ ಹಿಂಗಿ ತೃಪ್ತಿಯುಂಟಾಯಿತು. ಊಟ ತಂದ ಹುಡುಗ "ಏನು ವಿಶೇಷ ?" ಎಂದು ನನ್ನನ್ನು ಕೇಳಿದಾಗ "ಹಸಿವೆಯೇ ವಿಶೇಷ" ಎಂದು ಉತ್ತರಿಸಿದೆ.

"ಉಮಾಸಹಸ್ರ"ದ ರಚನೆ ದಿನವೂ ಎಡೆಬಿಡದೆ ನಡೆಯುತ್ತಿತ್ತು. ಆದರೆ ನಡುವೆ ಇದ್ದಕ್ಕಿದ್ದಂತೆ ನನ್ನ ಬಲಗೈ ಹೆಬ್ಬೆರಳಿನಕೊನೆಯಲ್ಲಿ ತೀವ್ರವಾದ ಹುಣ್ಣು ಕಾಣಿಸಿಕೊಂಡಿತು. 20ದಿನಗಳಲ್ಲಿ ಉಮಾ ಸಹಸ್ರ ಮುಗಿಸಿಬಿಡಬೇಕೆಂಬ ನನ್ನ ದೃಢ ಸಂಕಲ್ಪಕ್ಕೆ ಹೀಗೆ ತಡೆಯುಂಟಾದಾಗ ಆಶ್ಚರ್ಯಕರ ಘಟನೆಯೊಂದು ನಡೆಯಿತು.

ಇದ್ದಕ್ಕಿದ್ದಂತೆ ಮದರಾಸಿನಿಂದ "ಪುಣ್ಯಕೋಟಿ" ಎಂಬ ವೈದ್ಯರೊಬ್ಬರು ಅರುಣಾಚಲದಲ್ಲಿ ನಾನಿದ್ದ ಆಮ್ರಗುಹೆಗೆ ಬಂದರು. ನನ್ನ ಕೈಯನ್ನು ಪರೀಕ್ಷಿಸಿ ಶಸ್ತ್ರಚಿಕಿತ್ಸೆ ನಡೆಸಿದ್ದರಿಂದ ವೇದನೆ ಕಳೆದು ಮನಸ್ಸಿಗೆ ಹಾಯೆನಿಸಿತು. ಈ ವೈದ್ಯರು ಅದೇ ವೇಳೆಗೆ ಸರಿಯಾಗಿ ನನ್ನ ಬಳಿಗೆ ಬಂದುದು ಯಾವ ಪ್ರೇರಣೆಯಿಂದ ಎಂಬುದನ್ನು ವಿಚಾರಿಸಿದಾಗ ಈ ಆಶ್ಚರ್ಯಕರ ವಿಷಯ ಹೊರಬಂದಿತು.

ವೈದ್ಯರು ರಾತ್ರಿ ನಿದ್ದೆಯಲ್ಲಿ ಸ್ವಪ್ನವೊಂದನ್ನು ಕಂಡರು. ಒಬ್ಬ ಪುರುಷ ಕನಸಿನಲ್ಲಿ ಕಾಣಿಸಿಕೊಂಡು "ಅರುಣಾಚಲದ ಗುಹೆಯಲ್ಲಿ ಹೆಬ್ಬೆರಳಿನ ಹುಣ್ಣಿನಿಂದ ಬಾಧೆ ಪಡುತ್ತಿರುವ ಸಾಧುವಿನ ಬಳಿಗೆ ಹೋಗಿ ಹುಣ್ಣಿಗೆ ಶಸ್ತ್ರಚಿಕಿತ್ಸೆ ನಡೆಸು." ಈ ಸಂದೇಶದಂತೆ ಮರುದಿನವೇ ಶಸ್ತ್ರಚಿಕಿತ್ಸೆಯ ಸಲಕರಣೆಗಳೊಡನೆ ಅರುಣಾಚಲಕ್ಕೆ ಬಂದು ನನ್ನ ಗುರುಗಳನ್ನು ಸಂದರ್ಶಿಸಿದರು ಆ ವೈದ್ಯಮಹಾಶಯರು. ಗುರುಗಳ ನಿರ್ದೇಶನದ ಪ್ರಕಾರ ನಾನು ವಾಸವಿದ್ದ ಆಮ್ರ ಗುಹೆಗೆ ಬಂದು ಶಸ್ತ್ರ ಚಿಕಿತ್ಸೆಯಿಂದ ನನ್ನ ಬೆರಳಿನ ತೊಂದರೆಯನ್ನು ತೊಲಗಿಸಿ ಪುಣ್ಯ ಕಟ್ಟಿಕೊಂಡರು.

ಅಂದು ಸಂಜೆಗೇ ನನ್ನಹೆಬ್ಬೆರಳೇನೋ ಯಥಾಸ್ಥಿತಿಯನ್ನು ಪಡೆಯಿತು. ಆದರೂ ನನ್ನ ನಿರ್ಧಾರದಂತೆ ಅವಧಿಗೆ ಸರಿಯಾಗಿ ಉಮಾಸಹಸ್ರ ಮುಗಿಸಲು ಸಾಧ್ಯವಾಗಲಾರದೆಂಬ ಅನುಮಾನ ಉಂಟಾಯಿತು. ಏಕೆಂದರೆ ನಾನು ಈ ಸಹಸ್ರ ಪದ್ಯರಚನೆಯನ್ನು ಮುಗಿಸಿ ಜಗನ್ಮಾತೆಯ ಸನ್ನಿಧಿಯಲ್ಲಿ ಅದನ್ನು ಪಠಿಸುವುದಾಗಿ ದಿನವನ್ನು ಗೊತ್ತುಪಡಿಸಿ ಆ ವಿಷಯವನ್ನು ಈಗಾಗಲೇ ಪ್ರಚಾರ ಮಾಡಿ ಆಗಿದ್ದಿತು. ಆದರೆ ಆ ನಿರ್ದಿಷ್ಟ ದಿನವು ನಾಳೆಯೇ ಆಗಿದೆ ಎನ್ನುವಾಗ 200ಕ್ಕೂ ಹೆಚ್ಚಿನ ಶ್ಲೋಕಗಳ ರಚನೆ ಬಾಕಿ ಉಳಿದು ಬಿಟ್ಟಿದೆ. ನಾಳೆ ಸಮಯಕ್ಕೆ ಸರಿಯಾಗಿ

ನನ್ನ ಕಾವ್ಯಪಠನವನ್ನು ಕೇಳಲು ಕುತೂಹಲಿಗಳಾಗಿ ಬಂದು ಸೇರಬಹುದಾದ ಜನರಿಗೆ ನಾನು ಆಶಾಭಂಗ ಉಂಟು ಮಾಡಬೇಕಾಗುತ್ತದೆಯೆಂಬ ಚಿಂತೆ ನನ್ನನ್ನು ಕಾಡತೊಡಗಿತು. ಹಾಗಾಗಬಾರದು ಎಂದು ನಿರ್ಧರಿಸಿ ಉಳಿದಿರುವ ಸಂಖ್ಯೆಯ ಶ್ಲೋಕಗಳನ್ನು ಆ ರಾತ್ರಿಯೇ ಪೂರ್ಣಗೊಳಿಸುವ ಸಂಕಲ್ಪತೊಟ್ಟೆ.

ನನ್ನ ಶಿಷ್ಯ ವಾಸುದೇವ ಶಾಸ್ತ್ರಿ, ಘನಪಾಠಿ ಇವರ ಜೊತೆಗೆ ಇನ್ನೂ ಮೂವರನ್ನು ಲಿಪಿಕಾರರನ್ನಾಗಿ ಇಟ್ಟುಕೊಂಡು ರಾತ್ರಿಯ 2ನೇ ಮುಹೂರ್ತದಲ್ಲಿ ಶ್ಲೋಕಗಳ ರಚನೆಯನ್ನು ಪ್ರಾರಂಭಿಸಿ ಅರ್ಧರಾತ್ರಿಗೆ ಸಮಾಪ್ತಿಗೊಳಿಸಿದೆ. ವಿವಿಧ ವೃತ್ತಗಳಲ್ಲಿ ಶ್ಲೋಕಗಳನ್ನು ಹೆಣೆಯುತ್ತ ಈ ಐದು ಮಂದಿ ಬರವಣಿಗೆಯವರಲ್ಲಿ ಒಬ್ಬೊಬ್ಬರಿಗೂ ಪ್ರತ್ಯೇಕವಾಗಿ ಒಂದೊಂದು ಶ್ಲೋಕದ ಒಂದೊಂದು ಪಾದವನ್ನು ಏಕಕಾಲಕ್ಕೆ ಕ್ರಮವಾಗಿ ಹೇಳುತ್ತಹೋದೆ.

ತತ್ಕಾಲಜ್ವಲಿತಗುರುಪ್ರಸಾದಲಬ್ಧೈರಾವೇಶಸ್ಫುರಿತಪದ್ಯೈರ್ಯಥಾರ್ಥ
ಸಿದ್ಧೈಃ ।
ಸತ್ಪದ್ಯೈರ್ದ್ವಿಗುಣಶತಾಧಿಕೈರ್ನಿಬದ್ಧೈಃ ಸಾಹಸ್ರೀಂಕೃತಮನಯಂ ಕೃತೀ
ಸಮಾಪ್ತಿಂ ॥

ಆ ಸಂದರ್ಭದಲ್ಲಿ ಉಜ್ವಲ ಗುರುಅನುಗ್ರಹ ನನ್ನ ಮೇಲೆ ಉಂಟಾಗಿ ಆವೇಶ ಭರಿತ ಸ್ಫೂರ್ತಿಯಿಂದ ಸ್ವತಃ ತಕ್ಕ ಅರ್ಥವನ್ನು ಅಳವಡಿಸಿಕೊಂಡೇ ನನ್ನ ಮುಖದಿಂದ ಹೊರಬೀಳುತ್ತಿದ್ದ ಪದಗಳಲ್ಲಿ ಎರಡು ನೂರಕ್ಕೂ ಮಿಕ್ಕಿದ ಶ್ಲೋಕಗಳನ್ನು ಹೆಣೆದು ಸಹಸ್ರ ಸಂಖ್ಯೆಯನ್ನು ಮುಟ್ಟಿಸಿ ಕೃತಕೃತ್ಯನಾದೆ.

ಭಗವಾನ್ ರಮಣರು ಆ ಸಂದರ್ಭದಲ್ಲಿ ನನ್ನ ಪಕ್ಕದಲ್ಲಿಯೇ ಇದ್ದರು.

ನಿಷ್ಠಾಮಾಸ್ಥಾಯ್ಯೈವ ಸಂಮೀಲಿತಾಕ್ಷಃ ಕಾರುಣ್ಯಾತ್ಮಾ ನಿತ್ಯಮೌನೀ ಮಹರ್ಷಿಃ।
ಗಾಢೋऽಪ್ಯಂತಃ ಸ್ವಾಂತರಂಗೇಣ ಕೃತ್ಯೇ ಮನ್ನಿರ್ವರ್ತ್ಯೇ ದತ್ತದೃಷ್ಟಿಃ
ತದಾಭೂತ್ ॥

• ಸದಾ ಮೌನದಿಂದಿರುವ ಕರುಣಾಳುಗಳಾದ ಅವರು ತದೇಕಚಿತ್ತರಾಗಿರುವಂತೆ ಕಣ್ಣು ಮುಚ್ಚಿಕೊಂಡು ಒಳಮುಖರಾಗಿದ್ದರೂ ಸಹ ನಾನು ನಿರ್ವಹಿಸುತ್ತಿದ್ದ ಕೃತಿ ರಚನೆಯ ಬಗ್ಗೆ ತಮ್ಮ ಅಂತರಂಗದ ದೃಷ್ಟಿಯ ಬೆಂಬಲವನ್ನು ದಯ ಪಾಲಿಸಿದರು.

ಉಮಾಸಹಸ್ರದ ಕೊನೆಯ ಶ್ಲೋಕವನ್ನು ನಾನು ಮುಗಿಸುತ್ತಿದಂತೆಯೇ ಮಹರ್ಷಿಗಳು "ಅರ್ಧ ತೆರೆದ ಕಣ್ಣುಗಳಿಂದ ನನ್ನತ್ತ ನೋಡುತ್ತ" ನಾನು ಹೇಳಿದ್ದನ್ನೆಲ್ಲಾ ಬರೆದಿದ್ದಾಯಿತೇನು? " ಎಂದು ಪ್ರಶ್ನಿಸಿದಾಗ ಎಲ್ಲರಿಗೂ ಆಶ್ಚರ್ಯ! ಆದರೆ ಭಗವಾನರು ಆಳವಾದ ಅಂತರ್ಧ್ಯಾನದಿಂದ ಹೊರಬಂದು ಭಕ್ತವಾತ್ಸಲ್ಯ ಪೂರಿತರಾಗಿ ಒಳ-ಹೊರ ವ್ಯಾಪಾರಗಳಲ್ಲಿ ಅಂತರವನ್ನೇ ಇಟ್ಟುಕೊಳ್ಳದೆ ಈ ಪ್ರಶ್ನೆ ಕೇಳಿದ್ದರು. ಅರ್ಧರಾತ್ರಿಯ ವೇಳೆಗೇ ನಾನು ಗ್ರಂಥರಚನೆಯನ್ನು ಮುಗಿಸಲು ಮೂಲ ಕಾರಣವಾದದ್ದು ಇವರ ಕೃಪಾವಿಶೇಷ. ಆದರಿಂದ ಪ್ರೇರಿತನಾಗಿ ದಿವ್ಯ ಆವೇಶಕ್ಕೆ ಒಳಗಾದ ನನಗೆ ಈ ಸಾಮರ್ಥ್ಯ ಉಂಟಾಯಿತು; ಎಂಬ ಅರಿವು ಇದ್ದ ನಾನು "ಇನ್ನೇನು ? ತಾವು ಅನುಗ್ರಹ ವಿಶೇಷದ ಮೂಲಕ ನೀಡಿದ್ದನ್ನೆಲ್ಲಾ ಪಡೆದು ಗ್ರಂಥವನ್ನು ಇದೀಗ ಮುಗಿಸಿದ್ದೇನೆ" ಎಂದು ಪ್ರತ್ಯುತ್ತರ ನೀಡಿದೆ. ಪ್ಲವಂಗ ಸಂವತ್ಸರದಲ್ಲಿ ರಚಿಸಿದ ಈ ಉಮಾಸಹಸ್ರದ ಕೊನೆಯ ಶ್ಲೋಕಗಳಲ್ಲಿ ಈ ಮುಂದೆ ಕಂಡಂತೆ ಹೇಳಿರುವುದು ಇದೇ ಕಾರಣದಿಂದಲೇ.

ಯದಸ್ಯ ಮಹತಃ ಕಾಲೇ ಪಾರಂ ಯಾತೋಽಸ್ಮಿ ಕರ್ಮಣಃ ।
ಅನುಗ್ರಹೋಽಯಮಾಚಾರ್ಯರಮಣಸ್ಯ ಮಹಾತ್ಮನಃ ॥

ಈ ಮಹಾಕೃತಿರಚನೆಯ ಕೆಲಸವನ್ನು ಕಾಲಕ್ಕೆ ಸರಿಯಾಗಿ ಕೊನೆ ಮುಟ್ಟಿಸಲು ಸಮರ್ಥನಾದುದು ದೊಡ್ಡವರಾದ ಆಚಾರ್ಯ ರಮಣರ ಅನುಗ್ರಹ ವಿಶೇಷದಿಂದ.

ಉಮಾಸಹಸ್ರದ ಕೆಲಸ ಮುಗಿದ ಮೇಲೆ ಅಮ್ರಗುಹೆಯಿಂದ ಹೊರಟು ಬೆಟ್ಟದ ಮೇಲು ಭಾಗಗಳಲ್ಲಿ ಸಂಚರಿಸಿ ಆ ಪ್ರದೇಶವನ್ನೆಲ್ಲಾ ನೋಡಿದೆ. ಸಪ್ತಭರೀ ಎಂಬ ಸ್ಥಳದಲ್ಲಿ 3 ದಿನ ಇದ್ದೆ. ಅಲ್ಲಿಯ ಶೈತ್ಯವನ್ನು ಸಹಿಸಲಾಗದೆ ಕೆಳಗೆ ಬಂದೆ.

ಪ್ರಕರಣ- 14.

ಅದ್ಭುತಗಳು

ಸಾಧನೇ ಹಿ ನಿಯಮೋಽನ್ಯಜನಾನಾಂ ಯೋಗಿನಾಂ ತು ತಪಸಾಽಖಿಲಸಿದ್ಧಿಃ॥ (ನೈಷಧಂ)

ಸಾಮಾನ್ಯ ಜನ ಯಾವುದೇ ಸಿದ್ಧಿ ಪಡೆಯಬೇಕಾದರೆ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಯೋಗ ಶಕ್ತಿಯುಳ್ಳವರಿಗಾದರೋ ತಪಸ್ಸಿನಿಂದಲೇ ಎಲ್ಲವೂ ಸಿದ್ಧಿಸುತ್ತದೆ.

ಝುಡಿತಿ ಪರಾಶಯ ವೇದಿನೋಹಿ ವಿಜ್ಞಾಃ ॥

ವಿಶೇಷ ಜ್ಞಾನಿಗಳಾದವರು ಬೇರೆಯವರ ಮನೋಗತವನ್ನು ತಕ್ಷಣದಲ್ಲಿಯೇ ತಿಳಿಯಬಲ್ಲರು.

ನಂತರ ಭಗವಾನರೂ, ಶಿಷ್ಯ ಸಮೂಹದವರೂ ಮರಕತಶ್ಯಾಮಾಮಂದಿರಕ್ಕೆ ಬಂದರು. ಅಲ್ಲಿ ನಾವೆಲ್ಲರೂ 3ತಿಂಗಳು ಇದ್ದೆವು. ಆ ಅವಧಿಯಲ್ಲಿ ನಾನು ಉಮಾಸಹಸ್ರದ ಶುದ್ಧ ಹಸ್ತಪ್ರತಿಯನ್ನು ಸಿದ್ಧಪಡಿಸಿದೆ. ನನ್ನ ತಪಸ್ಸು ಉಜ್ವಲಗೊಳ್ಳುತ್ತ ಹೋಯಿತು. ಹೊಸ ಹೊಸ ಯೋಗಶಕ್ತಿಯ ವಿಲಾಸಗಳು ಸ್ಪಷ್ಟವಾಗಿ ಕಂಡುಬರಲಾರಂಭಿಸಿದವು.

ಒಮ್ಮೆ ನನಗೆ ಪೂರ್ವಪರಿಚಿತರಲ್ಲದ ಚಾರುಪಾಕಂ ಕೊಂಡಸ್ವಾಮಿ ಎಂಬವರು ನನ್ನನ್ನು ಕಾಣಲು ಬಂದರು. ಅವರು ಬರುವ ಮೊದಲೇ ನಾನು ಮಹರ್ಷಿಗಳಿಗೂ, ಸಮೀಪವಿದ್ದವರಿಗೂ "ನನ್ನ ಸಲುವಾಗಿ ಒಬ್ಬರು ಬರಲಿದ್ದಾರೆ" ಎಂದು ಹೇಳಿದ್ದೆ. ಕೊಂಡಸ್ವಾಮಿ ನನ್ನ ಬಳಿಗೆ ಬಂದೊಡನೆಯೇ ಕೇಳಿದೆ:–"ನೀವು ಗಣಪತಿಯ ಉಪಾಸಕರೇನು?" ಅವರು ಹೌದು ಎಂದರು." ನಿಮ್ಮ ಗುರುಗಳು ವೇದಾಚಲ ಅಯ್ಯರ್ ರವರೇನು ? " ಎಂಬ ನನ್ನ ಮತ್ತೊಂದು ಪ್ರಶ್ನೆಗೂ ಅವರು ಹೌದೆಂಬ ಉತ್ತರ ನೀಡಿದರು. ಈ ನನ್ನ ಮಾತುಗಳು ತತ್ಕಾಲದಲ್ಲಿ ನನ್ನ ಬಾಯಿಂದ ಹೊರಬಂದ ಸತ್ಯ ವಚನಗಳೇ ಹೊರತು ಹಿಂದೆ ನನಗೆ ತಿಳಿದಿದ್ದು ಈಗ ಆಡಿದ ಮಾತುಗಳಲ್ಲ.

ಕೊಂಡಸ್ವಾಮಿ ಈ ರೀತಿ ಹೇಳಿದರು:–

ನಾನು ಗಣಪತಿ ಮಹಾಮಂತ್ರವನ್ನು ನಿಯಮದಿಂದ ಪುರಶ್ಚರಣೆ ಮಾಡುತ್ತ ಪ್ರತಿದಿನವೂ ಯಜ್ಞೇಶ್ವರನಲ್ಲಿ ಹೋಮಾಹುತಿ ಅರ್ಪಿಸುವ ಮೂಲಕ ತೃಪ್ತಿಪಡಿ

ಸುತ್ತಿದ್ದೇನೆ. ಅದರಂತೆ ನಿನ್ನೆ ನಾನು ಹೋಮಾಹುತಿಯನ್ನು ಕೈಯ್ಯಲ್ಲಿ ಹಿಡಿದು ಜ್ವಲಿಸುತ್ತಿರುವ ಅಗ್ನಿಯಲ್ಲಿ ಸಮರ್ಪಿಸಬೇಕೆಂದಿರುವಾಗಲೇ ಅಗ್ನಿಜ್ವಾಲೆಯ ನಡುವೆ ಒಬ್ಬ ಮನುಷ್ಯನ ಆಕಾರ ನನ್ನ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸಿತು. ಅದು ಮಹಾ ಪುರುಷರೊಬ್ಬರ ಆಕೃತಿ ಇರಬೇಕು ಎಂದುಕೊಂಡೆ. ಹಾಗೆ ಕಾಣಿಸಿಕೊಂಡ ವ್ಯಕ್ತಿಯನ್ನು ಪ್ರತ್ಯಕ್ಷವಾಗಿ ನೋಡುವ ಹಂಬಲದಿಂದ ಹುಡುಕಾಡುತ್ತ ಇಲ್ಲಿಗೆ ಬಂದು ನೋಡುತ್ತೇನೆ! ಅದೇ ಆಕಾರದ ಮಹಾವ್ಯಕ್ತಿಯ ಸನ್ನಿಧಿಯಲ್ಲಿಯೇ ನಾನು ನಿಂತಿದ್ದೇನೆ."

ಹೀಗೆಯೇ ಕೆಲವರು ನನ್ನ ಬಳಿಗೆ ಬರಲಿರುವ ವಿಷಯವನ್ನು ಮುಂದಾಗಿಯೇ ತಿಳಿಸುತ್ತಿದ್ದುದುಂಟು. ಕೆಲಮೂರು ವೆಂಕಟರಾಮ ಅಯ್ಯರ್‌ರೆಂಬವರು ಬರಲಿರುವ ರೆಂಬುದನ್ನು ಇದೇ ರೀತಿ ಮೊದಲೇ ತಿಳಿಸಿದ್ದೆ. (ಇವರು ಮಂತ್ರೋಪಾಸನೆಯಿಂದ ದೇಶ ಸೇವೆಯ ಕಾರ್ಯ ನಡೆಸ ಬೇಕೆಂಬ ಉದ್ದೇಶವಿಟ್ಟುಕೊಂಡು ಗಣಪತಿ ಮುನಿ ಗಳ ಶಿಷ್ಯರಾಗಿ ಅನೇಕ ದಿನ ಇದ್ದವರು. ಈಗ ಅರವಿಂದಾಶ್ರಮದಲ್ಲಿ ಇದ್ದಾರೆ. ಇವರ ಅಣ್ಣ ಕೆ.ಎಸ್. ಶ್ರೀನಿವಾಸಅಯ್ಯರೂ ಗಣಪತಿ ಮುನಿಗಳ ಶಿಷ್ಯರಾಗಿ ಇದ್ದವರು)

ಶ್ಯಾಮಾಂಬಿಕಾ ದೇಗುಲದಲ್ಲಿ ನಾವು ಇದ್ದಷ್ಟು ಕಾಲ ಪ್ರತಿನಿತ್ಯ ಕಾಯಂ ಆಗಿ ಊಟಕ್ಕೆ ಇರುತ್ತಿದ್ದವರ ಸಂಖ್ಯೆ ಹೆಚ್ಚಾಗಿಯೇ ಇತ್ತು. ಆಗಾಗ್ಗೆ ಆಗಂತುಕರು ಬೇರೆ. ಆದರೆ ಗಂಭೀರಂ ಶೇಷ ಅಯ್ಯರ್‌ರೆಂಬವರು ಅಡಿಗೆ ವಿಭಾಗದ ಮೇಲ್ವಿ ಚಾರಕರಾಗಿ ಎಲ್ಲವನ್ನೂ ಸಮರ್ಪಕವಾಗಿ ನಿರ್ವಹಿಸುತ್ತಿದ್ದರು.

ಹೀಗೆ ಪಟ್ಟಣದಿಂದ ಹೊರಗೆ ಅರುಣಾಚಲದ ಪರಿಸರದಲ್ಲಿ ಈಶಾನ್ಯಕ್ಕೆ ಇರುವ ಶ್ರೇಷ್ಠವಾದ ಶ್ಯಾಮಾಂಬಿಕಾ ದೇಗುಲದಲ್ಲಿ ಗುರುದೇವರು ಹಾಗೂ ಶಿಷ್ಯ ರೊಡನೆ ನೆಲೆಸಿದ್ದ ಆ ದಿನಗಳಲ್ಲಿ ನನ್ನನ್ನು ಅನೇಕ ವಿಚಿತ್ರ-ವಿಶಿಷ್ಟ ಘಟನೆಗಳು ಸುತ್ತುವರಿಯುತ್ತಿದ್ದವು.

ಉಮಾ ಸಹಸ್ರವನ್ನು ಪರಿಷ್ಕರಿಸಿ ಶುದ್ಧ ಹಸ್ತಪ್ರತಿ ಸಿದ್ಧಪಡಿಸಿದ ಮೇಲೆ ದೇವಿಯ ಸನ್ನಿಧಿಯಲ್ಲಿ ಅದನ್ನು ಹಾಡುವ ಮೂಲಕ ಜಗಜ್ಜನನಿಯನ್ನು ಆರಾಧಿ ಸಿದೆ. ಆ ವೇಳೆಯಲ್ಲಿ ದೇವೀ ವಿಗ್ರಹದ ಬಲಗಡೆಯಿಂದ ಪ್ರಸಾದ ಪುಷ್ಪಗಳು ಕೆಳಗೆ ಬಿದ್ದು ಶುಭ ಶಕುನ ಉಂಟಾಯಿತು.

ಅದೇ ರಾತ್ರಿ ನನ್ನ ಶಿಷ್ಯರಲ್ಲೊಬ್ಬನಾಗಿದ್ದ ಘನಪಾಠಿ ಎಂಬವನ ಕನಸಿನಲ್ಲಿ ಜಗ ನ್ಮಾತೆಯು ವಿಮಾನಾರೂಢಳಾಗಿ ಬಂದಂತೆ ಕಾಣಿಸಿತು. ವಿಮಾನದಿಂದ ಕೆಳಗಿಳಿದು

ಆತನ ಮುಂದೆ ಬಂದು ನಿಂತ ದೇವಿಯು ಉಮಾ ಸಹಸ್ರದ ಪದ್ಯಗಳನ್ನು ಪಠಿಸು ವಂತೆ ನಿರ್ದೇಶಿಸಿದಳು. ಅವನು ಶ್ಲೋಕವೊಂದನ್ನು ಹೇಳಲು ಪ್ರಾರಂಭಿಸಿದಾಗ ಮಾತೆಯು "ಅದಲ್ಲ! 'ಗಣಪತಯೇ ಸ್ತನ ಘಟಯೋ:' ಈ ಪದ್ಯವನ್ನು ಹೇಳು. ತುಂಬಾ ಸರಳ-ಮಧುರ-ಮನೋಹರವಾದ ಈ ಶ್ಲೋಕ ಕೋಟಿ ಬೆಲೆಯುಳ್ಳದ್ದು" ಎಂದಳು. ಘನಪಾಠಿ ತನಗೆ ಕನಸಿನಲ್ಲಿ ಆದ ಈ ಅನುಭವವನ್ನು ನನಗೆ ತಿಳಿಸಿದ.

ಆ ಶ್ಲೋಕದ ಪೂರ್ಣ ಪಾಠ ಹೀಗಿದೆ:—

ಗಣಪತಯೇ ಸ್ತನಘಟಯೋ: ಪದಕಮಲೇ ಸಪ್ತಲೋಕ ಭಕ್ತೇಭ್ಯಃ ।
ಅಧರಪುಟೇ ತ್ರಿಪುರಜಿತೇ ದಧಾಸಿ ಪೀಯೂಷಮಂಬ ತ್ವಂ ॥

ಹೇ ತಾಯೇ! ಗಣಪತಿ (ನಿನ್ನ ಮಗ) ಗೋಸ್ಕರ ನಿನ್ನ ಕುಂಭಸ್ತನಗಳಲ್ಲಿ- ಏಳು ಲೋಕಗಳಲ್ಲಿರುವ ನಿನ್ನ ಭಕ್ತರಿಗಾಗಿ ನಿನ್ನ ಪಾದ ಪದ್ಮಗಳಲ್ಲಿ-ಮತ್ತೆ ತ್ರಿಪುರ ಸಂಹಾರಿಯಾದ ಪರಮೇಶ್ವರ (ನಿನ್ನ ಪತಿ) ನಿಗೆಂದು ನಿನ್ನ ತುಟಿಗಳಲ್ಲಿ ಹೀಗೆ ಮೂರು ಕಡೆಗಳಲ್ಲಿ ಅಮೃತವನ್ನು ಧರಿಸಿಕೊಂಡಿದ್ದೀಯೆ!

ಒಂದು ದಿನ ಬೆಳಿಗ್ಗೆ ನಾವೆಲ್ಲರೂ ಗುರುರಮಣರ ಸಮ್ಮುಖದಲ್ಲಿ ಕುಳಿತಿದ್ದೆವು. ಇದ್ದಕ್ಕಿದ್ದಂತೆ ಉಜ್ವಲ-ಪ್ರಸನ್ನ-ಮನೋಹರ ಬೆಳಕಿನ ಉಂಡೆಯೊಂದು ಕಾಣಿಸಿ ಕೊಂಡು ರಮಣ ಮಹರ್ಷಿಗಳ ಹಣೆಯನ್ನು ಆರುಸಲ ಸ್ಪರ್ಶಿಸಿ ಹಿಂದಕ್ಕೆ ಹೋಯಿತು. ಎಲ್ಲರಿಗೂ ತುಂಬಾ ಆಶ್ಚರ್ಯ! ಈ ಸಂಕೇತವು 'ಭಗವಾನ್ ರಮ ಣರು ಕಾರ್ತಿಕೇಯ ಸ್ವಾಮಿಯ ಅಂಶದಿಂದ ಹುಟ್ಟಿ ಬಂದಿದ್ದಾರೆ" ಎಂಬುದನ್ನು ಸೂಚಿಸುತ್ತಿದೆಯೆಂದು ನಾನು ನಿರ್ಧರಿಸಿದೆ. ಅದೇ ಭಾವನೆಯನ್ನು ವ್ಯಕ್ತಪಡಿಸುತ್ತ "ಯಾನಾಯಾಽತ್ರ ನ ಕೇಕಿನಾಂ ಕುಲಪತಿಃ"ಎಂದು ಪ್ರಾರಂಭಿಸಿ ಅಷ್ಟಕ (8ಶ್ಲೋಕ ಗಳು) ವನ್ನು ರಚಿಸಿ ಮಹರ್ಷಿಗಳನ್ನು ಸ್ತುತಿಸಿದೆ.

ತಪಸ್ಸಿಗಾಗಿ ಅರುಣಾಚಲದಿಂದ ಆದಿ ಪುರಕ್ಕೆ (ಮದರಾಸಿನ ಉತ್ತರ ಭಾಗ ದಲ್ಲಿರುವ ತಿರುವೊಟ್ಟಿಯೂರು ಕ್ಷೇತ್ರ) ಹೊರಡುವ ಮುನ್ನ ಗುರುವರ್ಯರ ಆಶೀ ರ್ವಾದ ಸಂದೇಶಕ್ಕಾಗಿ ಪ್ರಾರ್ಥಿಸಿಕೊಂಡೆ. ಸ್ವಪ್ರಯತ್ನದಿಂದ ಸ್ವಸ್ವರೂಪ ಜ್ಞಾನ ಸಂಪಾದಿಸಿ ಪಡೆಯುವ ಆತ್ಮಾನುಭವವೇ ಶ್ರೇಷ್ಠವಾದ ಸಿದ್ಧಿಯೆಂಬುದರಲ್ಲಿ ಸಂಶಯವಿಲ್ಲವಾದರೂ ನಮ್ಮ ಗುರಿಸಾಧನೆಗೆ ದೊಡ್ಡವರ ಮಾರ್ಗ ದರ್ಶನವೂ ಅಗತ್ಯ ವಾಗುತ್ತದೆ. ಮಹರ್ಷಿಗಳು ನನ್ನ ಬೇಡಿಕೆಯನ್ನು ಮನ್ನಿಸಿ ಅನುಗ್ರಹಿಸಿದ ಉಪದೇಶದ ಸಾರವನ್ನು ಛಂದೋಬದ್ಧವಾಗಿ ಈ ಮುಂದೆ ವಿವರಿಸುತ್ತಿದ್ದೇನೆ.

ನ್ಯಸ್ಯತಾಂ ಭರಃ ಸಕಲಜಿತ್ವರೇ । ಕಾರ್ಯಸತ್ಕೃತೇ ಜಗದಧೀಶ್ವರೇ ॥೧॥
(ಎಲ್ಲವನ್ನೂ ನಿಗ್ರಹಿಸಿ ಸಕಲ ಕಾರ್ಯ ಸಮರ್ಥನೆನಿಸಿರುವ ಜಗದೊಡೆಯನ
ಮೇಲೆ ಎಲ್ಲ ಭಾರವನ್ನೂ ವಹಿಸು)
ನಿತ್ಯಯಾ ಧಿಯಾ ನಿಹಿತಯಾ ಸ್ವಯಂ। ಸ್ಥೀಯತಾಂ ತ್ವಯಾ ಹೃದಿ ಪರಾ
ತ್ಪರೇ ॥೨॥
(ನಿನ್ನ ಹೃದಯದಲ್ಲಿಯೇ ಇರುವ ಪರಾಪರವಸ್ತುವಿನ ಮೇಲೆ ಸದಾ ನಿನ್ನ
ಮನಸ್ಸು ಕೇಂದ್ರೀಕೃತವಾಗಿರಲಿ)
ಭಾವಿನಿರ್ಣಯಪ್ರಭುರಸೌ ಪುಮಾನ್ । ಕಾರ್ಯಸಾಧನೇ ಭವತಿ ಶಕ್ತಿ
ಮಾನ್ ॥೩॥
(ಮುಂದೆ ಹೀಗೆಯೇ ನಡೆಯಬೇಕೆಂದು (ಸಂಭವಿಸತಕ್ಕದ್ದೆಂದು)ಮೊದಲೇ
ನಿರ್ಣಯಿಸಿಕೊಂಡಿರುವ ಈತನು ಕಾರ್ಯ ಸಾಧನೆಯಲ್ಲಿ ಸಮರ್ಥ)
ಭೂತಭವ್ಯಕೃದ್ಭುವನಭೂಪತಿಃ। ಕಾರಯೇದಯಂ ಕುಶಲಕಾರಣಂ ॥೪॥
(ಎಲ್ಲ ಆಗು-ಹೋಗುಗಳಿಗೆ ಕಾರಣನಾಗಿ ಲೋಕೇಶ್ವರನೆನಿಸಿದ ಈತನೇ
ಯಾರನ್ನಾದರೂ ಕಾರ್ಯಕುಶಲನನ್ನಾಗಿ ಮಾಡಬಲ್ಲವನು)
ಸಾಧ್ಯಮುತ್ತಮಂ ಸಮಯತಶ್ಚ ಲೇತ್ । ಮಾಸ್ತು ಸಂಶಯಸ್ತವ ವಿದಾಂ
ಮಣೇ ॥೫॥
(ಕಾಲಕೂಡಿಬಂದಾಗ ಒಳ್ಳೆಯ ಸಿದ್ಧಿ ಲಭಿಸಿಯೇ ತೀರುತ್ತದೆ. ವಿದ್ವನ್ಮಣಿ
ಯಾದ ನಿನಗೆ ಸಂಶಯ ಬೇಡ)
ಹಾರ್ದ ನಿಷ್ಠಯಾ ತವ ತು ಶಂ ಭವೇತ್। ಕಾರ್ಯಮರ್ಪಿತಂ ಭವತು
ಶಂಭವೇ ॥೬॥
(ಅಂತಃಕರಣ ಪೂರ್ವಕ ನಿಷ್ಠೆಯಿಂದ ನಿನಗೆ ಒಳಿತಾಗುತ್ತದೆ. ನಿನ್ನ ಕಾರ್ಯ
ಗಳು ಶ್ರೀ ಶಂಕರನಿಗೆ ಸಮರ್ಪಿತವಾಗಲಿ)

ಪ್ಲವಂಗ ಸಂವತ್ಸರದ ಫಾಲ್ಗುನ ಮಾಸದಲ್ಲಿ ವಾಸುದೇವಶಾಸ್ತ್ರಿಯ ಸಹಾಯದಿಂದ ಆದಿಪುರಕ್ಕೆ(ತಿರುವೊಟ್ಟಿಯೂರು)ಬಂದೆ. ನಾರಾಯಣಘನಪಾಠಿ-ವೆಂಕಟರಾಮ ಮೊದಲಾದ ಆಪ್ತ ಶಿಷ್ಯರೂ ಆದಿಪುರಕ್ಕೆ ಬಂದು ನನ್ನನ್ನು ಕೂಡಿಕೊಂಡರು. ಮೊದಲು ಅಲ್ಲಿಯ ವೇದ ಪಾಠಶಾಲೆ-ನಂತರ ಗಣಪತಿಯ ದೇಗುಲ-ಮುಂದೆ ಒಂದು ಪರ್ಣಕುಟೀರ ಹೀಗೆ ಪರಿಜನರೊಡನೆ ವಾಸಮಾಡಿದೆ. ಇಲ್ಲಿಗೆ ಬಂದ ಮೊದಲ ದಿನವೇ ಕಪಾಲಿಶಾಸ್ತ್ರಿ (ಈ ಗ್ರಂಥಕರ್ತರು) ಯ ಪರಿಚಯವಾಯಿತು. ಇಲ್ಲಿಯ ಸ್ಥಳ ಪುರಾಣವನ್ನು ಆತ ನನಗೆ ವಿವರವಾಗಿ ತಿಳಿಸಿದ. ಅವನನ್ನು ನನ್ನ ಆಪ್ತ ಶಿಷ್ಯರಲ್ಲೊಬ್ಬನೆಂದು ಪರಿಗಣಿಸಿ ಅದನ್ನು ಅವನಿಗೂ ತಿಳಿಸಿದೆ.

ನಾನು ಗಣಪತಿಯ ದೇಗುಲದಲ್ಲಿ ಬಿಡಾರ ಮಾಡಿದ್ದಾಗ ಪಂಚಾಪಕೇಶ ಶಾಸ್ತ್ರಿಗಳು ಮತ್ತು ಕೆಲವರು ನನ್ನನ್ನು ನೋಡಲು ಬಂದರು. ಸಂಭಾಷಣೆಯ ಕಾಲದಲ್ಲಿ ಅವರುಗಳ ಮನಸ್ಸಿನಲ್ಲಿದ್ದ ಅನೇಕ ಸಂದೇಹಗಳಿಗೆ ಸಮಾಧಾನಕರ ವಾಕ್ಯಗಳು ನನ್ನಿಂದ ತಾವಾಗಿಯೇ ಹೊರಬಂದು ಅವರು ತಮ್ಮ ಸಂದೇಹಗಳನ್ನು ನನ್ನ ಮುಂದೆ ಪ್ರಸ್ತಾಪಿಸ ಬೇಕಾದ ಅವಶ್ಯಕತೆಯೇ ಒದಗಲಿಲ್ಲ. ಆಶ್ಚರ್ಯ ಚಕಿತರಾದ ಅವರು ನನ್ನ ಬಗ್ಗೆ ಗೌರವ ಭಾವ ತಳೆದರು.

ಆ ಗಣಪತಿಯ ಆಲಯಕ್ಕೆ ನಾನು ಬಂದು ಆಗಲೇ 17ದಿನಗಳಾಗಿದ್ದವು. 18ನೆಯ ದಿನ ನಾನು ಧ್ಯಾನಸ್ಥನಾಗಿದ್ದರೂ ಜಾಗರೂಕನಾಗಿಯೇ ಕುಳಿತಿದ್ದೆ. ಇದ್ದಕ್ಕಿದ್ದಂತೆ ಮಹರ್ಷಿ ರಮಣರು ನನ್ನ ಪಕ್ಕದಲ್ಲಿಯೇ ಕುಳಿತಿರುವುದನ್ನು ಕಂಡೆ.

ಸಂಭ್ರಮ-ಆಶ್ಚರ್ಯ-ಭಕ್ತಿ-ಗೌರವ ಪ್ರೇರಿತನಾದ ನಾನು ಮೇಲಕ್ಕೆ ಏಳುತ್ತಿದ್ದಂತೆಯೇ ನನ್ನನ್ನು ತಡೆದು ಕುಳ್ಳಿರಿಸಿದ ಗುರುವರ್ಯರು ತಮ್ಮ ದಿವ್ಯ ಹಸ್ತವನ್ನು ನನ್ನ ಮಸ್ತಕದ ಮೇಲೆ ಇರಿಸಿದರು. ಹಟಾತ್ತನೆ ಮಿಂಚು ಹರಿದಂತೆ ವಿಶೇಷ ಶಕ್ತಿಯ ಪ್ರವಾಹವೊಂದು ನನ್ನ ಒಳ-ಹೊರಗುಗಳಲ್ಲೆಲ್ಲಾ ಹರಿಯುತ್ತಿರುವ ಅನುಭವ ನನಗಾಯಿತು.

ಇಲ್ಲಿ ನನಗೆ ಈ ಅಪೂರ್ವ ಅನುಭವ ಉಟಾದ ಸಮಯದಲ್ಲಿ ಭಗವಾನ್ ಶ್ರೀರಮಣರು ಅರುಣಾಚಲದ ವಿರೂಪಾಕ್ಷ ಗುಹೆಯಲ್ಲಿದ್ದರು. ಆದರೆ ಅದೇ ವೇಳೆಗೆ ಸರಿಯಾಗಿ ಅಲ್ಲಿ ಅವರಿಗೆ ಆದ ಅನುಭವ ನನ್ನ ಅನುಭವಕ್ಕೆ ಹೊಂದಿಕೆಯಾಗುತ್ತಿದ್ದು ಮುಂದೆ ಗುರುಮುಖದಿಂದಲೇ ಅದರ ವಿವರ ನನಗೆ ತಿಳಿಯಿತು. ಅದು ಹೀಗಿದೆ:-

"ವಿರೂಪಾಕ್ಷ ಗುಹೆಯಲ್ಲಿ ಕುಳಿತಿದ್ದ ಮಹರ್ಷಿಗಳ ಹೃದಯದಿಂದ ಹೊರಟ ಒಂದು ತೇಜೋ ವಿಶೇಷವು ನೇರವಾಗಿ ಅವರ ನೆತ್ತಿಯನ್ನು ಸೇರುತ್ತಿದ್ದಂತೆಯೇ ಅವರ ದೇಹ ಅಂತರಿಕ್ಷಕ್ಕೆ ಏರಿತು. ಪ್ರಶಾಂತ ಬೆಳದಿಂಗಳ ಪ್ರಕಾಶವುಳ್ಳ ದೇವ ಲೋಕದ ದಾರಿಯಲ್ಲಿ ಮೇಲೆ ಮೇಲೆ ಏರುತ್ತಿದ್ದ ಗುರು ವರ್ಯರಿಗೆ ಯಾವುದೋ ಒಂದು ಕರೆ ತಿರುವಟ್ಟಿಯೂರಿನ ಕಡೆಯಿಂದ ಮತ್ತೆ ಮತ್ತೆ ಕೇಳಿಬಂದಂತಾಗಿ ಅವರು ಭೂಮಿಯ ಕಡೆಗೆ ಇಳಿದು ಬಂದರು. ಅಲ್ಲಿ ಪಶ್ಚಿಮದ ಕಡೆಯ ರಾಜ ಮಾರ್ಗದಲ್ಲಿ ನಡೆದು ಒಮ್ಮೆ ಹಟಾತ್ತನೆ ಹಿಂದಿರುಗಿ ನೋಡಿದಾಗ ವಿಘ್ನರಾಜ ದೇವಾಲಯವೊಂದು ಕಾಣಿಸಿತು. ಒಳಕ್ಕೆ ಪ್ರವೇಶಿಸಿದರು. ಇದು ಮಹರ್ಷಿಗಳಿಗೆ ಆದ ಅನುಭವ.

ಪ್ರಕರಣ-15

ರೇಣುಕಾ-ಚಾರಪರೀಕ್ಷಾ

ರುಷಾ ನಿರುದ್ಧೋಽಪಿ ಶಿಶುಸ್ತನಂಧಯೋ ನ ಜಾತು ಮಾತುಶ್ಚರಣೌ ಜಿಹಾಸತಿ ॥

(ಯಾಮುನಾಚಾರ್ಯ)

(ಹಾಲು ಹಸುಳೆಯಾದ ಕಂದನನ್ನು ತಾಯಿ ಕೋಪದಿಂದ ದೂರ ಸರಿಸಿದರೂ ಆ ಮಗು ತಾಯಿಯ ಕಾಲಿಗೇ ತೆಕ್ಕೆ ಬೀಳುವುದನ್ನು ನಿಲ್ಲಿಸಲಾರದು)

ಅಕ್ಷೋಭ್ಯತೈವ ಮಹತಾಂ ಮಹತ್ವಸ್ಯ ಹಿ ಲಕ್ಷಣಂ ।

(ಕಥಾ ಸರಿತ್ಸಾಗರಂ)

(ಉದ್ವೇಗ-ಭೀತಿಗಳಿಗೆ ಒಳಗಾಗದಿರುವುದೇ ದೊಡ್ಡವರಲ್ಲಿರುವ ಹೆಚ್ಚುಗಾರಿಕೆ)

ವೆಲ್ಲೂರಿನ ನನ್ನ ಶಿಷ್ಯ ಸುಬ್ರಹ್ಮಣ್ಯಶಾಸ್ತ್ರಿಯ ಪತ್ರದಂತೆ ಅಲ್ಲಿಗೆ ಹೋಗಿ ಕೆಲವು ದಿನ ಇದ್ದೆ. ಆತನ ಒತ್ತಾಯದಂತೆ ಕೆಲವುಮಂದಿ ಶಿಷ್ಯಸಮೂಹದೊಡನೆ "ಪಡೈವೀಡು" ಎಂದು ಹೆಸರಾಂತ (ಕುಂಡಲೀಪುರ) ರೇಣುಕಾದೇವಿಯ ಕ್ಷೇತ್ರಕ್ಕೆ ಬಂದೆ. ಜಗನ್ಮಾತೆಯ ದರ್ಶನದ ನಂತರ ಶಿಷ್ಯ ನಾರಾಯಣ ಘನಪಾಠಿಯನ್ನು ಬಿಟ್ಟು ಉಳಿದವರೆಲ್ಲ ಹೊರಟು ಹೋದರು.

ನಾನು ಅಲ್ಲಿ ಶ್ರೀರಮಣ ಮಹರ್ಷಿಗಳವರ ಉಪದೇಶ-ಮಾರ್ಗದರ್ಶನದಂತೆ ತಪಸ್ಸನ್ನು ಪ್ರಾರಂಭಿಸಿದೆ. ಈ ಸಂದರ್ಭದಲ್ಲಿ ಮದರಾಸಿನಿಂದ ನನ್ನಶಿಷ್ಯ ಏಕಾಮ್ರನ ಸಹೋದರ ಹೇಮಸ್ವಾಮಿ ನನಗೆ ಕಳಿಸಿದ ಸಂದೇಶ ಹೀಗಿತ್ತು :- "ನಿಮಗೆ ಕೆಡುಕು ಉಂಟುಮಾಡುವ ದುರುದ್ದೇಶದಿಂದ ನಿಮ್ಮ ಶಿಷ್ಯರೇ ಕೆಲವರು ಸೇರಿ ನಿಮ್ಮ ಬಗ್ಗೆ ಅಪಪ್ರಚಾರದಲ್ಲಿ ತೊಡಗಿದ್ದಾರೆ." ಕಾವ್ಯಕಂಠ ಗಣಪತಿ ಶಾಸ್ತ್ರಿಯು ಬಹಳ ಮಂದಿ ಯುವ ವಿದ್ಯಾರ್ಥಿಗಳನ್ನು ಸಂಘಟಿಸಿ ರಾಷ್ಟ್ರದ್ರೋಹೀಕೃತ್ಯ ನಡೆಸುವ ಕ್ರಾಂತಿಕಾರಿ ಕೂಟ ಸ್ಥಾಪಿಸಿದ್ದಾರೆ. ಇವರು ತಪಸ್ಸು ಆಚರಿಸುವ ಸೋಗು ಧರಿಸಿ ಹಲವು ಬಗೆಯ ಕುಟಿಲ ತಂತ್ರ ಪ್ರಯೋಗಿಸುತ್ತ ದೇಶಾಟನೆಯ ನೆವದಲ್ಲಿ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಅಲ್ಲಿ ಉಳಿಯುತ್ತಾರೆ. ಇವರ ಚಟುವಟಿಕೆಗಳ ಬಗ್ಗೆ ಸರ್ಕಾರದ ಅಧಿಕಾರಿಗಳು ತೀವ್ರ ಗಮನವಿಟ್ಟಿರಬೇಕು" ಈ ಬಗೆಯ ವದಂತಿ

ಗಳನ್ನು ಹಬ್ಬಿಸಿ ಪತ್ರಿಕೆಗಳಲ್ಲಿಯೂ ಪ್ರಕಟಿಸಿದ್ದಾರೆ. ಸ್ವದೇಶೀ ಚಳುವಳಿ-ಸ್ವಾತಂತ್ರ್ಯ ಆಂದೋಳನ ತೀವ್ರವಾಗಿರುವ ಈ ದಿನಗಳಲ್ಲಿ ಇಂತಹ ಪ್ರಚಾರ ನಡೆಯುವುದು ಸಾಮಾನ್ಯವೇ ಆಗಿದ್ದು ರಾಜ್ಯದ ವರಿಷ್ಠ ಅಧಿಕಾರಿಗಳ ಸೂಚನೆಯಂತೆ ಗುಪ್ತದಳದವರು ನಿಗಾ ಇಟ್ಟಿರುವ ದೇಶದ್ರೋಹಿಗಳ ಪಟ್ಟಿಯಲ್ಲಿ ನಿಮ್ಮ ಹೆಸರೂ ಸೇರಿದೆ".

ಈ ಸಂದೇಶವನ್ನು ಓದಿದ ನಾನು ಮಾತೆ ರೇಣುಕೆಯನ್ನು ಧ್ಯಾನಿಸುತ್ತ ಮುಹೂರ್ತಕಾಲ ಸುಮ್ಮನೆ ಕುಳಿತಿದ್ದೆ.

ಅದೇ ಸಮಯಕ್ಕೆ ಸರಿಯಾಗಿ ಅಧಿಕಾರದ ಸಮವಸ್ತ್ರಕ್ಕೆ ಬದಲು ಸಾಮಾನ್ಯ ಯಾತ್ರಿಕರಂತೆ ಉಡುಪು ತೊಟ್ಟ ಇಬ್ಬರು ಗುಪ್ತಚಾರರು ನನ್ನ ಬಳಿಗೆ ಬರುತ್ತಿದ್ದಾರೆ ಎಂಬ ಪ್ರೇರಣೆ ಆಕಸ್ಮಾತ್ ನನಗೆ ಉಂಟಾಯಿತು. ಒಡನೆಯೇ ಎದ್ದು ದೇಗುಲದ ಪ್ರಾಕಾರವನ್ನು ಸುತ್ತುಹಾಕಲಾರಂಭಿಸಿದೆ. ಅದರ ಜೊತೆಗೇ ನನ್ನ ಮೇಲೆ ಒದಗಲಿದ್ದ ಸಂಕಟ ಪರಿಹರಿಸುವಂತೆ ಬೇಡಿಕೆಯುಳ್ಳ "ರೇಣುಕಾ ಗೀತೆಯನ್ನು" ರಚಿಸಿ ಹಾಡುತ್ತಾ ದೇವಿಯ ಅನುಗ್ರಹಕ್ಕೆ ಪಾತ್ರನಾದೆ.

ದೇವ್ಯಾ: ಪ್ರದಕ್ಷಿಣವಿಧಾನಹಿತಾನಿ ಗೀತಾನ್ಯಷ್ಟೌ ಚ ವಿಂಶತಿ ಮಗಾಯ-
ಮಹಂ ವಿಶಂಕಂ ।
ಏಕೈಕ ಪದ್ಯರಚನಾಂತ ಪರಿಕ್ರಮಾಂತ ಕಾಲೈಕ್ಯವೃತ್ತಮುದ
ಭೂದ್ವರಗೀತಮೇವಂ ॥

ಒಂದು ಪ್ರದಕ್ಷಿಣೆಯೊಡನೆ ಒಂದು ಶ್ಲೋಕ ಪೂರ್ತಿಯಾಗುವಂತೆ ಸಮಯವನ್ನು ಸರಿಹೊಂದಿಸಿಕೊಂಡು ದೇವಿಗೆ ಪ್ರದಕ್ಷಿಣೆ ಹಾಕುತ್ತಲೇ ರಚಿಸಿದ 28 ಉತ್ತಮ ಶ್ಲೋಕಗಳು ಇವು.

ಸುರಶಿರಶ್ಚರಣ ರೇಣುಕಾ। ಜಗದಧೀಶ್ವರೀ ಜಯತಿ ರೇಣುಕಾ॥

ದೇವತೆಗಳ ತಲೆಯ ಮೇಲೆ ತನ್ನ ಪಾದ ಧೂಳಿಯನ್ನು ಅನುಗ್ರಹಿಸುವವಳು! ಈ ಜಗದ ಒಡೆಯಳು ಈ ರೇಣುಕಾದೇವೀ. ಹೀಗೆ ಪ್ರಾರಂಭಿಸಿ

ಕುಂಡಲೀಪುರೀಮಂಡನಾಯಿತಾ। ಗಣಪತಿಸ್ತುತಾ ಜಯತಿ ರೇಣುಕಾ॥

ಕುಂಡಲೀಪುರ ಕ್ಷೇತ್ರಕ್ಕೆ ಅಲಂಕಾರಪ್ರಾಯಳು ! ಗಣಪತಿಯಿಂದ ಸ್ತೋತ್ರ

ಮಾಡಲ್ಪಟ್ಟು ವಿರಾಜಮಾನಳಾಗಿದ್ದಾಳೆ! ಈ ರೇಣುಕಾಂಬೆ. ಈ ರೀತಿ ಪೂರ್ಣ ಗೊಂಡಿದೆ. 28 ಶ್ಲೋಕಗಳ ಸ್ತೋತ್ರ ಮಾಲಿಕೆ.

ಅಂದು ಶುಕ್ರವಾರವಾದುದರಿಂದ ಈ ಸ್ತೋತ್ರಮಾಲಿಕೆಯನ್ನು ಮುಗಿಸಿದ ನಾನು ಪ್ರದಕ್ಷಿಣಾ ಕಾರ್ಯವನ್ನು ನಿಲ್ಲಿಸಿ ದೇವಿಯ ಸಮ್ಮುಖದಲ್ಲಿ ಕುಳಿತು ಪುಣ್ಯ ಸ್ತೋತ್ರ ಪಾರಾಯಣವನ್ನು ಪ್ರಾರಂಭಿಸಿದೆ. ಅದೇ ವೇಳೆಗೆ ಹಟಾತ್ತನೆ ಇಬ್ಬರು ಯಾತ್ರಿಕರು ನನ್ನ ಮುಂದೆ ನಿಂತಿರುವುದನ್ನು ಗಮನಿಸಿ ಅವರನ್ನು ಪ್ರಶ್ನಿಸಿದಾಗ ''ತಾವು ಯಾತ್ರಾರ್ಥಿಗಳಾಗಿ ಬಂದಿದ್ದೇವೆ'' ಎಂದರು.

ಮುಂದೆ ಅಲ್ಲಿಯೇ ಕುಳಿತ ಅವರು ಹಾಗೂ ನನ್ನ ನಡುವೆ ಅರ್ಧರಾತ್ರಿಯ ವರೆಗೂ ಆಧ್ಯಾತ್ಮಿಕ ವಿಷಯಗಳಲ್ಲಿ ಸಂಭಾಷಣೆ ನಡೆಯಿತು. ಪಾರಮಾರ್ಥಿಕ ವಿಚಾರದಲ್ಲಿ ಕುತೂಹಲವಿದ್ದ ಅವರಿಗೆ ಪ್ರಾಸಂಗಿಕವಾಗಿ ನನ್ನ ಅದುವರೆಗಿನ ಚರಿತ್ರೆಯನ್ನು ವಿವರಿಸಿದೆ. ನನ್ನ ವಿಷಯದ ಶೋಧನೆಗಾಗಿಯೇ ಬಂದಿದ್ದ ಅವರು ನನ್ನ ಬಗ್ಗೆ ಹೊಂದಿದ್ದ ಸಂಶಯ-ತಪ್ಪುಕಲ್ಪನೆಗಳನ್ನೆಲ್ಲಾ ನಿವಾರಿಸಿಕೊಂಡರೆಂದು ತೋರುತ್ತದೆ. ಮುಂಜಾನೆ ಪ್ರಯಾಣ ಬೆಳೆಸುವುದಾಗಿ ತಿಳಿಸಿ ದೇಗುಲದ ಚಾವಡಿ ಯಲ್ಲಿ ವಿಶ್ರಮಿಸಿದರು.

ಬೆಳಿಗ್ಗೆ ಹೊರಡುವ ಮುನ್ನ ಅವರ ಪೈಕೀ ಮುಖ್ಯ ಅಧಿಕಾರಿಯು ನನ್ನನ್ನು ಪ್ರತ್ಯೇಕವಾಗಿ ಸಂಧಿಸಿ ವಿನಯಪೂರ್ವಕವಾಗಿ ತಾವು ಇಲ್ಲಿಗೆ ಬಂದ ನಿಜವಾದ ಉದ್ದೇಶವನ್ನು ತಿಳಿಸಿ "ನೀವು ಸಂಶಯಾಸ್ಪದ ವ್ಯಕ್ತಿಯಲ್ಲವೆಂಬುದು ನನಗೆ ಖಚಿತ ಗೊಂಡಿದೆ. ಅದನ್ನೇ ನಾನು ಮೇಲಧಿಕಾರಿಗಳಿಗೆ ವರದಿ ಮಾಡುತ್ತೇನೆ" ಇಷ್ಟು ಹೇಳಿದ ಆ ಅಧಿಕಾರಿ ಈ ಮುಂದಿನ ರಹಸ್ಯವನ್ನೂ ಸೂಚನೆಯ ರೂಪದಲ್ಲಿ ನೀಡಿದ:

> ಸಾಧೋ ಮಾವಸ ಮಂಡಲೇಽತ್ರ ಬಹವೋ ಗೂಢಪ್ರಚಾರಾಃ ಸ್ಪಶಾಃ
> ಕ್ರೂರಾಃ ಕೇಚನ ಸಂತಿ ದುಷ್ಟಹತಕಾಃ ಕೂಟೋಪ ಜೀವ್ಯಕ್ಷಣಾಃ।
> ದುಷ್ಕೃತ್ಯಾಭಿನಿವಿಷ್ಟ ಜೀವನಭೃತಃ ಸತ್ಕರ್ಮದೂರಾಶ್ಚ ಯೇ
> ರಾಜೋದ್ಯೋಗ ಬಲಾಧಿಕಾರವಶತೋಽನಿಷ್ಟಂ ತವಾತನ್ವತೇ॥

ಸಾಧುಗಳೇ! ನೀವು ಈ ಜಿಲ್ಲೆಯನ್ನು ಕೂಡಲೇ ಬಿಟ್ಟುಹೋಗುವುದು ಒಳ್ಳೆಯದು. ಇಲ್ಲಿ ನಿಮ್ಮ ಮೇಲೆ ಗೂಢಚರ್ಯೆ ನಡೆಯುತ್ತಿದೆ. ಅಪಪ್ರಚಾರ

ವಾಗುತ್ತಿದೆ. ಕೇವಲ ಕುಟಿಲ ತಂತ್ರದಿಂದಲೇ ಬದುಕುತ್ತಿರುವ ಕ್ರೂರ ಕರ್ಮಿಗಳು ಕೆಲವರಿದ್ದಾರೆ. ತಮಗಿರುವ ಅಧಿಕಾರಬಲದಿಂದ ಒಳ್ಳೆಯ ಮಾರ್ಗವನ್ನೇ ಅರಿಯದೆ ಬೇರೆಯವರ ಮೇಲೆ ದುಷ್ಕೃತ್ಯವೆಸಗುವುದೇ ಅವರ ಹವ್ಯಾಸ. ಅವರು ನಿಮಗೂ ಕೆಡುಕು ಮಾಡಿಯಾರು!

ಹೀಗೆ ಆ ಗುಪ್ತ ಪೋಲಿಸ್ ಅಧಿಕಾರಿ ನನಗೆ ಸೂಚನೆ ನೀಡಿದರೂ ನಾನು ಮಾತ್ರ ಕೂಡಲೇ ಆ ದೇವಿಯ ಸನ್ನಿಧಿಯನ್ನು ಬಿಟ್ಟು ಹೊರಡಲಿಲ್ಲ.

ಆದರೆ ಊರಿನಿಂದ ನನ್ನ ತಮ್ಮ ಶಿವರಾಮನು ಬಂದು ನನಗೆ "ಮಗಳೊಬ್ಬಳು ಹುಟ್ಟಿರುವ ವಿಷಯ ತಿಳಿಸಿದಾಗ ಪುಣ್ಯಾಹ-ನಾಮಕರಣ ನಿರ್ವಹಣೆಗಾಗಿ ಅವನೊಡನೆ ಮನೆಗೆ ಹೋದೆ. ನನ್ನ ಮಗಳಿಗೆ ರೇಣುಕಾದೇವಿಯ ನಾಮಗಳಲ್ಲಿ ಒಂದಾದ "ವಜ್ರೇಶ್ವರೀ" ಎಂಬ ಹೆಸರನ್ನು ಇಟ್ಟೆ. ಪುಣ್ಯ ಸಮಾರಂಭಗಳನ್ನು ಪೂರೈಸಿ ಪುನಃ ಇದೇ ರೇಣುಕಾ ಕ್ಷೇತ್ರಕ್ಕೆ ವಾಪಸು ಬಂದೆ.

"ಇನ್ನು 24 ದಿನಗಳ ಒಳಗಾಗಿ ದೇವಿಯು ನನಗೆ ಪ್ರಸನ್ನಳಾಗುತ್ತಾಳೆ" ಎಂಬುದನ್ನು ಹಲವು ನಿದರ್ಶನ ಹಾಗೂ ಅಂತರಿಕ ಸಂವೇದನೆಯಿಂದ ನಿರ್ಧರಿಸಿಕೊಂಡ ನಾನು ಇದೇ ಕುಂಡಲೀಪುರದಲ್ಲಿಯೇ ವ್ರತನಿಷ್ಠನಾಗಿ ತಪಸ್ಸು ನಡೆಸುತ್ತ ಇದ್ದೆ. 24ನೆಯ ರಾತ್ರಿ ದೇವಿಯ ಮಂದಿರವನ್ನು ಪ್ರವೇಶಿಸಿ ಕೆಲವು ಸಮಯದವರೆಗೆ ಧ್ಯಾನನಿರತನಾಗಿದ್ದು ನಂತರ ಬಂದು ಮಲಗಿದೆ. ರಾತ್ರಿ 2ನೆಯ ಝಾವದಲ್ಲಿ ನಾನು ಅರ್ಧ ಎಚ್ಚರಿಕೆ-ಅರ್ಧನಿದ್ರೆಯ ಮಂಪರಿನಲ್ಲಿದ್ದಾಗ ವಿಚಿತ್ರವೊಂದು ಸಂಭವಿಸಿತು. ನೋಡ ನೋಡುತ್ತಿದ್ದಂತೆಯೇ ನನ್ನ ಶರೀರ ಬೆಳೆಯಲಾರಂಭಿಸಿ ತಾಳೆಯ ಮರದ ಪ್ರಮಾಣವನ್ನು ಮುಟ್ಟಿ ಆನಂದ ಸಂವೇದನೆಗೆ ಒಳಗಾಯಿತು.

ಹಾಸಿಗೆಯಲ್ಲಿ ಮಲಗಿದ್ದ ನನ್ನ ದೇಹಕ್ಕೆ ನೆಲದ ಸಂಬಂಧವೇ ಇಲ್ಲ. ಶರತ್ಕಾಲದ ಬೆಳದಿಂಗಳ ಪ್ರಭೆಗಿಂತ ಮಿಗಿಲಾದ ದೇಹ ಕಾಂತಿಯನ್ನು ಹೊರಸೂಸುತ್ತ ಸ್ತ್ರೀಯೊಬ್ಬಳು ನನ್ನ ಮುಂದೆ ನಿಂತಿದ್ದಾಳೆ. ದಿವ್ಯ ದೇಹ ಕಾಂತಿ-ಅಮೂಲ್ಯ ಆಭರಣಗಳಿಂದ ಬೆಳಗುತ್ತ ಹಲವು ಪರಿಚಾರಿಕೆಯರಿಂದ ಪರಿವೃತಳಾಗಿ ನಿಂತಿರುವ ಇವಳು ರೇಣುಕಾ ದೇವಿಯೇ ಸರಿ ಎಂದು ನಿರ್ಧರಿಸಿದೆ.

ಈಗ ಮಲಗಿರುವ ನನಗೆ ಏಳಬೇಕೆಂಬ ಆಸೆ. ಆದರೆ ಎಷ್ಟೇ ಪ್ರಯತ್ನಿಸಿದರೂ ಏಳಲು ಸಾಧ್ಯವಾಗುತ್ತಿಲ್ಲ. ಅಷ್ಟರಲ್ಲಿ ಆ ದೇವಿಯೇ ನನ್ನ ಬಳಿಗೆ ಬಂದು ಕುಳಿತು ನನ್ನ ಮೊಣಕಾಲಿನ ಮೇಲೆ ತನ್ನ ಕೈ ಉಗುರಿನಿಂದ ಗೀರಿ ಗಾಯ

ಮಾಡುತ್ತಿದ್ದಾಳೆ. ಒಡನೆಯೇ ನನ್ನ ಶರೀರದಲ್ಲಿ ವಿಶೇಷ ಚೈತನ್ಯಲಹರಿ ಉಂಟಾಗಿ 200 ಸೇವಿಕೆಯರಿಂಥ ಪರಿವೃತಳಾದ ಜಗನ್ಮಾತೆಯ ದಿವ್ಯದರ್ಶನದ ಅನುಭವವಾಯಿತು. ಹಾಗೆಯೇ ಸಂಪೂರ್ಣ ಎಚ್ಚರಗೊಂಡಂತೆ ಅನಿಸಿತು. ಆಗಲೂ ಪರಿವಾರ ಸಹಿತಳಾದ ದೇವಿಯನ್ನು ಸಾಕ್ಷಾತ್ ನೋಡಿದೆ.

"ನನ್ನ ಹಿಂದೆ ಬಾ !" ಎಂಬ ದೇವಿಯ ಆಜ್ಞೆಯನ್ನು ಅನುಸರಿಸಿದೆ. ದೇಗುಲದ ಹೊರಗೆ ಪಶ್ಚಿಮ ದಿಕ್ಕಿನಲ್ಲಿರುವ ಬಿಲ್ವ ವೃಕ್ಷದವರೆಗೆ ನಡೆದು ಅಲ್ಲಿದ್ದ ಜಗತಿಯನ್ನೇರಿ ಕುಳಿತ ಮಾತೆಯ ಸಮ್ಮುಖದಲ್ಲಿ ಅಂಜಲಿ ಬದ್ಧನಾಗಿ ನಿಂತು ಕೇಳಿದೆ: "ನಾನು ಯಾರು?" ಆದರೆ ದೇವಿಯು ನನ್ನ ಪ್ರಶ್ನೆಗೆ ಉತ್ತರಿಸುವ ಬದಲು ವೇದಿಕೆಯಿಂದ ಇಳಿದು ದೇವಾಲಯಕ್ಕೆ ಪ್ರದಕ್ಷಿಣೆಯಾಗಿ ಹೊರಟಳು. ನಾನೂ ಅನುಸರಿಸಿದೆ. ಏಕ ಮುಖ ಕುಮಾರ ಸ್ವಾಮಿಯ ಗುಡಿಯನ್ನು ಪ್ರವೇಶಿಸಿದ ಜಗನ್ಮಾತೆಯು ಸ್ವಾಮಿಯ ಕೈಯಲ್ಲಿದ್ದ ಶಕ್ತ್ಯಾಯುಧವನ್ನು ತೆಗೆದು ನನಗೆ ನೀಡಿ ಹೊರಬಂದು ಅಪ್ರದಕ್ಷಿಣೆಯಾಗಿ ದೇವಾಲವನ್ನು ಹೊಕ್ಕು ಅದೃಶ್ಯಳಾದಳು. ಪೂರ್ಣ ಬಾಹ್ಯ ಪ್ರಜ್ಞೆಗೆ ಮರಳಿದಾಗ ನಾನು ಮಲಗಿದಲ್ಲಿಯೇ ಇದ್ದೆ.

ಇದೇ ಅನುಭವ ಮತ್ತೊಮ್ಮೆ ಆಯಿತು. ಆದರೆ ಈ ಸಲ ದೇವಿಯು ಉತ್ತರದಿಕ್ಕಿನ ವೇದಿಕೆಯ ಮೇಲೆ ಕುಳಿತಿದ್ದಳು. ಗೋಡೆಗಳ ನಡುವೆ ಸಣ್ಣ-ಪುಟ್ಟ ವಸ್ತುಗಳನ್ನಿಡುವ ಚಿಕ್ಕ ಉಗ್ರಾಣದಿಂದ ಏನನ್ನೋ ತಂದು ನನಗೆ ನೀಡಿ ತಿನ್ನುವಂತೆ ಆದೇಶಿಸಿದಳು. ಅದೇ ರೀತಿ ಮಾಡಿದ ನನ್ನನ್ನು ಮಾತೆಯು ಅನುಗ್ರಹಿಸುತ್ತ ನುಡಿದಳು.

ಯದಾ ತ್ವಂ ಪ್ರಯತೋ ವತ್ಸ ತೀವ್ರೇ ತಪಸಿ ತಿಷ್ಠಸಿ।
ತದಾ ದಿನಾನಾಂ ವಿಶಂತ್ಯಾ ಸಿದ್ಧಿಂ ಧ್ರುವಮವಾಪ್ಸ್ಯಸಿ॥

ಮಗು! ಯಾವಾಗ ನೀನು ಸತತವಾಗಿ 20 ದಿನಗಳ ಕಾಲ ತಪಸ್ಸಿನಲ್ಲಿ ನಿರತನಾಗುವಿಯೋ ಆಗ ಖಂಡಿತವಾಗಿ ಸಿದ್ಧಿಯನ್ನು ಕಾಣುತ್ತೀಯೇ!

ಮರುದಿನ ಮುಂಜಾನೆ ಎದ್ದ ಮೇಲೆ ಮೊಣಕಾಲ ಕಡೆ ದೃಷ್ಟಿ ಹಾಯಿಸಿದರೆ ಅಲ್ಲಿ ರಕ್ತ ಒಸರುವ ಗಾಯ ಸ್ಪಷ್ಟವಾಗಿಯೇ ಮೂಡಿದೆ! ಈ ವ್ರಣವು ಮೂರುದಿನಗಳಲ್ಲಿ ಮಾಯಿತು. ಸುಮಾರು 1 ತಿಂಗಳು ಅಲ್ಲಿದ್ದು ನಂತರ ಮನೆಯನ್ನು ಸೇರಿದೆ. ಸತತವಾಗಿ 20 ದಿನ ತಪಸ್ಸಿಗೆ ಕುಳಿತುಕೊಳ್ಳಲು ಇದುವರೆಗೆ ಸಾಧ್ಯವಾಗಿಲ್ಲ.

ಪ್ರಕರಣ-16

ಸಂಚಾರ-ಮದರಾಸಿನಲ್ಲಿ ವಸತಿ-ಪಶ್ಚಿಮ ಪ್ರಾಂತ್ಯಕ್ಕೆ ಪಯಣ

"ರಾತ್ರಿಂ ದಿವಂ ಗಂಧವಹಃ ಪ್ರಯಾತಿ"

(ಸುಗಂಧವನ್ನು ಹೊತ್ತ) ಕಸ್ತೂರೀ ಮೃಗವು ರಾತ್ರಿ-ಹಗಲು ಎಡಬಿಡದೆ ಸಂಚರಿಸುತ್ತಲೇ ಇರುತ್ತದೆ.

"ಉದಾರಚರಿತಾನಾಂ ತು ವಸುಧೈವ ಕುಟುಂಬಕಂ" (ಶಾಕುಂತಲಂ 5-3)

ಉದಾರ (ಪ್ರಾಮಾಣಿಕ) ನಡೆಯುಳ್ಳವರಿಗೆ ಇಡೀ ಜಗತ್ತೇ ಕುಟುಂಬ ವಾಗಿರುತ್ತದೆ.

ಈ ನಡುವೆ ಪುನಃ ನನ್ನ ವಿರೋಧಿಗಳಿಂದ ಪ್ರಚೋದಿತರಾದ ಅಧಿಕಾರಿಗಳು ನನಗೆ ತೊಂದರೆ ಕೊಡಬಹುದೆಂಬ ಸೂಚನೆ ಆಪ್ತಶಿಷ್ಯವರ್ಗದಿಂದ ನನಗೆ ಬಂದಿತು. ನನ್ನ ಶಿಷ್ಯೆಯೊಬ್ಬಳು ರಾತ್ರಿಯ ವೇಳೆಯಲ್ಲಿ ಬಂದು ಈ ರಹಸ್ಯವನ್ನು ನನಗೆ ತಿಳಿಸಿ ಕೂಡಲೇ ಹೊರಟು ಹೋದಳು.

ಈ ಸುದ್ದಿಯಿಂದ ಮನಸ್ಸಿಗೆ ಕಳವಳ ಉಂಟಾಯಿತು. ಸಿಂಹವಾಹಿನಿಯಾಗಿ ಪಾಪಿಗಳು-ಕ್ರೂರಿಗಳನ್ನು ಧ್ವಂಸಗೊಳಿಸಿ ದುರವಸ್ಥೆಯನ್ನು ಪರಿಹರಿಸಲು ಸಮರ್ಥಳಾದ ದುರ್ಗಾಮಾತೆಯನ್ನು ಉಮಾ ಸಹಸ್ರಶ್ಲೋಕಗಳಿಂದ ಸ್ತುತಿಸಿ ಜಾಗೃತಗೊಳಿಸಿದೆ.

ವೈರಿದಲನಿರ್ದಲನಖಡ್ಗವರಪಾಣೇ ಪಾಸಸಿ ಪದೋರ್ದಶನವಾಸಸಿ
ಚ ಶೋಣೇ
ನೇತ್ರವಿಷಪಾವಕವಿಶೇಷಿತಲಲಾಟೇ ಪಾಪಮಖಿಲಂ ಜಹಿ ಮೃಗಾಧಿಪತಿ
ಘೋಟೇ।

ಶತ್ರುಸಮೂಹವನ್ನು ತರಿದಿಕ್ಕಲೆಂದೇ ಕರಪಾಲ ಹಿಡಿದವಳು ನೀನು! ಕೆಂಪಾದ ಪಾದ-ಕೆಂಪುರಂಗಿನ ತುಟಿಗಳುಳ್ಳ ನೀನು ಕೆಂಪುವಸ್ತ್ರಗಳನ್ನು ಧರಿಸಿದ್ದೀಯೆ! ಬೆಂಕಿಯಂತೆ ಜ್ವಲಿಸುವ 3ನೆಯ ನೇತ್ರ (ಹಣೆಗಣ್ಣು) ನಿನಗಿದೆ. ಮೃಗರಾಜ ಸಿಂಹವನ್ನೇರಿರುವ ನೀನು ಎಲ್ಲ ಪಾಪಗಳನ್ನು ಪರಿಹರಿಸು!

ಮರುದಿನ ನನ್ನ ಹಿತೈಷಿಗಳ ಸಲಹೆಯಂತೆ ಹಂಪೆಯ ಕಡೆಗೆ ಹೊರಟೆ. ದಾರಿಯಲ್ಲಿ ಭೆಟ್ಟಿಯಾದ ಸಾಧು ಒಬ್ಬರ ಸಂಗಡ ಪಯಣಿಸುತ್ತ ಮಧ್ಯೆ ಧರ್ಮ ಶಾಲೆಯೊಂದರಲ್ಲಿ ಉಳಿದುಕೊಳ್ಳಲೆಂದು ಇಬ್ಬರೂ ಅಲ್ಲಿಗೆ ಹೋದೆವು. ಅಷ್ಟ ರಲ್ಲಿಯೇ ನಮ್ಮನ್ನು ಗಮನಿಸಿದ ಪೊಲೀಸ್ ಅಧಿಕಾರಿಯೊಬ್ಬ ನಾವಿಬ್ಬರೂ ನಮ್ಮ ಪೂರ್ವೋತ್ತರ ವಿಷಯಗಳ ವಿವರಣೆ ನೀಡಲು ಪೊಲೀಸ್ ಠಾಣೆಯಲ್ಲಿಯೇ ಉಳಿದುಕೊಳ್ಳಬೇಕೆಂದು ನಿರ್ಬಂಧಿಸಿದ. ಹೀಗೆ ನಿರ್ಬಂಧಕ್ಕೆ ಒಳಗಾಗಿ ರಾತ್ರಿ ಯನ್ನು ಪೋಲೀಸ್ ಠಾಣೆಯಲ್ಲಿ ಕಳೆಯಬೇಕಾಯಿತು. ಮರುದಿನ ಬೆಳಿಗ್ಗೆ ನಮ್ಮ ವಿಚಾರಣೆ ನಡೆಯಿತು. ಆಂಧ್ರ ಪ್ರದೇಶದವನಾದ ಆ ಪೋಲೀಸ್ ಅಧಿಕಾರಿಯ ಪ್ರಶ್ನೆಗಳಿಗೆ ನಾವು ನೀಡಿದ ಸಮಜಾಯಿಷಿಯಿಂದ ಆತನಿಗೆ ನನ್ನ ಮೇಲೆ ಇದ್ದ ತಪ್ಪುಕಲ್ಪನೆ ಪರಿಹಾರವಾದುದಷ್ಟೇ ಅಲ್ಲ ! ನನ್ನ ಮಾತಿನ ಸರಣಿ ಆತನ ಮೇಲೆ ತುಂಬಾ ಪ್ರಭಾವ ಉಂಟು ಮಾಡಿತು. ಬಹುಶಃ ಅದರಿಂದಲೇ ಇರಬೇಕು ! ಆತ ನನ್ನನ್ನು ಕುರಿತು "ಕಾವ್ಯಕಂಠ ಗಣಪತಿ ಶಾಸ್ತ್ರಿ ನಿಮಗೆ ತಿಳಿದಿರಬೇಕಲ್ಲವೆ ?" ಎಂದು ಕೇಳಿದ. ನಾನು ಹೇಳಿದೆ :—

ಯಸ್ಮಿನ್ ತಪಃ ಸಹಚರಂ ಮಹಿತಂ ಸುವೃತ್ತಂ ಬಾಲ್ಯೇ ಸ್ವಯಂ ಸುಕವಿತಾ
ವಶಿತಾಽವೃಣಾದ್ಯಂ ।
ಆಜನ್ಮಸಿದ್ಧ ವಚಸಂ ಯಮುಶಂತಿ ಸಂತೋ ಜಾನೆ ಜನಂ ಗಣಪತಿಂ ಮುನಿ
ಪುಂಗವಂ ತಂ ॥

ತಪಸ್ಸಿನ ಒಡನಾಡಿಯಾಗಿ ಪ್ರಖ್ಯಾತಿ ಪಡೆದ-ಬಾಲ್ಯದಲ್ಲಿಯೇ ಉತ್ತಮ ಕವಿತಾಶಕ್ತಿಯ ಒಲುಮೆಗೆ ಪಾತ್ರನಾಗಿ ವಶೀಕರಿಸಿಕೊಂಡ—ಹುಟ್ಟಾವಾಗ್ಮಿಯೆಂದು ಸಜ್ಜನರ ಪ್ರಶಂಸೆಗೆ ಪಾತ್ರನಾದ ಆ ಮುನಿಶ್ರೇಷ್ಠ ಗಣಪತಿಯನ್ನು ನಾನು ಬಲ್ಲೆ.

ಯಃಕಾವ್ಯಕಂಠಪದಲಾಂಛನಪಂಡಿತೇಂದ್ರೋ ಯೋ ವಿಶ್ರುತಃ ಶ್ರುತಧರಃ
ಶ್ರುತವೃತ್ತಕೀರ್ತಿಃ ।
ಯಸ್ಮಿನ್ನತಾ ವಿಲಸಿತಾ ಬಹುಧಾ ಚ ವಾಣೀ ಸೋಽಯಂ ತವಾಸ್ಮಿ ಪುರ ಏವ
ಯಥಾಪರಾಧೀ ॥

ಯಾರು ಕಾವ್ಯಕಂಠ ಪ್ರಶಸ್ತಿಯಿಂದ ಅಲಂಕರಿಸಲ್ಪಟ್ಟ ವಿದ್ವನ್ಮಣಿಯೋ, ಯಾರು ಬಹುಶ್ರುತನೆಂಬ ಕೀರ್ತಿಗೆ ಪಾತ್ರನೋ, ಯಾರಲ್ಲಿ ಆ ವಾಗ್ದೇವತೆಯು ಅನುರಕ್ತಳಾಗಿ ಬಹು ಬಗೆಯ ವಿಲಾಸ-ವೈಭವಗಳನ್ನು ತೋರಿಸುತ್ತಿರುವಳೋ ಆ ನಾನೇ ಈಗ ನಿಮ್ಮ ಮುಂದೆ ಅಪರಾಧಿ ಸ್ಥಾನದಲ್ಲಿ ನಿಂತಿದ್ದೇನೆ.

ಸಜ್ಜನನಾದ ಆ ಅಧಿಕಾರಿಗೆ ನನ್ನನ್ನು ನೋಡಬೇಕೆಂಬ ಹಂಬಲ ಬಹುಕಾಲದಿಂದ ಇತ್ತು. ಇದೀಗ ನನ್ನ ಮಾತುಗಳನ್ನು ಕೇಳುತ್ತಿದ್ದಂತೆ ಅನಿರೀಕ್ಷಿತವಾಗಿ ಅವನ ಆಶೆ ಈಡೇರಿದುದರಿಂದ ಅವನಿಗೆ ಆದ ಆನಂದ–ಆಶ್ಚರ್ಯಗಳಿಗೆ ಪಾರವೇ ಇರಲಿಲ್ಲ. "ನನ್ನಿಂದ ತಮಗೆ ತುಂಬಾ ಅಪಚಾರವಾಗಿದೆ. ದಯಮಾಡಿ ಕ್ಷಮಿಸಿ" ಎನ್ನುತ್ತ ಪ್ರಣಾಮ ಸಲ್ಲಿಸಿದ ಆತನನ್ನು ಮನ್ನಿಸಿ ಆತನ ಕೋರಿಕೆಯಂತೆ ಕೆಲವು ದಿನ ಅಲ್ಲಿಯೇ ಇದ್ದು ಮಂಗಳಕರವಾದ ಮಂತ್ರವೊಂದರ ಉಪದೇಶ ನೀಡಿ ನನ್ನ ಪ್ರಯಾಣ ಮುಂದುವರಿಸಿದೆ.

ವಿರೂಪಾಕ್ಷಪುರ (ಹಂಪೆ) ವನ್ನು ಸೇರಿ ಸ್ವಲ್ಪ ಕಾಲ ಅಲ್ಲಿ ತಪೋ ನಿರತನಾಗಿ ಇದ್ದೆ. ಅಲ್ಲಿಂದ ಹೊರಟು ಶ್ರೇಷ್ಠ ಕ್ಷೇತ್ರವೆಂದು ಹೆಸರಾಂತ "ಮಾವುಲಿ"ಯನ್ನು ತಲುಪಿ 3 ತಿಂಗಳು ಧ್ಯಾನಾಸಕ್ತನಾಗಿ ಅಲ್ಲಿಯೇ ಉಳಿದೆ. ಅಲ್ಲಿ "ದ್ರಾವಿಡರಾಜ ಯೋಗಿ" ಎಂದು ಪ್ರಖ್ಯಾತಿಗಳಿಸಿದೆ.

ಇಲ್ಲಿ ಒಂದು ರಾತ್ರಿ ಭಗವತಿಯು 3 ವರ್ಷದ ಬಾಲಕಿಯ ರೂಪದಲ್ಲಿ ಕಾಣಿಸಿಕೊಂಡು ಭವಿಷ್ಯ ಸೂಚಕ ರಹಸ್ಯವೊಂದನ್ನು ನನಗೆ ತಿಳಿಸಿದಳು. ಈ ನಡುವೆ ವೆಲ್ಲೂರಿನಲ್ಲಿ ನನ್ನ ಕಟುವಿರೋಧಿಯಾಗಿದ್ದ ಪೋಲೀಸ್ ಅಧಿಕಾರಿ ನಿಧನಹೊಂದಿದ ವಿಷಯ ತಿಳಿಯಿತು. ದುಷ್ಕರ್ಮಿಯಾಗಿದ್ದ ಆತ ಕೆಟ್ಟ ಹುಣ್ಣಿನಿಂದ ವೇದನೆಪಡುತ್ತ ಶಸ್ತ್ರ ಚಿಕಿತ್ಸೆಯಿಂದಲೂ ಉಪಯೋಗವಾಗದೆ ತೀರಿಕೊಂಡಿದ್ದ.

ಮಾವುಲಿ ಕ್ಷೇತ್ರದಿಂದ ವಾಪಸು ಮನೆಗೆ ಬಂದು 1 ತಿಂಗಳು ಇದ್ದು ನಂತರ ದೂರದ ದಕ್ಷಿಣಕ್ಷೇತ್ರಗಳ ಯಾತ್ರೆಗಾಗಿ ಸಹೋದರ ಶಿವರಾಮನೊಡನೆ ಪ್ರಯಾಣ ಬೆಳೆಸಿದೆ. ಪಾಪನಾಶ–ಭಕ್ತ ವತ್ಸಲ ಮುಂತಾದ ಸ್ಥಳಗಳಲ್ಲಿ ಸ್ವಲ್ಪ ದಿನ ಇದ್ದೆ. ನನ್ನ ಪ್ರಿಯ ಶಿಷ್ಯರು ಕೆಲವರು ಅಲ್ಲಿ ನನ್ನನ್ನು ಸಂಧಿಸಿದರು. ಅಲ್ಲಿಂದ ಜಂಬುಕೇಶ್ವರಕ್ಕೆ ಬಂದು ದೇವಾಲಯದ ರಮಣೀಯ ಉಪವನದ ನಡುವೆ ಇರುವ ಭೂದೇವಿಯ ಗುಡಿಯಲ್ಲಿ ಇದ್ದೆ. ರಾಮಕೃಷ್ಣ ವಿದ್ಯಾರ್ಥಿ ಎಂಬ ನನ್ನ ಶಿಷ್ಯನೊಬ್ಬ ನನ್ನ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಂಡ.

ಹಿಂದೆ ನಾನು ಅರುಣಾಚಲದಲ್ಲಿ ಸಿದ್ಧಪಡಿಸಿದ "ಉಮಾ ಸಹಸ್ರ"ದ ಹಸ್ತಪ್ರತಿಯು ರೇಣುಕಾ ಕ್ಷೇತ್ರ ಷಡ್ವೈವೀಡುವಿನಲ್ಲಿ ನಾನು ಇದ್ದಾಗ ಭೂಗರ್ಭದಲ್ಲಿ ಹೂತುಹೋಗಿಯೋ ಏನೋ ಅಂತೂ ನಷ್ಟವಾಗಿ ಹೋಗಿತ್ತು. (ಅಂದರೆ:-

ಗಣಪತಿ ಮುನಿಗಳು ಹಿಂದೆ ಈ ಕ್ಷೇತ್ರದಲ್ಲಿ ಇದ್ದಾಗ ಅವರು ವಿದ್ರೋಹಿ ಚಟುವಟಿಕೆ ನಡೆಸುತ್ತಿದ್ದಾರೆಂಬ ಅಪಪ್ರಚಾರ ನಡೆದು ಸರ್ಕಾರದ ಅಧಿಕಾರಿಗಳು ಗುಪ್ತ ಪೊಲೀಸರನ್ನು ಅಲ್ಲಿಗೆ ಕಳಿಸಿದ್ದ ವಿಷಯ ಈ ಹಿಂದೆ ಬಂದಿದೆ. ಸುಂದರ ಪಾಂಡ್ಯನೆಂಬ ಪ್ರಭಾವಶಾಲೀ ವ್ಯಕ್ತಿಯೊಬ್ಬ 'ಗಣಪತಿ ಮುನಿಗಳ ಉಮಾ ಸಹಸ್ರಂ ಕ್ರಾಂತಿಯನ್ನು ಪ್ರಚೋದಿಸುವ ಭಾವನೆಗಳನ್ನು ಒಳಗೊಂಡಿದ್ದು ಅದನ್ನು ವಶಪಡಿಸಿಕೊಳ್ಳಬೇಕೆಂದು' ಪೊಲೀಸರಿಗೆ ಪ್ರಚೋದನೆ ನೀಡಿದ್ದ. ಗುಪ್ತ ಪೊಲೀಸರಿಬ್ಬರು ಯಾತ್ರಿಕರ ಸೋಗಿನಲ್ಲಿ ದೇವಾಲಯಕ್ಕೆ ಬಂದಾಗ ಗಣಪತಿ ಶಾಸ್ತ್ರಿಗಳ ಬಳಿ ಉಮಾಸಹಸ್ರದ ಹಸ್ತ ಪ್ರತಿ ಎದುರಿಗೇ ಇತ್ತು. ಗುಪ್ತಚಾರರ ವಿಷಯ ಮೊದಲೇ ಊಹಿಸಿದ್ದ ಶಾಸ್ತ್ರಿಗಳು ಅದೇ ವೇಳೆಗೆ ಅಲ್ಲಿಗೆ ಬಂದ ದೊರೈ ಸ್ವಾಮಿ ಶಾಸ್ತ್ರಿಯೆಂಬ ತಮ್ಮ ಶಿಷ್ಯನಿಗೆ ಸಂಜ್ಞೆಯ ಮೂಲಕ ಈ ಹಸ್ತ ಪ್ರತಿಯನ್ನು ಸುರಕ್ಷಿತ ಸ್ಥಳಕ್ಕೆ ಒಯ್ಯಲು ಸೂಚಿಸಿದರು. ಯಾರಿಗೂ ಸಂದೇಹ ಬಾರದಂತೆ ಚಾಕಚಕ್ಯತೆಯಿಂದ ಪುಸ್ತಕವನ್ನು ಒಯ್ದ ದೊರೈಸ್ವಾಮಿಯವರು ಅದನ್ನು ಭದ್ರವಾಗಿ ಕಾದಿರಿಸಬೇಕೆಂಬ ಉತ್ಸಾಹದ ಭರದಲ್ಲಿ ಕಮಂಡಲು ನದಿಯ ತೀರದ ಮರಳು ದಿಣ್ಣೆಯಲ್ಲಿ ಆಳವಾದ ಹೊಂಡ ತೆಗೆದು ಅಡಗಿಸಿಟ್ಟರು. ಆದರೆ ಅದೇ ರಾತ್ರಿ ಭಾರೀ ಮಳೆ ಬಿದ್ದು ನದಿಯ ನೀರು ಉಕ್ಕಿ ಹರಿದುದರಿಂದ ಈ ಗ್ರಂಥವೂ ಪ್ರವಾಹದ ಭರದಲ್ಲಿ ಕೊಚ್ಚಿ ಹೋಯಿತು. ಗಣಪತಿಶಾಸ್ತ್ರಿಗಳು ತಮ್ಮ ಗುರುದೇವ ಶ್ರೀರಮಣರಿಗೆ ಹೀಗೆ ಸಂದೇಶ ಕಳಿಸಿದರು.:-"ನಾನು ಉಮಾ ಸಹಸ್ರವನ್ನು ರಚಿಸಿ ಯಾವ ಶಕ್ತಿದೇವತೆಯನ್ನು ಸ್ತುತಿಸಿ ಜಾಗೃತಗೊಳಿಸಿದ್ದೆನೋ ಅವಳು ಮಾತೆ ರೇಣುಕಾ ಅಲ್ಲದೆ ಬೇರೆ ಅಲ್ಲ. ಅವಳೇ ಸಮಸ್ತ ಸೃಷ್ಟಿಯಲ್ಲಿಯೂ ಕುಂಡಲಿನೀ ಶಕ್ತಿಯಂತೆ ಜೀವಸತ್ವಳಾಗಿ ಕೆಲಸ ಮಾಡುತ್ತಿರುತ್ತಾಳೆ. ಉಮಾ ಸಹಸ್ರಂ ಹಸ್ತಪ್ರತಿ ನಾಶವಾಗಿ ಹೋಗಿದ್ದರೂ ಅವಳ ಕೃಪೆಯಿಂದ ಅದು ನನ್ನ ನೆನಪಿನ ಭಂಡಾರದಲ್ಲಿ ಸುರಕ್ಷಿತವಾಗಿ ನೆಲೆ ನಿಂತಿದೆ.) ಈಗ ಅದರ ಪದ್ಯಗಳನ್ನು ಸಾಧ್ಯವಾದಷ್ಟು ನೆನಪಿಗೆ ತಂದುಕೊಂಡು 700 ಶ್ಲೋಕಗಳ ಉಮಾ ಸಪ್ತತಿಯನ್ನು ಪುನಃ ರಚಿಸಿದೆ. ಸಮಸ್ತ ಬ್ರಹ್ಮಾಂಡ ನಾಯಕಿಯಾದ ದೇವಿಯ ಸನ್ನಿಧಿಯಲ್ಲಿಯೇ ಈ ರಚನೆ ಪೂರ್ಣಗೊಂಡಿತು.

ಅಲ್ಲಿಂದ ಹೊರಟು ಆದಿಪುರಕ್ಕೆ (ತಿರುವೊಟ್ಟಿಯೂರು) ಬಂದೆ. ಅಲ್ಲಿ ನನ್ನ ಶಿಷ್ಯ ಕಪಾಲಿ ಶಾಸ್ತ್ರಿಯು ಅನೇಕ ಪ್ರಾಚೀನ ಗ್ರಂಥಗಳನ್ನು ಅವಲೋಕನೆಗಾಗಿ ನನಗೆ ಒದಗಿಸಿದ. ಅಲ್ಲಿ ನಾನು ಇದ್ದ 17 ದಿನಗಳು ಪೂರ್ತಿ ಈ ಗ್ರಂಥಗಳ ಅವಲೋಕನೆಯಲ್ಲಿಯೇ ಕಳೆದವು.

ಈ ಗ್ರಂಥಗಳ ಪೈಕೀ 2 ನ್ನು ವಿಮರ್ಶಾಪೂರ್ವಕ ಮನನಮಾಡಿದೆ. ಒಂದು ವಿಷ್ಣು ಪುರಾಣ:- ಇದು ಕೇವಲ ಗೂಢ ತತ್ತ್ವಗಳನ್ನಷ್ಟೇ ಪ್ರತಿಪಾದಿಸುತ್ತಿಲ್ಲ. ಇದು ಪುರಾತನ ಚಾರಿತ್ರಿಕ ವಿಜ್ಞಾನಕ್ಕೂ ಉಪಯುಕ್ತವಾಗಿದೆಯೆಂಬುದನ್ನು ಕಂಡುಕೊಂಡೆ. ಇನ್ನೊಂದು ಸಾಯಣಾಚಾರ್ಯರಿಂದ ರಚಿತವಾದ ಸಾಮವೇದ ಭಾಷ್ಯ. ಇದು ಮುಂದೆ ನಾನು ಋಗ್ವೇದಾಧ್ಯಯನ-ಅದರ ಮಂತ್ರಾರ್ಥ ವಿಚಾರಗಳಲ್ಲಿ ತೊಡಗಿದ ಕಾಲಕ್ಕೆ ತುಂಬಾ ಉಪಯುಕ್ತವಾಯಿತು.

ಆದಿ ಪುರಂನಿಂದ ಶಿಷ್ಯ ವಾಸುದೇವನೊಡನೆ ಹೊರಟು ತಿರುತ್ತಣಿಗೆ ಬಂದು ಅಲ್ಲಿಂದ 4 ಮೈಲಿ ದೂರದಲ್ಲಿ ನದೀ ತೀರದಲ್ಲಿ ನೆಲೆಸಿ ಕೆಲವು ದಿನ ಧ್ಯಾನ್ಯವನ್ನು ಆಚರಿಸಿದೆ. ಆವೇಳೆಗೆ ನನ್ನ ಮಗ ಮಹಾ ದೇವನಿಗೆ ಉಪನಯನದ ವಯಸ್ಸು ಬಂದಿತ್ತು. ಊರಿಗೆ ಹೋಗಿ ಮಗನೊಡನೆ ಅರುಣಾಚಲಕ್ಕೆ ತೆರಳಿ ಮಹರ್ಷಿ ರಮಣರ ಆಶೀರ್ವಾದ ಪಡೆದು ಮಗನಿಗೆ ಗಾಯತ್ರೀ ಮಂತ್ರೋಪದೇಶ ನೀಡಿದೆ. ಆದೇ ಸಂದರ್ಭದಲ್ಲಿ ಮದರಾಸಿನ ನನ್ನ ಅಭಿಮಾನಿಗಳ ಕೋರಿಕೆಯಂತೆ 2-3 ಪ್ರವಚನಗಳನ್ನೂ ನಡೆಸಿದೆ.

ಹಿಂದೆ ನಾನು ವೆಲ್ಲೂರಿನಲ್ಲಿ ಅಧ್ಯಾಪಕನಾಗಿದ್ದಾಗಲೇ ಋಗ್ವೇದವನ್ನು ಯಥಾ ಕ್ರಮದಲ್ಲಿ ಅಧ್ಯಯನ ಮಾಡಿದ್ದೆ. ಸಾವಧಾನವಾಗಿ ಸಾಯಣೀಯ ಋಗ್ವೇದಭಾಷ್ಯವನ್ನೂ ಮನನ ಮಾಡಿದ್ದೆ. ಋಗ್ವೇದದಲ್ಲಿ ಪ್ರತಿಪಾದಿತವಾದ ದೇವತೆಗಳನ್ನು ಆಧರಿಸಿ ನನಗೆ ಹೊಸ ಅಂತಃಸ್ಫೂರ್ತಿಯೊಂದು ಉಂಟಾಯಿತು. ಮಂತ್ರಗಳ ಮಹಿಮೆ-ದೇವತಾಸ್ವರೂಪ-ದೇವತೆಗಳ ಅನುಗ್ರಹ ಸಂಪಾದಿಸಲು ಅಗತ್ಯವಾದ ಸಾಧನಗಳು ಇವನ್ನೆಲ್ಲಾ ಅಂತರಂಗಿಕ ಜ್ಞಾನದಿಂದಲೇ ವಿಚಾರಮಾಡಿ ಸರಳ ನಿಬಂಧನೆಗಳ ಸೂತ್ರವೊಂದನ್ನು ರಚಿಸಲು ಪ್ರಾರಂಭಿಸಿದೆ. ಮಹಾದೇವನ ಉಪನಯನ ಮುಗಿದ ನಂತರ ಅಭಿಮಾನೀ ಸ್ನೇಹಿತರ ಆಶಯದಂತೆ ಕೆಲವು ಕಾಲ ಮದರಾಸು ನಗರದಲ್ಲಿಯೇ ನೆಲೆಸಿದೆ.

ಆ ಸಂದರ್ಭದಲ್ಲಿ ಉಪನಿಷತ್ತುಗಳ ಶ್ಲೋಕಗಳನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸುತ್ತ ಅಲ್ಲಿ ಹೇಳಲ್ಪಟ್ಟ ಹಲವು ರಹಸ್ಯಗಳನ್ನು ಅರಿತುಕೊಂಡೆ. ಈ ವಿಷಯದಲ್ಲಿ ಕೆಲವು ಪ್ರವಚನಗಳನ್ನೂ ನೀಡಿದೆ. ಈ ಪ್ರವಚನಗಳನ್ನು ಆಸಕ್ತಿಯಿಂದ ಆಲಿಸಿದ ಶ್ರದ್ಧಾವಂತರು ಕೆಲವರು ನನ್ನನ್ನು ಏಕಾಂತದಲ್ಲಿ ಭೇಟಿಮಾಡಿ ಮಾತನಾಡಲು ಉತ್ಸುಕರಾದರು.

ಅಂತಹವರ ಪೈಕೀ ಉತ್ಸಾಹಶಾಲೀ ಹರಿಜನ ಯುವಕನೊಬ್ಬ. ಇನ್ನೂ ಹೆಚ್ಚು ತಿಳಿಯುವ ಹಂಬಲದಿಂದ ಏಕಾಂತದಲ್ಲಿ ನನ್ನ ಬಳಿಗೆ ಬಂದು ನಮಸ್ಕರಿಸಿದ. ಆತನನ್ನು ಹತ್ತಿರ ಕರೆದು ಕುಳ್ಳಿರಿಸಿಕೊಂಡು ಸಂಭಾಷಣೆ ನಡೆಸಿದೆ. ಆತ ತುಂಬ ವಿಚಾರ ಶೀಲ ವ್ಯಕ್ತಿಯೆಂಬುದು ನನಗೆ ಮನವರಿಕೆಯಾಯಿತು. ಹುಟ್ಟಾ ಅಂತ್ಯಜ (ಅಸ್ಪೃಶ್ಯ)ನಾಗಿದ್ದರೂ ಅನೇಕ ಉತ್ತಮ ರಹಸ್ಯಗಳನ್ನು ಅವನಿಗೆ ತಿಳಿಸಿ ಹೇಳಿದೆ. ಆತನು ಸ್ವತಃ ಶ್ರದ್ಧೆ ವಹಿಸಿ ದುರಾಚಾರಗಳನ್ನೆಲ್ಲಾ ಬದಿಗೊತ್ತಿ ಸದಾಚಾರಸಂಪನ್ನನೆನಿಸಿ ತನ್ನ ಕುಲಬಾಂಧವರ ಮುಂದಾಳು ಎನಿಸಿಕೊಂಡ. ದೃಢ ಮನಸ್ಸು-ಪ್ರಾಮಾಣಿಕತೆಗಳಿಂದ ಒಳ್ಳೆಯ ಅಧಿಕಾರ ಸ್ಥಾನ ಪಡೆದು ಚೆನ್ನಾಗಿ ಬದುಕಿದ.

ಮದರಾಸು ನಗರದಲ್ಲಿ ಒಂದು ವರ್ಷ ವಾಸವಿದ್ದೆ. ಅಲ್ಲಿಯ ಗೊಂದಲಮಯ ಜೀವನ ನನಗೆ ಬೇಸರವುಂಟುಮಾಡಿತು. ತಪಸ್ಸಿಗಾಗಿ ಬೇರೆ ಸ್ಥಳಕ್ಕೆ ಹೋಗಲು ನಿರ್ಧರಿಸಿ ಹೆಂಡತಿ-ಮಗಳೊಡನೆ ಪವಿತ್ರ ಕಾಲಟೀಕ್ಷೇತ್ರಕ್ಕೆ ಬಂದೆ.

ಪೂಜ್ಯರೂ-ಪ್ರಖ್ಯಾತರೂ ಆದ ಶ್ರೀ ಶಂಕರರು ಜನ್ಮತಳೆದ ಪುಣ್ಯ ಭೂಮಿ ಇದು. ಗುರು ಶ್ರೇಷ್ಠರ ಮಹಿಮಾವಿಶೇಷದಿಂದ ಕೂಡಿದ ಈ ಕಾಲಟಿಯಲ್ಲಿ ನಾವು 40 ದಿನ ಸುಖವಾಗಿ ಇದ್ದೆವು. ನನ್ನ ತಮ್ಮ ಶಿವರಾಮನೂ ಊರಿನಿಂದ ಬಂದು ನಮ್ಮನ್ನು ಕೂಡಿಕೊಂಡ.

ಆದರೆ ಇದೇ ಸಂದರ್ಭದಲ್ಲಿ ಅಕ್ಕಸಾಲಿಗನೊಬ್ಬನು ಕನ್ಯಾ ಕುಮಾರಿ ಕಡೆಯ ಬ್ರಾಹ್ಮಣ ಹುಡುಗಿಯೊಬ್ಬಳನ್ನು ಹಾರಿಸಿಕೊಂಡು ಹೊರಟಿದ್ದು ನಾನೇ ಆ ವ್ಯಕ್ತಿ ಇರಬೇಕೆಂದು ಕೆಲವು ಕಿಡಿಗೇಡಿಗಳು ವದಂತಿ ಹಬ್ಬಿಸಿ ಅಪಪ್ರಚಾರಕ್ಕೆ ತೊಡಗಿದರು. ಇದರಿಂದ ಜಿಗುಪ್ಸೆಗೊಂಡ ನನ್ನ ಸೌಭಾಗ್ಯವತಿಯು ಕೂಡಲೇ ಈ ಸ್ಥಳ ಬಿಟ್ಟು ಹೊರಡೋಣವೆಂದು ಒತ್ತಾಯಮಾಡಿದಳು.

ಯಾವ ಸ್ಥಳಕ್ಕೆ ಹೋದರೆ ಉತ್ತಮ ಎಂಬುದನ್ನು ಯೋಚಿಸುತ್ತಾ ಕ್ಷಣಕಾಲ ಧ್ಯಾನಾಸಕ್ತನಾದ ನನಗೆ ರಾಮಾಯಣದ ಉತ್ತರಕಾಂಡದಲ್ಲಿಯ ಈ ಅರ್ಧ ಶ್ಲೋಕ ನೆನಪಿಗೆ ಬಂತು." ಸ ಘೋರಂ ತಪ ಅತಿಷ್ಠದ್ಗೋಕರ್ಣೇ ರಘು ನಂದನಃ" (ಗೋಕರ್ಣದಲ್ಲಿ ಆ ರಾಮಚಂದ್ರನು ಉಗ್ರ ತಪಸ್ಸನ್ನಾಚರಿಸಿದನು) ಹಾಗೆಯೇ ರಘುವಂಶ ಕಾವ್ಯದ 8ನೇ ಸರ್ಗದ ಶ್ಲೋಕಾರ್ಥವನ್ನು ಜ್ಞಾಪಿಸಿಕೊಂಡೆ. ಇಂತಹ ಪುರಾತನ-ಪವಿತ್ರಕ್ಷೇತ್ರಕ್ಕೆ ಮಂಗಳೂರಿನಿಂದ ನೌಕೆಯಲ್ಲಿ ಪಯಣಿಸಲು ನಿರ್ಧರಿಸಿ ನಾವೆಲ್ಲರೂ ಮಂಗಳೂರಿಗೆ ಬಂದೆವು.

ಅಲ್ಲಿ 'ರಾವ್' ಎಂಬವರ ಮನೆಯಲ್ಲಿ ನಮ್ಮ ಪರಿವಾರಕ್ಕೆ ವಿಶೇಷ ಆದರ-ಆತಿಥ್ಯ ಲಭಿಸಿತು. ಈ ರಾವ್ ಎಂಬ ವ್ಯಕ್ತಿ ತುಂಬಾ ಧಾರಾಳಿ. ಪ್ರತಿದಿನ ಅತಿಥಿಗಳಾಗಿ ಬರುತ್ತಿದ್ದ ಅನೇಕ ಮಂದಿ ಬ್ರಾಹ್ಮಣರಿಗೆ ಊಟ-ಉಪಚಾರ ನಡೆಯುತ್ತಿತ್ತು. ಆದರೆ ಉದಾರಿಯೂ ವಿದ್ಯಾವಂತನೂ ಆದ ಈ ವ್ಯಕ್ತಿ ಮೋಕ್ಷ ಸಾಧನೆಯ ವಿಷಯದಲ್ಲಿ ತೀರಾ ವಿಚಿತ್ರಕಲ್ಪನೆಯನ್ನು ಹೊಂದಿದ್ದರು.

ಉತ್ತಮ ಕವಿ, ತಪಸ್ವಿ, ಮಂತ್ರಶಾಸ್ತ್ರಪರಿಣತ ಎಂಬಿತ್ಯಾದಿ ನನ್ನ ವೃತ್ತಾಂತಗಳನ್ನು ಹೇಗೋ ಸಂಗ್ರಹಿಸಿದ ಆ ರಾಯರು ನನ್ನೊಡನೆ ಮಂತ್ರ ಶಾಸ್ತ್ರದ ಕೆಲವು ವಿವರಗಳನ್ನು ಕೇಳಿದರು. ಅವರ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡಿದೆ, ಆಗ ಅವರು ನನ್ನೊಡನೆ ಹೇಳಿದರು.:- "ನನ್ನ ಜನ್ಮಾಂತರ ಪುಣ್ಯವಿಶೇಷದಿಂದಲೋ, ಸದ್ಗುರುಗಳ ಅನುಗ್ರಹ ಭಾಗ್ಯದಿಂದಲೋ, ಈಶ್ವರ ಕೃಪೆಯಿಂದಲೋ ಅಂತೂ ನನಗೆ ಅಷ್ಟು ದಪ್ಪವಲ್ಲದ ಸಮಕಟ್ಟಿನ ಸುಪುಷ್ಟ ಶರೀರ-ಎಷ್ಟೇ ಪ್ರಯತ್ನಿಸಿದರೂ ಕರಗಿಸಲಾಗದ ವಿಪುಲ ಸಂಪತ್ತು ಲಭಿಸಿವೆ. ಮೋಕ್ಷ ಸಾಧನೆಯ ಗುಟ್ಟನ್ನು ನಾನು ಅರಿತಿದ್ದೇನೆ. ಅದರಂತೆ ಸಾಧನೆ ಪೂರೈಸಲು ಸಾಧ್ಯವಾದರೆ ನಾನು ಮುಕ್ತನಾಗಬಲ್ಲೆ. ಇದರಲ್ಲಿ ಎಳ್ಳುಕಾಳಿನಷ್ಟು ಸಂದೇಹ ಬೇಡ!" ಎಂದು ತಮ್ಮ ಅನುಭವ ಕಥೆಯನ್ನು ಮುಗಿಸಿದರು.

ನಿರ್ವಂಚನೆಯ ನಡೆಯುಳ್ಳವನೂ, ಉದಾರಿಯೂ ಆಗಿದ್ದರೂ ಮುಂದಿನ ಜನ್ಮದಲ್ಲಿ ಪಡೆಯಬೇಕಾದ ಗತಿಗೆ ತಕ್ಕಂತೆ ಈತ ಮನುಷ್ಯ ಸಹಜವಾದ ಸಂಸ್ಕಾರದಿಂದ ಈ ಬಗೆಯ ವಿಕೃತ ಮನಸ್ಸು ಹೊಂದಿರಬೇಕು ಎಂದು ನಿರ್ಧರಿಸಿದೆ.

ಮುಂದಿನ ಪಯಣಕ್ಕೆ ಆಗತ್ಯವಿದ್ದ ಹಣ ನನ್ನ ಗ್ರಾಮದಿಂದ ಬರಬೇಕಾದುದನ್ನು ನಿರೀಕ್ಷಿಸಿ ಕೆಲವು ದಿನ ಮಂಗಳೂರಿನಲ್ಲಿಯೇ ಇದ್ದೆ. ಹಣ ದೊರೆತೊಡನೆ ಗೋಕರ್ಣದ ಕಡೆಗೆ ಹೊರಟು ನಡುವೆ ಉಡುಪಿ ಕ್ಷೇತ್ರಕ್ಕೆ ಬಂದೆ. ಮದರಾಸಿನಲ್ಲಿ ನೆಲೆಸಿರುವ ನನ್ನ ಶಿಷ್ಯ ವಾಸುದೇವನು ಉಡುಪಿ ಸಮೀಪದ ಪಡುಭಾಂಡೇಶ್ವರ ಸ್ಥಳದವನಾದುದರಿಂದ ಅವನ ಬಂಧುಗಳ ಕೋರಿಕೆಯಂತೆ ಅಲ್ಲಿಗೆ ಹೋಗಬೇಕಾಯಿತು. ಅವರೆಲ್ಲರ ಆತ್ಮೀಯ ಆದರ-ಆತಿಥ್ಯದಲ್ಲಿ ಕೆಲವು ದಿನ ಅಲ್ಲಿ ಉಳಿದುಕೊಂಡೆವು.

ಸಹೃದಯಿಗಳೂ, ಶಾಸ್ತ್ರವೇತ್ತರೂ ಆದ ಸ್ಥಳೀಯ ಪಂಡಿತವರ್ಗ ನನ್ನ ಆಶುಕವಿತಾ ಸಾಮರ್ಥ್ಯ, ಸಾಹಿತ್ಯಶಕ್ತಿ, ದರ್ಶನಶಾಸ್ತ್ರ ನೈಪುಣ್ಯಗಳನ್ನು ತಿಳಿ

ಷಲು ಕುತೂಹಲಿಗಳಾಗಿದ್ದರು. ಅವರ ಸಂತೋಷಕ್ಕಾಗಿ ಘಂಟಾಶತಕ ರಚಿಸಿ (ಅಂದರೆ 1 ಘಂಟೆಯ ಅವಧಿಯಲ್ಲಿ 100 ಶ್ಲೋಕಗಳನ್ನು ಕಟ್ಟಿ) ಹಾಡಿ ತೋರಿಸಿದೆ. ಈ ಶ್ಲೋಕಶತಕದಲ್ಲಿ ಮಂಗಲಾಶಂಸನ ಪರವಾದ ಶ್ಲೋಕಗಳ ಪೈಕಿ 3ನೆಯ ಶ್ಲೋಕ ಹೀಗಿದೆ.

ಸಂಕರ್ಷಣಸ್ಯಾಂಶಮನಂತಶಕ್ತಿಂ ಅನಂತನಾಮಾನಮಮುಂ ನಮಾಮಿ।
ರಾಮಂ ತೃತೀಯಂ ರಮಣೀಯಗಾತ್ರಂ ರಾಮಾನಿವಾಸಾನನಪುಂಡರೀಕಂ॥

ಶ್ರೀಮಹಾವಿಷ್ಣುವಿನ ರೂಪಗಳಲ್ಲಿ ಒಂದಾದ ಸಂಕರ್ಷಣ ದೇವತಾಂಶವುಳ್ಳ-ಅಸಮಾನ ಸಾಮರ್ಥ್ಯಶಾಲಿಯಾದ ಹಲವು ಹೆಸರುಗಳಿಂದ ಪ್ರಸಿದ್ಧನೆನಿಸಿರುವ 3ನೆಯ ರಾಮನೂ (ಪರಶುರಾಮ1, ದಶರಥರಾಮ2, ಬಲರಾಮ3) ಮನೋಹರನೂ, ಸೌಂದರ್ಯವೇ ಆವಾಸಸ್ಥಾನವಾದ ಮುಖಕಮಲವುಳ್ಳವನೂ ಆಗಿರುವ ಈ ಬಲರಾಮನನ್ನು ನಮಿಸುತ್ತೇನೆ.

(ಈ ಮುಂದಿನ ಉಪಸಂಹಾರ ಶ್ಲೋಕಗಳು "ಪಂಡಿತಾಃ ಸಮದರ್ಶಿನಃ" ಎಂಬಂತೆ ಕಾವ್ಯಕಂಠ ಗಣಪತಿಶಾಸ್ತ್ರಿಗಳ ಸರ್ವತ್ರಸಮಭಾವ ಧೀರೋದಾತ್ತ ಮನೋಭಾವಗಳ ಪರಿಚಯ ಮಾಡಿಕೊಡುತ್ತವೆ: ಅನುವಾದಕ)

ಋಷಿಭಿರ್ವಾಮದೇವಾದ್ಯೈರ್ಯದ್ದೃಷ್ಟಂ ಮಂತ್ರದರ್ಶಿಭಿಃ।
ತಸ್ಯ ಶಾಸ್ತ್ರಸ್ಯ ಸಾರೋಽಯಂ ಮಯಾ ಸಂಗೃಹ್ಯ ಕೀರ್ತಿತಃ॥

ಮಹರ್ಷಿ ವಾಮದೇವರೇ ಮೊದಲಾದ ಮಂತ್ರದ್ರಷ್ಟಾರರು ಕಂಡುಕೊಂಡು ಪ್ರಕಟಿಸಿದ ಶಾಸ್ತ್ರದ ಸಾರವನ್ನೇ ಸಂಗ್ರಹಿಸಿ ನಾನು ಇಲ್ಲಿ (ಈ ಘಂಟಾಶತಕದಲ್ಲಿ) ಹೇಳಿದ್ದೇನೆ.

ಅಸ್ಮಾಭಿಃ ಸಕಲೈರ್ಮಾನ್ಯೋ ಭಗವಾನ್ ಬಾದರಾಯಣಃ।
ಏನಾರ್ಥವಂತಿ ಸೂತ್ರಾಣಿ ಚಕ್ರಿರೇ ತತ್ತ್ವದರ್ಶಿನಾ॥

ತತ್ವಾರ್ಥಪೂರ್ಣವಾದ ಸೂತ್ರಗಳನ್ನು ರಚಿಸಿದ ಭಗವಾನ್ ಬಾದರಾಯಣನು ನಮ್ಮೆಲ್ಲರ ಗೌರವಕ್ಕೆ ಪಾತ್ರನಾಗತಕ್ಕವನು.

ಸ ಚಾಪಿ ಭಗವಾನ್ ಮಾನ್ಯಃ ಶಂಕರೋ ವಿದುಷಾಂ ವರಃ ।
ಯೇನ ಭೇದಮತಿರ್ಧೂತಾ ಜೀವಾತ್ಮಪರಮಾತ್ಮಯೋಃ ॥

ಜೀವಾತ್ಮ ಪರಮಾತ್ಮ ಮುಂತಾಗಿ ಭೇದಭಾವವನ್ನೇ ತೊಡೆದುಹಾಕಿದ ಆ ವಿದ್ವತ್‌ಶ್ರೇಷ್ಠ ಶ್ರೀಶಂಕರರು ನಮಗೆಲ್ಲರಿಗೂ ವಂದನೀಯರು.

ಮಾನ್ಯಃ ಸ ಯತಿರಾಜೋಽಪಿ ಪ್ರಪತ್ತಿರ್ಯೇನ ದರ್ಶಿತಾ।
ವಿಚಾರ್ಯ ಸಕಲಂ ಶಾಸ್ತ್ರಂ ಭಕ್ತಾನುಗ್ರಹಕಾಂಕ್ಷಯಾ॥

ಭಕ್ತರನ್ನು ಅನುಗ್ರಹಿಸುವ ಉದ್ದೇಶದಿಂದ ಎಲ್ಲ ಶಾಸ್ತ್ರಗಳನ್ನೂ ವಿಚಾರ ಮಾಡಿ ಪ್ರಪತ್ತಿದರ್ಶನ ಮಾಡಿಕೊಟ್ಟಿರುವ ಆ ಯತಿರಾಜರೂ ನಮಗೆ ಪೂಜಾರ್ಹರು.

ಅಂಶಾವತಾರಃ ಪವನಸ್ಯ ಮಾನ್ಯೋ ಮಧ್ವಸ್ಯ ಮಾಧ್ವೀಕುಲಿತೋಕ್ತಿ
ಯುಕ್ತಃ।
ಯೋ ಭೇದಭಾವಂ ಕಥಯನ್ನರೇಷು ಸರ್ವೋತ್ತಮತ್ವಂ
ಸ್ವಭುವೋ ಬಭಾಣ॥

ವಾಯುದೇವರ ಅಂಶದಿಂದ ಜನಿಸಿ ಜೇನಿನಂತೆ ಸವಿಯಾದ ಮಾತುಗಳಿಂದ ಭೇದವಾದ (ಜೀವಾತ್ಮ-ಪರಮಾತ್ಮರ ನಡುವೆ ಭೇದ)ವನ್ನು ತನ್ನ ಪ್ರದೇಶದಲ್ಲಿ ಪ್ರತಿಪಾದಿಸಿ ಪರಮಾತ್ಮನ ಸರ್ವೋತ್ತಮತ್ವವನ್ನು ಸಾರಿದ ಮಧ್ವರು ವಂದ್ಯರು.

ಸ ಚಾಪಿ ವಲ್ಲಭಾಚಾರ್ಯೋ ಮಾನ್ಯೋ ಬುದ್ಧಿಮತಾಂ ವರಃ।
ಶುದ್ಧಾದ್ವೈತ ಮತಂ ಯೇನ ಸ್ಥಾಪಿತಂ ಧರಣೀತಲೇ॥

ಬುದ್ಧಿವಂತರಲ್ಲಿ ಶ್ರೇಷ್ಠರೆನಿಸಿ ಶುದ್ಧಾದ್ವೈತ ಮತ ಸ್ಥಾಪಿಸಿದ ಆ ವಲ್ಲಭಾಚಾರ್ಯರೂ ಪೂಜ್ಯರೇ ಸರಿ.

ಶ್ರೀಕಂಠಃ ಸ ಚ ಸನ್ಮಾನ್ಯಃ ಸರ್ವಾಗಮವಿಶಾರದಃ ।
ಯೇನ ಶೈವಮತಂ ಭೂಮ್ಯಾಂ ಯೋಗಿಶ್ಲಾಘ್ಯಂ ಪ್ರವರ್ತಿತಂ॥

ಎಲ್ಲ ಆಗಮಗಳನ್ನೂ ಅರಿತು ಯೋಗಿಗಳ ಪ್ರಶಂಸೆಗೆ ಪಾತ್ರವಾದ ಶೈವ ಮತವನ್ನು ಲೋಕದಲ್ಲಿ ಹರಡಿದ ಶ್ರೀಕಂಠರು ಗೌರವಾರ್ಹರು.

ಬ್ರಹ್ಮದಾಸ್ಯೇನ ಯೋಗೇನ ಜ್ಞಾನೇನ ಚ ಮನೀಷಿಣಃ।
ಅರ್ಚಯಂತಶ್ಚಿಂತಯಂತಃ ಪ್ರಾಪ್ನುವಂತೀತಿ ಮೇ ಮತಿಃ॥

ತಿಳಿದವರು ಭಕ್ತಿ-ಯೋಗ-ಜ್ಞಾನ-ಆರಾಧನೆ-ಧ್ಯಾನಗಳ ಸಾಧನೆಯಿಂದ ಬ್ರಹ್ಮಸಾಕ್ಷಾತ್ಕಾರ ಪಡೆಯುವರೆಂದು ನಾನು ಅಭಿಪ್ರಾಯ ಪಡುತ್ತೇನೆ.

ವೇದಾ್ ಸಶಾಸ್ತ್ರಶತಕಾ್ ಸಕಲಾನ್ವಿಚಾರ್ಯ
ಪ್ರಾಚಾಂ ಋಗಾಗಮದೃಶಾಂ ಮತಮಾದದಾನಃ।
ಕ್ಷೇತ್ರೇ ಫಣೇಶ್ವರಕಲಾಜನಿತಸ್ಯ ಪುಂಸೋಃ
ಘಂಟಾಶತಂ ಗಣಪತಿಃ ಕವಿರಾಡಕಾರ್ಷೀತ್॥

ವೇದ-ಶಾಸ್ತ್ರಗಳನ್ನೆಲ್ಲಾ ವಿಚಾರಮಾಡಿ ಪುರಾತನ ವೇದದ್ರಷ್ಟಾರರ ಅಭಿಮತಗಳನ್ನು ಗ್ರಹಿಸಿ ಕವಿವರ್ಯ ಗಣಪತಿಯು ಈ ಘಂಟಾಶತಕವನ್ನು ನಾಗರಾಜನ ಅಂಶದಿಂದ ಅವತರಿಸಿದ ಬಲರಾಮನ ಕ್ಷೇತ್ರ (ವಡಭಾಂಡೇಶ್ವರ)ದಲ್ಲಿ ರಚಿಸಿದ್ದಾನೆ.

ನನ್ನ ಹುಟ್ಟೂರಿನಲ್ಲಿ ವೃದ್ಧಾಪ್ಯದಲ್ಲಿರುವ ನಮ್ಮ ತಂದೆಯವರ ಸೇವೆ ಶುಶ್ರೂಷೆಗಳಿಗಾಗಿ ನನ್ನ ಸಹೋದರ ಶಿವರಾಮನನ್ನು ಕಳುಹಿಸುವುದು ಅಗತ್ಯವೆಂಬ ಯೋಚನೆ ಅಕಸ್ಮಾತ್ ನನಗೆ ಉಂಟಾಗಿ ಅದರಂತೆಯೇ ಮಾಡಿದೆ.

ನಾನು ಹೆಂಡತಿ-ಮಕ್ಕಳೊಡನೆ ಗೋಕರ್ಣಕ್ಕೆ ಹೊರಡುವ ಸಿದ್ಧತೆಯಲ್ಲಿದ್ದಾಗ ಸಂಭವಿಸಿದ ಘಟನೆಯೊಂದು ಹೀಗಿದೆ:-

ಉಪನಯನದ ವಯಸ್ಸಿಗೆ ಬಂದಿದ್ದ ಬಾಲಕನೊಬ್ಬನಿಗೆ ತಂದೆ ಇರಲಿಲ್ಲ. ಕಾಲ ಮೀರುತ್ತಿದ್ದರೂ ಉಪನೀತನಾಗದೆ ಉಳಿದಿರುವ ಆ ಹುಡುಗನ ಬಗ್ಗೆ ಮರುಕಗೊಂಡ ನಾನು ವಿಚಾರಿಸಿದಾಗ ಇವನ ಹೆತ್ತ ತಾಯಿಯು ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಿದ್ದರಿಂದ ಆ ಪರಿಸರದ ವೈದಿಕ ಸಮಾಜದವರು ಈ ಬಾಲಕನನ್ನೂ ಜಾತಿಕೆಟ್ಟವನೆಂದು ತೀರ್ಮಾನಿಸಿ ಜಾತಿಯಿಂದ ಬಹಿಷ್ಕರಿಸಿ ಬಿಟ್ಟಿರುವುದು ತಿಳಿಯಿತು. ಇದರಿಂದ ಸಂತಾಪಗೊಂಡ ನಾನು ವೈದಿಕ ಮುಖಂಡರೊಡನೆ

ಶಾಸ್ತ್ರೀಯವಾಗಿ ವಾದಮಾಡಿ ಜಯಗಳಿಸಿದೆ. ಶಾಸ್ತ್ರಸಮ್ಮತ ವಿಧಿ-ವಿಧಾನಗಳಿಂದಲೇ ಅವನನ್ನು ಶುದ್ಧಿಗೊಳಿಸಿ ಸಮಾಜದೊಳಗೆ ತೆಗೆದುಕೊಂಡು ಉಪನಯನವನ್ನೂ ನಿರ್ವಹಿಸಿದೆ. ಮುಂದೆ ಬೊಂಬಾಯಿಗೆ ತೆರಳಿದ ಈ ಹುಡುಗ ಸುಖವಾಗಿ ಬಾಳಿದ.

ಪ್ರಕರಣ-17

ಗೋಕರ್ಣವಾಸ-ತಪಸ್ಸು-ಶಿಷ್ಯರು-ಪ್ರವಚನ

ಅಥರೋಧಸಿ ದಕ್ಷಿಣೋದಧೇಃ ಶ್ರಿತಗೋಕರ್ಣನಿಕೇತಮೀಶ್ವರಂ।
ಉಪವೀಣಯಿತುಂ ತಮಭ್ಯಗಾತ್ .... ॥
(ರಘುವಂಶ 8–33)

(ನಂತರ ದಕ್ಷಿಣ ಸಮುದ್ರದ ದಂಡೆಯಲ್ಲಿ ಗೋಕರ್ಣಕ್ಷೇತ್ರದಲ್ಲಿ ನೆಲೆಸಿರುವ ಪರಮೇಶ್ವರನನ್ನು ವೀಣಾವಾದನದಿಂದ ಸ್ತುತಿಸಲು ಅಲ್ಲಿಗೆ ಹೋದರು)

ಸಮೀರಣೋ ನೋದಯಿತಾ ಭವೇತಿ ವ್ಯಾದಿಶ್ಯತೆ ಕೇನ ಹುತಾಶನಸ್ಯಃ॥
(ಕುಮಾರ ಸಂಭವ)

ಹವ್ಯವಾಹನ ಯಜ್ಞೇಶ್ವರನನ್ನು ಉಜ್ವಲಗೊಳಿಸುವಂತೆ ವಾಯುವಿಗೆ ನಿರ್ದೇಶ ನೀಡುವವರು ಯಾರು ?

ಮುಖರತಾಽವಸರೇ ಹಿ ವಿರಾಜತೇ. (ಭಾರವಿಃ)
(ಮಾತುಗಾರಿಕೆಯೆಂಬುದು ತಕ್ಕ ಸಂದರ್ಭದಲ್ಲಿ ಮಾತ್ರ ಶೋಭಿಸುತ್ತದೆ.)

(ಇಲ್ಲಿಂದ ಮುಂದಿನ ವಿಷಯ ಗ್ರಂಥಕರ್ತರ (ಕಪಾಲಿಶಾಸ್ತ್ರಿಗಳ) ಮಾತಿನಲ್ಲಿ ಮುಂದುವರಿದಿದೆ.)

ಗೋಕರ್ಣವು ದಕ್ಷಿಣ ಸಮುದ್ರತೀರದಲ್ಲಿ ಪುರಾಣ ಪ್ರಸಿದ್ಧವಾದ ಪುರಾತನ ಕ್ಷೇತ್ರ. ಇಲ್ಲಿ ಪರಮೇಶ್ವರನು ಮಹಾಬಲೇಶ್ವರನೆಂಬ ಹೆಸರಿನಿಂದ ಲಿಂಗರೂಪದಲ್ಲಿ ನೆಲೆಸಿದ್ದಾನೆ. ಗಣಪತಿ ಮುನಿಗಳು ಹೆಂಡತಿ-ಮಗಳೊಡನೆ ಈ ಕ್ಷೇತ್ರಕ್ಕೆ ಬಂದರು. ಆದರೆ ಮಂಗಳೂರಿನಿಂದ ಸ್ಟೀಂಬೋಟಿನಲ್ಲಿ 250ಕ್ಕೂ ಹೆಚ್ಚು ಮೈಲಿ ದೂರ

ವನ್ನು ಕ್ರಮಿಸಿ ಗೋಕರ್ಣ ತಲುಪುವಾಗ ಗಣಪತಿಮುನಿಗಳ ಆರೋಗ್ಯ ಕೆಟ್ಟಿತು. ಒಂದೆ ಸಮುದ್ರಯಾನ ಮಾಡಿ ಅಭ್ಯಾಸವಿರದ ಅವರಿಗೆ ಸಾಗರಜ್ವರ ಹಿಡಿಯಿತು. ಆದರೆ 1 ತಿಂಗಳಲ್ಲಿ ಸ್ವಸ್ಥಗೊಂಡ ಗಣಪತಿ ಮುನಿಗಳು ಮತ್ತೆ 2 ತಿಂಗಳು ಹೆಚ್ಚಿನ ಚಟುವಟಿಕೆಗಳಲ್ಲಿ ತೊಡಗಲಿಲ್ಲ. ನಂತರ ನಾಗೇಶ್ವರ ಬೀದಿಯಲ್ಲಿ ಇರುವ ವೇದವಿದ್ಯಾಪಾರಂಗತರೂ ಸಾಹಿತ್ಯಪ್ರೇಮಿಗಳೂ ಆದ ಸಜ್ಜನರ ಪರಿಚಯ ಉಂಟಾಗಿ ಇವರ ಪ್ರತಿಭೆ ಪ್ರಕಾಶಕ್ಕೆ ಬರಲು ಪ್ರಾರಂಭವಾಯಿತು. ವೆಂಕಟರಮಣರೆಂಬ ವಿದ್ವಾಂಸರ ಮನೆಯಲ್ಲಿ ಆಶ್ರಯಪಡೆದ ಗಣಪತಿ ಮುನಿಗಳ ಪಾಂಡಿತ್ಯ ಯೋಗ್ಯತೆಗಳು ಗುಟ್ಟಾಗಿ ಉಳಿಯಲು ಸಾಧ್ಯವಾಗಲಿಲ್ಲ.

ಗುಣಗ್ರಾಹಿಗಳಾದ ಅಲ್ಲಿಯ ಸಹೃದಯರು ಕ್ರಮೇಣ ಈ ಪುಣ್ಯ ಪುರುಷ ಗಣಪತಿ ಮುನಿಗಳ ಪರಿಚರ್ಯೆಯನ್ನು ತಾವಾಗಿಯೇ ಉತ್ಸಾಹದಿಂದ ನಡೆಸಲಾರಂಭಿಸಿದರು. ಮುನಿಗಳ ವಿಶ್ರಾಂತಿಯ ವೇಳೆಯನ್ನು ಬಿಟ್ಟರೆ ಮತ್ತೆ ಎಲ್ಲ ಸಮಯದಲ್ಲಿಯೂ ಶರತ್ಕಾಲದ ಚಂದ್ರಮನನ್ನು ಓಲೈಸುವ ಚಕೋರ ಪಕ್ಷಿ (ಬೆಳದಿಂಗಳ ಹಕ್ಕಿ)ಗಳಂತೆ, ಕಮಲವನ್ನು ಮುತ್ತುವ ಭ್ರಮರಗಳಂತೆ ಅಲ್ಲಿಯ ಜನ ಅವರನ್ನು ಸುತ್ತುವರಿದಿರುತ್ತಿದ್ದರು. ಗಣಪತಿ ಶಾಸ್ತ್ರಿಗಳ ಬಹುಶ್ರುತತ್ವವನ್ನು ತಿಳಿದ ಅನೇಕ ವಿಪ್ರೋತ್ತಮರು ಬೇರೆ-ಬೇರೆ ವಿದ್ಯೆಗಳನ್ನು ಅವರಿಂದ ಕಲಿಯುವ ಅಭಿಲಾಷೆ ವ್ಯಕ್ತಪಡಿಸಿದರು. ಗಣಪತಿ ಮುನಿಗಳು ಜ್ಯೋತಿಷ್ಯ ಶಾಸ್ತ್ರದ ರಹಸ್ಯ-ಮರ್ಮ್ಮಟ ಸೂಕ್ತಿಯ ಅಂತರಾರ್ಥ ಮೊದಲಾದ ವಿಷಯಗಳನ್ನು ಈ ಅಭ್ಯರ್ಥಿಗಳಿಗೆ ತಿಳಿಸಿ ಹೇಳಿದರು.

ಪರಾಶರ ಸಂಹಿತೆ ತುಂಬಾ ವಿಸ್ತಾರವಾದ ಗ್ರಂಥ. ಅದನ್ನು ಅರ್ಥೈಸಿಕೊಳ್ಳುವಲ್ಲಿ ಮತಭೇದಗಳೂ ತುಂಬಾ ಇದ್ದು ಅದರ ಅಧ್ಯಯನ ಬಹು ಕಷ್ಟ ಸಾಧ್ಯವಾದುದರಿಂದ ವಿದ್ಯಾರ್ಥಿಗಳ ಬೇಡಿಕೆಯಂತೆ ಜಾತಕ ಫಲವನ್ನು ಸುಲಭವಾಗಿ ತಿಳಿಯಲು ಅನುಕೂಲವಾಗುವ ರೀತಿಯಲ್ಲಿ ಜ್ಯೋತಿಷ್ಯ ಸಾರವನ್ನು ಸಂಗ್ರಹಿಸಿ ಚಿಕ್ಕಗ್ರಂಥವನ್ನು ಗಣಪತಿ ಮುನಿಗಳು ರಚಿಸಿದರು. ಹಿಂದಿನ ಜ್ಯೋತಿರ್ವಿಜ್ಞಾನಿಗಳ ಅಭಿಪ್ರಾಯ ಸಂಗ್ರಹಿಸಿ ಸಿದ್ಧಪಡಿಸಿದ ಈಗ್ರಂಥದ ಹೆಸರು "ಹೋರಾ ನಿರ್ಣಯ ಸಂಗ್ರಹ" ಹೀಗೆ ಇವರ ಪಾಂಡಿತ್ಯ ವೈವಿಧ್ಯ ಗೋಕರ್ಣ ಪ್ರಾಂತ್ಯದ ಮನೆ ಮಾತಾಯಿತು. ಕೇದಿಗೆ ಹೂವಿನ ಕಂಪನ್ನು ಯಾರು ಎಷ್ಟುಕಾಲ ತಾನೇ ತಡೆಹಿಡಿದಿಡಲು ಸಾಧ್ಯ ? ಆದರೆ ತಪೋವ್ಯಸನಿಗಳಾದ ಗಣಪತಿ ಮುನಿಗಳು ಸಾಧ್ಯವಿದ್ದ ಮಟ್ಟಿಗೂ ಏಕಾಂತವನ್ನು ಬಯಸುತ್ತಿದ್ದುದರಿಂದ ಗೋಕರ್ಣಕ್ಕೆ ಸ್ವಲ್ಪ ದೂರದಲ್ಲಿ ಪ್ರಶಾಂತ-ರಮಣೀಯ ಪರಿಸರವುಳ್ಳ ಉಮಾ-ಮಹೇಶ್ವರ ದೇಗುಲಕ್ಕೆ ಹೋಗಿ ನೆಲೆಸಲು ನಿರ್ಧರಿ

ಸಿದರು. ಅಲ್ಲಿ ತಮ್ಮ ಭೋಜನಾದಿಗಳನ್ನು ಸಿದ್ಧಪಡಿಸುವುದಕ್ಕೆ ಸಹಾಯಕನಾಗಿ ಬ್ರಾಹ್ಮಣ ಯುವಕನೊಬ್ಬನು ದೊರಕಿದರೆ ಅನುಕೂಲವೆಂಬ ನಿರೀಕ್ಷೆಯಲ್ಲಿದ್ದರು.

ಈ ವಿಷಯವನ್ನು ತಿಳಿದ ಅದೇ ಸ್ಥಳದ ಯುವಕನೊಬ್ಬ ಗಣಪತಿ ಮುನಿಗಳನ್ನು ಕಂಡು "ನಾನು ತಮ್ಮ ಪರಿಚರ್ಯೆಗಾಗಿ ತಮ್ಮೊಡನೆ ಬರಲು ಸಿದ್ಧನಿದ್ದೇನೆ" ಎಂದು ವಿಜ್ಞಾಪಿಸಿಕೊಂಡ. ಈ ತರುಣನನ್ನು ಗಣಪತಿ ಮುನಿಗಳು ಅನೇಕ ವೇಳೆ ನೋಡಿದ್ದರು. ಈಗ ಅವನು ತಾನಾಗಿಯೇ ಇವರೊಡನೆ ಬರುವ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಇವರಿಗೆ ತುಂಬಾ ಸಂತೋಷವೆನಿಸಿತು. ಮಹಾನುಭಾವರಾದ ಮುನಿಗಳು ಈತನ ಅಂತರಂಗವು ತಮ್ಮ ಕಡೆಗೆ ಆಕರ್ಷಿತವಾದುದನ್ನು ನೋಡಿ ಲೌಕಿಕ ವ್ಯವಹಾರ ದೃಷ್ಟಿಯಿಂದ ಹೀಗೆ ಯೋಚಿಸಿದರು :– ಈ ತರುಣ ವಿಶಾಲ ಹೃದಯದವನೂ-ಸತ್ತ್ವಶಾಲಿಯೂ ಆಗಿರುವಂತೆ ತೋರುತ್ತದೆ. ಈತನಲ್ಲಿ ಬ್ರಹ್ಮವರ್ಚಸ್ಸು ಸ್ಪಷ್ಟವಾಗಿ ಕಂಡು ಬರುತ್ತಿದೆ. ಈತ ವಿಶ್ವಾಸಕ್ಕೆ ಅರ್ಹನೆಂದೂ ಅನಿಸುತ್ತಿದೆ. ಆದರೆ ತನ್ನ ತಂದೆ-ತಾಯಿಗಳ ಅಪ್ಪಣೆಪಡೆಯದೆ ನನ್ನೊಡನೆ ಬರುವುದಾಗಿ ಹೇಳುತ್ತಿರುವನಲ್ಲ? ಏನು ಮಾಡೋಣ? ಎಂದು ವಿಚಾರ ಮಾಡಿಜ ಅವರು "ನೀನು ನನ್ನ ಪರಿಚರ್ಯೆ ಮಾಡುವುದು ನಿನ್ನ ಹಿರಿಯರಿಗೆ ಸಮ್ಮತವೇ ? ತಿಳಿದುಕೊಂಡು ಬಾ" ಎಂದರು. ಆದರೆ ಆ ಯುವಕ ಹೀಗೆ ಬಿನ್ನವಿಸಿಕೊಂಡ:– "ನಿಮ್ಮ ಪಾದಸೇವೆ ಮಾಡಲು ಅವಕಾಶಕ್ಕಾಗಿ ನಿಮ್ಮನ್ನು ಪ್ರಾರ್ಥಿಸುತ್ತಿದ್ದೇನೆ. ಬೇರೆ ವಿಷಯಗಳಲ್ಲಿ ನನಗೆ ಗುರು ಹಿರಿಯರು ಮಾರ್ಗದರ್ಶಕರೇ ಹೊರತು ಈ ವಿಷಯಕ್ಕೆ ಅದರ ಅಗತ್ಯವಿಲ್ಲ"

ಸರ್ವಥಾಽಸ್ಮಿ ಸ್ವತಂತ್ರೋಽಹಂ ಗುರು ಸೇವಾರತೋ ಜನಃ ।
ತ್ವತ್ಪಾದಪರಿಚರ್ಯಾರ್ಥೀ ಸಿದ್ಧೋಽಹಮನುಗೃಹ್ಯತಾಂ ॥

ಗುರುಸೇವೆಯಲ್ಲಿ ಆಸಕ್ತಿ ಇರುವ ನಾನು ಸಂಪೂರ್ಣ ಸ್ವತಂತ್ರನಿದ್ದೇನೆ. ನಿಮ್ಮ ಪರಿಚರ್ಯೆ ಮಾಡಲು ಸಿದ್ಧನಿರುವ ನನ್ನನ್ನು ಅನುಗ್ರಹಿಸೋಣವಾಗಲಿ.

ಗಣಪತಿ ಮುನಿಗಳು ಆತನನ್ನು ಶಿಷ್ಯನೆಂದು ಅಂಗೀಕರಿಸಿದರು. ನಂತರ ಎಲ್ಲರೂ ಉಮಾಮಹೇಶ್ವರ ದೇವಾಲಯದ ಬಳಿ ಉಪವನದಲ್ಲಿ ಸಿದ್ಧಪಡಿಸಲಾಗಿದ್ದ ಪರ್ಣಕುಟೀರಕ್ಕೆ ತೆರಳಿದರು. ಗುರು ಪತ್ನಿ ವಿಶಾಲಾಕ್ಷಿಯವರು ಈ ತರುಣ ಆಗಂತುಕನ ವಿಷಯಗಳನ್ನೆಲ್ಲಾ ವಿಚಾರಿಸಿ ತಿಳಿದುಕೊಂಡರು. ಆತನು ಗುರುಗಳಿಗೆ ಅಭಿವಾದನ ಸಲ್ಲಿಸಿ ಗುರು ಪತ್ನಿಗೂ ಅಭಿವಾದನ ಮಾಡಿದಾಗ ಅವರು ವಾತ್ಸಲ್ಯ

ದಿಂದ ತಮ್ಮ ಸಂತೋಷ ವ್ಯಕ್ತಪಡಿಸಿದರು. ಅಭಿವಾದನ ಪೂರ್ವವಾಗ "ವಿಶ್ವಾಮಿತ್ರ ದೇವರಾತ-ಔದಲ ತ್ರ್ಯಾರ್ಷೇಯ ಪ್ರವರಾನ್ವಿತ" ಎಂಬುದಾಗಿ ತನ್ನ ಗೋತ್ರ ಪ್ರವರಗಳನ್ನು ಆ ಯುವಕ ಉಚ್ಚರಿಸಿದ. ಇದನ್ನು ಗಮನಿಸಿದ ದೂರದರ್ಶಿಗಳಾದ ಗಣಪತಿ ಮುನಿಗಳು ಆರ್ಷೇಯ ಗೋತ್ರದಿಂದಲೇ ಈತನನ್ನು "ದೈವರಾತ" ಎಂದು ಹೆಸರಿಸಿ ಪ್ರತ್ಯಭಿವಾದನೆಯಲ್ಲಿ ಅದೇ ರೀತಿ ಸಂಬೋಧಿಸಿದರು. (ಇಲ್ಲಿ ಈ ದೈವ ರಾತರ ವಿಷಯ ಸ್ವಲ್ಪ ಹೇಳುವುದಿದೆ :– ಈ ತರುಣನೇ ಮುಂದೆ ದೈವರಾತರೆಂದು ಪ್ರಸಿದ್ಧಿ ಹೊಂದಿ ಗೋಕರ್ಣದಲ್ಲಿ ಗೋರಕ್ಷಾ–ಬ್ರಹ್ಮಚರ್ಯಾಶ್ರಮ ಸ್ಥಾಪಿಸಿ ಅದರ ಕುಲಪತಿಗಳಾಗಿದ್ದರು. ಮೊದಲ ದರ್ಜೆಯ ಪಾಂಡಿತ್ಯಕ್ಕೆ ಹೆಸರಾದ ಕೀರ್ತಿಶೇಷ ಹೊಸ ಮನೆ ಗಣೇಶ ಶಾಸ್ತ್ರಿಗಳು ಇವರ ಅಜ್ಜ. ಅವರು ಸ್ಥಾಪಿಸಿದ್ದ "ಸಂಸ್ಕೃತ ವಿದ್ಯಾವರ್ಧಕ ಸಂಘವು" ಸಂಸ್ಕೃತ "ವಿದ್ಯಾಪೀಠವೆಂಬ" ಹೊಸ ಹೆಸರು ತಳೆದು ಕಾರ್ಯ ನಡೆಸುತ್ತಿದೆ. ಈ ವಿದ್ಯಾ ಪೀಠದ ಅಧ್ಯಕ್ಷರೂ ಆಗಿದ್ದ ದೈವರಾತರ ಬಗ್ಗೆ ಪ್ರತ್ಯೇಕ ಜೀವನ ಚರಿತ್ರೆ ರಚಿಸ ಬಹುದಾದಷ್ಟು ವಿಪುಲ ವಿಷಯಗಳಿವೆ. ಇವರು ತಮ್ಮ ವಂಶೀಕರ ಪುಣ್ಯ ವಿಶೇಷದ ಫಲವಾಗಿ ಸಾಧು ಸ್ವಭಾವ_ಶಾಂತ ಪ್ರವೃತ್ತಿ-ಸಾಮಾನ್ಯ ಜನರಿಗಿಂತ ವಿಶಿಷ್ಟವಾದ ನಡೆ-ನುಡಿ, ಸಜ್ಜನರು-ಸಾಧಕರು-ವಿದ್ವಾಂಸರ ಸಹವಾಸದಲ್ಲಿ ಆಸಕ್ತಿ ಬೆಳೆಸಿಕೊಂಡ ಅಪುರೂಪದ ವ್ಯಕ್ತಿಗಳಾಗಿದ್ದರು. ವಾಸಿಷ್ಠ ಗಣಪತಿ ಮುನಿಗಳನ್ನು ಸಂಧಿಸುವ ಮೊದಲೇ ಇವರು ಋಗ್ವೇದವನ್ನು ಸಾಂಗವಾಗಿ ಅಧ್ಯಯನ ಮಾಡಿದ್ದರಲ್ಲದೆ ತೈತ್ತರೀಯ ಶಾಖೆಯ ಅಧ್ವರ ಪ್ರಯೋಗವನ್ನು ಚೆನ್ನಾಗಿ ತಿಳಿದಿದ್ದರು. ಗಣಪತಿ ಮುನಿಗಳನ್ನು ಸಂಧಿಸುವ ಕಾಲಕ್ಕೆ ಇವರು ಸಂಸ್ಕೃತ ವಿದ್ಯಾಪೀಠದಲ್ಲಿ ಸಂಸ್ಕೃತ ಮತ್ತುಕಾವ್ಯಾದಿಗಳ ಅಧ್ಯಯನದಲ್ಲಿ ತೊಡಗಿದ್ದರು. ಇವರ 12ನೇ ವಯಸ್ಸಿನಲ್ಲಿಯೇ ಗೋಕರ್ಣ ಕ್ಷೇತ್ರಕ್ಕೆ ಭೇಟಿ ಕೊಟ್ಟಿದ್ದ ಭಕ್ತಿ ಮಾರ್ಗ ಪ್ರವರ್ತಕ ಶ್ರೀ ಉಜ್ಜಯಿನಿ ರಾಮ ದಾಸ ಮಹಾರಾಜರಿಂದ ಉಪದೇಶ ಪಡೆಯುವ ಭಾಗ್ಯ ಇವರಿಗೆ ಲಭಿಸಿತ್ತು. ನಂತರ ಯೋಗ ನಿಷ್ಠರಾಗಿದ್ದ ವಾಸುದೇವಾನಂದ ಸರಸ್ವತೀ ಸ್ವಾಮಿಗಳವರ ಅನುಗ್ರಹ ಪಡೆದ ಇವರು ಹಠಯೋಗವನ್ನು ಕ್ರಮವಾಗಿ ಅಭ್ಯಾಸ ಮಾಡಿದರು. ಕಾಲ ಕ್ರಮ ದಲ್ಲಿ ಶ್ರೇಷ್ಠ ವಿದ್ವಾಂಸ-ಯೋಗಿ-ವೇದವಿದ್ಯಾ ಪ್ರಚಾರ ಶೀಲ ಎಂಬಿತ್ಯಾದಿ ಖ್ಯಾತಿ ಗಳಿಸಿದ ಇವರು ಪಂಡಿತ ಮದನಮೋಹನ ಮಾಳವೀಯರ ಅಭಿನಂದನೆಗೆ ಪಾತ್ರರಾ ದರು. ಶ್ರೀಕ್ಷೇತ್ರ ಕಾಶಿಯ ಕೇಂದ್ರ ವಿದ್ಯಾ ಪೀಠದ ಮುಖ್ಯಸ್ಥ ಮಹಾ ಮಹೋಪಾಧ್ಯಾಯ ಪ್ರಮಥನಾಥ ತರ್ಕಭೂಷಣರು ಮತ್ತು ಚಿನ್ನಸ್ವಾಮಿ ಶಾಸ್ತ್ರಿ ಗಳೇ ಮೊದಲಾದ ಘನ ವಿದ್ವಾಂಸರಿಂದ "ವಿದ್ಯಾವಾಚಸ್ಪತಿ" ಉಪಾಧಿಯನ್ನು ಪಡೆದವರು ಇವರು. ಆ ಉಪಾಧಿಪ್ರದಾನ ಸಂದರ್ಭದಲ್ಲಿ ಇವರ ಬಗ್ಗೆ ಉಲ್ಲೇಖಿಸಲಾಗಿರುವ ಪ್ರಶಂಸೆಯ ಮಾತುಗಳು ಕೆಲವು ಹೀಗಿವೆ :– "ಸಂಸ್ಕೃತ

ಸಾಹಿತ್ಯ-ಪುರಾಣ-ವ್ಯಾಕರಣ-ವೇದಾಂತಾದಿ ದರ್ಶನ ಶಾಸ್ತ್ರಗಳಲ್ಲಿ ದೈವರಾತರಿಗೆ ಇರುವ ಅಸಾಮಾನ್ಯ ತಿಳಿವಳಿಕೆ ನಿಜವಾಗಿಯೂ ಪ್ರಶಂಸನೀಯ. ಬ್ರಾಹ್ಮಣ ಸಹಿತವಾದ ಸಂಹಿತೆಯ ವ್ಯಾಖ್ಯಾನದಲ್ಲಿ ಅನುಪಮ ಪಾಂಡಿತ್ಯ ಪಡೆದಿರುವ ಇವರ ವಿನೂತನ ವ್ಯಾಖ್ಯಾನ ಶೈಲಿಯು ಶಿಷ್ಟಸಂಪ್ರದಾಯಕ್ಕೂ ಅನುಗುಣವಾಗಿದ್ದು ಸಹೃದಯ ವಿದ್ವಜ್ಜನಸಮೂಹವನ್ನು ರಂಜಿಸುತ್ತದೆಯೆಂಬುದು ನಮ್ಮ ದೃಢವಾದ ನಂಬಿಕೆ."

(ಮಹರ್ಷಿ ದೈವರಾತರೆಂದು ಪ್ರಸಿದ್ಧರಾಗಿದ್ದ ಈ ಮಹನೀಯರನ್ನು ಈ ಗ್ರಂಥದ ಅನುವಾದಕನಾದ ನಾನು (ಬಿ. ಸುಬ್ರಹ್ಮಣ್ಯಂ) 1954ರ ಆಗಸ್ಟ್ ತಿಂಗಳಲ್ಲಿ ಆಗಿನ ರಾಷ್ಟ್ರಪತಿ ಬಾಬೂರಾಜೇಂದ್ರಪ್ರಸಾದರೊಡನೆ ಶೃಂಗೇರಿ ಕ್ಷೇತ್ರಕ್ಕೆ ಬಂದಿದ್ದಾಗ ನೋಡಿದ್ದೇನೆ. ರಾಜೇಂದ್ರ ಪ್ರಸಾದರಿಗೆ ಸಂಸ್ಕೃತದ ಬೋಧಕರಾಗಿ-ಧಾರ್ಮಿಕ ವಿಷಯಗಳಲ್ಲಿ ವೈಯಕ್ತಿಕ ಮಾರ್ಗದರ್ಶಕರಾಗಿ ಪೂಜ್ಯ ಸ್ಥಾನದಲ್ಲಿದ್ದ ಈ ಮಹರ್ಷಿ ದೈವರಾತರ ಪ್ರಯತ್ನದಿಂದಲೇ ರಾಜೇಂದ್ರ ಪ್ರಸಾದರು ನಡುಮಳೆಗಾಲದಲ್ಲಿ ಶೃಂಗೇರಿಯಂತಹ ಮಲೆನಾಡಿನ ಮೂಲೆಗೆ ಬಂದು ಅಗ್ಗೆ ಶೃಂಗೇರಿ ಶ್ರೀಶಾರದಾಪೀಠದಲ್ಲಿ ವಿರಾಜಮಾನರಾಗಿದ್ದ ಮಹಾ ತಪಸ್ವಿ-ಜೀವನ್ಮುಕ್ತ ಶ್ರೀ ಶ್ರೀಚಂದ್ರಶೇಖರ ಭಾರತಿಯವರ ಸಂದರ್ಶನ ಪಡೆಯುವಂತೆ ಆಯಿತು. ಪುರಾತನ ಋಷಿ-ಮುನಿಗಳ ನೆನಪು ಉಂಟುಮಾಡುತ್ತಿದ್ದ ಮಹರ್ಷಿ ದೈವರಾತರ ಭವ್ಯ - ತೇಜಃಪೂರ್ಣ ವ್ಯಕ್ತಿತ್ವ ಇಂದಿಗೂ ಕಣ್ಣಿಗೆ ಕಟ್ಟುತ್ತಿದೆ.)

ಹುಟ್ಟಿನಿಂದಲೇ ವೈದಿಕ ಧರ್ಮ ಪ್ರಚಾರದ ಹಂಬಲವನ್ನು ಹಚ್ಚಿಕೊಂಡಿದ್ದವರು ದೈವರಾತರು. ಸತ್ಕುಲ ಪ್ರಸೂತರಾದ ಇವರ ತೀವ್ರಜ್ಞಾನಪಿಪಾಸೆ ಸೌಶೀಲ್ಯ-ತಾರುಣ್ಯ-ಸಚ್ಚಾರಿತ್ರ್ಯ ಮುಂತಾದ ಗುಣಗಳು ಉದಾರಹೃದಯಿಗಳಾದ ಗಣಪತಿಮುನಿಗಳ ಮೆಚ್ಚುಗೆಗೆ ಪಾತ್ರವಾದುದು ಸಹಜವೇ. ಸದ್ಗುರುಗಳನ್ನು ಸೇವೆಯರೂಪದಲ್ಲಿ ಆರಾಧಿಸುವ ಸದವಕಾಶ ಲಭಿಸಿದ್ದರಿಂದ ತಾನು ಧನ್ಯನಾದೆನೆಂದು ದೈವರಾತರೂ ಹರ್ಷಭರಿತರಾದರು. ಹೊಸ ಹುರುಪಿನಿಂದ ತಮಗೆ ಗೊತ್ತುಮಾಡಲ್ಪಟ್ಟ ಕೆಲಸಗಳನ್ನು ನಿರ್ಮಲ ಭಕ್ತಿಭಾವದಿಂದ ನಿರ್ವಹಿಸಿದರು. ಗುರುಪತ್ನಿಯ ಸೂಚನೆಗಳನ್ನು ಶ್ರದ್ಧೆಯಿಂದ ಅನುಸರಿಸಿದರು. ಗುರುಸೇವೆಯಲ್ಲಿ ತಮ್ಮನ್ನು ಗಾಢವಾಗಿ ತೊಡಗಿಸಿಕೊಂಡ ಅವರು ಅಡಿಗೆಯ ತಯಾರಿಯೇ ಮೊದಲಾದ ಮನೆಗೆಲಸಗಳಲ್ಲಿ ನಿಪುಣರೆನಿಸಿದರು.

ದಿನನಿತ್ಯದ ಕೆಲಸಕಾರ್ಯಗಳನ್ನು ಮುಗಿಸಿ ತಮ್ಮ ಗುರುಗಳ ಬಳಿಯ ಲ್ಲಿಯೇ ಇದ್ದು ಅವರನ್ನು ನೆರಳಿನಂತೆ ಅನುಸರಿಸುತ್ತಿದ್ದರು. ಗಣಪತಿಮುನಿಗಳು ಪ್ರತಿ ತಿಂಗಳ ಶುಕ್ಲ ಹಾಗೂ ಬಹುಳ ಪಾಡ್ಯಮಿ ದಿನ ತಮ್ಮ ಆಶ್ರಮದಿಂದ ಹೊರಟು ಗೋಕರ್ಣದ ಕೃಷ್ಣಾಪುರಕ್ಕೆ ಹೋಗಿ ಅಲ್ಲಿ ಪಂಡಿತರು ಮತ್ತು ವಿದ್ಯಾರ್ಥಿಗಳ ಸಭೆಯ ಅಧ್ಯಕ್ಷತೆ ವಹಿಸಿ ಉಪನ್ಯಾಸ ನೀಡಿ ಬರುವ ಪದ್ಧತಿ ಇಟ್ಟುಕೊಂಡಿದ್ದರು. ಇಂತಹ ಸಂದರ್ಭಗಳಲ್ಲಿ ದೈವರಾತರು ಶಾರೀರಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿಯೂ ತಮ್ಮ ಗುರುಗಳ ಅನುವರ್ತಿಯಾಗಿ ಇದ್ದರು.

ಹೀಗೆ ನಿಷ್ಠಾಪೂರ್ಣ ಸೇವೆಯಿಂದ ಭವಿಷ್ಯದಲ್ಲಿ ತಮ್ಮ ಗುರುಗಳಂತೆಯೇ ಸ್ಥಾನ-ಮಾನಗಳಿಗೆ ಪಾತ್ರರಾಗಲಿದ್ದ ದೈವರಾತರು ತಮ್ಮ ಗುರು ವಾಸಿಷ್ಠ ಗಣಪತಿ ಮುನಿಗಳ ಪಾದ ಸರೋಜಗಳ ಮೂಲಕ ಪ್ರಸಾರವಾಗುವ ವಿಜ್ಞಾನ ಸಾರದ್ರವ್ಯದಿಂದ ಸಂತುಷ್ಟಗೊಂಡ ಅಂತರಂಗವುಳ್ಳವರಾದರು.

ನಿಷ್ಠಾವಂತರೂ—ಸೂಕ್ಷ್ಮದೃಷ್ಟಿಯುಳ್ಳವರೂ ಆದ ಆಚಾರ್ಯ ಗಣಪತಿ ಮುನಿಗಳು ನಿರ್ಮಲ ಮನಸ್ಸಿನಿಂದ ತಮ್ಮ ಸೇವೆ ಮಾಡುತ್ತ ಪರಿಶುದ್ಧ ಚಾರಿತ್ರ್ಯವುಳ್ಳ ಈ ತರುಣನಿಗೆ ಭವಿಷ್ಯದಲ್ಲಿ ಒದಗಲಿರುವ ಗೌರವ - ಕೀರ್ತಿಗಳನ್ನು ತಮ್ಮ ಅಂತರ್ದೃಷ್ಟಿಯಿಂದ ಕಾಣುತ್ತ ಹಾಗೆ ಆಗಲೆಂದು ಆಶಿಸುತ್ತ ಆತ್ಮನಿಷ್ಠೆಯ ಬಾಗಿಲುಗಳೆನಿಸಿರುವ ಉಪನಿಷತ್ತುಗಳಲ್ಲಿ ಪ್ರತಿಪಾದಿತಗಳಾದ ಉಪಾಸನೆಗಳನ್ನು ಉಪದೇಶಿಸಲು ನಿರ್ಧರಿಸಿದರು. ಹೀಗೆ ಗುರುಮುಖದಿಂದ ಉಪದಿಷ್ಟವಾದ ಉಪನಿಷತ್ಪ್ರತಿಪಾದಿತ ಪ್ರಾಣ-ವೈಶ್ವಾನರ ಮೊದಲಾದವುಗಳು ಕಠಿಣ ಹಠಯೋಗ ಸಾಧನೆಯಿಂದ ಪರಿಶುದ್ಧ ದೇಹವುಳ್ಳ ದೈವರಾತರನ್ನು ತಾವಾಗಿಯೇ ಬಂದು ಸೇರಿದವು.

ಆಚಾರ್ಯ ವಾಸಿಷ್ಠ ಗಣಪತಿ ಮುನಿಗಳು ಹೀಗೆ ಮಿತ ಪರಿವಾರದೊಡನೆ ಪಾತನವಾದ ದೇವಮಂದಿರದ ಉಪವನದ ಆಶ್ರಮದಲ್ಲಿ ತಪಸ್ಸು-ಧ್ಯಾನ ಸ್ತೋತ್ರರಚನೆಗಳಲ್ಲಿ ನಿರತರಾಗಿ ನಾಲ್ಕು ತಿಂಗಳು ಇದ್ದರು.

ಈ ಮಧ್ಯೆ ಅನಂತಶಾಸ್ತ್ರಿಗಳೆಂಬ ಪಂಡಿತರು ಮಹಾಬಲೇಶ್ವರ ದೇಗುಲದಲ್ಲಿ ಶಿವಪಾರಮ್ಯವನ್ನು ಕುರಿತು ಕನ್ನಡದಲ್ಲಿ ಪ್ರವಚನ ನೀಡಿದರು. ತತ್ತ್ವವೇತ್ತರಲ್ಲಿ ಶ್ರೇಷ್ಠರೂ, ಹಿರಿಯರೂ ಆದ ವಾಸಿಷ್ಠ ಮುನಿಗಳು ಈ ಸಭೆಗೆ ಆಹ್ವಾನಿತರಾಗಿ ಹೋಗಿದ್ದರು. ಅಲ್ಲಿ ಸಭಾಸದರ ಪ್ರಾರ್ಥನೆಯಂತೆ ಉಪಸಂಹಾರ ಭಾಷಣ

ಮಾಡಿದ ಗಣಪತಿ ಮುನಿಗಳು ತಮ್ಮ ಅಸನ್ಯ ಸಾಧಾರಣ ಮಾತುಗಾರಿಕೆಯಿಂದ ಎಲ್ಲರ ಗಮನ ಸೆಳೆದರು. ಮನೋಹರ ಸಂಸ್ಕೃತ ವಾಕ್ಯ ರಸಧಾರೆ ಇವರ ಮುಖ ದಿಂದ ಸತತವಾಗಿ ಹರಿದು ಬರುತ್ತ ಇವರ ಬಹುಮುಖ ಪಾಂಡಿತ್ಯ-ಪ್ರತಿಭೆಗಳನ್ನು ಪ್ರಕಾಶಗೊಳಿಸಿ ಶ್ರೋತೃಗಳಲ್ಲಿ ವಿಸ್ಮಯ ಉಂಟುಮಾಡಿತು. ಈ ಸಂದರ್ಭದಲ್ಲಿ ಇವರ "ಕಾವ್ಯಕಂಠದ" ವೈಭವ-ವಿಲಾಸಗಳು ತಾವೇ ತಾವಾಗಿ ವಿಜೃಂಭಿಸಿ ದುವು.

ಈ ಪ್ರವಚನದ ನಂತರ ಇವರ ಯೋಗ್ಯತೆ-ಸಾಮರ್ಥ್ಯಗಳ ವಿಷಯ ದೂರಪ್ರದೇಶಗಳಿಗೂ ಮುಟ್ಟಿ ಹೊಸದೊಂದು ಅಧ್ಯಾಯವನ್ನೇ ಪ್ರಾರಂಭಿ ಸಿತು. ಆ ಮೊದಲ್ಗೊಂಡು ವಿದ್ವಾಂಸರು - ವಿದ್ಯಾರ್ಥಿಗಳು ಇವರ ಬಳಿಗೆ ಬರುವುದು ಹೆಚ್ಚಾಯಿತು. ಇವರ ಸುತ್ತ ಬೇರೆ ಬೇರೆ ವಿಷಯಗಳನ್ನು ತಿಳಿಪು ಕೊಳ್ಳುವುದರಲ್ಲಿ ಆಸಕ್ತರಾದ ಪಂಡಿತರು - ಅಭ್ಯಾಸಿಗಳ ಪರಿಷೆಯೇ ಇರು ತ್ತಿತ್ತು.

ಕೆಲವು ರಸಿಕರಿಗೆ ಇವರ ಕವಿತಾ ಸಾಮರ್ಥ್ಯ ಆಕರ್ಷಣೀಯವೆನಿಸುತ್ತಿತ್ತು. ಜ್ಯೋತಿಷಿಗಳು ಹಲವರು ಇವರ ಜ್ಯೋತಿರ್ವಿಜ್ಞಾನಪ್ರತಿಭೆಗೆ ಮಾರುಹೋಗಿ ಇವರ ಬಳಿಗೆ ಬರುತ್ತಿದ್ದರು. ಆಯುರ್ವೇದ ವೈದ್ಯರಿಗೆ ಇವರು ಧನ್ವಂತರೀ ಸ್ವರೂಪ ರೆನಿಸಿದ್ದರು. ಉಪಾಸಕರಿಗೆ ಸ್ವತಃ ಮಂತ್ರಮೂರ್ತಿಯಾದ ವಾಸಿಷ್ಠ ಮುನಿಗಳ ತಪಸ್ಸಾಧನೆಯ ಮರ್ಮಗಳ ಬಗ್ಗೆ ಬಹಳ ಆಸಕ್ತಿ. ವೇದಾಭ್ಯಾಸ ನಿರತರಿಗೆ ಹೊಸ ಆಲೋಚನೆ - ತಿಳಿವಳಿಕೆ ಉಂಟುಮಾಡುವ ಇವರ ವೇದಾರ್ಥ ವಿಚಾರ ಸರಣಿ ತುಂಬಾ ಅಚ್ಚುಮೆಚ್ಚು. ಶಾಸ್ತ್ರಾರ್ಥ ವಿಚಾರಕರಿಗೂ ಇತರರಿಗೂ ಇವರು ಶಾಸ್ತ್ರ ವಿಜ್ಞಾನದ ಗಣಿಯೆನಿಸಿದ್ದರು. ಹೀಗೆ ಹತ್ತು-ಹಲವು ಬಗೆಯ ಜ್ಞಾನಪಿಪಾಸು ಗಳು ಸಾಗರವನ್ನು ಸೇರಲು ತವಕದಿಂದ ಹರಿಯುವ ನದಿಗಳಂತೆ ಇವರ ಬಳಿಗೆ ಬರುತ್ತಿದ್ದರು.

ಗಣಪತಿ ಮುನಿಗಳು ಗೋಕರ್ಣಕ್ಕೇ ಬಂದು ನೆಲೆಸಿ ಅರ್ಹ ಅಭ್ಯರ್ಥಿಗಳಿಗೆ ಬೇರೆ-ಬೇರೆ ವಿದ್ಯೆಗಳನ್ನು ಬೋಧಿಸುವ ಕೃಪೆಮಾಡಬೇಕೆಂದು ಗೋಕರ್ಣದ ವಿದ್ಯಾ ಪ್ರೇಮಿಗಳು-ಸಹೃದಯರು ಹಲವರು ಮೇಲಿಂದ ಮೇಲೆ ವಿಜ್ಞಾಪನೆ ಮಾಡಿ ಕೊಂಡರು. ಅದಕ್ಕೆ ಸಮ್ಮತಿಸಿದ ವಾಸಿಷ್ಠ ಮುನಿಗಳು ಗೋಕರ್ಣದ ದೀಕ್ಷಿತ ದತ್ತಾತ್ರೇಯ ಉಪಾಧ್ಯಾಯರ ಯಾಗ ಶಾಲೆಯಲ್ಲಿ ತಮ್ಮ ವಸತಿಗಾಗಿ ಅನುಕೂಲ ಪಡಿಸಿದ ಸ್ಥಳಕ್ಕೆ ಬಂದು ಇರಲಾರಂಭಿಸಿದರು. ಇದೇ ವೇಳೆಗೆ ಇವರ ತಂದೆಯವ

ರಿಗೆ ಮರಣ ಕಾಲ ಸನ್ನಿಹಿತವಾಗಿದೆಯೆಂಬ ತಂತೀ ವಾರ್ತೆ ಇವರಿಗೆ ತಲುಪಿತು. ತಂದೆಯವರ ಅಂತ್ಯ ಕಾಲದಲ್ಲಿ ತಾವು ಅವರ ಬಳಿ ಇರಬೇಕಾದುದು ಕರ್ತವ್ಯ ವೆಂದು ನಿರ್ಧರಿಸಿದ ಗಣಪತಿ ಶಾಸ್ತ್ರಿಗಳು ಇಲ್ಲಿ ತನ್ನ ಕುಟುಂಬದವರ ಯೋಗಕ್ಷೇಮ ನಿರ್ವಹಣೆಯನ್ನು ಶಿಷ್ಯದೈವರಾತರಿಗೆ ಒಪ್ಪಿಸಿ ತಾವು ಒಬ್ಬರೇ ಸ್ವಗ್ರಾಮದ ಕಡೆಗೆ ಪಯಣ ಬೆಳೆಸಿದರು. ಸಮಾಧಾನ ಚಿತ್ತರಾಗಿದ್ದರೂ ತಂದೆಯವರ ಬಗೆಗೆ ಅವರು ಮನಸ್ಸು ಚಿಂತಾಕ್ರಾಂತವಾಯಿತು.

ಸ್ವಗ್ರಾಮದಲ್ಲಿ ತಂದೆಯವರ ಉತ್ತರಕ್ರಿಯಾದಿಗಳನ್ನು ನಿರ್ವಹಿಸಿ ಮದರಾಸಿಗೆ ತೆರಳಿದ ಗಣಪತಿಮುನಿಗಳು ಸುಧನ್ವಾ(ಸುಧನ್ವಾ ಎಂಬುದು ಗಣಪತಿ ಮುನಿಗಳು ತಮ್ಮ ಶಿಷ್ಯ ಎಸ್. ದೊರೆಸ್ವಾಮಿಅಯ್ಯರ್‌ರೆಂಬವರಿಗೆ ಇಟ್ಟ ಹೆಸರು. ಇವರಿಗೆ ಗಣಪತಿಮುನಿಗಳು ಮಂತ್ರೋಪದೇಶವನ್ನೂ ಕೊಟ್ಟಿದ್ದರು) ಮೊದಲಾದ ಶಿಷ್ಯರೊಡನೆ ಅರುಣಾಚಲಕ್ಕೆ ಹೋಗಿ ಗುರುಗಳಾದ ಭಗವಾನ್ ರಮಣರ ಸಂದ ರ್ಶನ ಪಡೆದು ಗೋಕರ್ಣಕ್ಕೆ ವಾಪಸು ಬಂದರು. ಬೇಸಗೆಯ ಕೊನೆಯಲ್ಲಿ ಮಳೆ ಗಾಗಿ ಕಾತರದಿಂದ ಕಾದಿರುವ ನೆಲ ಮಳೆ ಬಿದ್ದೊಡನೆ ತಂಪು ಪಡೆಯುವಂತೆ ಮುನಿ ವರ್ಯರ ಪುನರಾಗಮನವನ್ನು ಅತ್ಯಾಸಕ್ತಿಯಿಂದ ನಿರೀಕ್ಷಿಸುತ್ತಿದ್ದ ಗೋಕರ್ಣದ ಪಂಡಿತ ಮಂಡಲಿಯು ಮರಳಿ ಬಂದ ವಾಸಿಷ್ಠಮುನಿಗಳನ್ನು ಆದರ-ಸಂತಸಗಳಿಂದ ಸ್ವಾಗತಿಸಿ ಸಮಾಧಾನ ಪಟ್ಟುಕೊಂಡರು. ಗಣಪತಿಮುನಿಗಳು ವೇದ ಪಾರಂಗತರಿಗೆ ಋಗ್ವೇದ ಭಾಷ್ಯಪಾಠ, ಶಾಸ್ತ್ರಾಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಶಾರೀರಕ ಭಾಷ್ಯ ಪ್ರವಚನಗಳನ್ನು ಪುನಃ ಮುಂದುವರಿಸಿದರು.

ಅದೇ ಸಮಯದಲ್ಲಿ ಉಪ್ಪುಂದದ ಉಪಾಧ್ಯಾಯರೆಂಬವರು ಗೋಕರ್ಣದಲ್ಲಿ ಜ್ಯೋತಿಷ್ಟೋಮಯಜ್ಞ-ವೈದಿಕ ಮಹೋತ್ಸವಗಳನ್ನು ಪ್ರಾರಂಭಿಸಿದರು. ದಿನವೂ ಯಜ್ಞ ವಿಧಿಗಳು-ಸಹಸ್ರಾರು ಜನರಿಗೆ ಅನ್ನಸಂತರ್ಪಣೆ ವೈಭವದಿಂದ ನಡೆ ದವು. ಈ ಸಮಾರಂಭಕ್ಕೆ ಆಹ್ವಾನಿತರಾದ ಗಣಪತಿಮುನಿಗಳು ಯಾಗಶಾಲೆಯ ಸಭಾ ಮಂಟಪದ ವೇದಿಕೆಯನ್ನಲಂಕರಿಸಿ ಯಜ್ಞದ ಅನುಷ್ಠಾನಗಳ ಬಿಡುವಿನ ವೇಳೆಯಲ್ಲಿ ವೇದಾರ್ಥವನ್ನು ವಿಶದ ಪಡಿಸುವ ಸರಳ-ಸುಂದರ ಪ್ರವಚನಗಳನ್ನು ನೀಡುತ್ತಿ ದ್ದರು. ಋಗ್ವೇದ ಮಂತ್ರ ರಹಸ್ಯಗಳನ್ನು ಅರಿತು ಬೃಹಸ್ಪತಿಯ ಅಪರಾವತಾರ ದಂತೆ ಇದ್ದ ಇವರ ಪ್ರವಚನಗಳು ಸಮಾರಂಭದಲ್ಲಿ ಸೇರುತ್ತಿದ್ದ ಜನ ಸಮೂಹಕ್ಕೆ ಆಕರ್ಷಣೀಯವಾಗಿ ಇರುತ್ತಿದ್ದವು.

ಹೀಗೆ ನಮ್ಮ ಆಚಾರ್ಯ ಶ್ರೇಷ್ಠ-ಕಾವ್ಯಕಂಠ-ಭಗವಾನ್ ವಾಸಿಷ್ಠಗಣಪತಿ ಮುನಿಗಳು ಸತತ ಅಭ್ಯಾಸದಿಂದ ವಶವರ್ತಿಯಾಗಿ ಮಾಡಿ ಕೊಂಡಿದ್ದ ಕವಿತಾ

ಸಾಮರ್ಥ್ಯ, ಗುರು ರಮಣ ಮಹರ್ಷಿಗಳಿಂದ ಇವರಿಗೆ ಲಭ್ಯವಾದ ಅಧ್ಯಾತ್ಮನಿಷ್ಠೆ, ಸ್ವಭಾವ ಸಿದ್ಧವಾದ ಬಹುಮುಖಪಾಂಡಿತ್ಯ-ಪ್ರತಿಭೆ-ಮಾತುಗಾರಿಕೆ ಮೊದಲಾದವುಗಳು ಇವರ ಧವಳ ಕೀರ್ತಿಯನ್ನುಹೆಚ್ಚಿಸಿ ಗುಣೈಕಪಕ್ಷಪಾತಿಗಳೂ, ಸೌಜನ್ಯ-ಮಾನ-ಅಭಿಮಾನವುಳ್ಳವರೂ ಆದ ಗೋಕರ್ಣ ಪ್ರಾಂತ್ಯದ ವೈದಿಕ ವಿದ್ವನ್ಮಣಿಗಳನ್ನು ಇವರ ಪ್ರವಚನಗಳಿಗೆ ಸತತ ಶ್ರೋತೃಗಳನ್ನಾಗಿ ಆಕರ್ಷಿಸುತ್ತಿತ್ತೆಂಬುದು ಈ ಪ್ರವಚನಕಾರ ವಾಸಿಷ್ಠ ಗಣಪತಿ ಮುನಿಗಳ ಪುಣ್ಯ ಪರಿಪಾಕವೇ ಸರಿ.

ಈ ಗೋಕರ್ಣ ಮಂಡಲ ನಿವಾಸಿಗಳಾದ ಬ್ರಾಹ್ಮಣರ ವಂಶಾವಳಿಯ ಬಗ್ಗೆ ಇತಿಹಾಸ ಹೀಗೆ ಹೇಳುತ್ತದೆ :–

ಅಹಿಚ್ಛತ್ರಾದ್ದ್ವಿಜಾಗ್ರ್ಯಾನ್ ವಿಜಯಜಿತದತ್ತಾತ್ಸ್ವಗುರವೇ
ದ್ವಿಜೇಂದ್ರಾನಾನೈಷೀತ್ ಜನಪದ ವಿಶೇಷಾನ್ ಜನಪತಿಃ ।
ಯತೋ ಹವ್ಯೇ ಕವ್ಯೇ ವಿಧಿನಿಹಿತಭವ್ಯಾಧ್ವನಿರತಾಃ ।
ತತಃ ಖ್ಯಾತಾ ಏತೇ ನಿಗಮಶರಣಾ ಹವ್ಯಕಗಣಾಃ ॥

ಹಿಂದೆ ಪಾಂಡವ ಶ್ರೇಷ್ಠ ಅರ್ಜುನನು ಅಹಿಚ್ಛತ್ರವೆಂಬ ಉತ್ತರ ಭಾರತದ ಕುರು–ಪಾಂಚಾಲ ಪ್ರದೇಶದ ಬಳಿ ಇರುವ ಸ್ಥಳವನ್ನು ಜಯಿಸಿ ತನ್ನ ಗುರು ದ್ರೋಣಾಚಾರ್ಯರಿಗೆ ಕಾಣಿಕೆಯಾಗಿ ಸಮರ್ಪಿಸಿದ್ದನು. ಕನ್ನಡದ ಪ್ರಖ್ಯಾತ ಅರಸನೂ, ಕದಂಬ ರಾಜವಂಶದ ಪ್ರವರ್ತಕನೂ ಆಗಿದ್ದ ಬನವಾಸಿಯ ಮಯೂರ ಶರ್ಮ(ವರ್ಮ)ನು ಅಶ್ವಮೇಧಯಾಗ ನಡೆಸಲು ಸಂಕಲ್ಪಿಸಿ ಅದರ ನಿರ್ವಹಣೆಗಾಗಿ ಸಮರ್ಥ ವೇದ ವಿದರಾದ ಶ್ರೋತ್ರಿಯರನ್ನು ಈ ಅಹಿಚ್ಛತ್ರದಿಂದ ಬರಮಾಡಿಕೊಂಡು ಯಾಗವನ್ನು ವಿಧ್ಯುಕ್ತವಾಗಿ ಪೂರ್ಣಗೊಳಿಸಿದನು. ರಾಜಾ ಮಯೂರ ಶರ್ಮನಿಂದ ಬಳಿ ಉತ್ತಾರಗಳನ್ನೂ–ಸರ್ವಮಾನ್ಯವನ್ನೂ ಪಡೆದ ಈ ಬ್ರಾಹ್ಮಣ ಕುಟುಂಬಗಳು ಈ ಪ್ರದೇಶದಲ್ಲಿ ನೆಲೆಸಿದವು. ಹವ್ಯ–ಕವ್ಯಾದಿ ಕರ್ಮಗಳನ್ನು ವಿಧಿಬದ್ಧವಾಗಿ ಆಚರಿಸುತ್ತ ಬಂದ ಇವರು ಹವ್ಯಕರೆಂದು ಹೆಸರುವಾಸಿ ಹೊಂದಿದ್ದಾರೆ. (ದಾಖಲೆಗಳ ಪ್ರಕಾರ ಘಟ್ಟದ ಕೆಳಗಿನ ತುಳುನಾಡಿನಲ್ಲಿ ನೆಲೆಸಿದ ಇದೇ ಅಹಿಚ್ಛತ್ರದಿಂದ ಬಂದ ಬ್ರಾಹ್ಮಣ ಪೀಳಿಗೆಯವರು ಕೂಡ ಕರ್ಮ ನಿಷ್ಠರಾಗಿ ತುಳುನಾಡಿನ ಶಿವಳ್ಳಿ-ಕಂದಾವರ-ಕೋಟ ಗ್ರಾಮಗಳಲ್ಲಿ ವಾಸಿಸುತ್ತ ಮುಂದೆ ತಮ್ಮ–ತಮ್ಮ ಗ್ರಾಮದ ಹೆಸರಿನ ಭೇದಗಳಿಂದ ಗುರುತಿಸಲ್ಪಡುತ್ತ–ಘಟ್ಟದ ಮೇಲೆಯೂ ಬಂದು ನೆಲೆಸಿ ಶಿವಳ್ಳಿಬ್ರಾಹ್ಮಣರು-ಕೋಟ ಬ್ರಾಹ್ಮಣರು-ಕಂದಾವರ ಬ್ರಾಹ್ಮಣರು ಎಂದೇ

ಹೆಸರು ಪಡೆದಿದ್ದಾರೆ. ಹವ್ಯಕರಂತೆ ಇವರೂ ಸಹ ಅಡಿಕೆಯ ಬೇಸಾಯ- ವೇದ ಶಾಸ್ತ್ರಾಧ್ಯಯನಗಳಲ್ಲಿ ಪರಿಶ್ರಮ ಪಡೆದವರಿದ್ದಾರೆ)

ಈ ಗೋಕರ್ಣ ಕ್ಷೇತ್ರವು ಕರ್ಮಾಂಗನಿಷ್ಣಾತರೂ-ವೈದಿಕಧರ್ಮ ನಿರತರೂ ಆದ ಶ್ರೋತ್ರಿಯ ಶ್ರೇಷ್ಠರಿಂದ ಪ್ರಸಿದ್ಧಿ ಪಡೆದಿದೆ. ಸಾಂಗೋಪಾಂಗ ವೇದಾಧ ಯನ ಮಾಡಿದ 200 ಬ್ರಾಹ್ಮಣ ಕುಟುಂಬದವರು ಈ ಕ್ಷೇತ್ರದಲ್ಲಿ ಇದ್ದಾರೆ. ವಾಸಿಷ್ಠಗಣಪತಿ ಮುನಿಗಳು ಗೋಕರ್ಣಕ್ಕೆ ಬರುವ ಮೊದಲೇ ಋಗ್ವೇದ ಭಾಷ್ಯ ವನ್ನು ಚೆನ್ನಾಗಿ ಮನನ ಮಾಡಿದ್ದರು. ಋಗ್ವೇದ ಮಂತ್ರಗಳ ಅರ್ಥವನ್ನು ವಿಚಾರಮಾಡುವುದರಲ್ಲಿ ನಿಷ್ಣಾತವಾದ ಇವರ ನಿಶಿತ ಬುದ್ಧಿಶಕ್ತಿಯು ಗೋಕ ರ್ಣಕ್ಕೆ ಬಂದಮೇಲೆ ಇವರನ್ನು "ಬ್ರಾಹ್ಮಣ"ಗಳ ವಾಕ್ಯಾರ್ಥ ವಿಚಾರದಲ್ಲಿ ತೊಡ ಗಿಸಿತು. ಇಲ್ಲಿಯ ಶ್ರೌತ ವಿಚಾರಧುರೀಣರಾದ ಕರ್ಮನಿಷ್ಠ ವೇದವಿದರೊಡನೆ ಕಲೆತು ನಡೆಸಿದ ಚರ್ಚೆ-ವಿಚಾರ ವಿನಿಮಯಗಳು ಇವರ ವೇದವಿದ್ಯಾಜಿಜ್ಞಾಸೆಗೆ ತುಂಬಾ ಉಪಯುಕ್ತವಾಗಿ ಪರಿಣಮಿಸಿದವು.

ಇದೇ ಉತ್ತರ ಸಹ್ಯಾದ್ರಿ ಪ್ರದೇಶದಲ್ಲಿ ಪ್ರಾರಂಭವಾದ ಧರ್ಮಶಾಸ್ತ್ರ ಪರ್ಯಾಲೋಚನೆಗಳ ಪ್ರಭಾವ ಮುಂದೆ ಇವರು ರಚಿಸಿದ "ಗೋತ್ರ-ಪ್ರವರ ನಿರ್ಣಯ-ವಿವಾಹ ಧರ್ಮಸೂತ್ರ-ಪಂಚಜನ ಚರ್ಚಾ (ಅಸ್ಪೃಶ್ಯತೆಯ ಕುರಿತು) ಜೈಮಿನೀಯ ತರ್ಕ ವಾರ್ತಿಕ" ಮುಂತಾದ ಗ್ರಂಥಗಳ ಮೇಲೆ ಬಿದ್ದಿರುವುದನ್ನು ಕಾಣಬಹುದು. ಮುಂದೆ ಇವರ ಅಪರ ವಯಸ್ಸಿನಲ್ಲಿ ಉತ್ತರ ಸಹ್ಯಾದ್ರಿಯ ಮುಖ್ಯ ಪಟ್ಟಣಗಳಲ್ಲಿ ಒಂದಾದ ಶಿರಸಿಯಲ್ಲಿ ಇವರು ನೆಲೆಸಲು ಬುನಾದಿ ಹಾಕಿದ ದೈವರಾತರೇ ಮೊದಲಾದ ಶಿಷ್ಯ ಅನುಯಾಯಿಗಳು ಇವರಿಗೆ ದೊರೆತುದು ಈ ಕ್ಷೇತ್ರದಲ್ಲಿಯೇ. ಸಮರ್ಥ ಬದುಕನ್ನು ಬಾಳಿ ನಂತರ ಇಂದಿಗೂ ಕೀರ್ತಿಕಾಯ ರಾಗಿ ಪ್ರಭಾವ ಪಡೆದಿರುವ ವಾಸಿಷ್ಠಮುನಿಗಳ ವೈಭವವು ಈ ಉತ್ತರ ಸಹ್ಯಾ ದ್ರಿಯ ಸಂಬಂಧ ಪಡೆದು ಎಂದೆಂದಿಗೂ ಪ್ರಕಾಶಮಾನವಾಗಿಯೇ ಇರುವಂತೆ ಆಗಿದೆ.

ಪ್ರಕರಣ- 18.

ಮಂದಾಸಾ-ಮಥುರಾಗಮನ

ಆಚಾರಃ ಪ್ರಥಮೋ ಧರ್ಮಃ । (ಒಳ್ಳೆಯ ನಡೆಯೇ ಮೊದಲ ಧರ್ಮ)

ಕೋ ವಿಹನ್ತು ಮಲಮಾಸ್ಥಿತೋದಯೇ ವಾಸರಶ್ರಿಯಮಶೀತ ದೀಧಿತೌ ॥
(ಮಾಘ)

(ಉಷ್ಣ ಕಿರಣನಾದ ಸೂರ್ಯನ ದಿನದ ಉಛ್ರಾಯ ಸಂಪತ್ತು ಮುಂಜಾನೆ ಆತನ ಉದಯದೊಡನೆಯೇ ಹೊಂದಿ ಕೊಂಡು ಬಂದಿದೆ. ಅಂಥ ಮೇಲೆ ಅದನ್ನು ಕುಂಠಿತಗೊಳಿಸುವ ಸಾಮರ್ಥ್ಯ ಯಾರಿಗೆ ತಾನೇ ಇದ್ದೀತು?)

ವಾಸಿಷ್ಠ ಗಣಪತಿ ಮುನಿಗಳು ತಮ್ಮ ತಂದೆಯವರ ವಾರ್ಷಿಕ ಶ್ರಾದ್ಧ ದಸಲುವಾಗಿ ಗೋಕರ್ಣದಿಂದ ಸ್ವಗ್ರಾಮಕ್ಕೆ ಹೊರಡುವ ಸಿದ್ಧತೆಯಲ್ಲಿದ್ದಾಗಲೇ ಅವರ ಬಹುಕಾಲದ ಶಿಷ್ಯ ಸುಬ್ರಹ್ಮಣ್ಯ ಶಾಸ್ತ್ರಿಗಳು ಕುಟುಂಬ ಸಹಿತ ಅವರ ಸಂದರ್ಶನಕ್ಕಾಗಿ ಬಂದರು. ತಮ್ಮ ಮಗ ಮಹದೇವ ಮತ್ತು ಮಗಳು ವಜ್ರೇಶ್ವರಿಯನ್ನು ಇವರೊಡನೆ ಸಿಕಂದರಾಬಾದಿನಲ್ಲಿ ಇರುವಂತೆ ವ್ಯವಸ್ಥೆ ಮಾಡಿದ ಗಣಪತಿ ಮುನಿಗಳು ಪತ್ನಿಯೊಡನೆ ಸ್ವಗ್ರಾಮ ಕುಮುಧೋಪಲಕ್ಕೆ ತಲುಪಿದರು. ಅಲ್ಲಿ ತಮ್ಮ ಅಣ್ಣನ ನೇತೃತ್ವದಲ್ಲಿ ತಂದೆಯವರ ಮೊದಲ ವಾರ್ಷಿಕ ಶ್ರಾದ್ಧ ಮುಗಿದ ನಂತರ ಉತ್ಕಲ ದೇಶದಲ್ಲಿ ತಮಗೆ ಚಿರಪರಿಚಿತವಾದ ಭುವನೇಶ್ವರಕ್ಕೆ ಹೋದರು. ಅಲ್ಲಿ 4ತಿಂಗಳು ಇದ್ದು ತಪಸ್ಸು ನಡೆಸಿದರು.

ತುಲಾ ಮಾಸದಲ್ಲಿ ತಮ್ಮ ತಾಯಿಯವರ ಶ್ರಾದ್ಧ ನಿರ್ವಹಿಸಬೇಕು. ಈ ಪ್ರದೇಶದ ಬ್ರಾಹ್ಮಣರು ಮತ್ಸ್ಯ ಭೋಜಿಗಳಾದುದರಿಂದ ಅವರನ್ನು ಕರೆದು ಶ್ರಾದ್ಧಕರ್ಮ ನಡೆದುವುದು ತಮ್ಮ ದೇಶಾಚಾರಕ್ಕೆ ತಕ್ಕುದಲ್ಲ. ಈ ಸಂದರ್ಭದಲ್ಲಿ ಏನು ಮಾಡಬಹುದೆಂದು ಸಂಗಡ ಇದ್ದ ಹೆಂಡತಿ ಹಾಗೂ ಸಹೋದರ ಶಿವರಾಮನೊಡನೆ ಪರ್ಯಾಲೋಚಿಸಿ ಪಕ್ಕದ ರಾಜ್ಯಕ್ಕೆ ಸೇರಿದ "ಮಂದಾಸಾ"ಕ್ಕೆ ಹೋಗಲು ನಿರ್ಧರಿಸಿದರು. ಮಂದಾಸಾದಲ್ಲಿ ಹಿಂದೆಯೂ ಒಮ್ಮೆ ಅವರು ಕೆಲಕಾಲ ಇದ್ದರು. ಅಲ್ಲಿ ತಮ್ಮ ಆಂಧ್ರ ಪ್ರದೇಶದವರಲ್ಲದೆ ದ್ರಾವಿಡ ಬ್ರಾಹ್ಮಣರೂ ಇದ್ದು ತಮ್ಮ ವಸತಿಗೂ ಅನುಕೂಲವಾಗುತ್ತದೆ. ಎಂದು ತೀರ್ಮಾನಿಸಿ ಅಲ್ಲಿಗೆ ಹೊರಟು ಬಂದರು.

ಹಿಂದೆ ಇವರು "ಮಂದಾಸಾ" ಸಂಸ್ಥಾನಕ್ಕೆ ಬಂದಿದ್ದಾಗ ಅಲ್ಲಿಯ ಯುವ ರಾಜನಾಗಿದ್ದ ವ್ಯಕ್ತಿಯೇ ಈಗ ರಾಜನಾಗಿದ್ದ. ಗಣಪತಿಮುನಿಗಳ ಆಗಮನದಿಂದ ಸಂತೋಷಗೊಂಡ ಆ ರಾಜನು ಇವರನ್ನು ಗೌರವ-ಆದರಗಳಿಂದ ಸತ್ಕರಿಸಿ ಇವರ ವಸತಿಗೆ ಅನುಕೂಲ ಮಾಡಿಸಿ ಕೊಟ್ಟನು. 3ವರ್ಷ ಈ ಮಂದಾಸಾದಲ್ಲಿಯೇ ಇದ್ದರೂ ತಪಸ್ಸು ಮುಂದುವರಿಸುವುದು ಮಾತ್ರ ಸಾಧ್ಯವಾಗಲಿಲ್ಲ. ಆಗಾಗ ಬೇರೆ ಬೇರೆ ಕಡೆಗೆ ಪ್ರವಾಸ ಹೋಗಿ ಬರ ಬೇಕಾಗುತ್ತಿತ್ತು.

ಒಮ್ಮೆ ತಮ್ಮ ಪತ್ನಿ ಹಾಗೂ ಬಹುಕಾಲದ ಶಿಷ್ಯ ವೆಂಕಟರಾಮನೊಡನೆ ಕಾಶೀ ಕ್ಷೇತ್ರಕ್ಕೆ ಭೇಟಿ ಕೊಟ್ಟರು. ಆ ಸಂದರ್ಭದಲ್ಲಿಯೇ ಶ್ರೀಕೃಷ್ಣನ ಜನ್ಮ ಭೂಮಿ ಮಥುರಾ ನಗರದಲ್ಲಿ ಸನಾತನ ಧರ್ಮ ಸಮ್ಮೇಳನವೊಂದು ನಡೆಯು ತ್ತಿತ್ತು. ಅಲ್ಲಿಗೆ ಹೋದ ವಾಸಿಷ್ಠಗಣಪತಿ ಮುನಿಗಳು ಸಮ್ಮೇಳನದಲ್ಲಿ ಆತ್ಯಾ ಕರ್ಷಕ ಶೈಲಿಯ ಸಂಸ್ಕೃತ ಉಪನ್ಯಾಸ ನೀಡಿದರು. ಅಲ್ಲಿ "ಕನ್ಯಾ ವಿವಾಹ ಕಾಲ ನಿರ್ಣಯ"ದ ಕುರಿತು ಚರ್ಚೆ ನಡೆದಾಗ ಗಣಪತಿ ಮುನಿಗಳು ಮಾಡಿದ ಅಂತಿಮ ಉಪನ್ಯಾಸದ ಅಭಿಪ್ರಾಯವೇ ನಿರ್ಣಾಯಕ ಸ್ಥಾನ ಪಡೆಯಿತು.

ವಾಸಿಷ್ಠಮುನಿಗಳು ಈ ಸಮ್ಮೇಳನದ ಸ್ಥಳಕ್ಕೆ ಹೋದಾಗ ನಡೆದ ಸಂಗತಿ ಯೊಂದು ಸ್ವಾರಸ್ಯಕರವಾಗಿದೆ:- ಉತ್ತರದೇಶದಲ್ಲಿ ಪಂಡಿತರು - ವಿದ್ವಾಂಸರು ಎಂದರೆ ಅವರು ಭರ್ಜರಿಯ ಉಷ್ಣೀಶ(ಪೇಟಾ) ಧರಿಸಿಯೇ ಇರುತ್ತಾರೆ. ಆದರೆ ಗಣಪತಿ ಮುನಿಗಳು ಬಕ್ಕತಲೆಯವರಾಗಿದ್ದರು. ಇಳಿಬಿಟ್ಟಿಗಿಡ್ಡ ಗುಂಗುರುಕೂದಲಿನ ಈ ಬಕ್ಕತಲೆಯ ವ್ಯಕ್ತಿಯನ್ನು ವಿದ್ವಾಂಸರೆಂದು ಪರಿಗಣಿಸುವುದಕ್ಕೆ ಸಿದ್ಧರಿಲ್ಲದ ಅಲ್ಲಿಯ ದ್ವಾರರಕ್ಷಕ ಪಂಡಿತರು ಗಣಪತಿಮುನಿಗಳನ್ನು ಸಭಾಂಗಣದೊಳಕ್ಕೆ ಪ್ರವೇಶಿಸದಂತೆ ತಡೆಹಿಡಿದರು. ಆದರೆ ಆ ಸಮ್ಮೇಳನದಲ್ಲಿ ಇದ್ದ ದರ್ಭಾಂಗ ಮಹಾರಾಜರು ಈ ಅಚಾತುರ್ಯವನ್ನು ಗಮನಿಸಿದರು. ಕಾವ್ಯಕಂಠ ಗಣಪತಿ ಮುನಿಗಳ ವಿದ್ವತ್ಪ್ರೌಢಿಮೆಯನ್ನು ಹೇಗೋ ಅರಿತಿದ್ದ ಆ ಮಹಾರಾಜರು ಅಲ್ಲಿಯ ಪಂಡಿತರ ಮೂಲಕವೇ ಇವರಿಗೆ ಗೌರವದ ಸ್ವಾಗತ ಕೊಡಿಸಿ ಸಭೆಯನ್ನು ಅಲಂಕರಿಸುವಂತೆ ಮಾಡಿದರು. ಸಮ್ಮೇಳನದಲ್ಲಿ ಇವರ ನಿರ್ದುಷ್ಟ-ನಿರರ್ಗಳ-ನಿರ್ಣಾಯಕ ಪ್ರತಿಪಾದನೆಯ ಪ್ರವಚನ ಕೇಳಿದ ಮೇಲೆ ಮಾತ್ರ ಅಲ್ಲಿಯ ಶಿರಸ್ತ್ರಾಣ ಶೋಭಿತ ಪಂಡಿತರಿಗೆ ಹೊರಗೆ ಮಾತ್ರ ಬರಿದಾಗಿ ಕಂಡರೂ ಒಳಗೆ ಅತ್ಯಂತ ಅಮೂಲ್ಯ ಪ್ರತಿಭಾಸಂಪತ್ತಿನಿಂದ ಶೋಭಿತವಾದ ಶಿರವುಳ್ಳ ಗಣಪತಿ ಮುನಿಗಳಿಗೆ ತಾವು ತಾತ್ಸಾರ ತೋರಿದ್ದು ತಪ್ಪೆಂಬುದರ ಅರಿವಾಯಿತು.

"ಹುಟ್ಟಿ 8 ವರ್ಷ ಆದ ನಂತರ ರಜಸ್ವಲೆಯಾಗುವುದಕ್ಕೆ ಮೊದಲು ಕನ್ಯೆಯು ವಿವಾಹ ನಡೆಯತಕ್ಕದ್ದು" ಇದು ಅಲ್ಲಿಯ ವಿದ್ವನ್ಮಂಡಲಿಯವರು ಮಂಡಿಸಿದ ನಿರ್ಣಯ. ಆದರೆ ಧರ್ಮಜ್ಞರಾದ ವಾಸಿಷ್ಠಮುನಿಗಳು "ಕನ್ಯೆ ರಜಸ್ವಲೆಯಾಗಿ ಮೂರುವರ್ಷ ಕಳೆಯುವುದರೊಳಗಾಗಿ ವಿವಾಹ ನಡೆಸಲ್ಪಡಬೇಕು" ಎಂಬುದಾಗಿ ಕೊನೆಯ ನಿರ್ಣಯ ಅಂಗೀಕಾರವಾಗುವಂತೆ ಮಾಡುವಲ್ಲಿ ಯಶಸ್ವಿಯಾದರು. ಆ ಸಭೆಯಲ್ಲಿ ಉಚ್ಚ ಪೀಠಗಳನ್ನು ಅಲಂಕರಿಸಿದ್ದ ವಿದ್ವತ್‌ಶ್ರೇಷ್ಠರ ಸಂಖ್ಯೆಯೇ 500ಕ್ಕೂ ಅಧಿಕ. ಶ್ರೋತೃಗಳ ಸಂಖ್ಯೆಯಾದರೋ ಹತ್ತು ಸಹಸ್ರವನ್ನೂ ಮಿಕ್ಕಿತ್ತು. ಗಣಪತಿ ಮುನಿಗಳು ದೀರ್ಘ ಉಪನ್ಯಾಸಕ್ಕೆ ತೊಡಗದೆ ಕೇವಲ ಅರ್ಧಘಂಟೆಯ ಅವಧಿಯಲ್ಲಿ ಪೂರ್ವಪಕ್ಷ-ಉತ್ತರ ಪಕ್ಷಗಳ ಸಾರವನ್ನು ಸಂಗ್ರಹಿಸಿ ತಾವು ಹೇಳಬೇಕಾದುದನ್ನು ಸಮರ್ಥವಾಗಿ ಪ್ರತಿಪಾದಿಸಿದರು. ಅವರೊಬ್ಬರಿಗೇ ಹೊಸಲಾದ ಸರಳ-ಸುಂದರ ಶೈಲಿ; ವಿದ್ವಜ್ಜನರಿಗೂ ಮಾನ್ಯವಾಗುವ ಶಾಸ್ತ್ರಯುಕ್ತಿಗಳನ್ನೊಳಗೊಂಡ ವಿಚಾರ ಸಮರ್ಥನೆ ಇವು "ಕನ್ಯಾವಿವಾಹಕಾಲ ನಿರ್ಣಯ"ವನ್ನು ಸೂಕ್ತ ರೀತಿಯಲ್ಲಿ ಪರಿವರ್ತಿಸಲು ಸಹಾಯಕವಾದವು. ಹಿಂದೆಂದೂ ಕಂಡು – ಕೇಳಿ – ಅರಿಯದ ಮಾತಿನ ಸರಣಿ, ಬಹುಶ್ರುತತ್ವ, ಇವುಗಳ ವಿದ್ವತ್ಪ್ರಭೆ ಇಡೀ ಸಭೆಯನ್ನೇ ಆನಂದ - ಆಶ್ಚರ್ಯಗಳಲ್ಲಿ ಮುಳುಗಿಸಿತು.

ಸಮ್ಮೇಳನ ಮುಗಿದ ಮೇಲೆ ಹಲವು ವಿದ್ವಾಂಸರು ಗಣಪತಿಮುನಿಗಳ ಬಿಡಾರಕ್ಕೆ ಮುತ್ತಿಗೆ ಹಾಕಿದರು. ಕೆಲವರು ತಾವು ರಚಿಸಿದ ಗ್ರಂಥಗಳಿಗೆ ಗಣಪತಿಮುನಿಗಳಿಂದ ಸಮ್ಮತಿ ಪತ್ರ ಬೇಡಿದರೆ ಅನೇಕರು ತಮ್ಮ ಉತ್ಕರ್ಷಕ್ಕಾಗಿ ಇವರಿಂದ ಪ್ರಶಸ್ತಿಪತ್ರ ಯಾಚಿಸಿದರು. ಹಲವರಿಗೆ ಇವರ ಅನುಯಾಯಿಗಳಾಗುವ ಹಂಬಲ, ಶಾಸ್ತ್ರವೇತ್ತ-ವಯೋವೃದ್ಧರಿಗೆ ಇವರನ್ನು ಅಭಿನಂದಿಸುವ ಆಶೆ. ಉಳಿದವರಿಗೆ ಇವರಿಂದ ಆಶೀರ್ವಾದ ಪಡೆಯುವ ಇಚ್ಛೆ. ಹೀಗೆ ಅಭಿಲಾಷೆ ಉಳ್ಳವರೆಲ್ಲರೂ ಅಲ್ಲಿ ಸಮ್ಮೇಳನ ನಡೆದ ದಿನಗಳಲ್ಲಿ ಇವರ ಪರಿಚರ್ಯೆ ನಡೆಸಿದರು. ಮತ್ತೆ ಸಮ್ಮೇಳನ ಮುಗಿಯುವವರೆಗೂ ಸಭೆಯಲ್ಲಿ ಗಣಪತಿಮುನಿಗಳ ಅಭಿಪ್ರಾಯವೇ ಕೊನೆಯದೆಂದು ಮಾನ್ಯಮಾಡಲ್ಪಡುತ್ತಿತ್ತು.

ಈ ಸನಾತನ ಧರ್ಮಸಮ್ಮೇಳನ ಮುಗಿದ ನಂತರ ಸಾಹಿತ್ಯಪರಿಷತ್ತೊಂದು ಅಲ್ಲಿ ಪ್ರಾರಂಭವಾಯಿತು. ಅದರ ಅಧ್ಯಕ್ಷತೆ ವಹಿಸಿದ್ದ ಮಹಾಮಹೋಪಾಧ್ಯಾಯ ಹರಪ್ರಸಾದ ಶಾಸ್ತ್ರಿಗಳು ವಾಸಿಷ್ಠ ಗಣಪತಿಮುನಿಗಳ ಲೋಕೋತ್ತರ ಸಾಹಿತ್ಯ ಪ್ರೌಢಿಮೆಯಿಂದ ಹರ್ಷಿತರಾಗಿ ಮುನಿದಂಪತಿಗಳನ್ನು ಹಾರ್ದಿಕವಾಗಿ ಅಭಿನಂದಿಸಿದರು. ಪರಿಷತ್ತು ನಡೆಯುತ್ತಿದ್ದಾಗಲೇ ಅಧ್ಯಕ್ಷರು ಅನಿವಾರ್ಯ ಕಾರಣಗಳಿಂದ

ಬೇರೆಕಡೆಗೆ ಹೋಗಬೇಕಾಗಿ ಬಂತು. ಈ ಸಂದರ್ಭದಲ್ಲಿ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ನಿರ್ವಹಿಸಲು ವಾಸಿಷ್ಠ ಮುನಿಗಳೇ ಸಮರ್ಥರೆಂದು ನಿರ್ಧರಿಸಲ್ಪಟ್ಟು ಅಧ್ಯಕ್ಷ ಪದವಿಯನ್ನು ಇವರಿಗೆ ವಹಿಸಿಕೊಡಲಾಯಿತು. ಇವರ ಅಧ್ಯಕ್ಷತೆಯಲ್ಲಿ ಪರಿಷತ್ತಿನ ಕಾರ್ಯಕಲಾಪ ಯಶಸ್ವಿಯಾಗಿ ನಡೆದು ಪರಿಸಮಾಪ್ತಿ ಪಡೆಯಿತು.

ಮಂದಾಸಾಕ್ಕೆ ಹಿಂದಿರುಗಿದ ಗಣಪತಿಮುನಿಗಳು ತಮ್ಮ ಮಗಳ ಮದುವೆಯ ಮಂಗಲಕಾರ್ಯದ ಸಲುವಾಗಿ ತಮ್ಮ ಗ್ರಾಮ ಕುಮುದೋಪಲಕ್ಕೆ ಪಯಣ ಬೆಳೆಸಿ ಅಲ್ಲಿಯೇ ಕೆಲವು ದಿನ ಇದ್ದರು.

ಪ್ರಕರಣ-19

ಮಂದಾಸಾ..............ಮಹೇಂದ್ರಗಿರಿ

ಮಹೇಂದ್ರಂ ವೈ ಗಿರಿಶ್ರೇಷ್ಠಂ ರಾಮೋನಿತ್ಯಮುಪಾಸತೇ।
(ಮಹಾಭಾರತ-ಉದ್ಯೋಗಪರ್ವ)

(ಪರಶುರಾಮನು ಪರ್ವತ ಶ್ರೇಷ್ಠ ಮಹೇಂದ್ರಗಿರಿಯನ್ನು ಸದಾ ಸೇವಿಸುತ್ತಾನೆ)

ಶೂರಾಣಾಂ ಚ ತಪಸ್ವಿನಾಂ ಚ ಪರಮಾಂ ಕಾಷ್ಠಾಮಧಿಷ್ಠಾಸ್ನುಭಿಃ
ತೇಜೋಭಿರ್ಭಗವಾನಸೌ ಭೃಗುಪತಿರ್ದಿಷ್ಟ್ಯಾಽದ್ಯ ದರ್ಶಿಷ್ಯತೇ॥
(ಮುರಾರಿಃ)

(ಪರಮ ಗುರಿ ಮುಟ್ಟುವ ಹಂಬಲವುಳ್ಳ ವೀರ ಹಾಗೂ ತಪಸ್ವಿಗಳ ಮಾರ್ಗದ ಮೇಲೆ ಈ ಭಗವಾನ್ ಶುಕ್ರಾಚಾರ್ಯರು ಬೆಳಕು ಚೆಲ್ಲಿ ಮಾರ್ಗದರ್ಶನ ಮಾಡಿಸುತ್ತಾರೆ)

ಶಯ್ಯಾ ಶಾದ್ವಲಮಾಸನಂ ಶುಚಿಶಿಲಾ ಸದ್ಮ ದ್ರುಮಾಣಾಮಧಃ
ಶೀತಂ ನಿರ್ಝರವಾರಿ ಪಾನಮಶನಂ ಕಂದಾಃ ಸಹಾಯಾ ಮೃಗಾಃ ॥
(ನಾಗಾನಂದ)

(ಹುಲ್ಲಿನ ಚಿಗುರೇ ಹಾಸಿಗೆ; ಸ್ವಚ್ಛ ಶಿಲೆಯೇ ಆಸನ; ಮರಗಳ ನೆರಳೇ ಮನೆ; ಝರಿಯ ತಣ್ಣೀರೇ ಪಾನೀಯ; ಗೆಡ್ಡೆ ಗೆಣಸುಗಳೇ ಆಹಾರ; ಕಾಡು ಪ್ರಾಣಿಗಳೇ ಸಹಚರರು.)

ಗಣಪತಿಮುನಿಗಳು ಪತ್ನಿ ಹಾಗೂ ಸಹಚರರೊಡನೆ ಮಥುರಾದಿಂದ ಪ್ರಯಾಗ ಕ್ಷೇತ್ರಕ್ಕೆ ಹೋಗಿ ತ್ರಿವೇಣೀ ಪುಣ್ಯಸ್ನಾನ ನಿರ್ವಹಿಸಿ ಅಲ್ಲಿಂದ ಮಂದಾಸಾಕ್ಕೆ ವಾಪಸು ಬಂದರು. ವಾಸಿಷ್ಠಮುನಿಗಳ ಈ ಯಾತ್ರೆಯ ವಿವರಗಳನ್ನು ತಿಳಿದ ಮಂದಾಸಾ ಮಹಾರಾಜನು ಅವರನ್ನು ಉಚಿತ ರೀತಿಯಲ್ಲಿ ಸತ್ಕರಿಸಿದನು. ಕುಟುಂಬದೊಡನೆ ಅಲ್ಲಿ ವಾಸಮಾಡುತ್ತ ಕೆಲವು ಕಾಲ ಕಳೆಯಿತು. ತಪಸ್ಸಿನ ಸಾಧನೆಯೇನೂ ಮುಂದುವರಿಯಲಿಲ್ಲ. ನಳ ಸಂವತ್ಸರದ ಕೊನೆಯ ವೇಳೆಗೆ ದೈವರಾತರು ಗುರುಸನ್ನಿಧಿಗೆ ಬಂದು ಸೇರಿದರು. 3 ವರ್ಷದಿಂದ ಗುರುದರ್ಶನವಿಲ್ಲದೆ ಖಿನ್ನರಾಗಿದ್ದ ದೈವರಾತರು ಇದೀಗ ಸಂತೃಪ್ತರಾದರು. ಗುರುಗಳ ಗೃಹಕೃತ್ಯಗಳನ್ನು ನಿರ್ವಹಿಸುವಲ್ಲಿ ತುಂಬಾ ಸಮರ್ಥರಾದ ದೈವರಾತರು ಎಲ್ಲವನ್ನೂ ನೋಡಿಕೊಳ್ಳುತ್ತಲಿದ್ದರು. ಹಾಗೆಯೇ ಶಿವರಾತ್ರಿಯ ಪುಣ್ಯಕಾಲ ಸಮೀಪಿಸಿತು.

ಮಂದಾಸಾ ಸಮೀಪದಲ್ಲೇ ಇರುವ ಮಹೇಂದ್ರ ಪರ್ವತ 5 ಸಾವಿರ ಅಡಿಗಳಷ್ಟು ಉನ್ನತವಾಗಿದೆ. ಈ ಗಿರಿಶಿಖರದಲ್ಲಿ ನೆಲೆಸಿರುವ ಪರಮೇಶ್ವರನಿಗೆ ಗೋಕರ್ಣೇಶ್ವರ ನೆಂಬ ಹೆಸರಿದೆ. ರಾಮಾಯಣ-ಮಹಾಭಾರತದಲ್ಲಿ ಈ ಗಿರಿಧಾಮವನ್ನು ಪರಶುರಾಮನ ವಾಸಸ್ಥಳವೆಂದು ಉಲ್ಲೇಖಿಸಲಾಗಿದೆ. ಪರಮೇಶ್ವರನಿಗೆ ಪುತ್ರನಂತೆಯೇ ಪ್ರಿಯನಾದ ಪರಶುರಾಮನು ಕ್ಷತ್ರಿಯಕುಲಸಂಹಾರದ ವ್ರತ ತೊಟ್ಟು ಇಲ್ಲಿಯೇ ತಪಸ್ಸು ಆಚರಿಸಿದನು. ಪ್ರತಿ ವರ್ಷ ಶಿವರಾತ್ರಿಯ ಪುಣ್ಯದಿನ ಅಸಂಖ್ಯಾತ ಯಾತ್ರಿಕರು ಈ ಗಿರಿಧಾಮಕ್ಕೆ ಬಂದು ಶಿವಪೂಜೆ ನಿರ್ವಹಿಸಿ ಕೃತಾರ್ಥರಾಗುತ್ತಾರೆ.

ಈ ಸಲ ಶಿವರಾತ್ರಿಯನ್ನು ಈ ಪುಣ್ಯಸ್ಥಳದಲ್ಲಿ ಆಚರಿಸಬೇಕೆಂಬ ದೈವರಾತರ ಸಲಹೆಯನ್ನನುಸರಿಸಿ ಅಲ್ಲಿಗೆ ಹೊರಡುವ ಸಿದ್ಧತೆ ನಡೆಯಿತು. ಭೂತಲದಿಂದ ಸುಮಾರು 1½ ಮೈಲಿ ಎತ್ತರದಲ್ಲಿರುವ ಈ ಪರ್ವತಶಿಖರವನ್ನು ಸೇರಬೇಕಾದರೆ 6 ಮೈಲಿಯ ಬಳಸುದಾರಿಯಲ್ಲಿ ಹತ್ತಿ ಹೋಗಬೇಕು. ಮಂದಾಸಾ ಆಸ್ಥಾನ ಸಚಿವರಿಂದ ವ್ಯವಸ್ಥೆಗೊಳಿಸಲ್ಪಟ್ಟ ಡೋಲಿಯಲ್ಲಿ ತಮ್ಮ ಪತ್ನಿಯನ್ನೂ ಅವರಿಗೆ ಸಹಾ

ಯಕರಾಗಿ ಶಿಷ್ಯ ದೈವರಾತರನ್ನೂ ಮುಂದೆ ಕಳಿಸಿದ ವಾಸಿಷ್ಠಮುನಿಗಳು ಸಚಿವರೊಡನೆ ಕಾಲುನಡಿಗೆಯಿಂದ ಪರ್ವತಾರೋಹಣ ಮಾಡಿದರು.

ಅಲ್ಲಿ ಮುಗಿಲು ಮುಟ್ಟುವ ಯಾತ್ರಿಕಸಮೂಹದ ಭಜನೆ-ಜಯಘೋಷ-ರುದ್ರ ಸೂಕ್ತ ಪಾರಾಯಣಗಳೊಡನೆ ಇಡೀದಿನ - ರಾತ್ರಿ ಶಿವಪೂಜೆ ನಡೆಯಿತು. ಮರುದಿನವೇ ಯಾತ್ರಿಕರೆಲ್ಲ ಪರ್ವತವನ್ನಿಳಿದು ಹೊರಟುಹೋದರು. ವಾಸಿಷ್ಠ ಮುನಿಗಳು, ದೈವರಾತರು ಇವರಿಬ್ಬರೇ ತಪಸ್ಸಿಗೋಸ್ಕರ ಆ ಗಿರಿಶಿಖರದಲ್ಲಿ ಉಳಿದುಕೊಂಡರು. ಇಲ್ಲಿ ತಪಸ್ಸು ನಡೆಸುವ ಉದ್ದೇಶ "ಪರಶುರಾಮನ ದರ್ಶನಕ್ಕೋಸ್ಕರ" ಎಂಬುದಾಗಿ ದೈವರಾತರ ದಿನಚರಿ ಪುಸ್ತಕದಲ್ಲಿ ಬರೆಯಲಾಗಿದೆ.

ಹಿಂದೆಯೇ ತಿಳಿಸಿದಂತೆ ಈ ಪರ್ವತದ ತುದಿಯ ದೇಗುಲದಲ್ಲಿರುವ ಮಹಾದೇವನಿಗೆ ಗೋಕರ್ಣೇಶ್ವರನೆಂದೇ ಹೆಸರು. ಪಶ್ಚಿಮ ಸಮುದ್ರತೀರದ ಪುರಾಣ ಪ್ರಸಿದ್ಧ ಗೋಕರ್ಣಕ್ಷೇತ್ರದಲ್ಲಿರುವ ಶಿವಲಿಂಗವು ಗೋವಿನ ಕಿವಿಯ ಆಕಾರದಲ್ಲಿದೆ. ಈ ಪರ್ವತ ಕ್ಷೇತ್ರದಲ್ಲಿ ಹಸುವಿನ ಛಿದ್ರವಾದ ಕಿವಿಯಂತಿರುವ ಲಿಂಗವನ್ನು ಗೋಕರ್ಣೇಶ್ವರನೆಂದೇ ಕರೆಯಲಾಗುತ್ತಿದೆ. ಆದ್ದರಿಂದಲೇ ವಾಸಿಷ್ಠ ಮುನಿಗಳು ಈ ದೇವನನ್ನು "ದಹರ ಗೋಕರ್ಣೇಶ್ವರ"ನೆಂದು ನಿರೂಪಿಸಿದ್ದಾರೆ.

ಈ ಶಿವಾಲಯದ ಮುಂದುಗಡೆ ಆವರಣ ವಿಲ್ಲದ ನಾರಾಯಣ ದೇವರ ಚಿಕ್ಕ ಗುಡಿಯೇ ಗುರು-ಶಿಷ್ಯರ ವಸತಿ ಸ್ಥಾನವಾಯಿತು. ಈ ಜಾಗದಲ್ಲಿಯೇ ಅವರಿಬ್ಬರು ಹೇಗೋ ಅವಕಾಶ ಮಾಡಿಕೊಂಡರು.

ಶಿವರಾತ್ರಿಯ ಸಮಯವನ್ನು ಬಿಟ್ಟರೆ ಉಳಿದ ಸಮಯದಲ್ಲಿ ಜನರು ಯಾರೂ ಇತ್ತಕಡೆಗೆ ಸುಳಿಯುವುದಿಲ್ಲ. ಕ್ರೂರ ಮೃಗಗಳ ಸಂಚಾರ ಮಾತ್ರ ಸದಾ ಇರುತ್ತದೆ. ದಟ್ಟವಾಗಿ ಬೆಳೆದು ನಿಂತ ಮರಗಳ ನೆರಳು ಸುತ್ತಲೂ ಹರಡಿಕೊಂಡು ಯಾವಾಗಲೂ ಸಂಜೆಗತ್ತಲಿನ ಭ್ರಾಂತಿಯನ್ನುಂಟು ಮಾಡುತ್ತದೆ. ಹಗಲು ವೇಳೆ ಕೂಡ ಅತ್ತಿತ್ತ ಓಡಾಡುವ ಹುಲಿ-ಕರಡಿಗಳಿಂದಲೂ, ನಿರಂತರ ಬೀಸುವ ಶಿಖರದ ಹಿಮಗಾಳಿಯಿಂದಲೂ ರಕ್ಷಣೆ ಪಡೆಯಲು ಸದಾ ಬೆಂಕಿಯನ್ನು ಉರಿಸುವುದೊಂದೇ ಉಪಾಯ. ತಪಸ್ಸಿನ ಹಂಬಲದಿಂದ ಅಲ್ಲಿ ಉಳಿದುಕೊಂಡ ಈ ಗುರು-ಶಿಷ್ಯರು ಈ ಎಲ್ಲ ಕಷ್ಟ-ಕೋಟಲೆಗಳನ್ನು ಅನುಭವಿಸುವುದು ಅನಿವಾರ್ಯವಾಯಿತು.

ಬೆಟ್ಟದ ತಪ್ಪಲಿನಲ್ಲಿ ಕಾಡಿನ ನಡುವೆ ವಾಸವಿದ್ದ ಗ್ರಾಮಾಧಿಕಾರಿಯು ಮಂದಾಸಾ ಮಹಾರಾಜರ ನಿರ್ದೇಶನದಂತೆ ಗಿರಿಶಿಖರದಲ್ಲಿರುವ ಇವರಿಗೆ

ಆಹಾರ ಸಾಮಗ್ರಿಯನ್ನು ತಲುಪಿಸುವ ವ್ಯವಸ್ಥೆಯಾಗಿತ್ತು. ಆದರೆ ಪ್ರತಿದಿನ 6ಮೈಲಿ ದುರ್ಗಮ ದಾರಿಯಲ್ಲಿ ಹೋಗಿ–ವಾಪಸು ಬರಲು ಸಾಧ್ಯವಿಲ್ಲದೆ ನಾಲ್ಕು ದಿನಕ್ಕೆ ಒಮ್ಮೆ ಮಿತಪ್ರಮಾಣದಲ್ಲಿ ಗೋಧಿ ಹಿಟ್ಟು–ಔಷಧದ ಪ್ರಮಾಣದ ಹಸುವಿನ ಹಾಲು ಇವರಿಗೆ ತಲುಪಿಸಲ್ಪಡುತ್ತಿತ್ತು. ಇದರ ಜೊತೆಗೆ ಶಿಖರದಿಂದ ನಿರಂತರ ಸ್ರವಿಸುವ ಝರಿಯ ನೀರನ್ನೇ ಸ್ನಾನ–ಪಾನಗಳಿಗೆ ಬಳಸಬೇಕಾಯಿತು. ದೇಹದಂಡನೆಯಲ್ಲಿ ಪಳಗಿ ಕಷ್ಟ ಸಹಿಷ್ಣುಗಳಾಗಿದ್ದ ಈ ತಪಸ್ವಿಗಳು ಕೂಡಾ ಈ ಪರಿಸ್ಥಿತಿಯಲ್ಲಿ ಒಂದು ತಿಂಗಳಿಗಿಂತ ಹೆಚ್ಚು ಕಾಲ ಅಲ್ಲಿ ಇರಲಾಗದೇ ಬೆಟ್ಟವನ್ನಿಳಿದು ಮಂದಾಸಾಕ್ಕೆ ವಾಪಸು ಬರುವಂತಾಯಿತು.

ಪ್ರಕರಣ- 20.

ಪುನಃ ಅರುಣಾಚಲಕ್ಕೆ-ರಮಣ ಗೀತೆ ರಚನೆ-ಮಹಾವಿದ್ಯಾ ಪ್ರವಚನ.

"ಉಷ್ಣತ್ವಮಗ್ನ್ಯಾತಪಸಂಪ್ರಯೋಗಾಚ್ಛೈತ್ಯಂ ಹಿ ಯತ್ಸಾಪ್ರಕೃತಿರ್ಜಲಸ್ಯ।"
(6–54)(ರಘುವಂಶ)

(ತಣ್ಣಗಿರುವಿಕೆ–ಮತ್ತೆ ಬಿಸಿಲು–ಬೆಂಕಿಯ ಸಂಪರ್ಕದಿಂದ ಬಿಸಿಯಾಗುವಿಕೆ। ಇದು ನೀರಿಗೆ ಸಹಜಗುಣ)

ವಿವಿಕ್ತಕರ್ಣಾಭರಣಾ ಸುಖಶ್ರುತಿಃ ಪ್ರಸಾದಯಂತೀ ಹೃದಯಾನ್ಯಪಿ ದ್ವಿಷಾಂ।
ಪ್ರವರ್ತತೇ ನಾಕೃತಪುಣ್ಯಕರ್ಮಣಾಂ ಪ್ರಸನ್ನಗಂಭೀರಪದಾ ಸರಸ್ವತೀ ॥
(ಭಾರವಿಃ)

(ಶತ್ರುಗಳ ಹೃದಯವನ್ನೇ ಆದರೂ ಪ್ರಸನ್ನಗೊಳಿಸಬಲ್ಲ–ಕಿವಿಗಳಿಗೆ ಆಪ್ಯಾಯಮಾನವೆನಿಸುವ ಮಧುರ–ಗಂಭೀರ ವಾಣಿಯು ಪುಣ್ಯಶಾಲಿಗಳಲ್ಲದವರಲ್ಲಿ ಇರಲಾರದು)

ಪಿಂಗಳ ಸಂವತ್ಸರ ಜ್ಯೇಷ್ಠಮಾಸದಲ್ಲಿ ತಮ್ಮ ಗುರು ಭಗವಾನ್ ರಮಣ ರೊಡನೆ ಕೆಲಕಾಲ ಇರುವ ಹಂಬಲದಿಂದ ವಾಸಿಷ್ಠಮುನಿಗಳು ಹೆಂಡತಿ–ಮಕ್ಕಳು–ಶಿಷ್ಯ ಸಮೂಹದೊಡನೆ ಮಂದಾಸಾದಿಂದ ಪ್ರಯಾಣ ಬೆಳೆಸಿದರು. ಈ ಸಂದರ್ಭದಲ್ಲಿ ನಡೆಯಲಿದ್ದ "ಆಂಧ್ರಸಭಾ" ಸಮ್ಮೇಳನದಲ್ಲಿ ಭಾಗವಹಿಸುವಂತೆ ಆಂಧ್ರ

ನಾಯಕರುಗಳಿಂದ ಆಹ್ವಾನಿತರಾಗಿದ್ದ ಗಣಪತಿಮುನಿಗಳು ಪ್ರಯಾಣ ಮಧ್ಯದಲ್ಲಿ ಇಳಿದು ತಾವು ಒಬ್ಬರೇ ಸಮ್ಮೇಳನದ ಸ್ಥಳಕ್ಕೆ ಹೋದರು. ಕೀರ್ತಿಶೇಷ ನೃಸಿಂಹೇಶ್ವರ ಶರ್ಮರ ಅಧ್ಯಕ್ಷತೆಯಲ್ಲಿ ನಡೆದ ಈ ಸಮ್ಮೇಳನದಲ್ಲಿ ಸ್ವರಾಜ್ಯದ ಕುರಿತು ನಿರ್ಣಯ ಮಂಡಿಸಲ್ಪಟ್ಟಿತು. ತಮ್ಮ ಅಭಿಪ್ರಾಯವನ್ನು ಕೊಡುವಂತೆ ವಾಸಿಷ್ಠ ಮುನಿಗಳನ್ನು ಕೇಳಿಕೊಂಡಾಗ ಅವರು ಮಾಡಿದ ಭಾಷಣ ತುಂಬಾ ಸತ್ವಶಾಲಿಯಾಗಿತ್ತು. ರಾಜಕೀಯ ವಿಷಯವನ್ನು ಕುರಿತು ಇದು ಅವರ ಮೊಟ್ಟಮೊದಲ ಉಪನ್ಯಾಸವಾಗಿದ್ದರೂ ನಿರ್ಭೀತರಾಗಿ ತಮ್ಮ ಅಭಿಪ್ರಾಯವನ್ನು ವಿವರಿಸಿದರು.

ನಂತರ ಅದೇ ವೇದಿಕೆಯಲ್ಲಿ ಕೀರ್ತಿಶೇಷ ಟಿ. ಆರ್. ರಾಮಚಂದ್ರಯ್ಯನವರ ಅಧ್ಯಕ್ಷತೆಯಲ್ಲಿ ವರ್ಣಾಶ್ರಮಧರ್ಮ ಪರಿಷತ್ತಿನ ಸಭೆ ಏರ್ಪಾಡಾಗಿತ್ತು. "ವೇದ–ಶಾಸ್ತ್ರ–ಸಂಪ್ರದಾಯಕ್ಕೆ ಅನುಸಾರವಾಗಿಯೇ ವೈದಿಕ ಸನಾತನ ಧರ್ಮ ಪಾಲನೆ ಶಕ್ಯವೇ ಹೊರತು ಬೇರೆ ರೀತಿಯಿಂದ ಅಲ್ಲ" ಎಂಬ ವಿಷಯ ಚರ್ಚೆಗೆ ಬಂತು. ವಾಸಿಷ್ಠ ಮುನಿಗಳು ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಹೀಗೆ ಪ್ರತಿಪಾದಿಸಿದರು:– "ವೈದಿಕ ಸನಾತನ ಧರ್ಮ ಪರಿಪಾಲನೆಗೆ ವೇದ–ಶಾಸ್ತ್ರ–ಸಂಪ್ರದಾಯಗಳೇ ಪ್ರಮಾಣಗಳೆಂದು ಈ ಸಭೆಯಲ್ಲಿ ಇದುವರೆಗೆ ಪ್ರತಿಪಾದನೆ ಮಾಡಲಾಗಿದೆ. ಆದರೆ ವೇದಗಳು–ಶಾಸ್ತ್ರಗಳು–ಸಂಪ್ರದಾಯಗಳು ಎಂಬುದಾಗಿ ದ್ವಂದ್ವ ಸಮಾಸದ ಮೂಲಕ ಪದಗಳನ್ನು ವಿಭಜಿಸಿ ಅರ್ಥಮಾಡುವುದು ಸರಿಯಲ್ಲ. ಅದಕ್ಕೆ ಬದಲಾಗಿ :– ವೇದವೇ ಆಧಾರವಾಗಿ ಉಳ್ಳವುಗಳು ಶಾಸ್ತ್ರಗಳು; ಈ ವೇದ ಶಾಸ್ತ್ರಗಳ ಸಂಪ್ರದಾಯಗಳೆಂಬುದೇ ವೇದಶಾಸ್ತ್ರ ಸಂಪ್ರದಾಯಗಳು; ಹೀಗೆ ಷಷ್ಠೀತತ್ಪುರುಷ ಸಮಾಸವನ್ನೇ ಈ ವಾಕ್ಯಕ್ಕೆ ಆಶ್ರಯಿಸಬೇಕು. ಅದು ಬಿಟ್ಟು ದ್ವಂದ್ವ ಸಮಾಸವನ್ನು ಹಚ್ಚಿದರೆ ಸಂಪ್ರದಾಯಗಳಿಗೆ ಬೇರೆ ಬೇರೆ ಪ್ರಮಾಣಗಳು ಉಂಟಾದಾಗ ಮತ್ತು ದೇಶ–ಕಾಲ ಭೇದದಿಂದ ಯಾವಾಗಲೂ ಪರಿವರ್ತನೆಯಾಗಬಲ್ಲ ಪರಿಸ್ಥಿತಿಯಲ್ಲಿ ಅವುಗಳ ಪ್ರಾಮಾಣ್ಯವು ಅಸಂಬದ್ಧವೂ–ಅವಿವೇಕ ಪೂರ್ಣವೂ ಆಗುತ್ತದೆ. ಮೇಲೆ ನಾನು ವಿವರಿಸಿವಂತೆ ಷಷ್ಠೀತತ್ಪುರುಷ ಸಮಾಸದ ಮೂಲಕ ಅರ್ಥ ಮಾಡಿದಾಗ :– ವೇದ ಶಾಸ್ತ್ರೀಯ ಸಂಪ್ರದಾಯಗಳಿಗೆ ದೇಶ–ಕಾಲಾತ್ಮಕವಾದ ಅನೇಕ ಭೇದಗಳು ಉಂಟಾದಾಗಲೂ ಅವುಗಳಿಗೆ ಪ್ರಮಾಣಗಳು ವೇದ ಶಾಸ್ತ್ರಗಳಲ್ಲಿಯೇ ಇದ್ದು ಪ್ರಾಜ್ಞರಿಗೆ ಅವು ಗ್ರಾಹ್ಯವೂ ಆಗುತ್ತವೆ." ಈ ರೀತಿ ವೇದಾಭಿಮಾನಿಯೂ, ಶಾಸ್ತ್ರವೇತ್ತರೂ ಆದ ಕಾವ್ಯಕಂಠ ಗಣಪತಿ ಮುನಿಗಳು ತರ್ಕ ಬದ್ಧವಾಗಿ ಪ್ರತಿಪಾದಿಸಿದುದನ್ನು ಸಭೆಯು ಏಕ ಕಂಠದಿಂದಲೂ–ಹರ್ಷದಿಂದಲೂ ಅಂಗೀಕರಿಸಿತು.

ಶಿಷ್ಯ ಸುಧನ್ವರ ಬೇಡಿಕೆಯಂತೆ ಮದರಾಸಿಗೆ ಪರಿವಾರದೊಡನೆ ತೆರಳಿದ ಗಣಪತಿಮುನಿಗಳು ಅವರ ಮನೆಯಲ್ಲಿ 2–3 ದಿನ ಇದ್ದು ನಂತರ ಮದರಾಸಿನ ಉಪನಗರ ಆದಿಪುರಕ್ಕೆ ಹೋದರು. ಅಲ್ಲಿ ತಮ್ಮ ಹಿಂದಿನ ಶಿಷ್ಯರು ಮತ್ತು ಈಚೆಗೆ ಶಿಷ್ಯರಾದವರಿಗೆ ಅವರುಗಳ ಪ್ರಾರ್ಥನೆಯಂತೆ ಅವರವರಿಗೆ ಯೋಗ್ಯವಾದ ಮಂತ್ರಗಳ ಉಪದೇಶ ನೀಡಿದರು. ಹಿಂದೆಯೇ ವೇದ ಮಂತ್ರೋಪದೇಶ ಪಡೆದಿದ್ದ ಶಿಷ್ಯ ಸುಧನ್ವರಿಗೆ ಮಾತಂಗೀ ದೇವತೆಯ ತಾಂತ್ರಿಕ ಮಂತ್ರದೀಕ್ಷೆ ಕೊಟ್ಟರು. ಆದಿಪುರದಲ್ಲಿ ಪರಿವಾರದೊಡನೆ ಕೆಲವು ದಿನ ಸುಖವಾಗಿ ಇದ್ದು ಪುನಃ ಸುಧನ್ವರ ಮನೆಗೆ ಹೋಗಿ ಅಲ್ಲಿಂದ ಅರುಣಾಚಲಕ್ಕೆ ತೆರಳಿದರು.

ಅಲ್ಲಿ ಗುರು ರಮಣ ಮಹರ್ಷಿಗಳ ಸಂದರ್ಶನ ಪಡೆದು ತಮ್ಮ ಪತ್ನಿಯೊಡನೆ ಕೆಲಕಾಲ ಅರುಣಾಚಲದಲ್ಲಿಯೇ ಇರಲು ನಿರ್ಧರಿಸಿ ಗುರುಗಳ ನಿವಾಸಕ್ಕೆ ಸಮೀಪವಿರುವ ವಿರೂಪಾಕ್ಷ ಗುಹೆಗೆ ಹೋದರು. ಆದರೆ ಆ ಗುಹೆಯ ಮೇಲ್ವಿಚಾರಕನಾದ ಭಿಕ್ಷುವು "ಇಲ್ಲಿ ಸಂಸಾರಿಗಳು ತಂಗಲು ಅವಕಾಶವಿಲ್ಲ" ಎಂದು ಖಚಿತವಾಗಿ ಹೇಳಿ ಗಣಪತಿ ಮುನಿಗಳಿಗೆ ಗುಹೆಯ ಕೀಲೀ ಕೈಯನ್ನು ಕೊಡಲು ನಿರಾಕರಿಸಿದರು. ಈ ಅಪಚಾರ–ಅಪಮಾನಗಳಿಂದ ಕ್ಷಣಕಾಲ ಖಿನ್ನರೂ–ಕ್ರುದ್ಧರೂ ಆದ ವಾಸಿಷ್ಠ ಮುನಿಗಳು ಮರುಕ್ಷಣವೇ ಮನಸ್ಸನ್ನು ಶಾಂತಸ್ಥಿತಿಗೆ ತಂದು ಕೊಂಡು ವಿರೂಪಾಕ್ಷ ಗುಹೆಯ ಮುಂಭಾಗದ ಜಗಲಿಯ ಮೇಲೆ ಭೋಜನಾದಿಗಳನ್ನು ಮುಗಿಸಿ ಸಮೀಪದ ಹುಣಸೇ ಮರದ ಬುಡದಲ್ಲಿ ಕುಳಿತು ಸುತ್ತಲೂ ದೃಷ್ಟಿಹಾಯಿಸಿದರು. ಎತ್ತ ನೋಡಿದರೂ ಮಳೆಯಿಲ್ಲದೆ ಹಾಹಾಕಾರ ಪಡುತ್ತಿರುವ ಮನುಷ್ಯರು–ಪ್ರಾಣಿಗಳು–ಸೊರಗಿದಮರಗಿಡಗಳನ್ನು ಹೊತ್ತ ನಿಸರ್ಗದ ಬೇಗೆಯ ನೋಟ. ಅವರ ಮನಸ್ಸು ಬೇಗುದಿಗೆ ಒಳಗಾಯಿತು. ಹಾಗೆಯೇ ಧ್ಯಾನಾಸಕ್ತರಾದ ಈ ತಾಪಸಶ್ರೇಷ್ಠರ ಮುಖದಿಂದ ಮರುತ್ಪತಿಯಾದ ಇಂದ್ರನನ್ನುಸ್ತುತಿಸುವ ಋಗ್ವೇದದ ಮಧುಚ್ಛಂದಸ ಸೂಕ್ತ ಮಂತ್ರಗಳು("ಯುಂಜಂತಿ ಬ್ರಧ್ನ ಮರುಷಂಚರಂತಂ" ಎಂಬ ಋಗ್ವೇದದ 1ನೆಯಮಂಡಲದ 6ನೆಯ ಸೂಕ್ತ) ಹೊರ ಬೀಳಲಾರಂಭಿಸಿದವು. ಏಕಾಗ್ರಚಿತ್ತದಿಂದ ಮಂತ್ರಗಳನ್ನು ಯಥಾ ವಿಧಿಯಾಗಿ ಪಠಿಸುತ್ತ ಇಂದ್ರನನ್ನು ಪ್ರಸನ್ನಗೊಳಿಸಿದರು. ಇವರ ನಿಷ್ಠಾಪೂರ್ಣ ಪ್ರಾರ್ಥನೆಗೆ ಓಗೊಟ್ಟ ದೇವೇಂದ್ರನು ಅಂದೇ ರಾತ್ರಿ ಬಿರುಸಿನ ಮಳೆಸುರಿಸಿ ಭೂಮಿಯನ್ನು ತಂಪುಗೊಳಿಸಿದನು. ಆದರೆ ಪ್ರಚಂಡ ಸಿಡಿಲಿನ ಹೊಡೆತಕ್ಕೆ ಸಿಕ್ಕಿ ಆ ಕ್ಷೇತ್ರದ ರಥವು ಭಸ್ಮವಾಗಿ ಹೋಯಿತು. (ರಥವು ಭೂಮಿಯ ಸಂಕೇತ. ಈ ಮುಂದೆ ಕಂಡಂತೆ ತಪಸ್ವಿಗಳ ಶಾಪ ವಾಣಿಯು ಭೂಮಂಡಲದ ಪ್ರಾಣಿಗಳಿಗೆ ಯಾವನಷ್ಟ ಉಂಟು ಮಾಡದೆಯೇ ತನ್ನ ಪ್ರಭಾವ

ವನ್ನು ತೋರಿಸಿ ಕೊಟ್ಟಿತು.) ವಿರೂಪಾಕ್ಷ ಗುಹೆಯಲ್ಲಿ ಭಿಕ್ಷುವು ಇವರಿಗೆ ವಸತಿಯನ್ನು ನಿರಾಕರಿಸಿದಾಗ ಈ ಮುನಿಶ್ರೇಷ್ಠರು ಹೇಳಿಕೊಂಡ:-

ಅದ್ಯ ಕೋಽರ್ಥಂ ವಿಮೋಕ್ಷ್ಯಾಮಿ ಖಾಂಡವೇಽಗ್ನಿಮಿವಾರ್ಜುನಃ ।
ಭುವನೇ ಪ್ರಾಣಿಭಿಃ ಪೂರ್ಣೇ ಪರಿತೋಽಪಿ ಚ ವಿಸ್ತೃತೇ ॥
ಸಲಿಲಂ ಕ್ಷಿಪತಶ್ಚಾಪಿ ಧುನ್ವಂತಶ್ಚಾಪಿ ಪರ್ವತಾನ್ ।
ಯಥೇಂದ್ರಸ್ಯ ತಥೇಶಸ್ಯ ಪುತ್ರಸ್ಯ ಮಮ ವೈ ಮಹಃ ॥

ಮಾತಿನಪರಿಣಾಮವೇ ಇದಾಗಿರಬೇಕು.

ನಂತರ ಪತ್ನಿಯನ್ನು ಬೇರೆ ಕಡೆಗೆ ಕಳಿಸಿ ತಾವು ಸ್ಕಂದಗುಹೆಯಲ್ಲಿ ಗುರು ರಮಣರೊಡನೆ ಇದ್ದುಕೊಂಡು ದಶ ಮಹಾವಿದ್ಯಾ ಸೂತ್ರಗಳನ್ನು ರಚಿಸಿದರು. ನಗರದಲ್ಲಿ ಕೆಲವು ಪ್ರವಚನಗಳನ್ನೂ ಕೊಟ್ಟರು. ಅರುಣಾಚಲದಲ್ಲಿ ಬಹುಕಾಲದಿಂದ ವಾಸವಿದ್ದ ಶೇಷಾದ್ರಿ ಸ್ವಾಮಿಗಳೆಂಬವರು ಜನ ಜಂಗುಳಿಯನ್ನು ದೂರವಿರಿಸಲು ಮೇಲು ತೋರಿಕೆಗೆ ಹುಚ್ಚರಂತೆ ತೋರುತ್ತ ತಪಸ್ಸು-ತಿಳಿವಳಿಕೆಗಳಲ್ಲಿ ತುಂಬಾ ಮುಂದುವರಿದಿದ್ದ ಯೋಗಿಗಳು. ಅಂತಹ ವ್ಯಕ್ತಿ ವಾಸಿಷ್ಠಮುನಿಗಳ ಎಲ್ಲಾ ಪ್ರವಚನಗಳಲ್ಲಿಯೂ ಹಾಜರಿದ್ದು ಶ್ರೋತೃಗಳು ಪ್ರವಚನದ ಕೊನೆಯಲ್ಲಿ ಪ್ರವಚನಕಾರರಿಗೆ ಗೌರವ ಪೂರ್ವಕ ಅರ್ಪಿಸಲು ಉದ್ದೇಶಿಸಿದ ಕಾಣಿಕೆಗಳನ್ನು ತಾವೇ ಒಟ್ಟು ಮಾಡಿ ವಾಸಿಷ್ಠಮುನಿಗಳ ಮುಂದಿಡುತ್ತಿದ್ದರು.

ಈ ಪ್ರವಚನಗಳು ನಡೆಯುತ್ತಿದ್ದಾಗ ಅಲ್ಲಿ ಉಪಸ್ಥಿತರಿರುತ್ತಿದ್ದ ಭಗವಾನ್ ರಮಣ ಮಹರ್ಷಿಗಳಿಂದ ಪ್ರವಚನದ ಕೊನೆಯಲ್ಲಿ ಅನೇಕರು ತಮ್ಮ ಸಂದೇಹಗಳಿಗೆ ಸಮಾಧಾನ ಬಯಸುತ್ತಿದ್ದರು. ಮಹರ್ಷಿಗಳು ನೀಡುತ್ತಿದ್ದ ಉತ್ತರಗಳನ್ನು ವಾಸಿಷ್ಠಮುನಿಗಳು ಆಯಾಯಸಂದರ್ಭದಲ್ಲಿಯೇ ಸಂಗ್ರಹಿಸಿ ಸಂಸ್ಕೃತ ಶ್ಲೋಕಗಳಲ್ಲಿ ಅಳವಡಿಸಿ "ರಮಣಗೀತೆ"ಯನ್ನು ಸಿದ್ಧಪಡಿಸಿದರು. 3-4ವರ್ಷದ ಹಿಂದೆ ಅರುಣಾಚಲ ಶಾಸ್ತ್ರಿಗಳೆಂಬ ಪಂಡಿತರೊಡನೆ ವಾಸಿಷ್ಠ ಮುನಿಗಳು ಚರ್ಚೆ ನಡೆಸಿದಾಗ ಕೊನೆಯಲ್ಲಿ ನಿರ್ಣಾಯಕ ಅಭಿಮತವನ್ನು ಮಹರ್ಷಿ ರಮಣರು ನೀಡುತ್ತಿದ್ದರು. ಉಪಾಸನೆಯ ವಿಷಯವೇ ಪ್ರಧಾನವಾಗಿ ಉಳ್ಳ ಮಹರ್ಷಿರಮಣರ ಆ ಉಪನ್ಯಾಸಗಳನ್ನೇ "ರಮಣಗೀತೆಯ" ಮೊದಲ ಅಧ್ಯಾಯವಾಗಿ ವಾಸಿಷ್ಠ ಮುನಿಗಳು ಅಳವಡಿಸಿದರು. ಸಂಸ್ಕೃತವನ್ನು ಕಲಿತಿರದ ರಮಣ ಭಗವಾನರ ಹೃದಯದಿಂದ ತಾನಾಗಿ ಹೊರಹೊಮ್ಮಿದ "ಹೃದಯ ಕುಹರೇ" ಎಂಬ ಶ್ಲೋಕದ ವಿಷಯವೇ ರಮಣ

ಗೀತೆಯ 2ನೇ ಅಧ್ಯಾಯವಾಯಿತು. ಭಗವಾನರ ಶಿಷ್ಯರು ಮತ್ತು ಶ್ರೋತೃಗಳು ಕೇಳಿದ ಪ್ರಶ್ನೆಗಳಿಗೆ ನೀಡಲ್ಪಟ್ಟ ಸಮಾಧಾನಗಳನ್ನು ವಾಸಿಷ್ಠ ಗಣಪತಿ ಮುನಿಗಳು ಪ್ರತ್ಯೇಕ ಅಧ್ಯಾಯಗಳಲ್ಲಿ ರಚಿಸಿ ರಮಣ ಗೀತೆಯಲ್ಲಿ ಸೇರಿಸಿದರು.

ಪುರುಷರಂತೆ ಮಹಿಳೆಯರಿಗೂ ಸಂನ್ಯಾಸಕ್ಕೆ ಅಧಿಕಾರವುಂಟು. ಮುಕ್ತರಾದವರ ದೇಹವು ದೇವಾಲಯಕ್ಕೆ ಸಮಾನ ಎಂಬ ಈ ರಮಣಗೀತೆಯ ಅನುಶಾಸನದ ಪ್ರಕಾರವೇ ಸಿದ್ಧಿ ಹೊಂದಿದ ಭಗವಾನ್ ರಮಣರ ತಾಯಿಯವರಿಗೆ ಸಮಾಧಿಯನ್ನು ಕಲ್ಪಿಸಿದ್ದು.

ಈ "ರಮಣ ಗೀತೆಯ ಮೇಲೆ ನಾನು (ಕಪಾಲಿ ಶಾಸ್ತ್ರಿ) ರಚಿಸಿರುವ "ಪ್ರಕಾಶ"ವೆಂಬ ವ್ಯಾಖ್ಯಾನದಲ್ಲಿ ಈ ಕೆಳಗಿನ ಶ್ಲೋಕಗಳು ಉಧಾಹರಿಸಲ್ಪಟ್ಟಿವೆ :--

ಏವಮಧ್ಯಾತ್ಮಕಾಮಾನಾಂ ಪಾಕಭೇದಾನುಸಾರತಃ ।
ರೋಚನಾರುಚಿಭಿನ್ನಾನಾಂ ಸಾಮರಸ್ಯಪರಿಪ್ಲುತಾ॥
ಮಹರ್ಷಿಣೋಪದಿಷ್ಟೇಽಯಂ ನಿತ್ಯಮಾತ್ಮನಿ ತಿಷ್ಠತಾ ।
ಅಧ್ಯಾತ್ಮದೃಷ್ಟ್ಯಾ ಸಂದೋಹಂ ಸಂದೇಹಾನಾಂ ವ್ಯಪೋಹತಾ॥
ಶ್ಲೋಕಾನಾಂ ತ್ರಿಶತ್ಯೈವಾರ್ಣ್ಯಾ ಗೈರ್ವಾಣ್ಯಾ ಕವಿಕುಂಜರಃ ।
ಅಷ್ಟಾದಶಭಿರಧ್ಯಾಯೈರ್ಗೀತಾಮೇತಾಂ ನಿಬದ್ಧವಾನ್॥

ಈ ರೀತಿಯಾಗಿ ಭಿನ್ನ ಅಭಿರುಚಿಯುಳ್ಳ ಅಧ್ಯಾತ್ಮ ಪಿಪಾಸುಗಳಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಸಮಾಧಾನಗಳನ್ನು ಸದಾ ಆತ್ಮಚಿಂತನೆಯಲ್ಲಿಯೇ ಮಗ್ನರಾಗಿರುವ ಮಹರ್ಷಿ ರಮಣರು ಆಧ್ಯಾತ್ಮಿಕ ದೃಷ್ಟಿಯಿಂದ ಯಾವ ಸಂದೇಹಕ್ಕೂ ಎಡೆಯಿಲ್ಲದಂತೆ ಸ್ಪಷ್ಟವಾಗಿ ಉಪದೇಶಿಸಿದ್ದಾರೆ. ಅವುಗಳನ್ನು 300 ಸಂಸ್ಕೃತ ಶ್ಲೋಕಗಳಲ್ಲಿ ಅಳವಡಿಸಿ 18 ಅಧ್ಯಾಯಗಳಾಗಿ ವಿಂಗಡಿಸಿ ಕವಿಶ್ರೇಷ್ಠ ವಾಸಿಷ್ಠ ಮುನಿಯು ಈ ರಮಣ ಗೀತೆಯನ್ನು ರಚಿಸಿದ್ದಾನೆ.

ಈ ನಡುವೆ "ರಮಣಾನಂದ ನಿಲಯದ" ವಾರ್ಷಿಕೋತ್ಸವ ಸಮಾರಂಭ ಸನ್ನಿಹಿತವಾಯಿತು. ವಾಸಿಷ್ಠ ಮುನಿಗಳನ್ನೇ ಈ ಸಮಾರಂಭದ ಅಧ್ಯಕ್ಷತೆಗೆ ಆಹ್ವಾನಿಸಲಾಗಿತ್ತು. ವಾಸಿಷ್ಠರ ಶಿಷ್ಯವರ್ಗದಲ್ಲಿ ಅತ್ಯಂತ ವಾಗ್ಮಿಯೆಂದು ಪ್ರಸಿದ್ಧರಾದ ಶಿಷ್ಯರೊಬ್ಬರ ಪ್ರವಚನದ ವೈಖರಿಯನ್ನು ಗಣಪತಿಮುನಿಗಳು ಇದುವರೆಗೆ ಸ್ವತಃ ಕೇಳುವ ಅವಕಾಶ ಒದಗಿರಲಿಲ್ಲ. ಆದಕ್ಕೆ ಇದೇ ಅವಸರವನ್ನು

ಉಪಯೋಗಿಸಿಕೊಳ್ಳಲು ನಿರ್ಧರಿಸಿದ ಗಣಪತಿಮುನಿಗಳು ಮದರಾಸಿನಲ್ಲಿದ್ದ ಆ ಶಿಷ್ಯರಿಗೆ ಆಹ್ವಾನ ಕೊಡಿಸಿ ಈ ಸಮಾರಂಭಕ್ಕೆ ಅವರನ್ನು ಬರಮಾಡಿ ಕೊಂಡರು.

ಆ ಶಿಷ್ಯರು ಉಪನ್ಯಾಸ ನೀಡುತ್ತಿದ್ದಾಗ ಶಿಷ್ಯವತ್ಸಲರಾದ ವಾಸಿಷ್ಠಮುನಿಗಳು ಅಧ್ಯಕ್ಷಪೀಠದಲ್ಲಿದ್ದುಕೊಂಡೇ ಆತನ ಉಪನ್ಯಾಸದ ಮಾತುಗಳನ್ನು ಸೂತ್ರ ರೂಪದಲ್ಲಿ ಸಂಗ್ರಹಿಸಿದರು. ಮರುದಿನ ವಾಸಿಷ್ಠಮುನಿಗಳು ಅಧ್ಯಕ್ಷ ಪೀಠದಿಂದ ಮಾಡಿದ 'ತಪಸ್ಸು' ಎಂಬ ವಿಷಯದ ಸಮಾರೋಪ ಪ್ರವಚನದ ವಾಕ್ಯಗಳನ್ನು ಅವರ ಇದೇ ಶಿಷ್ಯರು ಸೂತ್ರ ರೂಪದಲ್ಲಿ ರಚಿಸಿದರು. ಸಾಮಾನ್ಯವಾಗಿ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇತರ ಭಾಷಣಕಾರರ ಕೆಲವು ಮುಖ್ಯ ಅಂಶಗಳನ್ನು ಉಲ್ಲೇಖಿಸಿ ಅವುಗಳ ಗುಣ-ದೋಷಗಳನ್ನು ತೋರಿಸಿ ಸೂಕ್ತಸಮಾಧಾನ ನೀಡುವುದು ವಾಡಿಕೆ. ಆದರೆ ಇಲ್ಲಿ ಈ ಶಿಷ್ಯನ ಮೊದಲ ಪ್ರವಚನವನ್ನು ಸಭಾಸದರೇ ತುಂಬಾ ಪ್ರಶಂಸಿಸಿ ಸಂತೋಷ ವ್ಯಕ್ತಪಡಿಸಿರುವಾಗ ಅಧ್ಯಕ್ಷರು ಹೇಳಲು ಉಳಿದಿರುವುದಾದರೂ ಏನು? ಎಂಬ ಔದಾಸೀನ್ಯದ ಪರಿಸ್ಥಿತಿ ಕಂಡು ಬರುತ್ತಿತ್ತು. ಆದರೆ ಔಚಿತ್ಯ-ಪರೇಂಗಿತ ಜ್ಞಾನವುಳ್ಳ ವಾಸಿಷ್ಠಮುನಿಗಳು ಎದ್ದುನಿಂತು ಕೆಲವೇ ಶಬ್ದಗಳಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದಾಗ ಸಭಾಸದರಿಗೆ ಆದ ಸಂತಸ ಹೇಳತೀರದು. ಕೊನೆಯಲ್ಲಿ ಗಣಪತಿಮುನಿಗಳು ಸ್ವಾರಸ್ಯವೂ-ಗಂಭೀರವೂ ಆದ ಈಮಾತುಗಳನ್ನು ಹೇಳಿದರು:- ನನ್ನ ಶಿಷ್ಯರಲ್ಲಿ ಒಬ್ಬರಾದ ಈ ಭಾಷಣಕಾರರು "ತಮ್ಮ ಪ್ರವಚನದಲ್ಲಿ ಕಾಣಬರುವ ದೋಷಗಳೆಲ್ಲಾ ತಮ್ಮದೆಂದೂ, ಗುಣಗಳು ತಮ್ಮ ಗುರುಗಳ ಪಾಲಿಗೆ ಸಲ್ಲತಕ್ಕವುಗಳೆಂದೂ" ಹೇಳಿಬಿಟ್ಟಿದ್ದಾರೆ. ಆದರೆ ಇಲ್ಲಿ ದೋಷಗಳೇನೂ ಕಂಡು ಬರುವುದಿಲ್ಲ. ಗುಣಗಳಷ್ಟೇ ಕಂಡುಬರುತ್ತಿವೆ. ಈ ಗುಣಗಳನ್ನು ಕುರಿತು ನಾನು ವಿವರಿಸುವಂತಿಲ್ಲ. ಕಾರಣ ಇಷ್ಟೇ :— ಗುಣಗಳೆಲ್ಲಾ ಗುರುಗಳಿಗೆ ಸೇರಿದ್ದೆಂದು ಅವರೇ ಹೇಳಿರುವಾಗ ಅವರಿಗೆ ಗುರುಸ್ಥಾನದಲ್ಲಿರುವ ನಾನು ಅವುಗಳ ಬಣ್ಣನೆಗೆ ತೊಡಗಿದರೆ ಆತ್ಮ ಶ್ಲಾಘನೆ ಮಾಡಿಕೊಂಡಂತೆ ಆಗುವುದರಿಂದ ನಾನು ಇಷ್ಟಕ್ಕೇ ಮುಗಿಸುತ್ತಿದ್ದೇನೆ.

ಪ್ರಕರಣ-21

ಸಿಕಂದರಾಬಾದ್‌ನಿಂದ ಪಯಣ

ಕಿಂ ವಾಽಭವಿಷ್ಯದರುಣಸ್ತಮಸಾಂ ವಿಭೇತ್ತಾ
ತಂ ಚೇತ್ ಸಹಸ್ರಕಿರಣೋ ಧುರಿ ನಾಕರಿಷ್ಯತ್ (ಶಾಕುಂತಲಾ) (7-5)

[redacted]

ನವರಾತ್ರಿ ಕಳೆದ ಮೇಲೆ ವಾಸಿಷ್ಠ ಮುನಿಗಳು ರೇಣುಕಾ ಕ್ಷೇತ್ರ ಕುಂಡಲೀಪುರಕ್ಕೆ ಬಂದು 6 ತಿಂಗಳು ಇದ್ದರು. ಮಂದಾಸಾ-ಮಹೇಂದ್ರ ಗಿರಿಯಲ್ಲಿ ತಮ್ಮನ್ನು ಕೂಡಿಕೊಂಡು ಇದುವರೆಗೂ ಗುರುಸೇವಾ ತತ್ಪರರಾಗಿದ್ದ ದೈವರಾತರನ್ನು ಅವರ ಊರು ಗೋಕರ್ಣಕ್ಕೆ ವಾಪಸು ಹೋಗಲು ಅನುಮತಿ ನೀಡಿ ತಾವು ಮಗನ ಮದುವೆ ಮುಂತಾದ ಕೌಟುಂಬಿಕ ಜವಾಬ್ದಾರಿಗಳ ನಿರ್ವಹಣೆಗಾಗಿ ಪತ್ನಿ-ಮಕ್ಕಳೊಡನೆ ಸ್ವಗ್ರಾಮಕ್ಕೆ ತೆರಳಿ ಅಲ್ಲಿ 3-4 ವರ್ಷ ಇದ್ದರು.

ಮದರಾಸಿನಲ್ಲಿ ವಾಸಿಷ್ಠ ಮುನಿಗಳ ಅಭಿಮಾನೀ ಶಿಷ್ಯವರ್ಗದವರು ದೀರ್ಘ ಕಾಲ ಗುರುದರ್ಶನವಿಲ್ಲದೆ ಕಾತರಗೊಂಡಿದ್ದಾಗಲೇ "ದಾರುಣ ವಿಷಮ ಜ್ವರ ಪೀಡಿತರಾಗಿದ್ದ ಗಣಪತಿಮುನಿಗಳು ಇದೀಗ ಪ್ರಾಣಾಪಾಯದಿಂದ ಪಾರಾಗಿ ಸ್ವಸ್ಥರಾಗುತ್ತಿದ್ದಾರೆ" ಎಂಬ ಸುದ್ದಿ ಕೇಳಿಬಂದು ವ್ಯಾತ್ತ್ರಮ್ಸ್ಟು ಆತಂಕ ಉಂಟುಮಾಡಿತು. ಆದಿಪುರದ ಶಿಷ್ಯರಲ್ಲೊಬ್ಬರು" ನಮ್ಮ ಪ್ರಾಣಗಳಿಗೆ ಚೈತನ್ಯ ಸ್ವರೂಪರಾದ ಆಚಾರ್ಯರು ಅದೃಷ್ಟವಶಾತ್ ಜೀವಂತರಾಗಿ ಇದ್ದಾರೆ. ಅವರ ಸಂದರ್ಶನ ಪಡೆಯಲೇ ಬೇಕು" ಎಂದು ನಿರ್ಧರಿಸಿ ಸಿಕಂದರಾಬಾದಿಗೆ ಬಂದರು. ಅಲ್ಲಿಯ ಶಿಷ್ಯ ಸುಬ್ರಹ್ಮಣ್ಯಶಾಸ್ತ್ರಿಗಳ ನಿವಾಸದಲ್ಲಿ ವಾಸಿಷ್ಠ ಮುನಿಗಳನ್ನು ಸಂದರ್ಶಿಸಿ ಸಂತಸಗೊಂಡರು. ಬಹುಕಾಲದ ನಂತರ ಪರಸ್ಪರ ಸಂಧಿಸಿದ ಈ ಗುರು-ಶಿಷ್ಯರ ಮಾತು-ಕತೆಗಳಿಗೆ ಹಗಲು-ರಾತ್ರಿಗಳ ಭೇದವೇ ಕಾಣಲಿಲ್ಲ.

ಅಂದು ನಡುರಾತ್ರಿಯ ಸಮಯ. ವಾಸಿಷ್ಠ ಮುನಿಗಳು ಹಟಾತ್ತನೆ ಹಾಸಿಗೆಯಿಂದ ಎದ್ದು ಕುಳಿತು :- ಇದುವರೆಗಿನ ತಮ್ಮ ಬದುಕಿನ ವಿಷಯಗಳನ್ನು ವಿವರಿಸುತ್ತ ಇದೀಗ ನಾನು ಗ್ರಹಣದಿಂದ ಬಿಡುಗಡೆ ಪಡೆದಿದ್ದೇನೆ. ತಪಸ್ವಿಗಾಗಿ

ಅರುಣಾಚಲದ ಗುರುಸನ್ನಿಧಿಗೆ ಬಂದಿದ್ದೇನೆ ಎಂದು ಹೇಳಿ ತಮ್ಮ ಅಭಿಮಾನ ದೇವತೆ ಗಣಪತಿಯನ್ನು ಕುರಿತು ಛಂದೋಬದ್ಧವಾದ ಈ ಶ್ಲೋಕಗಳನ್ನು ಪಠಿಸಿದರು :-

ಘೋರಂ ಕರೋಮಿ ನ ತಪೋ ಯದಿ ತೇऽಪರಾಧಃ
ಕಿಂ ಪ್ರೇರಣಂ ನ ಕೃತವಾನಸಿ ರುದ್ರಸೂನೋ ।
ಸಂಪ್ರೇರಿತಶ್ಚ ಭವತಾ ಯದಿ ನಾಚರೇಯಂ
ಸಂಪ್ರೇರಣಸ್ಯ ತವ ಕಾ ಗಜವಕ್ತ್ರ ಶಕ್ತಿಃ ॥

ಎಲೈ ಶಿವಸುತನೇ! ನಾನು ಧೃಢವಾಗಿ ತಪಸ್ಸನ್ನಾಚರಿಸಲಿಲ್ಲವಾದರೆ ನೀನೇಕೆ ಆಬಗ್ಗೆ ನನ್ನನ್ನು ಪ್ರೇರಿಸಲಿಲ್ಲ? ನಿನ್ನಿಂದ ಪ್ರೇರಿಸಲ್ಪಟ್ಟರೂ ನಾನು ಧೃಢಚಿತ್ತದಿಂದ ತಪೋಮಗ್ನನಾಗಲಿಲ್ಲವೆಂದಾದರೆ ನಿನ್ನ ಆ ಪ್ರೇರಣಾ ಶಕ್ತಿಯಾದರೂ ಎಂತಹದು ?

ಈ ಶ್ಲೋಕವು ಮುಂದೆ 'ಹೇರಂಭೋಪಸ್ಥಾನ'ವೆಂಬ ವಾಸಿಷ್ಠಮುನಿಗಳ ಕೃತಿಯ 4ನೇ ಖಂಡದ ಶ್ಲೋಕವಾಗಿ ಸೇರಿಸಲ್ಪಟ್ಟಿತು. ಈಗ ಈ ಶ್ಲೋಕದ ನಂತರ ಅವರು ರಚಿಸಿ ಹಾಡಿದ ಇನ್ನೂ 3 ಶ್ಲೋಕಗಳು ಕೂಡ ಹೇರಂಭೋಪಸ್ಥಾನದಲ್ಲಿ ಸೇರ್ಪಡೆಯಾಗಿವೆ.

ಕಿಂ ಬೃಂಹಿತಾನಿ ಕುರುಷೇ ಕಲುಷೇಣ ಭಗ್ನೇ
ಮಗ್ನೇ ಮಹಾವಿಪದಿ ದೇವ ನಿಜೇ ವಿವರ್ತೇ ।
ನಿದ್ರಾಮಿ ಚೇದ್ವರದ ಬೋಧಯ ಹಸ್ತಘಾತಾತ್
ಗಚ್ಛಾಮಿಚೇದಪಥಮಾಶು ನಿವರ್ತಯಸ್ವ ॥

ನನ್ನದಾರಿ ಕೆಸರು ತುಂಬಿ ಹಾಳಾಗಿದೆ. ತುಂಬ ಕಷ್ಟದಲ್ಲಿ ಸಿಲುಕಿದ್ದೇನೆ. ನೀನು ಘೀಳಿಡುವುದೇಕೆ ? ನಾನು ನಿದ್ದೆಯಲ್ಲಿ ಮುಳುಗಿರುವೆನಾದರೆ ನಿನ್ನ ಕೈ ಹೊಡೆತದಿಂದ ನನ್ನನ್ನು ಎಚ್ಚರಿಸು. ತಪ್ಪುದಾರಿ ಹಿಡಿದಿರುವೆನಾದರೆ ಅದರಿಂದ ನನ್ನನ್ನು ಪಾರುಮಾಡು.

ವೇಷಸ್ತ್ವಯಾಯಮುಪರೋ ಯದಿ ದೇವ ನಾಟ್ಯಂ
ಆರಭ್ಯತಾಂ ತದುಚಿತಂ ಕಿಮುಪೈಷಿ ಮೌನಂ ।
ಏತಾಂ ಪ್ರಭೋ ಯವನಿಕಾಮುಪಸಾರಯಂತು
ಸಾಕ್ಷಾತ್ ಗಣಾಸ್ತವ ಕುತಃ ಕ್ರಿಯತೇ ವಿಲಂಬಃ ॥

ಹೇ ದೇವ ! ಇದು ನಿನ್ನ ಬೇರೆಯದೊಂದು ವೇಷವೇ ಆಗಿದ್ದಲ್ಲಿ ಅದಕ್ಕೆ ಅನುಗುಣವಾದ ನಾಟ್ಯ ಆರಂಭವಾಗಬೇಕಾದುದು ಉಚಿತ. ಸ್ವಾಮಿಯೇ ! ನೀನು ಮೌನದಿಂದಿರುವಿಯೇಕೆ ? ನಿನ್ನ ಸಹಚರರು ಈ ಪರದೆಯನ್ನು ಬದಿಗೆ ಸರಿಸಲಿ! ನೀನು ಕಾಲ ವಿಲಂಬ ಮಾಡುತ್ತಿರುವುದಾದರೂ ಏಕೆ ?

ಏತತ್ತಮೋ ನಯನಶಕ್ತಿಹರಂ ಗುಹಾಯಾಂ
ಮಾರ್ಗಂ ರುಣದ್ಧಿ ನ ವಿಲೋಕಿತುಮಸ್ಮಿ ಶಕ್ತಃ।
ಸ್ನೇಹೋಽಸ್ತಿ ಕಾಚನ ದಶಾಸ್ತಿ ವಿಭೋ ಕಟಾಕ್ಷ-
-ಜ್ಯೋತಿರ್ಲವಂ ಸದಯ ದೇಹಿ ಪುರೋ ವ್ರಜೇಯಂ॥

ಗುಹೆಯಲ್ಲಿ ಕವಿದಿರುವ ಕಗ್ಗತ್ತಲು ಕಣ್ಣಿನ ನೋಟದ ಶಕ್ತಿಯನ್ನೇ ನಾಶ ಪಡಿಸಿ ಹೊರಬರುವ ದಾರಿಯನ್ನೇ ಕಟ್ಟಿಬಿಟ್ಟಿದೆ. ಏನನ್ನೂ ನೋಡಲಾರದವನಾಗಿದ್ದೇನೆ. ನಿನಗೆ ನನ್ನಲ್ಲಿ ಪ್ರೀತಿ ಇದ್ದರೆ – ನನಗೊಂದು ಅದೃಷ್ಟವಿದೆಯಾದರೆ ಹೇ! ದಯಾಮಯ ಪ್ರಭುವೇ ? ನಿನ್ನ ಕಟಾಕ್ಷದ ತುಣುಕೊಂದನ್ನು ಇತ್ತಕಡೆಗೆ ಹರಿಸು! ನಾನು ಮುನ್ನಡೆಯಬಲ್ಲವನಾಗುತ್ತೇನೆ.

ಪುನಃ ಅರುಣಾಚಲಕ್ಕೇ ಹೋಗುವುದಾಗಿ ನಿರ್ಧರಿಸಿ ಶಿಷ್ಯರಿಗೆ ತಿಳಿಸಿದ ವಾಸಿಷ್ಠಮುನಿಗಳು ಸ್ವಲ್ಪಕಾಲದ ನಂತರ ಅಲ್ಲಿಂದ ಹೊರಟರು.

ಪ್ರಕರಣ–22

ಅರುಣಾಚಲವಾಸ - ಯೋಗಶಕ್ತಿವಿಲಾಸ

"ವ್ಯಪೋಹ್ಯ ಶೀರ್ಷಕಪಾಲೇ ಭೂರಿತ್ಯಗ್ನೌ ಪ್ರತಿತಿಷ್ಠತಿ।"
(ತೈತ್ತರೀಯೋಪನಿಷತ್)

ದುರ್ಮತಿ ಸಂವತ್ಸರದ ಕೊನೆಯಲ್ಲಿ ಪತ್ನಿಯೊಡನೆ ಸಿಕಂದರಾಬಾದ್ ಬಿಟ್ಟು ಅರುಣಾಚಲಕ್ಕೆ ಹೊರಟ ಗಣಪತಿ ಮುನಿಗಳು ಮದರಾಸಿನ ಆದಿಪುರಕ್ಕೆ ಬಂದರು. ಗುರುದಂಪತಿಗಳನ್ನು ಅಲ್ಲಿಯ ಶಿಷ್ಯಸಮೂಹ ತನ್ನ ಬಂಧುಬಳಗದೊಡಗೂಡಿ ಆತಿಥೇಯ ಭಕ್ತಿ-ಸಂಭ್ರಮ-ಗೌರವ-ಆತ್ಮೀಯತೆಗಳಿಂದ ಸ್ವಾಗತಿಸಿತು. ಅಲ್ಲಿ ಅವರು ಕಳೆದ 2 ದಿನಗಳು ದೇವತಾ ಉತ್ಸವದಂತೆ ಇದ್ದವು. ಅಲ್ಲಿಂದ

ಮದರಾಸ್ ನಗರದಲ್ಲಿರುವ ಸುಧನ್ವರ ಮನೆಗೆ ಆಗಮಿಸಿದ ಗುರುದಂಪತಿಗಳಿಗೆ ದೊರೆತದ್ದು ರಾಜೋಪಚಾರ. ಅಲ್ಲಿ 1 ತಿಂಗಳು ಕ್ಷಣದಂತೆ ಕಳೆದು ಹೋಯಿತು.

ಈ ಅವಧಿಯಲ್ಲಿ ವಾಸಿಷ್ಠ ಮುನಿಗಳ ಪ್ರವೃತ್ತಿಯಲ್ಲಿ ಅಪೂರ್ವ ಬದಲಾವಣೆ ಕಾಣಿಸತೊಡಗಿತು. ಗುರುಗಳ ಅನುಗ್ರಹ ವಿಶೇಷದ ಪರಿಣಾಮವಾಗಿಯೇ ಯೋಗದ ರಹಸ್ಯಗಳು ತಾವಾಗಿ ಅವರ ಅರಿವಿಗೆ ಬರುತ್ತ ಅವರು ಒಂದು ಬಗೆಯ ಅದಮ್ಯ ಉತ್ಸಾಹ – ಆವೇಶಗಳಿಗೆ ಒಳಗಾಗುತ್ತಿದ್ದರು. ಅವರಿಗೆ ಅರಿವಿಲ್ಲದೆಯೇ ಅವರ ಶರೀರದಿಂದ ಹೊರಸೂಸುತ್ತಿದ್ದ ಆತ್ಮತೇಜಸ್ಸು ನಮಗೆಲ್ಲರಿಗೂ ಯೋಗಲಹರಿಯ ಅನುಭವ ಉಂಟುಮಾಡುತ್ತಿತ್ತು. ಅಂದಿನ ಅವರ ಸ್ಥಿತಿ ಅವರದೇ ಮಾತಿನಂತೆ ಹೀಗಿತ್ತು.

ಪ್ರಾಣಾಯಾಮಾದಿಮಾರ್ಗೇಣ ಯೋಗಂ ನಾಽಭ್ಯಸ್ತವಾನಹಂ।
ಗುರುದೈವ ಕಟಾಕ್ಷೇಣ ಪ್ರಾಪ್ತಮೇತದಸಂಶಯಂ॥

ಯೋಗವನ್ನು ಪ್ರಾಣಾಯಾಮವೇ ಮೊದಲಾದ ಕ್ರಮಗಳಿಂದ ಅಭ್ಯಾಸ ಮಾಡಿದವನು ನಾನಲ್ಲ! ಕೇವಲ ಗುರುದೇವರ ಕಟಾಕ್ಷದಿಂದಲೇ ಈ ಸ್ಥಿತಿಯನ್ನು ನಾನು ಪಡೆದೆನೆಂಬುದರಲ್ಲಿ ಸಂದೇಹವೇ ಇಲ್ಲ!

ಮುಂದೊಮ್ಮೆ ಅವರು ಈಗ ತಾವು ಇದ್ದ ಸ್ಥಿತಿಯನ್ನು ವಿವರಿಸಿದ್ದು ಹೀಗೆ:–

ಉಲ್ಲಾಸಃ ಕುಂಡಲಿನ್ಯಾಃ ಪ್ರಕಟಪರಿಸರೋಽಲಕ್ಷ್ಯತಾಂತರ್ಬಹಿರ್ವಾನ್
ವಿದ್ಯಾನಾಮಾವಿರಾಸೀತ್ ಪರಿಕರಪಟಲೋ ಯೋಗಸಂಬಂಧಿನೀನಾಂ।
ಪಶ್ಚಾದನ್ಯಚ್ಛರೀರಂ ಕಿಮಪಿ ಸಮುದಿತಂ ನೇತೃವನ್ಮೇ ಗರೀಯೋ
ಗಾತ್ರಂ ಸರ್ವಂ ಪವಿತ್ರಂ ಸುಖಪುಜನಿಕೃತಂ ಚರ್ಚಯಾ ಚಂದನಸ್ಯ॥

ದೇಹದ ಒಳ–ಹೊರಗುಗಳಲ್ಲಿ ಜಾಗ್ರತಗೊಂಡ ಕುಂಡಲಿನೀ ಶಕ್ತಿಯು ನಿಚ್ಚಳವಾಗಿ ತೋರಲಾರಂಭವಾಯಿತು. ಯೋಗಕ್ಕೆ ಸಂಬಂಧಪಟ್ಟ ವಿವರಗಳೆಲ್ಲ ಸ್ಪಷ್ಟವಾಗಿ ಕಾಣಿಸತೊಡಗಿದವು. ನಂತರ ಇನ್ನೊಂದು ಶರೀರ ಉದ್ಭವಿಸಿ ನನ್ನ ಮಾರ್ಗದರ್ಶಕನಂತೆ ಬೃಹದ್ರೂಪದಲ್ಲಿ ಗೋಚರಿಸಿತು. ನನ್ನ ಇಡೀ ಶರೀರವು ಚಂದನಲೇಪನದಿಂದ ಆವೃತವಾದಂತೆ ಒಂದು ಬಗೆಯ ಸುಖಾನುಭವಕ್ಕೆ ಪಾತ್ರವಾಯಿತು.

ಅರುಣಾಚಲವನ್ನು ಸೇರಿದ ವಾಸಿಷ್ಠ ಮುನಿ ದಂಪತಿಗಳು ಗುರುರಮಣ ರನ್ನು ಸಂದರ್ಶಿಸಿ ಆಶೀರ್ವಾದ ಪಡೆದರು. ಹಿಂದೆ ರಮಣ ಮಹರ್ಷಿಗಳ ಆವಾಸ ಸ್ಥಾನವಾಗಿದ್ದು—ತಾವು ಉಮಾಸಹಸ್ರವನ್ನು ರಚಿಸಿದ ಸ್ಥಳ—ಆಮ್ರಗುಹೆಯನ್ನೇ ಈಸಲ ವಾಸಿಷ್ಠ ಮುನಿಗಳು ತಮ್ಮ ತಪಸ್ಸಿಗಾಗಿ ಆಯ್ಕೆಮಾಡಿಕೊಂಡರು.

ತಪಸ್ಸಿನ ಪ್ರಾರಂಭದ ಅಂಗವಾಗಿ ಉಮಾಸಹಸ್ರ ಕೃತಿಯನ್ನು ಪುನಃ ಸಂಸ್ಕರಿಸಿ ರಚಿಸಿದರು. ಇಂದ್ರಾಣೀ ಸಪ್ತಶತಿಯ ಹೊಸರಚನೆಯನ್ನು ಕೈಗೊಂಡು 20 ದಿನಗಳಲ್ಲಿ ಪೂರ್ಣಗೊಳಿಸಿದರು. ಇಲ್ಲಿಗೆ ಹೊರಟು ಬರುವಾಗ ಮದರಾಸಿನ ಲ್ಲಿಯೇ ವಾಸಿಷ್ಠಮುನಿಗಳಲ್ಲಿ ಕಾಣಿಸಿಕೊಂಡ ಯೋಗಶಕ್ತಿಯ ವಿಲಾಸವು ಅರುಣಾ ಚಲಕ್ಕೆ ಕಾಲಿರಿಸಿದ ಕ್ಷಣದಿಂದ ಇವರ ತಪಸ್ಸಿನ ಪ್ರಭೆಯನ್ನು ಮತ್ತಷ್ಟು ಉಜ್ವಲ ಗೊಳಿಸುತ್ತ ಹೋಯಿತು. ದೇಹದಲ್ಲಿ ವಿಶೇಷ ಶಕ್ತಿ ತುಂಬಿಕೊಂಡು ಉಕ್ಕಿ ಹರಿಯಲಾರಂಭಿಸಿತು. ನಿದ್ರೆ – ಎಚ್ಚರಗಳಲ್ಲಿ ಭೇದವೇ ಇಲ್ಲದಂತೆ ತೋರುವ ಮುನಿಗಳ ಆಂತರಂಗಿಕ ವೃತ್ತಿ—ಅದಕ್ಕನುಗುಣವಾದ ಬಾಹ್ಯ ಪ್ರವೃತ್ತಿಗಳು ಅವರ ಸಮೀಪದಲ್ಲಿ ಇರುತ್ತಿದ್ದ 2–3 ಜನ ಶಿಷ್ಯರಲ್ಲಿ ಆಶ್ಚರ್ಯದ ಜೊತೆಗೆ ಸಂಭ್ರಮವನ್ನೂ ಉಂಟುಮಾಡಿದವು.

ವಾಸಿಷ್ಠಮುನಿಗಳು ಪ್ರತಿದಿನ ಆಮ್ರಗುಹೆಯಿಂದ ಗುರುರಮಣ ಮಹರ್ಷಿ ಗಳ ನಿವಾಸ ಸ್ಕಂದ ಗುಹೆಗೆ ಹೋಗಿ ಗುರುಚರಣ ಸಂದರ್ಶನ ಪಡೆದು ಬರುವುದು ಪದ್ಧತಿ. ಆದರೆ ಒಂದು ದಿನ ಇದೂ ಅವರಿಂದ ಸಾಧ್ಯವಾಗದೇ ಹೋಯಿತು. ತಮ್ಮ ಅಸಹಾಯಕ ಪರಿಸ್ಥಿತಿಯನ್ನು ಕಾಗದದಲ್ಲಿ ಬರೆದು ಗುರುಗಳಿಗೆ ಕಳಿಸಿ ಕೊಟ್ಟರು. ಆ ಸಂದರ್ಭದಲ್ಲಿ ತಮ್ಮ ಸ್ಥಿತಿ ಹೇಗಿದ್ದಿತೆಂಬುದನ್ನು ಮುಂದೊಂದು ದಿನ ಹೀಗೆ ನಮಗೆ ವಿವರಿಸಿದರು:—

ಅಂತರ್ಗುಹೇವ ಕುಹರಂ ಶಿರಸೋ ನಿಖಾತುಂ
ಸ್ವಚ್ಛಾ ಪ್ರಮೋದಲಹರೀ ಲಸಿತಾ ವಹಂತೀ।
ಉನ್ಮಾದಿನೀ ತದನು ಕಾಽಪಿ ದಶಾಽಽವಿಷನ್ಮಾಂ
ನಾಶಕ್ನುವಂ ಚ ಗುರುಸನ್ನಿಧಿಮಭ್ಯುಪೈತುಂ॥

ಗವಿಯ ಒಳಭಾಗದಲ್ಲಿಯಂತೆ ನನ್ನ ತಲೆಯ ಒಳಗಡೆಯಲ್ಲಿ ಅಗೆತದಿಂದಲೋ ಎಂಬಂತೆ ಉಂಟಾದ ಪರಿಶುದ್ಧ ಆನಂದದ ಲಹರಿಯೊಂದು ಪ್ರಕಾಶಮಾನವಾಗಿ ಪ್ರವಹಿಸುತ್ತಿದೆ. ಅದನ್ನನುಸರಿಸಿ ಯಾವುದೋ ಒಂದು ಬಗೆಯ ಮಾದಕ

ಅವಸ್ಥೆ ನನ್ನನ್ನು ಆವರಿಸಿಕೊಂಡಿದೆ. ಇದರಿಂದಾಗಿ ನಾನೀಗ ಗುರುಸನ್ನಿಧಿಗೆ ಬರಲೂ ಸಾಮರ್ಥ್ಯವಿಲ್ಲದವನಾಗಿದ್ದೇನೆ.

ಮರುದಿನ ಹೇಗೋ ಕಷ್ಟಪಟ್ಟು ಗುರುಸನ್ನಿಧಿಗೆ ಬಂದು ತಮ್ಮ ಪರಿಸ್ಥಿತಿಯನ್ನು ನಿವೇದಿಸಿಕೊಂಡರು. ಕರುಣಾಪೂರ್ಣದೃಷ್ಟಿಯುಳ್ಳ ಗುರುರಮಣರು ಎಲ್ಲವನ್ನೂ ಆಸಕ್ತಿಯಿಂದ ಆಲಿಸಿ ಶಿಷ್ಯನ ನೆತ್ತಿಯನ್ನು ತಮ್ಮ ಹಸ್ತಕಮಲದಿಂದ ಅಭಿಮರ್ಶಿಸುತ್ತ ಹೀಗೆ ಹೇಳಿದರು. ಗುರುಗಳ ಈ ಸೂಚನೆಗಳನ್ನು ವಾಸಿಷ್ಠಮುನಿಗಳು ಛಂದೋಬದ್ಧವಾಗಿ ಹೀಗೆ ಸಂಗ್ರಹಿಸಿದರು.

ಬಾದಾಂ ತೈಲೋಪಕ್ರಮಂ ಸಾಧು ಕಾರ್ಯಃ
ಪೂರ್ವಂ ಸ್ನಾನಾದೇಕದೈವೋತ್ತಮಾಂಗೇ।
ಏರಂಡೀಯಂ ತ್ವರ್ಪ್ಯತಾಂ ಮಸ್ತಮಧ್ಯೇ
ಮಾಭೂದ್ಭೀರಿತ್ಯಬ್ರವೀನ್ಮಾಂ ಮಹರ್ಷಿಃ॥

"ಸ್ನಾನಕ್ಕೆ ಮೊದಲು ಒಮ್ಮೆ ತಲೆಗೆ ಬಾದಾಮಿ ಎಣ್ಣೆಯನ್ನು ತಿಕ್ಕಿಕೊಳ್ಳಬೇಕು. ಸ್ನಾನದ ನಂತರ ನೆತ್ತಿಯ ಮೇಲೆ ಹರಳೆಣ್ಣೆ ಹಚ್ಚಿಕೊಳ್ಳಬೇಕು. ಯಾವ ರೀತಿಯಿಂದಲೂ ಭಯಪಡಬೇಕಾದ್ದಿಲ್ಲ."

ಅದೇ ದಿನ ರಾತ್ರಿ ಆಚಾರ್ಯ ವಾಸಿಷ್ಠರು ತಮಗೆ ಒದಗಿದ ಪರಿಸ್ಥಿತಿಯನ್ನು ಹೀಗೆ ವಿವರಿಸಿದ್ದಾರೆ:-

ತಸ್ಯಾಂ ರಾತ್ರೌ ಜಲಂತ್ಯಾಮಖಿಲಮಪಿ ವಪುಃ ಕೋಽಪಿ ತಾಪೋ
ವ್ಯಧಾಕ್ಷೀತ್
ಪ್ರಾಭೂವಂ ನಾಪಿ ಸೋಢುಂ ವಿಷಮದಮಿವ ತಂ ತೀವ್ರಮುಗ್ರ
ಪ್ರಸಾರಂ।
ನಾಶೀಚ್ಛಕ್ಯಂ ಧರಿತ್ರ್ಯಾಂ ನ್ಯಸಿತುಮಪಿ ಶಿರಃ ಪಾರ್ಶ್ವತೋ
ವಾಪಿ ನೇತುಂ
ದಷ್ಟಂ ಲೂತಾಶತೈರ್ವಾ ಪರಶುಹತಿಶತೈಃ ಭಿನ್ನವನ್ಮಸ್ತ
ಮಾಸೀತ್॥

ಆ ರಾತ್ರಿ ಸರಿಯುತ್ತಿದ್ದಂತೆ ನನ್ನ ಶರೀರ ತೀವ್ರ ತಾಪಕ್ಕೆ ಒಳಗಾಯಿತು. ವಿಷಜ್ವಾಲೆಯಂತೆ ದೇಹವನ್ನು ವ್ಯಾಪಿಸುತ್ತಿದ್ದ ಆ ಬೇಗೆಯನ್ನು ನಾನು ತಡೆದು

ಕೊಳ್ಳಲಾಗಲಿಲ್ಲ. ಒಂದೇ ಸಮನೆ ನೂರಾರು ಕೀಟಗಳು ನನ್ನ ಶಿರವನ್ನು ಕೊರೆಯುತ್ತಿರುವಂತೆ- ಏಕ ಪ್ರಕಾರವಾಗಿ ಮಚ್ಚಿನ ಹೊಡೆತಗಳಿಂದ ಚಚ್ಚಲ್ಪಟ್ಟಂತೆ- ಅಸಹ್ಯ ವೇದನೆಯುಂಟಾಗಿ ತಲೆಯನ್ನು ನೆಲಕ್ಕೆ ಆನಿಸಲಾಗಲೀ ಹೊರಳಿಸಲಾಗಲೀ ಸಾಧ್ಯವೇ ಆಗಲಿಲ್ಲ.

ಹೀಗೆ ತಾಳಲಾಗದ ವೇದನೆಗೂ ಒಮ್ಮೆ ಕೊನೆಯುಂಟಾಯಿತು.

ಭಿನ್ನೇ ಶೀರ್ಷ್ಣಃ ಕಪಾಲೇ ಶ್ರುತಿಯುಗ ವಿವರಾ ಯೋಜನೇನಾಧ್ವನಾ ಮೇ
ಸ್ಪಷ್ಟೋಽಭೂಚ್ಛೇದನಸ್ಯ ಧ್ವನಿರಪಿ ವಿಗತಃ ತತ್ರ ಧೂಮಶ್ಚ ದೃಷ್ಟಃ।
ದೂರೆ ಜಾಯಾ ಗುಹಾಯಾಸ್ಸಪದಿ ಸದುಹಿತಾ ಸರ್ವಮೈಕ್ಷಿಷ್ಟ ವೃತ್ತಂ
ಶುಶ್ರೂಷುಃ ಕೊಂಡಯಾರ್ಯಸ್ತ್ವಜನಿ ಮಮ ವಪುರ್ಧಾರಣಾಲಂಬ ದಂಡಃ ॥

ನನ್ನ ನೆತ್ತಿಯ ಚಿಪ್ಪು ಒಡೆದು ಅದರ ಧ್ವನಿ ಸ್ಪಷ್ಟವಾಗಿ ಕೇಳಿಸಿದುದರ ಜೊತೆಗೆ ಹೊಗೆಯೂ ಕಾಣಿಸಿಕೊಂಡಿತು. ಬೇರೊಂದು ಗುಹೆಯಲ್ಲಿ ಮಗಳೊಡನೆ ಇದ್ದ ನನ್ನ ಸಹಧರ್ಮಿಣಿಯು ಅದೇ ವೇಳೆಗೆ ಈ ಘಟನೆಯನ್ನು ಸ್ವತಃ ನೋಡುತ್ತಿರುವ ಅನುಭವಕ್ಕೆ ಒಳಗಾದಳು. ನನ್ನ ಪರಿಚರ್ಯೆಯಲ್ಲಿ ತೊಡಗಿದ್ದ ಕೊಂಡಯ್ಯನವರೇ ಈ ಪರಿಸ್ಥಿತಿಯಲ್ಲಿ ನನ್ನ ಶರೀರಕ್ಕೆ ಅವಲಂಬನೆಯಾಗಿ ನಿಂತರು.

ವೃತ್ತಿಯಲ್ಲಿ ನ್ಯಾಯವಾದಿಗಳಾಗಿ "ಕಳಮೂರು ಕಿಟ್ಟಾಚೀ" ಎಂದು ಪ್ರಸಿದ್ಧರಾಗಿದ್ದ ಕೆ. ಆರ್. ಕೃಷ್ಣಸ್ವಾಮಿ ಅಯ್ಯರ್‌ರವರು 1908 ರಿಂದಲೂ ವಾಸಿಷ್ಠ ಮುನಿಗಳ ಶಿಷ್ಯರಾಗಿದ್ದವರು. ಅರುಣಾಚಲದಲ್ಲಿಯೇ ನೆಲೆಸಿದ್ದ ಇವರು ತಮ್ಮ ಗುರುಗಳು ಅರುಣಾಚಲಕ್ಕೆ ಬಂದು ಇದ್ದಾಗಲೆಲ್ಲ ಶುಶ್ರೂಷೆ ಮಾಡುತ್ತ ಬಂದಿದ್ದರು. ಈ ಮೇಲೆ ಕಂಡ ಘಟನೆಯನ್ನು ಅವರು ಈ ರೀತಿ ವಿವರಿಸಿದರು,

"ಕಪಾಲ ಭೇದನ ಆದ ಮೇಲೆ ವಾಸಿಷ್ಠ ಮುನಿಗಳ ದೇಹದಿಂದ 10ದಿನಗಳ ಕಾಲ ಈ ಯೋಗಜ್ವಾಲೆ ಸೂಕ್ಷ್ಮವಾಗಿ ಹೊರಬೀಳುತ್ತಿತ್ತು. ನಂತರ ಅವರ ಶರೀರ ತಾಪದಿಂದ ಮುಕ್ತವಾಯಿತು. ವಿಷಜ್ವಾಲೆಯ ಪ್ರಸಾರ ನಿಂತು ಹೋಯಿತು. ಶಕ್ತಿಯ ಪ್ರವಾಹದ ಭರವನ್ನು ಸಹಿಸಿಕೊಳ್ಳುವಂತಾಯಿತು. ಅಷ್ಟೇ ಅಲ್ಲದೆ ದೇಹದಲ್ಲಿ ಸೌಮ್ಯವಾದ ಅಮೃತವಾಹಿನಿ ಪ್ರಾರಂಭವಾಯಿತು. ಅವರ ಮುಖ ಅದ್ವಿತೀಯ ತೇಜಸ್ಸಿನಿಂದ ಬೆಳಗುತ್ತ ಅವರ ಕಣ್ಣಿನ ನೋಟ ಕೂಡ ವಿಶಿಷ್ಟ ರೀತಿಯನ್ನು ತಳೆಯಿತು. ಈ ಕಪಾಲ ಭೇದ ಸಂಭವಿಸಿದ ಮೇಲೆ ವಾಸಿಷ್ಠ

ಮುನಿಗಳು 14 ವರ್ಷ ದೇಹ ಧಾರಣೆ ಮಾಡಿದ್ದರು. ಆ ಅವಧಿಯಲ್ಲಿ ಬಾಷ್ಪ ವಾಯುವಿನಂತಹ ಶಕ್ತಿವಿಶೇಷವೊಂದು ನಿರಂತರವಾಗಿ ಅಂತರಿಕ್ಷದಿಂದ ಅವರ ಮಸ್ತಕದಲ್ಲಿ ಆದ ಈ ದ್ವಾರದ ಮೂಲಕ ಒಳ ಹೊಕ್ಕು–ಹೊರಬರುತ್ತ ಉಸಿರಾಟ ದಂತಹ ಕ್ರಿಯೆ ನಡೆಯುತ್ತಿತ್ತು?"

ವಾಸಿಷ್ಠಮುನಿಗಳು ತಮ್ಮ ಈ ಸ್ಥಿತಿಯನ್ನೂ ಅನುಭವವನ್ನೂ ಅನೇಕ ಪದ್ಯ ಗಳಮೂಲಕ ವ್ಯಕ್ತಪಡಿಸಿದ್ದಾರೆ. ಯೋಗ ನಿಷ್ಠರಾದ ಅವರು ಆಗ್ಯೆ ಸಂಸ್ಕರಿಸು ತ್ತಿದ್ದ "ಉಮಾ ಸಹಸ್ರದ" ಕೆಲವು ಶ್ಲೋಕಗಳಲ್ಲಿ ತಮ್ಮ ಈ ಅನುಭವ ವಿಶೇಷ ವನ್ನು ಆಳವಡಿಸಿದ್ದಾರೆ.

ಯಾತಾಯಾತವಿಹಾರೇ ಮಾತಸ್ತಸ್ಮಿನ್ ಭವತ್ಯುಪಾಧಿಸ್ತೇ ।
ಆರಭ್ಯ ಮಸ್ತಕಸ್ಥಲಮಾಮೂಲಾಧಾರಮಸ್ಥಿ ಪಂಜರಿಕಾ ॥

ಉಮಾ ಸಹಸ್ರಂ. 1–4–6.

ಹೇ ತಾಯೇ ! ನೆತ್ತಿಯಿಂದಾರಂಭಿಸಿ ಶರೀರದ ಮೂಲ ಆಧಾರವಾದ ಮೂಳೆಯ ಹಂದರವು ಶಕ್ತಿಯ ಪ್ರವೇಶ–ನಿರ್ಗಮನದ ಈ ವಿಹಾರ ಕಾಲದಲ್ಲಿ ನಿನ್ನ ಉಪಕರಣವಾಗಿ ಇರುತ್ತದೆ.

ನಭಸಃ ಶೀರ್ಷದ್ವಾರಾ ಪ್ರವಹಂತೀಂ ಯ ಇಹ ವಿಗ್ರಹೆ ಶಕ್ತಿಂ ।
ಅನು ಸಂದಧಾಮಿ ನಿತ್ಯಂ ಕೃತಿನಸ್ತಸ್ಯೈತರೈರಲಂ ಯೋಗೈಃ ॥ ಉಮಾ ಸಹಸ್ರಂ 1–4–8.

ಆಗಸದಿಂದ ನೆತ್ತಿಯಮೂಲಕ ಶರೀರದಲ್ಲಿ ಹರಿಯುತ್ತಿರುವ ಶಕ್ತಿಯನ್ನು ದಿನವೂ ಅನುಸಂಧಾನ ಮಾಡುತ್ತ ಕೃತಾರ್ಥನಾಗಿದ್ದೇನೆ. ಇತರ ಯೋಗಗಳ ಅವಶ್ಯಕತೆಯೇ ಏನಗಿಲ್ಲ.

ಈ ಶ್ಲೋಕಗಳಲ್ಲದೆ ಅವರ ದೇಹ ಅಸಾಧ್ಯ ತಾಪಕ್ಕೆ ಒಳಗಾಗಿ ಪ್ರಾಣ ಉಳಿಯುವುದೇ ಸಂದೇಹವೆನಿಸಿದ್ದನ್ನು ಸೂಚಿಸುವ "ಕಂಠ ವಿರುದ್ಧೆ ಭೂರಿ ವಿಷಾಗ್ನಾ" (ಉ.ಸ. 5–1–16) "ಕೋಽಪಿ ಸಹಸ್ರೈರೇಷ ಮುಖಾನಾಂ" (ಉ.ಸ. 5–1–8) ಈ ಪದ್ಯಗಳಲ್ಲಿ ಕಾಣಬಹುದು. ಅದೇ ರೀತಿ 15ನೇ ಸ್ತಬಕ ದಲ್ಲಿ ಶಕ್ತಿಯನ್ನು ಸ್ವಾಗತಿಸುವ 17ನೇ ಸ್ತಬಕದಲ್ಲಿ ಮವಕರೀ ಶಕ್ತಿಯನ್ನು ಸ್ತುತಿ

ಸುವ-18ನೇ ಸ್ತಬಕದಲ್ಲಿ ಕುಂಡಲಿನೀ ಶಕ್ತಿಯ ವಿಲಾಸವನ್ನು ವರ್ಣಿಸುವ - ಪದ್ಯಗಳನ್ನು ವಾಸಿಷ್ಠಮುನಿಗಳು ಈ ಸಂದರ್ಭದಲ್ಲಿ ತಾವು ಪಟ್ಟ ಅನುಭವ ಮೂಲದಿಂದಲೇ ರಚಿಸಿ ಉಮಾಸಹಸ್ರದಲ್ಲಿ ಸೇರಿಸಿದ್ದಾರೆ. ಸಾಧಕರೊಬ್ಬರಿಗೆ ಅವರ ಜೀವಿತ ಕಾಲದಲ್ಲಿಯೇ ಕಪಾಲ ಭೇದನ ಉಂಟಾದುದು ತುಂಬಾ ಆಶ್ಚರ್ಯ-ಮಹತ್ವಗಳ ವಿಷಯವೆನಿಸಿತು.

ಈ ವಿಷಯವನ್ನು ಕುರಿತು ಆಚಾರ್ಯ ವಾಸಿಷ್ಠರು ತಮ್ಮ ಶಿಷ್ಯರಿಗೆ ಹೇಳುವಾಗ ತೈತ್ತಿರಿಯೋಪನಿಷತ್ತಿನ ವಾಕ್ಯವನ್ನು "ವ್ಯಪೋಹ್ಯ ಶೀರ್ಷ ಕಪಾಲೇ ಭೂರಿತ್ಯಗ್ನೌ ಪ್ರತಿತಿಷ್ಠತಿ")ಉದಹರಿಸಿ ಯೋಗಶಕ್ತಿಯ ರಹಸ್ಯ-ಮಹಿಮೆಗಳನ್ನು ವಿವರಿಸಿದರು.

ಜೀವಂತನಾಗಿರುವಾಗಲೇ ಯೋಗಿಯೊಬ್ಬನ "ಶಿರಃಕಪಾಲ ಭೇದನ" ಸಂಭವಿಸುವ ಬಗ್ಗೆ ತೈತ್ತಿರೀಯೋಪನಿಷತ್ತಿನ ಮೇಲೆ ಕಂಡ ವಾಕ್ಯವೇ ಮೊದಲನೆಯ ಸಾಕ್ಷಿ. ಇದನ್ನು ಆಧಾರವಾಗಿಟ್ಟುಕೊಂಡೇ ಯೋಗಿ-ಸಂನ್ಯಾಸಿಯೊಬ್ಬ ವಿಧಿವಶನಾದಾಗ ಆತನದೇಹವನ್ನು ಸಮಾಧಿಮಾಡುವ ಮುನ್ನ ನೆತ್ತಿಯನ್ನು ತೆಂಗಿನಕಾಯಿಯ ಹೊಡೆತದಿಂದ ಛೇದಿಸುವ ಪದ್ಧತಿ ಇರುವುದು. ಯೋಗಿಗಳಲ್ಲಿ ಪ್ರಬುದ್ಧವಾದ ಕುಂಡಲಿನೀ ಶಕ್ತಿಯು ಸುಷುಮ್ನಾ ನಾಡಿಯಲ್ಲಿ ಸಂಚರಿಸುತ್ತ ಶರೀರದ ಆಶ್ರಯವನ್ನು ಬಿಟ್ಟು ನೆತ್ತಿಯಚಿಪ್ಪನ್ನು ಸೀಳಿಕೊಂಡು ಹೊರಬಿದ್ದು ಬಾಹ್ಯಬ್ರಹ್ಮಾಂಡ ಚೈತನ್ಯದೊಡನೆ ಕೂಡಿ ನಂತರ ಅದೇ ಸೀಳಿನ ಮೂಲಕ ಶರೀರದ ಒಳಗೆ ಪ್ರವೇಶಿಸುವ ಮತ್ತು ಹೊರಕ್ಕೆ ನಿರ್ಗಮಿಸುವ ನಿರಂತರ ಕ್ರಿಯೆಯನ್ನು ನಡೆಸುತ್ತಿರುತ್ತದೆ. ಇದು ಆಚಾರ್ಯ ಗಣಪತಿಮುನಿಗಳ ಸ್ವಂತ ಅನುಭಾವ. ಇದನ್ನು ತಮ್ಮ "ಪ್ರಚಂಡ ಚಂಡೀ ಸ್ತಬಕದಲ್ಲಿ" ಹೀಗೆ ಹೇಳಿದ್ದಾರೆ.

ತವೆಚ್ಛಿನ್ನಂ ಶಿರ್ಷಂ ವಿದುರಖಿಲಧಾತ್ರ್ಯಾಗಮವಿದೋ
ಮನುಷ್ಯಾಣಾಂ ಮಸ್ತೇ ಬಹುಲತಪಸಾ ಯದ್ವಿದಲಿತೇ ।
ಸುಷುಮ್ನಾಯಾಂ ನಾಡ್ಯಾಂ ತನುಕರಣಸಂಪರ್ಕರಹಿತಾ
ಬಹಿಶ್ಚಕ್ರಾತ್ಯಕ್ತ್ವಾ ಯುಕ್ತ್ವಾ ವಿಗತಚಿರನಿದ್ರಾ ವಿಲಸಸಿ ॥

ಪ್ರಪಂಚದಲ್ಲಿ ಆಗಮವನ್ನು ತಿಳಿದವರೆಲ್ಲರೂ ನಿನ್ನನ್ನು "ಭಿನ್ನಮಸ್ತಕಾ" ಎಂದು ಅರಿತುಕೊಂಡಿದ್ದಾರೆ. ಮನುಷ್ಯರಲ್ಲಿ ಈ ಕಪಾಲ ಭೇದನವೆಂಬುದು ನಿರಂತರ ತಪಸ್ಸಿನ ಫಲವಾಗಿ ಉಂಟಾಗುತ್ತದೆ. ಆಗ ನೀನು ಸುಷುಮ್ನಾನಾಡಿ

ಯನ್ನು ಆಶ್ರಯಿಸಿ ಶರೀರದ ಕರಣೇಂದ್ರಿಯಗಳ ಅವಲಂಬನೆ ಇಲ್ಲದೆಯೇ ಹೊರ ಹರಿದು ಬ್ರಹ್ಮಶಕ್ತಿಯೊಡನೆ ಕೂಡಿಕೊಂಡು ನಿದ್ರಾರಹಿತವಾದ ನಿರಂತರ ಆನಂದ ದಲ್ಲಿ ಮಗ್ನಳಾಗುತ್ತೀಯೆ. (ಇದಕ್ಕೆ ಸಂಬಂಧಪಟ್ಟಂತೆ ಈ ಅನುವಾದಕ ಸ್ವತಃ ನೋಡಿದ ಉದಾಹರಣೆಯೊಂದಿದೆ :- ಶೃಂಗೇರಿಯ ದಕ್ಷಿಣಾಮ್ನಾಯ ಶ್ರೀಶಾರದಾಪೀಠದ 34ನೆಯ ಆಚಾರ್ಯರಾಗಿದ್ದ ಜೀವನ್ಮುಕ್ತ - ತಪೋಮೂರ್ತಿ ಶ್ರೀ ಶ್ರೀ ಜಗದ್ಗುರು ಚಂದ್ರಶೇಖರ ಭಾರತಿಯವರು 26-9-1954 ರಂದು ನಸುಕಿನಲ್ಲಿ ತುಂಗಾನದಿಯಲ್ಲಿ ಸ್ನಾನ ಮಾಡಿ ಅಲ್ಲಿಯೇ ತಮ್ಮ ಪಾರ್ಥಿವ ಶರೀರ ಬಂಧನವನ್ನು ಕಳಚಿಕೊಂಡರು. ತುಂಗಾ ಪ್ರವಾಹದಲ್ಲಿ ಕೆಲವು ದೂರ ತೇಲಿ ಹೋದ ಅವರ ದೇಹದಲ್ಲಿ ಒಂದಿನಿತೂ ನದಿಯ ನೀರು ಸೇರಿರಲಿಲ್ಲ. ಅವರ ಪಾರ್ಥಿವ ದೇಹವನ್ನು ಕೂಡಲೇ ಹಿಡಿದು ತಂದು ಇಟ್ಟಾಗ ಅವರ ನೆತ್ತಿಯ ಮೇಲೆ ನೇರವಾಗಿ ಹಾದುಹೋಗಿದ್ದ ಕೆಂಪು ಸೀಳುಗೆರೆಯನ್ನು ನಾನು ಸ್ವತಃ ಸ್ಪಷ್ಟ ವಾಗಿ ಕಂಡಿದ್ದೇನೆ. "ವ್ಯಪೋಹ್ಯ ಶೀರ್ಷಕಪಾಲೇ" ಎಂಬ ತೈತ್ತಿರೀಯ ವಾಕ್ಯವೂ ಆಗ ನೆನಪಿಗೆ ಬಂದಿತ್ತು. ನದಿಯಲ್ಲಿ ಒಮ್ಮೆ ಮುಳುಗುಹಾಕಿ ಮೇಲೆ ಬಂದು ಕಟ್ಟೆಯ ಮೇಲೆ ಕುಳಿತು ಪ್ರಾಣಾಯಾಮದಿಂದ ಪ್ರಾಣವಾಯುವನ್ನು ಬ್ರಹ್ಮ ರಂಧ್ರಕ್ಕೆ ಏರಿಸಿದಾಗ ನೆತ್ತಿಯ ಚಿಪ್ಪನ್ನು ಸೀಳಿಕೊಂಡು ಹೊರಟಿದ್ದ ಅವರ ಆತ್ಮವು ಬ್ರಹ್ಮಚೈತನ್ಯದಲ್ಲಿ ಐಕ್ಯವಾಗಿ ಚೈತನ್ಯಹೀನವಾದ ಅವರ ದೇಹವು ಕಟ್ಟೆಯಿಂದ ನದಿಗೆ ಮಗುಚಿಕೊಂಡು ತೇಲಿಹೋಗಿತ್ತು. ಅಂದು ಅವರ ಪಾರ್ಥಿವ ಶರೀರದ ಉತ್ಸವ ನಡೆದು-ಸಮಾಧಿಕ್ರಿಯೆ ಆಗುವಾಗ ನೆತ್ತಿಯನ್ನು ತೆಂಗಿನಕಾಯಿ ಹೊಡೆತದಿಂದ ಛಿದ್ರಗೊಳಿಸಬೇಕಾಗಿ ಬರಲಿಲ್ಲ. ಸಂಪ್ರದಾಯವೆಂದು ನೆತ್ತಿಗೆ ತೆಂಗಿನಕಾಯಿ ತಾಗಿಸಲಾಯಿತು ಅಷ್ಟೇ!)

ಹೀಗೆ ಶಿರೋಗ್ರಂಥಿ ಒಡೆದುದರಿಂದ ಕ್ಷೌರಮಾಡಿಸಿಕೊಳ್ಳಲು ಸಾಧ್ಯವಾಗದೆ ತಲೆಗೂದಲನ್ನು ಹಾಗೆಯೇ ಬಿಡುವ ವ್ರತವನ್ನು ವಾಸಿಷ್ಠ ಮುನಿಗಳು ಪಾಲಿಸ ಬೇಕಾಗಿ ಬಂತು. ಅದರಂತೆ ಬರಿಗಾಲನ್ನು ಭೂಮಿಗೆ ತಾಗಿಸಿದರೆ ಸಾಕು! ತುಂಬಾ ನೋವು ಉಂಟಾಗುತ್ತಿದ್ದುದರಿಂದ ಪಾದುಕೆಗಳನ್ನು ಧರಿಸುವುದೂ ಅನಿವಾರ್ಯ ವಾಯಿತು.

ವಾಸಿಷ್ಠ ಮುನಿಗಳು ಈ ಸಂದರ್ಭದಲ್ಲಿ ಕೈಗೊಂಡಿದ್ದ "ಉಮಾಸಹಸ್ರ"ದ ಸಂಸ್ಕರಣವನ್ನು ಮುಗಿಸಿ ಅರುಣಾಚಲಕ್ಷೇತ್ರ ದೇವತೆಯ ಸನ್ನಿಧಿಗೆ ಹೋಗಿ ಸಂದರ್ಶನ ಪಡೆದು ಅಪೀತಕುಚಾಂಬಾ ಸನ್ನಿಧಿಯಲ್ಲಿ ಕುಳಿತು ಉಮಾಸಹಸ್ರವನ್ನು ಪಠಿಸುವ ಮೂಲಕ ತಮ್ಮ ಕೃತಿಯನ್ನು ದೇವಿಗೆ ಸಮರ್ಪಿಸಿದರು.

ನಂತರ ಅವರು "ಇಂದ್ರಾಣೀ ಸಪ್ತಶತೀ" ರಚನೆಯನ್ನು ಕೈಗೊಂಡರು. ಆಗ ಕಡುಬೇಸಿಗೆ. ಮೋಡ-ಮಿಂಚುಗಳು ಆ ದಿನಗಳಲ್ಲಿ ಕಾಣಬರುವುದಿಲ್ಲ. ಆದರೆ ದೇವಿಯ ಪರಮಭಕ್ತರಾದ ಗಣಪತಿ ಮುನಿಗಳು ಶ್ಲೋಕಗಳನ್ನು ರಚಿಸುತ್ತ ಹೋದಂತೆ ಆಗಸದಲ್ಲಿ ಮಿಂಚಿನ ಸರಣಿಯೇ ಕಾಣಿಸತೊಡಗಿತು. ಇಂದ್ರಾಣಿಯ ಸಾನ್ನಿಧ್ಯ ಸೂಚಕವಾದ ಅವರ ವರ್ಣವಿನ್ಯಾಸವಾದರೋ ಊಹೆಗೂ ನಿಲುಕದಂತಿದೆ. ಆ ದೇವಿಯ ಲೋಕದ ದಿವ್ಯವೈಭವವನ್ನೇ ತಮ್ಮೆದುರಿಗೆ ತೆರದಿಟ್ಟಂತಹ ಅನುಭವ ವಾಸಿಷ್ಠ ಮುನಿಗಳಿಗೆ ಆಗುತ್ತಿದೆ. ಭೌತವಿಜ್ಞಾನಿಗಳು -ಆಧುನಿಕ ವಿಚಾರಶೀಲರು ಈ ವಿದ್ಯುದ್ದರ್ಶನಕ್ಕೆ ಅಂತಹ ಮಹತ್ವವೇನನ್ನೂ ಕೊಡದೆ ಇದು ಸಹಜ-ಸ್ವಾಭಾವಿಕ ಎಂದೇ ಹೇಳಿಯಾರು! ಆದರೆ ತಪೋನಿಷ್ಠರಾಗಿ ಅದ್ಭುತ ಪ್ರಭಾವ ಹೊಂದಿದ್ದ ಗಣಪತಿ ಮುನಿಗಳಿಗಾದರೋ ಇದೊಂದು ದಿವ್ಯದರ್ಶನವೆನಿಸಿ ದೈವೀ ಸಾಕ್ಷಾತ್ಕಾರವಾಯಿತೆಂಬುದೇ ಅವರ ಬಳಿ ಇದ್ದವರು ಮತ್ತು ಶಿಷ್ಯ ಸಮುದಾಯದ ನಂಬಿಕೆ.

ಇಂದ್ರಾಣೀ ಸಪ್ತಶತಿಯನ್ನು ಪೂರ್ಣಗೊಳಿಸಿದ ವಾಸಿಷ್ಠ ಮುನಿಗಳು ತಮ್ಮ ಕುಟುಂಬ ಹಾಗೂ ಶಿಷ್ಯವರ್ಗದೊಡನೆ ಕುಂಡಲೀಪುರದ ಶ್ರೀ ರೇಣುಕಾ ಕ್ಷೇತ್ರಕ್ಕೆ ಹೋಗಿ ದೇವಿಯ ಸನ್ನಿಧಿಯಲ್ಲಿ ಸಂಪೂರ್ಣ ಕೃತಿಯನ್ನು ಪಠಿಸಿದರು. ಈ ಸಂದರ್ಭದಲ್ಲಿ ದೇವಿಯು ಪ್ರತ್ಯಕ್ಷವಾಗಿಯೇ ಇವರ ಸ್ತೋತ್ರ ಪಠಣವನ್ನು ಆಲಿಸಿ ಅನುಗ್ರಹಿಸಿದ ಅನುಭವ ನಮಗೆಲ್ಲರಿಗೂ ಅಂತರಂಗಿಕವಾಗಿ ಹಾಗೂ ಬಹಿರಂಗವಾಗಿ ಆಯಿತೆಂಬುದನ್ನು ನಾವು ಬದುಕಿರುವಷ್ಟು ಕಾಲವೂ ಆಗಾಗ ನೆನಪಿಸಿಕೊಂಡು ಸಂತಸಪಡಬಹುದಾಗಿದೆ.

ಇಂದ್ರಾಣೀ ಸಪ್ತಶತಿಯ ರಚನೆ ಆಮ್ರಗುಹೆಯಲ್ಲಿ ನಡೆದಿದ್ದಾಗಲೇ ಸ್ಕಂದಾಶ್ರಮದಲ್ಲಿ ಭಗವಾನ್ ರಮಣ ಮಹರ್ಷಿಗಳವರ ಹೆತ್ತತಾಯಿ ಸುಂದರಾಂಬಾರವರು ತಮ್ಮ ಜೀವನಯಾತ್ರೆಯನ್ನು ಮುಗಿಸಿ ಪರಂಜ್ಯೋತಿಯೊಡನೆ ಸೇರಿಹೋದರು. ಆಗ ಅವರ ಪಾರ್ಥಿವ ಶರೀರದ ಸಂಸ್ಕಾರದ ವಿಷಯ ಚರ್ಚೆಗೆ ಬಂತು. ಮಹರ್ಷಿ ರಮಣರ ಭಕ್ತರಲ್ಲಿ ಶ್ರೇಷ್ಠರಾದ ವಾಸಿಷ್ಠ ಮುನಿಗಳೇ ಈ ಬಗ್ಗೆ ಕೊನೆಯ ನಿರ್ಣಯ ನೀಡಿದರು. "ರಮಣಗೀತೆಯಲ್ಲಿ ಹೇಳಲ್ಪಟ್ಟ ಪ್ರಕಾರವೇ ಗಂಡಸರಂತೆ ಮಹಿಳೆಯರಿಗೂ ಸಂನ್ಯಾಸದಲ್ಲಿ ಅಧಿಕಾರವಿದೆ. ಭಗವಾನ್ ರಮಣರ ಹಸ್ತದೀಕ್ಷಾ ಮಹಿಮೆಯಿಂದ ಪ್ರಾಣೋತ್ಕ್ರಮಣವಾಗದೆ ಪಾರಮಾರ್ಥಿಕ ಸಮಾಧಿಯಿಂದ ಸಂಪನ್ನವಾಗಿದೆ ಈ ಸೌಂದರ್ಯಾಂಬಾರವರ ಕಳೇವರ. ಕೇವಲ ಸಾಮಾನ್ಯ ಸಂನ್ಯಾಸಿಯ ಶರೀರವನ್ನೇ ಸಮಾಧಿ ಮಾಡಬೇಕೆನ್ನುವುದು ರೂಢಿಯಲ್ಲಿರುವಾಗ

ಇವರ ದೇಹವನ್ನು ಸುಡುವುದು ದೋಷಕ್ಕೆ ಕಾರಣವಾಗುತ್ತದೆಯೇ ಹೊರತು ಬೇರೆಯಲ್ಲ" ಎಂಬ ವಾಸಿಷ್ಠ ಮುನಿಗಳ ಖಚಿತ ನಿರ್ಣಯವನ್ನನುಸರಿಸಿ ಅರುಣಾಚಲ ಬೆಟ್ಟದ ಬುಡದಲ್ಲಿ ಆಗ್ನೇಯ ಮೂಲೆಯಲ್ಲಿ ಸಮಾಧಿಗೆ ಸ್ಥಳ ನಿರ್ಧರಿಸಲಾಯಿತು. ಆದರೆ ನೀರಿಗಾಗಿ ಪರದಾಟ. ಬೇಸಗೆಯ ಆ ದಿನಗಳಲ್ಲಿ ಆ ಬರಡು ನೆಲದಲ್ಲಿ ನೀರಿನ ಆಸರೆ ಕಂಡುಕೊಳ್ಳಲು ಪರಿಜನರೂ-ಭಕ್ತರೂ ವಿಫಲ ಪ್ರಯತ್ನ ನಡೆಸುತ್ತಿರುವುದನ್ನು ನೋಡಿದ ರಮಣ ಭಗವಾನರು ಸ್ಥಳವೊಂದನ್ನು ಬೆಟ್ಟು ಮಾಡಿ ತೋರಿಸಿದರು. ಅಲ್ಲಿ ಅಗೆತ ಪ್ರಾರಂಭವಾಗುತ್ತಿದ್ದಂತೆಯೇ ಚಿಲುಮೆಯಿಂದ ಹೊರಬಂದ ನೀರು ಮೇಲಕ್ಕೆ ಪುಟಿಯಲಾರಂಭಿಸಿತು. ದೇಶ-ಕಾಲ-ಪರಿಸ್ಥಿತಿಗಳನ್ನೆಲ್ಲಾ ಮೀರಿ ಭಗವಾನ್ ರಮಣರ ಅಂತರ್ದೃಷ್ಟಿಯ ಮಹಿಮೆಯಿಂದ ಆದ ಈ ಜಲದ ಉಗಮ ಪವಿತ್ರ ತೀರ್ಥವೆನಿಸಿತು. ಸಮಾಧಿ ಪ್ರತಿಷ್ಠೆಯ ಕಾರ್ಯಕಲಾಪಗಳು ಯಥಾವಿಧಿಯಾಗಿ ನೆರವೇರಿದವು. ರಮಣಭಕ್ತ ವಾಸಿಷ್ಠ ಮುನಿಗಳು ಕೊನೆಯಲ್ಲಿ "ಸೌಂದರ್ಯಾಂಬಿಕಾ ನಿರ್ವಾಣ ಷಟ್ಕ"ವನ್ನು ರಚಿಸಿ ಹಾಡಿದರು.

ದುಂದುಭಿವರ್ಷೇ ವೃಷಷಷ್ಠದಿನೇ ಮಾಧವಕೃಷ್ಣದಲೀಯನವಮ್ಯಾಂ।
ಭಾರ್ಗವವಾಸರನಿಶಿ ಶತತಾರಾಸಂಯುಕ್ತಾಯಾಂ ಪ್ರಥಮೇ ಯಾಮೇ ॥೧॥

ಭಾರದ್ವಾಜೀ ಪಾರಾಶರ್ಯಶ್ರೇಷ್ಠಕುಲೋದ್ಭವಸುಂದರಪತ್ನೀ ।
ಗುರುಗುಹಭಾಗಜರಮಣಮಹರ್ಷೇರ್ಮಾತಾ ಪೂತಾ ಚಾರಿತ್ರೇಣ ॥೨॥

ತ್ಯಜಿತಮಾನಸಸಂಗಾ ಹಂಸೀ ಶಿವಪದಭಕ್ತಿಕ್ಷಾಲಿತ ಪಂಕಾ ।
ಗುಹಕರಶಕ್ತ್ಯಾರುದ್ಧಪ್ರಾಣಾ ತತ್ಕ್ಷಣಧೂತಸಮಸ್ತವಿಕಲ್ಪಾ ॥೩॥

ನಿಗಮಾಂತವಚೋವೇದ್ಯಂ ಜ್ಯೋತಿಃ ಸರ್ವಜಗತ್ಸು ವ್ಯಾಪ್ತಂ ಜ್ಯೋತಿಃ ।
ಸುತಗುಹದೃಷ್ಟ್ಯಾ ವ್ಯಕ್ತಂ ಜ್ಯೋತಿಃ ಸೌಂದರ್ಯಾಂಬಾ ಸಮಭೂ
ಜ್ಯೋತಿಃ ॥೪॥

ರಮಣ ಮಹರ್ಷೇಃ ಕರಸರಸೀಜದ್ವಯಮಕರಂದಸ್ಫುಟಧಾರೇವ ।
ಅತ್ರ ಸಮಾಧೌ ಸೌಂದರ್ಯಾಂಬಾದೇವ್ಯಾಸ್ತೀರ್ಥಂನವಮ ಘಶಮನಂ
॥೫॥

ಜಯತು ಮಹರ್ಷೇರ್ಮಾತಾ ಪೂತಾ ಜಯತು ಸಮಾಧಿಃ ಕೋಽಪಿ
ತದೀಯಃ ।
ಜಯತು ಮಹರ್ಷಿಸ್ಥಾಪಿತಲಿಂಗಂಜಯತು ಚ ತೀರ್ಥಂ ನವಮಘ
ಶಮನಂ ॥೬॥

ಶ್ರೇಷ್ಠ ಭಾರದ್ವಾಜ ಗೋತ್ರದಲ್ಲಿ ಹುಟ್ಟಿದ ಸುಂದರಾರ್ಯರ ಪತ್ನಿ ಹಾಗೂ ಸ್ಕಂದಾಂಶಸಂಭೂತ ಗುರು ರಮಣಮಹರ್ಷಿಗಳ ಜನ್ಮದಾತೆ-ಪರಿಶುದ್ಧ ಜೀವಿ ಸೌಂದರ್ಯಾಂಬಾರವರ ಆತ್ಮತೇಜಸ್ಸು ದುಂದುಭಿ ಸಂವತ್ಸರದ ವೃಷಭ ಮಾಸದ 6ನೇ ತೇದಿ-ವೈಶಾಖ ಬಹುಲ ನವಮೀ ಶತತಾರಾ ನಕ್ಷತ್ರದಿಂದ ಕೂಡಿದ ರಾತ್ರಿಯ ಮೊದಲ ಝಾವದಲ್ಲಿ ಪರಂಜ್ಯೋತಿಯೊಡನೆ ಕೂಡಿಕೊಂಡಿತು. ಸರ್ವಸಂಗ ಪರಿತ್ಯಾಗದಿಂದ ಹಂಸಿಯೆನಿಸಿದ ಇವರು ಶಿವ ಚರಣಭಕ್ತಿಯಿಂದ ಪಾಪಗಳನ್ನೆಲ್ಲಾ ಕಳೆದುಕೊಂಡವರು; ಗುಹೇಶ್ವರನ ಹಸ್ತಸಾಮರ್ಥ್ಯದಿಂದ ಉತ್ಕ್ರಮಣ ಕ್ಷಣದಲ್ಲಿ ತಡೆಹಿಡಿಯಲ್ಪಟ್ಟ ಪ್ರಾಣವುಳ್ಳವರಾಗಿ ಅದೇ ಕ್ಷಣದಲ್ಲಿಯೇ ಮನೋವಿಕಲ್ಪಗಳನ್ನು ಕಳೆದುಕೊಂಡವರು; ಉಪನಿಷತ್ತುಗಳಿಂದ ಅರಿಯಲ್ಪಡುವ-ಸರ್ವವ್ಯಾಪಿಯಾಗಿರುವ-ಮಗನಾದ ಗುಹನ ದೃಷ್ಟಿಯಿಂದ ವ್ಯಕ್ತವಾಗುವ ಜ್ಯೋತಿಯಾಗಿ ಪರಿಣಮಿಸಿದರು ಈ ಸೌಂದರ್ಯಾಂಬಾರವರು. ಮಹರ್ಷಿ ರಮಣರ ಹಸ್ತ ಕಮಲ ದ್ವಯಗಳಿಂದ ಹೊರಸೂಸುವ ಮಕರಂದದ ಧಾರೆಯಂತೆ ಈ ಸಮಾಧಿ ಸ್ಥಳದಲ್ಲಿ ಹೊಸದಾಗಿ ಹುಟ್ಟಿರುವ ಸೌಂದರ್ಯಾಂಬಾ ತೀರ್ಥವು ಪಾಪನಾಶಕವಾಗಿದೆ. ಮಹರ್ಷಿಗಳ ಮಾತೆ ಪವಿತ್ರಾತ್ಮಳಿಗೆ ಜಯವಾಗಲಿ! ಅವರ ಸಮಾಧಿಗೆ ಜಯವಾಗಲಿ! ಇಲ್ಲಿ ಮಹರ್ಷಿಗಳಿಂದ ಪ್ರತಿಷ್ಠಿತವಾದ ಶಿವಲಿಂಗಕ್ಕೆ (ಮಾತೃಭೂತೇಶ್ವರ) ಜಯವಾಗಲಿ ! ಪಾಪಗಳನ್ನು ಪರಿಹರಿಸುವ ಈ ಹೊಸ ತೀರ್ಥಕ್ಕೆ ಜಯವಾಗಲಿ!

ಪ್ರಕರಣ – 23

ಪ್ರಾಸ್ತಾವಿಕ ಪದ್ಯಗಳು

ಭುಜತರುವನಚ್ಛಾಯಾಂ ಯೇಷಾಂ ನಿಷೇವ್ಯ ಮಹೌಜಸಾಂ
ಜಲಧಿರಶನಾ ಮೇದಿನ್ಯಾಸೀತ್ ಅಸಾವಕುತೋಭಯಾ ।
ಸ್ಮೃತಿಮಪಿ ಸ ತೇ ಯಾಂತಿ ಕ್ಷ್ಮಾಪಾ ವಿನಾ ಯದನುಗ್ರಹಂ
ಪ್ರಕೃತಿಮಹತೇ ಕುರ್ಮಸ್ತಸ್ಮೈ ನಮಃ ಕವಿಕರ್ಮಣೇ ॥ -ಬಿಲ್ಹಣಃ

ಯಾವ ಮಹಾ ಪರಾಕ್ರಮಿಗಳ ತೋಳ್ಬಲದ ತಂಪನ್ನಾಶಯಿಸಿ ಸಮುದ್ರ ಪರ್ಯಂತವಾದ ಈ ಭೂಮಿ ನಿರಾಪದವೆನಿಸಿದ್ದಿತೋ ಅಂತಹ ತೇಜಸ್ವಿಗಳು ನಿನ್ನ ನೆನಪಿಗೆ ಬರ ಬೇಕಿದ್ದರೆ ಪ್ರಾಕೃತಿಕ (ಸಹಜ) ಮಹತ್ವದಿಂದ ಕೂಡಿದ ಕವಿತಾರಚ

ನಕಾರನ (ವಾಲ್ಮೀಕಿ-ವ್ಯಾಸರಂತಹವರು) ಅನುಗ್ರಹವಿಲ್ಲದೆ ಸಾಧ್ಯವಿಲ್ಲ. ಅಂತಹ ಕಬ್ಬಿಗನಿಗೆ ಪ್ರಣಾಮಗಳು.

ವಾಸಿಷ್ಠ ವೈಭವದ ಮೊದಲ ಭಾಗದ ಕೊನೆಯ ಪ್ರಕರಣ ಇದು. ವಿದ್ವದ್ವರೇಣ್ಯ ಕಾವ್ಯಕಂಠ ಗಣಪತಿ ಮುನಿಗಳ ಕೆಲವು ಪ್ರಾಸ್ತಾವಿಕ ಪದ್ಯಗಳು—ಆಶು ಕವಿತೆಗಳು—ಇತರ ರಚನೆಗಳಲ್ಲಿ - ಲಭ್ಯವಿರುವವುಗಳನ್ನು ಈ ಪ್ರಕರಣದಲ್ಲಿ ಕೊಡಲಾಗಿದೆ.

ಗಣಪತಿಮುನಿಗಳು ಕ್ರಿ.ಶ. 1904ರಲ್ಲಿ ಮದರಾಸು ನಗರದ ರಾಮಸ್ವಾಮಿ ಬೀದಿಯಲ್ಲಿರುವ ಶಾಂತಂಜೇರಿ ರಾಮಸ್ವಾಮಿಯವರ ಮನೆಯಲ್ಲಿ ಮೊಕ್ಕಾಂ ಮಾಡಿದ್ದರು. ಅವರ ಮೊದಲ ಅಷ್ಟಾವಧಾನ ಕಾರ್ಯಕ್ರಮ ಇಲ್ಲಿಯೇ ನಡೆಯಿತು. ಒಂದುದಿನ ಸಂಸ್ಕೃತತಿಳಿದ ಆಂಗ್ಲ ಭಾಷಾ ಪದವಿ ಶಿಕ್ಷಣದ ವಿದ್ಯಾರ್ಥಿಗಳು ಕೆಲವರು ಕಾವ್ಯಕಂಠರ ಕವಿತಾ ಸಾಮರ್ಥ್ಯವನ್ನು ಸ್ವತಃ ಪರೀಕ್ಷಿಸಿ ಆಸ್ವಾದಿಸುವ ಉದ್ದೇಶದಿಂದ ಅಲ್ಲಿಗೆ ಬಂದಿದ್ದರು. ಮಧ್ಯಾಹ್ನದ ಭೋಜನ—ಲಘು ವಿಶ್ರಾಂತಿಯ ನಂತರ ಎಲ್ಲರೂ ಕುಳಿತು ತಾಂಬೂಲ ಸೇವನೆಗೆ ಪ್ರಾರಂಭಿಸಿದರು. ಆದರೆ ಗಣಪತಿಮುನಿಗಳು ಮಾತ್ರ ಎಲೆ—ಅಡಿಕೆಯ ತಟ್ಟೆಗೆ ಕೈಹಾಕದೆ ಸುಮ್ಮನೆ ಕುಳಿತಿರುವುದನ್ನು ಗಮನಿಸಿದ ವಿದ್ಯಾರ್ಥಿಗಳು "ನೀವು ವೀಳೆಯ ಸೇವಿಸುವುದಿಲ್ಲವೇಕೆ ?" ಎಂದು ಕೇಳಿದರು. ಮುನಿಗಳು ನನಗೆ ಈ ವ್ಯಸನ(ಅಭ್ಯಾಸ) ಇಲ್ಲ" ಎಂದು ಉತ್ತರಿಸಿದರು. ಈ ಸನ್ನಿವೇಶದಿಂದ ಪ್ರೇರಿತರಾದ ವಿದ್ಯಾರ್ಥಿಗಳು "ತಾಂಬೂಲ ಚರ್ವಣ ಕುರಿತು ನಿಮ್ಮ ಅಭಿಪ್ರಾಯವನ್ನು ಪದ್ಯದ ಮೂಲಕ ವಿವರಿಸೋಣವಾಗಲಿ" ಎಂದು ಕೇಳಿಕೊಂಡರು. ಸ್ವಾಭಾವಿಕವಾಗಿ ನಿಯಮಿತ ಜೀವನ ಕ್ರಮ ಅನುಸರಿಸಿಕೊಂಡು ಬರುತ್ತಿದ್ದ ಗಣಪತಿಮುನಿಗಳಿಗೆ ಇಂತಹ ವ್ಯಸನಗಳ ಬಗ್ಗೆ ಯಾವ ಆಸಕ್ತಿಯೂ ಇರಲಿಲ್ಲ. ಆದರೆ ಪ್ರತಿಯೊಂದು ಪದಾರ್ಥದ ಗುಣ—ದೋಷಗಳನ್ನು ಬಲ್ಲವರಾದ ಅವರು ಈ ಅಭ್ಯಾಸವನ್ನು ನಿಂದಿಸದೆ ಆಯುರ್ವೇದ ವಿಜ್ಞಾನಕ್ಕೆ ಅನುಗುಣವಾಗಿ ತಾಂಬೂಲ ಚರ್ವಣದ ವಿಷಯವನ್ನು ಸ್ವಾರಸ್ಯವಾಗಿ ಈ ಸರಳ ಶ್ಲೋಕದಲ್ಲಿ ಅಳವಡಿಸಿ ಹೇಳಿದರು:—

ಸುಧಾಧಿಕ್ಯಂ ಸ್ಪೃಶೇತ್ಪೂತ್ರುಃ ಫಲಾಧಿಕ್ಯಂ ಸ್ಪೃಹೇದ್ಭಿಷಕ್।
ಪತ್ರಾಧಿಕ್ಯಂ ಸ್ಪೃಹೇಜ್ಜಾಯಾ ಮಾತಾ ತು ತ್ರಿತಯಂ ಸ್ಪೃಹೇತ್॥

"ಸುಧಾ" ಎಂದರೆ ವೀಳಯದೆಲೆಗೆ ಹಚ್ಚುವ ಸುಣ್ಣ. ಕ್ಷಾರಕದ್ರವ್ಯವನ್ನೊಳಗೊಂಡ ಸುಣ್ಣವನ್ನು ಹೆಚ್ಚಾಗಿ ಹಚ್ಚಿ ಸೇವಿಸಿದರೆ ಬಾಯಿ ಸುಟ್ಟು ಹುಣ್ಣಾ

ಗುತ್ತದೆ. ಆದ್ದರಿಂದಲೇ ವೀಳಯಹಾಕುವವನು ಸುಣ್ಣವನ್ನು ಹೆಚ್ಚಾಗಿ ತಿಂದು ಬಾಯಿಸುಟ್ಟುಕೊಂಡು ತೊಂದರೆ ಪಡಲಿ ಎಂದು ವೀಳಯ ಮೆಲ್ಲುವವನ ಶತ್ರುವು ಆಶಿಸುತ್ತಾನೆ. ಇನ್ನು "ಫಲ" ಎಂದರೆ ಕ್ರಮುಕ ಫಲ–ಅಡಿಕೆ. ಇದನ್ನು ಹೆಚ್ಚಾಗಿ ತಿಂದರೆ ರೋಗ ಉಂಟಾಗುತ್ತದೆ. ರೋಗದ ಉಪಶಮನಕ್ಕಾಗಿ ವೈದ್ಯನ ಬಳಿಗೆ ಧಾವಿಸುವುದರಿಂದ ವೈದ್ಯನಿಗೆ ಲಾಭ. ಆದ್ದರಿಂದಲೇ ತಾಂಬೂಲ ಚರ್ವಣ ಮಾಡುವವರು ಅಡಿಕೆಯನ್ನು ಅಧಿಕವಾಗಿ ತಿನ್ನಲಿ! ಎಂಬುದು ವೈದ್ಯನ ಆಶೆಯಾಗಿರುತ್ತದೆ. ಮತ್ತೆ "ಪತ್ರ" ಎಂದರೆ ವೀಳಯದೆಲೆ. ಇದು ವೀರ್ಯವರ್ಧಕ. ಆದ ಕಾರಣ ತಾಂಬೂಲ ಸೇವಿಸುವ ತನ್ನ ಪತಿಯು ವೀಳಯದೆಲೆಗಳನ್ನು ಹೆಚ್ಚಾಗಿ ಬಳಸಲೆಂಬುದು ಪ್ರಿಯತಮೆಯ ಹಂಬಲವಾಗಿರುತ್ತದೆ. ಇದರ ಉದ್ದೇಶ ಸ್ಪಷ್ಟವೇ ಇದೆ. ಇನ್ನು ತಾಯಿಯಾದವಳು ತನ್ನ ಮಗ ಈ ಮೂರನ್ನೂ ಸರಿಯಾದ ಪ್ರಮಾಣದಲ್ಲಿ ಸೇವಿಸಲಿ ಎಂದು ಹಾರೈಸುತ್ತಾಳೆ: ಈ ಮೂರು ದ್ರವ್ಯಗಳನ್ನು ತಕ್ಕಹದದಲ್ಲಿ ಸೇರಿಸಿ ತಿನ್ನುವುದು ಜೀರ್ಣಕಾರಿ ಮತ್ತು ಆರೋಗ್ಯ ವರ್ಧಕ. ಪ್ರತಿಯೊಬ್ಬ ತಾಯಿಗೂ ತನ್ನಮಗ ಆಯುರಾರೋಗ್ಯವಂತನಾಗಿ ಬಾಳಲೆಂಬ ಅಪೇಕ್ಷೆ ಇರುವುದರಿಂದ ಅವಳು ಹೀಗೆ ಬಯಸುತ್ತಾಳೆ. ಹೀಗೆ ಆಯುರ್ವೇದ ಔಷಧದ ಗುಳಿಗೆಯೊಂದನ್ನು ಕವಿತೆಯ ರಸದ ಅನುಪಾನದೊಂದಿಗೆ ದ್ರವ್ಯಗಳ ಗುಣ-ದೋಷಾತ್ಮಕ ಧ್ವನಿಯನ್ನು ಅಳವಡಿಸಿ ಹೇಳುವ ಈ ಅಸಾಧಾರಣ ಸಾಮರ್ಥ್ಯವನ್ನು ಕಂಡು ಎಲ್ಲರೂ ಸಂತಸಕ್ಕೆ ಒಳಗಾದರು.

ಗಣಪತಿಮುನಿಗಳು ಉಳಿದುಕೊಂಡಿದ್ದ ಶಾಂತಂಜೇರಿ ರಾಮಸ್ವಾಮಿಯವರ ಮನೆಯ ಪಕ್ಕದ ಮನೆಯ ನಿವಾಸಿ ಸುಧನ್ವಾ ಎಂಬ ಯುವಕನು ಪಾಶ್ಚಾತ್ಯ ತತ್ತ್ವ ಶಾಸ್ತ್ರಾಧ್ಯಾಪಕನಾಗಿ ಹೆಸರು ಪಡೆದವನು. ಆದರೆ ಆಗಿನ ದಿನಗಳಲ್ಲಿ ಆಂಗ್ಲ ವಿದ್ಯೆಯನ್ನು ಓದಿ ಪಾಶ್ಚಾತ್ಯ ಸಂಸ್ಕೃತಿ–ಪ್ರಭಾವಗಳನ್ನು ಮೈಗೂಡಿಸಿ ಕೊಂಡಿದ್ದ ಭಾರತೀಯ ತರುಣರಿಗೆ ಪೌರ್ವಾತ್ಯ ಸಂಸ್ಕೃತಿಯ ಬಗೆಗೆ ತೀರಾ ಜಿಗುಪ್ಸೆ. ಅಂಥವರ ಅನಿಸಿಕೆ ಎಂದರೆ:– "ಈ ಸಂಸ್ಕೃತ ವಿದ್ವಾಂಸರ ಪಾಂಡಿತ್ಯ ಕೇವಲ ಪುರಾತನ ಗ್ರಂಥಗಳಿಂದ ಲಭ್ಯವಾಗಿ ಅದರಲ್ಲಿಯೇ ಆಸಕ್ತವಾಗಿರುವಂಥದೇ ಹೊರತು ಸ್ವತಂತ್ರ ವಿಚಾರಶೀಲ ಪ್ರವೃತ್ತಿ ಇವರಿಗೆ ಇಲ್ಲವೇ ಇಲ್ಲ. ಬೇರೊಬ್ಬರ ವಾಕ್ಯಗಳೇ ಇವರ ಚಿಂತನೆಗಳಿಗೆ ಆಧಾರ. ಯುಕ್ತಾಯುಕ್ತ–ಗುಣದೋಷಗಳ ವಿವೇಚನಾ ಸಾಮರ್ಥ್ಯ ಇವರಿಗೆ ಇಲ್ಲ. ಚಿಕಿತ್ಸಕ ಸ್ವಭಾವವೂ ಇವರಲ್ಲಿ ವಿರಳ. ಅಂಥವರು ಅಪುರೂಪವಾಗಿ ಕಾಣಬಂದರೂ ಅವರ ಜ್ಞಾನದ ಮಟ್ಟ ಗತ ಯುಗಗಳಿಗೆ ಮಾತ್ರ ಸೀಮಿತ. ಹೊರತು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಿರುವ ಹೊಸ ವೈಜ್ಞಾನಿಕ ಪ್ರವೃತ್ತಿಯ ಈ ಕಾಲದಲ್ಲಿ ಆ ಹಿಂದಿನ ಮೌಲ

ಗಳಿಗೆ ಯಾವ ಸ್ಥಾನವೂ ಇಲ್ಲ". ಈ ಯುವಕ ಸಧನ್ವನಿಗಿದ್ದುದೂ ಇದೇ ಬಗೆಯ ಅಭಿಪ್ರಾಯ. ಹಾಗಿದ್ದರೂ ಈ ಹಿಂದೆ ಗಣಪತಿಮುನಿಗಳನ್ನು ಮೊದಲಸಲ ನೋಡಿದಾಗಲೇ ಸುಧನ್ವನ ಹೃದಯ ಅವರಿಗೆ ಮಾರುಹೋಯಿತು. "ಈ ಮನುಷ್ಯನ ಅನುಭಾವ ಬಹಳ ಮಹತ್ವದ್ದು. ಇವರ ಸಮೀಪದಲ್ಲಿ ಇದ್ದಾಗಲೆಲ್ಲಾ ನಮ್ಮ ಮನೋಭೂಮಿಕೆಯ ಮೇಲೆ ಹರ್ಷದ ವರ್ಷಧಾರೆ ತಾನೇ ತಾನಾಗಿ ಹರಿದಾಡುತ್ತದೆ." ಎಂಬ ಭಾವನೆ ಸುಧನ್ವನಲ್ಲಿ ದೃಢವಾಯಿತು. ಇದನ್ನು ಅವನು ಬಹಿರಂಗವಾಗಿಯೂ ವ್ಯಕ್ತಪಡಿಸಿದ.

ಆ ಸಂದರ್ಭದಲ್ಲಿ ಸುಧನ್ವನಿಗೆ ಸಂಸ್ಕೃತ ಭಾಷೆಯ ಪರಿಚಯವೇ ಇರಲಿಲ್ಲ. ಆದರೂ ಸಂಸ್ಕೃತರಸಜ್ಞರಾದ ಇತರ ಗೆಳೆಯರೊಂದಿಗೆ ಕಾವ್ಯಕಂಠ ಗಣಪತಿ ಮುನಿಗಳ ಕುತೂಹಲಕರ ಅಷ್ಟಾವಧಾನ ಕಾರ್ಯಕ್ರಮಗಳನ್ನು ನೋಡಿ ಪ್ರಭಾವಿತನಾಗಿದ್ದ. ನೆರೆಮನೆಯಲ್ಲಿ, ತಮ್ಮ ಮನೆಯಲ್ಲಿ ಅಷ್ಟಾವಧಾನ ನಡೆದಾಗ ಸುಪ್ರಸಿದ್ಧ ಆಂಗ್ಲಕವಿ ಷೇಕ್ಸ್‌ಪಿಯರನ ಮ್ಯಾಕ್‌ಬೆತ್ ನಾಟಕದ ವಸ್ತುವನ್ನು ಸಂಸ್ಕೃತ ಆಶುಕವಿತೆಯಧಾರೆಯಲ್ಲಿ ವಿವರಿಸುವಂತೆ ಗಣಪತಿಮುನಿಗಳನ್ನು ಕೇಳ ಲಾಯಿತು. ಅದರಂತೆ ಕಾವ್ಯಕಂಠರ ಸುಮಧುರ ಕಂಠದಿಂದ ಹರಿದು ಬಂದ ಆಶು ಕವಿತಾ ಸುಧಾಧಾರೆಯನ್ನು ಸವಿದು ಸುಧನ್ವಾದಿಗಳು ಸಂತೃಪ್ತರಾದರು. ಆ ಪದ್ಯ ಗಳ ಮಾಲಿಕೆ ಈಗ ಲಭ್ಯವಿಲ್ಲದಿರುವುದು ದುರದೃಷ್ಟಕರ. ಲಭ್ಯವಿರುವ ಆ ಪದ್ಯ ಮಾಲಿಕೆಯ ಮೊದಲ ಪದ್ಯದ ಪ್ರಥಮ ಚರಣ ಹೀಗಿದೆ:—

"ಡಂಕರ್ ನಾಮ ಮಹೀಪತಿಃ ಸಮಭವತ್ ಸ್ಕಾಟ್ಲಂಡದೇಶೇ ಪುರಾ"

ಇದೇ ಸುಧನ್ವನು ವಾಸಿಷ್ಠಮುನಿಗಳ ಜನ್ಮಾಂತರದ ಆಧ್ಯಾತ್ಮಿಕ ಸಾಧನೆಯ ಸಹಚರರಲ್ಲಿ ಒಬ್ಬನಾಗಿದ್ದನೆಂಬುದು ಮುಂದೆ ಅವರ ಅರಿವಿಗೆ ಬರಲು ಈ ಸಂದರ್ಭವೇ ಮೂಲ ಕಾರಣವಾಯಿತು.

ಅದೇ ಸಂದರ್ಭದಲ್ಲಿ ತಂಡಲಾ ಸುಬ್ರಹ್ಮಣ್ಯ ಶಾಸ್ತ್ರಿಗಳೆಂಬುವರು (ಮುಂದೆ ಇವರು ಯಜ್ಞದೀಕ್ಷಿತರೆನಿಸಿಕೊಂಡರು) ಕಾವ್ಯಕಂಠರೊಡನೆ ಸಂಭಾಷಿಸುತ್ತಿದ್ದಾಗ ಸ್ಕಂದ–ಗಣೇಶ – ಪಾರ್ವತೀ-ಪರಮೇಶ್ವರರ ಪರವಾಗಿ ಶ್ಲೋಕವೊಂದನ್ನು ರಚಿಸಿ ಹೇಳುವಂತೆ ಅಪೇಕ್ಷಿಸಿದರು. ಮರುಕ್ಷಣವೇ ಕಾವ್ಯಕಂಠರ ಮುಖದಿಂದ ಹೊರಬಂದ ಶ್ಲೋಕ ಇದು :—

ಜಗತೀಧರಜಾಮಾತಾ ಭವತಾಂ ಭವ್ಯಾಯ ಭೂಯಸೇ ಭವತು ।
ಕಂಚಿದಕಿಂಚನಮಪಿ ಯದ್ವೀಕ್ಷಾ ವಿದಧಾತಿ ಶಕ್ರ ಸಮಂ ॥

ಈ ಪದ್ಯದ ಪ್ರಾರಂಭದ "ಜಗತೀಧರಜಾಮಾತಾ" ಎಂಬ ವಾಕ್ಯವನ್ನು ಮೂರು ರೀತಿಯಾಗಿ ಬಿಡಿಸಿದಾಗ ಮೂರು ಅರ್ಥಗಳು ಹೊರಡುತ್ತವೆ.

1ನೆಯ ರೀತಿ :-

"ಜಗತೀಧರಜಾ'' ಅಂದರೆ ಪರ್ವತರಾಜನ ಮಗಳು "ಮಾತಾ'' ಎಂದರೆ ತಾಯಿ-ದೇವಿ ಇದರಿಂದ ''ಪಾರ್ವತೀದೇವಿ'' ಎಂಬ ಅರ್ಥ ಸ್ಪಷ್ಟವಾಗುತ್ತದೆ.

2ನೆಯ ರೀತಿ :-

''ಜಗತಿಧರ'' ಅಂದರೆ ಪರ್ವತ (ಹಿಮವಂತ). ಆತನ ''ಜಾಮಾತಾ'' ಅಂದರೆ ಅಳಿಯ. ಪರ್ವತರಾಜ ಕುಮಾರಿ ಪಾರ್ವತಿಯ ಪತಿ "ಪರಮೇಶ್ವರ" ಎಂಬುದು ಇದರ ಅರ್ಥ.

3ನೆಯ ರೀತಿ :-

''ಜಗತೀಧರಜಾ ಪಾರ್ವತೀದೇವಿಯು ''ಮಾತಾ''ಯಸ್ಯಸ :- ತಾಯಿಯಾಗಿ ಉಳ್ಳವನು-ಅಂದರೆ ಸ್ಕಂದ-ಗಣೇಶ ಇಬ್ಬರಿಗೂ ಪಾರ್ವತೀದೇವಿ ತಾಯಿಯಾದುದರಿಂದ ಅವರಿಬ್ಬರ ಹೆಸರು ಇಲ್ಲಿ ವ್ಯಕ್ತವಾಗುತ್ತದೆ.

ಒಟ್ಟುಶ್ಲೋಕದ ಅರ್ಥ :- ಈ ನಾಲ್ವರು ದೇವತೆಗಳೂ ನಿಮಗೆ ಒಳಿತುಂಟು ಮಾಡಲಿ. ಯಾರೊಬ್ಬ ದರಿದ್ರನ ಮೇಲೆ ಇವರ ದೃಷ್ಟಿ ಬಿದ್ದರೆ ಸಾಕು ! ಆತ ಇಂದ್ರ ವೈಭವವನ್ನು ಅನುಭವಿಸುತ್ತಾನೆ.

ಇನ್ನೊಮ್ಮೆ ವೇದಂ ವೆಂಕಟನಾರಾಯಣ ಶಾಸ್ತ್ರಿಗಳೆಂಬ ಪ್ರಸಿದ್ಧ ಪಂಡಿತರೊಡನೆ ಸಂಭಾಷಿಸುತ್ತಿದ್ದ ವಾಸಿಷ್ಠಮುನಿಗಳು ಸಾಂದರ್ಭಿಕವಾಗಿ ಈ ಪದ್ಯವನ್ನು ಹೇಳಿದರು :-

ಸ್ಯತೆ ಸರ್ವಜ್ಞಶಿರೋಮಣಿದೀಧಿತಿದೋಷಪ್ರದರ್ಶನೇऽಪಿ ಪಟುঃ ।
ಭವತಾಂ ಶಂಕಾಃ ಶಂಕರಹರಿಣದೃಶೋ ಹಾಸನವಶಾಸ್ತ್ರೀ ॥

ಇಲ್ಲಿ ಸರ್ವಜ್ಞ-ಶಿರೋಮಣಿ-ದೀಧಿತಿ ಶಬ್ದಗಳು ಶ್ಲೇಷಾರ್ಥ ಕೊಡತಕ್ಕವುಗಳು. ಸರ್ವಜ್ಞರೆಂದರೆ ಮಹಾಪಂಡಿತರು. ಅವರಿಗೆ ಶಿರೋಮಣಿಯಂತಿರುವವನು ಎಂದರೆ ಭಟ್ಟಾಚಾರ್ಯನೆಂಬ ಪ್ರಸಿದ್ಧ ವಿದ್ವಾಂಸ. ಈತನು ರಚಿಸಿದ ''ದೀಧಿತಿ'' ಎಂಬ ಸುಪ್ರಸಿದ್ಧ ನ್ಯಾಯಶಾಸ್ತ್ರ ಗ್ರಂಥದಲ್ಲಿ ಕೂಡ ದೋಷವನ್ನು ಕಂಡುಹಿಡಿಯಲು ಸಮರ್ಥನಾಗಿದ್ದಾನೆ ಈ ಶಾಸ್ತ್ರಿ, ಇದು ಒಂದು ಅರ್ಥವಾದರೆ ಇನ್ನೊಂದು

ಅರ್ಥ ಹೀಗಿದೆ :– ಸರ್ವಜ್ಞನೆಂದರೆ ಶಿವ. ಆತನ ಶಿರೋಮಣಿಯೆಂದರೆ ಚಂದ್ರ. ದೀಧಿತಿ ಎಂದರೆ ಈ ಚಂದ್ರಮನ ಶುಭ್ರ ಶೀತಲ ಕಿರಣಗಳು. ಅದರಲ್ಲಿ ಸಹ ದೋಷವನ್ನು ಎತ್ತಿ ತೋರಿಸಬಲ್ಲ ದೇವಿಯ ಮಂದಹಾಸ.

ಮದರಾಸಿನ ಆದಿಪುರಕ್ಕೆ (ತಿರುವೊಟ್ಟಿಯೂರು) ಕಾವ್ಯಕಂಠರು ಮೊದಲ ಸಲ ಬಂದಾಗ ಕಪಾಲಿಶಾಸ್ತ್ರಿ ಎಂಬ ಯುವಕರು (ಈ ''ವಾಸಿಷ್ಠ ವೈಭವಂ'' ಗ್ರಂಥ ರಚಿಸಿದವರು) ಗಣಪತಿಮುನಿಗಳಿಗೆ ಸ್ಥಳ ಮಹಿಮೆಯೊಂದಿಗೆ ಕ್ಷೇತ್ರ ಪರಿಚಯ ಮಾಡಿಕೊಡುತ್ತ ಆದಿಪುರೇಶ್ವರ ಗುಡಿಯ ಪ್ರಾಕಾರದಲ್ಲಿ ಪ್ರತಿಷ್ಠಿತಳಾದ ಕಾಳಿಕಾದೇವಿಯ ದರ್ಶನ ಮಾಡಿಸಿದರು. ಆ ದೇಗುಲದ ಮುಂದುಗಡೆ ವರ್ತುಲಾಕಾರದ ಕಲ್ಲಿನಿಂದ ಮುಚ್ಚಲ್ಪಟ್ಟ ಭಾವಿಯು ದೇವಿಯ ವಾಸಸ್ಥಾನವೆಂಬ ಐತಿಹ್ಯವನ್ನೂ ತಿಳಿಸಿದರು.

ಈ ವಿಷಯ ಕೇಳಿದ ಗಣಪತಿ ಮುನಿಗಳು ಕೂಡಲೇ ಈ ಶ್ಲೋಕವನ್ನು ರಚಿಸಿ ಭಾವಿಯಲ್ಲಿ ನೆಲೆಸಿರುವ ದೇವಿಯನ್ನು ಸ್ತೋತ್ರ ಮಾಡಿದರು.

> ಕೂಪೇ ವಿಭಾಸಿ ಕಿಲ ಕೋಪವತಿ ತ್ರಿಯಾಮಾ–
> –ಚಾರಿಷ್ವಶೇಷಜಗದೀಶ್ವರಿ ಕಾಲಿ ಭದ್ರೇ ।
> ವಿಭ್ರಾಜದಾದಿಪುರವಾಸಿನಿ ದಾಸಮಾಪತ್
> -ಕೂಪಾದುದಂಚಯ ಪದಾಂಬುಜಭಕ್ತಮೇನಂ ॥

ರಾಕ್ಷಸ ಕುಲದ ಬಗ್ಗೆ ರೋಷವುಳ್ಳವಳು ನೀನು. ಸಕಲ ಬ್ರಹ್ಮಾಂಡನಾಯಕಿ–ಮಂಗಳದಾಯಕಿ ಕಾಳಿ ನೀನು. ಈ ಕೂಪದಲ್ಲಿ ಸನ್ನಿಹಿತಳಾಗಿದ್ದೀಯೆ. ಶ್ರೇಷ್ಠವಾದ ಈ ಆದಿಪುರದಲ್ಲಿ ನೆಲಸಿರುವ ನೀನು ನಿನ್ನ ಪಾದಸೇವಕನಾದ ನನ್ನನ್ನು ಕಷ್ಟಗಳ ಕೂಪದಿಂದ ಉದ್ಧರಿಸಿ ಕಾಪಾಡು.

ಆ ದಿನಗಳಲ್ಲಿ ಒಮ್ಮೆ ಪರಿಜನರಾದ ನಮ್ಮೆಲ್ಲರ ಬೇಡಿಕೆಯಂತೆ ವಾಸಿಷ್ಠ ಮುನಿಗಳು ಸರಳ–ಸುಂದರ ಶೈಲಿಯಲ್ಲಿ ಗಂಭೀರ ಅರ್ಥದಿಂದ ಕೂಡಿದ 50ಕ್ಕೂ ಹೆಚ್ಚಿನ ಪದ್ಯಗಳನ್ನು ಆಶುಕವಿತೆಯಾಗಿ ರಚಿಸಿ ಶ್ರೀ ಬಾಲಾತ್ರಿಪುರಸುಂದರೀ ದೇವತೆಯ ಮೂರು ಬೀಜಾಕ್ಷರಗಳ ಮಹಿಮೆಯನ್ನು ಸುಶ್ರಾವ್ಯವಾಗಿ ಹಾಡಿ ಸುಮ್ಮನೆ ಕುಳಿತರು. ಈ ಸ್ತೋತ್ರದ ಮಧುರ ನಾದತರಂಗಗಳಲ್ಲಿ ತೇಲಾಡುತ್ತಿದ್ದ ನಾವು ಈ ನಾದ ಮಾಧುರ್ಯದ ಪ್ರವಾಹ ಒಳಗಿನದೇ ಅಥವಾ ಹೊರಗಿನದೇ ಎಂಬುದನ್ನು ನಿರ್ಧರಿಸಲಾಗದೆ ಮುಹೂರ್ತಕಾಲ ತನ್ಮಯರಾಗಿ ಹೋಗಿದ್ದೆವು.

ಗಣಪತಿ ಮುನಿಗಳು ಆದಿಪುರದಲ್ಲಿದ್ದಾಗ ಅವರ ಶಿಷ್ಯ ವಾಸುದೇವನಿಂದ (ಇವರೇ ಮುಂದೆ ಅರುಣಾಚಲದಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಪ್ರಸಿದ್ಧಿಪಡೆದ ವಾಸುದೇವಶಾಸ್ತ್ರಿಗಳು) ಪತ್ರವೊಂದು ಬಂದಿತು. ಬಾಲಕ ವಿದ್ಯಾರ್ಥಿ ವಾಸುದೇವನು ಆ ಪತ್ರವನ್ನು ಸಂಸ್ಕೃತ ಗದ್ಯದಲ್ಲಿ ಪ್ರಾರಂಭಿಸಿ ಪದ್ಯದಿಂದ ಮುಗಿಸಿದ್ದ. ಆ ಪದ್ಯದ ಕೊನೆಯ ಚರಣ "ವಾರ್ತೇಽಯಂ ಶುಭಸಹಿತಾ ಪ್ರಹರ್ಷಿಣೀ ಚ" ಈ ಸುದ್ದಿ ಶುಭಕರವೂ ಹರ್ಷದಾಯಕವೂ ಆಗಿದೆಯೆಂಬ ಅರ್ಥವಲ್ಲದೆ ಈ ಶ್ಲೋಕ ಪ್ರಹರ್ಷಿಣೀ ವೃತ್ತದಲ್ಲಿ ರಚಿತವಾಗಿದೆಯೆಂಬ ಇನ್ನೊಂದು ಅರ್ಥದಿಂದಲೂ ಕೂಡಿದೆ. ವಾಸುದೇವನು ಆಗ್ಯೆ ಇನ್ನೂ ಕಾವ್ಯ ಪಾಠ ಪೂರ್ಣಗೊಳಿಸಿರಲಿಲ್ಲ. ಆದರೂ ಅಲ್ಪಸ್ವಲ್ಪ ಕಾವ್ಯ ಪರಿಚಯದ ಬಲದಿಂದಲೇ ಆತನು ಶ್ಲೇಷಾರ್ಥವನ್ನಳವಡಿಸಿ ದೋಷಕ್ಕೆ ಎಡೆಯಿಲ್ಲದಂತೆ ರಚಿಸಿದ ಈ ಪದ್ಯ ವಾಸಿಷ್ಠಮುನಿಗಳಿಗೆ ತುಂಬಾ ಸಂತೋಷ ಉಂಟುಮಾಡಿತು. ಅವರು ಕೂಡ ಶಿಷ್ಯವಾತ್ಸಲ್ಯದಿಂದ ತಮ್ಮ ಉತ್ತರವನ್ನು ಗದ್ಯದಿಂದಾರಂಭಿಸಿ ಪದ್ಯದಲ್ಲಿ ಮುಗಿಸಿ ವಾಸುದೇವನಿಗೆ ಕಳಿಸಿದರು. ತಮ್ಮ ಶಿಷ್ಯಸಮೂಹದ ವರ್ಚಸ್ಸು-ವಿದ್ಯೆ ಬೆಳೆಯುವಂತೆ, ಸತ್ಯಕ್ಕೆ ದೂರವಿಲ್ಲದಂತೆ, ಅನುಗ್ರಹಪೂರ್ಣ ಶಬ್ದಗಳನ್ನು ಬಳಸುವಲ್ಲಿ ಆಚಾರ್ಯ ವಾಸಿಷ್ಠರ ಪ್ರಭಾವ ಅದ್ವಿತೀಯವೆಂಬುದು ನಮ್ಮ ಅನುಭವಕ್ಕೆ ಬಂದ ವಿಷಯ. ಆ ವೈಶಿಷ್ಟ್ಯವನ್ನು ಈ ಪದ್ಯದಲ್ಲಿಯೂ ಕಾಣಬಹುದು.

ವಾಸುದೇವ ತವ ನವ್ಯಕಾಕಲೀಪತ್ರಮದ್ಯ ಮಮ ಹಸ್ತಮಾಗತಂ।
ಕೀರಕೂಜಿತ ಮಿವಾತಿಸುಂದರಂ ಬಾಲಭಾಷಿತಮಿವಾತಿ ಮಂಜುಲಂ॥

ವಾಸುದೇವ! ನಿನ್ನ ಮೃದು-ಮಧುರ ಪತ್ರ ಇದೀಗ ನನ್ನ ಕೈಸೇರಿದೆ. ನಿನ್ನ ಮಾತುಗಳು ಅರಗಿಣಿಯ ಉಲಿಯಂತೆ ತುಂಬ ಸುಂದರ. ಮಗುವಿನ ಮೊದಲ ನುಡಿಯಂತೆ ಬಹುಮಂಜುಲ.

ವಾಸಿಷ್ಠಮುನಿಗಳು ಎರಡನೆಯ ಸಲ (ಕ್ರಿ.ಶ. 1909) ಆದಿಪುರದಲ್ಲಿ ಇದ್ದಾಗ ಮಾತಿನ ಮಧ್ಯೆ "ಇದು ಪ್ರಾಚೀನ ಕ್ಷೇತ್ರ. ಹಿಂದೆ ಇಲ್ಲಿ ವೇದಾಧ್ಯಯನ-ಶಾಸ್ತ್ರಾರ್ಥ ಚರ್ಚೆಯಲ್ಲಿ ನಿರತರಾದ ಪಂಡಿತರು ಅನೇಕರಿದ್ದರು" ಎಂದು ನಾವು ಹೇಳಿದೆವು. ಇದನ್ನು ಕೇಳಿದ ಆಚಾರ್ಯರು ಈ ಶ್ಲೋಕವನ್ನು ರಚಿಸಿ ಹೇಳಿದರು.

ಆದಿಪುರೇ ವಿಜಯಂತೇ ವಾದಿಜನಾಲಾಪ ಮುಖರಿತಾಶಾಂತೆ ।
ಶೀತಲಲೋಚನಕೋಣಾಃ ಶೀತಾಂಶುಕಲಾಭೃತಃ ಪ್ರಾಣಾಃ ॥

ವಾದಾಸಕ್ತ ವಿದ್ವಾಂಸರ ಚರ್ಚೆಯ ವಿಷಯಗಳು ದಿಕ್ಕುದಿಕ್ಕುಗಳಲ್ಲಿ ಪ್ರತಿಧ್ವನಿಸುವ ಆದಿಪುರದಲ್ಲಿ ಶೀತಕಿರಣನ ಕಲೆಯನ್ನು ಶಿರದಲ್ಲಿ ಧರಿಸಿದ ಚಂದ್ರಚೂಡನ ಅಪಾಂಗದೃಷ್ಟಿ ಮತ್ತು ಆತನ ಪ್ರಾಣಶಕ್ತಿಗಳು ಸಾರ್ವಭೌಮತ್ವ ಪಡೆದಿವೆ.

ಮತ್ತೊಮ್ಮೆ ಆಚಾರ್ಯ ವಾಸಿಷ್ಠರು ತಮ್ಮ ಹಿಂದಿನ ಬದುಕಿನ ವಿಷಯಗಳನ್ನು ವಿವರಿಸುತ್ತಿದ್ದಾಗ "ತಮ್ಮ ಸಹೋದರ ಶಿವರಾಮನೊಡನೆ ಕಾಶಿಕ್ಷೇತ್ರದ ಕಾಳೀಘಾಟ್‌ನಲ್ಲಿದ್ದ ತಾನು ಹಟಾತ್ತನೆ ಸ್ವಗ್ರಾಮಕ್ಕೆ ಹೋಗುವ ಅಭಿಲಾಷೆ ವ್ಯಕ್ತಪಡಿಸಿದುದನ್ನು" ನೆನಪಿಸಿಕೊಂಡು ಹೀಗೆ ಹೇಳಿದರು:-

ಬಾಲ್ಯದಲ್ಲಿ (ಅಂದರೆ ಆಗಲೇ ಅವರಿಗೆ ಮದುವೆಯಾಗಿತ್ತು) ತಪಸ್ಸಿನ ಹಂಬಲವನ್ನು ಹೊತ್ತು ಮನೆ ಬಿಟ್ಟು ಕಾಶೀಕ್ಷೇತ್ರಕ್ಕೆ ಹೋಗಿ ನೆಲೆಸಿದ್ದ ನನಗೆ ಒಮ್ಮೆ ಮಾತ್ರ ಪ್ರಿಯತಮೆಯ ನೆನಪು ಕಾಡತೊಡಗಿತು. ಈ ವಾಸ್ತವಿಕ ಸಂಗತಿಯನ್ನು ಹೇಳಲು ನಾಚಿಕೆಪಡಬೇಕಾದ್ದೇನಿದೆ? ಹೀಗೆ ಹೇಳಿದ ಗಣಪತಿಮುನಿಗಳು ಈ ಶ್ಲೋಕದ ಮೂಲಕ ಆಗಿನ ತಮ್ಮ ಮನಃಸ್ಥಿತಿಯನ್ನು ವರ್ಣಿಸಿದರು:-

ಧ್ಯಾಯನ್ನಪಿ ಪ್ರಮಥನಾಥಪದಾರವಿಂದಂ
ವರ್ಷಾಸು ಮಂಜುರುಚಮಂಬುಮುಚಂ ವಿಲೋಕ್ಯ।
ಕಾಂತಾವಿಯೋಗಚಲಿತಃ ಕವಿಚಕ್ರವರ್ತೀ
ಗಂಗಾತಟೇ ಗಣಪತಿರ್ನಜಗಾಮ ಶಾಂತಿಂ॥

ಶಿವನನ್ನು ಕುರಿತು ನಿಷ್ಠೆಯಿಂದ ತಪಸ್ಸು ಮಾಡುತ್ತಿದ್ದರೂ ಥಂಡಿ ಮಳೆ ಸುರಿಸುವ ಮಳೆಗಾಲದ ಮೇಘಗಳ ಸಾಲನ್ನು ನೋಡಿದ ಕವಿ ಸಾರ್ವಭೌಮ ಗಣಪತಿಯು ಹೆಂಡತಿಯ ವಿರಹದುಃಖದಿಂದ ವಿಚಲಿತ ಮನಸ್ಸುಳ್ಳವನಾಗಿ ಪವಿತ್ರ ಗಂಗೆಯ ತಡಿಯಲ್ಲಿದ್ದರೂ ಸಮಾಧಾನ ಹೊಂದಲಿಲ್ಲ.

ಈ ಸಂಭಾಷಣೆಯಲ್ಲಿ ಪ್ರಸಕ್ತವಾದ ವಿಷಯಕ್ಕೆ ಹೊಂದಿಕೆಯಾಗುವಂತೆ ಈ ಮುಂದಿನ ಪದ್ಯವನ್ನೂ ಹೇಳಿದರು :-

ಕತಿ ಕತಿ ನ ವಾ ಪಶ್ಯಾಮೋಽಮೀ ವಯಂ
ಮನುಜಾಧಮಾ ಉದರಭರಣೇ ಸಕ್ತಾ ನಕ್ತಂ ವಧೂರತಿಕಾಂಕ್ಷಿಣಃ।
ಇಹ ತು ಭುವನೇ ವಿದ್ವಾನೇಕಃ ಪರಸ್ಯ
ಪಿನಾಕಿನಶ್ಚರಣಕಮಲಂ ಧ್ಯಾಯರ್ಧ್ಯಾಯನ್ ಕೃತಾರ್ಥಯತಿ ಕ್ಷಪಾಃ॥

ಈ ಜಗತ್ತಿನಲ್ಲಿ ಹಗಲು ಕೇವಲ ಹೊಟ್ಟೆ ತುಂಬಿಸಿಕೊಳ್ಳುವುದರಲ್ಲಿ ನಿರತರಾಗಿ ರಾತ್ರಿಯಾಯಿತೆಂದರೆ ಸ್ತ್ರೀಸಂಗಕ್ಕಾಗಿ ಹಲುಬುವ ಎಷ್ಟೊಂದು ಸಂಖ್ಯೆಯ ಕೀಳುಮಂದಿಯನ್ನು ನಾವು ಕಾಣುತ್ತಿಲ್ಲ ? ಆದರೆ ಇನ್ನೊಂದೆಡೆ ತಿಳಿದವನೊಬ್ಬ ಇಹದ ಚಿಂತೆಯೇ ಇಲ್ಲದೆ ಪರಮೇಶ್ವರನ ಪಾದಪದ್ಮಗಳ ಧ್ಯಾನದಲ್ಲಿ ಮಗ್ನನಾಗಿ ಪರಚಿಂತನೆ ಮಾಡುತ್ತ ರಾತ್ರಿಗಳನ್ನು ಸಾರ್ಥಕಪಡಿಸಿಕೊಳ್ಳುತ್ತಿರುವುದೂ ಉಂಟು.

ಒಂದು ದಿನ ಸಂಜೆಯ ವೇಳೆಯಲ್ಲಿ ನಾವೆಲ್ಲರೂ ಸಮುದ್ರದತಡಿಯಲ್ಲಿ ಕುಳಿತು ಸಂಭಾಷಣೆಯಲ್ಲಿ ತೊಡಗಿದ್ದೆವು. ಆದರೆ ವಾಸಿಷ್ಠ ಮುನಿಗಳು ಮಾತ್ರ ಮೌನವಾಗಿ ಕುಳಿತಿದ್ದರು. ಅದನ್ನು ಕಂಡ ಒಬ್ಬರು "ನೀವು ಏನನ್ನೋ ಗಾಢವಾಗಿ ಯೋಚಿಸುತ್ತಿರುವಂತಿದೆ" ಎಂದರು. ಆಗ ಆಚಾರ್ಯ ವಾಸಿಷ್ಠರು ಮೊದಲು ಪದ್ಯದ ಕೊನೆಯ ಪಾದವನ್ನು ಹೇಳಿ ನಂತರ ಪದ್ಯವನ್ನು ಹೀಗೆ ಪೂರ್ಣಗೊಳಿಸಿದರು :-

ಕುಲೀನಃ ಕ್ಷುದ್ರಾಯ ಪ್ರವರ ಇತಿ ದತ್ತೇ ನಿಜಸುತಾಂ
ಅನಾರ್ಯಾನ್ ವಿಜ್ಞಾಶ್ಚ ಪ್ರಭವ ಇತಿ ಗಾಯಂತಿ ಶತಶಃ ।
ಬಲಂ ಬಾಹ್ವೋರ್ಲುಪ್ತಂ ಹೃತಮಪಿ ಚ ವಾಗ್ವೀರ್ಯಮರಿಭಿಃ
ದಶಾಂ ದೇಶಸ್ಯೈತಾಂ ಪ್ರತಿಪದಮಯಂ ಧ್ಯಾಯತಿ ಜನಃ ॥

ಸತ್ಕುಲದಲ್ಲಿ ಹುಟ್ಟಿದವನು ಕೇವಲ ಕ್ಷುದ್ರ ವೃತ್ತಿಯುವನನ್ನೇ ಶ್ರೇಷ್ಠನೆಂದು ತಿಳಿದು ತನ್ನ ಮಗಳನ್ನೇ ಕೊಟ್ಟು ಸಂಬಂಧ ಬೆಳೆಸುತ್ತಾನೆ. ತಿಳಿದವರು ಕೂಡ ಪರಕೀಯರನ್ನೇ ಪ್ರಭುಗಳೆಂದು ನೂರಾರು ಬಗೆಯಲ್ಲಿ ಕೊಂಡಾಡುತ್ತಾರೆ. ನಮ್ಮ ವಾಕ್ಸ್ವಾತಂತ್ರ್ಯವನ್ನೇ ಶತ್ರುಗಳು ಹತ್ತಿಕ್ಕಿದ್ದಾರೆ. ತೋಳು ಬಲ ನಷ್ಟವಾಗಿ ಹೋಗಿದೆ. ದೇಶದ ಈ ದುರ್ದಶೆಯನ್ನು ಕುರಿತೇ ನನ್ನ ಮನಸ್ಸು ಹೆಜ್ಜೆ ಹೆಜ್ಜೆಗೂ ಯೋಚನೆ ಮಾಡುತ್ತಿದೆ.

ಕಾವ್ಯಕಂಠರು ಕ್ರಿ.ಶ. 1907ರ ವೇಳೆಗೆ ತೀವ್ರವಾದ ತಪಸ್ಸಿನ ಕಡೆಗೆ ಮನಸ್ಸು ಕೊಟ್ಟಮೇಲೆ ಅಷ್ಟಾವಧಾನ ಪ್ರದರ್ಶನವನ್ನು ನಿರ್ವಹಿಸುತ್ತಿರಲಿಲ್ಲವಾದರೂ ಕಾವ್ಯಾಲಾಪಗಳನ್ನು ಸಂಪೂರ್ಣವಾಗಿ ಬಿಟ್ಟವರಲ್ಲ. ಹಾಗಾಗಿ ಒಮ್ಮೆ ನಾವು ಅಷ್ಟಾವಧಾನ ನೋಡುವ ಕುತೂಹಲವಿದ್ದರೂ ಅದನ್ನು ಪ್ರಕಟವಾಗಿ ಹೇಳದೆ ಅಷ್ಟಾವಧಾನದ ವಿಧಿ-ವಿಧಾನಗಳ ಬಗ್ಗೆ ಅವರನ್ನು ಪ್ರಶ್ನಿಸಿದೆವು. ನಮ್ಮ

ಅಂತರ್ಯವನ್ನು ಅರಿತ ಗಣಪತಿಮುನಿಗಳು "ಈ ಕೆಲವು ಅಂಶಗಳನ್ನು ಮಾತ್ರ ತೋರಿಸುತ್ತೇನೆ" ಎಂದು ಹೇಳಿ ಮುಗಿಸುತ್ತಿದ್ದಂತೆಯೇ" ಅವರಿಗೆ ಪೂರ್ವ ಪರಿಚಿತ ರಾದ ಆಂಧ್ರದೇಶದ ಸಂಸ್ಕೃತ ಪಂಡಿತರೊಬ್ಬರು ಅಲ್ಲಿಗೆ ಆಗಮಿಸಿದರು. ಕುಶಲ ಪ್ರಶ್ನೆಯ ನಂತರ ಆ ಪಂಡಿತರು ಕಾವ್ಯಕಂಠರನ್ನು ಕುರಿತು "ಕವಿತೆಯ ಬಗೆಗೆ ನಿಮ್ಮ ಅಭಿಪ್ರಾಯವನ್ನು ವಸಂತತಿಲಕಾವೃತ್ತದಲ್ಲಿ ಪದ್ಯದ ಮೂಲಕ ತಿಳಿ ಸೋಣವಾಗಲಿ" ಎಂದು ಕೇಳಿಕೊಂಡರು. ಫಲಕವೊಂದನ್ನು ತರಿಸಿಕೊಂಡು ತಾವೇ ಅದರಲ್ಲಿ 56 ಮನೆಗಳುಳ್ಳ (ವಸಂತ ತಿಲಕಾವೃತ್ತದಲ್ಲಿ 56 ಅಕ್ಷರಗಳಿರುವುದರಿಂದ) ಚೌಕವನ್ನು ರಚಿಸಿ ವಾಸಿಷ್ಠಮುನಿಗಳ ಕೈಗೆ ಕೊಟ್ಟರು. ಇವರು ಬೆರಳು ಮಾಡಿ ತೋರಿಸಿದ ಮನೆಯಲ್ಲಿ ಕಾವ್ಯಕಂಠರು ತಮಗೆ ತೋಚಿದ ಯಾವುದಾದರೂ ಒಂದು ಅಕ್ಷರವನ್ನು ಬರೆಯಬೇಕು. ಮನೆಗಳನ್ನು ತೋರಿಸುವವರು 1 ರಿಂದ ಕ್ರಮವಾಗಿ ಯೇನೂ ತೋರಿಸದೆ ತಮಗೆ ತೋರಿದಂತೆ ತೋರಿಸುತ್ತಾ ಹೋಗುತ್ತಾರೆ. ಹೀಗಿ ರುವಾಗ ಇಲ್ಲಿ ಯಾವ ಮನೆಯಲ್ಲಿ ಯಾವ ಅಕ್ಷರ ಹಾಕಿದರೆ ತಮ್ಮ ಶ್ಲೋಕಕ್ಕೆ ಸೂಕ್ತವಾದೀತು ಎಂದು ಮೊದಲಾಗಿಯೋಚಿಸುತ್ತ ಕುಳಿತಿರಲು ಅವಕಾಶವಿಲ್ಲ. ಅವರು ತೋರಿಸುತ್ತ ಹೋದಂತೆ ಇವರು 56 ಮನೆಗಳಲ್ಲಿ ಅಕ್ಷರಗಳನ್ನು ತುಂಬಿಸಿ ಪೂರ್ಣಗೊಳಿಸಿದಾಗ ಶ್ಲೋಕ ಸಿದ್ಧವಾಗಿರಬೇಕು. ಇದು ಪಂಡಿತ ಸಾಮಾನ್ಯರಿಗೆ ಕೂಡ ಸಾಧ್ಯವಾಗದ ಕೆಲಸ.

ಆ ಸಂಸ್ಕೃತ ಪಂಡಿತರು ಮನೆಗಳನ್ನು ನಿರ್ದೇಶಿಸಲಾರಂಭಿಸಿದರು. ಅವರು ತೋರಿಸಿದ ಮನೆಯಲ್ಲಿ ಅಕ್ಷರವನ್ನು ತುಂಬಿಸುತ್ತ ಕಾವ್ಯಕಂಠರು ಶೀಘ್ರದಲ್ಲಿಯೇ 56 ಅಕ್ಷರಗಳ ಶ್ಲೋಕವನ್ನು ಸಿದ್ಧಪಡಿಸಿದರು. ಅದು ಹೀಗಿದೆ:-

ಪ್ರೀತಿಂ ದದಾತಿ ವಿಪುಲಾಂ ಶ್ರಿಯಮಾತನೋತಿ
ನಿರ್ಮಾತಿ ನೂತ್ನಸಮಯಂ ದುರಿತಂ ಧುನೋತಿ।
ಆರ್ದ್ರೀಕರೋತಿ ಹೃದಯಾನ್ಯಪಿ ದೇವತಾನಾಂ
ಕಸ್ಮೈ ಶುಭಾಯ ನ ಭವೇತ್ ಕವಿತಾ ವಿದೋಷಾ॥

ನಿರ್ದುಷ್ಟವಾದ ಕವಿತೆಯು ಪ್ರೀತಿಯನ್ನು ಕೊಡುತ್ತದೆ. ಅಧಿಕವಾದ ಸಂಪತ್ತನ್ನು ಉಂಟುಮಾಡುತ್ತದೆ. ಹೊಸದಾಗಿ ಸಮಯವನ್ನೂ ನಿರ್ಮಿಸಿಕೊಡು ತ್ತದೆ. ಪಾಪಗಳನ್ನು ಪರಿಹರಿಸುತ್ತದೆ, ದೇವತೆಗಳ ಹೃದಯವನ್ನೂ ಕೂಡ ಕರಗಿಸುತ್ತದೆ. ಇಷ್ಟೊಂದು ಸಾಮರ್ಥ್ಯವುಳ್ಳ ಕವಿತೆ ಎಂಬುದು ಯಾರಿಗೆ ತಾನೇ ಸುಖವನ್ನುಂಟುಮಾಡದೆ ಹೋದೀತು ?

ಕಾವ್ಯಕಂಠರು ಅಕ್ಷರಗಳನ್ನು ತುಂಬಿಸುವಾಗ ಒಮ್ಮೆ ಮಾತ್ರ ಸ್ವಲ್ಪ ಯೋಚಿಸಿ ಅಕ್ಷರ ಬರೆದರು. ಮೇಲಿನ ಪದ್ಯದಲ್ಲಿ "ನೂತ್ನ" ಎಂಬ ಪದವನ್ನು ಅಳವಡಿಸು

ವಾಗಲೇ ಅವರು ಹಾಗೆ ಮಾಡಿದ್ದು. ಅಂದರೆ ಕವಿತೆಯ ಬಗೆಗೆ ತಮ್ಮ ಹೊಸ ಅನಿಸಿಕೆಯೊಂದನ್ನು ಅವರು ಈ ಶಬ್ದದ ಮೂಲಕ ಮೂಡಿಸಿದ್ದರು. "ಕಾವ್ಯಂ ಯಶಸೇ-ಅರ್ಥಕೃತೇ" ಮುಂತಾಗಿ ಕಾವ್ಯರಚನೆಯ ಪ್ರಯೋಜನಗಳನ್ನು ಹೇಳುವುದು ಪದ್ಧತಿ. ಆದರೆ ಆ ಪ್ರಯೋಜನಗಳ ಜೊತೆಗೆ "ನೂತನ ಸಮಯ ನಿರ್ಮಾಣ" (ನಿರ್ಮಾತಿ ನೂತ್ನ ಸಮಯಂ) ಎಂಬ ಹೊಸ ಪ್ರಯೋಜನ ವೊಂದನ್ನು ಕಾವ್ಯಕಂಠರು ಕೊಡುಕೊಂಡಿದ್ದಾರೆ. ಬಹುಶಃ ಈ ಹೊಸ ಪ್ರಯೋಜನ ಈಗಿನ ಕವಿಗಳಿಗೂ ಸಮ್ಮತವಾದೀತು. ''ರಾಜಾ ಕಾಲಸ್ಯ ಕಾರಣಂ" (ರಾಜನೇ ಕಾಲಕ್ಕೆ ಕಾರಣನಾಗುತ್ತಾನೆ.) ಎಂದು ಹಿಂದಿನವರು ಹೇಳಿದರು. ''ಕವಿ : ಕಾಲಸ್ಯ ಕಾರಣಂ" ಕವಿಯು ಕಾಲಕ್ಕೆ ಕಾರಣನಾಗುತ್ತಾನೆ ಎಂಬುದಾಗಿ ಕೂಡ ಹಲವು ದೇಶಗಳ ಇತಿಹಾಸ ಸಂಶೋಧನೆಯಿಂದ ಸಮರ್ಥಿಸಲು ಸಾಧ್ಯ ಎಂಬುದೇ ಕಾವ್ಯ ಕಂಠರ ಅಭಿಪ್ರಾಯ.

ಕ್ರಿ.ಶ. 1907ರಲ್ಲಿ ಅರುಣಾಚಲ ಕ್ಷೇತ್ರದ ವೇದ ಪಾಠಶಾಲಾ ಅಧ್ಯಾಪಕ ರಾಗಿದ್ದ ಪುಣ್ಯಜೀವಿ ಪಂಚನದ ಶಾಸ್ತ್ರಿಗಳೆಂಬವರು ಕಾಲವಾದರು. ಅವರ ಸ್ಥಾನಕ್ಕೆ ಮಹನೀಯರೂ, ಮಹಾ ಉಪಾಸಕರೂ ಆದ ರಾಮಚಂದ್ರ ಘನಪಾಠಿ ಮಹೋ ದಯರು ನಿಯುಕ್ತರಾದರು. ಈ ಇಬ್ಬರು ಮಹನೀಯರನ್ನು ಕುರಿತು ಆ ಸಮಯ ದಲ್ಲಿ ವಾಸಿಷ್ಠ ಮುನಿಗಳು ಈ 2 ಶ್ಲೋಕಗಳನ್ನು ರಚಿಸಿ ಹೇಳಿದರು.

ಪಂಚಭೂತಮಯಮೇವ ವಿಗ್ರಹಂ ಹಂತ ಪಂಚನದ ಪಂಡಿತೋ ಜಹೌ।
ತಸ್ಯ ಕೀರ್ತಿರತಿವಿಶ್ರುತಂ ಪುರಾ ಚಂದ್ರಗೌರಮಧುನಾಪಿ ದೃಶ್ಯತೇ ॥
ರಾಮಚಂದ್ರಘನಪಾಠಿನಾಧುನಾ ತಸ್ಯಕೃತ್ಯಮಮಲಂ ಪ್ರಸಾಧ್ಯತೇ !
ಪಶ್ಚಿಮೋದಧಿಮುಪೇಯುಷೋರವೇ-ಸ್ತಾರಕಾನಿಕರಕಾಮಿನಾ ಯಥಾ ॥

ಪಂಚನದ ಪಂಡಿತರು ಪಂಚಭೂತಾತ್ಮಕ ಶರೀರವನ್ನು ಬಿಟ್ಟು ಕಣ್ಮರೆಯಾಗಿ ಹೋದರು. ಆದರೆ ಪೂರ್ಣಚಂದ್ರಮನ ಬೆಳದಿಂಗಳಿನಂತೆ ಹರಡಿಕೊಂಡಿದ್ದ ಅವರ ಧವಳಕೀರ್ತಿಯನ್ನು ಈಗಲೂ ಕಾಣಬಹುದು.

ಪಶ್ಚಿಮ ಸಮುದ್ರದಲ್ಲಿ ಅಸ್ತಮಿಸುವ ಸೂರ್ಯನ ಸ್ಥಾನವನ್ನು ತಾರಕಾ ಪ್ರೇಮಿ ಚಂದ್ರನು ವಹಿಸಿಕೊಳ್ಳುವಂತೆ ಪಂಚನದ ಶಾಸ್ತ್ರಿಗಳ ಸ್ಥಾನವನ್ನು ಈಗ ರಾಮಚಂದ್ರ ಘನಪಾಠಿಗಳು ಅಲಂಕರಿಸಿ ನಿಷ್ಕಳಂಕ ರೀತಿಯಲ್ಲಿ ನಿರ್ವಹಿಸುತ್ತಿದ್ದಾರೆ.

ಈ ರಾಮಚಂದ್ರ ಘನಪಾಠಿಗಳಿಗೆ ಶ್ರೀ ವಿದ್ಯಾ ಉಪದೇಶ ಕೊಟ್ಟವರು ವಾಸಿಷ್ಠ ಮುನಿಗಳು. ಹಾಗಾಗಿ ಅನೇಕ ವರ್ಷಗಳಿಂದಲೂ ಘನಪಾಠಿಗಳ ಬಗ್ಗೆ

ವಾಸಿಷ್ಠ ಮುನಿಗಳಿಗೆ ಶಿಷ್ಯವಾತ್ಸಲ್ಯ ಬೆಳೆದು ಬಂದಿತ್ತು. ಗುಣನಿಧಿಯಾಗಿದ್ದ ಈ ಘನಪಾಠಿಗಳು 25 ವರ್ಷಗಳ ನಂತರ ವಿಧಿವಶರಾದಾಗ ಗಣಪತಿ ಮುನಿಗಳು ಈ ಮುಂದೆ ಕಂಡ ಚರಮ ಶ್ಲೋಕವನ್ನು ರಚಿಸಿ ಹೇಳಿ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು.

ಭಾರದ್ವಾಜೋ ರಾಮಚಂದ್ರೋ ಮಹಾತ್ಮಾ ವೇದಾಚಾರ್ಯೋ
ನೈಷ್ಠಿಕಃ ಸತ್ಯಸಂಧಃ ।
ಪುಣ್ಯಶ್ಲೋಕೋ ಭೂಮಿಮಾಪೂರ್ಯ ಕೀರ್ತ್ಯಾ ಶೋಕಾಪೇತಂ
ಶಾಂಭವಂ ಧಾಮಭೇಜೆ ॥
ಭವತು ಗಣಪತೇರ್ವಾಗೀಶದಾಸಸ್ಯ ಸತ್ಯಾ ಭಜತು ಪದಮಶೋಕಂ
ರಾಮಚಂದ್ರೋ ದ್ವಿಜೇಂದ್ರಃ ।
ಭಜತು ಗುಣಪಯೋಧೇಃ ಕೀರ್ತಿಶೇಷಸ್ಯ ತಸ್ಯ ಪ್ರವಿಮಲಗುಣಸಂಘೋ
ವಿತ್ತವತ್ತಸ್ಯ ಪುತ್ರಾ‌ನ್ ॥

ಭಾರದ್ವಾಜ ಗೋತ್ರದ ಈ ರಾಮಚಂದ್ರ ಘನಪಾಠಿಗಳು ವೇದಸಂಪನ್ನರು-ನಿಷ್ಠಾಪೂರ್ಣರು ಮತ್ತು ಸತ್ಯಸಂಧರು. ಪುಣ್ಯಶ್ಲೋಕರಾದ ಇವರು ತಮ್ಮ ಕೀರ್ತಿಯನ್ನು ಭೂಮಿಯಲ್ಲಿ ಹರಡಿ ಶೋಕರಹಿತವಾದ ಶಂಭುವಿನ ಲೋಕವನ್ನು ಸೇರಿದರು.

ಬ್ರಾಹ್ಮಣೋತ್ತಮರಾಗಿದ್ದ ರಾಮಚಂದ್ರರಿಗೆ ಪರಮಪದ ಲಭಿಸಲಿ. ಕೀರ್ತಿಶೇಷರಾದ ಅವರಲ್ಲಿ ತುಂಬಿಕೊಂಡಿದ್ದ ಪರಿಶುದ್ಧ ಗುಣಗಳೆಲ್ಲವೂ ಪಿತ್ರಾರ್ಜಿತ ಧನದಂತೆ ಅವರ ಮಕ್ಕಳಿಗೆ ಲಭಿಸಲಿ. ದೈವಭಕ್ತ ಗಣಪತಿಯ ಈ ಮಾತುಗಳು ಸತ್ಯವಾಗಿ ಪರಿಣಮಿಸಲಿ.

ಈ ರಾಮಚಂದ್ರ ಘನಪಾಠಿಗಳ ಹಿರಿಯ ಮಗ ಶ್ರೀ ಸುಬ್ರಹ್ಮಣ್ಯಶಾಸ್ತ್ರಿ (ರಾಜೂಶಾಸ್ತ್ರಿ) ಗಳು ವಾಸಿಷ್ಠ ಮುನಿಗಳಲ್ಲಿಯೇ ದಾರ್ಶನಿಕ ಗ್ರಂಥಗಳ ಅಧ್ಯಯನ ಮಾಡಿದರು. ಮಂತ್ರದೀಕ್ಷೆಯನ್ನೂ ಪಡೆದರು. ಇವರಿಗೆ ವಾಸಿಷ್ಠ ಮುನಿಗಳಲ್ಲಿ ಅನನ್ಯ ಭಕ್ತಿ-ಶ್ರದ್ಧೆಗಳು ಇದ್ದು ಅರುಣಾಚಲವಾಸಿಗಳಾದ ವಾಸಿಷ್ಠ ಶಿಷ್ಯಗಣದಲ್ಲಿ ಪ್ರಮುಖರೆನಿಸಿದ್ದವರು. ವಿದ್ವಾಂಸರಾದ ಇವರು ಸದಾಚಾರ ಸಂಪನ್ನರು. ಆಂಗ್ಲಭಾಷಾ ಶಾಲೆಯಲ್ಲಿ ಆಂಗ್ಲಭಾಷೆಯ ಅಧ್ಯಾಪಕರಾದ ಇವರು ಭಗವಾನ್ ರಮಣ ಮಹರ್ಷಿಗಳ ಭಕ್ತರೂ ಕೂಡಾ.

ಕ್ರಿ.ಶ. 1917 ಪಿಂಗಳ ಸಂವತ್ಸರದಲ್ಲಿ ಆಚಾರ್ಯ ವಾಸಿಷ್ಠರು ಕುಂಡಲೀಪುರದಲ್ಲಿ ಪತ್ನಿಯೊಡನೆ ತಪೋನಿರತರಾಗಿ ಇದ್ದರು. ಒಮ್ಮೆ ಆ ಸಮೀಪದ ಪ್ರದೇಶಗಳಲ್ಲಿ ಅಡ್ಡಾಡುತ್ತಿದ್ದ ವಾಸಿಷ್ಠ ಮುನಿಗಳು ಕಲಾ ಕೌಶಲ್ಯದಿಂದ ಕೂಡಿದ-ಭಗ್ನವಾದ ಭಿತ್ತಿವಿಗ್ರಹಗಳನ್ನುಳ್ಳ ದೇಗುಲಗಳು, ಜೀರ್ಣವಾದ *ಅರ್ಧನಾರೀಶ್ವರ–ಸೋಮೇಶ್ವರ ಮುಂತಾದ ಪೂಜಾಮಂದಿರಗಳು, ಶಿಥಿಲಗೊಂಡು ಮುಳ್ಳು ಪೊದೆಗಳಿಂದ ಮುಚ್ಚಲ್ಪಟ್ಟಿರುವುದನ್ನು ಕಂಡಾಗ ಆಶ್ಚರ್ಯ–ವ್ಯಸನಗಳಿಗೆ ಒಳಗಾದರು. ಅವುಗಳ ಶೋಚನೀಯ ಸ್ಥಿತಿಯನ್ನು ಕುರಿತು ಸಂಗಡಿಗರೊಡನೆ ಸಂಭಾಷಿಸುತ್ತಿದ್ದಾಗ ಅರುಣಾಚಲ ಕ್ಷೇತ್ರವಾಸಿಗಳೂ, ವಾಸಿಷ್ಠಮುನಿಗಳ ವಿಷಯದಲ್ಲಿ ಗೌರವ-ಆದರವುಳ್ಳವರೂ ಆದ ಅವಧೂತ ಈಶ್ವರ ಸ್ವಾಮಿಗಳೆಂಬವರು ಅಲ್ಲಿದ್ದ ಮರುಕು ಶಿಲ್ಪವೊಂದರ ಕಥೆಯನ್ನು ವಿವರಿಸಿದರು. ಅದನ್ನು ಆಲಿಸಿದ ಮೇಲೆ ಕಾವ್ಯಕಂಠರ ಬಾಯಿಂದ ಈ ಪದ್ಯ ಹೊರ ಬಂದಿತು.

ಅರ್ಗಲಾಸದೃಶದೌರ್ಲಸತ್ಪ್ರಭಾ–ಸರ್ಗಕಾರಿ ಮಣಿಕುಂಡಲ ಪ್ರಭೋ ।
ಭರ್ಗಪಾದಪರಿಚಾರಿಣಾಂ ಪತೆ ದುರ್ಗಪಾಲಕ ನಮೋಽಸ್ತು ತೇ ನಮಃ ॥

ಎಲೈ ಸ್ವಾಮಿಯೇ ! ನಿನ್ನ ಕರ್ಣಕುಂಡಲಗಳ ಕಾಂತಿಯು ನಿನ್ನ ವಿಶಾಲ ಭುಜ ಪ್ರದೇಶದ ಮೇಲ್ಗಡೆ ಪ್ರಭಾವಲಯವನ್ನು ನಿರ್ಮಿಸಿದೆ. ಶಿವ ಪಾದ ಸೇವಕರಿಗೆ ನೀನು ನಾಯಕ. * ದುರ್ಗ ಪಾಲಕನಾದ ನಿನಗೆ ನಮೋ ನಮಃ .

* ಇಲ್ಲಿ ಅರ್ಧನಾರೀಶ್ವರ ಎಂದು ಹೇಳಿರುವುದು ಸಂಸ್ಕೃತ ಭಾಷೆಯ ರೀತಿಯನ್ನನುಸರಿಸಿದ್ದಾಗಿದೆ. ತಮಿಳುಭಾಷೆಯಲ್ಲಿ ಈ ದೇವರನ್ನು ಅಮ್ಮೈ–ಅಪ್ಪರ್ ಎಂದು ಕರೆಯುವುದು ರೂಢಿ. ಆದ್ದರಿಂದ ಈ ಶಬ್ದದ ವಾಸ್ತವವಾದ ಅನುವಾದ ಮಾತಾಪಿತೃ-ಭೂತ (ಅಂದರೆ ತಾಯಿಯೇ ತಂದೆಯಾಗಿ ಉಳ್ಳವನು - ಎಂದಾಗುತ್ತದೆ)

*(ದುರ್ಗಪಾಲಕ ಎಂಬುದನ್ನು ತಮಿಳಿನಲ್ಲಿ ಕೊಟ್ಟೈ- ತಲೈಯಾರ್ ಎಂದು ಹೇಳುತ್ತಾರೆ)

ಶಿಷ್ಯಾನುಗ್ರಹ ಪದ್ಯಗಳು :– ಆಚಾರ್ಯ ವಾಸಿಷ್ಠರಿಗೆ ಎಲ್ಲ ಶಿಷ್ಯರ ಮೇಲೂ ಸಮಾನ ವಾತ್ಸಲ್ಯ. ಆದರೆ ಕೆಲವರ ಭಕ್ತಿ–ಕೆಲವರಶಕ್ತಿ–ಮತ್ತಿತರರ ಸೇವಾ ಸಾಮರ್ಥ್ಯಕ್ಕೆ ಅನುಗುಣವಾಗಿ ಆ ವಾತ್ಸಲ್ಯವನ್ನು ಪ್ರಕಟಿಸಬೇಕಾಗುತ್ತಿತ್ತೆಂಬುದರಲ್ಲಿ ಅನುಮಾನವೇನೂ ಇಲ್ಲ.

ಒಮ್ಮೆ ವಾಸಿಷ್ಠರ ದತ್ತು ಮಗನಂತಿದ್ದ ಹಳೆಯ ಶಿಷ್ಯ ಸುಬ್ರಹ್ಮಣ್ಯಶಾಸ್ತ್ರಿ ಯಾವುದೋ ಪ್ರಾಣಬಾಧೆಯಿಂದ ಪೀಡಿತನಾಗಿ ಗುರು ಸಾನ್ನಿಧ್ಯವನ್ನಪೇಕ್ಷಿಸಿ

ತುತಿಯ ಮೂಲಕ ವಿಜ್ಞಾಪಿಸಿಕೊಂಡ. ಶಿಷ್ಯಾನುಕಂಪದಿಂದ ವಾಸಿಷ್ಠರು ಅರುಣಾಚಲದಿಂದ ಸುದೂರದ ಸಿಕಂದರಾಬಾದ ನಗರಕ್ಕೆ ಬಸ್‌ನಲ್ಲಿ ಪಯಣಿಸಿ ಶಿಷ್ಯನ ಮನೆಗೆ ಹೋದರು. ಗುರುಗಳನ್ನು ನೋಡಿ–ಮತ್ತು ಅವರು ರೋಗನಿವಾರಣೆಗೆ ಕೈಗೊಂಡ ಉಪಕ್ರಮಗಳಿಂದ ಮತ್ತು ಮುಖ್ಯವಾಗಿ ಗುರುಸಾನ್ನಿಧ್ಯಪ್ರಭಾವದಿಂದ ಶೀಘ್ರದಲ್ಲಿಯೇ ಗುಣ ಮುಖನಾದನು.

ವಾಸಿಷ್ಠಮುನಿಗಳಿಗೆ ಕಳಿಸಲಾಗಿದ್ದ ತಂತೀವಾರ್ತೆಯಲ್ಲಿ "ಇದು ಯೋಗ ಸಾಧನೆಯಿಂದ ಉಂಟಾದ ರೋಗ" ಎಂದು ತಿಳಿಸಲಾಗಿತ್ತು. ಯೋಗ ಶಕ್ತಿಯಿಂದುಂಟಾದ ಉಲ್ಲಾಸದ ಧಾರೆಯನ್ನು ತಡೆದುಕೊಳ್ಳಬಲ್ಲ ಸಾಮರ್ಥ್ಯವನ್ನು ದೈಹಿಕವಾಗಿ ಸಾಧಿಸಿ ಕೊಂಡಿಲ್ಲದಿರುವಾಗ–ಯೋಗ ಸಾಧನೆಯ ಸಂಸ್ಕಾರದಲ್ಲಿಯೇ ಲೋಪ–ದೋಷವಿದ್ದಾಗ–ರೋಗ ಕಾಣಿಸಿಕೊಂಡು ದೈಹಿಕ ಶಕ್ತಿ ನಷ್ಟವಾಗುತ್ತದೆ ಎಂಬ ಹೇಳಿಕೆ ಯೋಗಶಕ್ತಿಯ ಉಲ್ಲಾಸಕ್ಕೆ ಪೂರ್ವಾಂಗವಾಗಿ ಮನಸ್ಸು–ಪ್ರಾಣ ಶರೀರಗಳನ್ನು ಶುದ್ಧಗೊಳಿಸಿಕೊಳ್ಳಬೇಕೆಂದು ಉಪದೇಶಿಸುತ್ತಿದೆ.

ತನ್ನ ದೇಹದ ಈ ದುಸ್ಥಿತಿ ಅದೇ ರೀತಿಯಿಂದ ಉಂಟಾದುದೆಂಬ ಶಿಷ್ಯನ ಅಭಿಪ್ರಾಯವನ್ನು ಆಚಾರ್ಯ ವಾಸಿಷ್ಠರು ತಿರಸ್ಕರಿಸಲಿಲ್ಲ. "ಜ್ಞಾನ ಪ್ರಭೆಯು ಅಭಿವೃದ್ಧಿಗೊಂಡಲ್ಲಿ ಇಂತಹ ರೋಗಗಳಿಗೆ ಅವಕಾಶವೇ ಇರಲಾರದೆಂಬ" ಅಭಿಪ್ರಾಯವುಳ್ಳ ಶಿಷ್ಯ ಸುಬ್ರಹ್ಮಣ್ಯ ಶಾಸ್ತ್ರಿಯ ಪ್ರಾರ್ಥನೆಯಂತೆ ಆರ್ಯಾ ವೃತ್ತದ ಈ ಆಶೀರ್ವಚನ ಪದ್ಯವನ್ನು ಹೇಳಿ ಶಿಷ್ಯನನ್ನು ಅನುಗ್ರಹಿಸಿದರು :–

ಅಜ್ಞಾನಧ್ವಾಂತಾನಾಂ–ಅಸಹ್ಯರೋಗಾಗ್ನಿಕೀಲಸಂತಪ್ತಾನ್ ।
ಭಾಸುರಶೀತಲದೃಷ್ಟಿಪ್ರಭಯಾ ಪರದೇವತಾಽವತಾದಸ್ಮಾನ್ ॥

ತಿಳುವಳಿಕೆಯಿಲ್ಲದ–ತಾಳಲಾಗದ ರೋಗಾಗ್ನಿ ಜ್ವಾಲೆಯಿಂದ ಬೆಂದು ಕಷ್ಟಪಡುತ್ತಿರುವ ನಮ್ಮನ್ನು ಆ ಪರದೇವತೆಯು ತನ್ನ ಪ್ರಕಾಶ ಪೂರ್ಣ ಶೀತಲ ಕಣ್ಣಿನ ನೋಟದಿಂದ ಕಾಪಾಡಲಿ.

ಪ್ರಾಚೀನ ಪದ್ಯ :– ಕ್ರಿ.ಶ. 1910 ರಲ್ಲಿ ಒಮ್ಮೆ ಮದರಾಸ್ ನಗರದಲ್ಲಿ ಆಚಾರ್ಯ ವಾಸಿಷ್ಠರು ಪುರುಷ ಪ್ರಯತ್ನದ ಪ್ರಾಮುಖ್ಯತೆಯನ್ನು ಪ್ರತಿಪಾದಿಸುತ್ತಿದ್ದರು.

"ಬುದ್ಧಿಃ ಕರ್ಮಾನುಸಾರಿಣೀ" ಎಂಬ ವಚನ ಬುದ್ಧಿ ಹೀನರಿಗೆ–ಆಗು–ಹೋಗುಗಳ ಭವಿಷ್ಯ ಅವಲಂಬಿಸುವವರಿಗೇ ಹೊರತು ಶ್ರೇಯಸ್ಸನ್ನು ಸಂಪಾದಿಸಬೇಕೆನ್ನುವವ

ರಿಗೆ ಅಲ್ಲ. "ಕರ್ಮಬುದ್ಧ್ಯನುಸಾರಿ ಪ್ರೈ" ಕರ್ಮವು ಬುದ್ಧಿಯನ್ನನುಸರಿಸುವುದೂ ಇದೆ. ಎಂದು ಪ್ರತಿಪಾದಿಸುವ ಸಂದರ್ಭದಲ್ಲಿ ಆಚಾರ್ಯರು ಪ್ರಸಂಗವಶಾತ್ ಒಳ್ಳೆಯನಡವಳಿಕೆಯ ಗೃಹಸ್ಥಾಶ್ರಮವನ್ನು ಪ್ರಶಂಸಿಸಿದರು. ತಮ್ಮ ಅಭಿಪ್ರಾಯಕ್ಕೆ ಪುಷ್ಟಿ ನೀಡುವ ಈ ಮುಂದೆ ಕಂಡ ಪ್ರಾಚೀನ ಪದ್ಯವೊಂದನ್ನು ಉದಾಹರಿಸಿದರು:-

ರಾಜಪುತ್ರ ಚಿರಂಜೀವ ಮಾ ಜೀವ ಮುನಿಪುತ್ರಕ ।
ಜೀವ ವಾ ಮರ ವಾ ಸಾಧೋ ವ್ಯಾಧ ಮಾ ಜೀವ ಮಾ ಮರ ॥

ಲೋಕಹಿತೈಷಿಯೂ ಧರ್ಮದ ಮರ್ಮವನ್ನು ಬಲ್ಲವನೂ ಆದ ವಿದ್ವಾಂಸನೊಬ್ಬ ಇಹ-ಪರ ಶುಭದಾಯಕ ಆಶೀರ್ವಚನವನ್ನು ಜನರಿಗಾಗಿ ಈ ಪದ್ಯದ ಮೂಲಕ ಬಿತ್ತರಿಸಿದ್ದಾನೆ. ಇದು ತುಂಬಾ ಸ್ವಾರಸ್ಯಕರವಾಗಿದೆ.

''ರಾಜಪುತ್ರ ಚಿರಂಜೀವ" ರಾಜನಾದದನಿಗೆ ಬದುಕಿನ ಕೊನೆಯ ಕ್ಷಣದ ವರೆಗೂ ಸುಖ-ಭೋಗಗಳ ಅವಕಾಶ ಇದ್ದೇಇರುತ್ತದೆ. ಆದರೆ ಸತ್ತ ನಂತರ ದುರ್ಗತಿ ಕಟ್ಟಿಟ್ಟದ್ದು ; ಏಕೆಂದರೆ ಪ್ರಜೆಗಳು ಆಚರಿಸಿದ ಪಾಪ ಕಾರ್ಯಗಳೆಲ್ಲದರ ಫಲವಾದ ನರಕ ದುಃಖಕ್ಕೆ ರಾಜನೇ ಹೊಣೆಯಾಗುತ್ತಾನೆ. ಅಂದರೆ ಸತ್ತು ನರಕ ದುಃಖದಲ್ಲಿ ನರಳುವುದಕ್ಕಿಂತ ಆದಷ್ಟು ಕಾಲ ಬದುಕಿ ಸುಖ ಪಡುವುದೇ ರಾಜಪುತ್ರನಿಗೆ ಒಳ್ಳೆಯದು ! ಈ ಕಾರಣಕ್ಕಾಗಿಯೇ" "ರಾಜಪುತ್ರ ಚಿರಂಜೀವ ಎಂಬ ಆಶೀರ್ವಚನ. (ರಾಜಪುತ್ರನೇ ! ನೀನು ಚಿರಂಜೀವಿಯಾಗು.)

''ಮಾ ಜೀವ ಮುನಿಪುತ್ರಕ" ನೂರಾರು ವ್ರತ-ನೇಮಗಳನ್ನು ಆಚರಿಸುತ್ತ ದೇಹದಂಡನೆಯಿಂದಲೇ ಬದುಕಬೇಕಾದುದು ಋಷಿ ಪುತ್ರನಿಗೆ ಅನಿವಾರ್ಯ. ಆದರೆ ಬದುಕಿರುವಾಗ ಅವನು ಆಚರಿಸುತ್ತಿರುವ ಪುಣ್ಯಕರ್ಮಗಳ ಫಲವಾಗಿ ಮರಣದ ನಂತರ ಆತನಿಗೆ ಸ್ವರ್ಗ ಸುಖ ಲಭಿಸುವುದು ನಿಶ್ಚಿತ. ಆದ್ದರಿಂದ ಅವನು ಬದುಕಿ ಕಷ್ಟ ಅನುಭವಿಸುವುದಕ್ಕಿಂತಲೂ ಸತ್ತು ಸ್ವರ್ಗಸುಖ ಪಡೆಯುವುದು ಮೇಲು, ಎಂಬುದಕ್ಕಾಗಿಯೇ "ಮಾ ಜೀವ ಮುನಿಪುತ್ರಕ" ಋಷಿಕುಮಾರನೇ ನೀನು ಬದುಕಿರಬೇಡ ಎಂಬ ಆಶಂಸನೆ.

"ಜೀವ ವಾ ಮರ ವಾ ಸಾಧೋ" ಸದಾಚಾರವುಳ್ಳವನು ಸಾಧು. ಲೋಕಹಿತವನ್ನಾಶಿಸುವ ಸಜ್ಜನನಾದ ಗೃಹಸ್ಥನಿಗೆ ಈ ಲೋಕದ ಬದುಕೂ ಸುಖಕರವಾಗಿರುತ್ತದೆ. ಮರಣಾನಂತರವೂ ಸದಾಚಾರದ ಫಲರೂಪವಾಗಿ ಸದ್ಗತಿಯೇ

ದೊರೆಯುತ್ತದೆ. ಹೀಗೆ ಇಹ–ಪರಗಳೆರಡರಲ್ಲಿಯೂ ಸಾಧುಗೃಹಸ್ಥನು ಸುಖಿ ಪಡೆಯಬಲ್ಲವನಾಗುತ್ತಾನೆ ಎಂಬ ಕಾರಣದಿಂದ ಅವನಿಗೆ "ಜೀವ ವಾ ಮರ ವಾ ಸಾಧೋ" ನೀನು ಬದುಕಿಯಾದರೂ ಇರು! ಮರಣವಾದರೂ ಹೊಂದು! ಎಂಬ ಆಶೀರ್ವಾದ.

"ವ್ಯಾಧ ಮಾ ಜೀವ ಮಾ ಮರ" ಬೇಟೆಯಿಂದ ಬದುಕುವವನೊಬ್ಬನಿಗೆ ಕಷ್ಟದ ಜೀವನ ಸದಾ ಇದ್ದದ್ದೇ. ಸತ್ತಮೇಲೆ ಕೂಡ ಅವನ ಜೀವಿತ ಕಾಲದ ಪಾಪಕರ್ಮದ ಫಲವಾಗಿ ದುಃಖ ಅನುಭವಿಸುವುದು ಅನಿವಾರ್ಯ. ಅವನು ಬದುಕಿದ್ದರೂ ಒಂದೇ. ಸತ್ತರೂ ಒಂದೇ. ಆ ಕಾರಣದಿಂದಲೇ "ವ್ಯಾಧ ಮಾ ಜೀವ ಮಾ ಮರ" ಎಲೈ ಬೇಡನೇ! ನೀನು ಬದುಕಲೂ ಬೇಡ! ಸಾಯಲೂ ಬೇಡ! ಎಂಬ ಆಶಂಸನೆ.

ರಸಪೂರ್ಣವೂ ಗಂಭೀರವೂ ಆದ ಈ ಪ್ರಾಚೀನ ಶ್ಲೋಕದ ಉದಾಹರಣೆಯ ಮೂಲಕ ಇಹ–ಪರಗಳೆರಡರಲ್ಲಿಯೂ ಸುಖವನ್ನುಂಟುಮಾಡುವ ಗೃಹಸ್ಥ ಜೀವನ ಉತ್ತಮವಾದುದೆಂಬ ಪ್ರತಿಪಾದನೆಯೊಡನೆ ಆಚಾರ್ಯ ವಾಸಿಷ್ಠ ಗಣಪತಿ ಮುನಿಗಳು ತಮ್ಮ ಪ್ರವಚನವನ್ನು ಸಂಪನ್ನಗೊಳಿಸಿದರು.

ಇಲ್ಲಿಗೆ ಮಹರ್ಷಿ ಶ್ರೀರಮಣ ಭಗವತ್ಪಾದಸೇವಕ ಶ್ರೀ ಭಗವಾನ್ ವಾಸಿಷ್ಠ ಗಣಪತಿ ಮುನಿಶ್ರೇಷ್ಠರ ಶಿಷ್ಯನೂ, ಪೂರ್ಣಯೋಗಾಚಾರ್ಯ ಶ್ರೀ ಅರವಿಂದ ಭಗವತ್ಪಾದ ಭಕ್ತನೂ, ಭಾರದ್ವಾಜಗೋತ್ರದ ವಿಶ್ವೇಶ್ವರರ ಮಗನೂ ಆದ ಕಪಾಲಿಯಿಂದ ರಚಿಸಲ್ಪಟ್ಟ "ವಾಸಿಷ್ಠ ವೈಭವಂ" ಗ್ರಂಥದ ಪ್ರಥಮ ಭಾಗದ ಕನ್ನಡ ಅನುವಾದ ಪೂರ್ಣಗೊಂಡಿದೆ. ಅನುವಾದಕ :– ಆಂಗೀರಸ ಗೋತ್ರದ ಬೆಟ್ಟವಳ್ಳಿ ಬೆಳ್ಳಭಟ್ಟರ ಮಗ ಹರಿಹರಪುರ ಬಿ. ಸುಬ್ರಹ್ಮಣ್ಯಂ.

ವಾಸಿಷ್ಠ ವೈಭವಂ

ಉತ್ತರ ಭಾಗ

ಪ್ರಕರಣ–1

ಸಂಘ-ಸಂಸ್ಥೆ–ರಾಜಕೀಯರಂಗ

<u>ಸತಾಂ ಕೇನಾಪಿ ಕಾರ್ಯೇಣ ಲೋಕಸ್ಯಾರಾಧನಂ ವ್ರತಂ ॥</u>

(ಉತ್ತರ ರಾಮ ಚರಿತಂ)

(ಯಾವುದಾದರೊಂದು ಕೃತಿಯಿಂದ ಸಮಾಜ ಸೇವೆ ಮಾಡುವುದರಲ್ಲಿ ಸಜ್ಜನರಿಗೆ ಸಂಪೂರ್ಣ ನಿಷ್ಠೆ)

ಅರುಣಾಚಲದ ಅಮ್ರಗುಹೆಯಲ್ಲಿ ಮೊದಲು 1½ ವರ್ಷ ಗಣಪತಿ ಮುನಿಗಳು ದೃಢನಿಷ್ಠೆಯಿಂದ ತಪಸ್ಸನ್ನು ಆಚರಿಸಿದರು. ನಂತರ ಅಲ್ಲಿಗೆ ಬಂದ ಅವರ ಕುಟುಂಬ ವರ್ಗದವರಿಗೆ ಅರುಣಾಚಲದ ಕೆಳಗೆ ಸಮೀಪದಲ್ಲಿ ಪ್ರತ್ಯೇಕ ವಸತಿಗೆ ವ್ಯವಸ್ಥೆ ಮಾಡಿದ ವಾಸಿಷ್ಠ ಮುನಿಗಳು ಅಮ್ರಗುಹೆಯಲ್ಲಿಯೇ ತಮ್ಮ ವಾಸವನ್ನು ಮುಂದುವರಿಸಿದರು. ಇದೇ ಸಂದರ್ಭದಲ್ಲಿ ಅರುಣಾಚಲ ಸ್ಥಳದವರೇ ಆಗಿ ಅಲ್ಲಿ ಆಂಗ್ಲ ಶಾಲೆಯ ಅಧ್ಯಾಪಕ ವೃತ್ತಿಯಲ್ಲಿದ್ದ ಸುಂದರಕೃಷ್ಣ ವಾಸಿಷ್ಠ (ಟಿ.ಕೆ. ಸುಂದರೇಶ್)ರೆಂಬವರು ಗಣಪತಿ ಮುನಿಗಳ ಶಿಷ್ಯರಾಗಿ ಅವರ ಸಂಗಡವೇ ಇರಲಾರಂಭಿಸಿದರು. ಇವರ ಕುಟುಂಬವರ್ಗವೇ ಮಹರ್ಷಿ ರಮಣರ ಕೃಪೆಗೆ ಪಾತ್ರವಾಗಿತ್ತು.

ಆ ಕಾಲಕ್ಕೆ ಭಾರತದ ಸುಪ್ರಸಿದ್ಧ ಮಹಾಪುರುಷರ ಭಕ್ತರಲ್ಲೊಬ್ಬರಾಗಿದ್ದ ವೈಲಮೂರು ಶ್ರೀನಿವಾಸ ಅಯ್ಯರ್ ಎಂಬುವರು ಇದೇ ಸಮಯದಲ್ಲಿ ವಾಸಿಷ್ಠ ಮುನಿಗಳನ್ನು ಸಂದರ್ಶಿಸಿ ಅವರಿಂದ ಮಂತ್ರೋಪದೇಶ ಪಡೆದರು. ಹೊಸ ಶಿಷ್ಯರಲ್ಲಿ ಪ್ರಮುಖರೂ - ಮಿತಭಾಷಿಗಳೂ ಆಗಿದ್ದ ಇವರಿಗೆ ಗಣಪತಿ ಮುನಿಗಳಲ್ಲಿ ಅನನ್ಯ ಭಕ್ತಿ - ಗೌರವ ಭಾವನೆಗಳಿದ್ದವು.

ರುಧಿರೋದ್ಗಾರಿ ಸಂವತ್ಸರದ ಕೊನೆಯಲ್ಲಿ ತಾವಾಗಿಯೇ ಅರುಣಾಚಲದಿಂದ ಹೊರಟ ವಾಸಿಷ್ಠ ಮುನಿಗಳು "ಕಾಕಿನಾಡ"ಕ್ಕೆ ಹೋಗುವ ಮಾರ್ಗದಲ್ಲಿ ಮದರಾಸಿಗೆ ಬಂದರು. ಅಲ್ಲಿ ವ್ಯವಸ್ಥೆಯಾಗಿದ್ದ ಅಖಿಲ ಭಾರತ ಕಾಂಗ್ರೆಸ್ ಅಧಿ

ವೇಶನದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರ ಆಹ್ವಾನದ ಮೇರೆಗೆ ಭಾಗವಹಿಸಿದರು. ನಂತರ ಅದೇ ಸ್ಥಳದಲ್ಲಿ ಕೀರ್ತಿ ಶೇಷ ನ್ಯಾಯವಾದಿ ಸದಾಶಿವ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿದ್ದ ಸಭೆಯಲ್ಲಿ "ಮಹಿಳೆಯರಿಗೆ ಉಪನಯನ ಸಂಸ್ಕಾರ ಮತ್ತು ವೇದ-ಶಾಸ್ತ್ರಗಳ ಅಧ್ಯಯನದ ಅಧಿಕಾರ ಶಾಸ್ತ್ರ ಸಮ್ಮತ" ಎಂಬ ವಿಷಯವಾಗಿ ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ವಾಸಿಷ್ಠಮುನಿಗಳ ಪ್ರವಚನ ನಡೆಯಿತು. ಸರಿ ! ಅವರು ತಮ್ಮ ತಪಸ್ಸಿನ ಆವರಣದಿಂದ ಹೊರಬರಲು ಇದೇ ನಾಂದಿಯಾಯಿತು. ಹಾಗೆಯೇ ಪೂರ್ವ ಗೋದಾವರೀ ಮಂಡಲದ ಅಸ್ಪೃಶ್ಯತಾ ನಿವಾರಣಾ ಸಂಘದ ಅಧಿವೇಶನದ ಅಧ್ಯಕ್ಷತೆಯನ್ನು ವಾಸಿಷ್ಠಮುನಿಗಳೇ ವಹಿಸಿದರು. ಇವರ ಅಧ್ಯಕ್ಷ ಭಾಷಣ ಆಂಧ್ರದ ನಾಯಕರೆಲ್ಲರಿಗೂ ತುಂಬಾ ಪ್ರಿಯವೆನಿವೆನಿಸಿತು. ಶಾಸ್ತ್ರೀಯ ಯುಕ್ತಿ ಯುಕ್ತವಾದ ಇವರ ಗಂಭೀರ ಪ್ರವಚನಗಳನ್ನು ಕೇಳಿದ ಮೇಲೆ ಮೊದಲು ಅಸ್ಪೃಶ್ಯತೆಯನ್ನು ಸಮರ್ಥಿಸಿದ ಆಚಾರ ನಿಷ್ಠರೆಂದು ಕೊಳ್ಳುವ ವಿದ್ವಾಂಸರಲ್ಲಿಯೇ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು. ಆ ಸಭೆಯಲ್ಲಿ ಭಾಗವಹಿಸಿದ್ದ ಪಂಡಿತರಲ್ಲಿ ಯಾರೊಬ್ಬರೂ ವಾಸಿಷ್ಠಮುನಿಗಳ ಅಭಿಪ್ರಾಯಕ್ಕೆ ವಿರೋಧ ವ್ಯಕ್ತಪಡಿಸಲಿಲ್ಲ. ಬಹುಕಾಲದಿಂದ ನಡೆದುಬಂದ ಆಚರಣೆ ಸರಿಯಲ್ಲವೆಂದು ಒಪ್ಪಿಕೊಳ್ಳಲು ಸಾಧ್ಯವಾಗದ ಮಾನಸಿಕ ಸ್ಥಿತಿ. ಆದರೆ ಆ ಸಭೆಯಲ್ಲಿ ಎದ್ದು ನಿಂತು ವಾಸಿಷ್ಠಮುನಿಗಳನ್ನು ಎದುರಿಸಲು ಇಚ್ಛೆಯಿಲ್ಲದೆಯೋ ಅಥವಾ ಹಾಗೆ ಮಾಡುವ ಸಾಮರ್ಥ್ಯವಿಲ್ಲದೆಯೋ ಅಂತೂ ತಟಸ್ಥರಾಗಿ ಇದ್ದುಬಿಟ್ಟರು.

ಈ ಸಭೆಯನ್ನು ಮುಗಿಸಿ ವಾಸಿಷ್ಠಮುನಿಗಳು ವಾಪಸು ಪ್ರಯಾಣ ಮಾಡುವಾಗ ಅನೇಕ ಸ್ಥಳಗಳಲ್ಲಿ ಇದೇ ವಿಷಯದ ಮೇಲೆ ಪ್ರವಚನ ನೀಡಲು-ವಾದ ನಡೆಸಲು ಆಹ್ವಾನಿಸಲ್ಪಟ್ಟರು. ಆ ಸಭೆಗಳಲ್ಲಿ ಪಂಚಮ-ಚಂಡಾಲ ಮುಂತಾದ ಅಸ್ಪೃಶ್ಯ ಜಾತಿಗಳನ್ನು ಕುರಿತು ಮನಮುಟ್ಟುವ ಶೈಲಿಯಲ್ಲಿ ತಮ್ಮ ಪ್ರತಿಪಾದನೆಗಳನ್ನು ಸ್ಪಷ್ಟವಾಗಿ ವ್ಯಕ್ತ ಪಡಿಸಿ ಅರುಣಾ ಚಲಕ್ಕೆ ಹಿಂದಿರುಗಿದ ವಾಸಿಷ್ಠಮುನಿಗಳು ತಮ್ಮ ಗುಹಾವಾಸವನ್ನು ಮುಂದುವರಿಸಿದರು. ಅಲ್ಲಿಂದ ಮುಂದೆ ಈ "ಅಸ್ಪೃಶ್ಯತೆ ಶಾಸ್ತ್ರೀಯವೇ ?" ಎಂಬ ವಿಷಯವಾಗಿ ಪತ್ರಿಕಾ ಹೇಳಿಕೆಗಳ ಮೂಲಕ ಖಂಡನೆ-ಮಂಡನೆಗಳು ಕೆಲವುಕಾಲ ನಡೆಯುತ್ತಿದ್ದುದುಂಟು.

ಅಸ್ಪೃಶ್ಯತೆ ಶಾಸ್ತ್ರ ಸಮ್ಮತವೆಂದೇ ಸಾಧಿಸುತ್ತಿದ್ದ ಪೂರ್ವಾಚಾರ ಪ್ರಿಯರ ಪ್ರತಿನಿಧಿಯಾಗಿ ಕೀರ್ತಿಶೇಷ ಪುಲ್ಲಾದಿ ರಾಮಕೃಷ್ಣ ಚಯನರೆಂಬ ಮಹಾಶಯರೂ ವಾಸಿಷ್ಠಮುನಿಗಳ ಧೋರಣೆ (ಅಸ್ಪೃಶ್ಯತೆ ಶಾಸ್ತ್ರ ಸಮ್ಮತವಲ್ಲ ಎಂಬ ಪ್ರತಿಪಾದನೆ

ಯನ್ನು ಶಾಸ್ತ್ರೀಯವಾಗಿ ಖಂಡಿಸಿದಾಗ ಇವರು ಕೂಡ ಶಾಸ್ತ್ರೀಯ ಪರಿಪಾಠಿಯಿಂದಲೇ ಅವುಗಳಿಗೆ ಸೂಕ್ತ ಸಮಾಧಾನ ನೀಡಿ ತಮ್ಮವಾದವನ್ನು ಸಮರ್ಥಿಸಿಕೊಂಡರೆಂಬುದನ್ನು ವಾಸಿಷ್ಠಮುನಿಗಳ ತೆಲುಗು ಬರಹಗಳಲ್ಲಿ ಕಾಣಬಹುದು. ಪಂಚಮ-ಚಂಡಾಲ ಮೀಮಾಂಸೆ" ಎಂಬ ಈ ಪ್ರಕರಣದ ಕೆಲವು ಭಾಗವನ್ನು ಕನ್ನಡ ಅನುವಾದ ಸಹಿತ ಆಚಾರ್ಯ ವಾಸಿಷ್ಠರ ಮತ್ತು-ಕಪಾಲಿ ಶಾಸ್ತ್ರಿಗಳ ನಿರ್ದುಷ್ಟ-ತರ್ಕಬದ್ಧ ನಿರೂಪಣಾ ಶೈಲಿಯ ಸೊಗಸುಗಾರಿಕೆಯ ಮಾದರಿಗಾಗಿ ಆಯ್ದು ಈಗ್ರಂಥದ ಕೊನೆಗೆ ಅನುಬಂಧದಲ್ಲಿ ಕೊಡಲಾಗಿದೆ.

ಮುಂದೆ ಆಂಧ್ರದ ರಾಷ್ಟ್ರೀಯ ನಾಯಕರು ವಾಸಿಷ್ಠಮುನಿಗಳ ಅಸಾಧಾರಣ ವಾಕ್ಚಾತುರ್ಯ, ಜನಸಮೂಹವನ್ನು ಆಕರ್ಷಿಸಿ-ತುಷ್ಟಿಗೊಳಿಸಬಲ್ಲ ಪ್ರವಚನ ವೈಖರಿ, ಅತ್ಯುತ್ಕೃಷ್ಟ ಪ್ರತಿಭಾ ವಿಲಾಸ, ನಿಷ್ಕಳಂಕ ನಡೆ-ನುಡಿ, ಶುಭ್ರ ಸರಳ ಮನಸ್ಸು, ಶ್ರೇಷ್ಠಮಟ್ಟದ ಅನುಭಾವ, ಅಪ್ರತಿಮ ಪಾಂಡಿತ್ಯ ಇವನ್ನೆಲ್ಲಾ ನೋಡಿ ಭಾರತಾಂಬೆಯ ಸುಪುತ್ರರಲ್ಲಿ ರತ್ನಪ್ರಾಯರಾಗಿರುವ ಇವರೇ ಆಂಧ್ರದ ಮುಖ್ಯ ನೇತಾರರಾಗುವುದು ಉಚಿತ ಎಂಬ ನಿರ್ಧಾರಕ್ಕೆ ಬಂದರು. ವಾಸಿಷ್ಠಮುನಿಗಳು ರಾಜಕೀಯ ರಂಗವನ್ನು ಪ್ರವೇಶಿಸಬೇಕೆಂಬ ಆಹ್ವಾನವನ್ನೂ ನೀಡಲಾಯಿತು. ಆದರೆ ರಾಜಕೀಯವೇ ಮೊದಲಾದ ಲೌಕಿಕ ವ್ಯವಹಾರಗಳಲ್ಲಿ ಮನಸ್ಸಿಲ್ಲದ ವಾಸಿಷ್ಠರು ಆ ಮುಖಂಡರುಗಳ ಕೋರಿಕೆಯನ್ನು ಒಪ್ಪಿಕೊಳ್ಳಲಿಲ್ಲ. ಅದಕ್ಕೆ ಕಾರಣವೂ ಇದೆ:— ಬಾಲ್ಯದಿಂದಲೂ ಇವರು ಸಮಗ್ರ ಭಾರತದ ಕ್ಷೇಮದ ಕುರಿತು ಯೋಚಿಸುತ್ತಿದ್ದರಾದರೂ ಅದರ ಸಾಧನೆಯ ಮಾರ್ಗದ ಬಗ್ಗೆ ಅವರ ನಿರ್ಧಾರ ಬೇರೆಯೇ ಇತ್ತು. "ಸನಾತನ ಋಷಿ-ಮುನಿಗಳ ಕಾಲದ ಶುದ್ಧ-ಸಾತ್ವಿಕ ಧರ್ಮವು ಪುನಃ ಆಚರಣೆಗೆ ಬರಬೇಕು. ವೇದ ರಹಸ್ಯ—ವೇದಗಳ ಮಂತ್ರಗಳಿಗಿರುವ ಶಕ್ತಿ ಮತ್ತು ದೇವತಾ ತತ್ತ್ವಗಳನ್ನು ಪ್ರಚಾರ ಪಡಿಸಬೇಕು. ಇವುಗಳನ್ನು ಸಾಧಿಸಲು ತಪಸ್ಸೇ ಏಕೈಕ ಅವಲಂಬನೆ. ಈಶ್ವರಾನುಗ್ರಹದಿಂದ ಮಾತ್ರ ಈ ರಾಷ್ಟ್ರದ ಅಭ್ಯುದಯ ಸಾಧಿಸಲು ಸಾಧ್ಯವೆ ಹೊರತು ಇಂತಹ ಭಾಷಣಗಳ ಮೂಲಕ ಅಲ್ಲ" ಎಂಬುದರಲ್ಲಿ ಅವರಿಗೆ ದೃಢವಾದ ನಂಬಿಕೆ. ಆದ್ದರಿಂದಲೇ ಇಲ್ಲಿಯತನಕ ಅವರು ತಮ್ಮ ನಿರ್ಧಾರದಿಂದ ವಿಚಲಿತರಾಗದೆ ತಕ್ಕಕಾಲವನ್ನು ನಿರೀಕ್ಷಿಸುತ್ತಿದ್ದರು. ಅಲ್ಲದೆ ಮುಖ್ಯವಾಗಿ ಈಶ್ವರ ಪ್ರೇರಣೆಯಾಗದೆ ತಾವು ಇಂತಹ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಳ್ಳಬಾರದೆಂದು ನಿಶ್ಚಯಿಸಿಕೊಂಡಿದ್ದ ಅವರು ತಪಸ್ಸು—ಗ್ರಂಥರಚನೆ—ವೇದಶಾಸ್ತ್ರ ವಿಚಾರಗಳಲ್ಲಿ ನಿರತರಾಗಿ ಇದ್ದರು.

ಆದರೆ ಅವರು ತಮ್ಮ ವಸತಿಯನ್ನು ಆಂಧ್ರ ದೇಶದಿಂದ ಅರುಣಾಚಲಕ್ಕೆ ಬದಲಿಸಿದಾಗ ಅನಿವಾರ್ಯವಾಗಿ ರಾಜಕೀಯ ಭಾಷಣಗಳು ಅವರಿಗೆ ಗಂಟು

ಬಿದ್ದವು. ತಮಿಳು ರಾಷ್ಟ್ರೀಯ ನಾಯಕರು-ಅದರಲ್ಲಿಯೂ ಮುಖ್ಯವಾಗಿ ಇವರ ವಾಸಸ್ಥಳದ ಮುಖಂಡರು "ರಾಷ್ಟ್ರೀಯ ಕಾಂಗ್ರೆಸ್ ಸಭೆಯ ಅಧ್ಯಕ್ಷರು. ನೀವಾಗ ಬೇಕು; ಕೆಲಸಗಳನ್ನೆಲ್ಲಾ ನಾವೇ ನಿರ್ವಹಿಸುತ್ತೇವೆ. ನಿಮ್ಮ ಹೆಸರು ಮಾತ್ರ ಇದ್ದರೆ ಸಾಕು" ಎಂದು ಇವರಲ್ಲಿ ಬಹು ಭಕ್ತಿಯಿಂದ ಕೇಳಿಕೊಂಡಾಗ ತುಂಬಾ ದಾಕ್ಷಿಣ್ಯ ಸ್ವಭಾವದ ಇವರು ಹೇಗೋ ಒಪ್ಪಿಬಿಟ್ಟರು. ಸರಿ ! ಮುಂದೆ 3-4ವರ್ಷ ಸಂಘ-ಸಂಸ್ಥೆ ರಾಜಕೀಯಗಳಲ್ಲಿ ಅವರು ನಿರತರಾಗಿರಲು ಇದೇ ನಾಂದಿ ಯಾಯಿತು. ಅದರಂತೆ ಅದೇ ರಕ್ತಾಕ್ಷಿ ಸಂವತ್ಸರದಲ್ಲಿ ನಡೆದ ತಮಿಳುನಾಡು ರಾಷ್ಟ್ರೀಯ ಸಮ್ಮೇಳನದ ಸ್ವಾಗತ ಸಮಿತಿಗೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಇವರ ವೈಶಿಷ್ಟ್ಯಪೂರ್ಣ ಮಾತುಗಾರಿಕೆ- ವಿಷಯ ನಿರೂಪಣಾ ಚಾತುರ್ಯಗಳನ್ನು ಅಂದಿನ ವೃತ್ತ ಪತ್ರಿಕೆಗಳು ಮುಕ್ತವಾಗಿ ಪ್ರಶಂಸಿಸಿದವು. ತಮ್ಮ ಪಕ್ಷದವರಾಗಿ ಇವರು ಅಖಿಲ ಭಾರತ ಕಾಂಗ್ರೆಸ್ ಸದಸ್ಯ ಸ್ಥಾನ ಪಡೆಯ ಬೇಕೆಂದು ನಿರ್ಧರಿಸಿದ ಜನ ಅಧಿಕೃತವಾಗಿ ಇವರನ್ನು ಆಯ್ಕೆಮಾಡಿದರು.

ಅದೇ ವರ್ಷ ಕರ್ನಾಟಕದ ಬೆಳಗಾವಿಯಲ್ಲಿ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ನಡೆಯಿತು. ಮಹಾತ್ಮಾ ಗಾಂಧೀಜಿಯವರೇ ಈ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ವಾಸಿಷ್ಠಮುನಿಗಳು ಈ ಸಮ್ಮೇಳ ನದಲ್ಲಿ ಭಾಗವಹಿಸಿದರು. ಸಮ್ಮೇಳನದಲ್ಲಿ ಮಂಡಿಸಲ್ಪಡಬೇಕಾದನಿರ್ಣಯ ಗಳನ್ನು ವಿಷಯ ನಿರೂಪಣಾ ಸಮಿತಿಯಲ್ಲಿ ಚರ್ಚಿಸಿ ಸಿದ್ಧಪಡಿಸುವುದು ವಾಡಿಕೆ. ಈ ಸಂದರ್ಭದಲ್ಲಿ ಹೊಸಬರಾದ ವಾಸಿಷ್ಠಮುನಿಗಳ ವಿಚಾರ ಸರಣಿಯನ್ನು ಆಲಿಸಿದವರು ಇವರ ಬಗ್ಗೆ ತುಂಬಾ ಸಂತಸ-ಗೌರವಗಳನ್ನು ವ್ಯಕ್ತ ಪಡಿಸಿದರು. ನಂತರ ಸಂಪೂರ್ಣಾಧಿವೇಶನ ನಡೆದಾಗ ಇವರೇ ''ಅಸ್ಪೃಶ್ಯತೆ ತೊಡೆದು ಹಾಕುವುದು ಶಾಸ್ತ್ರೀಯ ಪರಂಪರೆಗೆ ವಿರೋಧವಾದುದಲ್ಲ ! (ಅಸ್ಪೃ ಶ್ಯತಾನಿವೃತ್ತಿರ್ನ ಅಶಾಸ್ತ್ರೀಯಾ) ಎಂಬುದಾಗಿ ಸಂಸ್ಕೃತಭಾಷೆಯಲ್ಲಿ ನೀಡಿದ ಪ್ರವ ಚನವಂತೂ ಅಲ್ಲಿ ಸೇರಿದ್ದ ಪಂಡಿತ ಮದನ ಮೋಹನ ಮಾಳವೀಯರೇ ಮೊದ ಲಾದ ಗಣ್ಯ ಪುರುಷರು ಮತ್ತು ನಾಯಕರುಗಳಿಗೆ ಅತ್ಯಂತ ಸಂತೋಷ ಉಂಟ ಮಾಡಿತು. ಅವರೆಲ್ಲರೂ ವಾಸಿಷ್ಠಮುನಿಗಳನ್ನು ಭೇಟಿ ಮಾಡಿ ತಮ್ಮ ಅಭಿನಂದ ನೆಗಳನ್ನು ಸಲ್ಲಿಸಿದರು. ಕಾಂಗ್ರೆಸ್ ಅಧಿವೇಶನವೊಂದರಲ್ಲಿ ಸಂಸ್ಕೃತ ಭಾಷೆಯಲ್ಲಿ ನಡೆದ ಮೊಟ್ಟ ಮೊದಲ ಪ್ರವಚನ ಇದು! ಇದುವರೆಗೆ ಯಾವ ಸಂಸ್ಕೃತದಲ್ಲಿ ಉಪ ನ್ಯಾಸನಡೆದಿಲ್ಲ. ಈಗಿನ ಸ್ಥಿತಿಯಲ್ಲಿ ನೋಡಿದರೆ ವಾಸಿಷ್ಠಮುನಿಗಳಿಂದ ನಡೆದ ಪ್ರವ ಚನವೇ ಸಾರ್ವಕಾಲಿಕ ದಾಖಲೆಯಾಗಿ ಉಳಿಯುವಂತೆ ತೋರುತ್ತದೆ.

ಈ ಕಾಂಗ್ರೆಸ್ ಅಧಿವೇಶನ ಮುಗಿದನಂತರ ವಾಸಿಷ್ಠ ಮುನಿಗಳು ಶಿಷ್ಯ ದೈವ ರಾತರ ಬೇಡಿಕೆಯಂತೆ ಗೋಕರ್ಣಕ್ಕೆ ತೆರಳಿದರು.

ಉತ್ತರ ಭಾಗ.

1ನೇ ಪ್ರಕರಣದ ಅನುಬಂಧ

ಭಾರಧ್ವಾಜಾಶ್ರಮ – ಗುರುಕುಲ

ಕಾಶ್ಮೀರಜಸ್ಯ ಕಟುತಾಪಿ ನಿತಾಂತರಮ್ಯಾ

(ಕಾಶ್ಮೀರಜನ್ಯ ವಸ್ತುವಿನ ತೀಕ್ಷ್ಣತೆ ಕೂಡಾ ತುಂಬಾ ಮನಮೋಹಕವಾಗಿರುತ್ತದೆ.)

ತಮಿಳುನಾಡಿನ "ಶರ್ಮದೇವೀ" ಎಂಬ ಸ್ಥಳದಲ್ಲಿ ಕೀರ್ತಿಶೇಷ ಸುಬ್ರಹ್ಮಣ್ಯ ಅಯ್ಯರ್ ಮಹೋದಯರು ''ಭಾರದ್ವಾಜಾಶ್ರಮ'' ಗುರುಕುಲವನ್ನು ಸ್ಥಾಪಿಸಿದರು. ಬೇರೆ-ಬೇರೆ ಜಾತಿಯ-ಮತಗಳ ಮಕ್ಕಳನ್ನು ಒಂದೇ ಕಡೆ ಕಲೆಹಾಕಿ ಅವರಿಗೆ ವಿದ್ಯೆ-ಜೀವನಕ್ಕೆ ಆಧಾರವಾಗಬಲ್ಲ ವೃತ್ತಿ ಶಿಕ್ಷಣ ನೀಡುವುದು, ಎಲ್ಲರೂ ಸಮಭಾವದಿಂದ ಆಟ-ಪಾಠ-ಊಟಗಳಲ್ಲಿ ತೊಡಗಿ ದೇಶಾಭಿಮಾನ ಬೆಳೆಸಿಕೊಳ್ಳಲು ಅಗತ್ಯವಾದ ಪದ್ಧತಿಗಳನ್ನು ಬಾಲ್ಯದಲ್ಲಿಯೇ ಅಭ್ಯಾಸ ಮಾಡಿಸುವುದು, ಇವು ಶ್ರೀಅಯ್ಯರ್‌ರವರ ಉದ್ದೇಶ. ಈ ಗುರುಕುಲಕ್ಕೆ ಅವರೇ ಆಚಾರ್ಯರು ಮತ್ತು ಸಂಚಾಲಕರು. ಇಂತಹ ಸಂಸ್ಥೆಗಳ ನಿರ್ವಹಣೆಗೆ ಸಾಕಷ್ಟು ದ್ರವ್ಯ-ಮಹಾಜನರ ಬೆಂಬಲ ಸಂಪಾದಿಸಿಕೊಂಡ ನಂತರವೇ ಅವುಗಳನ್ನು ಪ್ರಾರಂಭಿಸ ಬೇಕಾಗುತ್ತದೆ. ಆದರೆ ಧೀರಸ್ವಭಾವದ ಅಯ್ಯರ್‌ವರು ಯಾವುದರ ಬಗ್ಗೆಯೂ ಚಿಂತೆಹಚ್ಚಿಕೊಳ್ಳದೆ ಗುರುಕುಲವನ್ನು ಪ್ರಾರಂಭಿಸಿಬಿಟ್ಟರು. ಅದಿನ್ನೂ ಶೈಶವಾವಸ್ಥೆಯಲ್ಲಿದ್ದಾಗಲೇ ಕೆಲವು ಬ್ರಾಹ್ಮಣೇತರ ಮುಖಂಡರು ಅಯ್ಯರ್‌ರವರ ಸದುದ್ದೇಶಕ್ಕೆ ತಮ್ಮ ಬೆಂಬಲವನ್ನು ಪ್ರಕಟಿಸಿದರಾದರೂ ಕಾರ್ಯತಃ ಅವರಿಗೆ ಪ್ರತಿ ಪಕ್ಷವಾಗಿ ನಿಂತರು. ''ಗುರುಕುಲ ನಿರ್ವಹಣೆಗೆ ನಿಯಮ-ನಿಬಂಧನೆ ರೂಪಿಸುವುದು ಅವಶ್ಯಕ. ಒಬ್ಬರ ಮೇಲೆಯೇ ಎಲ್ಲ ಅಧಿಕಾರ-ಜವಾಬ್ದಾರಿಗಳ ಭಾರ ಹೊರಿಸುವುದು ಸರಿಯಲ್ಲ'' ಎನ್ನುವ ಮೂಲಕ ತಮ್ಮ ಒಳ ವಿರೋಧವನ್ನು ವ್ಯಾವಹಾರಿಕರೀತಿಯಲ್ಲಿ ವ್ಯಕ್ತಪಡಿಸಿದರು. ಪ್ರತಿ ಪಕ್ಷದ ಮುಖಂಡರಿಗೆ ಒಳಗೊಳಗೇ ಅಸಂತೋಷವಿದ್ದುದಕ್ಕೆ ಕಾರಣಗಳು ಬಹಳ. ಇಲ್ಲಿ ಅವುಗಳನ್ನೆಲ್ಲಾ ವಿವರಿಸಬೇಕಾದ ಅಗತ್ಯವಿಲ್ಲ. ಅವರುಗಳ ಅಭಿಪ್ರಾಯ ಇಷ್ಟು :- ''ಬ್ರಾಹ್ಮಣ ಮತ್ತು ಇತರ ಜಾತಿಯ ವಿದ್ಯಾರ್ಥಿ ಬಾಲಕರಿಗೆ ಸಹ ಪಂಕ್ತಿಭೋಜನ ವಿಧಿಸುವುದರಿಂದ ಸ್ವಲ್ಪಮಟ್ಟಿಗೆ ಸಮಾನ ಭಾವನೆ ಉಂಟಾಗುವುದೇನೋ ನಿಜ. ಆದರೆ ಇಷ್ಟೇ ಸಾಲದು. ಅಡಿಗೆಯವನು ಬ್ರಾಹ್ಮಣೇತರನಾಗಬೇಕು. ಅದಲ್ಲದೆ ಬ್ರಾಹ್ಮಣನೇ ಅಡಿಗೆಯವನಾದರೆ ಬ್ರಾಹ್ಮಣ ಜಾತಿಯ ಶ್ರೇಷ್ಠತೆಯನ್ನು ಒಪ್ಪಿದಂತಾಗುತ್ತದೆ. ಬಾಲ್ಯದಿಂದಲೇ ಮಕ್ಕಳಲ್ಲಿ ಸಮಾನಭಾವನೆ ಬೆಳೆಸಬೇಕೆಂಬ ಉದ್ದೇಶಕ್ಕೆ ಇದು ವಿಪರ್ಯಾಸವೆನಿಸುತ್ತದೆ. ಹಾಗೆ ವೈಷಮ್ಯವನ್ನು ಬೋಧಿಸಲು ಈ

ರುಗುಕುಲದ ಅಗತ್ಯವೇನೂ ಇಲ್ಲ. ಈಗಿರುವ ಜಾತಿ ವ್ಯವಸ್ಥೆ–ಆಚರಣೆಗಳೇ ಭೇದ ಭಾವವನ್ನು ಬೆಳೆಸಲುಸಾಕು. ಇಲ್ಲಿಯೂ ಅದನ್ನೇ ಮಾಡುವುದರಿಂದ ಸಮಾಜ ದಲ್ಲಿ ಮೇಲು-ಕೀಳು ತಾರ ತಮ್ಯ ವ್ಯಾಪಕಗೊಂಡು ವಿಜೃಂಭಿಸುತ್ತದೆ. ಅಷ್ಟೇ! ''

ಇದಕ್ಕೆ ಪ್ರತಿಯಾಗಿ ಗುರುಕುಲಾಚಾರ್ಯ ಅಯ್ಯರ್‌ರವರ ಅಭಿಪ್ರಾಯ ಹೀಗಿತ್ತು :– "ಈ ಕಾಲದಲ್ಲಿ ಎಲ್ಲ ವರ್ಣಗಳ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ ಒಟ್ಟಿಗೆ ಕುಳಿತು ಭೋಜನ ಪಡೆಯುವಂತೆ ಮಾಡುವುದು ಕೂಡ ಕಷ್ಟಸಾಧ್ಯ. ಪೂರ್ವ ಸಂಪ್ರದಾಯ ನಿಷ್ಠರು–ಆದರಲ್ಲಿಯೂ ಈ ಪ್ರದೇಶದ ತಾಯಿ-ತಂದೆಗಳು ತಮ್ಮ ಮಕ್ಕಳು ಜಾತಿ ಕಟ್ಟುಗಳನ್ನು ಮೀರಿ ಒಟ್ಟಿಗೇ ಊಟ ಮಾಡುವುದನ್ನು ಕೂಡ ಒಪ್ಪಿಕೊಳ್ಳಲಾರರು. ಹೀಗಿರುವಾಗ ಬ್ರಾಹ್ಮಣೇತರನೇ ಅಡಿಗೆ ತಯಾರಿಸ ತಕ್ಕದ್ದೆಂಬ ನಿಯಮ ವಿಧಿಸಿದರೆ ಪಾಲಕರು ತಮ್ಮ ಮಕ್ಕಳನ್ನು ಈ ಗುರುಕುಲಕ್ಕೆ ಕಳಿಸದೆಯೇ ಇರಬಹುದು. ಆದ್ದರಿಂದ ಈಗ ಸಹಪಂಗ್ತಿ ಭೋಜನವು ಸಂಘಟನೆಯ ಮೊದಲ ಮೆಟ್ಟಿಲಾಗಿರಲಿ. ಇದರಲ್ಲಿ ನಾವು ಯಶಸ್ವಿಗಳಾದರೆ ಅಡಿಗೆ ಮನೆಯಲ್ಲಿ ಬ್ರಾಹ್ಮಣೇತರನನ್ನು ಇಡುವ ಬಗ್ಗೆ ಮುಂದುವರಿಯೋಣ "

ಹೀಗೆ ಅಭಿಪ್ರಾಯ ಭೇದ ತಲೆದೋರಿದಾಗ ಗುರಕುಲಾಚಾರ್ಯ ಅಯ್ಯರ್‌ರವರೂ;ಬ್ರಾಹ್ಮಣೇತರ ಮುಖಂಡರೂ ಈ ಸಮಸ್ಯೆಯ ಪರಿಹಾರಕ್ಕೆ ನ್ಯಾಯನಿಷ್ಠರಾದ ವಾಸಿಷ್ಠ ಗಣಪತಿಮುನಿಗಳು ಮಧ್ಯಸ್ಥಗಾರರಾಗಿ ಮಾರ್ಗದರ್ಶನ ನೀಡುವಂತೆ ಪ್ರಾರ್ಥಿಸಿಕೊಂಡರು. ಅದನ್ನು ಒಪ್ಪಿಕೊಂಡ ಗಣಪತಿಮುನಿಗಳು ಎರಡೂ ಪಕ್ಷಗಳವರ ಅಭಿಪ್ರಾಯಗಳಲ್ಲಿರುವ ಯುಕ್ತಾಯುಕ್ತ ವಿಷಯಗಳನ್ನು ವಿವೇಚಿಸಿ ಹೀಗೆ ನಿರ್ಧರಿಸಿದರು;– "ಮದುವೆ ಆದಹೊರತು ಹುಚ್ಚು ಬಿಡದು! ಹುಚ್ಚು ಬಿಟ್ಟಲ್ಲದೆ ಮದುವೆ ಆಗದು ! ಎಂಬ ಸೂಕ್ತಿಗೆ ಇದೊಂದು ಉತ್ತಮ ಉದಾಹರಣೆಯಂತಿದೆ. ಬ್ರಾಹ್ಮಣೇತರನನ್ನು ಅಡಿಗೆಗೆ ಗೊತ್ತುಮಾಡಿದಾಗ ಭೇದಭಾವ ಅಳಿದು ಸಂಘವು ಉದಾರವಾದಿ-ಪ್ರಗತಿಶೀಲವೆನಿಸುತ್ತದೆ. ಆದರೆ ಪ್ರಗತಿಶೀಲವಾದ ಸಂಘವೊಂದು ಮಾತ್ರ ಬ್ರಾಹ್ಮಣನಲ್ಲದವನನ್ನು ಅಡುಗೆಯವನೆಂದು ನಿಯಮಿಸಿಕೊಳ್ಳಲು ಸಾಧ್ಯ." ಇದೊಂದು ಜಟಿಲ ಸಮಸ್ಯೆ ಎಂದು ತಮ್ಮ ಮನಸ್ಸಿನಲ್ಲಿಯೇ ಯೋಚಿಸಿಕೊಂಡರು.

ಸುಮ್ಮನೆ ಕುಳಿತಿದ್ದ ಗಣಪತಿಮುನಿಗಳನ್ನು ನೋಡಿ ಪ್ರತಿಪಕ್ಷದ ಮುಖಂಡ ಹೇಳಿದ;– "ಬ್ರಾಹ್ಮಣ ಅಡುಗೆಯವನನ್ನು ಇಟ್ಟುಕೊಳ್ಳುವುದರಲ್ಲಿ ನನ್ನ ಆಕ್ಷೇಪವೇನಿಲ್ಲ. ಆದರೆ ಅವನು ಜಾತಿಯ ಮೇಲು-ಕೀಳು ಎಂಬ ಭಾವನೆ

ನಿರಾಧಾರವೆಂಬ ಉದಾರ ಬುದ್ಧಿಯವನಾಗಿರಬೇಕು" ಈ ಮಾತು ಕೇಳಿದ ವಾಸಿಷ್ಠ ಮುನಿಗಳಿಗೆ ಒಳಗೊಳಗೇ ನಗುಬರುವಂತಾಯಿತು. "ಯಾರು ಜಾತಿ-ಮತ-ಆಚಾರಗಳನ್ನು – ಬದಿಗಿಟ್ಟು ಸಂಪ್ರದಾಯಗಳಮೇಲಿನ ಅಭಿಮಾನವನ್ನು ವಿಚಾರ ಪೂರ್ವಕ ತ್ಯಜಿಸಿ ಸ್ವೇಚ್ಛೆಯಾಗಿ ಇರುತ್ತಾರೆಯೋ ಅಂತಹ ವರು ಮಾತ್ರ ಉದಾರವಾದಿ-ವಿಚಾರಶೀಲ-ವಿವೇಕಿಗಳು ಎಂಬುದು ಈಗಿನವರ ಅಭಿಪ್ರಾಯ. ಆದರೆ ಅಂತಹ ವ್ಯಕ್ತಿಯೊಬ್ಬ ಆಂಗ್ಲ ವಿದ್ಯೆಯ ಸ್ನಾತಕೋತ್ತರ ಆಚಾರ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವವರಲ್ಲಿ ಕೂಡ ದೊರೆಯುವುದು ಕಷ್ಟ. ಒಂದು ವೇಳೆ ಅಂತಹವನೊಬ್ಬನಿದ್ದರೂ ಅವನು ಕೇವಲ ಬದುಕಿಗಾಗಿ ಸೌಟು ಹಿಡಿದು ಅಡುಗೆ ಬೇಯಿಸುತ್ತ-ನೀರು ಹೊರುತ್ತ ಗಂಗಾಧರನಾಗಿ ಅಡುಗೆಯ ಕೋಣೆಯಲ್ಲಿ ಜೀವ ಸವೆಸಲು ಬರುವುದುಂಟೆ? ಇರಲಿ! ನಾನು ಮಾಡಬೇಕಾದ್ದನ್ನು ಮಾಡಿಬಿಡುತ್ತೇನೆ" ಎಂದು ನಿರ್ಧರಿಸಿದ ಗಣಪತಿ ಶಾಸ್ತ್ರಿಗಳು ಉಭಯ ಪಕ್ಷದ ವರೂ ನಿರೀಕ್ಷಿಸುತ್ತಿದ್ದ ತಮ್ಮ ನಿರ್ಣಯವನ್ನು ಪ್ರಕಟಿಸಿದರು. ಆ ನಿರ್ಣಯವಾದರೂ ಏನು ? "ಆದಿ ದ್ರಾವಿಡನೊಬ್ಬನನ್ನು ಅಡುಗೆಗೆ ನಿಯಮಿಸಿಬಿಡಿ! ''

ಶಾಸ್ತ್ರಿಗಳು ನೀಡಿದ ಈ ಮಧ್ಯಸ್ಥಿಕೆಯ ತೀರ್ಮಾನವನ್ನು ಕೇಳಿದ ಗುರುಕುಲ ಆಚಾರ್ಯರು ವಿಚಲಿತರಾದರು. ಬ್ರಾಹ್ಮಣೇತರ ಮುಖಂಡ ಅದನ್ನು ಒಪ್ಪಿ ಕೊಳ್ಳಲೂ ಇಲ್ಲ. ತಿರಸ್ಕರಿಸಲೂ ಇಲ್ಲ. ಒಂದು ವೇಳೆ ಅವನು ಈ ನಿರ್ಣಯ ವನ್ನು ಒಪ್ಪಿಕೊಂಡರೆ ''ಬ್ರಾಹ್ಮಣೇತರ ಮಕ್ಕಳ ಪಾಲಕರು ಕೂಡ ಅಸ್ಪೃಶ್ಯ ನೊಬ್ಬ ತಯಾರಿಸುವ ಊಟವನ್ನು ತಮ್ಮ ಮಕ್ಕಳು ತಿನ್ನಲು ಅನುಮತಿ ಕೊಡಲಾ ರರು. ಈಗ ಗುರುಕುಲ ಆಚಾರ್ಯರ ಅಳಲು ಕೂಡ ಅದೇ ಆಗಿದೆ. ಇನ್ನು ಅವನೇ ನಾದರೂ ಈ ತಿರ್ಮಾನವನ್ನು ತಿರಸ್ಕರಿಸಿದನಾದರೆ ಅವನ ವಾದವೇ ಬಿದ್ದು ಹೋಗುತ್ತದೆ.''

ತಮ್ಮ ಸಲಹೆಯಿಂದ ಆಗಬಹುದಾದ ಅನುಕೂಲ-ಪ್ರತಿಕೂಲಗಳನ್ನು ಶಾಸ್ತ್ರಿಗಳು ವಿವರಿಸಿದರು :– "ಈ ಸಲಹೆಯನ್ನು ಒಪ್ಪಿಕೊಂಡರೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಬಿಡುವುದೆಂಬ ಶಂಕೆ ಗುರುಕುಲಾಚಾರ್ಯರನ್ನು ಕಾಡುತ್ತಿರ ಬಹುದು. ಆದರೆ ಸಮಾಜದ ಉದ್ಧಾರಕ್ಕೆಂದು ಹೊರಟ ಮುಂದಾಳುಗಳು ಮೊದಲು ಅಡ್ಡಿ-ಆತಂಕಗಳ ನಿರೀಕ್ಷೆ ಇಟ್ಟುಕೊಂಡು ಕಷ್ಟಗಳನ್ನು ಅನುಭವಿಸಿದ ನಂತರ ತಾನೇ ಅವುಗಳಿಂದ ಪಾರಾಗಬಲ್ಲರು ? ಇನ್ನು ಪ್ರತಿ ಪಕ್ಷದ (ಬ್ರಾಹ್ಮ ಣೇತರ) ಮುಖಂಡರು ಈ ನಿರ್ಣಯವನ್ನು ಸ್ವೀಕರಿಸುವುದರಿಂದ-ತನ್ನ ಗುರಿ ಇದ್ದುದು ಒಳ್ಳೆಯದನ್ನು ಸಾಧಿಸುವುದರ ಕಡೆಗೆ. ಈ ಭಿನ್ನಾಭಿಪ್ರಾಯ ಕೇವಲ

ಸಮಾಜ ಸಂಸ್ಕಾರದ ಸದುದ್ದೇಶದಿಂದ ಹುಟ್ಟಿದ್ದೇ ಹೊರತು ಬೇರೆಯಲ್ಲ ಎಂಬುದನ್ನು ಸ್ಪಷ್ಟ ಪಡಿಸಿದಂತಾಗುತ್ತದೆ."

ಎಂತಹ ಧರ್ಮ ನಿರ್ಣಯ ? ಯಾರೇ ಆಗಲಿ ! ಇದರಲ್ಲಿ ದೋಷವನ್ನು ತೋರಿಸಿ ಕೊಡಬಲ್ಲರೇನು ?. ಈ ವಿಷಯದಲ್ಲಿ ಮುಂದೆಯೂ ಶಾಸ್ತ್ರಿಗಳು ಮತ್ತು ಬ್ರಾಹ್ಮಣೇತರ ಮುಖಂಡರ ನಡುವೆ ಪತ್ರವ್ಯವಹಾರ ನಡದೇ ಇತ್ತು. ಹಾಗಿದ್ದಾಗಲೇ ಗುರುಕುಲಾಚಾರ್ಯ ಅಯ್ಯರ್‌ರವರು "ಪಾಪ ವಿನಾಶ'' ತೀರ್ಥದಲ್ಲಿ ನಿಧನರಾದರೆಂಬ ವಾರ್ತೆ ಬಂದಿತು. ಇನ್ನು ಉಳಿದಿದ್ದೇನು? ಯುದ್ಧವೂ ಇಲ್ಲ. ವಾದ–ವಿವಾದಗಳೂ ಇಲ್ಲ. ವಾಸಿಷ್ಠ ಮುನಿಗಳು ಪ್ರತಿ ಪಕ್ಷನಾಯಕನಿಗೆ ಈ ಬಗ್ಗೆ ವಿಷಾದ ವ್ಯಕ್ತಗೊಳಿಸುತ್ತ ಈ ಕೆಳಗೆ ಕಂಡ ಪ್ರಾಚೀನ ಶ್ಲೋಕವನ್ನೂ ತಮಿಳಿನಲ್ಲಿ ಅದರ ಅರ್ಥವನ್ನೂ ಬರೆದು ಕಳಿಸಿದರು :–

ರಾತ್ರಿರ್ಗಮಿಷ್ಯತಿ ಭವಿಷ್ಯತಿ ಸುಪ್ರಭಾತಂ
ಭಾಸ್ವಾನುದೇಷ್ಯತಿ ಹಸಿಷ್ಯತಿ ಪಂಕಜಶ್ರೀಃ ।
ಇತ್ಥಂ ವಿಚಿಂತಯತಿ ಕೋಶಗತೇ ದ್ವಿರೇಫೇ
ಹಾ! ಹಂತ! ಹಂತ! ನಳಿನೀಂ ಗಜ ಉಜ್ಜಹಾರ॥

ಕೊಳದಲ್ಲಿ ಅರಳಿದ್ದ ತಾವರೆಯ ನಡುವೆ ಕುಳಿತು ಮಧುರಸ ಹೀರುವುದರಲ್ಲಿಯೇ ಮಗ್ನವಾಗಿದ್ದ ದುಂಬಿಗೆ ಸಮಯದ ಪರಿವೆಯೇ ಇರಲಿಲ್ಲ. ಸೂರ್ಯ ಮುಳುಗಿದ. ತಾವರೆ ಮುದುಡಿಕೊಂಡಿತು. ದುಂಬಿ ತಾವರೆಯ ನಡುವೆ ಬಂದಿಯಾಯಿತು. ಆಗ ಎಚ್ಚೆತ್ತ ದುಂಬಿ ಯೋಚಿಸುತ್ತದೆ :–

ಹೇಗೂ ಈ ರಾತ್ರಿ ಕಳೆದು ಬೆಳಕು ಹರಿಯುತ್ತದೆ. ದಿನಕರನು ಮೂಡಿ ಬರುತ್ತಾನೆ. ಆಗ ಈ ಕಮಲ ಮತ್ತೆ ಅರಳುತ್ತದೆ. ಅಂದರೆ ನಾನು ಈ ಬಂದನದಿಂದ ಬಿಡುಗಡೆಯಾಗಲಿದ್ದೇನೆ." ಇದು ಬಂದಿಯಾದ ಆ ದುಂಬಿಯ ಹಂಬಲ. ಆದರೆ ಅಷ್ಟರಲ್ಲಿ ಇದೇನಾಗಿ ಹೋಯಿತು.? ಹಾ ! ಅಯ್ಯೋ ಮದ ಗಜವೊಂದು ನುಗ್ಗಿ ಬಂದು ಕೊಳದಲ್ಲಿಳಿದು ಸೊಂಡಿಲು ಚಾಚಿ ಕಾಂಡ ಸಹಿತವಾಗಿ ಆ ಕಮಲವನ್ನೇ ಕಿತ್ತು ಎಸೆದು ಬಿಟ್ಟಿತು.

ಪ್ರಕರಣ- 2.

ಕುಟುಂಬ-ಜೀವನ ಸಂಗಾತಿಯ ನಿಧನ.

''ವಿವೇಕಧಾರಾ ಶತಧೌತಮಂತಃ ಸತಾಂ ನ ಕಾಮಃ ಕಲುಷೀಕರೋತಿ'' ॥

ವಿವೇಕವೆಂಬ ನಿರ್ಮಲ ನೀರಿನ ಝರಿಯ ಹಲವಾರು ಶಾಖೆಗಳಿಂದ ಪರಿಶುದ್ಧಗೊಂಡಿರುವ ಸತ್ಪುರುಷರ ಅಂತಃಕರಣವು ಕಾಮ (ಇಚ್ಛೆ–ಆಶೆ) ದಿಂದ ಮಲಿನಗೊಳ್ಳುವುದಿಲ್ಲ.

''ನ ಪಾದಪೋನ್ಮೂಲನಶಕ್ತಿರಂಹಃ ಶಿಲೋಚ್ಚಯೇ ಮೂರ್ಛತಿ ಮಾರುತಸ್ಯ ॥'' (ರಘುವಂಶ)

ಹೆಮ್ಮರಗಳನ್ನು ಕಿತ್ತು ಉರುಳಿಸಬಲ್ಲ ವಾಯುವಿನ ಪ್ರತಾಪ ಬಂಡೆಗಲ್ಲಿನ ಸಮುಚ್ಚಯಕ್ಕೆ ತಾಗಿ ತಾನೇ ಮೂರ್ಛೆ ಹೋಗು (ನಿರರ್ಥಕವಾಗು)ತ್ತದೆ.

ತಪೋನಿಷ್ಠ ವಾಸಿಷ್ಠಮುನಿಗಳು ಅಮ್ರ ಗುಹೆಯಲ್ಲಿಯೇ ವಾಸಿಸುತ್ತಿದ್ದರಾದರೂ ಆಗಾಗ್ಯೆ ಬೆಟ್ಟದಿಂದ ಇಳಿದು ಹೆಂಡತಿ ಮಕ್ಕಳ ವಸತಿಗೆ ಬಂದು ಅವರುಗಳ ಯೋಗಕ್ಷೇಮ, ಪರ್ಯಾಯಲೋಚಿಸ ಬೇಕಾದ ವಿಷಯಗಳು ಈ ಬಗ್ಯೆಯೂ ಗಮನ ಕೊಡ ಬೇಕಾಗುತ್ತಿತ್ತು. ಹಾಗಾಗಿ ಕ್ರೋಧನ-ಅಕ್ಷಯ ಸಂವತ್ಸರಗಳಲ್ಲಿ ನಿರಂತರ ಗುಹಾವಾಸಿಗಳಾಗಿ ಉಳಿಯುವುದು ಸಾಧ್ಯವಾಗಲಿಲ್ಲ. ಅವರ ತಪಸ್ಸು ಕೂಡ ಸತತವಾಗಿ ನಡೆಯಲಾಗಲಿಲ್ಲ. ಅನೇಕ ವರ್ಷಗಳಿಂದ ಭಸ್ಮ (ವಿಭೂತಿ) ತಿನ್ನುವ ಅಭ್ಯಾಸಕ್ಕೆ ವಶರಾಗಿದ್ದ ಅವರ ಪತ್ನಿಯು ಪಾಂಡುರೋಗಾದಿ ವ್ಯಾಧಿಗಳಿಗೆ ಗುರಿಯಾಗಿ ಹಾಸಿಗೆಹಿಡಿದರು. ಈಪರಿಸ್ಥಿತಿಯಲ್ಲಿ ವಾಸಿಷ್ಠಮುನಿಗಳು ಪತ್ನಿಯ ಬಳಿಯೇ ಇರುವುದು ಅನಿವಾರ್ಯವಾಯಿತು.

ಈ ನಡುವೆ ಗೋಕರ್ಣದಲ್ಲಿ ದೀಕ್ಷಿತ ದತ್ತಾತ್ರೇಯ ಉಪಾಧ್ಯಾಯರು ಹಮ್ಮಿಕೊಂಡ ಜ್ಯೋತಿಷ್ಟೋಮ ಯಾಗಕ್ಕೆ ಬರುವಂತೆ ವಾಸಿಷ್ಠಮುನಿಗಳಿಗೆ ಶಿಷ್ಯ ದೈವರಾತರಿಂದ ಪತ್ರ ಬಂದಿತು. ಬಾಲ್ಯದಿಂದ ಕಠಿಣ ತಪಶ್ಚರ್ಯೆಯಲ್ಲಿ ನಿರತರಾಗಿದ್ದರೂ ಆಚಾರ್ಯ ವಾಸಿಷ್ಠರು ಮೃದು ಸ್ವಭಾವದವರು. ಈ ಸಂದರ್ಭದಲ್ಲಿ ಅವರು ಶಿಷ್ಯನಲ್ಲಿಯೇ ಕ್ಷಮೆಯಾಚಿಸಿ ಮರು ಪತ್ರ ಬರೆದರು.

ವತ್ಸ! ದೈವರಾತಪ!

ನಿನ್ನ ಪತ್ರ ತಲುಪಿದೆ. ನೂರುರೂಪಾಯಿಗಳೂ ಕೈಸೇರಿವೆ. ಅಲ್ಲಿ ದೀಕ್ಷಿತ ದತ್ತಾತ್ರೇಯರು ನಡೆಸುವ ಯಜ್ಞ, ನೀನು–ನಿನ್ನ ಆಶ್ರಮ, ಇವನ್ನೆಲ್ಲಾ

ನೋಡಬೇಕೆಂಬ ಕುತೂಹಲ ನನಗೂ ಇದೆ. ಆದರೆ ಕಾಹಿಲೆ ಮಲಗಿರುವ ನಿನ್ನ ತಾಯಿ ವಿಶಾಲಾಕ್ಷಿ (ಆಚಾರ್ಯರಪತ್ನಿ)ಯ ಶುಶ್ರೂಷೆಯ ಕರ್ತವ್ಯವನ್ನು ಬಿಟ್ಟು ನಿಮ್ಮಲ್ಲಿಗೆ ಈಗ ಬರಲು ಸಾಧ್ಯವಿಲ್ಲ. ನೋವಿನಲ್ಲಿರುವ ವಾಸಿಷ್ಠನ ಇದೊಂದು ಅಪರಾಧವನ್ನು ಮನ್ನಿಸಬೇಕು."

ಇತಿ

ವಾಸಿಷ್ಠ ಗಣಪತಿ.

ದೈವರಾತರು ಬಹುಕಾಲದಿಂದ ಯೋಚಿಸುತ್ತಿದ್ದ "ಗೋರಕ್ಷಾ ಬ್ರಹ್ಮಚರ್ಯಾಶ್ರಮವನ್ನು" ಪ್ರಾರಂಭಿಸಿ ಪತ್ನಿಯೊಡನೆ ಆಚಾರ್ಯರು ಗೋಕರ್ಣಕ್ಕೆ ಬಂದು ಇರಬೇಕೆಂಬ ತಮ್ಮ ಮಹದಾಶೆಯನ್ನು ಮುಂದಿಡುತ್ತ ಹೀಗೆ ಪ್ರಾರ್ಥಿಸಿಕೊಂಡರು:- "ಉಮಾ ಸಹಸ್ರವೇ ಮುಂತಾದ ತಮ್ಮ ಬರಹಗಳನ್ನು ಮುದ್ರಿಸಿ ಪ್ರಕಟಿಸುವ ಮೂಲಕ ತಮಗೆ ಸೇವೆ ಸಲ್ಲಿಸಲು ಉದ್ದೇಶಿಸಿ 3ಸಹಸ್ರ ರೂಪಾಯಿಗಳ ಬೆಲೆಗೆ ನಂದಿನೀ ಮುದ್ರಣಾಲಯವನ್ನು ಖರೀದಿಸಿದ್ದೇನೆ. ಇಲ್ಲಿಗೆ ತಾವು ದಯಮಾಡಿ ಬಂದರೆ ಆ ಮುದ್ರಣ ಯಂತ್ರವನ್ನು ತಮ್ಮ ಸನ್ನಿಧಿಗೆ ಸಮರ್ಪಿಸುತ್ತೇನೆ." ಹೀಗೆ ವಾಗ್ದಾನದ ಮೂಲಕ ಮುದ್ರಣ ಯಂತ್ರವನ್ನು ಆಚಾರ್ಯರಿಗೆ ಸಮರ್ಪಿಸಿಕೊಂಡರು.

ದೈವರಾತರ ದಿನಚರಿ ಪುಸ್ತಕದಲ್ಲಿ ಆಚಾರ್ಯ ವಾಸಿಷ್ಠರ ನಿಲುವು ಕುರಿತು ಕೆಲವು ಸ್ಪಷ್ಟ ಟಿಪ್ಪಣಿ ಬರೆಯಲ್ಪಟ್ಟಿವೆ :-ಒಮ್ಮೆ ದೈವರಾತರು ಆಚಾರ್ಯರಿಗೆ ಹೀಗೆ ಹೇಳಿದರು:- ಪ್ರಾಚೀನ ಋಷಿಗಳ ಆಶ್ರಮ ಶಿಕ್ಷಣಪದ್ಧತಿಯ ಪುನರುಜ್ಜೀವನಕ್ಕಾಗಿ ವೇದ ವಿದ್ಯಾಪ್ರಸಾರ - ಉಪನಿಷತ್ತುಗಳಲ್ಲಿ ಪ್ರಣೀತವಾದ ಯೋಗ ಕ್ರಿಯೆಯ ಅಭ್ಯಾಸ-ಬ್ರಹ್ಮ ವಿದ್ಯಾ ಪ್ರಕಾಶನಗಳಿಗೆ ಅವಕಾಶವಿರುವ ಆಶ್ರಮವೊಂದನ್ನು ಗೋಕರ್ಣಪ್ರಾಂತ್ಯದಲ್ಲಿ ಪ್ರತಿಷ್ಠಾಪಿಸ ಬೇಕೆಂಬುದು ನನ್ನ ಹಂಬಲ. ಈ ಆಶ್ರಮದ ಗುರು ಸ್ಥಾನವನ್ನು ನಿರ್ವಹಿಸಲು ತಾವೇ ಸಮರ್ಥರು. ಈ ಸೇವಕನ ಮೇಲೆ ತಾವು ಕೃಪೆದೋರಬೇಕು." ಅದಕ್ಕೆ ಆಚಾರ್ಯರು ಈ ಮುಂದೆ ಕಂಡಂತೆ ಉತ್ತರಿಸಿದರು. :-" ಈ ಭಾರತವೇ ಸಂಪೂರ್ಣ ಆಶ್ರಮ ವ್ಯವಸ್ಥೆಗೆ ಸ್ಥಾನವಾಗಬೇಕು. ಅದು ಉದಾತ್ತ-ನಿಸ್ಪೃಹ ಕಾರ್ಯ ವಿಧಾನ, ಮಹತ್ತರ ತಪೋ ಬಲವನ್ನುಳ್ಳ ಪ್ರಯತ್ನದಿಂದ ಸಾಧಿಸಲ್ಪಡಬೇಕು. ಹೀಗೆ ಒಂದು ಕಡೆ ಮಾತ್ರ ಆಶ್ರಮ ಸ್ಥಾಪಿಸುವುದರಿಂದ ಆದರೂ ನಿನ್ನ ಸಂಕಲ್ಪವನ್ನು ಕಾರ್ಯರೂಪಕ್ಕೆ ತರಬೇಕು. ಮುಂದೆ ನೋಡೋಣ !"

ಅಂದರೆ ಸಮಾಜದ ಸರ್ವಾಂಗೀಣ ಉನ್ನತಿಯನ್ನು ಈಶ್ವರಾರಾಧನೆ-ತಪಸ್ಸು ಮುಂತಾದ ವಿಧಾನಗಳಿಂದಲೇ ಸಾಧಿಸಬೇಕೆಂಬುದರಲ್ಲಿ ವಾಸಿಷ್ಠ ಮುನಿಗಳಿಗೆ ದೃಢವೂ ಸಹಜವೂ ಆದ ವಿಶ್ವಾಸವಿದ್ದು ಅದೇ ಅವರ ಬದುಕಿನ ಉಸಿರಾಗಿತ್ತೆಂಬುದು ಸ್ಪಷ್ಟಗೊಳ್ಳುತ್ತದೆ.

ಮುಂದೆ ದೈವರಾತರೇ ಪತ್ನೀ ಸಮೇತರಾಗಿ ಅರುಣಾಚಲಕ್ಕೆ ಬಂದು ಗುರು ಗೃಹದಲ್ಲಿ ಕೆಲವು ಕಾಲ ಇದ್ದರು. ಗೋಕರ್ಣಕ್ಕೆ ವಾಪಸು ಹೊರಡುವ ಮುನ್ನ ಆಚಾರ್ಯ ದಂಪತಿಗಳನ್ನು ಗೋಕರ್ಣಕ್ಕೆ ಬರುವಂತೆ ಬಹುವಿಧದಲ್ಲಿ ಪ್ರಾರ್ಥಿಸಿದರು. ಆದರೆ ಆಚಾರ್ಯರಿಗೆ ಆಗ ಅರುಣಾಚಲವನ್ನು ಬಿಟ್ಟು ಹೊರಡಲಾಗದಿದ್ದುದಕ್ಕೆ ಏನು ಕಾರಣವಿದ್ದಿತೋ? ಅಥವಾ ತತ್ಕಾಲದಲ್ಲಿ ಅವರಿಗೆ ಆ ಇಚ್ಛೆ ಇರಲಿಲ್ಲವೋ ? ಅಂತೂ ಅಲ್ಲಿಂದ ಹೊರಡಲು ಅವರು ಸಿದ್ಧರಾಗಲಿಲ್ಲ. ಆದರೂ ದಾಕ್ಷಿಣ್ಯ ಪರರಾದ ವಾಸಿಷ್ಠರು "ಆಗಲಿ ! ಹಾಗೆ ಮಾಡಲು ಪ್ರಯತ್ನಿಸುತ್ತೇನೆ" ಎಂದಷ್ಟೇ ಹೇಳಿದರು.

ಹಣ ಸಂಪಾದನೆಯ ವಿಷಯದಲ್ಲಿ ವಾಸಿಷ್ಠರಿಗೆ ಆಸ್ಥೆ ಇರಲಿಲ್ಲ. ಖರ್ಚಿಗೆ ಹಣದ ಆವಶ್ಯಕತೆ ಉಂಟಾದಾಗ ಹೇಗೋ ಅಭಿಮಾನೀ ಶಿಷ್ಯರ ಮೂಲಕ ಹಣ ಒದಗಿ ಬರುತ್ತಿತ್ತು. ಅರುಣಾಚಲದಲ್ಲಿ ಕುಟುಂಬ ಸಹಿತ ವಾಸಿಸುತ್ತಿದ್ದ ಅವರಿಗೆ ಸಂಸಾರ ಭರಣದ ಚಿಂತೆಯಂತೂ ಇರಲೇ ಇಲ್ಲ. ಸಂಸಾರದ ದಿನ ನಿತ್ಯದ ಹಾಗೂ ವಿಶೇಷ ಸಂದರ್ಭದ ವೆಚ್ಚವೆಲ್ಲಾ ಅವರ ಶಿಷ್ಯ ಸುಧನ್ವನು ಆಗಿಂದಾಗ್ಗೆ ಕಳಿಸುತ್ತಿದ್ದ ಹಣದಿಂದ ನಡೆಯುತ್ತಿತ್ತು.

ಒಮ್ಮೆ ವಾಸಿಷ್ಠರ ಮನೆಯಲ್ಲಿ ಶುಭಕಾರ್ಯವೊಂದು ನಡೆಯುವುದಿತ್ತು. ಶುಭ ಸಮಾರಂಭವೆಂದಮೇಲೆ ಅದಕ್ಕೆ ತಕ್ಕಂತೆ ಹೆಚ್ಚಿನ ಖರ್ಚುಗಳು ಇದ್ದೇ ಇರುತ್ತವೆಯಷ್ಟೆ ? ಅವರ ಅನುಯಾಯಿಗಳಲ್ಲಿ ಶಕ್ತರಾಗಿದ್ದವರು ಸಮಯ-ಸಂದರ್ಭಗಳನ್ನರಿತು ತಾವಾಗಿಯೇ ಸಹಾಯ ಸಲ್ಲಿಸುತ್ತಿದ್ದರೇ ಹೊರತು ವಾಸಿಷ್ಠರು ತಾವಾಗಿಯೇ ಯಾರನ್ನೂ ಯಾಚಿಸುತ್ತಿದ್ದವರಲ್ಲ. ಈಗಿನ ಸಂದರ್ಭದಲ್ಲಿ ಮಾತ್ರ ಅದೇನು ಕಾರಣವೋ ? ಅವರ ಸಮರ್ಥ ಶಿಷ್ಯರು ಯಾರೂ ಧನ ಸಹಾಯ ಸಲ್ಲಿಸುವುದನ್ನು ಮರೆತು ಬಿಟ್ಟರು. ಹೀಗಾಗಿ ಸಮಾರಂಭ ಸಮೀಪಿಸುತ್ತಿದ್ದರೂ ಸ್ವಲ್ಪವೂ ಹಣ ಸಂಗ್ರಹವಾಗಲೇ ಇಲ್ಲ. ಅವರ ಸಾಮಾನ್ಯ ಶಿಷ್ಯನೊಬ್ಬ ಮಾತ್ರ ತಾನಾಗಿಯೇ ಅವಶ್ಯವಿರುವಷ್ಟು ಹಣ ಕಳಿಸುವುದಾಗಿ ತಿಳಿಸಿದ್ದ. ಮತ್ತೆ ಆಚಾರ್ಯರಲ್ಲಿ ಭಕ್ತಿ-ಶ್ರದ್ಧೆ ಇದ್ದ ಧನಿಕರೊಬ್ಬರು ಈ ಸಮಾರಂಭದ

ವೆಚ್ಚಕ್ಕೆ ಎಷ್ಟು ಹಣ ಬೇಕೆಂಬುದನ್ನು ಪತ್ರ ಮುಖೇನ ತಿಳಿಯಬಯಸಿದ್ದರು. ಆದರೆ ಈ ಇಬ್ಬರಿಂದ ಧನ ಸಹಾಯ ಯಾವಾಗ ಒದಗುತ್ತದೆಯೆಂಬುದು ನಿಶ್ಚಿತವಿರಲಿಲ್ಲ. ಇಂತಹ ಸಂಧಿಗ್ಧ ಸ್ಥಿತಿಯಲ್ಲಿ ತಮ್ಮ ವಿಷಯದ ಅರಿವುಳ್ಳ ವಿಶ್ವಾಸೀ ಶಿಷ್ಯನೊಬ್ಬನಿಗೆ ವಾಸಿಷ್ಠರು ಪತ್ರ ಬರೆದು ಮೇಲೆ ತಿಳಿಸಿದ ಇಬ್ಬರನ್ನು ಬಿಟ್ಟು ಬೇರೊಬ್ಬ ಉದಾರೀ ಧನಿಕ ಶಿಷ್ಯನಲ್ಲಿ ಹಣದ ಬಗ್ಗೆ ಪ್ರಯತ್ನಿಸುವಂತೆ ಸೂಚಿಸಿದರು. ತಪಃಶೀಲರೂ–ನೀತಿವೇತ್ತರೂ ಕಾರ್ಯಸಾಧಕರೂ ಆದ ವಾಸಿಷ್ಠರು ಮೊದಲು ತಾವಾಗಿಯೇ ವಾಗ್ದಾನ ಮಾಡಿ ಸಮಯಕ್ಕೆ ಸರಿಯಾಗಿ ಹಣ ಕಳಿಸದೇ ಉಳಿದ ಆ ಇಬ್ಬರು ಶಿಷ್ಯರ ಕರ್ತವ್ಯ ಲೋಪವನ್ನು ಎತ್ತಿ–ಎಣಿಸುವ ಗೋಜಿಗೆ ಹೋಗಲೇ ಇಲ್ಲ.

ವಾಸಿಷ್ಠರು ತಮ್ಮ ಗೃಹಕೃತ್ಯದ ಸಲುವಾಗಿ ತಮ್ಮ ಗುಹಾ ನಿವಾಸದಿಂದ ಆಗಾಗ ಮನೆಗೆ ಬಂದು ಹೋಗಬೇಕಾದುದು ಅನಿವಾರ್ಯವೆನಿಸಿ ಮುಂದೆ ಕೆಲಕಾಲ ಇದೇ ಸ್ಥಿತಿ ಅತ್ಯಗತ್ಯವೆನಿಸಿತು. ಅಲ್ಲಿಯವರೆಗೆ 20 ವರ್ಷಗಳನ್ನು ದಕ್ಷಿಣ ದೇಶದಲ್ಲಿಯೇ ಕಳೆದಿದ್ದರೂ ಆಚಾರ್ಯ ಪತ್ನಿ ವಿಶಾಲಾಕ್ಷಿಯವರು ಪ್ರಸಿದ್ಧ ಶ್ರೀ ಚಿದಂಬರಕ್ಷೇತ್ರವನ್ನು ಸಂದರ್ಶಿಸಿರಲಿಲ್ಲ. ಈಗ ಹಟಾತ್ತನೆ ಆ ಹಂಬಲ ಉಂಟಾದುದರಿಂದ ಚಿದಂಬರ ಕ್ಷೇತ್ರಯಾತ್ರೆ ಮಾಡಿ ಬಂದಿದ್ದಾಯಿತು. ಈಗಾಗಲೆ ಪಾಂಡುರೋಗದಿಂದ ದುರ್ಬಲಗೊಂಡಿದ್ದ ವಿಶಾಲಾಕ್ಷಿಯವರ ದೈಹಿಕ ಸ್ಥಿತಿ ಈ ಯಾತ್ರೆಯಿಂದ ಮರಳಿ ಬಂದೊಡನೆ ಮತ್ತಷ್ಟು ವಿಷಮಿಸಿ ಹಾಸಿಗೆ ಹಿಡಿದರು. ಇದೇ ಅವರ ಮರಣ ಶಯ್ಯೆಯೂ ಆಯಿತು. ಕಾಹಿಲೆಯ ಪೂರ್ವ ಲಕ್ಷಣಗಳನ್ನೆಲ್ಲಾ ಕಂಡುಕೊಂಡ ಆಯುರ್ವೇದತಜ್ಞ ವಾಸಿಷ್ಠರು "ಸ್ವಲ್ಪವೇ ದಿನಗಳಲ್ಲಿ ಮರಣವನ್ನು ತರುವ ರೋಗವಿದು" ಎಂದು ನಿರ್ಧರಿಸಿದರು. ತಮ್ಮ ಮುಖ್ಯ ಶಿಷ್ಯರುಗಳಿಗೆ ಪತ್ರಬರೆದು ವಿಷಯ ತಿಳಿಸಿದರು.

ವಿಶಾಲಾಕ್ಷಿಯವರು ಮೃತ್ಯುಶಯ್ಯೆಯಲ್ಲಿದ್ದರೂ ಕೊನೆಯ ಉಸುರಿನವರೆಗೂ ಪ್ರಜ್ಞೆ ಕಳೆದುಕೊಳ್ಳಲಿಲ್ಲ. ಶಕ್ತಿ ದೇವತೆಯ ಉಪಾಸಕಿಯಾದ ಅವರು ಆ ದೇವತೆಯ ಸಾನ್ನಿಧ್ಯವನ್ನೇ ಧ್ಯಾನ ಮಾಡುತ್ತ 9ದಿನಗಳಲ್ಲಿ ತಮ್ಮ ಐಹಿಕ ಜೀವನವನ್ನು ಕೊನೆಗೊಳಿಸಿದರು. ಅಂದು ಅಕ್ಷಯ ಸಂವತ್ಸರದ ಕರ್ಕಾಟಕ ಮಾಸದ ಬಹುಳ ದ್ವಿತೀಯಾ ಸೋಮವಾರ. (ದಿನಾಂಕ 26–7 1926)ವಾಗಿದ್ದಿತು.

ಈ ರೀತಿ ಮಧ್ಯವಯಸ್ಸಿನಲ್ಲಿ (35 ವರ್ಷ) ಪತಿ–ಪುತ್ರರನ್ನು ಬಿಟ್ಟು ದೈವಾಧೀನರಾದ ವಿಶಾಲಾಕ್ಷೀ ದೇವಿಯವರನ್ನು ನೆನೆದು ಶೋಕಗ್ರಸ್ಥರಾದ ಮಕ್ಕಳು; ದುಃಖಪೀಡಿತರಾದ ಹೆಣ್ಣು ಮಕ್ಕಳು; ಬಹುಕಾಲದಿಂದ

ತಾಯಿಯ ವಾತ್ಸಲ್ಯಕ್ಕೆ ಪಾತ್ರರಾಗಿ ಈಗ ತಬ್ಬಲಿಗಳೆನಿಸಿದ ವ್ಯಸನಾಕ್ರಾಂತ ಶಿಷ್ಯರು ಇವರೆಲ್ಲರನ್ನೂ ಇದೀಗ ವಾಸಿಷ್ಠರೇ ಸಂತೈಸಬೇಕಾಯಿತು. ತಮ್ಮ ಸಾಂಸಾರಿಕ ಹಾಗೂ ಆಧ್ಯಾತ್ಮಿಕ ತಪೋಜೀವನಗಳಲ್ಲಿ ಸಹಚರಿಯಾಗಿದ್ದವಳನ್ನು ಅಗಲಿದಾಗ ಆಗುವ ಆಂತರಿಕ ಕಳವಳ ಅವರಿಗೂ ಇತ್ತು. ಆದರೆ ಸಾಮಾನ್ಯ ಜನರ ಚಿತ್ತಸ್ಥೈರ್ಯವನ್ನು ಕಲಕಬಲ್ಲ ಉದ್ವೇಗ-ವ್ಯಾಮೋಹಗಳ ಬಿರುಗಾಳಿ ಪರ್ವತ ದಂತೆ ದೃಢಮನಸ್ಸಿನ ವಾಸಿಷ್ಠಮುನಿಗಳ ಎದುರು ಸತ್ವಹೀನವಾಯಿತು. ಇಲ್ಲಿಗೆ ವಾಸಿಷ್ಠಮುನಿಗಳ 30 ವರ್ಷಗಳ ದಾಂಪತ್ಯ ಜೀವನ ಕೊನೆಗೊಂಡಿತು.

ಈಗ ವಿಧುರರಾದ ಅವರು ಪುನಃ ತಮ್ಮ ಗುಹಾನಿವಾಸಕ್ಕೆ ಮರಳಿದರು. ಅವರ ತಪಸ್ಸು ಅಡೆ-ತಡೆಯಿಲ್ಲದೆ ಮುನ್ನಡೆಯುತ್ತಿತ್ತು. ಆದರೆ ಮತ್ತೊಮ್ಮೆ ಅಡಚಣೆ. ಅನುವಂಶಿಕವಾಗಿ ಬಂದ ಕಾಹಿಲೆಯೊಂದು ಉಲ್ಬಣಿಸಿದಾಗ ಅವರು ಗುಹೆಯಿಂದ ಕೆಳಗೆ ಬಂದು ಮಗನ ಮನೆಯಲ್ಲಿ 6 ತಿಂಗಳು ಚಿಕಿತ್ಸೆ ಪಡೆಯಲೇ ಬೇಕಾಯಿತು. ಸಮರ್ಥ ಚಿಕಿತ್ಸಾ ವಿಧಾನದಿಂದ ರೋಗವಾಸಿಯಾದರೂ ನಿಃಶೇಷ ವಾದಂತೆ ತೋರಲಿಲ್ಲ. ಆಗ ಅನಿರೀಕ್ಷಿತ ಘಟನೆಯೊಂದು ನಡೆಯಿತು.

ವಾಸಿಷ್ಠಮುನಿಗಳು ಮನೆಯ ಒಳಗಡೆ ಇದ್ದರು. ಅಪರಿಚಿತ ಸಾಧುಗಳೊಬ್ಬರು ಮನೆಯ ಮುಂದೆ ಕಾಣಿಸಿಕೊಂಡು ಹೊರಜಾವಡಿಯಲ್ಲಿ ನಿಂತಿದ್ದ ಅಳಿಯ ಸೋಮಯಾಜಿಗಳನ್ನು ಕುರಿತು "ಕಾವ್ಯಕಂಠ ಗಣಪತಿ ಶಾಸ್ತ್ರಿಯವರು ಇದ್ದಾರೆಯೇ ? ನಾನು ಕನ್ಯಾಕುಮಾರಿಯಿಂದ ಬಂದಿದ್ದೇನೆ" ಎಂದರು. "ಶಾಸ್ತ್ರಿಗಳು ಒಳಗೆ ಇದ್ದಾರೆ, ನಾನು ಅವರ ಅಳಿಯ; ಸ್ವಲ್ಪ ಇರಿ; ಶಾಸ್ತ್ರಿಗಳನ್ನು ಕರೆತರುತ್ತೇನೆ" ಎಂದು ಹೇಳಿ ಒಳಗೆ ಹೋಗಿ ಶಾಸ್ತ್ರಿಗಳೊಡನೆ ಹೊರ ಬಂದಾಗ ಆ ಆಗಂತುಕ ಸಾಧುಗಳು ಅಲ್ಲಿ ಇರಲಿಲ್ಲ. ಸುತ್ತ-ಮುತ್ತ ಹುಡುಕಿದರೂ ಅವರ ಪತ್ತೆ ಸಿಗಲೇ ಇಲ್ಲ. ಆದರೆ ವಾಸಿಷ್ಠಮುನಿಗಳ ವ್ಯಾಧಿ ಮಾತ್ರ ಆ ಸಾಧುಗಳೊಡನೆಯೇ ಮಾಯವಾಗಿ ಹೋಗಿತ್ತು.

ಇದೇ ಸಂದರ್ಭದಲ್ಲಿ ವಾಸಿಷ್ಠರಿಗೆ ಇನ್ನೊಂದು ವಿಚಿತ್ರ ಅನುಭವವಾಯಿತು. ಕಾಹಿಲೆ ಮಲಗಿದ್ದ ಮಗಳು ವಜ್ರೇಶ್ವರಿಯ ಚಿಕಿತ್ಸೆಗಾಗಿ ವಿಶೇಷ ಜಾತಿಯ ಬಾಳೆಯಹಣ್ಣು ಅತ್ಯಗತ್ಯವಾಗಿತ್ತು. ಒಮ್ಮೆ ವಾಸಿಷ್ಠರು ಮಗ ಮಹಾದೇವನೊಡನೆ ದೇಗುಲದ ಪ್ರಾಕಾರದಲ್ಲಿ ಕುಳಿತು ಅದೇ ವಿಷಯ ಮಾತನಾಡುತ್ತಿದ್ದರು. ಹಟಾತ್ತನೆ ಆ ಸ್ಥಳಕ್ಕೆ ಬಂದ ಒಬ್ಬರು ತಮ್ಮ ಕೈಲಿದ್ದ ಅದೇ ಜಾತಿಯ ಬಾಳೆಹಣ್ಣಿನ ಗೊನೆಯನ್ನು ಇವರುಗಳ ಪಕ್ಕದಲ್ಲಿರಿಸಿ ಸುಮ್ಮನೆ ಹೊರಟುಹೋದರು. ಆಶ್ಚರ್ಯದಿಂದ

ಮಹಾದೇವಶಾಸ್ತ್ರಿ ಕೂಡಲೇ ಹೊರಗೆ ಹೋಗಿ ಆ ವ್ಯಕ್ತಿಗಾಗಿ ಹುಡುಕಾಡಿದ್ದು ಪ್ರಯೋಜನವಾಗಲಿಲ್ಲ. ಇಂತಹ ಎಷ್ಟೋ ವಿಶೇಷಘಟನೆಗಳ ಅನುಭವಗಳನ್ನು ಆಚಾರ್ಯರಿಂದಲೇ ಆಗಾಗ ನಾವು ಕೇಳಿದ್ದುಂಟು.

ಪ್ರಕರಣ-3

-:ವರ್ಣಾಶ್ರಮ ಧರ್ಮ ಪರಿಷತ್ತು:-

ನ ಹಿ ಸಿಂಹೋ ಗಜಾಸ್ಕಂದೀ ಭಯಾದ್ಗಿರಿಗುಹಾಶಯಃ । -ರಘುವಂಶ-

(ಆನೆಗಳನ್ನು ಕೊಲ್ಲಲು ಸಮರ್ಥವಾದ ಸಿಂಹವು ಬೆಟ್ಟದ ಗುಹೆಯಲ್ಲಿ ಮಲಗಿರುವುದು ಭಯದಿಂದಲ್ಲ.)

ನಮ್ಮ ಆಚಾರ್ಯ ವಾಸಿಷ್ಠರಲ್ಲಿ ಪೂಜ್ಯ ಭಾವನೆಯುಳ್ಳವರ ಪೈಕೀ ಕೆಲವರಿಗೆ ಆಚಾರ್ಯರ ಧರ್ಮಶಾಸ್ತ್ರೀಯ ವಿಚಾರಧೋರಣೆಗಳು ಅದರಲ್ಲಿಯೂ ಅಸ್ಪೃಶ್ಯತೆಯ ಕುರಿತು ಆಚಾರ್ಯರು ನೀಡುತ್ತಿದ್ದ ಪ್ರವಚನಗಳು ತುಂಬಾ ವ್ಯಾಕುಲ ಉಂಟು ಮಾಡುತ್ತಿದ್ದವು. ಪರಂಪರೆಯ ಅಂಧಾನುಕರಣದಲ್ಲಿಯೇ ಅಭಿಮಾನವಿದ್ದ ಕೆಲವರಿಗೆ ಆಚಾರ್ಯರ ವಿಷಯದಲ್ಲಿ ಭಯ; ಸ್ವಾರ್ಥಪರರಾಗಿದ್ದ ಕೆಲವರು ಪಂಡಿತರಿಗೆ ಆಚಾರ್ಯರ ವಿಷಯದಲ್ಲಿ ಜುಗುಪ್ಸೆ-ದ್ವೇಷ; ಇನ್ನು ಶಾಸ್ತ್ರೀಯವೋ-ಅಶಾಸ್ತ್ರೀಯವೋ ಬಹುಕಾಲದಿಂದ ಅನುಸರಿಸಿಕೊಂಡು ಬಂದ ಆಚರಣೆಗಳನ್ನು ಬಿಟ್ಟುಕೊಡುವ ಇಚ್ಛೆ-ಸಾಮರ್ಥ್ಯವಿಲ್ಲದವರು ಹಲವರು.

ಪ್ರಭವ ಸಂವತ್ಸರದಲ್ಲಿ ಮದರಾಸ್ ನಗರದಲ್ಲಿ ಕಾಂಗ್ರೆಸ್ ಸಮ್ಮೇಳನ ನಡೆಯುವುದಿತ್ತು. ಅದೇ ಸಂದರ್ಭದಲ್ಲಿ ಅಲ್ಲಿಯ ವರ್ಣಾಶ್ರಮ ಧರ್ಮ ಸಂಘದರು ಪಂಡಿತ ಪರಿಷತ್ತೊಂದನ್ನು ನಡೆಸಲು ಸಿದ್ಧತೆ ಮಾಡಿದ್ದರು. ಅದರ ಕಾರ್ಯದರ್ಶಿ ಎಂದುಕೊಂಡವರು ಒಬ್ಬರು ಆಚಾರ್ಯ ವಾಸಿಷ್ಠರಿಗೆ ಪತ್ರ ಬರೆದು ವಾದದಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ಅದನ್ನು ಒಪ್ಪಿಕೊಂಡ ವಾಸಿಷ್ಠರು ಪರಿಷತ್ತು ಸೇರುವ ಸಮಯಕ್ಕೆ ಅಲ್ಲಿಗೆ ಹೋದರು. ಆದರೆ ಸಭೆಯಲ್ಲಿ ವಾದಮಾಡುವಂತೆ ವಾಸಿಷ್ಠರ ಹೆಸರನ್ನು ಯಾರೂ ಕರೆಯಲಿಲ್ಲ. ಅಲ್ಲಿ ಯಾವ ವಾದದ ವ್ಯವಸ್ಥೆ ಇರಲೂ ಇಲ್ಲ. ವಾದ ಸಭೆಯ ಮಧ್ಯಸ್ಥರಾಗಿ ಅಗ್ರಾಸನ ನಿರ್ವಹಿಸಬಲ್ಲ ಶಾಸ್ತ್ರವೇತ್ತರು ಮತ್ತು

ಪ್ರತಿವಾದ ಸಮರ್ಥರಾದ ಪಂಡಿತರು ಅಲ್ಲಿ ಇದ್ದೇ ಇದ್ದರು. ಅಲ್ಲದೆ ವಿದ್ವತ್ ಪ್ರತಿಭೆಯಿಂದ ಕೂಡಿದ ವಿಶಾಲ ಮದರಾಸ್ ನಗರದಲ್ಲಿ ವಾದಕುಶಲಿಗಳಾದ ಶಾಸ್ತ್ರ ಸಂಪನ್ನರಿಗೆ ಅಭಾವವಂತೂ ಇರಲಿಲ್ಲ. ಮೊದಲ ದರ್ಜೆಯ ವಿದ್ವಾಂಸರೆಂದು ಗಣ್ಯರಾಗಿದ್ದ ಮಹಾಮಹೋಪಾಧ್ಯಾಯ ವೆಂಕಟ ಸುಬ್ಬಾಶಾಸ್ತ್ರಿ-ಕುಪ್ಪುಸ್ವಾಮಿ ಶಾಸ್ತ್ರಿಗಳಂತಹವರು ಇದ್ದರು. ಆದರೆ "ವಾಸಿಷ್ಠಮುನಿಗಳು ಸದಾಚಾರ ಸಂಪನ್ನರು : ತಪೋನಿಷ್ಠರು; ಅಸಮಾನ ಪಂಡಿತರು. ಅಂತಹವರೊಡನೆ ವಾದ ಸಲ್ಲದು" ಇದು ಅವರೆಲ್ಲರ ಅಭಿಪ್ರಾಯ. ಹಾಗಾಗಿ ಅಲ್ಲಿ ವಾದ ಸಭೆಯನ್ನೇರ್ಪಡಿಸಿ–ವಾದಕ್ಕಾಗಿ ವಾಸಿಷ್ಠರನ್ನು ವಿದ್ವಾಂಸರಂತೂ ಆಹ್ವಾನಿಸಿದ್ದಲ್ಲ ! ಮತ್ತೆ ಯಾರು ಈ ಆಹ್ವಾನ ನೀಡಿದವರು ? ಯಾರೋ ಒಬ್ಬ ತಿಳಿವಳಿಕೆ-ವಿವೇಚನೆಗಳಿಲ್ಲದ-ಅಗ್ಗದ ಹೆಸರುವಾಸಿ ಗಳಿಸುವ ಚಾಪಲ್ಯದ–ವ್ಯಕ್ತಿ ಈ ಸಭೆಯ ಸಂಬಂಧದ ವ್ಯವಸ್ಥೆಯ ತಾತ್ಕಾಲಿಕ ಕಾರ್ಯದರ್ಶಿ ಸ್ಥಾನವನ್ನು ಹೇಗೋ ಸಂಪಾದಿಸಿ ಈ ಉಪದ್ವ್ಯಾಪ ನಡೆಸಿಬಿಟ್ಟಿದ್ದ. ಅಪ್ರಸಿದ್ಧಿಗಿಂತ ಕುಪ್ರಸಿದ್ಧಿ ಮೇಲು ! ಅದೂ ಪುಕ್ಕಟೆಯಾಗಿ ಗಿಟ್ಟುವಂತಿದ್ದರೆ ಮತ್ತಷ್ಟು ಮೇಲು ! ಇಂತಹ ವಿಚಿತ್ರಧೋರಣೆಯ ವ್ಯಕ್ತಿ ಕೇವಲ ತನ್ನ ಹೆಸರಿನ ಪ್ರಚಾರಕ್ಕಾಗಿ ಮಾಡಿದ ಹುಂಬ ಕೆಲಸ ಇದು. ಆದರೆ ಅಧಿಕೃತವಾಗಿ ತೋರುವ ಆಹ್ವಾನ ಪತ್ರ ನೋಡಿ ಆಚಾರ್ಯವಾಸಿಷ್ಠರು ಅರುಣಾಚಲದಿಂದ ಅನಿವಾರ್ಯವಾಗಿ ಮದರಾಸಿಗೆ ಹೊರಟುಬರುವ ಶ್ರಮ ವಹಿಸಬೇಕಾಯಿತು.

ಈ ಪರಿಸ್ಥಿತಿಯಲ್ಲಿ ಅಲ್ಲಿಗೆ ಆಗಮಿಸಿದ ಪಂಡಿತ ಮದನ ಮೋಹನ ಮಾಳವೀಯರಿಗೆ ಈ ವಿವರಗಳೆಲ್ಲ ತಿಳಿದಾಗ ಅವರು "ಇದು ಸರ್ವಥಾ ಸಲ್ಲದು! ಇದು ಮೋಸ– ಕುಹಕ ! ಅವಹೇಳನಕರ !" ಎಂದು ಕೊಂಡರು. ತಾವೇ ವಾಸಿಷ್ಠರಿಗೆ ವಿಷಯ ತಿಳಿಸಿ ಮರುದಿನ "ಹಿಂದೂಹೈಸ್ಕೂಲ್" ಸಭಾಂಗಣದಲ್ಲಿ ಸಭೆಯೊಂದನ್ನು ವ್ಯವಸ್ಥೆಗೊಳಿಸಿದರು. ತಾವೇ ಸಂಸ್ಕೃತ ಪ್ರವಚನದ ಮೂಲಕ ಮಧ್ಯಸ್ಥಿಕೆ ನಡೆಸಿ ಅಂದು ರಾತ್ರಿ ಹಿಂದೂ ಮಹಾಸಭಾದ ಸಮ್ಮೇಳನದಲ್ಲಿ ಆಚಾರ್ಯ ವಾಸಿಷ್ಠರು ಪ್ರವಚನ ನೀಡುವಂತೆ ಕೇಳಿ ಕೊಂಡರು. ಅದರಂತೆ ಮಾಳವೀಯರ ಅಧ್ಯಕ್ಷತೆಯಲ್ಲಿ ನಡೆದ ಮಹಾ ಸಭೆಯಲ್ಲಿ "ಅಸ್ಪೃಶ್ಯತೆಯ" ಮೇಲೆ ಆಚಾರ್ಯ ವಾಸಿಷ್ಠರು ಮಾಡಿದ ಉದ್ಬೋಧಕ ಉಪನ್ಯಾಸವು ವಿಶೇಷ ಪ್ರಶಂಸೆಗೆ ಪಾತ್ರವಾಯಿತು.

ಮದರಾಸಿನಿಂದ ಅರುಣಾಚಲದ ತಮ್ಮ ಗುಹಾ ನಿವಾಸಕ್ಕೆ ಮರಳಿದ ವಾಸಿಷ್ಠ ಮುನಿಗಳು ವಿಭವ ಸಂವತ್ಸರದ ಕರ್ಕಾಟಕ ಮಾಸದವರೆಗೂ ತೀವ್ರವಾದ ತಪಸ್ಸು ನಡೆಸುತ್ತ ಇಂದ್ರಾಣಿ ಸಪ್ತಶತಿಯೇ ಮೊದಲಾದ ತಮ್ಮ ಕೃತಿಗಳ ಸಂಸ್ಕರಣ– ಇಂದ್ರ ಸಹಸ್ರನಾಮ ಮುಂತಾದ ಹೊಸ ರಚನೆಗಳಲ್ಲಿ ನಿರತರಾಗಿದ್ದರು.

ಪ್ರಕರಣ-4

"ಗುಣೀ ಗುಣಂ ವೇತ್ತಿ ನ ವೇತ್ತಿ ನಿರ್ಗುಣಃ"

(ಸದ್ಗುಣಗಳ ಮಹತ್ವಿಕೆಯನ್ನು ಗುಣವಂತ ಗ್ರಹಿಸಬಲ್ಲನೇ ಹೊರತು ಗುಣಹೀನ ಅವುಗಳನ್ನು ಗುರುತಿಸಲಾರ.)

ಛಾಯಾ ನ ಮೂರ್ಛತಿ ಮಲೋಪಹತ ಪ್ರಸಾದೇ
ಶುದ್ಧೇತು ದರ್ಪಣತಲೇ ಸುಲಭಾವಕಾಶಾ ॥ -ಶಾಕುಂತಲಾ-

(ಕನ್ನಡಿಯ ತಳ ಮಲಿನವಾಗಿದ್ದರೆ ವಸ್ತುವು ಅದರಲ್ಲಿ ಪ್ರತಿಬಿಂಬಿಸಲಾರದು. ಅದು ಪರಿಶುದ್ಧವಾಗಿದ್ದರೆ ಸರಿಯಾದ ಪ್ರತಿಬಿಂಬ ಕಾಣುತ್ತದೆ.)

ಮಹರ್ಷಿ ಅರವಿಂದರು ಒಬ್ಬ ಮಹಾಯೋಗಿಗಳೆಂಬ ಗೌರವ ಬುದ್ಧಿ ವಾಸಿಷ್ಠರಿಗೆ ಮೊದಲಿನಿಂದ ಇತ್ತು. ನಿಃಸಂಗತ್ವವನ್ನು ಸಾಧಿಸಿ ಏಕಾಂತನಿಷ್ಠರಾಗಿದ್ದ ಆ ಪ್ರಸಿದ್ಧ ವ್ಯಕ್ತಿಯನ್ನು ಸಂದರ್ಶಿಸುವ ಸದವಕಾಶ ಆಚಾರ್ಯರಿಗೆ ಕೂಡಿ ಬಂತು. ವಿಭವ ಸಂವತ್ಸರದಲ್ಲಿ ಅರವಿಂದ ಮಹರ್ಷಿಗಳ ಹುಟ್ಟು ಹಬ್ಬದ ಸಮಾರಂಭವಲ್ಲಿ ಅವರ ದರ್ಶನ ಪಡೆಯಲೆಂದು ಅರವಿಂದರಿಂದ ಉಪದಿಷ್ಟವಾದ ಯೋಗಮಾರ್ಗದ ಅಭ್ಯಾಸಿಗಳಾಗಿದ್ದ ತಮ್ಮ ಶಿಷ್ಯರುಗಳಾದ ಸುಧನ್ವ ಮತ್ತು ಕಪಾಲಿಗಳೊಡನೆ ವಾಸಿಷ್ಠರು ಪಾಂಡಿಚೆರಿಗೆ ಹೋದರು. ಇದೇ ಸಂದರ್ಭದಲ್ಲಿ ವಾಸಿಷ್ಠರ ಇನ್ನೊಬ್ಬ ಶಿಷ್ಯವೆಂಕಟರಾಮರೂ ಅರವಿಂದರ ದರ್ಶನಾಕಾಂಕ್ಷಿಗಳಾಗಿ ಅಲ್ಲಿಗೆ ಬಂದರು. ಅರವಿಂದರನ್ನು ಭೇಟಿಮಾಡಬೇಕಾದರೆ ಮೊದಲೇ ಅನುಮತಿ ಪಡೆದಿರಬೇಕೆಂಬುದು ಕಡ್ಡಾಯ. ಆದರೆ ಮಹಾನುಭಾವ ವಾಸಿಷ್ಠರಿಗೆ ಮಾತ್ರ ಅದು ಅನ್ವಯವಾಗಲಿಲ್ಲ. ತಮ್ಮ ಸಂಗಡಿಗರೊಡನೆ ವಾಸಿಷ್ಠ ಮುನಿಗಳು ಮಹರ್ಷಿ ಅರವಿಂದರ ಸಂದರ್ಶನ ಪಡೆದರು.

ಸಂದರ್ಶನದ ನಂತರ ವಾಸಿಷ್ಠಮುನಿಗಳು 15 ದಿನ ಅರವಿಂದಾಶ್ರಮದಲ್ಲಿಯೇ ಉಳಿದರು. ಆಶ್ರಮದ ನಿರ್ವಾಹಕರೂ-ಯೋಗ ಸಿದ್ಧರೂ-ಆಗಿ ಮೂರ್ತಿಮಂತ ಶಕ್ತಿದೇವತೆಯಂತ ಇದ್ದ ಶ್ರೀ ಮಹಾಮಾತೆಯವರ ಉಪಸ್ಥಿತಿಯಲ್ಲಿ ವಾಸಿಷ್ಠರು ಆಗಾಗ ಧ್ಯಾನ ಯೋಗವನ್ನಾಚರಿಸಿ ಅವರ ಅಭಿನಂದನೆಗೆ ಪಾತ್ರರಾದರು. ಮುಂದೆ ಯಾವಾಗ ಬೇಕಾದರೂ ಆಶ್ರಮಕ್ಕೆ ಭೇಟಿಕೊಡಬಹುದೆಂಬ ಗೌರವಪೂರ್ಣ ಅನುಮತಿ ವಾಸಿಷ್ಠರಿಗೆ ಲಭಿಸಿತು.

ಆಚಾರ್ಯರು ಅರವಿಂದಾಶ್ರಮದಲ್ಲಿದ್ದಾಗ ಅವರ ಶಿಷ್ಯ ಸುಬಂಧುವಿನ ಬಂಧುಗಳಾದ ಕೋದಂಡರಾಮ ಎಂಬ ಸಾಧಕರು ಯೋಗಗಳ ಪರಿಭೇದಗಳನ್ನು ತಿಳಿಯ ಹೇಳುವಂತೆ ಆಚಾರ್ಯ ವಾಸಿಷ್ಠರನ್ನು ಕೇಳಿಕೊಂಡರು. ತಪೋಮೂರ್ತಿ ವಾಸಿಷ್ಠರು ಕೇವಲ ಒಂದು ಘಂಟೆಯ ಅವಧಿಯಲ್ಲಿ 108 ಸೂತ್ರಗಳಿಂದ ಕೂಡಿದ 8 ವಿಭಾಗಗಳನ್ನುಳ್ಳ ಸರಳಶೈಲಿಯ "ತತ್ತ್ವಾನುಶಾಸನಂ" ಎಂಬ ಲಘುಗ್ರಂಥವನ್ನು ರಚಿಸಿಕೊಟ್ಟು ಅವುಗಳ ಅರ್ಥವನ್ನೂ ವಿವರಿಸಿ ಹೇಳಿದರು. ಕಾವ್ಯಕಂಠ ವಾಸಿಷ್ಠರ ಶಾಸ್ತ್ರೀಯ ಪರಿಪಾಠಿ ಕೂಡಾ ಹೃದಯಂಗಮವಾಗಿದ್ದಿತು. ಈ ಸೂತ್ರಗಳ ಶೈಲಿಯು ಜಿಜ್ಞಾಸುವಿಗೆ ಸುಲಭದಲ್ಲಿ ಅರ್ಥವಾಗುವಂತಿದೆ. ಯಾವ ಶ್ರಮವೂ ಇಲ್ಲದೆ ಆಶು ಧಾರೆಯಲ್ಲಿ ರಚಿತವಾದ ಈ ತತ್ತ್ವಾನುಶಾಸನದ 2 ಖಂಡಗಳನ್ನು ಮಾದರಿಗಾಗಿ ಈ ಮುಂದೆ ಕೊಡಲಾಗಿದೆ.

ಸಪ್ತಮ : ಖಂಡ : (7ನೆಯ ಖಂಡ)

1. ಅಥ ಯೋಗಾಃ । (ಯೋಗಗಳು)
2. ಫಲಾಪೇಕ್ಷರಹಿತಂ ಸತ್ಕರ್ಮ ಕರ್ಮಯೋಗಃ ।
   (ಯಾವುದೇ ಪ್ರತಿಫಲದ ಆಸೆ ಇಟ್ಟುಕೊಳ್ಳದೆ ಮಾಡುವ ಒಳ್ಳೆಯ ಕರ್ಮಗಳ ಅನುಷ್ಠಾನವೇ ಕರ್ಮಯೋಗ)
3. ಮನಸಾ ಮಂತ್ರಸ್ಯ ಧ್ಯಾನಂ ಧ್ಯಾನಯೋಗ ಃ ।
   (ಯಾವುದಾದರೂ ಮಂತ್ರವನ್ನು ಮನಸ್ಸಿನಲ್ಲಿಯೇ ಧ್ಯಾನ ಮಾಡುವುದು ಧ್ಯಾನಯೋಗ)
4. ವಾಯೋರ್ನಿಗ್ರಹೋ ಹಠಯೋಗ ಃ ।
   ವಾಯುವನ್ನು ನಿಗ್ರಹಿಸುವುದು ಹಠಯೋಗ)
5. ಚಿತ್ತವೃತ್ತಿನಿರೋಧೋ ರಾಜಯೋಗಃ ।
   (ಸಿಕ್ಕ ಸಿಕ್ಕಂತೆ ಹರಿದಾಡುವ ಮನಸ್ಸಿನ ವ್ಯಾಪಾರವನ್ನು ಹತೋಟಿಗೆ ಒಳಪಡಿಸುವುದೇ ರಾಜಯೋಗ)
6. ಆತ್ಮವಿಚಾರಣಂ ಜ್ಞಾನ ಯೋಗಃ ।
   (ಆತ್ಮವಸ್ತುವನ್ನು ಕುರಿತು ಚಿಂತನೆಯಲ್ಲಿ ನಿರತನಾಗಿರುವುದು ಜ್ಞಾನಯೋಗ)
7. ಅಹಂ ವೃತ್ತಿ ಮೂಲಾನ್ವೇಷಣಮೇವ ಆತ್ಮವಿಚಾರಣಂ । ನ ತು ಶಾಸ್ತ್ರಚರ್ಚಾ ।

(ಆತ್ಮ ವಿಚಾರವೆಂದರೆ "ನಾನು" ಎಂಬುದರ ವ್ಯಾಪಾರದ ಮೂಲವನ್ನು ಕಂಡು ಕೊಳ್ಳುವುದೇ ಹೊರತು ಶಾಸ್ತ್ರಾರ್ಥ ವಿಚಾರಗಳ ಚರ್ಚೆ ಅಲ್ಲ)

8. ಆತ್ಮ ಸಮರ್ಪಣಂ ಪ್ರಪತ್ತಿಯೋಗಃ ।
(ಎಲ್ಲವನ್ನೂ ಆತ್ಮ ವಸ್ತುವಿನಲ್ಲಿ ಸಮರ್ಪಿಸಿಕೊಳ್ಳುವುದು ಪ್ರಪತ್ತಿ ಯೋಗ.)

9. ರಾಜಯೋಗ_ಪ್ರಪತ್ತಿಯೋಗಪುರಸ್ಸರಂ ನಿತ್ಯಂ ಪ್ರವಹಂತ್ಯಾಃ ಶಕ್ತೇಃ ಮಹತಾ ಮೌನೇನ ಆತ್ಮನ್ಯಾವಕಾಶಂ ದತ್ವಾ ಪಂಚಾನಾಂ ಚ ಕೋಶಾನಾಂ ಅನವರತಂ ಚಿದಗ್ನಿನಾ ಸಂಸ್ಕರಣಂ ಅಮೃತಯೋಗಃ ।
(ರಾಜಯೋಗ_ಪ್ರಪತ್ತಿಯೋಗ ಪೂರ್ವಕ ಸದಾ ಶರೀರದಲ್ಲಿ ಹರಿಯುತ್ತಿರುವ ಶಕ್ತಿಗೆ ಮಹಾಮೌನದಿಂದ ಆತ್ಮ ಸ್ವರೂಪದಲ್ಲಿ ಅವಕಾಶ ಕಲ್ಪಿಸಿ ಚಿದಗ್ನಿಯಿಂದ ಅನ್ನಮಯಾದಿ ಪಂಚಕೋಶಗಳನ್ನು ನಿರಂತವಾಗಿ ಸಂಸ್ಕರಿಸುವುದು ಅಮೃತಯೋಗ)

10. ಅಸ್ಯಾಂಗಂ ಕಲ್ಪಸೇವಾ ಇತ್ಯೇಕೇ ।
(ಕಲ್ಪಸೇವಾ ಎಂಬುದು ಈ ಅಮೃತಯೋಗದ ಅಂಗವೆಂದು ಕೆಲವರ ಅಭಿಮತ.)

ಅಷ್ಟಮಃ ಖಂಡಃ ॥ (ಎಂಟನೆಯ ಖಂಡ)

1. ಅಥಾಽಮೃತಯೋಗೇ ಮಹಾಮೌನ ಸಾಧಿಕಾ ವಿದ್ಯಾಃ ।
(ಅಮೃತಯೋಗದಲ್ಲಿ ಮಹಾಮೌನವನ್ನು ಸಾಧಿಸುವ ವಿದ್ಯೆಗಳು ಹೀಗಿವೆ:_)

2. ಕೇವಲಂ ಸಪ್ರಸಾದೇನ ತಿಷ್ಠೇತ್ । ಸಾ ಭೂಮವಿದ್ಯಾ ॥
(ಪರಿಪೂರ್ಣ ಸಂತೋಷ ಸ್ಥಿತಿಯಲ್ಲೇ ಇರುವುದು ಭೂಮವಿದ್ಯೆ)

3. ಪ್ರಣವಂ ಧ್ಯಾಯೇತ್ ಕಂಠಕುಹರೇ ಸ್ಥಿರಮನಾ ಸೋದ್ಗೀಥ ವಿದ್ಯಾ ।
(ನಿಶ್ಚಲ ಮನಸ್ಸಿನಿಂದ ಕಂಠ ಸ್ಥಾನದಲ್ಲಿ ಪ್ರಣವ (ಓಂಕಾರ) ಧ್ಯಾನ ಮಾಡುವುದು ಉದ್ಗೀಥ ವಿದ್ಯೆ)

4. ಗತ್ಯಾಗತಿ ಪ್ರತ್ಯವೇಕ್ಷಣದ್ವಾರಾ ಪ್ರಾಣವಾಯುಂ ಧ್ಯಾಯೇತ್ ಸಾ ಸಂವರ್ಗ ವಿದ್ಯಾ॥
(ಉಸಿರಾಟದಲ್ಲಿ ಹೊರಬಿಡುವುದು-ಒಳಕ್ಕೆ ಎಳೆದುಕೊಳ್ಳುವುದು-ಹೃದಯದಲ್ಲಿ ನಿಲ್ಲಿಸಿಕೊಳ್ಳುವುದು-ಈ ಮೂಲಕ ಪ್ರಾಣವಾಯುವಿನ ಧ್ಯಾನವೇ ಸಂವರ್ಗ ವಿದ್ಯೆ)

5. ತೀವ್ರ ನಿರ್ವಿಷಯಾಲೋಚನಜ್ಞಂ ಊಷ್ಮಾಣಂ ಧ್ಯಾಯೇತ್। ಸಾ ಜ್ಯೋತಿರ್ವಿದ್ಯಾ ।
(ಯಾವ ಯೋಚನೆಯೂ ಮನಸ್ಸಿನಲ್ಲಿ ಇಲ್ಲದ (ಕಠಿಣವಾದ ವಿಷಯ ಹೀನ) ಸ್ಥಿತಿಯಿಂದ ಉದ್ಭವಿಸುವ ಉಷ್ಣತೆಯನ್ನು ಧ್ಯಾನ ಮಾಡುವುದು ಜ್ಯೋತಿರ್ವಿದ್ಯೆ)

6. ರಸಂ ಧ್ಯಾಯೇತ್ ಜಿಹ್ವಾಯಾಂ ಸ್ಥಿರಮನಾಃ ಸಾ ವಾರುಣೀ ವಿದ್ಯಾ ।
(ಸ್ಥಿರಚಿತ್ತನಾಗಿ ನಾಲಗೆಯಲ್ಲಿ ರಸವನ್ನು (ಪರಬ್ರಹ್ಮನನ್ನು (ರಸೋ ವೈಸಃ) ಎಂಬ ತೈತ್ತಿರೀಯ ಉಪನಿಷದ್ವಾಕ್ಯದಂತೆ) ಧ್ಯಾನ ಮಾಡುವುದು ವಾರುಣೀ ವಿದ್ಯೆ)

7. ಉಪಜಿಹ್ವಾಯಾಂ ಇಂದ್ರಯೋನಿ ವಿದ್ಯಾ ।
(ಅದೇ ರೀತಿ ಕಿರುನಾಲಿಗೆಯಲ್ಲಿ ಮಾಡುವ ಧ್ಯಾನವೇ ಇಂದ್ರಯೋನಿ ವಿದ್ಯೆ)

8. ದೃಷ್ಟಿಂ ದ್ರಷ್ಟಾರಂ ವಾ ಧ್ಯಾಯೇತ್ । ಸೋಽಪಕೋಸಲ ವಿದ್ಯಾ
(ದೃಷ್ಟಿ ಅಥವಾ ದ್ರಷ್ಟಾರನನ್ನು ಕುರಿತು ಧ್ಯಾನಿಸುವುದು ಉಪಕೋಸಲ ವಿದ್ಯೆ)

ಏವಂ ಔಪನಿಷದ ವಿದ್ಯಾಃ ಸಂಕ್ಷಿಪ್ಯ ತಾಸಾಂ ಪ್ರತ್ಯೇಕಂ ಸ್ವರೂಪಂ ನಿರೂಪಿತಂ ।

ಈ ರೀತಿ ಉಪನಿಷತ್ಸಂಬಂಧವಾದ ವಿದ್ಯೆಗಳನ್ನು ಸಂಕ್ಷೇಪಗೊಳಿಸಿ ಅವುಗಳ ಪ್ರತ್ಯೇಕ ಸ್ವರೂಪವನ್ನು ನಿರೂಪಿಸಲಾಗಿದೆ.

ಅರವಿಂದಾಶ್ರಮದಿಂದ ಅರುಣಾಚಲಕ್ಕೆ ವಾಪಸುಬಂದ ವಾಸಿಷ್ಠರು ತಪಸ್ಸನ್ನು ಮುಂದುವರಿಸಿದರು. ಆವಶ್ಯಕತೆ ಉಂಟಾದಾಗ ಮಹರ್ಷಿ ಅರವಿಂದರಿಗೆ ಅಥವಾ ಮಾತೆಯವರಿಗೆ ಪತ್ರಬರೆಯುತ್ತಿದ್ದರು. ಇವರು ಬರೆದ ಪತ್ರಗಳನ್ನು ಮಾತೆಯವರು ಆಸಕ್ತಿಯಿಂದ ಗಮನಿಸಿ ಸೂಕ್ತ ವ್ಯವಸ್ಥೆ ಮಾಡುತ್ತಿದ್ದರು.

ಕೆಲಕಾಲ ಅರುಣಾಚಲದಲ್ಲಿ ವಾಸವಿದ್ದು ವಾಸಿಷ್ಠರಿಗೆ ಪರಿಚಿತರಾಗಿದ್ದವರೊಬ್ಬರು ಒಮ್ಮೆ ಅರವಿಂದರ ದರ್ಶನ ಪಡೆಯಲು ಪಾಂಡಿಚೆರಿಗೆ ಹೋಗಿ ಪ್ರಯತ್ನಿಸಿ ಸಾಧ್ಯವಾಗದೆ ವಾಪಸು ಬಂದು ವಾಸಿಷ್ಠಮುನಿಗಳಲ್ಲಿ ವಿಷಯ ಬಿನ್ನವಿಸಿಕೊಂಡರು. ವಾಸಿಷ್ಠರು "ನಾನು .... ಎಂಬ ಈತನನ್ನು ಬಹುಕಾಲದಿಂದ ಚೆನ್ನಾಗಿ ಬಲ್ಲೆ. ಭಗವಾನ್ ಅರವಿಂದರ ದರ್ಶನ ಪಡೆಯಲು ಈತನಿಗೆ ಅರ್ಹತೆ ಇದೆ." ಇತಿ ತಮ್ಮ ಗರ್ಭ ಸಂಜಾತನಲ್ಲದ ಮಗ.

ವಾಸಿಷ್ಠ ಗಣಪತಿ.

ಹೀಗ್ಗೆ ಎರಡೇ ಸಾಲುಗಳ ಪರಿಚಯ ಪತ್ರವೊಂದನ್ನು ಆ ವ್ಯಕ್ತಿಗೆ ನೀಡಿ ಕಳಿಸಿದರು. ಈ ಸಲ ಆತನಿಗೆ ಬಹು ಸುಲಭವಾಗಿ ಅರವಿಂದರ ದರ್ಶನ ಲಭಿಸಿತು. ಅಷ್ಟೇ ಅಲ್ಲ ! ಆತ ಆ ಆಶ್ರಮದಲ್ಲಿಯೇ ಇರುವಂತೆ ಆಯಿತು.

ಮತ್ತೊಮ್ಮೆ ವಾಸಿಷ್ಠಮುನಿಗಳ ಅನುಯಾಯಿ ಹೇಮಸ್ವಾಮಿಯೆಂಬವರು ಸಹ ಹೀಗೆಯೇ ವಾಸಿಷ್ಠ ಮುನಿಗಳವರಿಂದ ಪರಿಚಯ ಪತ್ರ ಪಡೆದುಕೊಂಡು ಹೋಗಿ ಭಗವಾನ್ ಅರವಿಂದರ ದರ್ಶನ ಪಡೆದರು. ವಾಸಿಷ್ಠರು ಅರವಿಂದಾಶ್ರಮದಲ್ಲಿ ಮಹಾಮಾತೆಯವರೊಡನೆ ಧ್ಯಾನಸ್ಥರಾಗಿ ಕುಳಿತುಕೊಳ್ಳುತ್ತಿದ್ದುದನ್ನೂ ಆಗ್ಯೆ ತಾವು ಪಡೆದ ಅನುಭೂತಿಯನ್ನೂ ಈ ಪರಿಚಯ ಪತ್ರದಲ್ಲಿ ಜ್ಞಾಪಿಸಿಕೊಂಡಿದ್ದಾರೆ :-

ಭಗವತೀ ಶ್ರೀ ಮಾತೆಯವರೇ !

ದುರದೃಷ್ಟವಶಾತ್ ನಾನು ತಮ್ಮ ಚರಣ ಸನ್ನಿಧಿಯಿಂದ ದೂರದಲ್ಲಿದ್ದರೂ ನಿರಂತರವಾಗಿ ತಮ್ಮ ಪಾದಾಂಗುಷ್ಠವನ್ನು ಸ್ಪರ್ಶಿಸುತ್ತಿರುವ ಸ್ಥಿತಿಯನ್ನೇ ನೆನೆದುಕೊಳ್ಳುತ್ತಿದ್ದೇನೆ. ಆ ದಿನ ಅಲ್ಲಿ ನನಗೆ ಲಭಿಸಿದ ದಿವ್ಯತೇಜೋದರ್ಶನ ನನ್ನ ಇಡೀ ಬದುಕಿನಲ್ಲಿ ಮಹತ್ತರವಾದುದು. ನಾನು ಧನ್ಯನಾದೆ. ಆ ದಿವ್ಯ ಪ್ರಕಾಶವೇ ನನ್ನ ಎಲ್ಲ ಆಶೆ-ಆಕಾಂಕ್ಷೆಗಳನ್ನು ದೂರ ಮಾಡಿ ಅಂತರಂಗವನ್ನು ಬೆಳಗಲಿ. ದೂರದಲ್ಲಿರುವ ಈ ಮಗನನ್ನು ಮರೆತು ಬಿಡಬೇಡಿ. ತಾಯೀ! ಹತ್ತಿರವೇ ಇರುವಂತೆ ಭಾವಿಸಿ ಅನುಗ್ರಹಿಸೋಣವಾಗಲಿ.

ಇನ್ನೊಂದು ವಿಜ್ಞಾಪನೆ :- ಮಹರ್ಷಿ ಅರವಿಂದರಲ್ಲಿ ದೃಢ ಭಕ್ತಿ-ಭಗವತಿ ಶ್ರೀ ಮಾತೆಯವರಲ್ಲಿ ನಿಶ್ಚಲ ವಿಶ್ವಾಸ ಬೆಳೆಸಿ ಕೊಂಡಿರುವ ನನ್ನ ಶಿಷ್ಯ ಹೇಮಸ್ವಾಮಿ ಅಯ್ಯರ್* ಶ್ರೀ ಮಾತೆಯವರ ದರ್ಶನ ಪಡೆಯುವ ಹಂಬಲದಿಂದ ತಮ್ಮ ಆಶ್ರಮಕ್ಕೆ ಪತ್ರ ಬರೆದು ಕೊಂಡಿದ್ದಾರೆ. ದೇವಿ ! ದಯಮಾಡಿ ಇವರಿಗೆ ದರ್ಶನ ನೀಡೋಣವಾಗಲಿ ! ಈ ಸಾಧು ವ್ಯಕ್ತಿಯ ಆಸೆ ಫಲಿಸಲಿ !

ಇತಿ

ತಮ್ಮ ನಿತ್ಯಭಕ್ತ-ಅಂತರಂಗ ಪುತ್ರ

ವಾಸಿಷ್ಠಗಣಪತಿಃ

* (ಇವರು ಗೋದಾವರೀ ಮಂಡಲದಲ್ಲಿ ಪೀಠಾಪುರಂ ಮಹಾರಾಜಾ ಕಲಾಶಾಲೆಯ ಪ್ರಾಂಶುಪಾಲರಾಗಿದ್ದವರು. ಬಾಲ್ಯದಿಂದ ವಾಸಿಷ್ಠಮುನಿಗಳ ಶಿಷ್ಯ

ರಾಗಿದ್ದ ಇವರು ವಾಸಿಷ್ಠರ ಕುಟುಂಬಕ್ಕೆ ಹಲವು ವರ್ಷಗಳಿಂದ ಅನೇಕ ರೀತಿಯಲ್ಲಿ ಸಹಾಯ–ಸಹಕಾರ ಸಲ್ಲಿಸಿದವರು. ಇವರ ಅಣ್ಣ ಏಕಾಮ್ರ (ಏ. ಆರ್. ದೊರೆಸ್ವಾಮಿ) ಅಯ್ಯರ್ ರಮಣಾಶ್ರಮದಲ್ಲಿಯೇ ಇದ್ದವರು)

ಪ್ರಕರಣ-5

ಶರೀರ ಮಾದ್ಯಂ ಖಲು ಧರ್ಮ ಸಾಧನಂ ॥

ಕುಮಾರ ಸಂಭವಂ-

(ಧರ್ಮ ಸಾಧನೆಗೆ ದೇಹವೇ ಮೊದಲ ಉಪಕರಣ)

ಸದ್ಯ ಏವ ಸುಕೃತಾಂ ಹಿ ಪಚ್ಯತೇ ಕಲ್ಪವೃಕ್ಷ ಫಲಧರ್ಮಿಕಾಂಕ್ಷಿತಂ ।

(ಪುಣ್ಯವಂತರ ಆಸೆಗಳು ಕಲ್ಪವೃಕ್ಷದಂತೆ ನೆನೆಸಿದ ತಕ್ಷಣವೇ ಫಲನೀಡುತ್ತವೆ)

ವಿಭವ ಸಂವತ್ಸರದಲ್ಲಿ ಚೂತ ಗುಹೆಯಿಂದ ನಗರಕ್ಕೆ ಬಂದ ಗಣಪತಿಮುನಿಗಳು ಪುನಃ ಅಲ್ಲಿಗೆ ಹೋಗಲಿಲ್ಲ. ಶ್ರೀರಮಣಾಶ್ರಮಕ್ಕೆ ಸಮೀಪವಿರುವ ಹಲಸಿನ ತೋಪಿನಲ್ಲಿ (ಪನಸೋಪವನ) ಇದ್ದುಕೊಂಡು ಅವಕಾಶವಾದಾಗಲೆಲ್ಲಾ ತಮ್ಮ ಗುರುವರ್ಯ ರಮಣ ಮಹರ್ಷಿಗಳ ಸನ್ನಿಧಿಗೆ ಬಂದು ಕುಳಿತಿರುತ್ತಿದ್ದರು. ಹೀಗೆಯೇ 4ತಿಂಗಳು ಕಳೆಯಿತು. ನಂತರ ವಾಸಿಷ್ಠಮುನಿಗಳ ದೇಹ ಪ್ರಕೃತಿ ಮೇಲಿಂದ ಮೇಲೆ ಕೆಡಲಾರಂಭಿಸಿತು. ವಯಸ್ಸು ಹೆಚ್ಚುತ್ತಿದ್ದಂತೆ ಆಚಾರ್ಯರ ಶರೀರ ಈ ಪ್ರದೇಶದ ಅಗಾಧ ಸೆಖೆ-ತಾಪಗಳನ್ನು ಸಹಿಸಲಾರದೇ ಹೋಯಿತು. ಅವರ ಮನಸ್ಸಿಗೆ ಇದ್ದ ಸ್ಥೈರ್ಯದ ನೂರರಲ್ಲೊಂದು ಭಾಗ ಸ್ಥೈರ್ಯ ಕೂಡಾ ಅವರ ದೇಹಕ್ಕೆ ಇರಲಿಲ್ಲ. ಅದರಲ್ಲೂ ವಿಶೇಷವಾಗಿ ಗ್ರೀಷ್ಮ ಋತುವಿನಲ್ಲಿಯಂತೂ ತೀವ್ರತಾಪದ ಅನುಭವವಾಗುತ್ತಿತ್ತು, ಕಳೆದ 5ವರ್ಷಗಳಲ್ಲಿ ಸೆಕೆಗಾಲ ಬಂದಾಗ ಅವರ ದೇಹವನ್ನು ವಿವಿಧ ಶೈತ್ಯೋಪಚಾರಗಳಿಂದ ಹತೋಟಿಯಲ್ಲಿಡಬೇಕಾಗುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಬೆಂದು ಬವಣೆ ಪಡುವದಕ್ಕಿಂತಲೂ ದೂರದ ಯಾವುದಾದರೂ ತಂಪು ಹವೆಯ ಪ್ರದೇಶಕ್ಕೆ ಹೋಗಿ ನೆಲೆಸುವುದು ಉತ್ತಮವೆಂದು ವಾಸಿಷ್ಠರು ಆಲೋಚಿಸುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಉತ್ತರ ಸಹ್ಯಾದ್ರಿ ಪ್ರಾಂತದ ಶ್ರೀಗೋಕರ್ಣಕ್ಷೇತ್ರ ವಾಸಿಗಳಾಗಿದ್ದ ಶ್ರೀದೈವರಾತರ ಸಂಬಂಧಿಗಳಿಬ್ಬರು ಆಚಾರ್ಯ ವಾಸಿಷ್ಠರ ಬಳಿಗೆ ಬಂದು ಗೋಕರ್ಣಕ್ಕೆ ಬರುವಂತೆ ಪ್ರಾರ್ಥಿಸಿಕೊಂಡರು. ಆಗ ವಿಭವ ಸಂವತ್ಸರದ ಕೊನೆಯ ದಿನಗಳು. ಆಚಾರ್ಯ ವಾಸಿಷ್ಠರು ಆ ಆಗಂತುಕರೊಡನೆ ಹೊರಟು ಗೋಕರ್ಣಕ್ಕೆ ತಲುಪಿದಾಗ

ದೈವರಾತರು ಊರಲ್ಲಿರಲಿಲ್ಲ. ಆದರೆ ವಾಸಿಷ್ಠರಲ್ಲಿ ದೃಢ ಭಕ್ತಿಯುಳ್ಳ ದೈವರಾತರ ಶಿಷ್ಯ–ಬಂಧು ವರ್ಗದವರು ಗೌರವ–ಆತ್ಮೀಯತೆಗಳಿಂದ ಸ್ವಾಗತಿಸಿ ಅವರ ವಸತಿ-ಮತ್ತಿತರ ಅವಶ್ಯಕತೆಗಳಿಗೆ ಸೂಕ್ತ ವ್ಯವಸ್ಥೆ ಮಾಡಿದರು.

ಈ ಸಂದರ್ಭದಲ್ಲಿ ದೈವರಾತರು ಕೃಷ್ಣಾ ತೀರದಲ್ಲಿ ತಪೋನಿರತರಾಗಿರುವುದನ್ನು ತಿಳಿದ ವಾಸಿಷ್ಠರು ಅವರ ವಿಳಾಸಕ್ಕೆ ಪತ್ರ ವ್ಯವಹಾರ ನಡೆಸಿದರು. ಆಚಾರ್ಯ ಕಾವ್ಯಕಂಠರ ರಮಣೀಯ ಭಾಷಾಶೈಲಿ, ಶಿಷ್ಯ ವರ್ಗದವರಲ್ಲಿ ಅವರಿಗೆ ಇದ್ದ ವಿಶೇಷ ವಾತ್ಸಲ್ಯ–ಆದರಗಳನ್ನು ಈ ಪತ್ರಗಳಲ್ಲಿ ನೋಡಬಹುದು.

18–3–1936
ಫಾಲ್ಗುನ ಶುಕ್ಲ ಅಷ್ಟಮಿ

ವತ್ಸ ದೈವರಾತ !

ನಾನೀಗ ಗೋಕರ್ಣಕ್ಕೆ ಬಂದಿದ್ದೇನೆ. ನೀನು ಪಾವನ ಕೃಷ್ಣಾ ತೀರದಲ್ಲಿ ತೀವ್ರ ತಪಸ್ಸಿನಲ್ಲಿ ತೊಡಗಿರುವಿಯೆಂಬುದನ್ನು ತಿಳಿದು ನನ್ನ ಅಂತರಾತ್ಮನಿಗೆ ಸಂತೋಷವಾಗಿದೆ. ನಿನ್ನಲ್ಲಿ ಅಡಗಿರುವ ಸಹಜ ಶಕ್ತಿವಿಶೇಷ–ಅನೇಕ ಜನ್ಮಗಳಲ್ಲಿ ನೀನು ಸಂಪಾದಿಸಿಕೊಂಡು ಬಂದ ಜ್ಞಾನ ವಿಶೇಷ–ಪುರಾತನ ಮಹರ್ಷಿ ಪರಂಪರೆಯಿಂದ ಹರಿದು ಬಂದಿರುವ ಶ್ರದ್ಧಾ ವಿಶೇಷ ಇವು ಮೂರೂ ತಪಸ್ಸಿನಲ್ಲಿ ತೊಡಗಿರುವ ನಿನ್ನಲ್ಲಿ ಹೆಚ್ಚಿನ ಸ್ಫೂರ್ತಿ–ಉತ್ಸಾಹಗಳನ್ನು ತುಂಬಲಿ. ನಾನು ಬಹುಶಃ ಮೂರು ತಿಂಗಳ ಈ ಪ್ರದೇಶದಲ್ಲಿ ಇರುತ್ತೇನೆ. ನಿನ್ನನ್ನು ನೋಡುವ ಹಂಬಲ ಬಹಳವಾಗಿ ಇದೆ. ಆದರೆ ಅದಕ್ಕಾಗಿ ನಿನ್ನ ಗಾಢ ತಪಸ್ಸಿಗೆ ಯಾವ ಆತಂಕವನ್ನೂ ಉಂಟುಮಾಡಲಾರೆ. ನೀನು ನನಗೆ ಅತ್ಯಂತ ಆತ್ಮೀಯನೇ ಹೌದು. ಆದರೆ ನಿನಗಿಂತ ನಿನ್ನ ತಪಸ್ಸಾಧನೆ ನನಗೆ ಅತ್ಯಂತ ಪ್ರಿಯವಾದುದು. ನಾನು ಇಲ್ಲಿಗೆ ಬಂದಿರುವುದು ಯಾವ ರೀತಿಯಿಂದಲೂ ನಿನಗೆ ತೊಂದರೆಯುಂಟುಮಾಡಬಾರದು. ಇದು ನನ್ನ ಪ್ರೀತಿ ಪೂರ್ವಕ ನಿರ್ದೇಶನ. ತಪ್ಪದೆ ಉತ್ತರ ಬರೆ. ಒಂದು ವೇಳೆ ಈಗಲೇ ನೀನು ಹೊರಟು ಬರುವುದರಿಂದ ನಿನ್ನ ತಪಸ್ಸಾಧನೆಗೆ ಯಾವ ಅಡ್ಡಿಯೂ ಆಗುವುದಿಲ್ಲವೆಂದಾದರೆ ನಿನಗೆ ನನ್ನ ಅಂತರಂಗ ಪೂರ್ವಕ ಸ್ವಾಗತವಿದೆ. ಆದರೆ ನಮಗೆ ಬೇರೆಲ್ಲದಕ್ಕಿಂತಲೂ ತಪಸ್ಸು ಅತ್ಯಂತ ಪ್ರಿಯವೂ ಅಮೂಲ್ಯವೂ ಆಗಿದೆ. ನಿನ್ನ ತಪಸ್ಸಿಗೆ ಲವ–ಲೇಶ ತೊಂದರೆಯಾಗುವುದಿದ್ದರೂ ನೀನು ಅಲ್ಲಿಂದ ಬರುವುದು ಬೇಡ. ಅಂತಹ ಸಂದರ್ಭದಲ್ಲಿ ನಾನು ಇಲ್ಲಿಂದ ಹೊರಟ ಮೇಲೆ ತಪೋನಿರತನಾಗಿರುವ ನಿನ್ನನ್ನು ನೋಡಿಯೇ ಭಗವಾನ್ ರಮಣರ ಸಾನ್ನಿಧ್ಯವನ್ನು

ತಲುಪುತ್ತೇನೆ. ನನ್ನನ್ನು ಇಲ್ಲಿಯೇ ಉಳಿಸಿಕೊಳ್ಳಬೇಕೆಂಬುದು ಇಲ್ಲಿಯ ಕೆಲವರ ಆಸೆ. ಆ ಪ್ರಯತ್ನವೇನಾದರೂ ಫಲಿಸಿದರೆ ಇಲ್ಲಿಯೇ ನಾವಿಬ್ಬರೂ ಕಲೆತು ತಪಸ್ಸು ನಡೆಸುವ ಅವಕಾಶವುಂದೆ ಒದಗಲೂಬಹುದು,

ಶ್ರದ್ಧಾ-ಸೋಮಾ ಇವರುಗಳೂ, ನಿನ್ನ ಪ್ರೀತಿಯ ಗೋವುಗಳೂ ಕ್ಷೇಮ.

ಇತಿ ನಿನ್ನ ಪುರೋಭಿವೃದ್ಧಿಯನ್ನಾಶಿಸುವ

-ವಾಸಿಷ್ಠ ಗಣಪತಿ-

ಆಹಾರ ಸೇವನೆಯನ್ನೇ ತ್ಯಜಿಸಿ ಕಠಿಣ ತಪಸ್ಸಿನಲ್ಲಿ ನಿರತರಾಗಿದ್ದ ದೈವರಾತ ರಿಂದ ವಾಸಿಷ್ಠರಿಗೆ ಪ್ರತ್ಯುತ್ತರ ಪತ್ರ ಬಂದಿತು. ಆ ಪತ್ರ ಬರುವುದರೊಳಗಾಗಿಯೇ ಗೋಕರ್ಣ ಪ್ರಾಂತ್ಯದ ಬೇಸಿಗೆಯ ತಾಪವನ್ನು ತಾಳಲಾರದ ವಾಸಿಷ್ಠರ ಶರೀರವು ತಪಸ್ಸಿಗೆ ಆಂತಂಕಕಾರಿಯಾದ ರೋಗಗಳಿಗೆ ಗುರಿಯಾಯಿತು. ಆದರೆ ದೈವರಾತರ ಸಹೋದರರು ನಡೆಸಿದ ಪರಿಣಾಮಕಾರೀ ಚಿಕಿತ್ಸೆ-ಶುಶ್ರೂಷೆಗಳಿಂದ ಪುನಃ ಆರೋಗ್ಯ ಗಳಿಸಿದ ವಾಸಿಷ್ಠರು ದೈವರಾತರಿಗೆ ಹೀಗೆ ಉತ್ತರ ಬರೆದರು: "ಯೋಗ ವನ್ನು ಅನುಷ್ಠಾನ ಮಾಡುವಾಗ ನಿರಾಹಾರದ ನಿಯಮವನ್ನು ವಿಧಿಸಿಕೊಳ್ಳುವುದು ಯುಕ್ತವಲ್ಲ. ನಮಗೆ ತಪಸ್ಸು ಹೇಗೆ ಪ್ರಿಯವೋ ಹಾಗೆಯೇ ತಪಸ್ಸಾಧನವಾದ ಶರೀರ ಸ್ವಾಸ್ಥ್ಯ ಅದಕ್ಕಿಂತ ಪ್ರಿಯತಮವಾದುದು. ನನ್ನ ತಪೋ ನಿಯಮಗಳಿಗೆ ವಿಘ್ನಗಳು ಉಂಟಾಗುತ್ತಿದ್ದರೂ ತಪಸ್ಸೆಂಬುದು ಸಹಜವ್ಯಾಪಾರವಾಗಿರುವ ನನಗೆ ಅತ್ಯಂತ ಪ್ರಿಯವಾದ ನಿನ್ನ ಆಕೃತಿ ಆಗಾಗ ನೆನಪಿಗೆ ಬರುತ್ತದೆ. ಅದಕ್ಕೆ ಶುಭವಾಗಲಿ. ನನ್ನ ತಪಸ್ಸಿಗೆ ಉಂಟಾದ ವಿಘ್ನಗಳು ಹೀಗಿವೆ :- ನನ್ನ ದೇಹ ಜ್ವರ ಪೀಡಿತವಾಯಿತು. ಆದರೆ ವತ್ಸ ಸೀತಾರಾಮನ (ದೈವರಾತರ ಸಹೋದರ) ಚಿಕಿತ್ಸೆಯಿಂದ ವಾಸಿಯಾಗಿದೆ. ಕಣ್ಣಿನ ಬೇನೆ ಕಾಣಿಸಿ ಕೊಂಡಿತು. ಅದೂ ಕೂಡ ಈಗ ಬಹುಮಟ್ಟಿಗೆ ಮಾಯವಾಗಿದೆ. ಸರ್ಪ ಸುತ್ತು ಪ್ರಾರಂಭವಾಯಿತು. ಈ ಕ್ಷುದ್ರ ವ್ಯಾಧಿಯೂ ಸಹ ಇಷ್ಟರಲ್ಲಿಯೇ ನಿವಾರಣೆಯಾದೀತು. ಕಾರ್ಯ ಸಮರ್ಥನಾದ ಇಂದ್ರನೇ ರಕ್ಷಣೆಗೆ ಇರುವನಷ್ಟೇ ! ನಿನ್ನ ತಪಸ್ಸು ಮುನ್ನಡೆಯಲಿ! ಇಷ್ಟಸಿದ್ಧಿಯುಂಟಾಗಲಿ !"

ಕಾಹಿಲೆಯಿಂದ ಸಂಪೂರ್ಣ ಗುಣ ಹೊಂದಿದ ವಾಸಿಷ್ಠರು ದೈವರಾತ ಸೀತಾ ರಾಮರ ಭಕ್ತಿ-ಶ್ರದ್ಧಾ ಪೂರ್ಣ ಮನವಿಯಂತೆ ಗೋಕರ್ಣವನ್ನು ಬಿಟ್ಟು ತಂಪು ಹವೆಯ ಸ್ಥಳವಾದ "ಕುಳುವೆ"ಗೆ (ದೈವರಾತ ಸೀತಾರಾಮರ ವಾಸಸ್ಥಳ) ಹೊರಟರು. ಪ್ರಯಾಣ ಮಧ್ಯದಲ್ಲಿಯೇ ದೈವರಾತರಿಗೆ ಈ ರೀತಿ ಪತ್ರ ಬರೆದರು:-

ವತ್ಸ ದೈವರಾತ !　　　　　　　　　　　　　　　　　　15-5-36.

ನಿನ್ನ ಪತ್ರತಲುಪಿದೆ. ತಪೋನುಷ್ಠಾನದಲ್ಲಿ ನೀನು ಯಥೋಚಿತ ಆಹಾರ ನಿಯಮ ಅಳವಡಿಸಿಕೊಂಡುದು ಸಂತೋಷದ ಸಂಗತಿ. ಬ್ರಾಹ್ಮಣನಾದವನಿಗೆ ಕ್ಷೀರ ಪಾನ ನಿಯಮ ಉತ್ತಮವಾದುದು. ಶೀಘ್ರವಾಗಿಯೇ ಭಗವಾನ್ ಆತ್ರೇಯ (ದತ್ತಾತ್ರೇಯ)ನು ನಿನಗೆ ಪ್ರಸನ್ನನಾಗಲಿ !
ನಿನ್ನ ತಪಸ್ಸು ಅಭಿವೃದ್ಧಿ ಹೊಂದಲಿ.

ಇಂತು ಸದಾ ನಿನ್ನ ಗೆಲುವನ್ನು ಹಾರೈಸುವ
ವಾಸಿಷ್ಠ.

ಪ್ರಕರಣ-6

-ಶಿರಸಿ ವಾಸ-

ಕಸ್ಮೈ ನಾಽಯಂ ಕಮಲನಯನೆ ರೋಚತೇಽರಣ್ಯ ಭಾಗಃ ॥

ಹೇ ! ಕಮಲ ನಯನೆ : ಈ ವನ ಪ್ರದೇಶವು ಯಾರಿಗೆ ತಾನೇ ರುಚಿಸು ವುದಿಲ್ಲ?)

ಮಹೇಂದ್ರಂ ವೈ ಪ್ರಪದ್ಯಸ್ವ ಸ ತೇಽಸ್ತ್ರಾಣಿ ಪ್ರದಾಸ್ಯತಿ ॥

-ಮಹಾಭಾರತ-ವನಪರ್ವ-

(ನೀನು ಮಹೇಂದ್ರನ ಒಲುಮೆಯನ್ನು ಸಂಪಾದಿಸು. ಅವನು ನಿನಗೆ ದಿವ್ಯಾ ಸ್ತ್ರಗಳನ್ನು ಕರುಣಿಸುತ್ತಾನೆ.)

ಉತ್ತರ ಸಹ್ಯಾದ್ರಿಯ ಶಿರೋ ಭಾಗದಂತೆ ತೋರುವ "ಶಿರಸಿ" ಎಂಬ ಪಟ್ಟಣವೊಂದಿದೆ. ಉತ್ತರ ಕರ್ನಾಟಕದ ಜೀವನಾಡಿಯಾದ ಈ ಊರು ಸಮುದ್ರ ಮಟ್ಟದಿಂದ 2ಸಾವಿರ ಅಡಿ ಎತ್ತರದಲ್ಲಿದ್ದು ಹತ್ತು ಸಹಸ್ರ ಜನ ಸಂಖ್ಯೆ (1936 ರಲ್ಲಿ)ಯಿಂದ ಕೂಡಿದೆ. ಈ ಪ್ರಾಂತ್ಯದ ಮುಖ್ಯ ಕೃಷಿ ಉತ್ಪನ್ನಗಳಾದ ಅಡಿಕೆ-ಮೆಣಸು-ಏಲಕ್ಕಿಗಳ ವ್ಯಾಪಾರ ವಹಿ ವಾಟುಗಳಿಗೆ ಇದೇ ಮುಖ್ಯ ಕೇಂದ್ರ. ಈ ಸ್ಥಳ ಲಕ್ಷ್ಮಿಯ (ಸಂಪತ್ತಿನ) ನೆಲೆಯಾಗಿರುವುದರ ಜೊತೆಗೆ ಸರಸ್ವತಿಯ (ವಿದ್ಯಾವಂತರ)ನೆಲೆಯೂ ಆಗಿ ಹೆಸರು ಪಡೆದಿದೆ.

ದಟ್ಟವಾದ ಕಾಡು, ಮನೋಹರವಾದ ತೋಟ-ತುಡಿಕೆಗಳು, ಆಲುಗಳ ನಡುವೆ ಅಡಗಿರುವ ಕೇವಲ ಎರಡೋ—ಮೂರೋ ಮನೆಗಳ ಹಳ್ಳಿಗಳು, ನೀರಿನ ಝರಿಗಳು ಹೀಗೆ ಈ ಪ್ರದೇಶ ಸ್ವಯಂ ಸಿದ್ಧ ಆಶ್ರಮದಂತೆ ಕಂಗೊಳಿಸುತ್ತಿದೆ. ಈ ಹಳ್ಳಿಗಳು ಪರಸ್ಪರ ಹತ್ತಿರದಲ್ಲಿಯೇ ಇದ್ದರೂ ಪ್ರತ್ಯೇಕ ಹೆಸರುಗಳಿಂದ ಗುರುತಿಸಲ್ಪಡುತ್ತವೆ. ಪ್ರತಿ ಮನೆಯೂ ಉಪವನದಿಂದ ಸುತ್ತುವರಿಯಲ್ಪಟ್ಟು ಆಕರ್ಷಣೀಯವಾಗಿರುತ್ತದೆ. ಇಲ್ಲಿ ಭೂವಿಯ ಒಡೆಯರು ಬಹುತೇಕ ಬ್ರಾಹ್ಮಣರು. ಹಾಲು—ಹೈನುಗಳು ಸಮೃದ್ಧವಾಗಿದ್ದು ಸಾತ್ವಿಕ ಆಹಾರಕ್ಕೆ ಯಾವ ಕೊರತೆಯೂ ಇಲ್ಲ. ಒಂದೇ ಒಂದು ದೋಷವೆಂದರೆ ಕೊಳೆತ ಸೆಗಣಿಯ ವಾಸನೆ.

ಆಚಾರ್ಯವಾಸಿಷ್ಠರಿಗೆ ಇಲ್ಲಿಯ ವಾಸವು ಪ್ರಿಯವೆನಿಸಿತು. ಸಮೃದ್ಧ ಮಳೆ, ಸೆಖೆಯೂ ತೀವ್ರವಿಲ್ಲ; ದೃಢ ಭಕ್ತಿಯುಳ್ಳ ಶಿಷ್ಯ ಸಮೂಹ ಮತ್ತು ಭಕ್ತ ಜನರ ಆತ್ಮೀಯ ಉಪಚಾರಗಳು—ತಾವಾಗಿ ಅಪೇಕ್ಷಿಸದಿದ್ದರೂ ಸ್ವತಃ ಎಲ್ಲ ವಿಧದ ಸೇವೆ ಸಲ್ಲಿಸುವ ಶ್ರದ್ಧಾಳುಗಳು-ಇಂತಹ ಪರಿಸರದಲ್ಲಿ ವಾಸಿಷ್ಠಮುನಿಗಳು 4ವರ್ಷಕ್ಕೂ ಮಿಕ್ಕಿ ವಾಸವಾಗಿದ್ದರು. ದೈವರಾತ ಗಜಾನನರ ಸಹೋದರ ದೈವರಾತ ಸೀತಾರಾಮರ "ಕುಳುವೆ" ಎಂಬ ವಸತಿ ಸ್ಥಾನವು 4ವರ್ಷಕಾಲ ವಾಸಿಷ್ಠರ ಮುಖ್ಯ ಆಶ್ರಮವಾಗಿತ್ತು. ಇಲ್ಲಿಂದಲೇ ಒಮ್ಮೆ ಸ್ವಗ್ರಾಮ ಕುಮುದೋ ಫಲಕ್ಕೂ ಅರುಣಾಚಲಕ್ಕೆ 2 ಸಲವೂ ವಾಸಿಷ್ಠರು ಹೋಗಿ ಬಂದರು. ಈ ಶಿರಸಿ ಪ್ರಾಂತದಲ್ಲಿದ್ದಾಗ ವಾಸಿಷ್ಠರು ವೈದಿಕ ಧರ್ಮದ ಆಚಾರ-ವೇದದಲ್ಲಿ ಹೇಳಲ್ಪಟ್ಟ ದೇವತಾ ತತ್ತ್ವಗಳು-ಅವುಗಳಲ್ಲಿ ಅಡಕವಾಗಿರುವ ಅಸ್ತ್ರಮಂತ್ರಗಳು ಇವುಗಳನ್ನೊಳಗೊಂಡ ವೇದ ರಹಸ್ಯಗಳನ್ನು ಶಿಷ್ಯರಿಗೆ ಉಪದೇಶಿಸಿದರು. ಆಚಾರ್ಯರು ಇಲ್ಲಿ ಇದ್ದಾಗ ಉತ್ಸಾಹ ಭರಿತರಾಗಿದ್ದರು. ಉತ್ಸಾಹಕ್ಕೆ ಅನುಗುಣವಾದ ತಪೋಭಿವ್ಯಕ್ತಿ: ಅದಕ್ಕೆ ತಕ್ಕಂತೆ ಅವರ ಅನುಚರರ ವರ್ತನೆ; ಹೀಗೆ ಉತ್ತಮಪರಿಸರದಲ್ಲಿ ಇಲ್ಲಿಯ ಅವರ ಕಾಲಕ್ಷೇಪ ಸುಖದಾಯಕವಾಗಿದ್ದಿತು.

ಶಿರಸಿಗೆ ಬಂದ ಪ್ರಾರಂಭದಲ್ಲಿ ವಾಸಿಷ್ಠಮುನಿಗಳ ಪ್ರಭಾವವನ್ನು ಸ್ಫುಟಗೊಳಿಸಿದ ಕೆಲವು ಘಟನೆಗಳು ಹೀಗಿವೆ :— ಅವರು ತಮ್ಮ ಅನುಚರರೊಡನೆ ಒಮ್ಮೆ ಸೋಂದಾ ಸ್ವರ್ಣವಲ್ಲಿ ಮಠಾಧೀಶ ಶ್ರೀ ಶ್ರೀ ಸರ್ವಜ್ಞೇಂದ್ರಸರಸ್ವತೀ ಸ್ವಾಮಿಗಳವರನ್ನು ಸಂದರ್ಶಿಸಿದರು. ಶ್ರೀ ಆಚಾರ್ಯ ಶಂಕರರು ದಿಗ್ವಿಜಯ — ಧರ್ಮ ಪುನರುತ್ಥಾನದ ಯಾತ್ರೆಯ ಕಾಲದಲ್ಲಿ ಶ್ರೀ ಕ್ಷೇತ್ರ ಕಾಶಿಯಲ್ಲಿ ತಂಗಿದ್ದರು. ಅದೇ ಸಮಯಕ್ಕೆ ಈ ಗೋಕರ್ಣ ಮಂಡಲದ ಗುಣನಿಧಿ ಎಂಬ ಬ್ರಹ್ಮಚಾರಿಯು ಯಾತ್ರಾರ್ಥಿಯಾಗಿ ಅಲ್ಲಿಗೆ ಹೋದವರು ಶ್ರೀ ಶಂಕರರನ್ನು ಸಂದರ್ಶಿಸಿ ಅವರ ಅನುಗ್ರಹ ಪಡೆದರು. ಸಂನ್ಯಾಸ ದೀಕ್ಷೆ ಪಡೆದು ವಿಶ್ವವಂದ್ಯ ಸರಸ್ವತೀ ಎಂಬ

ಯೋಗ ಪಟ್ಟ ಹೊಂದಿದ್ದ ಅವರು ಶ್ರೀ ಶಂಕರರ ಆದೇಶದಂತೆ ಗೋಕರ್ಣ ಮಂಡಲಕ್ಕೆ ಹಿಂದಿರುಗಿ ಶಿರಸಿಯ ಬಳಿ ಶಾಲ್ಮಲೀ ನದೀ ತೀರದಲ್ಲಿ ಶ್ರೀಲಕ್ಷ್ಮೀ ನೃಸಿಂಹ – ಶ್ರೀ ಚಂದ್ರಮೌಳೀಶ್ವರರ ಅಧಿಷ್ಠಾನವನ್ನೊಳಗೊಂಡ ಮಠವನ್ನು ಸ್ಥಾಪಿಸಿದರು.

ವೈದಿಕ ಧರ್ಮ ಪರಂಪರೆಯನ್ನು ಪೋಷಿಸುತ್ತ ಬಂದಿದ್ದ ಶ್ರೀಸ್ವರ್ಣವಲ್ಲಿ ಸೋಂದಾ ರಾಜರ ಮನೆತನ ಅಳಿದು ಹೋದ ಮೇಲೆ ಈ ಪೀಠದ ಪ್ರಭಾವ ಕ್ಷೀಣ ದಶೆಗೆ ಬಂದಿತೆಂಬ ಚಾರಿತ್ರಿಕ ವಿವರ ಅರಿತಿದ್ದ ವಾಸಿಷ್ಠಮುನಿಗಳು ಶ್ರೀ ಸ್ವಾಮಿಗಳಿಗೆ ವಂದನೆ ಸಲ್ಲಿಸಿ ಹೊರಡುವಾಗ "ಈ ಸಂಸ್ಥಾನ ಪೀಠದ ಅಭ್ಯುದಯ ದಿನಗಳು ಶೀಘ್ರದಲ್ಲಿಯೇ ಬರಲಿವೆ" ಎಂಬ ಉದ್ಗಾರ ಅನಿರೀಕ್ಷಿತವಾಗಿ ಅವರ ಬಾಯಿಂದ ಹೊರಬಿದ್ದಿತು. ಆ ಕ್ಷಣದಲ್ಲಿ ತಾವು ಹಾಗೆ ಹೇಳಿದ್ದೇಕೆ ಎಂಬುದು ಅವರಿಗೂ ತಿಳಿಯದು. ಆದರೆ ಆ ಮಾತು ಮಾತ್ರ ಕೆಲವೇ ದಿನಗಳಲ್ಲಿ ನಿಜವಾಯಿತು. ಆ ಪೀಠದ ಅನುಯಾಯಿಗಳು ಈ ಅಭ್ಯುದಯದ ವಾರ್ತೆ–ಅದರ ಹಿನ್ನೆಲೆಗಳನ್ನು ಈಗಲೂ ಸಂತಸ-ಹೆಮ್ಮೆಗಳಿಂದ ಸ್ಮರಿಸುವುದುಂಟು.

ಶಿರಸಿಯ ನಿವಾಸಿಯಾದ ಶ್ರೀಮಂತ ಯುವಕನೊಬ್ಬನ ಸೌಮ್ಯ ಗುಣದ ಪತ್ನಿ ಇದ್ದಕ್ಕಿದ್ದಂತೆ ತನ್ನ ಸಹಜ ಸ್ವಬಾವಕ್ಕೆ ವಿರುದ್ಧವಾದ ಚೇಷ್ಟೆಗಳನ್ನು ತೋರಿಸಲಾರಂಭಿಸಿದಳು. ವಿಕಟಾಟ್ಟಹಾಸಮಾಡುವುದು, ತೊಟ್ಟಬಟ್ಟೆಗಳನ್ನೆಲ್ಲಾ ಕಿತ್ತೆಸೆಯುವುದು, ಹುಚ್ಚಾಪಟ್ಟೆ ವರ್ತಿಸುವುದು, ಇದು ಆಕೆಯ ಪತಿಗೂ, ಮನೆಯವರಿಗೂ ತುಂಬಾ ಆತಂಕ ಉಂಟು ಮಾಡಿತು. ವಾಸಿಷ್ಠಮುನಿಗಳು ಒಬ್ಬ ಸಾಧಕರೆಂಬುದನ್ನು ಕೇಳಿ ತಿಳಿದ ಆಕೆಯ ಪತಿಯು ಅವರನ್ನು ಸಂದರ್ಶಿಸಿ ವಿಷಯ ವಿಜ್ಞಾಪಿಸಿಕೊಂಡನು. ಆಯುರ್ವೇದದಲ್ಲಿ ಆಚಾರ್ಯವಾಸಿಷ್ಠರು ತಜ್ಞರು; ಆದರೆ ಆ ವೃತ್ತಿಯನ್ನು ಅವಲಂಬಿಸಿದವರಲ್ಲ. ಮಂತ್ರಶಾಸ್ತ್ರವೇತ್ತರಾಗಿದ್ದರೂ ಉಚ್ಚಾಟನೆ ಇತ್ಯಾದಿ ಮಂತ್ರವಾದ ಕ್ರಮದಲ್ಲಿ ಆಸ್ಥೆಯಿರಲಿಲ್ಲ. ವಾಕ್ಸಿದ್ಧಿಯುಳ್ಳವರಾದ ಅವರು ಯಾರೊಬ್ಬರ ಅಪೇಕ್ಷೆಗೆ ತಕ್ಕಂತೆ ಮಾತನ್ನು ಹೊರ ಹಾಕುವ ಸ್ವಭಾವದವರಲ್ಲ. ಆ ಯುವಕನು ವಾಸಿಷ್ಠರೊಡನೆ "ತಾವು ಬಂದು ನೋಡಿ ನನ್ನ ಪತ್ನಿಯ ಈ ಪೀಡೆಯನ್ನು ಪರಿಹರಿಸಿಕೊಡೋಣವಾಗಲಿ" ಎಂದು ಪ್ರಾರ್ಥಿಸಿದ. ವಾಸಿಷ್ಠರು ಅದಕ್ಕೆ ಯಾವ ಉತ್ತರವನ್ನೂ ನೀಡಲಿಲ್ಲ. ತಮ್ಮ ಪಕ್ಕದಲ್ಲಿದ್ದ ಶಿಷ್ಯನೊಬ್ಬ ಏನೋ ಹೇಳಿದ್ದನ್ನು ಕೇಳಿಸಿಕೊಳ್ಳುತ್ತಲೇ ಎದ್ದ ವಾಸಿಷ್ಠರು ಅಲ್ಲಿದ್ದವರನ್ನು ಉದ್ದೇಶಿಸಿ "ಬೇಗ ಬಂದು ಬಿಡುತ್ತೇನೆ" ಎಂದು ಹೇಳಿ ಹೊರ ನಡೆದರು.

ಅರ್ಧ ಘಂಟೆಯಲ್ಲಿ ತಿರುಗಿ ಬಂದ ಅವರು "ಕಾರಣವಿಲ್ಲದೆಯೇ ಅಟ್ಟಹಾಸ ಮಾಡುತ್ತಿದ್ದ ಆ ಹುಡುಗಿಯನ್ನು ನೋಡಿದೆ. "ತಾಯಿ ! ಹೀಗೆ ಬೆತ್ತಲೆ ನಿಂತಿದ್ದೀಯಲ್ಲಾ? ನಿನಗೆ ನಾಚಿಕೆಯಾಗುವುದಿಲ್ಲವೇ? ಬಟ್ಟೆ ಧರಿಸಿಕೋ!" ಎಂದೊಡನೆ ಆಕೆ ವಸ್ತ್ರ ಉಟ್ಟುಕೊಂಡಳು" ಎಂದರು.

ಅದ್ಭುತವೇ ಸರಿ ! ಮಹಾ ಮಂತ್ರವಾದಿಗಳು-ಘನ ವೈದ್ಯರುಗಳಿಂದ ಇದುವರೆಗೆ ಸಾಧಿಸಲಾಗದ ಈ ಪರಿವರ್ತನೆಯನ್ನು ಹೀಗೆ ಕ್ಷಣಮಾತ್ರದಲ್ಲಿ ಯಾವುದೇ ಮಾಧ್ಯಮದ ಬಳಕೆಯಿಲ್ಲದೆಯೇ ಕೇವಲ ತಮ್ಮ ಸಾನ್ನಿಧ್ಯ ಬಲದಿಂದಲೋ, ವಾಕ್ಪ್ರಭಾವದಿಂದಲೋ ವಾಸಿಷ್ಠ ಮುನಿಗಳು ಉಂಟುಮಾಡಿದ್ದರು. ಆ ಹುಡುಗಿ ಅಲ್ಲಿಂದ ಮುಂದೆ ಸಹಜ ಸ್ಥಿತಿಯಲ್ಲಿಯೇ ಇರುತ್ತ ದೈವಭಕ್ತಿ ಸಂಪನ್ನಳಾಗಿ-ಪುತ್ರವತಿಯಾಗಿ ಶ್ರದ್ಧಾಳುಗಳಿಗೆ ಮಾದರಿ ಎಂಬಂತೆ ಬಾಳಿದಳು. ಒಮ್ಮೆ ಆಕೆಯ ಪತಿ ಸನ್ನಿಪಾತ ಜ್ವರದಿಂದ ವಿಷಮ ಸ್ಥಿತಿಗೆ ತಲುಪಿದಾಗ ವಾಸಿಷ್ಠರು ಆತನಿಗೆ ಅಭಯ ನೀಡಿ ಅವನು ರೋಗಮುಕ್ತನಾಗುವವರೆಗೂ ತಮ್ಮ ರಚನೆ-ಇಂದ್ರಾಣೀ ಸಪ್ತಶತಿಯನ್ನು ಓದಿ ಹೇಳುತ್ತಿದ್ದರು. ಆತನ ಹೆಸರು ಮಹೇಶ ಭಟ್ಟ ಚಿತ್ರಿಗಿ. ಅವನ ಪತ್ನಿ ಸೌ|| ಅಹಲ್ಯಾ.

ಕೆಲವು ತಿಂಗಳಿಂದ ವಾಸಿಷ್ಠರ ಸಂಗಡ ಇದ್ದ ಅವರ ಸಹೋದರ ಶಿವರಾಮ ಶಾಸ್ತ್ರಿಯು ಸ್ವಗ್ರಾಮಕ್ಕೆ ಹೊರಟುಹೋದವನು ಶೀಘ್ರವೇ ಶಿರಸಿಗೆ ಹಿಂದಿರುಗಿದ. ಆಗಿನ ದಿನಗಳಲ್ಲಿ ಶಿರಸಿಯಿಂದ ಅವರ ಸ್ವಂತ ಸ್ಥಳಕ್ಕೆ ಹೋಗಲು 1ವಾರ ಹಿಡಿಯುತ್ತಿತ್ತು. ಈತ ಊರಿಗೆ ತಲುಪಿದವನು ಅಲ್ಲಿಂದ ಒಡನೆಯೇ ವಾಪಸು ಬಂದುದನ್ನು ನೋಡಿದ ವಾಸಿಷ್ಠರು ಒಂದು ಬಗೆಯ ವೇದನೆಗೊಳಗಾಗಿ "ಇವನೇನು ದೀರ್ಘಯಾತ್ರೆಗಾಗಿಯೇ ವಾಪಸು ಬರುತ್ತಿದ್ದಾನೆಯೆ ?" ಎಂದರು. ಈ ಮಾತು ಎಲ್ಲರಿಗೂ ಆತಂಕ ಉಂಟುಮಾಡಿತು. ಆದರೆ ಸ್ವಸ್ಥನಾಗಿಯೇ ಇದ್ದ ಶಿವರಾಮನು ಮರುದಿನ ಹಠಾತ್ತನೆ ಕಾಲವಾಗಿ ಬಿಟ್ಟ. ಬಾಲ್ಯದಿಂದಲೂ ಅಣ್ಣನನ್ನು ತಂದೆಯಂತೆ ಕಾಣುತ್ತ ಅನುಸರಿಸುತ್ತಿದ್ದ ಶಿವರಾಮಶಾಸ್ತ್ರಿ ಸ್ವಗ್ರಾಮವನ್ನು ಸೇರುತ್ತಿದ್ದಂತೆಯೇ ಯಾವ ಶಕ್ತಿಯ ಪ್ರೇರಣೆಯಿಂದಲೋ ವಾಪಸು ಬಂದು ಅಣ್ಣನ ಬಳಿ 1ಹಗಲು 1ರಾತ್ರಿ ಸುಖವಾಗಿಯೇ ಕಳೆದು ಕೊನೆಗೆ ಅಣ್ಣನ ಕೈಗಳ ಮೇಲೆಯೇ ಕೊನೆಯುಸಿರು ಬಿಟ್ಟು ಇಹ ಲೋಕದ ನಾಟಕರಂಗದಿಂದ ಮರೆಯಾಗಿ ಬಿಟ್ಟ.

ವಾಸಿಷ್ಠರ ಮಗ ಮಹಾದೇವನು ಚಿಕ್ಕಪ್ಪ ಶಿವರಾಮ ಶಾಸ್ತ್ರಿಯ ಮರಣ ವಾರ್ತೆ ತಿಳಿದು ದೂರದಿಂದ ಶಿರಸಿಗೆ ಬಂದವನು ತಂದೆಯ ಬಳಿಯೇ ಇದ್ದ. ಒಮ್ಮೆ

ತಂದೆ-ಮಕ್ಕಳಿಬ್ಬರೂ ಮೋಟಾರ್ ಕಾರಿನಲ್ಲಿ ಗ್ರಾಮವೊಂದಕ್ಕೆ ಪಯಣಿಸುತ್ತಿದ್ದಾಗ ಅಕಸ್ಮಾತ್ ಕಾರು ಮಗುಚಿ ಬಿದ್ದು ಅದರಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾದವು. ಮಹಾದೇವ ಶಾಸ್ತ್ರಿಗೆ ಮಾತ್ರ ಹೆಚ್ಚಿನ ಪೆಟ್ಟು ತಗುಲಿ ಕೈಯ್ಯ ಮೂಳೆ ತುಂಡಾಗಿತ್ತು. ಈಗಾಗಲೇ ತಮ್ಮನನ್ನು ಕಳೆದುಕೊಂಡ ವಾಸಿಷ್ಠಮುನಿಗಳಿಗೆ ಈ ಆಪತ್ತು ಬೇರೆ. ಆದರೆ ವೇದ ಭಕ್ತರಾಗಿ ವೇದ ಕಲ್ಪವನ್ನು ಬಲ್ಲ ವಾಸಿಷ್ಠರು ಧೃತಿಗೆಡದೆ ಅಲೌಕಿಕ ಪ್ರಭಾವವುಳ್ಳ ವೇದ ಮಂತ್ರದಿಂದಲೇ ದೇವತೆಗಳ ದೊರೆ ದೇವೇಂದ್ರನನ್ನು ಸ್ತುತಿಸಿ ತೃಪ್ತಿಗೊಳಿಸಿದರು. ಆ ಮಂತ್ರ ಹೀಗಿದೆ:—

ಯ ಋತೇ ಚಿದಭಿಶ್ರಿಷಃ ಪುರಾ ಜತ್ರುಭ್ಯ ಆತೃದಃ ।
ಸಂಧಾತಾ ಸಂಧಿಂ ಮಘವಾಪುರೂವಸುರಿಷ್ಕರ್ತಾ ವಿಹ್ರುತಂ ಪುನಃ ॥
ಋಗ್ವೇದ ೮-೧-೧೨.

(ಮುರಿದುದನ್ನು ಒಟ್ಟುಗೂಡಿಸಲು ಬೇಕಾದ ಸಲಕರಣೆಗಳಿಲ್ಲದೆಯೇ ಯಾವ ಇಂದ್ರನು ಮುರಿದ ಮೂಳೆಯ ಸಂದಿನಿಂದ (ಈಮಂತ್ರದಲ್ಲಿರುವ 'ಜತ್ರು' ಶಬ್ದವು ಮೂಳೆಗಳ ಸಂದನ್ನು ಸೂಚಿಸುತ್ತದೆ) ರಕ್ತ ಸ್ರಾವವಾಗುವ ಮುನ್ನವೇ ಒಡೆದುದನ್ನು ಒಟ್ಟು ಗೂಡಿಸಲು ಸಮರ್ಥನೋ ಆ ಧನವಂತ ಇಂದ್ರನು ಛಿದ್ರವಾದ ಅದನ್ನು ಪುನಃ ಸರಿಪಡಿಸುತ್ತಾನೆ)

ಅಡೆತಡೆಯಿಲ್ಲದ ಮಹಾ ಸಾಮರ್ಥ್ಯವುಳ್ಳ ಅಸ್ಥಿಸಂಧಾನ ಅಸ್ತ್ರವೇ ಹೃದಯವಾಗಿರುವ ಈ ಮಂತ್ರವನ್ನು ಇಂತಹ ಸಂಕಟ ಸಮಯದಲ್ಲಿ ವಾಸಿಷ್ಠ ಮುನಿಗಳು ಪ್ರಯೋಗಿಸಿದರು. ಅವರ ವಾಕ್ಶಕ್ತಿ ದೇವತೆಗಳ ಹೃದಯವನ್ನು ಪ್ರವೇಶಿಸಬಲ್ಲ ಸಾಮರ್ಥ್ಯದಿಂದ ಸಂಪನ್ನವಾಗಿದ್ದು ದೇವೇಂದ್ರನು ಈ ಮಂತ್ರಕ್ಕೆ ಕಿವಿಗೊಟ್ಟನೋ ಎಂಬಂತೆ ಶೀಘ್ರದಲ್ಲಿಯೇ ಮಹಾದೇವನ ಕೈಯ್ಯ ಮುರಿದ ಮೂಳೆ ಒಟ್ಟುಕೂಡಿಕೊಳ್ಳುವಂತಾಯಿತು.

ಶುಕ್ಲ ಸಂವತ್ಸರದಲ್ಲಿ ಕೊನೆಯ ದಿನಗಳು. ವಾಸಿಷ್ಠರು ಗ್ರಾಮಾಂತರ ಪ್ರದೇಶದ ಮನೆಯೊಂದರಲ್ಲಿ ತಮ್ಮ ಪರಿವಾರದವರೊಡನೆ ತಂಗಿದ್ದರು. ಭತ್ತದ ಒಕ್ಕಣೆ ಮುಗಿದು ಹುಲ್ಲನ್ನು ಬಣವೆ ಹಾಕಲಾಗಿತ್ತು. ಅಂತಹ ಸುಮಾರು 40 ಹುಲ್ಲಿನ ಬಣವೆಗಳು ಆ ಮನೆಯ ಸುತ್ತ ಇದ್ದವು. ಒಮ್ಮೆ ಅಕಸ್ಮಾತ್ ಬಣವೆಯೊಂದರಲ್ಲಿ ಬೆಂಕಿ ಕಾಣಿಸಿಕೊಂಡು ಗಾಳಿಯ ರಭಸದಿಂದ ಇತರ ಬಣವೆಗಳಿಗೆ ವ್ಯಾಪಿಸಲು ಪ್ರಾರಂಭವಾದುದನ್ನು ಗಮನಿಸಿದ ಕೋಟಿಸರ ಮಹಾಬಲೇಶ್ವರ

ಭಟ್ಟರೆಂಬುವರು (ವಾಸಿಷ್ಠರ ಅನುಯಾಯಿಗಳಲ್ಲಿ ಒಬ್ಬರು) ಉಚ್ಚಕಂಠದಿಂದ "ನಾಯನಾ ! ಭಗವನ್ ! ಕಾಪಾಡಿರಿ ! ಹುಲ್ಲಿನ ಬಣವೆಗಳಿಗೆ ಬೆಂಕಿ ಹತ್ತಿದೆ. ಗಾಳಿಯ ಭರದಿಂದ ವೇಗವಾಗಿ ಹರಡುತ್ತಿರುವ ಅಗ್ನಿ ಈ ಮನೆಯನ್ನು ವ್ಯಾಪಿಸಿ ಭಸ್ಮಮಾಡಿ ಬಿಡುತ್ತದೆ." ಎಂದು ಗಾಬರಿಯಾಗಿ ಕೂಗಿಕೊಳ್ಳತೊಡಗಿದರು. ಇದು ಕಿವಿಗೆ ಬೀಳುತ್ತಿದ್ದಂತೆಯೇ ವಾಸಿಷ್ಠಮುನಿಗಳು ಒದಗಿದ ಮಹಾವಿಪತ್ತನ್ನು ಒಡನೆಯೇ ಪರಿಹರಿಸುವ ಆವಶ್ಯಕತೆಯನ್ನು ಮನಗಂಡು ಅಗ್ನಿದೇವತೆಯನ್ನು ಉಚ್ಚಕಂಠದಿಂದ ವೇದ ಮಂತ್ರದ ಮೂಲಕ ಸ್ತುತಿಸತೊಡಗಿದರು. ಪರಾಶರರಿಂದ ದೃಷ್ಟವಾದ ವಿರಾಟ ಛಂದಸ್ಸಿನ ಆ ಮಂತ್ರದ ಋಕ್ಕು ಹೀಗಿದೆ :—

"ವನೇಮ ಪೂರ್ವೀರರ್ಯೋ ಮನೀಷಾ ಅಗ್ನಿಃಸುಶೋಕೋ ವಿಶ್ವಾನಶ್ಯಾಃ" ।

ಆಕ್ಷಣಕ್ಕೆ ಗಾಳಿಯ ದಿಕ್ಕು ಬದಲಿಸಿ ಪ್ರಚಂಡವಾಗುತ್ತಿದ್ದ ಅಗ್ನಿಯ ರಭಸ ತಗ್ಗುತ್ತಾ ಶಾಂತವಾಯಿತು. ಹೀಗೆ ವಾಗಭಿಮಾನಿಯಾದ ಅಗ್ನಿದೇವನು ಸ್ತೋತ್ರದಿಂದ ಸಂತೋಷಗೊಂಡು ಪ್ರಸನ್ನನಾದುದನ್ನು ಅಲ್ಲಿದ್ದವರೆಲ್ಲ ಕಣ್ಣಾರೆ ಕಂಡರು. ಈ ಘಟನೆ ಯಾವಜ್ಜೀವವೂ ಮರೆಯುವಂತಹದಲ್ಲವೆಂದು ಆಗ ಅದನ್ನು ಕಂಡವರು ಈಗಲೂ ನೆನಪಿಸಿಕೊಳ್ಳುವುದುಂಟು.

ಅಗ್ನಿ ದೇವನ ಒಲುಮೆಯಿಂದ ಕೃತಕೃತ್ಯರಾದ ಮುನಿವರ್ಯರು ಅಂದು ರಾತ್ರಿಯೇ ಈ ಮೊದಲು ತಮ್ಮಿಂದ ರಚಿತವಾಗಿದ್ದ 11ಪದ್ಯಗಳ ಅಗ್ನಿ ಸ್ತೋತ್ರದಿಂದ ಕೆಲವು ಶ್ಲೋಕಗಳನ್ನಾಯ್ದು ಬೇರೆ ಶ್ಲೋಕಗಳ ಕೆಲವು ಹೊಸ ಪದ್ಯಗಳನ್ನು ಹೆಣೆದು 28 ಶ್ಲೋಕಗಳ "ಅಗ್ನಿಗೀತೆ"ಯನ್ನು ಸಿದ್ಧಪಡಿಸಿ ಸ್ತೋತ್ರ ಮಾಡುವ ಮೂಲಕ ಭಗವಾನ್ ಹುತಾಶನನಿಗೆ ಕೃತಜ್ಞತೆ ಸಮರ್ಪಿಸಿದರು.

ಸಿರಸಿ ಪ್ರಾಂತ್ಯದವನೇ ಆದ ರಾಮಚಂದ್ರ ಭಟ್ಟನೆಂಬವನು ಆಗಿಂದಾಗ್ಯೆ ವಾಸಿಷ್ಠಮುನಿಗಳ ಬಳಿಗೆ ಬಂದು ವಂದನೆ ಸಲ್ಲಿಸಿ ಹೋಗುತ್ತಿದ್ದ. ಅವನು ನಾಗರ ಲಿಪಿಯ ಬರಹವನ್ನು ಓದಲು ಮಾತ್ರ ತಿಳಿದಿದ್ದ. ಆದರೆ ಶಬ್ದದ ಸ್ವರೂಪ-ಅರ್ಥ ಯಾವುದೂ ಆತನಿಗೆ ತಿಳಿಯದು. ಈತನು ಏನನ್ನಾದರೂ ಕಲಿಸುವಂತೆ ವಾಸಿಷ್ಠರ ಬಳಿ ಕೇಳಲೂ ಇಲ್ಲ, ಅವರು ತಾವಾಗಿ ಏನನ್ನಾದರೂ ಹೇಳಿ ಕೊಡಲೂ ಇಲ್ಲ. ಆದರೂ ಸ್ವಲ್ಪ ದಿನಗಳಲ್ಲಿಯೇ ಈತನಲ್ಲಿ ಕವಿತಾ ರಚನೆಯ ಸಾಮರ್ಥ್ಯ ಕಾಣಿಸಿಕೊಂಡಿತು. ಇದೊಂದು ವಿಚಿತ್ರವೇಸರಿ ! ಅಥವಾ :—

ಬ್ರುವತೇ ಹಿ ಫಲೇನ ಸಾಧವೋ
ನತು ಕಂಠೇನ ನಿಜೋಪಯೋಗತಾಂ ।

ನಿಜವಾದ ಸಾಧುಗಳು ತಮ್ಮ ಉಪಯೋಗಕರ ಸಾಮರ್ಥ್ಯವನ್ನು ಪರಿಣಾಮದಲ್ಲಿ ಕಾರ್ಯತಃ ತೋರಿಸುತ್ತಾರೆಯೇ ಹೊರತು ಬಾಯಿಮಾತಿನಿಂದ ಹೇಳಿಕೊಳ್ಳುತ್ತ ಹೋಗುವದಿಲ್ಲ. ಎಂಬ ಕವಿಯ ಮಾತಿಗೆ ಇದು ಸೂಕ್ತ ಉದಾಹರಣೆಯೂ ಇದ್ದೀತು. ಗುರು-ದೇವತಾ ಕಟಾಕ್ಷವು ಮೂಕನನ್ನು ವಾಚಾಳಿಯಾಗಿಯೂ, ಹೆಳವನನ್ನು ಪರ್ವತ ದಾಟುವ ಸಾಮರ್ಥ್ಯ ಉಳ್ಳವನನ್ನಾಗಿಯೂ ಮಾಡಬಲ್ಲದೆಂದು ತಿಳಿದವರು ಹೇಳುವುದುಂಟು. ಈ ರಾಮಚಂದ್ರಭಟ್ಟರು ಆಗಲೇ "ಕವಿಕಲಭ" ಎಂಬ ಬಿರುದು ಪಡೆದರು. ಈಗ ಅವರು "ಕವಿಕುಂಜರ"ರೆನಿಸಿರಬೇಕು.

ಪ್ರಕರಣ- 7

ಅನಂದಾಶ್ರಮ

ಕಥಮತಿಥಿಸಪರ್ಯಾಂ ಶಿಕ್ಷಿತಾಃ ಶಾಖಿನೋಽಪಿ||

(ಅತಿಥಿ ಸತ್ಕಾರ ಕ್ರಮವನ್ನು ಈ ಫಲವೃಕ್ಷಗಳೂಕೂಡ ಕಲಿತುದಾದರೂ ಹೇಗೆ ?)

ಸತಾಂ ಸದ್ಭಿಃ ಸಂಗಃ ಕಥಮಪಿ ಹಿ ಪುಣ್ಯೇನ ಭವತಿ ||

(ಉತ್ತರರಾಮಚರಿತಂ)

(ಪುಣ್ಯವಿಶೇಷದಿಂದ ಸಜ್ಜನರಿಗೆ ಒಳ್ಳೆಯವರ ಸಹವಾಸವೇ ಲಭಿಸುತ್ತದೆ)

ಶಿರಸಿ ಪ್ರದೇಶದ ದೇವೇಂದ್ರ ಶರ್ಮರೆಂಬವರು ಅಲ್ಲಿಯ ವಾಸಿಷ್ಠಮುನಿಶಿಷ್ಯರಲ್ಲಿ ಪ್ರಮುಖರು. ಅವರ ಆತಿಥ್ಯದಲ್ಲಿ ವಾಸಿಷ್ಠರು ಕೆಲವು ದಿನ ಇದ್ದಾಗ ಉತ್ತರ ಕನ್ನಡದಲ್ಲಿ ಹೆಸರಾಂತ ಪುಂಡರೀಕರಾಯ ಪಂಡಿತರೆಂಬವರು ಮುನಿಗಳನ್ನು ಸಂದರ್ಶಿಸಿದರು. ಪರಸ್ಪರ ಸಂಭಾಷಣೆಯ ವೇಳೆಯಲ್ಲಿ ವಾಸಿಷ್ಠಮುನಿಗಳು ಸಂದರ್ಭವಶಾತ್ ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ಪಂಡಿತರು ತುಂಬಾ ಪ್ರಭಾವಿತರಾದರು. ಶಿರಸಿ ಪಟ್ಟಣದ ಹೊರವಲಯದಲ್ಲಿ ಜನ-ವಾಹನ ಸಂಚಾರಗಳ ಗದ್ದಲವಿಲ್ಲದೆ ಪ್ರಶಾಂತ ಉಪವನದ ಪರಿಸರವುಳ್ಳ ತಮ್ಮ (ಪಂಡಿತರ) "ಆನಂದಾಶ್ರಮ"ವನ್ನು ಮುನಿಗಳಿಗೆ ತೋರಿಸಿ, ಅಲ್ಲಿ ಪರಿವಾರದೊಡನೆ ಮುನಿಗಳ ವಾಸಕ್ಕೆ ಅನುಕೂಲಮಾಡಿಕೊಟ್ಟರು. ಅವರ ಆತ್ಮೀಯ ಆತಿಥ್ಯದಲ್ಲಿ ವಾಸಿಷ್ಠರು ಕೆಲವು ತಿಂಗಳು ಈ ಆನಂದಾಶ್ರಮದಲ್ಲಿ ಇದ್ದರು.

ಆ ಅವಧಿಯಲ್ಲಿ ಅನೇಕ ಗಮನಾರ್ಹ ಸಂಗತಿಗಳು ಸಂಭವಿಸಿದವು. ಅವುಗಳಲ್ಲಿ ಕೆಲವು ತಪಸ್ಸಿನ ಗಂಧವೇ ಇಲ್ಲದವರು ನಂಬಲಾರದಂತಹವು. ಕೆಲವು ಘಟನೆಗಳು ಅಗ್ಯೆ ಆಶ್ರಮದಲ್ಲಿ ವಾಸಿಸುತ್ತಿದ್ದವರಿಗೆ ಪ್ರಯೋಜನಕಾರಿಯಾಗಿದ್ದವುಗಳು. ಮತ್ತೆ ಕೆಲವು ವಾಸಿಷ್ಠರ ವೈಭವವನ್ನು ನಿರೂಪಿಸುವಂತಹವು.

ಇಲ್ಲಿ ಪ್ರತಿದಿನ ಮುಂಜಾನೆ ಮತ್ತು ಸಂಜೆ ವಾಸಿಷ್ಠರೊಂದಿಗೆ ಆಶ್ರಮ ವಾಸಿಗಳು ಏಕಾಗ್ರಧ್ಯಾನನಿರತರಾಗುತ್ತಿದ್ದರು. ಕೆಲವೊಮ್ಮೆ ಆಶ್ರಮಕ್ಕೆ ಭೇಟಿಕೊಡುತ್ತಿದ್ದ ಆಗಂತುಕ ಭಕ್ತರೂ ಇದರಲ್ಲಿ ಪಾಲ್ಗೊಳ್ಳುತ್ತಿದ್ದುದುಂಟು. ವಾಸಿಷ್ಠರು ಇಲ್ಲಿ ಋಗ್ವೇದ ಸಂಹಿತಾ ಪಾರಾಯಣವನ್ನು ಒಮ್ಮೆ ಪೂರ್ಣಗೊಳಿಸಿದರು. ವೇದ ಗಾನದಲ್ಲಿ ಅದ್ವಿತೀಯರಾದ ವಾಸಿಷ್ಠರು ಬೆಳಿಗ್ಯೆ ಮತ್ತು ಸಂಜೆ ಭಕ್ತ ವೃಂದಕ್ಕೆ ದೇವತಾ ಸಾನ್ನಿಧ್ಯದ ಅನುಭವ ಉಂಟಾಗುವ ರೀತಿಯಲ್ಲಿ ಇಂದ್ರ ಸೂಕ್ತ-ಅಗ್ನಿಸೂಕ್ತಗಳನ್ನು ಹೃದಯಂಗಮ ಸ್ವರದಿಂದ ಪಠಿಸುತ್ತಿದ್ದರು. ಅಲ್ಲಿ ಸೇರಿದ್ದವರ ಪೈಕೀ ಜಪ-ಧ್ಯಾನಾದಿ ವಿಷಯಗಳಲ್ಲಿ ಆಸಕ್ತಿಯಿಲ್ಲದವರು-ಉಪದೇಶ ವಿಲ್ಲದವರು ಕೂಡ ಈ ಮಂತ್ರ ಪಠನ ಆಲಿಸಿ ಆನಂದಕ್ಕೆ ಒಳಗಾಗುತ್ತಿದ್ದುದರಿಂದ ಆಶ್ರಮದ ಹೆಸರು (ಆನಂದಾಶ್ರಮ) ಸಾರ್ಥಕತೆ ಪಡೆಯಿತು. ಕೆಲವರಿಗೆ ತಮ್ಮ ಅರಿವಿಗೆ ಬರದಂತೆಯೇ ಚಿತ್ತ ಶುದ್ಧಿಯಿಂದ ನಿರ್ವಹಿಸಬೇಕಾದ ಈಶ್ವರ ಧ್ಯಾನದ ಕ್ರಮವು ಚಿರಪರಿಚಿತರೀತಿಯಲ್ಲಿ ಸಿದ್ಧಿಸುವಂತೆ ಆಯಿತು. ಇನ್ನು ಕೆಲವರಿಗೆ ದೈಹಿಕವಾಗಿ ಯಾವುದೋ ಯೋಗ ವಿಲಾಸದಿಂದ ಒಡಮೂಡಿಡ ಆನಂದಾತಿಶಯದ ಅನುಭವವಾಯಿತು. ಮತ್ತೆ ಕೆಲವರಿಗೆ ತಲೆಯಿಂದ ಕಾಲಿನ ಪರ್ಯಂತ ಯಾವುದೋ ಶಕ್ತಿ ಪ್ರವಹಿಸುತ್ತಿರುವ ಅನುಭವ. ಅಂತರ್ಯದಲ್ಲಿ ವಿಚಿತ್ರನಾದ ತರಂಗಗಳೇಳುತ್ತಿದ್ದ ಅನಿಸಿಕೆ ಕೆಲವರಿಗೆ, ಜ್ಯೋತಿಯ ದರ್ಶನ ಪಡೆದವರು ಕೆಲವರು. ಇವೆಲ್ಲಾ ಆಂತರಿಕ ಅನುಭವಗಳು. ಇವಲ್ಲದೆ ಬಾಹ್ಯ ಘಟನೆಗಳು ಕೆಲವು ಆಗುತ್ತಿದ್ದುದುಂಟು. ಒಮ್ಮೆ ಒಂದೆಡೆಯಲ್ಲಿದ್ದ ಕೆಲವರು ತಮ್ಮ ಸುತ್ತ ಮುತ್ತಲಿನ ಪ್ರದೇಶವು ವಿಶೇಷ ಪ್ರಕಾಶದಿಂದ ಆವರಿಸಲ್ಪಟ್ಟುದನ್ನು ಸ್ವತಃ ಕಂಡರು. ಇನ್ನೊಮ್ಮೆ ಕೆಲವರು ಮಧ್ಯಾಹ್ನದ ಊಟದ ನಂತರ ಹಜಾರದಲ್ಲಿ ವಿಶ್ರಾಂತಿ ಪಡೆಯುತ್ತ ಧ್ಯಾನ ಲಹರಿಯಲ್ಲಿದ್ದಾಗ ಯಾವುದೋ ಅಲೌಕಿಕ ಸಾನ್ನಿಧ್ಯದಂತೆ ಭಾಸವಾಗುವ ಅಗ್ನಿ ಅಸ್ತ್ರ ಸ್ಫೋಟನೆಯ ಬಲವಾದ ಶಬ್ದವನ್ನು ಆಲಿಸಿದರು. ಮತ್ತೊಮ್ಮೆ ಸಂಜೆ ಕಳೆದು ಕತ್ತಲು ಕವಿಯುತ್ತಿದ್ದಾಗ ಆಶ್ರಮದ ಹೊರದ್ವಾರದ ಬಳಿ ಮಾತನಾಡುತ್ತ ನಿಂತಿದ್ದ ವಾಸಿಷ್ಠಶಿಷ್ಯರಿಬ್ಬರ (ಇವರಲ್ಲಿ ಒಬ್ಬರು ವಿಶ್ವಾಮಿತ್ರರು) ನಡುವೆ ಶಕ್ತಿಯ ಮಿಂಚೊಂದು ವೇಗವಾಗಿ ಹಾದು

ಹೋಗಿ ಕಣ್ಮರೆಯಾಯಿತು. ಶ್ರವಣಾನುಭವ ಉಂಟು ಮಾಡುತ್ತಿದ್ದ ಶಬ್ದಮಯವಾದ ಆ ಶಕ್ತಿಯು ಸಾತ್ವಿಕ ದೇವತೆಯೆಂದು ಅವರಲ್ಲೊಬ್ಬರಿಗೆ ಅನಿಸಿದರೆ ಇನ್ನೊಬ್ಬರ ಅಭಿಪ್ರಾಯ (ವಿಶ್ವಾಮಿತ್ರ) ದಲ್ಲಿ ಅದು ಜಗತ್ತಿನಿಂದ ಹೊರತಾದ ವಿದ್ಯುತ್ ಪ್ರಭೆಯೇ ಹೊರತು ಬೇರೆಯಲ್ಲ.

ಹೀಗೆ ಹಲವು ಬಗೆಯ ಆಶ್ಚರ್ಯಕರ-ವಿಚಿತ್ರ ಘಟನೆಗಳು ಆ ದಿನಗಳಲ್ಲಿ ಸಾಮಾನ್ಯವಾಗಿದ್ದವು. ನಾವೇನು ವಾಸ್ತವಿಕ ಜಗತ್ತಿನಲ್ಲಿದ್ದೇವೆಯೋ ? ಸ್ವಪ್ನಲೋಕದಲ್ಲಿದ್ದೇವೆಯೋ? ಎಂಬ ಸಂಶಯ ಆಶ್ರಮವಾಸಿಗಳಿಗೆ ಉಂಟಾಗುತ್ತಿತ್ತು. ಎಚ್ಚರವಿದ್ದಾಗ ಸಂಭವಿಸಿದ ಘಟನೆಗಳು ಇವಾದರೆ; ಸ್ವಪ್ನ ಸಂಬಂಧವಾದ ಅನುಭವಗಳೇ ಬೇರೆ ರೀತಿಯವು. ವಾಸಿಷ್ಠಮುನಿಗಳ ಗುರುಗಳಾದ ಭಗವಾನ್ ರಮಣ ಮಹರ್ಷಿಗಳನ್ನು ಅದುವರೆಗೆ ನೋಡಿಯೇ ಇಲ್ಲದ ಭಕ್ತರಿಗೆ ಪ್ರಸನ್ನತೆಯಿಂದ ಕೂಡಿದ ಆ ಪರಮಗುರುವರ್ಯರ ದರ್ಶನ ಉಂಟಾಯಿತು. ವಾಸಿಷ್ಠಮುನಿಗಳೂ ಸೇರಿದಂತೆ ಇನ್ನು ಕೆಲವರಿಗೆ ಭಗವಾನ್ ಅರವಿಂದರ ದರ್ಶನ-ಅನುಗ್ರಹ ಮೇಲಿಂದ ಮೇಲೆ ಲಭಿಸಿದ ಸ್ಪಷ್ಟ ಅನುಭವವಾಯಿತು. ಪ್ರಾಯಶಃ ಈ ಬಗೆಯ ಸ್ವಪ್ನದರ್ಶನಗಳು ಕೆಲವು ಪಾರಲೌಕಿಕ ಸಂಬಂಧವುಳ್ಳವುಗಳಾಗಿ-ಗತಕಾಲದ ಚಿತ್ರಣಗಳಾಗಿದ್ದರೆ ಇನ್ನು ಕೆಲವು ಭವಿಷ್ಯ ಸೂಚಕಗಳು; ಮತ್ತೆ ಕೆಲವು ವರ್ತಮಾನದ ಪ್ರಯೋಜನವನ್ನು ಪ್ರತಿಬಿಂಬಿಸುತ್ತಿದ್ದವು.

ಪ್ರಜೋತ್ಪತ್ತಿ ಸಂವತ್ಸರದ ಶ್ರಾವಣಮಾಸ ಪ್ರಾರಂಭದವರೆಗೂ ವಾಸಿಷ್ಠರು ತಮ್ಮ ಶಿಷ್ಯ–ಪರಿಜನರೊಡನೆ ಈ ಆನಂದಾಶ್ರಮದಲ್ಲಿ ಇದ್ದರು. ಈ ಉಪವನಸಹಿತ ಆಶ್ರಮದ ಒಡೆಯರಾದ ಪುಂಡರೀಕರಾಯ ಪಂಡಿತರು ವೃದ್ಧಾಪ್ಯದಲ್ಲಿದ್ದರು. ಹಿಂದೆ ವಿದೇಶಗಳಿಗೂ ಹೋಗಿ ಇದ್ದು ಬಂದವರಾದ್ದರಿಂದ ಲೋಕಾನುಭವ-ವಿಷಯ ಪರಿಜ್ಞಾನವೂ ಇತ್ತು. ಈ ಹಿರಿಯರಿಗೆ ವಾಸಿಷ್ಠಮುನಿಗಳಲ್ಲಿ ಪೂರ್ಣ ಶ್ರದ್ಧೆ. ಅವರನ್ನು ಸತ್ಕರಿಸಿದಷ್ಟೂ ಸಾಲದೆಂಬ ಹುರುಪು. ಇದರಿಂದ ಪಂಡಿತರ ಕುಟುಂಬ ವರ್ಗವೇ ಆಚಾರ್ಯ ವಾಸಿಷ್ಠರ ಬಗೆಗೆ ಭಕ್ತಿ–ಗೌರವ ತಳೆಯಲು ಕಾರಣವಾಯಿತು. ಅವರ ಮಗ ಸುಂದರಪಂಡಿತರು ವಾಸಿಷ್ಠರು ಅಸಾಮಾನ್ಯ ವ್ಯಕ್ತಿಯೆಂದೂ ಅವರ ರಚನೆಗಳು ಲೋಕೋತ್ತರವಾದುದೆಂಬುದನ್ನೂ ಕಂಡುಕೊಂಡು ಹಲವು ಬಗೆಯಲ್ಲಿ ವಾಸಿಷ್ಠರನ್ನು ಸತ್ಕರಿಸಿದರು. ಅದೇ ಸಂದರ್ಭ ವಾಸಿಷ್ಠರ ರಚನೆಗಳಲ್ಲಿ ಹೆಚ್ಚು ಪ್ರಸಿದ್ಧವಾದ ಸ್ತೋತ್ರಗ್ರಂಥ "ಉಮಾಸಹಸ್ರಂ"ದ ಮುದ್ರಣ-ಪ್ರಕಾಶನದಲ್ಲಿ ಆಗ್ಯೆ ಅವರು ವಹಿಸಿದ್ದ ಶ್ರದ್ಧೆ–ಉತ್ಸಾಹ–ಕಾರ್ಯಕೌಶಲಗಳು ಎಷ್ಟು ಉನ್ನತ ಮಟ್ಟದವೆಂಬುದು ಇಂದು ಆ ಗ್ರಂಥವನ್ನು ನೋಡಿದಾಗ ನಮಗೆ ಅರಿವಾಗುತ್ತದೆ.

ಆನಂದಾಶ್ರಮದಲ್ಲಿದ್ದಾಗಲೇ ಆಚಾರ್ಯರು ಗೋಕರ್ಣಕ್ಕೆ ಹೋಗಿ ಬರಲೇಬೇಕಾದ ಸಂದರ್ಭ ಉಂಟಾಯಿತು. ಹೊರಡುವ ಮುನ್ನ ಸುಂದರ ಪಂಡಿತರಿಗೆ ಪತ್ರಬರೆದು ಅದನ್ನು ಅವರಿಗೆ ತಲುಪಿಸುವ ವ್ಯವಸ್ಥೆ ಮಾಡಿದರು.

ಆನಂದಾಶ್ರಮ.
೧೮-೪-೧೯೩೧

ವತ್ಸ ! ಸುಂದರ !

ನನ್ನನ್ನು ಪ್ರತ್ಯಕ್ಷದೇವರೆಂದು ನಂಬಿ, ನನ್ನಲ್ಲಿ ಮನಸ್ಸನ್ನು ಕೇಂದ್ರೀಕರಿಸಿ, ಬಹುಕಾಲದಿಂದ ನನ್ನ ಶಿಷ್ಯನೂ ಮಗನಿಗಿಂತ ಹೆಚ್ಚಿನವನೂ ಆಗಿರುವ ಧೈವರಾತನು ತನ್ನ ಮಗನ ಉಪನಯನಕ್ಕೆ ನಾನು ಬರಲೇಬೇಕೆಂದು ಕಣ್ಣಂಚಿನಲ್ಲಿ ನೀರು ತಂದುಕೊಂಡು ಕರಜೋಡಿಸಿ ಪ್ರಾರ್ಥಿಸಿದದನ್ನು ನಿರಾಕರಿಸುವುದು ನನ್ನಿಂದ ಸಾಧ್ಯವಾಗಲಿಲ್ಲ. ಆತನೊಡನೆ ಗೋಕರ್ಣಕ್ಕೆ ಹೊರಟಿದ್ದೇನೆ. ಉಪನಯನ ಕಾಲದಲ್ಲಿ ವಟುವನ್ನು ಆಶೀರ್ವದಿಸಿ ಪುನಃ ಇಲ್ಲಿಗೇ ಬರುತ್ತೇನೆ. ಆಶ್ರಮದಲ್ಲಿ ವತ್ಸ ಕಪಾಲಿಯು ಇರುತ್ತಾನೆ. ಶೀಘ್ರವಾಗಿ ಹಿಂದಿರುಗುವೆನೆಂಬ ಭರವಸೆಯಿಂದಲೇ, ಪ್ರಯಾಣ ಹೊರಟಿದ್ದೇನೆ.

ಇತಿ ನಿಮ್ಮವನೇ ಆದ
ವಾಸಿಷ್ಠ

ವಾಸಿಷ್ಠ ಮುನಿಗಳು ಈ ಆನಂದಾಶ್ರಮದಲ್ಲಿದ್ದಾಗ "ಸದ್ದರ್ಶನ ಸಂಗ್ರಹದ" ಅನುವಾದ ಕಾರ್ಯವನ್ನು ಮುಗಿಸಿದ್ದಲ್ಲದೆ "ಪ್ರಚಂಡ ಚಂಡೀತ್ರಿಶತಿ" ಎಂಬ ಹೊಸ ಸ್ತೋತ್ರ ಮಾಲಿಕೆಯನ್ನು ರಚಿಸಿದರು. ವಾರಕ್ಕೆ ಒಮ್ಮೆ ತಮ್ಮ ಗುರುವರ್ಯ ಭಗವಾನ್ ರಮಣರಿಗೆ ಪತ್ರ ಬರೆಯುವ ನಿಯಮವನ್ನು ಕೆಲ ಕಾಲ ನಡೆಸಿದರು. ಆ ಕಾಲಕ್ಕೆ ವಾಸಿಷ್ಠ ಮುನಿಗಳ ಅಂತರ್ವೃತ್ತಿ-ಆಶ್ರಮಜೀವನದ ಚಿತ್ರಣಗಳನ್ನು ಕೊಡುವ ಸರಲ-ಹೃದಯಂಗಮ ಶೈಲಿಯ ಸಂಸ್ಕೃತಭಾಷೆಯ ಕೆಲವು ಪತ್ರಗಳ ಅನುವಾದಗಳನ್ನು ಈ ಮುಂದೆ ಕೊಡಲಾಗಿದೆ.

ಆನಂದಾಶ್ರಮ-ಶಿರಸಿ
೧೦-೩-೩೧

ಭಗವನ್ ! ಗುಹಾವತಾರ!

ನಾನು ಸಹಚರರೊಡನೆ ಇಲ್ಲಿ ತಪೋನಿರತನಾಗಿರುವ ವಿಷಯ ತಮಗೆ ಸುಂದರ ಪಂಡಿತ-ವಿಶ್ವನಾಥ *-ಕಪಾಲಿ ಇವರ ಪತ್ರಗಳಿಂದ ತಿಳಿದೇ ಇದೆಯಷ್ಟೆ ?

ಮೂರು ದಿನಗಳಿಂದ ಇಲ್ಲಿ ಎಲ್ಲರಿಗೆ-ಮುಖ್ಯವಾಗಿ ನನಗೆ ಆಗುತ್ತಿರುವ ಅನುಭವಗಳು ಆನಂದ ಉಂಟುಮಾಡುತ್ತಿವೆ. ಬಹಳಷ್ಟು ಜನರಿಗೆ ಸ್ವಪ್ನದಲ್ಲಿ ತಮ್ಮ ದರ್ಶನಲಾಭವಾಗುತ್ತಿದೆ. ಇಲ್ಲಿ ಇಂತಹ ಉತ್ತಮ ಸ್ಥಿತಿ ಏರ್ಪಡಲು ತಮ್ಮ ಕಟಾಕ್ಷವೇ ಮುಖ್ಯ ಕಾರಣವೆಂದು ಎಲ್ಲರೂ ನಂಬಿದ್ದಾರೆ.

ಪ್ರಭೋ! ತಮ್ಮ ಕಟಾಕ್ಷದ ಅನುಗ್ರಹದಿಂದ ಈಗ ನನ್ನಲ್ಲಿ ಸಂಪನ್ನಗೊಂಡಿರುವ ನಿಶ್ಚಯಜ್ಞಾನವು ವಿಜ್ಞಾನರೂಪನಾದ ಆತ್ಮನಲ್ಲಿ ಸಂಘಟಿಸುವಂತಹದೆಂದು ತಿಳಿದಿದ್ದೇನೆ. ಶರೀರದಿಂದ ಭಿನ್ನನಾದ ಆತ್ಮನನ್ನು ಹೃದಯಕುಹರದಲ್ಲಿ ಸ್ಪಷ್ಟವಾಗಿಯೇ ಕಾಣುತ್ತಿದ್ದೇನೆ. ಹೀಗಿದ್ದರೂ ಬಾಹ್ಯ ಪ್ರಪಂಚದ ಬೇರೆ ಅನುಭವಗಳು ನಾಶವಾಗಿಲ್ಲ. ಆದ್ದರಿಂದಲೇ ಇದು ಪರಿಪೂರ್ಣ ನಿಶ್ಚಯ ಜ್ಞಾನವಲ್ಲವೆಂದೇ ತಿಳಿಯುತ್ತೇನೆ. ಎಲ್ಲವನ್ನೂ ದಾಟಿ ಎಲ್ಲಿಗೂ ಹೋಗಬಲ್ಲ ತಮ್ಮ ಕಟಾಕ್ಷ ವೀಕ್ಷಣೆಯಿಂದ ಆ ಪರಿಪೂರ್ಣ ನಿಶ್ಚಯಜ್ಞಾನವನ್ನು ಸ್ವಯಂ ತಾವೇ ಅನುಗ್ರಹಿಸಬೇಕು. ಈ ಮೊದಲು ನನ್ನ ದೇಹದಲ್ಲಿ ಒಂದು ಬಗೆಯ ಅಮಲೇರಿಸುವ ಶಕ್ತಿ ಪ್ರವಹಿಸುತ್ತಿರುವುದರ ಅನುಭವವಾಗುತ್ತಿತ್ತು. ಆದರೆ ಈಗ ಹಗುರವೂ-ಚೈತನ್ಯಶಾಲಿಯೂ ಆದ ಬೆಳಕಿನ ಲಹರಿ ಹರಿಯುತ್ತಿರುವ ಅನುಭವ ಆಗುತ್ತಿದೆ. ಭಗವಾನ್ ಮಹರ್ಷಿಗಳಿಂದ ಪ್ರೇರಿಸಲ್ಪಟ್ಟ ದೈವೀ ಶಕ್ತಿಗಳು ಮಹಾಕಾರ್ಯ ಸಿದ್ಧಿಗಾಗಿ ನನ್ನನ್ನು ಹಸನುಗೊಳಿಸುತ್ತಿವೆಯೆಂಬುದು ನನ್ನ ದೃಢವಾದ ನಂಬಿಕೆ. ಕರುಣಾಪೂರ್ಣ ಕಟಾಕ್ಷದ ಪ್ರತ್ಯುತ್ತರವನ್ನೇ ನೀಡೋಣವಾಗಲಿ.

ಕಪಾಲಿ ದಂಪತಿಗಳು–ಮಹಾದೇವ–ವಿಶ್ವನಾಥ–ರಂಗ–ಸೀತಾರಾಮನ ಮಗಳು ಇಲ್ಲಿ ಆಶ್ರಮದಲ್ಲಿಯೇ ಇದ್ದಾರೆ. ಸುಂದರ ಪಂಡಿತರ ಸಹೋದರಿ

---

*. ಈ ವಿಶ್ವನಾಥರು ಭಗವಾನ್ ರಮಣರ ಪೂರ್ವಾಶ್ರಮದ ಬಂಧು. ಆಂಗ್ಲ ಕಲಾಶಾಲೆಯಲ್ಲಿ ಕಲಿಯುತ್ತಿದ್ದಾಗಲೇ ದೇಶ ಸೇವಾ ಕಾರ್ಯ ನಡೆಸಿದ ಇವರು ವೈರಾಗ್ಯ ತಳೆದು ರಮಣ ಮಹರ್ಷಿಗಳ ಸನ್ನಿಧಿಯನ್ನು ಸೇರಿದರು. ರಮಣರಿಂದ ವಾಸಿಷ್ಠರ ವಿಷಯ ತಿಳಿದು 1923ರಲ್ಲಿ ವಾಸಿಷ್ಠ ಮುನಿಗಳ ಬಳಿಗೆ ಬಂದರು. ವಾಸಿಷ್ಠರ ಸಂಪರ್ಕದಿಂದ ಇವರ ಸಂಸ್ಕೃತ ಭಾಷಾಜ್ಞಾನ ಬೆಳೆಯಿತು. ವಾಸಿಷ್ಠರ ಸ್ತೋತ್ರ ಗ್ರಂಥಗಳಲ್ಲಿ ಇವರಿಗೆ ಹೆಚ್ಚಿನ ಅಭಿರುಚಿ. ವಾಸಿಷ್ಠರ ಪ್ರಭಾವದಿಂದ ಋಗ್ವೇದದ ಅಭಿಮಾನಿಯಾದ ಇವರು ಮಹರ್ಷಿ ರಮಣರ ಸೇವೆಯಲ್ಲಿ ನಿರತರಾಗಿದ್ದರು. ಅರುಣಾಚಲದಲ್ಲಿ ವಾಸಿಷ್ಠಮುನಿಗಳ ಜನ್ಮದಿನೋತ್ಸವ ಆಚರಣೆಯಲ್ಲಿ ಈ ವಿಶ್ವನಾಥರೇ ಮುಂದಾಳುಗಳು.

ಮತ್ತು ದೇವೇಂದ್ರ ಶರ್ಮರು ಸಂಜೆಯ ಹೊತ್ತಿಗೆ ಬರುತ್ತಿರುತ್ತಾರೆ. ಎಲ್ಲರೂ ಭಗವಾನರ ಅನುಗ್ರಹಕ್ಕಾಗಿ ಪ್ರಾರ್ಥಿಸಿದ್ದಾರೆ.

ಇತಿ, ಭಗವಾನರ ಸೇವಕ,
ವಾಸಿಷ್ಠ ಗಣಪತಿ.

ಭಗವನ್ ! ವಿಶ್ವಗುರೋ !

ಆನಂದಾಶ್ರಮ-ಶಿರಸಿ
೧೭-೩-೩೧.

ಭಗವತ್ಸನ್ನಿಧಿಗೆ ವಾರಕ್ಕೆ ಒಮ್ಮೆ ಪತ್ರ ಬರೆಯ ಬೇಕೆಂಬ ಪ್ರೇರಣೆ ಉಂಟಾಗಿದೆ.

'ಸದ್ದರ್ಶನ'ದ ರಚನೆ ಶನಿವಾರಕ್ಕೆ ಮುಗಿಯಿತು. ಅದರಲ್ಲಿ ಶುಕ್ಲ ಛಂದಸ್ಸುಗಳ ತಾತ್ಪರ್ಯವನ್ನು ಶಕ್ಯವಿದ್ದಷ್ಟು ಅಳವಡಿಸಿ ಉಪಜಾತಿ ವೃತ್ತದಲ್ಲಿ ಅನುವಾದ ಮಾಡಿದ್ದೇನೆ. ____________ ನನ್ನ ಅನುವಾದದಲ್ಲಿ ಏನಾದರೂ ಗುಣಾಂಶವಿದ್ದರೆ ಅದು ಭಗವತ್ಕೃಪೆಯಿಂದ ಉಂಟಾದದ್ದು. ಅದೇ ಶನಿವಾರದಿಂದ ನನ್ನ ದೃಷ್ಟಿ ವಿಲಕ್ಷಣವಾಗಿದೆ. ನಾನು ನೋಡುವ ಪ್ರತಿಯೊಂದೂ ಸಹ ಒಂದೇ ವಸ್ತುವಿನ ಪ್ರಭೇದವಾಗಿರುವಂತೆ ಅನಿಸುತ್ತಿದೆ. ಈ ಅಭ್ಯಾಸ ಸ್ಥಿರಗೊಂಡು ನಿತ್ಯ ಅನುಭವದಲ್ಲಿ ಕೊನೆಯಾಗಲೆಂದು ಭಗವಾನರಲ್ಲಿ ನನ್ನ ಪ್ರಾರ್ಥನೆ. ನೀರ ಮೇಲಣ ಗುಳ್ಳೆಗಳಂತೆ ಆ ಒಂದೇ ವಸ್ತುವಿನಲ್ಲಿಯೂ ಆಕಾರ ಭೇದಗಳು ಕಂಡುಬರುತ್ತಿವೆ. ಅದನ್ನು ದೂರಮಾಡಿ ಯಾವಾಗಲೂ ಆ ಏಕೈಕ ಪರಿಶುದ್ಧ ವಸ್ತು ದರ್ಶನವನ್ನೇ ಪಡೆಯಲು ಪ್ರಯತ್ನಿಸುತ್ತೇನೆ.

ಭಗವದನುಗ್ರಹ ಬೇಡುವ
ವಾಸಿಷ್ಠ

ಭಗವನ್ ! ಕಾರಣ ಗುರೋ !

ಆನಂದಾಶ್ರಮ-ಶಿರಸಿ, ೨೪-೩-೩೧

ಇಲ್ಲಿ ನಾವೆಲ್ಲರೂ ತೇಜೋಮಯವಾದ ಭಗವಾನರ ಕಾರುಣ್ಯರಾಶಿಯಲ್ಲಿಯೇ ಮಗ್ನರಾಗಿದ್ದೇವೆ.

*ಮಾಯಾ ಪುತ್ರ ಸಂಹಾರಕ ಭಗವನ್!

---

* ಆದಿ ಅವಿದ್ಯೆಯಿಂದ ಉಂಟಾಗುವ ಅಹಂಕಾರವು ಮಾಯೆಯ ದುಷ್ಟ ಸಂತಾನ-ಶೂರ ಎಂಬುದಾಗಿ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿದೆ. ಪರಶಿವನ ಮಗ ಸುಬ್ರಹ್ಮಣ್ಯ (ಗುಹ) ನೇ ಈ ಶೂರನನ್ನು ಸಂಹರಿಸಿದವನು.

ಈಗಲೂ ನನ್ನಲ್ಲಿ ಭೇದಬುದ್ಧಿ ಉಳಿದುಕೊಂಡಿದೆ. ತಮ್ಮ ಒಂದೇ ಒಂದು ಕ್ಷಣದ ಇಚ್ಛಾಶಕ್ತಿಯ ಸ್ಫುರಣೆಯಿಂದ ನಾನು ಆ ಪರಿಶುದ್ಧ ವಸ್ತುದರ್ಶನಾನುಭವ ಪಡೆಯಬಲ್ಲೆನೆಂದು ತಿಳಿದಿದ್ದೇನೆ. ಯಾವ ಬಗೆಯ ಇಚ್ಛೆಯೂ ನಿಮ್ಮ ಹೃದಯದಲ್ಲಿ ತಾನಾಗಿಯೇ ಉದ್ಭವಿಸಲಾರದೆಂಬುದನ್ನೂ ನಾನು ಬಲ್ಲೆ. ಈಶ್ವರ ಮಾತ್ರ ತಮ್ಮ ಹೃದಯದಲ್ಲಿ ಆ ರೀತಿಯ ಸಂಕಲ್ಪವನ್ನು ಉಂಟುಮಾಡತಕ್ಕವನು. ಹಾಗಿದ್ದರೆ ಈ ದ್ರಾವಿಡ ಪ್ರಾಣಾಯಾಮವಾದರೂ ಏಕೆ? ಎಂದು ಯಾರಾದರೂ ಪ್ರಶ್ನಿಸಬಹುದು. ನಿಜ ! ಇದರ ರಹಸ್ಯ ಕೆಲವೇ ಕೃತಾರ್ಥ ಮಹನೀಯರಿಗೆ ಮಾತ್ರ ಗೊತ್ತು. ಅವತಾರ ಪುರುಷರು ಉಪಸ್ಥಿತರಿರುವಲ್ಲಿ ಪರಮಾತ್ಮನು ಅಂತಹವರ ಮೂಲಕವೇ ತನ್ನ ಸಂಕಲ್ಪ ನೆರವೇರಿಸಿಕೊಳ್ಳುತ್ತಾನೆಯೇ ಹೊರತು ನೇರವಾಗಿ ತಾನೇ ಅದನ್ನು ಮಾಡುವುದಿಲ್ಲವೆಂಬುದೇ ಸಿದ್ಧಾಂತ.

ಪ್ರಭುವೇ ! ಆ ರೀತಿಯ ಕರುಣಾ ಸಂಕಲ್ಪವನ್ನು ತಮ್ಮಲ್ಲಿ ಉಂಟುಮಾಡುವಂತೆ ಆ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

ಇತಿ

ಯಾವಾಗಲೂ ತಮ್ಮೊಂದಿಗೇ ಇರುವ
ತಮ್ಮ ಜನ್ಮಾಂತರ ಸಹೋದರ.

ಭಗವನ್ ! ಲೋಕಾಚಾರ್ಯ ಆನಂದಾಶ್ರಮ–ಶಿರಸಿ. ೩೧-೩-೩೧.

ಭಗವಾನರ ಕೃಪೆಯಿಂದ ಎಲ್ಲ ಕ್ಷೇಮ. ರಂಗರಾಯನು ಬರುವ ಸೋಮವಾರ ಇಲ್ಲಿಂದ ಹೊರಟು ಮಂಗಳವಾರ ಸಂಜೆ ತಮ್ಮ ಸನ್ನಿಧಿಗೆ ಬಂದು ತಲುಪುತ್ತಾನೆ. ಆತನಿಗೆ ತಮ್ಮನ್ನು ಸಂದರ್ಶಿಸಲೇ ಬೇಕೆಂಬ ಆಂತರಿಕ ಒತ್ತಡವನ್ನು ಅದುಮಿ ಇಡುವುದು ಸಾಧ್ಯವಾಗಿಲ್ಲ. ನಮಗೂ ಅದೇ ರೀತಿಯ ಹಂಬಲ ಇದೆ. ಆದರೆ ಒಬ್ಬೊಬ್ಬರಿಗೆ ಒಂದೊಂದು ಬಗೆಯ ಪ್ರತಿಬಂಧಕವಿದ್ದು ನಮ್ಮ ಹಂಬಲ ಈಡೇರಿಸಿಕೊಳ್ಳಲು ಅವಕಾಶವಾಗುತ್ತಿಲ್ಲ. ನಾನಾದರೋ ಭಗವಾನರ ಕೃಪೆಯ ವಿಶ್ವವ್ಯಾಪಕ ಶಕ್ತಿಯನ್ನು ನೆನೆದು ಸಮಾಧಾನದಿಂದ ಇದ್ದೇನೆ. ಅಥವಾ ಭಗವದ್ದೃಷ್ಟಿಗಿಂತ ದೂರದಲ್ಲಿರುವ ಭಕ್ತರನ್ನು ಅನುಗ್ರಹಿಸುವ ವ್ಯಸನವೇ ಹೆಚ್ಚಿನದಿರಬಹುದು.

ವತ್ಸ ಕಪಾಲಿಯು 'ಷಡ್ದರ್ಶನಸಂಗ್ರಹದ' ಮೂಲಕೃತಿಯ ಅಭ್ಯಾಸವನ್ನು ಮುಗಿಸಿದ್ದು ಅದರ ಮೇಲಿನ ಟೀಕಾ ರಚನೆಯನ್ನು ಇಷ್ಟರಲ್ಲಿಯೇ ಪ್ರಾರಂಭಿಸಲಿ

ದ್ದಾನೆ. "ಸದ್ದರ್ಶನ ಸಂಗ್ರಹ"ದ ತೆಲುಗು ಪಾಠಾಂತರವನ್ನು ದ್ವಿಪದಿಯಲ್ಲಿ ರಚಿಸಿರುವ ತಮ್ಮ ಭಕ್ತ ಸಾಧುವಿನ ಪತ್ರ ವಿಶ್ವನಾಥನಿಗೆ ಬಂದಿದೆ. ಶ್ರೀ ಚರಣರನ್ನು ಕುರಿತ ನನ್ನ 21 ಶ್ಲೋಕಗಳನ್ನು ಮುದ್ರಿಸುವುದಕ್ಕೆ ನನ್ನ ಅಡ್ಡಿ ಏನೂ ಇಲ್ಲ. ಆ ಪುಸ್ತಕವು ತಮ್ಮ ಆಶ್ರಮದ ಸ್ವತ್ತೇ ಆಗಿರಬೇಕೆಂಬುದು ನನ್ನ ಅಪೇಕ್ಷೆ.

ಬಹು ಜನ್ಮ ಸಖನಾದ ನನ್ನ ಸ್ವಾಮಿಯೇ! ತಮ್ಮ ಕೃಪೆಯಿಂದ ಸಹಚರರನ್ನು ಒಡಗೂಡಿದ ನನ್ನ ತಪಸ್ಸು ಅಭಿವೃದ್ಧಿಗೊಳ್ಳುತ್ತಿದೆ. ಭಕ್ತಿ ಪರವಶನಾದ ರಂಗರಾಯನು ಉತ್ಕಟ ಉತ್ಸಾಹದಿಂದ ಹೇಳುತ್ತಾನೆ "ನಾಯನ ! ನಿಮ್ಮ ತಪೋಭಿವೃದ್ಧಿಗಾಗಿ ನಾನು ಒಂದು ತಿಂಗಳು ಭಗವಾನರ ಕೈಂಕರ್ಯ ನಡೆಸುತ್ತೇನೆ." ಎಂದು. ಭಗವನ್ ! ತಾವೇನಾದರೂ ಅವನ ಈ ಕೈಂಕರ್ಯಕ್ಕೆ ಪ್ರತಿಯಾಗಿ ಸಲ್ಲಬೇಕಾದ ವೇತನವನ್ನು ನನಗೆ ತಮ್ಮ ಕಟಾಕ್ಷ ರೂಪದಲ್ಲಿ ಅನುಗ್ರಹಿಸುವಿರಾದರೆ ನನಗೆ ಇವಕ್ಕಿಂತ ಮಿಗಿಲಾದ ಗುರುದಕ್ಷಿಣೆಯನ್ನು ಕೊಡಬಲ್ಲ ಅವನಿಗಿಂತ ಹೆಚ್ಚಿನ ಶಿಷ್ಯ ಯಾರೂ ಇರಲಾರ. ಅಥವಾ ರಂಗರಾಯನಲ್ಲಿ ಅವಿಷ್ಟಳಾದ ಪ್ರಚಂಡ ಚಂಡಿಕಾ ದೇವಿಯೇ ನನಗಾಗಿ ದೇವಸೇನಾಪತಿ (ಸುಬ್ರಹ್ಮಣ್ಯ) ಸ್ವರೂಪರಾದ ಭಗವಾನರ ಸೇವೆಯನ್ನು ಮಾಡುವುದಾಗಿ ಹೇಳಿರಬೇಕೆಂದು ತಿಳಿಯುತ್ತೇನೆ.

ಹೇ! ವರದ! ನನ್ನಲ್ಲಿ ಸಾವಿರಾರು ಆಸೆಗಳಿವೆ. ತಮ್ಮ ಅನುಗ್ರಹ ವಿಶೇಷದಿಂದ ಅವೆಲ್ಲ ಹೃದಯ ಕುಹರದ ಮೂಲೆಯಲ್ಲಿ ಅಡಗಿರಲಿ ! ಆದರೆ ಅವುಗಳಲ್ಲಿ ಒಂದು ಆಸೆ ಮಾತ್ರ ಈಗಲೂ ತಲೆ ಎತ್ತಿ ಕಾಡುತ್ತಿದೆ. "ನನ್ನಲ್ಲಿರುವ ಅಶುದ್ಧ ಅಹಂಕಾರ ನಾಶವಾಗಲಿ" ಭಗವನ್ ! ನನ್ನ ಈ ಒಂದು ಇಚ್ಛೆಯನ್ನು ಪೂರ್ತಿಗೊಳಿಸಬೇಕೆಂದು ಬೇಡುತ್ತೇನೆ.

ಇತೀ ತಮ್ಮವನೇ ಆದ
ನಾಯನ

ಭಗವನ್ ! ಪರಾಶರ ವಂಶಜ ! ಆನಂದಾಶ್ರಮ, ೭-೪-೩೧.

ತಮ್ಮ ಅನುಗ್ರಹ ವಿಶೇಷದಿಂದ ಎಲ್ಲ ಕ್ಷೇಮ. ರಂಗರಾಯನು ತಮ್ಮ ಪವಿತ್ರ ಸನ್ನಿಧಿಯನ್ನು ತಲುಪಿದ್ದು ಇಲ್ಲಿಯ ವಿವರಗಳನ್ನು ವಿಜ್ಞಾಪಿಸಿಕೊಂಡಿರುವುದಾಗಿ ನಂಬುತ್ತೇನೆ.

ಚಿ॥ ಕಪಾಲಿಯು "ಸದ್ದರ್ಶನ ಸಂಗ್ರಹಕ್ಕೆ"ಟೀಕೆ ಬರೆಯಲು ಪ್ರಾರಂಭಿಸಿದ್ದಾನೆ. ಮೂಲ ಗ್ರಂಥದ ವೈಶಿಷ್ಟ್ಯದ ಕಾರಣ ಇದು ಅದಕ್ಕೆ ಭಾಷ್ಯವೆನ್ನು

ವುದೇ ಸೂಕ್ತವಾಗುತ್ತದೆಯೇ ಹೊರತು ಟೀಕೆ ಎನ್ನುವುದಲ್ಲ; ಆಳವಾಗಿ ವಿಮರ್ಶೆ ಮಾಡುತ್ತ ಹೋದಂತೆಲ್ಲಾ "ಸದ್ದರ್ಶನ"ದ ಅಗಾಧತೆ ಹೆಚ್ಚು ಹೆಚ್ಚಾಗುತ್ತ ಹೋಗುತ್ತಿದೆ ಎಂದು ಕಪಾಲಿಯ ಅನಿಸಿಕೆ. ನಾನು ಅದರ ರಚನೆಯಲ್ಲಿ ತೊಡಗಿದ್ದಾಗಲೇ ನನಗೆ ಅದರ "ಗಾಂಭೀರ್ಯ" ಗಮನಕ್ಕೆ ಬರುತ್ತಿತ್ತು. ಈ ಗ್ರಂಥ ಚಿಕ್ಕದಾದರೂ ಮಹತ್ತರ ತತ್ತ್ವಶಾಸ್ತ್ರದರಹಸ್ಯ–ಯೋಗ ಶಾಸ್ತ್ರಗಳಿಗೆ ಸೂತ್ರ ರೂಪವಾಗಿದೆ. ಇಲ್ಲಿ ಅನ್ಯ ಮತಗಳ ಖಂಡನೆ ಸ್ವಲ್ಪವೂ ಇಲ್ಲ. ಹಾಗಿದ್ದೂ ಪರ ಮತ ಧೋರಣೆಗಳೆಲ್ಲವೂ ಇಲ್ಲಿ ಪೂರ್ವ ಪಕ್ಷವಾಗಿ ಮಾಡಲ್ಪಟ್ಟಿರುವ ಚಮತ್ಕಾರ ವನ್ನು ಕಾಣಬಹುದು. ಇದರಲ್ಲಿರುವ ಯುಕ್ತಿಗಳಂತೂ ಪಂಡಿತ–ಪಾಮರರಿಬ್ಬರಿಗೂ ಪ್ರಿಯವಾಗುವಂತಿವೆ. ಪ್ರಾಯಶಃ ಯಾವುದೇ ಪ್ರಮಾಣ ಗ್ರಂಥವನ್ನು ಇದರಲ್ಲಿ ಎತ್ತಿ ಹೇಳಿಲ್ಲ. ಹಾಗಿದ್ದರೂ ಇದು ವೇದಗಳ ಸಾರ–ಸಂಗ್ರಹವನ್ನು ಒಳ ಗೊಂಡಂತೆಯೇ ಭಾಸವಾತ್ತದೆ. ಭಾಷ್ಯಕಾರನು ಇದನ್ನು ವಿವರಿಸುವಾಗ ಪ್ರತಿ ಪಾದಿಸಬೇಕಾದ್ದು ಬಹಳವಿದೆ. ಪ್ರಚುರ ಪಡಿಸ ಬೇಕಾದ ಹೊಸ ಅಂಶಗಳೂ ಉಂಟು. ಆದರೆ ಭಾಷ್ಯ ರಚನೆಯ ಗಾತ್ರ ತೀರಾ ಹೆಚ್ಚಾಗಬಾರದು. ಹಾಗೆಂದು ವಿಷಯುಗಳನ್ನು ಕೈಬಿಡಲೂಕೂಡದು. ಪ್ರಾಮುಖ್ಯತೆಯ ಕ್ರಮದಲ್ಲಿ ವಿಷಯುಗ ಳನ್ನು ನಿರೂಪಿಸಬೇಕು. ನಿಮ್ಮ ಅಸಮಾನ ಕಟಾಕ್ಷಲೇಶದಿಂದಲೇ ವತ್ಸ ಕಪಾಲಿಯು ಇದನ್ನೆಲ್ಲಾ ನಿರ್ವಹಿಸಲು ಸಮರ್ಥನಿದ್ದಾನೆ.

ನಾನು "ಪ್ರಚಂಡ ಚಂಡೀ" ಎಂಬ ಸ್ತೋತ್ರವೊಂದನ್ನು ರಚಿಸಿದ್ದೇನೆ. ಅದರ ಒಂದು ಸ್ತಬಕವನ್ನು ರಂಗರಾಯನು ಬರೆದುಕೊಂಡು ಹೋಗಿದ್ದಾನೆ. ಇದೀಗ "ಇಂದ್ರ ಸಹಸ್ರ"ವನ್ನು ಪ್ರಾರಂಭಿಸಿದ್ದೇನೆ. ಇದು ಪೂರ್ಣಗೊಳ್ಳುವಂತೆ ಭಗವಾನರು ಅನುಗ್ರಹಿಸೋಣವಾಗಲಿ.

ಇತಿ ಶ್ರೀ ರಮಣ ಭಕ್ತ
ವಾಸಿಷ್ಠ

ಹೃದಯಾಂತರಾಳವಾಸಿ ಭಗವನ್ ! ಆನಂದಾಶ್ರಮ ಶಿರಸಿ. ೧೪-೪-೩೦

ಹೊಸ ವರ್ಷಾರಂಭದ ಈ ಶುಭ ವೇಳೆಯಲ್ಲಿ ನಮ್ಮ ವಂದನೆಗಳನ್ನು ಸ್ವೀಕ ರಿಸಿ ಆಶೀರ್ವದಿಸೋಣವಾಗಲಿ ! ತಮ್ಮ ಕರುಣೆಯಿಂದ ಹೊಸವರ್ಷವು ನಮಗೆ ಜಯ–ಮಂಗಳದಾಯಕವಾಗಲಿ.

ದೈವರಾತ–ಸೀತಾರಾಮರು ಇದೀಗ ಮುಂಬಯಿಯಿಂದ ಆನಂದಾಶ್ರಮಕ್ಕೆ ಬಂದಿದ್ದು ಮಗನ ಉಪನಯನ ನೆರವೇರಿಸಲು ಇಷ್ಟರಲ್ಲಿಯೇ ಗೋಕರ್ಣಕ್ಕೆ ಹೊರಡಲಿದ್ದಾರೆ.

ವತ್ಸಕಪಾಲಿಯು ಸದ್ದರ್ಶನ ಭಾಷ್ಯರಚನೆಯನ್ನು ಮುಂದುವರಿಸುತ್ತಿದ್ದಾನೆ.

ರಂಗರಾಯನ ಪತ್ರ ತಲುಪಿದೆ. ಅವನಾಗಲೀ–ಸುಂದರೇಶ್ವರನಾಗಲೀ ವಾರಕ್ಕೆ ಒಂಪರಂತೆ ಪತ್ರ ಬರೆಯುತ್ತಾರೆಂದು ನಿರೀಕ್ಷಿಸಿದ್ದೇನೆ.

ತಪಸ್ಸಿನ ಪರಿಪಕ್ವಸ್ಥಿತಿಯಲ್ಲಿ ಅಹಂಕಾರ ಅಳಿಯುತ್ತದೆ. ಸಹಾಜಾನಂದ ರೂಪವಾದ ಆತ್ಮನಿಷ್ಠೆ ಸ್ಥಿರಗೊಳ್ಳುತ್ತದೆ. ಎಲ್ಲ ಇಂದ್ರಿಯಗಳೂ ಬ್ರಹ್ಮನಿಷ್ಠವಾಗುತ್ತವೆ. ಅದೇ ಪರಿಪೂರ್ಣ ಸಾಧನೆ ಎಂಬುದನ್ನೂ ತಿಳಿದಿದ್ದೇನೆ. ವಿಜ್ಞಾನಾತ್ಮ ನಿಷ್ಠೆಯು ಮೂಲ ಸ್ವರೂಪ ನಿಷ್ಠೆಗೆ ಮಾರ್ಗದರ್ಶನ ಮಾಡಲಿ.

ಕೊನೆಯದಾಗಿ ನನ್ನ ಸರ್ವೇಷ್ಟ ಸಿದ್ಧಿಯ ಹಂಬಲ ಭಗವಾನರ ಚರಣ ಸನ್ನಿಧಿಯಲ್ಲಿಯೇ ಪರಿಪೂರ್ಣಗೊಳ್ಳುತ್ತದೆಯೆಂದು ತಿಳಿಯುತ್ತೇನೆ. ಅಂತಹ ಶುಭ ವೇಳೆಯ ಪ್ರತೀಕ್ಷೆಯಲ್ಲಿಯೇ ಇದ್ದೇನೆ.

ಪ್ರಕೃತ ದೂರದಲ್ಲಿದ್ದರೂ ಸಮೀಪವೇ ಇರುವಂತೆ ಭಾವಿಸೋಣವಾಗಲಿ.

ಪ್ರಭುವೇ ! ತಾವು ನನ್ನ ಹೃದಯದಲ್ಲಿ ನೆಲೆಸಿರಿ. ನಾನು ತಮ್ಮ ಚರಣಗಳನ್ನು ಆಶ್ರಯಿಸುತ್ತೇನೆ. ನೀವೇ ನನ್ನ ಒಡೆಯ ! ಮಾರ್ಗ ನಿರ್ದೇಶಕರು ! ನಾನು ನಿಮ್ಮ ಸೇವಕನಾಗಿ ಕೆಲಸಮಾಡ ತಕ್ಕವನು !

ಇತಿ ತಮ್ಮವನೇ ಆದ

ವಾಸಿಷ್ಠ.

ಭಗವನ್ ! ಸರ್ವಾಂತರ ! ಗೋಕರ್ಣ–೨೧–೪–೩೧.

ಚಿರಂಜೀವಿ ದೈವರಾತನ ಒತ್ತಾಯದಿಂದ ಆತನ ಮಗನ (ಚಿ॥ ಸೋಮ) ಉಪನಯನ ಸಮಾರಂಭದಲ್ಲಿ ಆಶೀರ್ವಾದ ನೀಡಲೆಂದು ಈ ಪವಿತ್ರ ಗೋಕರ್ಣ ಕ್ಷೇತ್ರಕ್ಕೆ ಬಂದಿದ್ದೇನೆ. ಶನಿವಾರ ಇಲ್ಲಿಂದ ವಾಪಸು ಹೊರಡುತ್ತೇನೆ.

.... ಯಾರು ಸ್ವತಃ ಗುಹ (ಷಣ್ಮುಖ) ಸ್ವರೂಪರಾಗಿ ಗುಹೆ (ಗವಿ)ಯಲ್ಲಿ ವಾಸಿಸುತ್ತಿರುವರೋ, ಯಾರು ಪ್ರಾಪಂಚಿಕ ಬುದ್ಧಿಯುಳ್ಳವರ (ಸಾಮಾನ್ಯಜನರ) ಅಂತರ್ಯದಲ್ಲಿ ಪವಡಿಸಿರುತ್ತ–ಯೋಗಿಗಳ ಹೃದಯದಲ್ಲಿ ಬೆಳಗುತ್ತಿರುವರೋ, ಹೃದಯದಲ್ಲಿ ಯಾರನ್ನು ಜಾಗ್ರತಗೊಳಿಸುವಿಕೆಯೇ ಮಾನವನ 2ನೇ ಹುಟ್ಟು ಎಂದು ಪರಿಗಣಿಸಲಾಗುತ್ತಿದೆಯೋ, ಯಾರನ್ನು ಮಂತ್ರ

ದ್ರಷ್ಟಾರ ಋಷಿಗಳು ವೈಶ್ವಾನರನೆಂದು ಕೊಂಡಾಡುವರೋ, ದಾರ್ಶನಿಕರು ಯಾರನ್ನು ವಿರಾಟ ಪುರುಷನೆಂದು ಸ್ತುತಿಸುವರೋ. ಜ್ಞಾನ ಮಾತ್ರವೇ ಯಾರ ಸ್ವರೂಪ–ಶರೀರ–ಸ್ಥಾನ–ಉಪಕರಣಗಳಾಗಿವೆಯೋ ಆ ಶಿವನ ಕಿರಿಯ ಮಗನಾದ ಭಗವಾನರೇ ! ತಮಗೆ ಇದೋ ನಮಸ್ಕಾರ.

ಇತೀ ತಮ್ಮವನೇ ಆದ
ಜ್ಯೇಷ್ಠರಾಜ *
(ಗಣಪತಿ)

* ಜ್ಯೇಷ್ಠರಾಜ (ಹಿರಿಯರಾಜಪುತ್ರ) ಎಂಬುದು ಗಣಪತಿಯ ಮುಖ್ಯ ಹೆಸರುಗಳಲ್ಲಿ ಒಂದು. ಆತ ಎಲ್ಲ ಮಂತ್ರಗಳ ಒಡೆಯನೆಂದು ಖ್ಯಾತಿ ಪಡೆದವನು.

ಭಗವನ್ ! ಕರುಣಾಲಯ ! ಆನಂದಾಶ್ರಮ–ಶಿರಸಿ, ೨೮–೪–೩೧

ಗೋಕರ್ಣದಿಂದ ಶನಿವಾರ ವಾಪಸು ಬಂದೆ. ದೇವ ಮತ್ತು ಸುಂದರರ ಪತ್ರಗಳೆರಡೂ ಕೈಸೇರಿವೆ. ____________________

ಸಿಕಂದರಾಬಾದ್‌ನಿಂದ ಅಪ್ಪು ದಂಪತಿಗಳು ಬಂದಿದ್ದಾರೆ. ಚಿ॥ ವಿಶ್ವನಾಥನೂ ಗೋಕರ್ಣದಿಂದ ನನ್ನ ಸಂಗಡ ವಾಪಸು ಬಂದಿದ್ದಾನೆ. ವತ್ಸ ಕಪಾಲಿಯ "ಸದ್ದರ್ಶನ"ದ ಭಾಷ್ಯ ರಚನೆ ಮುನ್ನಡೆದಿದೆ. ಸದ್ದರ್ಶನದ ನನ್ನ ಶ್ಲೋಕಾನುವಾದವು ಮೂಲ ರಚನೆಯ ತಾತ್ಪರ್ಯಕ್ಕೆ ಸರಿಯಾಗಿ ಹೊಂದಿಕೆಯಾಗುತ್ತಿದೆ ಯೆಂಬ ತಮ್ಮ ಅಭಿಪ್ರಾಯವನ್ನು ದೇವನ ಪತ್ರದಿಂದ ತಿಳಿದು ತುಂಬಾ ಉತ್ಸಾಹಿತನಾಗಿದ್ದೇನೆ. ಕಪಾಲಿಯ ಭಾಷ್ಯ (ಇಲ್ಲಿಯವರೆಗೆ ಬರೆಯಲ್ಪಟ್ಟಿರುವುದು) ಮನೋಜ್ಞವೂ–ಶ್ರೇಷ್ಠವೂ ಆಗಿದೆ. ಗುಹ–ಗಣಪತಿ ತತ್ತ್ವವಿಚಾರದ ಸಂದರ್ಭದಲ್ಲಿ ನಾನು ಉಲ್ಲೇಖಿಸಿರುವ ತಮಿಳು ಪದ್ಯವನ್ನು ಕೇಳಿದಾಗ ತಮ್ಮ ಮುಖಾರವಿಂದದಲ್ಲಿ ಆಕರ್ಷಣೀಯ ಮಂದಹಾಸ ಮಿನುಗಿತೆಂದು ದೇವನು ಬರೆದಿದ್ದಾನೆ. ಅಂತಹ ಮುಖ ಕಮಲವನ್ನು ಪ್ರತ್ಯಕ್ಷ ನೋಡಿ ಸಂತಸಪಡುವ ಭಾಗ್ಯ ಅವನದಾದರೆ ನಾವಿಲ್ಲಿ ಆ ಸುದ್ದಿ ಕೇಳಿಯೇ ಆನಂದ ತುಂದಿಲರಾಗುತ್ತಿದ್ದೇವೆ.

ಇತಿ
ಸದಾ ತಮ್ಮ ಧ್ಯಾನದಲ್ಲಿಯೇ ಇರುವ
ಗಣಪತಿ.

ಭಗವನ್ ! ಮಾಯಾಮಾನುಷ! ಆನಂದಾಶ್ರಮ-ಶಿರಸಿ, ೫-೫-೩೧.

ಇಲ್ಲಿ ಎಲ್ಲ ಕ್ಷೇಮ. ....

....

ಪ್ರಭುವಿನ ಅಡಿದಾವರೆಯಲ್ಲಿ ಸ್ವಲ್ಪ ನಿವೇದಿಸಿಕೊಳ್ಳಲು ಉತ್ಸುಕನಾಗಿದ್ದೇನೆ. ಕೆಲವರು ಪರಮಾನಂದ ಪ್ರಾಪ್ತಿಯೇ ಅಂತಿಮ ಗುರಿ ಎನ್ನುತ್ತಾರೆ. ಶ್ರೇಷ್ಠವಾದ ಯೋಗ ಸಿದ್ಧಿಯೇ ಕೊನೆಯ ಲಕ್ಷ್ಯ ಎಂಬುದು ಇನ್ನು ಕೆಲವರ ಅಭಿಮತ. ಸುಖ ದುಃಖ ಈ ಎರಡರ ಅನುಭವವೂ ಉಂಟಾಗದ ಒಂದು ಸ್ಥಿತಿಯೇ ಮುಖ್ಯ ಎಂಬುದು ಮತ್ತೆ ಕೆಲವರ ನಿರ್ಧಾರ. ಇನ್ನಿತರರು ಮರಣವನ್ನು ಗೆಲ್ಲವುದೇ ಪರಮ ಲಕ್ಷ್ಯ ಎಂದು ತಿಳಿಯುತ್ತಾರೆ. ನಾನಾದರೋ ಆಸೆಗಳಿಂದ ಬಿಡುಗಡೆ ಹೊಂದುವುದೇ ಉತ್ತಮ ಗುರಿ ಎಂದು ಭಾವಿಸುತ್ತೇನೆ. ನನ್ನಲ್ಲಿ ಉಂಟಾದ ಬಹುತೇಕ ಆಸೆಗಳು ತಿರುಳಿಲ್ಲದ ಕಾರಣ ತಾವಾಗಿಯೇ ಮುರುಟಿ ಹೋಗಿವೆ. ಕೆಲವನ್ನು ತಿರಸ್ಕರಿಸಿದ್ದಾಗಿದೆ. ಕೆಲವನ್ನು ಉಪಭೋಗಿಸಿ ಶಮನಗೊಳಿಸಿ ಕೊಂಡಿದ್ದೇನೆ. ಮಿಕ್ಕವು ನನ್ನ ಪ್ರಾರ್ಥನೆಯಂತೆ ದೂರ ಸರಿದಿವೆ. ಆದರೆ ಗಟ್ಟಿಯೋ ! ಠೊಳ್ಳೊ !ಒಂದೇ ಒಂದು ಆಸೆಯನ್ನಂತೂ ನಿವಾರಿಸಿ ಕೊಳ್ಳುವುದು ನನ್ನಿಂದ ಸಾಧ್ಯವಾಗಿಲ್ಲ. ಅದನ್ನು ತ್ಯಜಿಸುವ ಸಾಮರ್ಥ್ಯವೇ ನನಗಿಲ್ಲ. 'ದೂರ ಸರಿ !, ಎಂದು ಅದಕ್ಕೆ ಆಜ್ಞೆ ಮಾಡುವ ಇಚ್ಛೆಯೂ ನನಗೆ ಉಂಟಾಗುತ್ತಿಲ್ಲ. ನನ್ನ ಈ ಕಷ್ಟದಲ್ಲಿ ಭಗವಾನರ ಸಹಾನುಭೂತಿಗಾಗಿ ಬೇಡಿಕೊಳ್ಳುತ್ತಿದ್ದೇನೆ. ನನ್ನ ಆ ಒಂದೇ ಒಂದು ಆಸೆ ಯಾವುದೆಂಬುದು ಭಗವಾನರಿಗೆ ತಿಳಿದೇ ಇದೆ.

ಸರ್ವ ರಕ್ಷಕ ! ಅದರ ನಿವಾರಣೆ ನಿಮ್ಮದೇ ಆಗಿದೆಯೆಂಬುದು ನನ್ನ ನಂಬಿಕೆ. ಅದು ಸತ್ಯವೂಕೂಡಾ. ಎಲ್ಲ ಭಾರವನ್ನೂ ಈ ಸೇವಕನ ತಲೆಗೇ ಹೊರಿಸಿ ತಾವು ಉದಾಸೀನರಾಗಿರಲಾಗದೆಂಬುದಷ್ಟೇ ಈಗ ನನ್ನ ಪ್ರಾರ್ಥನೆ.

ಹಲವು ಜನ್ಮಗಳಲ್ಲಿ ತಮ್ಮ ಸಹಚರನೂ
ಸಹೋದರನೂ ಆದ
ಗಣಪತಿ.

ಭಗವನ್ ! ದೀನಬಂಧುವೇ ! ಆನಂದಾಶ್ರಮ-ಶಿರಸಿ, ೩-೬-೩೧

ಭಗವಾನರು ಉಪದೇಶಿಸಿದ ವಿಷಯವನ್ನು ಸುಂದರನು ಬರೆದು ತಿಳಿಸಿದ್ದಾನೆ.

ಯಾವುದೇ ಪರಿಮಿತ ಜ್ಞಾನದ ಅಭಾವಾನುಭವವು ಈಶ್ವರನಿಗೂ ಮುಕ್ತನಿಗೂ ಸಮಾನವಾದುದೆಂಬ ಭಗವಾನರ ವಚನ ಶ್ರವಣ ಮಾತ್ರದಿಂದಲೇ ಇಲ್ಲಿ ನಮ್ಮೆಲ್ಲರಿಗೆ ಇದ್ದ ಕೆಲವು ಸಂದೇಹಗಳು ನಿವಾರಣೆಯಾಗಿ ಹೋದವು. ಜಗತ್ತನ್ನು ನಿಯಂತ್ರಿಸುವ ಈಶ್ವರನೊಬ್ಬನಿದ್ದಾನೆ. ಮುಕ್ತರಾದವರಿಗೂ ವ್ಯಕ್ತಿತ್ವ ಇದೆ. ಇರುವಿಕೆ—ಇಲ್ಲದಿರುವಿಕೆಯ ಪರಿಮಿತ ಜ್ಞಾನ ನಾಶದ ಅನುಭವ ಮಾತ್ರ ಈ ಇಬ್ಬರಿಗೂ ಒಂದೇ ಎಂಬುದು ಭಗವಾನರ ಮಾತಿನಿಂದ ಇಲ್ಲಿ ನಮಗೆ ತಿಳಿದಂತಾಗಿದೆ: ಭಗವಾನರ ಸದ್ದರ್ಶನದಲ್ಲಿ ದೃಷ್ಟಿ-ಸೃಷ್ಟಿಗಳ ಜಿಜ್ಞಾಸೆಗೆ ಎಡೆಯುಂಟಾಗಿದೆಯೆಂಬ ವಾದಕ್ಕೂ ಈ ಮೂಲಕ ಪ್ರತ್ಯುತ್ತರ ಹೇಳಲ್ಪಟ್ಟಿದೆ. ಈ ಸದ್ದರ್ಶನದಲ್ಲಿ ಕೂಡ ಆ ವಾದಕ್ಕೆ ಪ್ರತ್ಯುತ್ತರ ಇದೆ.

ಇತಿ

ತಮ್ಮ ಪಾದ ಕಮಲದ ದುಂಬಿ

ಗಣಪತಿ.

ಭಗವನ್ .! ಲೀಲಾಮಾನವ ! ಆನಂದಾಶ್ರಮ-ಶಿರಸಿ, ೯—೬—೩೦

ಅಲ್ಲಿ ಶ್ರೀ ಮಾತೃದೇವತೆಯ ಈ ಪೂಜಾದಿನಗಳ ಸಂದರ್ಭದಲ್ಲಿ ಇಲ್ಲಿಯ ನಮ್ಮೆಲ್ಲರ ವಂದನೆಗಳನ್ನು ಸ್ವೀಕರಿಸೋಣವಾಗಲಿ.

ತಪಸ್ವಿಗಳ ಸಂರಕ್ಷಕ ಶ್ರೀ ರಾಮನನ್ನು ಕೌಸಲ್ಯೆಯಂತೆ, ಯೋಗ ವಿದ್ಯೆಯ ಉಪದೇಶಕ ಶ್ರೀ ಕೃಷ್ಣನನ್ನು ದೇವಕಿಯಂತೆ, ಎಲ್ಲ ಪ್ರಾಣಿಗಳಿಗೆ ಅಭಯ ನೀಡುವ ಗೌತಮ ಬುದ್ಧನನ್ನು ಮಾಯಾದೇವಿಯಂತೆ, ಬಾಲ್ಯದಿಂದಲೂ ಬ್ರಹ್ಮಚರ್ಯ ಪಾಲಿಸುತ್ತ ಪರಶು ಧರನಾದ ಆಚಾರ್ಯ ಪರಶುರಾಮನನ್ನು ರೇಣುಕೆಯಂತೆ, ಭಕ್ತರ ಪಾಪದ ಹೊರೆಯನ್ನು ತಾನೇ ಹೊತ್ತುಕೊಂಡ ಏಸುಕ್ರಿಸ್ತನನ್ನು ಮೇರಿಯಂತೆ ಈ ಎಲ್ಲರ ಗುಣಗಳಿಂದ ಕೂಡಿದ ಭಗವಾನರಾದ ತಮ್ಮನ್ನು ಲೋಕದ ಒಳಿತಿಗಾಗಿ—ಅಜ್ಞಾನದ ಕತ್ತಲೆಯನ್ನು ಕಳೆಯಲೋಸ್ಕರ ವಿತಂಡವಾದವನ್ನು ದೂರೀಕರಿಸುವ ಸಲುವಾಗಿ—ಸತ್ಯದ ಅರಿವನ್ನು ಉಂಟು ಮಾಡಲೆಂದು—ಹೆತ್ತ ಆ ಮಹಾತಾಯಿ ಸೌಂದರ್ಯಾಂಬೆಗೆ ನಮಸ್ಕಾರ; ಆ ಮಾತೆಯ ಅಧಿಷ್ಠಾನ ಭಗವಾನ್ ಮಾತೃಭೂತೇಶ್ವರನಿಗೆ ನಮನ ; ಅವನನ್ನು ಆರಾಧಿಸುವ ರಮಣ ಭಕ್ತರೆಲ್ಲರಿಗೂ ಅಭಿವಂದನೆಗಳು.

ಸುಂದರನ ಕುಸುಮ ಸಮಾನವಾದಪತ್ರ ತಲುಪಿದೆ. ಈ ಆಶ್ರಮವೇ ಆ ಪುಷ್ಪ ಪರಿಮಳದಿಂದ ತುಂಬಿ ಹೋಯಿತು. ಅದರೊಡನೆ ಭಗವಾನರ ಸಂದೇಶ

ವನ್ನು ತಿಳಿಸುವ ಇನ್ನೊಂದು ಪತ್ರವೂ ಕೈಸೇರಿತು. ನನ್ನ ಅಂತರಾತ್ಮನಿಗೆ ತೃಪ್ತಿಯಾಯಿತು. ಸದ್ದರ್ಶನಕ್ಕೆ ಕಪಾಲಿಯ ಭಾಷ್ಯ ರಚನೆ ಬಹುತೇಕ ಮುಗಿದಿದೆ.

ಇತಿ

ರಮಣ ಭಕ್ತರ ಪಾದಧೂಲಿಯನ್ನು ಧರಿಸಿದ

ವಾಸಿಷ್ಠ.

ಭಗವನ್ ! ಮಹಾಸೇನ ! ಆನಂದಾಶ್ರಮ-೧-೭-೩೧

ಸದ್ದರ್ಶನ ಭಾಷ್ಯದ 2 ಶುದ್ಧ ಪ್ರತಿಗಳ ಬರವಣಿಗೆ ಮುಗಿದಿದೆ. 1ಪ್ರತಿಯನ್ನು ಇಂದೇ ತಮ್ಮ ಆಶ್ರಮಕ್ಕೆ ಕಳಿಸಲಾಗುವುದು. ಈ ದಿನವೇ ಭಗವಾನರ ಸಂದರ್ಶನ ಪಡೆಯಲೆಂದು ಚಿ॥ ವಿಶ್ವನಾಥ-ಚಿ॥ ರಂಗರಾಯ ಇಬ್ಬರೂ ಇಲ್ಲಿಂದ ಹೊರಟಿದ್ದಾರೆ. ಶೀಘ್ರವೇ ಸನ್ನಿಧಿಗೆ ಬಂದು ತಲುಪುತ್ತಾರೆ.

ಇಲ್ಲಿ ಮಳೆಗಾಲ ಪ್ರಾರಂಭವಾಗಿದೆ. ಮೋಟಾರು ವಾಹನದಲ್ಲಿ ಮಳೆಗೆ ಸಿಕ್ಕಿ ನೆನೆದು ಹೋದೀತೆಂಬ ಶಂಕೆಯಿಂದ ಪುಸ್ತಕವನ್ನು ಇವರ ಕೈಲಿ ಕಳಿಸಿಲ್ಲ. ಅಂಚೆಯ ಮೂಲಕವೇ ಕಳಿಸಲಾಗುವುದು.

ವತ್ಸ ಕಪಾಲಿಯ ಭಾಷ್ಯ ನನಗೆ ಅತಿ ಪ್ರಿಯವೆನಿಸಿತು. ಭಗವಾನರ ಅಂತರಂಗವನ್ನೂ ಅದು ತಲುಪಬಲ್ಲದೆಂದು ನನ್ನ ವಿಶ್ವಾಸ.

ಇತಿ

ಗಣಪತಿ.

ಭಗವನ್ ! ಪುಣ್ಯಶ್ಲೋಕ ! ಆನಂದಾಶ್ರಮ-೧೫-೭-೩೧

ತಮ್ಮ ಕೃಪೆಯಿಂದ ಎಲ್ಲರೂ ಕ್ಷೇಮ. ಜಡಿಮಳೆಯಿಂದಾಗಿ ಈ ಪ್ರದೇಶದಲ್ಲಿ ದಿನಗಳು ಮಬ್ಬಾಗಿದ್ದು ಸಾವಕಾಶವಾಗಿ ಸರಿಯುವಂತೆ ಅನಿಸುತ್ತಿದೆ. ಆದರೂ ತಮ್ಮಿಂದ ಪ್ರೇರಿತವಾದ ಯಾವುದೋ ಶಕ್ತಿ ವಿಶೇಷವು ನಮ್ಮ ಅಂತರಂಗವನ್ನು ತುಷ್ಟಿ ಜಾಗ್ರತರನ್ನಾಗಿ ಮಾಡಿದೆ. ಇಲ್ಲಿ ಸೂರ್ಯನ ಕಿರಣವೇ ಕಾಣಬರುತ್ತಿಲ್ಲ. ಆದರೆ ನಾವು ಮಾತ್ರ ಸೂರ್ಯ ಪ್ರಭೆಯಲ್ಲಿಯೇ ಇದ್ದೇವೆ. ಈ ಮಹತ್ತರ ಪಾಕ (ಅಡುಗೆ) ಕಾರ್ಯದಲ್ಲಿ ಭಗವಾನರೇ ಮುಖ್ಯ ಪಾಚಕ (ಅಡುಗೆಯ ಮುಖ್ಯಸ್ಥ) ಎಂಬುದನ್ನು ನಾವು ಮರೆಯಲಾರೆವು. ಭಗವಾನರ ಈ ಕೆಲಸವಾದರೋ ವೇತನ (ಸಂಬಳ) ವಿಲ್ಲದ್ದು. ಈ ಕಾರ್ಯದಲ್ಲಿ ಮಹಿಳೆಯೊಬ್ಬಳ

ಕೂಡ ಭಗವಾನರಿಗೆ ಸಹಾಯಕಳಾಗಿ ಇದ್ದಾಳೆ. ಯಾರವಳು ? ಭಗವಂತನ 6 ನೆಯ ಅವತಾರವೆನಿಸಿ ರಾಜರ ಅಹಂಕಾರವನ್ನು ಅಡಗಿಸಿದ ಪರಶುರಾಮನ ತಾಯಿ ಪ್ರಚಂಡ ಚಂಡೀ ದೇವಿಯೇ ಅವಳು. ಎಲ್ಲ ಪಾಮರ ಭಕ್ತರಿಗೆ ದಾರಿ ತೋರುವ ಒಡೆಯ ಮೇಲೆ ಇದ್ದಾನೆ. ಜ್ಞಾನಿಗಳಿಗಾದರೋ ಎಲ್ಲೆಡೆಯಲ್ಲಿಯೂ ಅವನ ಇರುವಿಕೆ ಕಾಣಬರುತ್ತದೆ. ಅವನು ತನ್ನ ಈ ಪಾಕ ಕಾರ್ಯದಿಂದ ತನಗಿಷ್ಟ ವಾದ ಪಾಕವನ್ನು ಶೀಘ್ರವಾಗಿ ಸಿದ್ಧಪಡಿಸಿಕೊಂಡು ಸೇವಿಸಲಿ.

ಇತಿ

ಬೇಯಿಸಲ್ಪಡುತ್ತಿರುವ ಮನುಷ್ಯರೂಪದ
ಅನ್ನ

ಭಗವನ್ ! ಭಕ್ತವತ್ಸಲ ! ಆನಂದಾಶ್ರಮ–೨೨–೭–೩೦.

ಮಂತ್ರಜ ಜಪಾನುಷ್ಠಾನದ ಮಹಿಮೆಯನ್ನು ನೋಡಿದ್ದಾಯಿತು. ಯೋಗ ಸಾಧನೆಯ ಸತ್ವವನ್ನು ಅರಿತಿದ್ದಾಯಿತು. ಶಾಸ್ತ್ರಗಳ ಅರ್ಥವನ್ನು ವಿಶೇಷರೀತಿಯಲ್ಲಿ ವಿಚಾರಮಾಡಿದ್ದಾಯಿತು. ಏಕಾಗ್ರತೆಯಿಂದ ತಪಸ್ಸು ನಡೆಸಿದ್ದಾಯಿತು. ಕುಂಡಲಿನೀ ಶಕ್ತಿಯಿಂದ ದೊರೆಯುವ ಉಲ್ಲಾಸವನ್ನು ಪರೀಕ್ಷಿಸಿದ್ದಾಯಿತು. ಆತ್ಮದ ಮೂಲ ಸ್ಥಾನವನ್ನು ಕಂಡುಕೊಂಡುದಾಯಿತು. ನಿಸರ್ಗದ ಪರಿಪಾಕವನ್ನು ಮೌನದಿಂದಲೇ ನಿರೀಕ್ಷಿಸಿದ್ದಾಯಿತು. ಭೇದ ಭಾವವನ್ನು ದೂರಮಾಡಿದ್ದಾಯಿತು. ಚಾಪಲ್ಯ ವನ್ನು ಬಿಟ್ಟಿದ್ದಾಯಿತು. ಮನಃಸ್ಥೈರ್ಯವನ್ನು ಒಡಗೂಡಿಸಿ ಕೊಂಡಿದ್ದಾಯಿತು. ಇಷ್ಟೆಲ್ಲ ಆದರೂ ತೃಪ್ತಿಯಾಗಿಲ್ಲ.

ಈಗ ಭಕ್ತಿಯಿಂದಲೇ ತೃಪ್ತಿ ಪಡೆಯಲು ಯತ್ನಿಸುತ್ತಿದ್ದೇನೆ. ಆ ಭಕ್ತಿಗೆ ಸ್ಥಾನಗಳು ಮೂರು :– ಮೊದಲ ಸ್ಥಾನವೇ ಭಗವಾನ್ ಮಹರ್ಷಿಯವರು. ಎರಡನೆಯ ಸ್ಥಾನ-ಲೋಕಾಧಿಪತಿಯಾದ ಇಂದ್ರದೇವ *(ಪುರಾತನ ವೈದಿಕ ಋಷಿಗಳು ಉಪಯೋಗಿಸಿರುವ "ಇಂದ್ರ" ಎಂಬುದು ನಂತರದ ದಿನಗಳಲ್ಲಿ "ಈಶ್ವರ" ಎಂದು ಕರೆಯಲ್ಪಡುತ್ತಿರುವುದರ ಪರ್ಯಾಯವೇ ಆಗಿದೆಯೆಂಬುದನ್ನು ವಿವೇಚನಾಶೀಲ ವೇದ ವಿದ್ವಾಂಸರು ಚೆನ್ನಾಗಿ ಬಲ್ಲರು. ವಾಸಿಷ್ಠ ಗಣಪತಿ ಮುನಿಗಳ ಮಹತ್ತರ ಸಾಧನೆಗಳ ಪೈಕೀ ಒಂದೆಂದರೆ :- ಪ್ರಾಚೀನ ಋಷಿಗಳ ಅಪೌರುಷೇಯ ವೈದಿಕ ಅಂತಜ್ಞಾನವನ್ನು ಆಳವಾಗಿ ಅಗೆದು ಅದರಲ್ಲಿ ಅಡಗಿರುವ ಅಮೂಲ್ಯ ವಿಷಯ ಸಂಪತ್ತನ್ನು ಪುನಃ ಸಂಶೋಧನೆ ಮಾಡಿ ತೆಗೆದು ಅವುಗಳಲ್ಲಿ ಕೆಲವನ್ನು ತಮ್ಮ ಶಿಷ್ಯ

ರಿಗೆ ಮತ್ತು ಆಸಕ್ತರಿಗೆ ಮನವರಿಕೆ ಮಾಡಿಕೊಟ್ಟುದು)

ಮೂರನೆಯ ಸ್ಥಾನವಾದರೋ ಭಗವತೀ ತಾಯಿ ಭಾರತ ಭೂಮಿ.

ಇತಿ

ಚಿರಂತನ ಭಕ್ತ

ಗಣಪತಿ.

ಪ್ರಕರಣ-8

ಭಾವಾಃ ಸ್ಥಿರಾಣಿ ಜನನಾಂತರ ಸೌ ಹೃದಾನಿ ।

—ಶಾಕುಂತಲಂ—

(ಜನ್ಮ-ಜನ್ಮಾಂತರದ ಸ್ನೇಹ ಸಂಬಂಧ ಭಾವಗಳು ಗಟ್ಟಿಯಾಗಿ ಉಳಿದೇ ಇರುತ್ತವೆ)

ಅಕಿಂಚಿದಪಿ ಕುರ್ವಾಣಃ ಸೌಖ್ಯೈರ್ದುಃಖಾನ್ಯಪೋಹತಿ ।
ತತ್ತಸ್ಯ ಕಿಮಪಿ ದ್ರವ್ಯಂ ಯೋ ಹಿ ಯಸ್ಯ ಪ್ರಿಯೋ ಜನಃ ॥

—ಉತ್ತರರಾಮಚರಿತಂ— (2–19)

(ಒಬ್ಬನಿಗೆ ಪ್ರಿಯವೆನಿಸಿದ ಇನ್ನೊಬ್ಬ ವ್ಯಕ್ತಿ ಆತನ ದುಃಖ ನಿವಾರಣೆಗೆ ತಾನಾಗಿ ಏನನ್ನೂ ಮಾಡದಿದ್ದರೂ ಆತ್ಮಸೌಖ್ಯ ವಿಶಿಷ್ಟವಾದ ತನ್ನ ಸಾನ್ನಿಧ್ಯ ಮಾತ್ರದಿಂದಲೇ ಆತನ ದುಃಖ-ದುಮ್ಮಾನಗಳನ್ನು ಹೋಗಲಾಡಿಸಿ ಬಿಡುತ್ತಾನೆ. ಇದು ಆತನ ಪಾಲಿಗೆ ಹೇಳಲಾಗದ-ಬೆಲೆ ಕಟ್ಟಲಾಗದ ದ್ರವ್ಯ ವಿಶೇಷವೇ ಸರಿ.)

ನಂತರ ಸೀತಾರಾಮನೇ ಮೊದಲಾದವರೊಡನೆ ರಮಣಮಹರ್ಷಿಗಳ ಸಂದರ್ಶನಕ್ಕೆ ತೆರಳಿದ ವಾಸಿಷ್ಠರು ಮದರಾಸು ಮಾರ್ಗವಾಗಿ ವಾಪಸು ಬಂದರು. ವಾಸಿಷ್ಠರನ್ನು ಚಿಕ್ಕಂದಿನಿಂದ ದೇವತಾ ಸಮಾನರೆಂದು ಪರಿಗಣಿಸಿ ಗೌರವಿಸುತ್ತಿದ್ದ ತಮಿಳುನಾಡಿನ ಶಿಷ್ಯರು ತಮ್ಮ ಗುರುಗಳನ್ನು ಅರುಣಾಚಲ ಅಥವಾ ಮದರಾಸು ಪ್ರಾಂತ್ಯದಲ್ಲಿಯೇ ನೆಲೆಸುವಂತೆ ಮಾಡುವ ಪ್ರಯತ್ನ ಫಲಿಸಲಿಲ್ಲ. ದೀರ್ಘಕಾಲದಿಂದ ಶಿಷ್ಯರಾಗಿದ್ದವರ ಮನದಲ್ಲಿ ಪ್ರೇಮ ಮೂರ್ತಿಯಾಗಿ ನೆಲೆಸಿದ್ದವರು ಆಚಾರ್ಯರು. ಕೆಲವೊಮ್ಮೆ ಗುರು-ಶಿಷ್ಯರ ನಡುವೆ ಅಭಿಪ್ರಾಯ ಭೇದ ಉಂಟಾಗುವುದೂ ಇತ್ತು. ಆದರೆ ಅಂತಹ ಸಂದರ್ಭದಲ್ಲಿ ಆಚಾರ್ಯರು ಎಂದೂ ತಮ್ಮ

ಹಿರಿಮೆಗೇ ಅಂಟಿಕೊಂಡು ವಾತ್ಸಲ್ಯದಲ್ಲಿ ವ್ಯತ್ಯಯವಾಗುವಂತೆ ನಡೆದುಕೊಳ್ಳುವುದಿಲ್ಲ. ಇಂತಹ ಒಂದು ಸಂದರ್ಭದಲ್ಲಿ ಆಚಾರ್ಯರು ತಮ್ಮ ತಮಿಳುನಾಡು ಶಿಷ್ಯರೊಬ್ಬರಿಗೆ ಬರೆದ ಪತ್ರ ಹೀಗಿದೆ:-

ಪ್ರೀತಿಯ ಶಿಷ್ಯ !

ಗುರಿ ಮತ್ತು ಅದರ ಸಾಧನೆಯ ಮಾರ್ಗದ ವಿಷಯಲ್ಲಿ ನನಗೂ ನಿನಗೂ ಕೊಂಚ ಭಿನ್ನಾಭಿಪ್ರಾಯ ತಾತ್ಕಾಲಿಕವಾಗಿ ಇದೆ. ಹಾಗಿದ್ದರೂ ನಮ್ಮಗಳ ವಿಶಾಲ ದೃಷ್ಟಿ ಒಂದೇ; ಆಧ್ಯಾತ್ಮಿಕ ಜೀವನವೂ ಸಮಾನವಾದದ್ದೇ ; ಅಪೂರ್ವವಾದ ಅಂತಃಕರಣ-ಸರ್ವತೋಮುಖವಾದ ಮಾತು-ತತ್ತ್ವ ಜ್ಞಾನ ಇವೆಲ್ಲವೂ ಒಂದೇ ರೀತಿಯವು. ತಾತ್ಕಾಲಿಕ ಭಿನ್ನಾಭಿಪ್ರಾಯವೆಂಬುದು ಯಾವುದೇ ಪರಿಣಾಮ ಉಂಟು ಮಾಡಲಾರದು. ಬಹುಕಾಲದಿಂದ ಸಂಚಿತಗೊಂಡು ಸ್ಥಿರವಾಗಿರುವ ಹಾರ್ದಿಕ ಪ್ರೇಮ ಭಾವವನ್ನು ಇದು ಕದಲಿಸಲಾರದು.

ಭಗವಾನರ ಅನುಗ್ರಹ-ಭಗವತಿಯ ಕರುಣೆ-ವಾಸಿಷ್ಠ-ಭಾರದ್ವಾಜರ ನಿಶ್ಚಲ ಸಂಬಂಧಗಳಿಗೆ ಜಯವಾಗಲಿ.

ಇತಿ, ನಿನ್ನ ಪ್ರೇಮ ವಶವರ್ತಿಯಾಗಿರುವ

ನಾಯನ.

ವಾಸಿಷ್ಠಮುನಿಗಳು ಶಿರಸಿ ಪ್ರಾಂತ್ಯದಲ್ಲಿ ಸೀತಾರಾಮನೇ ಮೊದಲಾದವರ ಆತ್ಮೀಯ ಪರಿಚರ್ಯೆ ಪಡೆಯುತ್ತ ಶ್ರೀಮುಖ ಸಂವತ್ಸರದ ಮಾಘ ಮಾಸದವರೆಗೂ ನೆಲೆಸಿದ್ದರು. ಈ ಅವಧಿಯಲ್ಲಿ ವೇದಗಳಲ್ಲಿ ಅಡಗಿರುವ ಅಸ್ತ್ರಮಂತ್ರಗಳನ್ನು ಆಯ್ದು ವಿಶ್ವಾಮಿತ್ರ ಮೊದಲಾದ ಶಿಷ್ಯಪ್ರಮುಖರಿಗೆ ಉಪದೇಶಿಸಿದರು. ಮಹಾಭಾರತ ಪರೀಕ್ಷಾ ಮುಂತಾದ ವಿಮರ್ಶಾತ್ಮಕ ಬರಹಗಳನ್ನು ರಚಿಸಿದರು. ಅಲ್ಲದೆ ವೈದಿಕ-ಪಾರಲೌಕಿಕ ತತ್ತ್ವಗಳನ್ನು ಅಲ್ಲಿ ಇದ್ದ ತಮ್ಮ ಶಿಷ್ಯ ಶ್ರೇಷ್ಠ ವಿಶ್ವಾಮಿತ್ರನಿಗೆ ವಿವರಿಸಿದರು. ಅವುಗಳ ಬಗ್ಗೆ ತಮ್ಮ ಇಂಗಿತಗಳನ್ನು ಬರೆದು ಕೊಟ್ಟರು. ಇವು ವಾಸಿಷ್ಠರ ಅಂತಿಮ (ಮರಣ) ಶಾಸನದಂತೆ ಇರುವುದನ್ನು ಕಾಣಬಹುದು. (ಈ ಶಿಷ್ಯರ ಪೂರ್ಣ ಹೆಸರು ದೇವೇಂದ್ರ-ಸುಬ್ರಹ್ಮಣ್ಯ-ವಿಶ್ವಾಮಿತ್ರ ಎಂದಿದೆ. ವಾಸಿಷ್ಠರು1913 ರಲ್ಲಿ ಮೊದಲಬಾರಿಗೆ ಗೋಕರ್ಣಕ್ಕೆ ಹೋಗುವಾಗ ಕುಮಟಾ ಎಂಬ ಊರಿನಲ್ಲಿ ಶ್ರೀಶಾಂತೇರೀ ಕಾಮಾಕ್ಷಿ ಮಂದಿರ ಮತ್ತು ಆಂಗ್ಲ ವಿದ್ಯಾಶಾಲೆಯಲ್ಲಿ ಪ್ರವಚನ ನೀಡಿದ್ದರು. ಆ ಸಭೆಗಳಲ್ಲಿ ಭಾಗವಹಿಸಿದ್ದ ಸುಂದರ ಪಂಡಿತ-ವಿಶ್ವಾಮಿತ್ರರೆಂಬ ವಿದ್ಯಾರ್ಥಿ ಬಾಲಕರಿಬ್ಬರು ಮುಂದೆ ವಾಸಿಷ್ಠಮುನಿಗಳ ಶಿಷ್ಯತ್ವ

ಪಡೆದು ಶಿರಸಿಯಲ್ಲಿ ನ್ಯಾಯವಾದಿಗಳಾಗಿ ಜೀವನ ನಡೆಸಿದರು. ಕಾಮಾಕ್ಷೀ ಮಂದಿರದಲ್ಲಿ ವಾಸಿಷ್ಠರು ತಮ್ಮ ಪ್ರವಚನದಲ್ಲಿ ಗಾಯತ್ರೀ ಮಂತ್ರದ ಅರ್ಥ–ತೈತ್ತಿರೀಯ ಉಪನಿಷತ್ತಿನ ಭೃಗುವಲ್ಲಿಯಲ್ಲಿ ಪ್ರತಿ ಪಾದಿತವಾದ ತಪೋರಹಸ್ಯಗಳನ್ನು ವಿವರಿಸಿದ್ದರು. ಇದರಿಂದ ಪ್ರಭಾವಿತರಾದ ವಿಶ್ವಾಮಿತ್ರರಿಗೆ ಅಧ್ಯಾತ್ಮಮಾರ್ಗದಲ್ಲಿ ಆಸಕ್ತಿ ಹುಟ್ಟಿತು. ಮರುದಿನದಿಂದಲೇ ಆಹಾರಾದಿ ವಿಷಯಗಳಲ್ಲಿ ನಿಯಮವನ್ನು ಳವಡಿಸಿಕೊಂಡು ಮಂತ್ರಾನುಷ್ಠಾನ ಮಾಡುತ್ತಲೇ ವಿದ್ಯಾಭ್ಯಾಸವನ್ನು ಮುಂದುವರಿಸಿ ಆಂಗ್ಲ ವಿದ್ಯೆಯಲ್ಲಿ ಪದವಿಯನ್ನು ಪಡೆದರು. ಈ ಅವಧಿಯಲ್ಲಿ ಇವರಿಗೆ ಕೆಲವು ದಿವ್ಯ ಸಂಕೇತಗಳು ಅನುಭವಕ್ಕೆ ಬರುತ್ತ ತಮ್ಮ ಗುರುಗಳೆಂದು ತಾವೇ ಕಲ್ಪಿಸಿಕೊಂಡಿದ್ದ ವಾಸಿಷ್ಠಮುನಿಗಳನ್ನು ಸಂದರ್ಶಿಸುವ ಹಂಬಲ ಪ್ರಬಲವಾಗುತ್ತಿತ್ತು. ಗುರುಗಳ ಆ ಪ್ರಥಮ ಸಂದರ್ಶನದ ನಂತರ ಮತ್ತೆ 13ವರ್ಷ ಕಳೆದು 1926ರಲ್ಲಿ ಅದೇ ಗೋಕರ್ಣ ಕ್ಷೇತ್ರದಲ್ಲಿ ಅಯಾಚಿತವಾಗಿ ವಾಸಿಷ್ಠರನ್ನು ಸಂಧಿಸುವ ಯೋಗ ಕೂಡಿ ಬಂದಿತು. ಅಲ್ಲಿಂದ ಮುಂದೆ ವಾಸಿಷ್ಠರೊಡನೆ ಇವರ ಸಂಬಂಧ ದೃಢವಾಗಿ ಬೆಳೆದು ಇವರ ಅಭ್ಯುದಯಕ್ಕೂ ಕಾರಣವಾಯಿತು. ವಾಸಿಷ್ಠರಿಂದ ವೇದ ವಿದ್ಯಾ ರಹಸ್ಯ-ದೇವತಾ ತತ್ತ್ವ–ಅವತಾರದ ಆಂತರ್ಯನ್ನು ಅರಿತುಕೊಂಡ ವಿಶ್ವಾಮಿತ್ರರು ತಮ್ಮ ಗರುಗಳ ಆಶಯದಂತೆ ಸ್ವತಃ ಅನುಷ್ಠಾನ ಮಾಡುತ್ತಲೂ, ಇತರ ಸಾಧಕರಿಗೆ ಮಾರ್ಗ ದರ್ಶನ ನೀಡುತ್ತಲೂ ತಮ್ಮ ಬದುಕನ್ನು ಸದುಪಯೋಗಪಡಿಸಿಕೊಂಡರು. ಈ ವಿಶ್ವಾಮಿತ್ರರಿಗೆ ಆಗಾಗ ಆಗುತ್ತಿದ್ದ ಸ್ವಪ್ನ ನಿದರ್ಶನಗಳು ಭವಿಷ್ಯದ ಒಳಿತನ್ನು ಸೂಚಿಸುತ್ತಿದ್ದವೆಂಬುದು ಇವರ ಸ್ನೇಹಿತ ವರ್ಗಕ್ಕೆ ಚೆನ್ನಾಗಿ ತಿಳಿದಿದೆ. ತುಂಬ ಆಶ್ಚರ್ಯವೆನಿಸುವ ಈ ಘಟನೆಗಳಿಂದಾಗಿ ಗೆಳೆಯರ ಬಳಗದಲ್ಲಿ ಇವರಿಗೆ "ದರ್ಶನ ಮಂಜೂಷಾ–ಸ್ವಪ್ನ ಪೇಟಿಕಾ" ಎಂಬ ಅಂಕಿತ ನಾಮಗಳು ಬಳಕೆಗೆ ಬಂದಿದ್ದವು. ವಾಸಿಷ್ಠರ ಜೀವಿತಕಾಲದ ನಂತರ ಇವರು "ನಂದಿನೀ" ಎಂಬ ವಾರಪತ್ರಿಕೆಯ ಸಂಪಾದಕರಾಗಿ 2 ವರ್ಷ ಕೆಲಸ ಮಾಡಿದರು. ವಾಸಿಷ್ಠರ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವ ವೇದ-ಆಧ್ಯಾತ್ಮಿಕ ತತ್ತ್ವಗಳನ್ನೊಳಗೊಂಡ ಬರಹ ಮತ್ತು ಸಂಪಾದಕೀಯಗಳನ್ನು ಆ ಪತ್ರಿಕೆಯಲ್ಲಿ ಪ್ರಕಟಿಸಿದರು. ವಾಸಿಷ್ಠ ಭಕ್ತರಾದ ಸೀತಾರಾಮ ಭಡತಿಯವರು ಆ ಪತ್ರಿಕೆಯ ಮುದ್ರಕರು. ಇನ್ನೊಬ್ಬ ಭಕ್ತ ಕೋಟೇಸರ ಮಹಾಬಲ ಹೆಗಡೆಯವರು ಪ್ರಕಾಶಕರು.)

ವೇದ ಸಂಹಿತೆಗಳು ಅನಾದಿಯಾದ ಪುರುಷನ ಸ್ವರೂಪದ ಒಂದು ಭಾಗವಾಗಿ ಇರತಕ್ಕವುಗಳು. ವಾಸಿಷ್ಠರಾದರೋ ತಪೋನುಷ್ಠಾನದಿಂದ ಪರಿಶುದ್ಧಗೊಂಡ ಮನೋವೃತ್ತಿಯುಳ್ಳವರಾಗಿ ಎಡೆ ಬಿಡದೆ ವೇದದ ಉಪಾಸಕರಾಗಿ ಇದ್ದವರು. ಈ ಮಹನೀಯರಿಗೆ ಒಮ್ಮೆ ಪ್ರಾಚೀನ ವೇದ ಋಕ್ಕುಗಳ ರೂಪದಲ್ಲಿಯೇ

ತ್ರಿಷ್ಟುಪ್ ಛಂದಸ್ಸಿನ ವೈಶ್ವಾನರ ದೇವತಾತ್ಮಕವಾದ ಒಂದು ಮಂತ್ರ ಮತ್ತು ಗಾಯತ್ರೀಛಂದಸ್ಸಿನ ವಿಷ್ಣುದೇವತಾತ್ಮಕವಾದ ಒಂದು ಮಂತ್ರ ಇವು ಸರಸ್ವತಿಯ ಪ್ರಸಾದ ವಿಶೇಷದಿಂದ ಗೋಚರಕ್ಕೆ ಬಂದವು. ವೈಶ್ವಾನರ ದೇವತಾತ್ಮಕವಾದ ಒಂದು ಋಕ್ಕಿನ ಸೂಕ್ತ ಹೀಗಿದೆ:-

* **ದಿವೋ ಗಭಾಸ್ತಿರರತಿಃ** ಪೃಥಿವ್ಯಾಸ್ತ್ವೇಷಂ ರೂಪಂ ದಿಧ್ರ್ಯತೋ
ಯೋಽನ್ತರಿಕ್ಷೇ।
"ವೈಶ್ವಾನರ ಸಹಸಾ ವಾಜ್ಗಿ ಅಮರ್ತ್ಯೋ ಮಧು ಮನಾಽಽರೋಹತು"
ದಸ್ಮ ಈಕ್ಷಾಂ॥

ಇನ್ನೊಮ್ಮೆ ಸ್ಫುರಿಸಿದ ವಿಷ್ಣುದೇವತಾತ್ಮಕ ಗಾಯತ್ರೀ ಛಂದಸ್ಸಿನ ಋಕ್ಕು ಹೀಗಿದೆ :-

ಅಕ್ರಮಿಷ್ಟ ಭುವನೇಷು ಬ್ರಹ್ಮಣ್ಯಾಽಹಂ ವಿತೂರ್ಯತಃ । ಪ್ರವರೋಽ
ಥಾಸ್ಮಿ ವಿಪ್ರಃ ॥

ನಿರಂತರವೂ ವೇದಭಾಷ್ಯಗಳ ಭಾವಗಳನ್ನೇ ಅನುಸಂಧಾನ ಮಾಡುತ್ತಿದ್ದ ವಾಸಿಷ್ಠರಿಗೆ ಛಂದೋಬದ್ಧವಾದ ಈ ಮಂತ್ರಗಳು ತಾವಾಗಿಯೇ ಸ್ಫುರಿಸಿದ್ದೇ ಹೊರತು ಬೇರೆಯಲ್ಲ. ತಾವು ಸ್ವತಃ ಕಾವ್ಯಕಂಠರೇ ಆಗಿದ್ದರೂ ದೇವತೆಗಳನ್ನು ಹೀಗೆ ಪ್ರಾಚೀನ ಛಂದೊಬದ್ಧ ರೀತಿಯಲ್ಲಿ ಸ್ತುತಿಸುವ ಪ್ರಯತ್ನವನ್ನು ಎಂದೂ ಮಾಡಿದವರಲ್ಲ. ಅಂತಹ ಭಾವನೆ ಕೂಡಾ ಅವರಿಗೆ ಉಂಟಾದುದಿಲ್ಲ. ಹಾಗಿದ್ದರೂ ಬಹುಕಾಲದಿಂದ ಮಂತ್ರಕಾಮರಾಗಿ ಋಗ್ಯಜುರ್ವೇದಗಳನ್ನು ಸಾಂಗವಾಗಿ ಅಧ್ಯಯನ ಮಾಡಿದ್ದ ತಮ್ಮ ಶಿಷ್ಯ ದೈವತರಾರಿಗೆ ಯಜುರ್ವೇದೀಯ ಕ್ರಮದಲ್ಲಿ ಸ್ಫುರಿಸಿದ ಅನೇಕ ಛಂದಸ್ಸುಗಳಿಗೆ' ಛಂದಃಸ್ತವನಂ' ಎಂಬ ಹೆಸರನ್ನು ಆಚಾರ್ಯ ವಾಸಿಷ್ಠರೇ ಕೊಟ್ಟಿದ್ದುಂಟು. ಆಚಾರ್ಯ ವಾಸಿಷ್ಠರು ವೇದಸಂಪ್ರದಾಯದ ಕಟ್ಟಾ ಅಭಿಮಾನಿಗಳು. ಆದ್ದರಿಂದ ಪ್ರಾಚೀನವೂ-ಮಂತ್ರ ಬ್ರಾಹ್ಮಣಾತ್ಮಕವೂ ಆಗಿರುವ ವೇದದೊಡನೆ ಈ ಹೊಸ ಸ್ತೋತ್ರಗಳ ಸಂಬಂಧವಿಲ್ಲವೆಂಬುದನ್ನು ಸ್ಪಷ್ಟಪಡಿಸಲು ಮತ್ತು ವೈದಿಕರು ಗಾಯತ್ರೀ ಮೊದಲಾದ ಛಂದಸ್ಸುಗಳಿಂದ ಮಾಡುವ ಸ್ತೋತ್ರ ಕ್ರಿಯೆಯು ಛಂದಃಸ್ತವನವೆಂಬ ತಾತ್ಪರ್ಯ ನಿರೂಪಿಸಲು ಈಹೆಸರನ್ನು ಕೊಟ್ಟರು.

ಋಗ್ವೇದ ಮಂತ್ರಗಳಲ್ಲಿ ಅಡಗಿರುವ ಗಂಭೀರ ಭಾವನೆಗಳನ್ನು ಅರಿತುಕೊಂಡ ವಾಸಿಷ್ಠಮುನಿಗಳು ಸರಲ-ಸುಂದರ-ಸಂಸ್ಕೃತ ಕವಿತೆಗಳಲ್ಲಿ ಅವುಗಳನ್ನು

ಅಳವಡಿಸಿ ರಚಿಸಬೇಕೆಂಬ ಇಚ್ಛೆಯುಳ್ಳವರಾಗಿದ್ದರು. ಆದರೆ ಮುಂದೆ ಅವರಲ್ಲಿ ಆ ಪ್ರವೃತ್ತಿ ಬೆಳೆಯಲಿಲ್ಲ. ಇಚ್ಛೆ ಇದ್ದಾಗ ಅವರು ರಚಿಸಿದ ವೇದ ಮಂತ್ರ ಮೂಲವಾದ ಒಂದು ಶ್ಲೋಕ ಇದು :-

ಅಂಭೋ ದಿವ್ಯಂ ವಲಕ್ಷಸ್ಮಿತಲಸಿತಮತಿಜ್ಯೋತಿಷಾ ಚೇತಯಂತೀ
ವಿಶ್ವಾಸ್ಸಾರಾವಗಾಢೀಃ ಸುವಿಮಲಧಿಷಣಾಃ ಪ್ರಾಣಿನಾಂ ಭಾಸಯನ್ತೀ।
ಗಂಭೀರಂ ವಜ್ರವೀಣಾಂ ಕಿಸಲಯಮೃದುನಾ ಪಾಣಿನಾ ವಾದಯನ್ತೀ
ವಿದ್ಯುದ್ರೂಪಾ ಸರಸ್ವತ್ಯಮಲತಮರುಚಾಂ ವಾಹಿನೀ ನಃ ಪುನಾತು॥

ಶ್ರೇಷ್ಠವಾದ ಆಗಸವನ್ನು ಧವಳ ಮಂದಹಾಸ ಮಧುರ ಕಾಂತಿಯಿಂದ ಚೇತನಗೊಳಿಸುತ್ತ, ಜಗತ್ತಿನ ಸಾರಸರ್ವಸ್ವವನ್ನುಳ್ಳ ಬುದ್ಧಿ ಶಕ್ತಿಯನ್ನು ಜೀವಿಗಳಿಗೆ ಪ್ರಕಾಶಪಡಿಸುತ್ತ, ತಳಿರಿನಂತೆ (ಚಿಗುರಿನಂತೆ) ಮೃದುವಾದ ಕೈಗಳಿಂದ ವಜ್ರ ವೀಣೆಯನ್ನು ಗಂಭೀರವಾಗಿ ನುಡಿಸುತ್ತ, ಪರಿಶುಭ್ರ ಕಿರಣ ಧಾರೆಯನ್ನು ಹರಿಸುತ್ತಿರುವ ದೇವೀ ಸರಸ್ವತಿಯು ನಮ್ಮನ್ನು ಪುನೀತ (ಪವಿತ್ರ)ರನ್ನಾಗಿ ಮಾಡಲಿ.

ಈ ಶ್ಲೋಕವು 'ಮಹೋ ಅರ್ಣಃ ಸರಸ್ವತೀ ಪ್ರಚೇತಯತಿ ಕೇತುನಾ।
ಧಿಯೋ ವಿಶ್ವಾ ವಿರಾಜತಿ॥

(ಋಗ್ವೇದ ೧-೩-೧೨)

ಋಗ್ವೇದದ ಮಾಧುಚ್ಛಂದಸೀ ಮಂತ್ರವನ್ನಾಧರಿಸಿ ಅದರ ಭಾವವನ್ನು ಅಭಿವೃದ್ಧಿಗೊಳಿಸಲು ಪ್ರವೃತ್ತವಾಗಿದೆ.

ವೇದಗಳಲ್ಲಿ ಅಸ್ತ್ರಮಂತ್ರಗಳು ನೂರಾರು ಇವೆ ಎಂಬುದು ವಾಸಿಷ್ಠರ ದೃಢವಾದ ತೀರ್ಮಾನ. ಅವರು ಅವಲೋಕಿಸುತ್ತಿದ್ದ ಬೇರೆ ಬೇರೆ ಗ್ರಂಥಗಳಲ್ಲಿ ಅಂತಹ ಮಂತ್ರಗಳನ್ನೋ, ಅದರ ಮೂಲ ಭಾವವನ್ನೋ ತಾವು ಕಂಡು ಕೊಂಡಾಗ ಅಲ್ಲಲ್ಲಿಯೇ ತಮ್ಮ ಬರಹದಿಂದ ಗುರುತು ಮಾಡಿರುವುದನ್ನು ನೋಡಬಹುದು. ತಾವು ರಚಿಸಿದ ಗ್ರಂಥಗಳಲ್ಲಿಯೂ ಕೆಲವೊಮ್ಮೆ ಅದನ್ನು ಸ್ಪಷ್ಟಗೊಳಿಸಿದ್ದಾರೆ. ಆದರೆ ಅವುಗಳ ಪ್ರಯೋಗ ವಿಧಾನವನ್ನು ಮಾತ್ರ ಅವರು ಎಲ್ಲಿಯೂ ಸೂಚಿಸಿಲ್ಲ. ಪ್ರಾಯಶಃ "ಸಮರ್ಥ ಗುರುವಿನ ಮೂಲಕ ಅಥವಾ ಗುರುಕೃಪೆಯಿಂದ ಮಾತ್ರವೇ ಅವುಗಳ ಪ್ರಯೋಗವನ್ನು ಸಾಧಿಸಬೇಕು." ಎಂಬುದಕ್ಕಾಗಿಯೇ ವಾಸಿಷ್ಠರು ಅದರ ವಿವರಣೆಗೆ ಕೈಹಾಕಲಿಲ್ಲವೆಂದು ತೋರುತ್ತದೆ. ಸಾಮಾನ್ಯವಾದ ಮಂತ್ರ

ಗಳಲ್ಲಿ ಸಿದ್ಧಿ ಪಡೆಯ ಬೇಕಾದರೂ ಸಾಧಕನು ಸ್ವತಃ ಅದಕ್ಕೆ ಆಗತ್ಯ ಅರ್ಹತೆಯುಳ್ಳವನಾಗಿರಬೇಕು; ಮತ್ತು ತಕ್ಕ ಆಚಾರ್ಯರ ಪ್ರಭಾವ ವಿಶೇಷದ ಹಿನ್ನೆಲೆಯನ್ನು ಹೊಂದಿರಬೇಕು. ಅಂದ ಮೇಲೆ ಮಹತ್ತರವಾದ ಈ ಅಸ್ತ್ರಮಂತ್ರಗಳ ಬಗ್ಗೆ ಹೇಳತಕ್ಕದ್ದೇನಿದೆ?

ಮುರಿದುಹೋದ ಮೂಳೆಯನ್ನು ಕೂಡುವಂತೆ ಮಾಡುವ ಸಂದರ್ಭದಲ್ಲಿ ವಾಸಿಷ್ಠರು ಇಂದ್ರದೇವತಾತ್ಮಕವಾದ ಮಂತ್ರವನ್ನು ಪ್ರಯೋಗಿದ ವಿಷಯ ಈ ಹಿಂದೆಯೇ ಬಂದಿದೆ. ವಾಸಿಷ್ಠರು ಇನ್ನೆರಡು ಸಂದರ್ಭಗಳಲ್ಲಿ ಪ್ರಯೋಗಿಸಿ ತೋರಿಸಿದ ಅಸ್ತ್ರಮಂತ್ರಗಳು ಹೀಗಿವೆ :–

ವೃಷಾ ಜಜಾನ ವೃಷಣಂ ರಣಾಯ ತಮುಚಿನ್ನಾರೀಂ ನರ್ಯಂ ಸುಸೂವ ।
ಪ್ರಯಃ ಸೇನಾ ನೀರಧ ನೃಭ್ಯೋ ಅಸ್ತಿನಃ ಸ ತ್ವಾ ಗವೇಷಣಃ ಸ ಧೃಷ್ಣುಃ॥
ವಸಿಷ್ಠ ಐಂದ್ರಃ ತ್ರಿಷ್ಟುಪ್(ಋಗ್ವೇದ ೭–೧೦–೫)

ವರ್ಷಂತು ತೆ ವಿಭಾವರಿ ದಿವೋ ಅಭ್ರಸ್ಯ ವಿದ್ಯುತಃ ।
ರೋಹಂತು ಸರ್ವಬೀಜಾನ್ಯಪಬ್ರಹ್ಮ ದ್ವಿಷೋ ಜಹಿ ॥
ಆತ್ರೇಯಃ ಸಪ್ತವ ಧ್ರಿರನುಷ್ಟುಪ್ (ಋಗ್ವೇದ–ಪರಿಶಿಷ್ಟಂ)

ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ವೈಶ್ವಾನರ ಸಂವರ್ಗಕ್ಕೆ ಸೇರಿದ ದಹರವಿದ್ಯೆಯೇ ಮೊದಲಾದವುಗಳಿಗೆ ಋಗ್ವೇದ ಮಂತ್ರಗಳನ್ನು ಉದಹರಿಸಿ ವಿವರಿಸುತ್ತಾರೆ. ಹಾಗೆಯೇ ತಂತ್ರಶಾಸ್ತ್ರ ಪರಿಣತರೂ ಆದ ವಾಸಿಷ್ಠರು ಮಹಾ ಕಾಳಿಯೇ ಮೊದಲಾದ ದಶಮಹಾ ವಿದ್ಯೆಗಳಿಗೆ ವೇದಮೂಲವನ್ನು ಹೀಗೆ ಸಾಧಿಸಿ ತೋರಿಸುತ್ತಾರೆ:–

ಓರ್ವಪ್ರಾ ಅಮರ್ತ್ಯಾ ನಿವತೋ ದೇವ್ಯುದ್ವತಃ ।
ಜ್ಯೋತಿಷಾ ಬಾಧತೇ ತಮಃ ॥ (ಋಗ್ವೇದ ೧೦–೧೨೭–೨
ಭಾರದ್ವಾಜೀ ರಾತ್ರಿರ್ಗಾಯತ್ರೀ)

ಈ ವೇದ ಋಕ್ಕಿನಲ್ಲಿ ಪ್ರತಿಪಾದ್ಯಳಾದ ರಾತ್ರಿ ದೇವತೆಯೇ ದಶಮಹಾ ವಿದ್ಯೆಗಳಲ್ಲಿ ಮಹಾಕಾಳಿ ಎನಿಸಿಕೊಳ್ಳುತ್ತಾಳೆ.

ಸಂಹೋತ್ರಂ ಸ್ಮ ಪುರಾ ನಾರೀ ಸಮಾನಂವಾವಗಚ್ಛತಿ ।
ಇಂದ್ರ ಪತ್ನೀ ಮಹೀಯತೇ ವಿಶ್ವಸ್ಮಾದಿಂದ್ರ ಉತ್ತರಃ॥ (ಋಗ್ವೇದ
(ವೃಷಾಕಪಿಃ ಪಂಗ್ತಿಃ) ೧೦-೮೬-೧೦)

ಇಲ್ಲಿ ಛಿನ್ನಮಸ್ತಕಾ ಎಂಬ ಇನ್ನೊಂದು ಹೆಸರಿರುವ ಪ್ರಚಂಡಚಂಡೀ ದೇವತೆಯು ಪ್ರತಿಪಾದಿಸಲ್ಪಟ್ಟಿದ್ದಾಳೆ.

ತಾಮಗ್ನಿವರ್ಣಾಂ ತಪಸಾ ಜ್ವಲಂತೀಂ ವೈರೋಚನೀಂ ಕರ್ಮಫಲೇಷು
ಜುಷ್ಟಾಂ ।
ದುರ್ಗಾಂ ದೇವೀಂ ಶರಣಮಹಂ ಪ್ರಪದ್ಯೇ ಸುತರಸಿ ತಥಸೆ ನಮಃ
(ನಾರಾಯಣೋ ದುರ್ಗಾ ತ್ರಿಷ್ಟುಪ್)

ಇದು ವೇದದಲ್ಲಿ ಬರುವ ದುರ್ಗಾ ಮಂತ್ರ,

ತದಿದಾಸ ಭುವನೇಷು ಜ್ಯೇಷ್ಠಂ ಯತೋ ಜಜ್ಞ ಉಗ್ರಸ್ತ್ವೇಷ ನೃಮ್ಣಃ ।
ಸದ್ಯೋ ಜಜ್ಞಾನೋ ನಿರಿಣಾತಿಶತ್ರೂನನು ಯಂ ವಿಶ್ವೇಮದಯಂ
ತ್ಯೂಮಾಃ ॥ (ಋಗ್ವೇದ ೧೦-೧೨೦-೧)
(ಆವರ್ಣಶೋ ಬೃಹದ್ದಿವಸ್ತ್ರಿಷ್ಟುಪ್)

ಈ ಮಂತ್ರದಲ್ಲಿ ಪ್ರತಿಪಾದಿತಳಾದ ದೇವತೆಯು ಬಗಲಾಮುಖೀ

ಅವತಾರತತ್ತ್ವ

ಮಾಸಿಷ್ಠರ ಹಸ್ತಲಿಖಿತಗಳಲ್ಲಿ ಅವತಾರವನ್ನು ಕುರಿತು ಹೀಗೆ ಸೂಚಿಸಲ್ಪಟ್ಟಿದೆ :- ಅವತಾರಗಳಲ್ಲಿ ಎರಡು ಬಗೆ ಉಂಟು :- ಯಜ್ಞಾವತಾರ ಮತ್ತು ಕೇವಲ ತೇಜಸ್ಸಿನ ಅಂಶಾವತಾರ. ಈ 2ನೆಯುದು ದಿವ್ಯಯೋಗಾನುಭವ ಗಮ್ಯವಾದದ್ದು. ಯಾರು ಯಾವ ದೇವತೆಯ ಉಪಾಸನೆ ಮಾಡುತ್ತಾರೆಯೋ ಅವರಲ್ಲಿ ಅದೇ ದೇವತೆಯ ತೇಜಸ್ಸಿನ ಅಂಶ ಉಂಟಾಗ ಬಹುದು. ತನ್ನ ದಿನ ನಿತ್ಯದ ಬದುಕಿನಲ್ಲಿ ದಿವ್ಯ ಭಾವ ಪಡೆದಿರುವ ಯೋಗಿಗೆ ಇದು ಉಂಟಾಗುತ್ತದೆ. ಈ ತೇಜೋಂಶದ ಅವತರಣವು ದೇವತಾ ಸಾಯುಜ್ಯ ಹೊಂದುವದಕ್ಕೇ ಆಗಿರುವುದಾದ್ದರಿಂದ ಆತನು ಲೋಕ ಹಿತಕಾರ್ಯವನ್ನು ಮಾಡಲೂ ಬಹುದು; ಮಾಡದಿರಲೂಬಹುದು; ದೇವತಾನುಗ್ರಹ ಮಾತ್ರವೇ ಇಲ್ಲಿ ಪ್ರೇರಕವೇ ಹೊರತು ಬೇರೆ ಯಾವ ಕಾರಣವೂ ಇಲ್ಲ. ಅಂತಹ ಅವತಾರಪುರುಷನಿಗೆ ಗೌಣವಾಗಿ ಲೋಕ ಕಾರ್ಯ ಕಾರಣವು ಸಹ ಜಗನ್ನಿಯಾಮಕನ ಇಚ್ಛೆಯಿಂದ ಉಂಟಾದುದು ಕಂಡುಬರುತ್ತದೆ. ಆ ಯೋಗಿಯಾದರೂ ಸ್ವತಃ ನಿರ್ಲಿಪ್ತನಾಗಿಯೇ ಇರತಕ್ಕವನು.

ಈ ಬಗೆಯ ತೇಜಸ್ಸಿನ ಅಂಶಾವತಾರಕ್ಕೆ ಪಾತ್ರರಾಗುವ ಯೋಗಿಗಳಲ್ಲಿ 2 ವಿಧಗಳುಂಟು. ಜನ್ಮಾಂತರದ ಪುಣ್ಯಬಲವುಳ್ಳವನು ಒಬ್ಬ, ಇನ್ನೊಬ್ಬನು ಬೇರೆ ಲೋಕಗಳಲ್ಲಿರುವ ಅಥವಾ ಈ ಲೋಕದಲ್ಲಿಯೇ ಇರುವ ಸಿದ್ಧಪುರುಷನಿಂದ ಮೈಗೂಡಲ್ಪಡುವನು. ಈ ಎರಡನೇ ಪ್ರಕಾರದ ವ್ಯಕ್ತಿಗೆ ಪೂರ್ವ ಪುಣ್ಯದ ಬಲ ವೇನೂ ಇರುವುದಿಲ್ಲ. ಈ ಎರಡು ವಿಧದ ವ್ಯಕ್ತಿಗಳಲ್ಲಿ ಎರಡನೆಯುವನೇ ಶ್ರೇಷ್ಠ ಅವನೇ ಬಹುಶಃ ಲೋಕಕಾರ್ಯ ಸಾಧಕನೂ ಆಗುವವನು.

ಹೀಗೆ ಹಲವು ವಿಷಯಗಳನ್ನು ಕುರಿತು ಆಗಾಗ ಉಪನ್ಯಾಸ ನೀಡಿರುವ ವಾಸಿಷ್ಠರು ಆಗಾಗ್ಯೆ ಕಾಗದಗಳಲ್ಲಿ ಸರಳವಾಗಿ ಸಂಕ್ಷಿಪ್ತ ರೀತಿಯಲ್ಲಿ ಅವುಗಳನ್ನು ಗುರುತುಹಾಕಿ ಸದಾ ತಮ್ಮ ಅಭಿಪ್ರಾಯವನ್ನು ಅನುಸರಿಸುತ್ತಿದ್ದ ತಮ್ಮನಲ್ಮೆಯ ಶಿಷ್ಯ ವಿಶ್ವಾಮಿತ್ರನಿಗೆ ಕೊಟ್ಟುದುಂಟು. ಈ ನಡುವೆ ಶಿರಸಿಯ ಸಮೀಪದ ಸಾಗರದಲ್ಲಿ ಕೆಲವು ದಿನ ಇದ್ದ ವಾಸಿಷ್ಠರು ವಿಶ್ವಾಮಿತ್ರನಿಗೆ ಪತ್ರವೊಂದನ್ನು ಬರೆದಿದ್ದರು. ತಮ್ಮ ಸಹಚರರಲ್ಲಿ ವಾತ್ಸಲ್ಯವುಳ್ಳ ವಾಸಿಷ್ಠರು ತಮ್ಮ ಈ ಪತ್ರದಲ್ಲಿ ದೂರದಲ್ಲಿರುವ ತಮ್ಮ ಶಿಷ್ಯರನ್ನು ಹೆಸರಿಸಿ ನೆನಪಿಸಿಕೊಂಡಿರುವುದನ್ನು ಕಾಣಬಹುದು.
ವತ್ಸ ! ವೈಶ್ವಾಮಿತ್ರ !

ಆನಂದರಾಯನ ಪತ್ರದಿಂದ ನಿನಗೆ ವಿಷಯಗಳೆಲ್ಲ ತಿಳಿದಿರಬಹುದು. ತೀವ್ರ ರೀತಿಯಲ್ಲಿ ತಪಸ್ಸನ್ನು ಪ್ರಾರಂಭಿಸಿದ್ದೇನೆ. ಹೊಸಬಾಳೆ ಸೀತಾರಾಮನು ಕಣ್ಣಿನ ಚಿಕಿತ್ಸೆಗಾಗಿ ಮದರಾಸಿನಲ್ಲಿದ್ದಾನೆ. ನನ್ನಬಳಿ ಸೀತಾರಾಮ ಭಡತಿಯು ಮಗಳೊಂದಿಗೆ ಇದ್ದಾನೆ. ಆತನ ಸಹಕಾರದಿಂದ ಕೆಲವು ತಿಂಗಳು ಇಲ್ಲಿಯೇ ತಪೋನಿರತನಾಗಿ ಇರುತ್ತೇನೆ. ಭಗವಾನ್ ರಮಣ ಮಹರ್ಷಿಗಳ ಅನುಗ್ರಹವಂತೂ ನನ್ನ ಈ ಕಾರ್ಯದಲ್ಲಿ ಸಂಪೂರ್ಣವಾಗಿ ಇದೆ. ನನ್ನ ಪ್ರೀತಿಯ ಕಪಾಲಿಯು ತನ್ನ ನಿವಾಸದಲ್ಲಿ ಪಾರ್ವತಿಯೊಡನೆ ತಪಸ್ಸು ಮುಂದುವರಿಸುತ್ತಿದ್ದಾನೆ. ಈ ಎಲ್ಲವನ್ನೂ ಸುಂದರನಿಗೆ ತಿಳಿಸು. ಆಯಿ-ಸುಂದರೀ-ಕಾಮಾಕ್ಷೀ-ಮಾಧವ ಇವರೆಲ್ಲರ ಕುಶಲ ತಿಳಿಯಲು ಆಪೇಕ್ಷಿಸುತ್ತೇನೆ. ಧ್ಯಾನಕ್ರಿಯೆಯು ತೀವ್ರಗತಿಯಲ್ಲಿ ಸಾಗುತ್ತಿದೆ. ಎಲ್ಲ ಲಕ್ಷಣಗಳೂ ಅನುಕೂಲಕರವಾಗಿವೆ. ಒಳಿತಾಗಲಿ.

-ನಾಯನ-

ಶಿರಸಿಯಿಂದ ಪ್ರಯಾಣ ಹೊರಡುವ ಮುನ್ನವೇ ಮಹಾನುಭಾವ ವಾಸಿಷ್ಠರು ಏನನ್ನೋ ಬರೆದು ಅದನ್ನು ವಿಶ್ವಾಮಿತ್ರರ ಕೈಯ್ಯಲ್ಲಿ ಕೊಟ್ಟಿದ್ದರು. ಅವರ ಈ ಪ್ರಯಾಣವು ಕೊನೆಯ (ಅಂತಿಮ ಪಯಣ-ಮಹಾಪ್ರಸ್ಥಾನ) ಪಯಣವಾದೀ

ತೆಂದು ಯಾರು ತಾನೆ ತಿಳಿದಿದ್ದರು ? ಅಥವಾ ಸ್ವತಃ ಅವರೇ ಅದನ್ನು ಅರಿತಿದ್ದರೆ? ಆ ಬರಹವೇ ಅವರ ಅಂತಿಮ ಶಾಸನವಾಗಿ ಹೋಯಿತು.

"ಈ ಶರೀರವು ಕಾರ್ಯಸಿದ್ಧಿಗೆ ತಕ್ಕುದಾಗಿಲ್ಲವೆಂದು ತೋರುತ್ತದೆ" "ಅಶರೀರಿಯಾಗಿಯೋ ಸಶರೀರಿಯಾಗಿಯೋ ನಾನು ಈ ಕಾರ್ಯವನ್ನು ಮಾಡಿಯೇ ತೀರುತ್ತೇನೆ" ಹೀಗೆಂದು ಮದರಾಸಿನ ತಮ್ಮ ಶಿಷ್ಯರೊಡನೆ ಒಮ್ಮೆ ಹೇಳಿದ್ದುಂಟು. ಮತ್ತೊಮ್ಮೆ ವಿಶ್ವಾಮಿತ್ರರೊಡನೆ ಮಾತನಾಡುವಾಗಲೂ ಇದನ್ನೇ ಹೇಳಿದ್ದರು. ವಾಸಿಷ್ಠರು ಬಹುವಾಗಿ ಉಲ್ಲೇಖಿಸುತ್ತಿದ್ದ ಆ ಕಾರ್ಯವಾದರೂ ಏನು ? ಹಿಂದೆ ದೈವರಾತರಿಗೆ ನೀಡಿದ ಪ್ರತ್ಯುತ್ತರದಲ್ಲಿ ಈ ವಿಷಯವಾಗಿ ಸ್ವಲ್ಪ ಮಟ್ಟಿಗೆ ಸೂಚನೆ ಇತ್ತು. ಮೇಲೆ ಕಂಡಂತೆ ವಿಶ್ವಾಮಿತ್ರರಿಗೆ ಕೊಟ್ಟ ಬರಹದಲ್ಲಿ ವಾಸಿಷ್ಠ ಮುನಿಗಳು ಈ ಬಗ್ಗೆ ಸ್ವಲ್ಪ ವಿವರವಾದ ಸೂಚನೆಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಅದರ ಮುಖ್ಯ ಭಾಗ ಹೀಗಿದೆ:-

"ಹಿಂದಿನಂತೆ ಈಗಲೂ ದೇಶದ ರಾಜಕೀಯ-ಸಾಂಘಿಕ ಸ್ವಾತಂತ್ರ್ಯ, ಹರಿಜನೋದ್ಧಾರ, ಸತ್ಯವೈದಿಕಮತ ಸ್ಥಾಪನೆಗಳೇ ನನ್ನ ಗುರಿಯಾಗಿದ್ದು ಅದಕ್ಕೆ ತಪಸ್ಸೇ ಏಕೈಕ ಸಾಧನವೆಂಬುದು ನನ್ನ ನಿರ್ಧಾರ" ಪುನಃ ಅದೇ ಬರಹದ ಇನ್ನೊಂದು ಕಡೆ ಹೀಗೆ ಹೇಳಿದ್ದಾರೆ.

"ನನ್ನ ಅಭಿಪ್ರಾಯ ಹೀಗಿದ್ದರೂ ಪ್ರಕೃತ ಯಾವುದೇ ಪ್ರಚಾರಕಾರ್ಯ ಕೈಗೊಳ್ಳುವ ಇಚ್ಛೆ ನನಗಿಲ್ಲ. ಈ ಬಗೆಯ ಸಂಸ್ಕರಣಕಾರ್ಯ ಈಶ್ವರಾನುಗ್ರಹವಿಲ್ಲದ ಮನುಷ್ಯ ಪ್ರಯತ್ನದಿಂದ ನಿಷ್ಫಲವಾಗುತ್ತದೆಂಬುದು ನನ್ನ ಅನಿಸಿಕೆ. ಆದ್ದರಿಂದಲೇ ರಾಜಕೀಯ-ಸಾಂಘಿಕ ಸ್ವಾತಂತ್ರ್ಯ, ಹರಿಜನೋದ್ಧಾರ ಕಾರ್ಯಗಳಿಗಾಗಿ ಅಗತ್ಯವಿರುವ ಸಾಮರ್ಥ್ಯವನ್ನು ನೀಡುವಂತೆ ಈಶ್ವರನನ್ನು ಕುರಿತು ತಪಸ್ಸು ನಡೆಸಿದ್ದೇನೆ. ವೇದಗಳ ಸತ್ಯಾರ್ಥವನ್ನು ಪರಿಶೋಧನೆಯಿಂದಲೂ, ದೇವತಾನುಗ್ರಹದಿಂದಲೂ ಅರಿತುಕೊಂಡು ಪ್ರಕಾಶಪಡಿಸುವ ಇಚ್ಛೆ ನನ್ನದು."

ನಂತರ ವಾಸಿಷ್ಠಮುನಿಗಳು ತಾವು ರಚಿಸಿದ ಗ್ರಂಥಗಳು, ಕೆಲವು ರಚನೆಗಳಲ್ಲಿ ಪ್ರತಿಪಾದಿಸಿರುವ ವಿವರಗಳನ್ನು ಕೊಟ್ಟಿದ್ದಾರೆ:-

1. ಉಮಾಸಹಸ್ರಂ (ಮುದ್ರಿತ) 6. ಇಂದ್ರಸಹಸ್ರನಾಮ.

2. ಇಂದ್ರಾಣಿ ಸಪ್ತಶತೀ. 7. ರಮಣ್ಯೈಕ ವಿಂಶತಿಃ(ರಮಣಾಶ್ರಮದಿಂದಪ್ರಕಟವಾದ "ರಮಣ ಚತ್ವಾರಿಂಶತ್‌ನಲ್ಲಿ ಇದು ಸೇರಿದೆ.)

3. ಪ್ರಚಂಡ ಚಂಡೀ ತ್ರಿಶತಿ. 8. ಗೀತಮಾಲಾ. (ಮುದ್ರಿತ)

4. ಉಮಾಶತಕಂ. 9. ಹೇರಂಭೋಪಸ್ಥಾನಂ.

5. ಶಿವಶತಕಂ.

ಇವಿಷ್ಟು ದೇವತಾ ಸ್ತೋತ್ರಗಳು. ಆಯಾಯ ದೇವತಾ ತತ್ತ್ವ—ಉಪಾಸನಾರಹಸ್ಯಗಳೊಂದಿಗೆ ಆಯಾಯ ದೇವತೆಯ ಸ್ತುತಿಗಳನ್ನು ಇವು ಒಳಗೊಂಡಿವೆ.

10. ವಿಶ್ವಮೀಮಾಂಸಾ. (ಈಶ್ವರ ತತ್ತ್ವ, ಶಕ್ತಿ ತತ್ತ್ವ, ಸರ್ವದೇವತಾ ತತ್ತ್ವ, ಜೀವತತ್ತ್ವ, ಅವತಾರತತ್ತ್ವ, ಉಪನಿಷತ್ತುಗಳ ಉಪಾಸನೆಯ ಪ್ರಕಾರಗಳು, ದೇವಯಾನ—ಪಿತೃಯಾನಗಳ ವಿಚಾರ, ತೃತೀಯ ಸ್ಥಾನ (ನರಕ) ವಿಚಾರ, ಮತ್ತು ಮೋಕ್ಷ ವಿಚಾರಗಳನ್ನು ಇದು ಒಳಗೊಂಡಿದೆ)

11. ರಮಣ ಗೀತಾ (ಗುರು ರಮಣರ ಉಪದೇಶ ಸಂಗ್ರಹವನ್ನೊಳಗೊಂಡ ಈ ರಚನೆ ತುಂಬ ಪ್ರಸಿದ್ಧಿ ಪಡೆದಿದೆ. ರಮಣಾಶ್ರಮದಿಂದ ಪ್ರಕಾಶಿತವಾಗಿದೆ.)

12. ತತ್ತ್ವಘಂಟಾಶತಕಂ. (ಆಧ್ಯಾತ್ಮಿಕ ತತ್ತ್ವವನ್ನು ಪ್ರತಿಪಾದಿಸುತ್ತದೆ. ಈ ಗ್ರಂಥದ ಒಂದು ನೂರು ಶ್ಲೋಕಗಳನ್ನು ಆಚಾರ್ಯ ವಾಸಿಷ್ಠರು ಕರ್ನಾಟಕದ ಉಡುಪಿಯ ಬಳಿ ಇರುವ ವಡಭಾಂಡೇಶ್ವರ ಕ್ಷೇತ್ರದಲ್ಲಿ ನಡೆದ ವಿದ್ವತ್ಸಭೆಯಲ್ಲಿ ಒಂದೇ ಘಂಟೆಯ ಅವಧಿಯಲ್ಲಿ ರಚಿಸಿದರು)

13. ಮಹಾವಿದ್ಯಾ ಸೂತ್ರಮ್. (ತಾಂತ್ರಿಕ ದಶಮಹಾವಿದ್ಯೆಗಳನ್ನು ಕುರಿತದ್ದು)

14. ರಾಜಯೋಗ ಸಾರಸೂತ್ರಮ್ (ರಾಜಯೋಗದ ವಿಚಾರ)

15. ಶಬ್ದ ಪ್ರಮಾಣ ಚರ್ಚಾ. (ವೇದಾವಿರ್ಭಾವದ ವಿಷಯ)

16. ಪಂಚ ಜನ ಚರ್ಚಾ, (ಇದರಲ್ಲಿ ಅಸ್ಪೃಶ್ಯತೆಯನ್ನು ಶಾಸ್ತ್ರ ಪ್ರಮಾಣಗಳ ಮೂಲಕ ಖಂಡಿಸಲಾಗಿದೆ.)

17. ವಿವಾಹ ಧರ್ಮ ಸೂತ್ರಮ್, 18. ಈಶೋಪನಿಷದ್ಭಾಷ್ಯಮ್.

19. ಉಪದೇಶ ಸಾರ ಭಾಷ್ಯಮ್ (ಮುದ್ರಿತ) 20. ಚಿಕಿತ್ಸಾನುಶಾಸನಮ್ (ವೈದ್ಯಕೀಯ)

21. ಇಂದ್ರಗೀತಂ (ತೆಲುಗುದ್ವಿಪದಿ) 22. ಪ್ರಾಣತೋಷಣಂ (ವೈದ್ಯಕೀಯ)

23. ಆಯುರ್ವೇದ ಸಂಗ್ರಹ.

24. ಷೋಡಶ ಶ್ಲೋಕೀ
25. ತ್ರಿಭಾವ ಫಲ ಚಂದ್ರಿಕಾ } ಈ ಮೂರು ಜ್ಯೋತಿಷ್ಯ
26. ಹೋರಾ ನಿರ್ಣಯ ಸಂಗ್ರಹ ಶಾಸ್ತ್ರದ ಗ್ರಂಥಗಳು.

ಇವುಗಳಲ್ಲದೆ ಇನ್ನೂ 25ರಷ್ಟು ಪೂರ್ಣಗ್ರಂಥಗಳೂ ಇವೆ. ಇವುಗಳಲ್ಲಿ ಕೆಲವು ಸ್ತೋತ್ರ ಗ್ರಂಥಗಳು. ಇವೆಲ್ಲದರ ಪೈಕೀ 5ರಚನೆಗಳು ಮಾತ್ರ ಅಚ್ಚಾಗಿ ಪ್ರಕಟ ಗೊಂಡಿವೆ. ಉಳಿದವು ಪ್ರಕಾಶನದ ಕಾಲಕ್ಕಾಗಿ ಕಾಯುತ್ತಿವೆ.

ಆಚಾರ್ಯರು ಉಲ್ಲೇಖಿಸದೆ ಬಿಟ್ಟಿರುವ ಗ್ರಂಥಗಳ ಹೆಸರುಗಳು ಹೀಗಿವೆ:–
"ಪೂಣಾ " ಎಂಬ ಸಂಸ್ಕೃತ ಕಥಾನ[illegible]ಕ (ಪೂರ್ಣವಾಗಿಲ್ಲ)

ಮಹಾಭಾರತ ವಿಮರ್ಶಾ ಎಂಬುದು ಇನ್ನೊಂದು ವಿಸ್ತಾರವಾದ ಗ್ರಂಥ. ಇದನ್ನು ಮಹಾಭಾರತ ಸಂಗ್ರಹ-ರಹಸ್ಯ-ಪರೀಕ್ಷಾ-ಮೀಮಾಂಸೆ ಎಂಬುದಾಗಿ ಆಚಾರ್ಯ ವಾಸಿಷ್ಠರು-ಅವರ ಮಗ–ಕೆಲವು ಶಿಷ್ಯರು ಹೆಸರಿಸುತ್ತಿದ್ದರು.

-8ನೇ ಪ್ರಕರಣದ ಅನುಬಂಧ-

ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್ ।
-ಮಹಾಭಾರತ-

ಇಲ್ಲಿ (ಮಹಾ ಭಾರತದಲ್ಲಿ) ಇರುವುದು ಬೇರೆ ಗ್ರಂಥಗಳಲ್ಲಿ ಇದೆ. ಮಹಾ ಭಾರತದಲ್ಲಿ ಇಲ್ಲದಿರುವುದು ಬೇರೆಲ್ಲೂ ಇಲ್ಲ.

ಆಂಧ್ರ ವಿಶ್ವಕಲಾ ಪರಿಷತ್ತಿನ ಕಲಾ ಶಾಲೆಯ ವಾರ್ಷಿಕ ಉಪನ್ಯಾಸಗಳ ಸಂದರ್ಭದಲ್ಲಿ ಆಚಾರ್ಯ ವಾಸಿಷ್ಠರು "ಭಾರತ ರಹಸ್ಯ" ಎಂಬ ವಿಷಯದ ಮೇಲೆ ಎರಡು ಉಪನ್ಯಾಸಗಳನ್ನು ನೀಡಿದರು "ಭಾರತದ ಕಥೆಯಲ್ಲಿ ಬರುವ ನಾಯಕರೆಲ್ಲರೂ ಋಗ್ವೇದದ ಕಾಲದವರು" ಎಂಬ ವಿಷಯ ಆ ಪ್ರವಚನಗಳಲ್ಲಿ ಪ್ರತಿಪಾದಿತ ವಾಗಿದೆ. ಈ ವಿಷಯಗಳು ಆಗಿನ ಆಂಧ್ರ ಪತ್ರಿಕೆಗಳಲ್ಲಿ ಸಂಕ್ಷಿಪ್ತವಾಗಿ ಪ್ರಕಟ ಗೊಂಡಿದ್ದವು. ಆ ಪ್ರಕಟಣೆಗಳನ್ನಾಧರಿಸಿ ಆ ಪ್ರವಚನಗಳ ಸಾರವನ್ನು ಇಲ್ಲಿ ಕೊಡಲಾಗಿದೆ.

ಶ್ರೇಷ್ಠ ವಿಮರ್ಶಕರಾದ ಆಚಾರ್ಯರು ಹೇಳುತ್ತಾರೆ :-

ಋಗ್ವೇದ ಮಂತ್ರಗಳನ್ನು ಪರಿಶೀಲಿಸಿ ನೋಡಿದರೆ ಪಾಂಡವರು ಋಗ್ವೇದದ ಸಮಕಾಲೀನರೆಂಬುದು ಸ್ಪಷ್ಟವಾಗುತ್ತದೆ. ಅದಕ್ಕೆ ಮುಖ್ಯ ಕಾರಣಗಳು ಇವು :-

1. ಪಾಂಡವರ ಮುತ್ತಜ್ಜ ಶಂತನುವು ದೇವಾಪಿಯ ಕಿರಿಯ ತಮ್ಮ. ಅವನು ಋಗ್ವೇದದಲ್ಲಿ ಬರುವ ಒಂದು ಸೂಕ್ತದ ದ್ರಷ್ಟಾರನೂ ಹೌದು. ಆ ಸೂಕ್ತದ ಭಾಷೆ ಕೂಡ ಪ್ರಾಚೀನ ರೀತಿಯಲ್ಲಿರುವುದು ಕಂಡು ಬರುತ್ತದೆ.

2. ಖಾಂಡವ ದಹನದ ಸಂದರ್ಭದಲ್ಲಿ ಉದಾಹರಿಸಲ್ಪಟ್ಟ ಶಾರ್ಙ ಕುಲಾಗ್ನಿ ಗೀತಕ್ಕೂ ಋಗ್ವೇದದಲ್ಲಿ ಬರುವ ಶಾರ್ಙ ಕುಲಾಗ್ನಿ ಸೂತ್ರಕ್ಕೂ ಸಾಮ್ಯ ಇದೆ.

3. ಛಾಂದೋಗ್ಯದಲ್ಲಿ ದೇವಕೀ ನಂದನ ಕೃಷ್ಣನ ಪುರುಷ ಯಜ್ಞ ವಿದ್ಯಾ ಗುರುವು ಆಂಗೀಕರಸ, ಘೋರ ಎಂದು ಹೇಳಲ್ಪಟ್ಟಿದೆ. ಅವನು ಋಗ್ವೇದದಲ್ಲಿ ಸೂಕ್ತ ದ್ರಷ್ಟಾರನೆಂದು ಪ್ರಸಿದ್ಧನಾಗಿದ್ದಾನೆ. ಅವನ ಮಗ ಕಣ್ವ, ಮೊಮ್ಮಕ್ಕಳಾದ ನಾರದರೇ ಮೊದಲಾದವರು ಕೂಡಾ ಮಂತ್ರದ್ರಷ್ಟಾರರು. ಕಣ್ವ ನಾರದರಿಬ್ಬರೂ ಕೃಷ್ಣನೊಂದಿಗೆ ದುರ್ಯೋಧನನ ಸಭೆಗೆ ಹೋದರೆಂಬ ಮಹಾಭಾರತದ ಕತೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

4. ಶ್ರೀ ಕೃಷ್ಣನಿಗೆ ಶೈವ ದೀಕ್ಷೆ ನೀಡಿದ ಗುರುವು ಮಹರ್ಷಿ ಉಪಮನ್ಯು ಎಂಬವನು. ಇವನೂ ಇವನ ತಂದೆ ವ್ಯಾಘ್ರಪಾದನೂ ಋಗ್ವೇಥ ಮಂತ್ರ ದ್ರಷ್ಟಾರರು.

5. ಪಾಂಡವರ ಪುರೋಹಿತ ಧೌಮ್ಯನು ಋಗ್ವೇದದಲ್ಲಿ ಪ್ರಸಿದ್ಧನಾದ ದೇವಲನ ಕಿರಿಯ ಸಹೋದರ.

6. ದಕ್ಷನಿಂದ ಆರಂಭಿಸಿ ಚಂದ್ರ ಗುಪ್ತನವರಗೆ 153 ಮಂದಿ ರಾಜರು ಆಳ್ವಿಕೆ ನಡೆಸಿದ್ದಾರೆ. ಅವರ ಪೈಕೀ ದಕ್ಷನಿಂದ 15 ನೆಯವನೇ ಶ್ರೀ ಕೃಷ್ಣನೆಂಬುದನ್ನು ಗ್ರೀಕ ವೇಶದ ರಾಯಭಾರಿ ಮೆಗಸ್ತನೀಸ್ ಹೇಳಿರುವನೆಂಬುದು ಇತಿಹಾಸದಲ್ಲಿ ಸ್ಪಸ್ಟವಾಗಿ ಇದೆ. ಭಾರತದ ಅನುಶಾಸನ ಪರ್ವ-ಮತ್ತು ಹರಿ ವಂಶಗಳಲ್ಲಿ ಕೂಡ ದಕ್ಷನಿಂದ 15ನೆಯುವನೇ ಶ್ರೀಕೃಷ್ಣನೆಂದು ವರ್ಣಿಸಲ್ಪಟ್ಟಿದೆ ಆದ್ದರಿಂದ ಚಂದ್ರ ಗುಪ್ತನಿಂದ ಹಿಂದಕ್ಕೆ 138ತಲೆಮಾರಿಗೂ ಪೂರ್ವದವನು ಶ್ರೀಕೃಷ್ಣ ಎಂಬುದು ನಿರ್ಧಾರವಾಯಿತು. ಅಂದ ಮೇಲೆ ಪಾಂಡವರ ಕಾಲ ಸಾಕಷ್ಟು ಪ್ರಾಚೀನವೇ ಆಗಿದೆಯೆಂದು ಸ್ಪಷ್ಟವಾಗುತ್ತದೆ.

7. ಮಹಾ ಭಾರದಲ್ಲಿಯೇ ಪಾಂಡವರ ಚರಿತ್ರೆಯು ಪ್ರಾಚೀನ ಇತಿಹಾಸದ ರೀತಿಯಲ್ಲಿ ವರ್ಣಿತವಾಗಿದೆ.

ಇಷ್ಟು ಹೇಳಿದಾಗ ಒಂದು-ಪ್ರಶ್ನೆ ಹುಟ್ಟುತ್ತದೆ:- "ಹಾಗಿದ್ದರೆ ಋಕ್ಸಂಹಿತೆಯಲ್ಲಿ ಪಾಂಡವರ ವಿಷಯ ಸ್ವಲ್ಪವೂ ಉಲ್ಲೇಖಿಸಲ್ಪಟ್ಟಿಲ್ಲವೇಕೆ ?" ಎಂದು.

ಆದರೆ ಪರೀಕ್ಷೆಮಾಡಿ ನೋಡಿದಾಗ ಋಗ್ವೇದದಲ್ಲಿ ಅಲ್ಲಿ-ಇಲ್ಲಿ ಈ ವಿಷಯ ಹೇಳಲ್ಪಟ್ಟಿರುವುದು ಅರಿವಾಗುತ್ತದೆ. ಕೇಳೋಣವಾಗಲಿ !

ಏತಶಃ, ಕುತ್ಸಃ, ಆರ್ಜುನೇಯ, ಅರ್ಜುನ, ಋಜ್ರಾಶ್ವ, ದ್ಯೋತನ, ಈ ಆರು ಹೆಸರುಗಳಿಂದ ಕರೆಯಲ್ಪಡುವ ಮಂತ್ರ ದ್ರಷ್ಟಾರ ಕುತ್ಸನೇ ಅರ್ಜುನ. ಉತ್ತರ ಫಲ್ಗುನೀ ನಕ್ಷತ್ರಕ್ಕೆ ಅರ್ಜುನಿ ಎಂಬ ಪರ್ಯಾಯ ನಾಮವಿದ್ದು ಅರ್ಜುನಿ ನಕ್ಷತ್ರದಲ್ಲಿ ಹುಟ್ಟಿದವನು ಆರ್ಜುನೇಯಃ ಎಂದಾಗುತ್ತದೆ. ಫಲ್ಗುನದಂತೆ ಅರ್ಜುನ ಎಂಬುದೂ ನಕ್ಷತ್ರ ನಾಮವೇ ಆಗಿದೆ, ಋಜ್ರಾಶ್ವ ಎಂಬುದು 'ಶ್ವೇತವಾಹನ' ಎಂಬ ಪದದ ಅರ್ಥವನ್ನೇ ಹೊಂದಿದೆ. ಇವನು ಶ್ವಿತ್ರನ ಮಗನೆಂದು 2 ಮಂತ್ರಗಳಲ್ಲಿ ಉದಾಹರಿಸ್ಪಟ್ಟಿದ್ದಾನೆ. ಶ್ವಿತ್ರ ಎಂದರೆ ಬಿಳಿಯ ಬಣ್ಣದವನು-ಚರ್ಮದೋಷ ಉಳ್ಳವನು. ಮಹಾಭಾರತಕಾರನು ಸ್ಪಷ್ಟವಾಗಿ ಇದಕ್ಕೆ "ಪಾಂಡು" ಶಬ್ದವನ್ನು ಬಳಸಿದ್ದಾನೆ.

ಕುತ್ಸ(ಅರ್ಜುನ)ನಿಗೆ ಶುಷ್ಣ:- ಶುಕ್ರವಸ್-ಅಶುಷ:- ತೂರ್ವಯಾಣ:-ವೃಷಾಕಪಿಃ-ಕರ್ಣಃ-ಗೌಃ ಸೂರಃ-ಸೂರ್ಯ ಈ ರೀತಿ ಒಂಭತ್ತು ಹೆಸರುಗಳನ್ನುಳ್ಳ ವೀರನೊಂದಿಗೆ ಕಾಳಗ ಸಂಭವಿಸಿತೆಂದು ಋಗ್ವೇದದಲ್ಲಿ ವರ್ಣಿಸಲ್ಪಟ್ಟಿದೆ. ಈ ಒಂಭತ್ತು ಹೆಸರುಗಳ ಪೈಕಿ ಸೂರ ಮತ್ತು ಸೂರ್ಯ ಪದಗಳು ಈ ಮಹಾವೀರನು ಸೂರ್ಯ ಅವತಾರವೆಂದು ಸ್ಪಷ್ಟಪಡಿಸುತ್ತದೆ. ಆ ಮಹಾಕಾಳಗದಲ್ಲಿ ಶೌರದೇವ್ಯ-ಕೃಷ್ಣ-ವೈಕುಂಠ ಎಂಬ ಹೆಸರುಗಳಿಂದ ಪ್ರಸಿದ್ಧನಾದ ಇಂದ್ರಾವತಾರ ಪುರುಷನು ಕುತ್ಸನಿಗೆ ಸಾರಥಿಯಾಗಿದ್ದನಷ್ಟೆ ! ಅವನೇ ಶ್ರೀ ಕೃಷ್ಣ. ಪರಾಕ್ರಮಕ್ಕೆ ಅಂಜಿ ಓಡಿ ಹೋಗಲು ಯತ್ನಿಸುತ್ತಿದ್ದ ಅರ್ಜುನನ್ನು ನಿಲ್ಲಿಸಿದ ಸಾರಥಿ. ಶ್ರೀ ಕೃಷ್ಣನು ಕರ್ಣನ ರಥವನ್ನು ಕುದುರೆಗಳೊಡನೆ ತಡೆದು ಎದುರಿಸಿದ. ಆ ರಥದ ಚಕ್ರವನ್ನೇ ಮುರಿದು ನೆಲಕ್ಕೆಬಿದ್ದ ಕರ್ಣನನ್ನು ಕೊಂದನೆಂಬ ವಿಷಯ ಋಗ್ವೇದದಲ್ಲಿ ಸ್ಪಷ್ಟವಾಗಿ ಇದೆ. ಮಹಾಭಾರತಕಾರನ ಅಭಿಪ್ರಾಯದಂತೆ ಈ ಯುದ್ಧದಲ್ಲಿ ಶ್ರೀಕೃಷ್ಣನು ಕೇವಲ ತಟಸ್ಥನಾಗಿ ಇರಬೇಕಾದುದರಿಂದ ಅದನ್ನು ಎತ್ತಿ ಹಿಡಿಯಲೋಸ್ಕರವೇ

ರಥದಚಕ್ರ ಮುರಿಯುವುದಕ್ಕೆ ಬದಲಾಗಿ ನೆಲದಲ್ಲಿ ಹೂತುಕೊಂಡಿತೆಂದು ಭಾರತದಲ್ಲಿ ಹೇಳ ಬೇಕಾಯಿತು.

ಇವನು ಇಪ್ಪತ್ತು ಮಂದಿ ರಾಕ್ಷಸ ರಾಜರನ್ನು ಸಂಹರಿಸಿದನೆಂದು ಋಗ್ವೇದದಲ್ಲಿ ವರ್ಣಿಸಲಾಗಿದೆ. ಘಟೋತ್ಕಚ ಮತ್ತವನ ಸ್ನೇಹಿತ ರಾಜರುಗಳೇ ಇವರಿರಬೇಕು. ಕರ್ಣನ ತೇಜೋ ಮಯ ಚಕ್ರವನ್ನು ಇಂದ್ರಾವತಾರ ಪುರುಷನು ಯಾಚಿಸಿದ; ಅಪಹರಿಸಿದನೂ ಕೂಡಾ ಎಂದು ಒಂದು ಮಂತ್ರದಲ್ಲಿ ಕಂಡು ಬರುತ್ತದೆ, ಇನ್ನೊಂದು ಮಂತ್ರದಲ್ಲಿ ಕರ್ಣನು ತನ್ನ ಚರ್ಮವನ್ನು ಕಿತ್ತುಕೊಟ್ಟನೆಂದು ಖಚಿತವಾಗಿಯೇ ಹೇಳಲ್ಪಟ್ಟಿದೆ.

ವೇದದಲ್ಲಿ ಹೇಳಲ್ಪಟ್ಟಿರುವ 'ಶೌರದೇವ' ಎಂಬ ಹೆಸರನ್ನೇ ಭಾರತಾದಿ ಗ್ರಂಥಗಳಲ್ಲಿ "ಶೌರಿ" ಎಂದು ಕರೆಯಲಾಗಿದೆ. "ವಾಸವ" ಎಂಬುದನ್ನು "ವಾಸುದೇವ ಎಂದು ಬದಲಾಯಿಸಲಾಗಿದೆ ಇತಿಹಾಸ (ಭಾರತ) ಕಾರರು ಶೌರದೇವ ಎಂಬ ಹೆಸರಿನ ಒಂದು ಭಾಗವಾದ 'ದೇವ' ಎಂಬುದನ್ನು ತೆಗೆದುಕೊಂಡು 'ವಾಸು' ಶಬ್ದದ ಸಂಗಡ ಕೂಡಿಸಿ 'ವಾಸುದೇವ' ನನ್ನು ಮಾಡಿದ್ದಾರೆ. ಮತ್ತೆ ಕರ್ಣಾರ್ಜುನ ಯುದ್ಧದಲ್ಲಿ ಕರ್ಣನಿಗೆ ಮಂತ್ರಾಸ್ತ್ರವು ಮರೆತು ಹೋಗುವಂತೆ ಮಾಡಿದವನು ಶ್ರೀ ಕೃಷ್ಣ ಎಂಬುದಾಗಿಯೂ ಮಂತ್ರವೊಂದು ಸ್ಪಷ್ಟಪಡಿಸುತ್ತದೆ. ವೈಕುಂಠ-ಕುತ್ಸ-ಶುಷ್ಣರೇ ಕೃಷ್ಣ-ಅರ್ಜುನ-ಕರ್ಣರೆಂಬ ಬೇರೆ ಹೆಸರುಗಳಿಂದ ಭಾರತದಲ್ಲಿ ಪ್ರಸಿದ್ಧಿ ಪಡೆದವರೆಂದು ಊಹಿಸಲು ಸಾಧ್ಯವಿದೆ.

ವೇದಗಳ ಪ್ರಕಾರ ಕೃಷ್ಣನು ಇಂದ್ರನ ಅವತಾರ, ಭಾರತದ ಪ್ರಕಾರ ಕೃಷ್ಣನು ವಿಷ್ಣುವಿನ ಅವತಾರ. ವೇದಗಳಲ್ಲಿ ವರ್ಣಿಸಲ್ಪಟ್ಟ ವಿಶ್ವಾಧ್ಯಕ್ಷ ಮಹೇಂದ್ರನು ಭಾರತದಲ್ಲಿ ವಿಷ್ಣುವಾಗಿದ್ದಾನೆ. ಈಚೆಗಿನವರ (ಮಹಾಭಾರತದ ಕಾಲಾ ನಂತರ) ಅಭಿಪ್ರಾಯದಲ್ಲಿ ಇಂದ್ರನು ವೇದೋಕ್ತ ಸಾರ್ವಭೌಮ ಪದವಿ ಪದವಿಯಿಂದ ಕೆಳಗಿಳಿಸಲ್ಪಟ್ಟು ಕೇವಲ ಮಳೆಯ (ಪ್ರಜನ್ಯ) ದೇವತೆಯಾಗಿ ಉಳಿದಿದ್ದಾನೆ. ಆದರೆ ಪರ್ಜನ್ಯ-ಮಳೆ ಇಂದ್ರನ ಮಹಿಮಾವಿಶೇಷಗಳಲ್ಲಿ ಒಂದೇ ಹೊರತು ಅವನೇ ಪರ್ಜನ್ಯವಲ್ಲ. ವೇದದಲ್ಲಿ ವಿಷ್ಣುವನ್ನು 'ಯಜ್ಞ' ಎಂಬ ಅರ್ಥದಲ್ಲಿ ಬಳಸಲಾಗಿದೆ. ಭಾಗವತರಿಗಾದರೋ ವಿಷ್ಣುವು ಸರ್ವೇಶ್ವರ; ಯಜ್ಞವು ಅವನ ಮಹಿಮಾ ವಿಶೇಷ ಅಷ್ಟೇ. ಅವತಾರ ಕಥೆಗಳಲ್ಲಿ ಭಿನ್ನತೆ ಇರುವುದಕ್ಕೆ ಈ ಅಭಿಪ್ರಾಯಭೇದವೇ ಕಾರಣ.

ಶ್ವಿತ್ರನಿಗೆ ಅಂಬರೀಷ–ಭಯಮಾನ-ಋಜ್ರಾಶ್ವ (ಕುತ್ಸ)–ಸುರಾಧಸ್-ಸಹದೇವರೆಂಬ ಐವರು ಮಕ್ಕಳೆಂದು ವೇದಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಅವರಲ್ಲಿ ಹಿರಿಯವನಾದ ಅಂಬರೀಶನಿಗೆ ಶಮ–ವೃಷಭ–ಅಜಾತ ಶತ್ರು ಎಂಬುದಾಗಿ ಬೇರೆ ಬೇರೆ ಹೆಸರುಗಳುಂಟು. ಇವನೇ ಮಹಾ ಭಾರತದಲ್ಲಿ ಪ್ರಸಿದ್ಧನಾದ ಧರ್ಮರಾಜ. ಶಮ ಎಂದರೆ ಶಾಂತಿ ಪ್ರಿಯ. ವೃಷಭ ಎಂದರೆ ಧರ್ಮ ಸ್ವರೂಪಿ. ಮಹಾ ಭಾರತ ಕಾರನು ಉದ್ದೇಶಪೂರ್ವ ಕವಾಗಿಯೇ 'ಅಂಬರೀಷ' ಎಂಬ ಹೆಸರು ಬಿಟ್ಟು ವೃಷಭ ಶಬ್ದಾರ್ಥವಾದ ಧರ್ಮ ರಾಜ ಮತ್ತು ಅಜಾತ ಶತ್ರು ಎಂಬುದಾಗಿ ವ್ಯವಹರಿಸಿದ್ದಾನೆ. ಪುರಾಣ ಪ್ರಸಿದ್ಧ ಅಂಬರೀಷನಿಗೆ 'ನಾಭಾಗ' ಎಂಬ ಹೆಸರೂ ಇದೆ. ಅಭಾಗ ಎಂದರೆ ದಾಯಭಾಗ (ಆಸ್ತಿಯಲ್ಲಿ ಪಾಲು)ಇಲ್ಲದವನು. 'ನಾಭಾಗ' ಎಂದರೆ ಆಸ್ತಿಯಲ್ಲಿ ಪಾಲು (ದಾಯಭಾಗ) ಇಲ್ಲದವನಲ್ಲ. ಅಂದರೆ ದಾಯಭಾಗ ಉಳ್ಳವನೆಂಬುದು ಧರ್ಮರಾಜನಿಗೆ ಸಂಬಂಧಿಸುತ್ತದೆ. ಇದು ಕೇವಲ ನನ್ನ ಊಹೆ. ವೇದದಲ್ಲಿ ಇದಕ್ಕೆ ಪ್ರಮಾಣ ಕಂಡುಬರಲಿಲ್ಲ. 'ಭಯಮಾನ' ಎಂದರೆ ಭಯ ಉಂಟುಮಾಡುವವನು. ಇವನೇ ಮಹಾಭಾರತದಲ್ಲಿ ಭೀಮಸೇನ. ವೇದೋಕ್ತವಾದ 'ಸುರಾಧಃ' ಶಬ್ದಕ್ಕೆ ಒಳ್ಳೆಯ ಸಹೋದರರುಳ್ಳವನೆಂದು ಅರ್ಥ. ನಕುಲನ ಸಹೋದರರು ಸತ್ಪುರುಷರೇ ತಾನೇ; ಇನ್ನು ಸಹದೇವನು ಅದೇ ಹೆಸರಿನಿಂದಲೇ ವೇದಗಳಲ್ಲಿ ಉಲ್ಲೇಖಿತನಾಗಿದ್ದಾನೆ.

ಈ ಪಾಂಡವರ ತಾಯಿಯನ್ನು 'ವೃಷ್ಣೀ' ಎಂದು ವೇದಗಳಲ್ಲಿ ಹೇಳಿದೆ. ವೇದ ಭಾಷೆಯಲ್ಲಿ ವೃಷ್ಣೀ ಎಂದರೆ ಪೃಥಿವೀ ಎಂದಾಗುತ್ತದೆ. ಅವಳು ಭೂಮಿಯ ಅವತಾರ. ಪೃಥಾ–ಪೃಥ್ವೀ-ಪೃಥಿವೀ ಪದಗಳು ಸಮಾನ ಅರ್ಥ ಉಳ್ಳವುಗಳು. ಪಾಂಡವರ ಹೆಂಡತಿಯು 'ಘೋಷಾ' ಎಂಬುದಾಗಿ ವೇದಗಳಲ್ಲಿ ವ್ಯವಹರಿಸಲ್ಪಟ್ಟಿದ್ದಾಳೆ. ಅವಳು ಅಶ್ವಿನೀ ದೇವತೆಗಳ ಅನುಗ್ರಹದಿಂದ ಅರ್ಜುನನನ್ನು ಪಡೆದಳೆಂಬುದು ವೇದದಲ್ಲಿ ಸ್ಪಷ್ಟವಾಗಿ ಇದೆ. ಈ ಕಾಕ್ಷೀವತಿ-ವಜ್ರವಂಶ ಜಾತೆ-ಘೋಷಾಳನ್ನು ಪಂಚಮರುತ್ತುಗಳು ತಮ್ಮ ರಥದಲ್ಲಿ ಕುಳ್ಳಿರಿಸಿ ತಾವು ಆಚರಿಸುವ ಕರ್ಮಗಳಿಗೆ ಭಾಗಿನಿಯನ್ನಾಗಿ ಮಾಡಿದರೆಂದು ಎರಡು ವೇದ ಋಕ್ಕುಗಳಿಂದ ತಿಳಿಯುತ್ತದೆ. ಈಘೋಷಾ ಎಂಬವಳೇ ದ್ರೌಪದೀ. ಪಾಂಡವರು ಪಂಚಮರುತ್ತುಗಳ ಅವತಾರವೇ ಆಗಿರುವರಷ್ಟೆ ? ಇವಳು ಕಾಕ್ಷೀವತ ರಾಜನ ಮಗಳು. ಕಕ್ಷೀವಾನನು ವಜ್ರ ವಂಶದವನು. ವಿದಥಿ ಎಂಬ ಇನ್ನೊಂದು ಹೆಸರೂ ಇವನಿಗೆ ಉಂಟು.

ಕುಯವಃ– ಕುಯವಾಕ್–ವೃದ್ಧವಾಕ್–ದುರ್ಯೋಣಃ ಎಂಬ ಹೆಸರುಗಳನ್ನು ಹೊತ್ತ ಮಹಾವೀರನೊಬ್ಬನನ್ನು ಕುತ್ಸನು ಜಯಿಸಿದನೆಂದು ವೇದದಲ್ಲಿ

ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಈ ಕುಯವನೇ "ದುರ್ಯೋದನ." ದುರ್ಯೋಣಿ ಎಂಬುದೇ ದುರ್ಯೋಧನ ಎಂಬುದಾಗಿ ಮಾರ್ಪಟ್ಟಿದೆ. ಕುಯವ-ಕುಯವಾಕ್ ಶಬ್ದಗಳ ಅರ್ಥವು ಕುತ್ಸಿತವಚನ (ಕೆಟ್ಟಮಾತು) ಉಳ್ಳವನು, ಪುರುಷ ಪ್ರಯತ್ನವಾದಿಎಂದಾಗುತ್ತದೆ.

ಇಂದ್ರಾವತಾರ ಪುರುಷನು ಸ್ನೇಹಿತರಾದ ಶ್ವಿತ್ರ್ಯನ ಮಕ್ಕಳ ಮೂಲಕ ಭೂಮಿಯನ್ನು ವಶಮಾಡಿಕೊಂಡನೆಂದು ವೇದ ಮಂತ್ರ ಹೇಳುತ್ತದೆ. ಕುತ್ಸನು ಮಾಡುವ ಇಂದ್ರ ಪ್ರಾರ್ಥನೆಯ ಮಂತ್ರದಲ್ಲಿ "ನಿನ್ನ ಸಹಾಯದಿಂದ ಶತ್ರುವಶವಾಗಿರುವ ನಮ್ಮ ಪಾಲನ್ನು ಪಡೆಯುತ್ತೇವೆ" ಎಂದು ಹೇಳಿದೆ. ಆದ್ದರಿಂದ ಕುರು-ಪಾಂಡವ ಯುದ್ಧವು ರಾಜ್ಯದ ಹಿಸ್ಸೆಯ ಸಂಬಂಧ ಉಳ್ಳದ್ದೆಂದು ವ್ಯಕ್ತವಾಗುತ್ತದೆ.

ದುರ್ಯೋಧನ ಮೊದಲಾದ ಕೌರವರ ತಾಯಿಯ ಹೆಸರು ವೇದಗಳಲ್ಲಿ 'ಪರ್ಶು' ಎಂದು ಹೇಳಲ್ಪಟ್ಟಿದೆ. ಒಂದೇ ಸಲಕ್ಕೆ 20 ಮಕ್ಕಳನ್ನು ಹೆತ್ತವಳು ಇವಳೇ ಎಂಬ ಉಲ್ಲೇಖ ಎರಡು ಕಡೆ ಇದೆ. ಮಹಾಭಾರತದ ಕರ್ಣಪರ್ವದ ಆದಿಯಲ್ಲಿಯೂ ಮರಣಹೊಂದಿದ ಮಕ್ಕಳು 9. ಉಳಿದವರು 10 ಎಂದೇ ಹೇಳಿದೆ. ಇದು ಮೂಲ ಭಾರತದ ವಾಕ್ಯವಿರಬಹುದೆಂದು ತೋರುತ್ತದೆ. ಪರ್ಶುವಿನ ಈ ಮಕ್ಕಳ ಪೈಕೀ 'ದುಶ್ಶಾಸ್' ಎಂಬವನು ಒಬ್ಬನೆಂದು ವೇದಗಳಲ್ಲಿಹೇಳಲಾಗಿದೆ. ಇವನೇ ಭಾರತದಲ್ಲಿ ದುಶ್ಶಾಸನನಾಗಿದ್ದಾನೆ. ಪಾಂಡವ ಪಕ್ಷಪಾತಿಯಾದ 'ತವಷ'ನೆಂಬ ಋಷಿಯು ಪರ್ಶುವಿನ ಮಕ್ಕಳಿಂದ ಹಿಂಸೆಗೆ ಒಳಗಾದನೆಂದು ಸೂಕ್ತವೊಂದರಲ್ಲಿ ಹೇಳಲ್ಪಟ್ಟಿದೆ. ಕುತ್ಸನ ಒಂದು ಸೂಕ್ತದಲ್ಲಿ "ಪರ್ಶುಪುತ್ರರಿಂದ ಭಾವಿಗೆ ಹಾಕಲ್ಪಟ್ಟ ಆ ಋಷಿಯು ರಕ್ಷಣೆಗಾಗಿ ದೇವತೆಗಳಲ್ಲಿ ಮೊರೆಯಿಡುತ್ತಾನೆ."————— ಮಹಾಭಾರತ ಯುದ್ಧವು ಸೂರ್ಯನು ಹಸ್ತ ನಕ್ಷತ್ರದಲ್ಲಿ ಇದ್ದಾಗ ದಕ್ಷಿಣಾಯನದ ಪ್ರಾರಂಭದಲ್ಲಿ ನಡೆಯಿತೆಂದು ಕುತ್ಸನ ಎರಡು ಮಂತ್ರಗಳಿಂದ ತಿಳಿದು ಬರುತ್ತದೆ,

ಪ್ರಕರಣ-9-

-ಮಹಾಪ್ರಸ್ಥಾನ-

ಅಸ್ತು ಮಮ ಭೇಧಮತಿರಸ್ತು ಮಮ ಪಕ್ಷೋ ಯತ್ನಪರತಾಸ್ತು ಮಮ ಮಾಸ್ತು ಚ ವಿಮೋಕ್ಷಃ ।
ಮೋಕ್ಷಮಯಿ ವೇದ್ಮಿ ಕುಲಕಷ್ಟತತಿಮೋಕ್ಷಂ ಪ್ರೇಷಯ ಸಕೃತ್ತವ ಮಹೇಶ್ವರಿ ಕಟಾಕ್ಷಂ ॥

(ಉಮಾ ಸಹಸ್ರಂ)

ನನ್ನದು ದ್ವೈತ ಭಾವನೆಯೇ ಆಗಿರಲಿ ! ನನ್ನದು ಕೇವಲ ಪ್ರಯತ್ನ ನಿರತ ಪಕ್ಷವಾಗಿಯೇ ಇರಲಿ ! ನನಗೆ ಮೋಕ್ಷವೂ ದೊರೆಯದಿರಲಿ! ಆದರೆ ನೀನು ಮೋಕ್ಷ ಸ್ವರೂಪಳು. ಎಲ್ಲ ಬಗೆಯ ಕಷ್ಟ ಸಂಕುಲಗಳಿಂದ ಬಿಡುಗಡೆ ಹೊಂದವುದೇ ಮೋಕ್ಷವೆಂದು ಅರಿತಿದ್ದೇನೆ. ಒಮ್ಮೆ ನಿನ್ನ ಕಟಾಕ್ಷವನ್ನು ಇತ್ತಕಡೆಗೆ ದಯ ಪಾಲಿಸು !

ಶ್ರೀಮುಖ ಸಂವತ್ಸರದ ಕೊನೆಯ ಭಾಗದಲ್ಲಿ ವಾಸಿಷ್ಠರು ತಮ್ಮ ಸ್ವಂತ ಹಳ್ಳಿಗೆ ಹೋಗಿ ಕೆಲವು ಕಾಲ ಇದ್ದರು. ತಮ್ಮ ಮನೆಗೆ ಸಂಬಂಧ ಪಟ್ಟ ತೋಟ ದಲ್ಲಿ ಸಿದ್ಧಪಡಿಸಿದ ಪರ್ಣಶಾಲೆಯಲ್ಲಿ ಇದ್ದುಕೊಂಡು ಕಾಲ ಕಳೆಯುತ್ತಿದ್ದರು. ಕೆಲವು ತಿಂಗಳ ನಂತರ ಶಿರಸಿಯ ಪ್ರಿಯ ಶಿಷ್ಯ ಭಜತಿ ಸೀತಾರಾಮನು ಬರೆದ ಆಹ್ವಾನ ಪತ್ರವೊಂದು ವಾಸಿಷ್ಠರ ಕೈಸೇರಿತು. ಆ ಪತ್ರದಲ್ಲಿ ಈ ಮುಂದೆ ಕಂಡ ಸೂಚನೆಯೂ ಇತ್ತು :—"ತಾನು ವಾಸಿಷ್ಠಮುನಿಗಳ ಶಿಷ್ಯನೆಂದು ಹೇಳಿ ಕೊಳ್ಳುತ್ತ ಒಬ್ಬ ವ್ಯಕ್ತಿ ತಮಗಾಗಿ ಇಲ್ಲಿ ದೊಡ್ಡ ಆಶ್ರಮ ನಿರ್ಮಾಣದ ಪ್ರಯತ್ನದಲ್ಲಿ ದ್ದಾನೆ." ಎಂಬುದೇ ಆ ಸೂಚನೆ. ತಮ್ಮ ಶಿಷ್ಯ ಸೀತಾರಾಮರೇ ಮೊದಲಾದವರು ವಿನಾಕಾರಣ ಮೋಸ ಜಾಲಕ್ಕೆ ಸಿಕ್ಕಿ ಬೀಳಬಾರದೆಂಬ ನಿರ್ಧಾರದಿಂದ ವಾಸಿಷ್ಠರು ಕೂಡಲೇ ಪ್ರತ್ಯುತ್ತರ ಬರೆದರು ;—

ಪ್ರಿಯ ಸೀತಾರಾಮ ! ಆಶ್ರಮದ ನಕ್ಷೆ ಸಹಿತವಾದ ನಿನ್ನ ಪತ್ರ ಬಂದಿದೆ. ವಿಷಯ ತಿಳಿಯಿತು.——————ದೇವದತ್ತನ ಪ್ರೋತ್ಸಾಹ ಮಾತ್ರ ದಿಂದಲೇ ನೀವುಗಳು ಈ ದೊಡ್ಡ ಆಶ್ರಮನಿರ್ಮಾಣ ಯೋಜನೆಯನ್ನು ಅಂಗೀ ಕರಿಸಿರುವಿರೆಂದು ತಿಳಿಯುತ್ತೇನೆ.

ಇವನು ತಾಂತ್ರಿಕ ಮಂತ್ರ ವಿಷಯದಲ್ಲಿ ನನ್ನ ಶಿಷ್ಯನೆಂಬುದುನಿಜ. ಈಗಲೂ ನನ್ನಲ್ಲಿ ಈತನಿಗೆ ಭಕ್ತಿಇದೆ. ಆದರೆ ನನ್ನ ಮೇಲಿನ ಭಕ್ತಿಗಿಂತ ಸ್ವಾರ್ಥದ ಮೇಲೆಯೇ ತುಂಬಾ ಭಕ್ತಿಯುಳ್ಳವನು ಇವನು. ವಿದ್ಯೆಯಲ್ಲಿ ತೀರಾ ಕೆಳಮಟ್ಟದ ವನು; ಆದರೆ ವಾಚಾಳಿ; ಧ್ಯಾನ ಮಾರ್ಗದಲ್ಲಿ ಯಾವ ಪರಿಶ್ರಮವಿಲ್ಲದಿದ್ದರೂ ವಿಗ್ರಹಾರಾಧಕ, ... ತಾಂತ್ರಿಕ ಕಲ್ಪಗಳ ಬಗ್ಗೆ ಕುತೂಹಲ; ಸಿದ್ಧ ಪುರುಷನಾಗಬೇಗಂಬ ಹಂಬಲ ಇವನದು. ಯಾವ ಅಳುಕೂ ಇಲ್ಲದೆ ಸುಳ್ಳು ಹೇಳು ವುದರಲ್ಲಿ ನಿಸ್ಸೀಮ. ....ನನ್ನ ಸಲುವಾಗಿ ಆಶ್ರಮ ಸ್ಥಾಪನೆಗೆ 500/- ರೂ ಕೊಡುವುದಾಗಿಅವನು ಹೇಳಿ ಕೊಂಡಿರುವುದು ಮೋಸದ ಮಾತು. ಅಷ್ಟು ಹಣ ಕೊಡುವ ಶಕ್ತಿಅವನಿಗೆ ಇಲ್ಲ.

ಅವನ ಮಾತನ್ನು ನಂಬಿ ನೀವು ಯಾರೂ ಅವನಿಗೆ ಒಂದು ಕಾಸನ್ನೂ ಕೊಡ ಕೂಡದು ''ದಾರಿಯ ಖರ್ಚಿಗೆ ಹಣ ಬೇಕು. ಕೊಡಿ. ನಂತರ ಹಿಂದಿರುಗಿಸುತ್ತೇನೆ'' ಎಂದು ಅವನು ಹಣಬೇಡಿದರೆ ಅವನು ವಾಪಸು ಕೊಡತ್ತಾನೆಂಬ ಭರವಸೆ ಇಟ್ಟು ಕೊಂಡು ನೀವು ಖಂಡಿತ ಅವನಿಗೆ ಹಣ ಕೊಡಬೇಡಿ. ಈ ವ್ಯಕ್ತಿಯ ವಿಷಯ ದಲ್ಲಿ ನೀವು ಎಚ್ಚರಿಕೆಯಿಂದ ವ್ಯವಹರಿಸಬೇಕು.

.... ಇಲ್ಲಿ ನಮ್ಮ ಮಾವಿನ ತೋಪಿನಲ್ಲಿ 50/– ರೂ. ಖರ್ಚಿನಿಂದ ನನಗೆ ತಕ್ಕುದಾದ ಕುಟೀರವು ನಿರ್ಮಾಣವಾಗಿದ್ದು ಈಗ ನಾನು ಅದರಲ್ಲಿಯೇ ತಪೋನಿರತನಾಗಿ ಇದ್ದೇನೆ. ಈ ಕಾಗದವನ್ನು ದೇವೇಂದ್ರ-ಸೀತಾರಾಮ-ಮಹಾಬಲೇಶ್ವರರು ರಹಸ್ಯವಾಗಿ ಓದಿಕೊಳ್ಳಲಿ. ಇದರಲ್ಲಿ ಬರೆದ ವಿಷಯವನ್ನು ಬೇರೆ ಯಾರಿಗೂ ಹೇಳಕೂಡದು.

ಇತಿ

ನಿಮ್ಮ ವಾಸಿಷ್ಠ.

ವಾಸಿಷ್ಠರ ಬದುಕಿನ ಅಂತ್ಯ ಸಮೀಪಿಸುತ್ತಿದ್ದರೂ ತಮ್ಮ ಗ್ರಾಮದಲ್ಲಿಯೇ ನೆಲೆಸುವ ಬಯಕೆ ಅವರಿಗೆ ಬರಲೇ ಇಲ್ಲ. ಎಣೆಯಿಲ್ಲದ ಪುತ್ರವಾತ್ಸಲ್ಯ ಕೂಡ ಇವರಲ್ಲಿದ್ದ ತಪೋನಿಷ್ಠೆ-ದೂರದೇಶದ ಶಿಷ್ಯರ ನಡುವೆ ವಾಸಿಸಬೇಕೆಂಬ ಆಶೆ ಗಳನ್ನು ತಡೆಯಲು ಸಮರ್ಥವಾಗಲಿಲ್ಲ. ಬಹುಕಾಲದಿಂದ ಇವರ ಶಿಷ್ಯರಾದವರು ಆಂಧ್ರ ಸೀಮೆಯ ಕೃಷ್ಣ – ಗೋದಾವರಿ – ವಿಶಾಖ ಮಂಡಲ ಪ್ರದೇಶಗ ಳಲ್ಲಿ ಹಲರವದ್ದರು. ಅವರ ಪೈಕೀ ಕೆಲವರು ಉದ್ಯೋಗಸ್ಥರಾಗಿ ಕಲ್ಕತ್ತಾನಗರ ದಲ್ಲಿಯೂ ಅದರ ಸಮೀಪದ ಖಡ್ಗ ಪುರ (ಖರಗ್ ಪುರ) ದಲ್ಲಿಯೂ ವಾಸಿಸುತ್ತಿ ದ್ದರು. ಅವರುಗಳ ಒತ್ತಾಯದಿಂದ ಕಲ್ಕತ್ತೆಗೆ ಹೋಗಿ ಕೆಲವುದಿನ ಇದ್ದ ವಾಸಿಷ್ಠ

ದ್ದರು. ಅವರುಗಳ ಒತ್ತಾಯದಿಂದ ಕಲ್ಕತ್ತೆಗೆ ಹೋಗಿ ಕೆಲವು ಇದ್ದ ವಾಸಿಷ್ಠ ಮುನಿಗಳು ನಂತರ ಖಡ್ಗಪುರಕ್ಕೆ ಬಂದರು. ಅಲ್ಲಿ ಇದ್ದಾಗಲೂ ಶಿರಸಿಯಲ್ಲಿ ಶಿಷ್ಯ ಗಣವನ್ನು ಮರೆಯಲಿಲ್ಲ. ಕೆಲವೊಮ್ಮೆ ಆ ಶಿಷ್ಯರುಗಳಿಗೆ ಪತ್ರಮೂಲಕ ಮಾತ್ರವಲ್ಲ; ಸಂಕಲ್ಪ ಬಲದಿಂದಲೂ ಅವರುಗಳ ಕ್ಷೇಮಕ್ಕಾಗಿ ಆಶೀರ್ವಾದಗಳ್ನು ತಲುಪಿಸುತ್ತಿದ್ದರು. ಒಮ್ಮೆ ಪತ್ರವೊಂದನ್ನು ವಿಶ್ವಾಮಿತ್ರ–ದೇವೇಂದ್ರ ಶರ್ಮರಿಗೆ ಬರೆದರು. ಅದೇ ಅವರ ಅಂತಿಮ ಪತ್ರ.

ವತ್ಸ ! ವೈಶ್ವಾಮಿತ್ರ ! ಖಡ್ಗಪುರ. ೧೩-೧೧-೩೫.

ಇಲ್ಲಿ ನನ್ನ ತಪಸ್ಸು ಮುಂದುವರಿದಿದೆ. ಸಿದ್ಧಿಯ ಬಳಿಗೆ ನನ್ನನ್ನು ಕೊಂಡೊಯ್ಯುತ್ತಲೂ ಇದೆ. ನನಗೆ ಪ್ರಾಣಕ್ಕಿಂತ ಹೆಚ್ಚಿನವನೂ. ನನ್ನ ಭುಜ ಪ್ರಾಯನೂ ಶಿಷ್ಯ ಗಣಕ್ಕೆ ನಾಯಕನೂ, ಗುಣಶಾಲಿಯೂ, ಧೈರ್ಯವಂತನೂ ಆಗಿ ಶತ್ರುಗಳಿಂದ ಕೂಡಾ ಹೊಗಳಿಕೆಗೆ ಪಾತ್ರನಾಗಿರುವ ವತ್ಸ ಸೀತಾರಾಮ–ನನ್ನ ಹಿರಿಯ ಮಗಳಂತಿರುವ ಅವನ ಪತ್ನಿ ಗೌರೀ-ಅವರ ಮಕ್ಕಳು ಎಲ್ಲರಿಗೂ ನನ್ನ ನಿರ್ಮಲ ಪ್ರೇಮ ಪೂರ್ಣ ಆಶೀರ್ವಾದಗಳನ್ನು ತಿಳಿಸುವುದು.

ಇತಿ

ನಿಮ್ಮ ವಾಸಿಷ್ಠ.

ಆಂಧ್ರ ಶಿಷ್ಯರಾದ ವೇದುಲ ರಾಮ ಮೂರ್ತಿಗಳೇ ಮೊದಲಾದವರು ವೈದಿಕ ಸಂಘವೊಂದನ್ನು ಸ್ಥಾಪಿಸಿ ವಾಸಿಷ್ಠರ ಉಪದೇಶಗಳನ್ನನುಸರಿಸಿ ತಾವುಗಳು ಸ್ವತಃ ಅನುಷ್ಠಾನ ಮಾಡುವುದಕ್ಕೆ ಮತ್ತು ಬೇರೆಯವರಿಗೆ ಅದರಲ್ಲಿ ಆಸಕ್ತಿ ಬೆಳೆಸುವುದಕ್ಕೆ ಪ್ರಯತ್ನ ಆರಂಭಿಸಿದರು. 'ನಿಂಪುರಾ' ಎಂಬಲ್ಲಿ ಆಶ್ರಮವೊಂದನ್ನು ವಾಸಿಷ್ಠರಿಗಾಗಿ ನಿರ್ಮಾಣ ಮಾಡಿದರು. ಧಾತೃಸಂವತ್ಸರದ ಮೇಷ ಮಾಸದಲ್ಲಿ (೨೬-೪-೧೯೩೬) ವಾಸಿಷ್ಠರು ಅಲ್ಲಿಯ ಆಶ್ರಮವನ್ನು ಪ್ರವೇಶಿಸಿದ್ದೂ ಆಯಿತು. ಆ ಸಂಘದ ಸದಸ್ಯರೆಲ್ಲ ವಾಸಿಷ್ಠ ಶಿಷ್ಯರು. ಅವರುಗಳು ಪ್ರತಿದಿನ ಮುಂಜಾನೆ-ಸಂಜೆ ಈ ಆಶ್ರಮದಲ್ಲಿ ಅಥವಾ ತಮ್ಮ ಮನೆಗಳಲ್ಲಿ ಜಪ–ಹೋಮ–ಹವನಗಳನ್ನು ನಡೆಸಲಾರಂಭಿಸಿದರು. ವಾರಕ್ಕೆ ಒಮ್ಮೆ ವಾಸಿಷ್ಠರು ಪ್ರವಚನಗಳನ್ನು ನೀಡುತ್ತಿದ್ದರು. ಇಲ್ಲಿ ಆಚಾರ್ಯ ವಾಸಿಷ್ಠರು ಮೂರು ತಿಂಗಳು ಇದ್ದರು. ಈ ಆಶ್ರಮ ಪ್ರವೇಶಿಸುವ ಮುಂಚೆಯೇ ಒಮ್ಮೆ ವಾಸಿಷ್ಠರು ಸೂರ್ಯನಾರಾಯಣ ಸೋಮಯಾಜಿ * ಎಂಬವರೊಡನೆ ಮಾತನಾಡುತ್ತಿದ್ದಾಗ

---

* ಇವರು ರೈಲ್ವೇ ಉದ್ಯೋಗಿಗಳು. ಇವರು ನಮಗೆ ಕಳಿಸಿದ ಪತ್ರದಿಂದ ಅಲ್ಲಿಯ ಕೆಲವು ಘಟನೆಗಳು ತಿಳಿದು ಬರುತ್ತವೆ. ಧಾತು ಸಂವತ್ಸರದ ಶ್ರಾವಣ ಶುಕ್ಲ ಸಪ್ತಮೀ ಶನಿವಾರ ಸೂರ್ಯಾಸ್ತ ಮಾನಕ್ಕೆ 2 ಘಂಟೆ ಮುಂಚೆ ಆಚಾರ್ಯ ವಾಸಿಷ್ಠರು ದಿವಂಗತರಾದರು(೨೫-೭-೧೯೩೬) ಅದಕ್ಕೆ ಮುಂಚೆಯೇ ಅವರ ಪ್ರಿಯ

ಪ್ರಸಂಗತ್ವೇನ "ನಾನು ಇಲ್ಲಿ ಮೂರು ತಿಂಗಳು ಇರುತ್ತೇನೆ" ಎಂದರು. ಸೋಮ ಯಾಜಿಗಳು ಮುಂದೆ ಎಲ್ಲಿಗೆ ಹೋಗಬೇಕಾಗಿದೆ?" ಎಂದು ಪ್ರಶ್ನಿಸಿದಾಗ ವಾಸಿಷ್ಠ ಮುನಿಗಳು "ನಾನು ರಚಿಸಿದ ಗ್ರಂಥಗಳು ಮುದ್ರಣ ಕಾಣಬೇಕು. ನನ್ನ ಆಶಂಪು ಗಳು ಪ್ರಚಾರಕ್ಕೆ ಬರಬೇಕು. ಅದಕ್ಕಾಗಿಯಾದರೂ ಹೋಗಬೇಕು. ಮತ್ತೆ ನನ್ನ ಪ್ರಾಣದೇಹವು ಈಗ ಸಂಘಟಿತವೂ, ಸಿದ್ಧವೂ ಆಗಿದೆ" ಎಂದು ಉತ್ತ ರಿಸಿದರು.

ಧಾತೃಸಂವತ್ಸರದ ಆಷಾಢ ಬಹುಳದಲ್ಲಿ ಒಮ್ಮೆ ಅಲ್ಲಿರುವ ಶಿಷ್ಯರೊಡನೆ "ನನಗೆ ಇನ್ನು 20ದಿನಗಳಲ್ಲಿ ಸಿದ್ಧಿ ಉಂಟಾಗುತ್ತದೆ" ಎಂದು ತಿಳಿಸಿದ್ದರು. ಯಾವ ಬಗೆಯ ಸಿದ್ಧಿ ಎಂದು ಯಾರೂ ಕೇಳಲಿಲ್ಲ. ಅದೇ ಮಾಸದ ಕೊನೆಯಲ್ಲಿ ಕಂಕುಳ ಸಂದಿನಲ್ಲಿ ಬಿರುಕೊಂದು ಕಾಣಿಸಿಕೊಂಡಿತು. ವಾಸಿಷ್ಠರು ಅದರತ್ತ ಗಮನವೇ ಕೊಡಲಿಲ್ಲ. ಚಿಕಿತ್ಸೆಯನ್ನೂ ಮಾಡಿಸಲಿಲ್ಲ. ವೈದ್ಯರನ್ನು ದೂರವೇ ಇರಿಸಿದರು. ತಪಸ್ಸು-ಗ್ರಂಥರಚನೆ-ದೈನಂದಿನ ಕಾರ್ಯಗಳನ್ನು ನಡೆಸುತ್ತಲೇ ಇದ್ದರು. ಹಾಗೆ ಅಲಕ್ಷಿಸಲ್ಪಟ್ಟ ಯಮಕಿಂಕರ ಸ್ವರೂಪದ ಆ ಹುಣ್ಣು ತನ್ನ ಮುಖವನ್ನೇ ತೆರೆದು ತೋರಿಸದೆ ಕಂಕುಳಿನಲ್ಲಿಯೇ ಉಳಿದು ಕೊಂಡಿತು. ತಮ್ಮ ಅಂತಿಮ ಕ್ಷಣವನ್ನು ಅರಿತು ಕೊಂಡಿದ್ದ ಜ್ಞಾನಿಗಳಾದ ವಾಸಿಷ್ಠಮುನಿಗಳು ಜ್ವರ ಪೀಡಿತರಾಗಿದ್ದರೂ ಸ್ವಸ್ಥ ಮನಸ್ಸುಳ್ಳವರಾಗಿ ಕೊನೆಯ ಉಸಿರಾಟದ ಹಿಂದಿನ ಎರಡು ದಿನಗಳು ಮಾತು-ಕತೆ ಇಲ್ಲದೆಯೇ ಇದ್ದರು.

ಪುತ್ರ ಮಹಾದೇವನು ಅಲ್ಲಿಗೆ ಬಂದಿದ್ದರೂ ಆತನೊಡನೆ ಮಾತು-ಕತೆ ನಡೆಯಲಿಲ್ಲ. ಆದರೆ ಹಲಗೆಯ (Slate) ಮೇಲೆ "ಜಪ-ಧ್ಯಾನ-ದೇವತಾರಾಧನೆಗಳನ್ನು ಬಿಡ ಬೇಡಿ" ಎಂಬ ಅರ್ಥ ಬರುವ ವಾಕ್ಯವನ್ನು ತೆಲುಗಿನಲ್ಲಿ ಬರೆದರು.

ಸೂರ್ಯನಾರಾಯಣ ಸೋಮಯಾಜಿಗಳ ಪತ್ರದಲ್ಲಿ ಮತ್ತೊಂದು ವಿಷಯ ಇದೆ. ಒಮ್ಮೆ ವಾಸಿಷ್ಠರು ಯಾವುದೋ ಅಜ್ಞಾತ ಭಾವದಿಂದ ಆವರಿಸಲ್ಪಟ್ಟಂತೆ ಕಂಡು ಬಂದು ಕಾರಣವನ್ನು ವಿಚಾರಿಸಿದಾಗ ಹೀಗೆ ಹೇಳಿದರು :- "ಪಾಶವೀಶಕ್ತಿ ಯನ್ನು ಎದುರಿಸಲಾಗದೆ ಅಬಿಸೀನಿಯಾ ರಾಷ್ಟ್ರದ ಚಕ್ರವರ್ತಿ ಪರಾಜಯಗೊಂಡಿ ದ್ದಾನೆ. ಇದನ್ನು ಸ್ಮರಿಸಿ ಭಾವೋದ್ವೇಗ ಉಂಟಾಯಿತು." ಮತ್ತೆ ಕ್ಷಣ ಬಿಟ್ಟು "ಆಗಲಿ. ಇನ್ನು 5 ವರ್ಷದಲ್ಲಿ ಸಜ್ಜನನಾದ ಆತ ಪುನಃ ತನ್ನ ರಾಜ್ಯವನ್ನು ಪಡೆದು ಕೊಳ್ಳುತ್ತಾನೆ" ಎಂದಿದ್ದರು. ಮುಂದೆ ಹಾಗೆಯೇ ಆಯಿತೆಂಬುದು ಐತಿಹಾಸಿಕ ಸತ್ಯ.

ಪುನರವತರಿಸಿ ಬಂದ ಇಂದ್ರನಂತೆ, ವಿಶ್ವಸ್ಮಾದಿಂದ್ರ ಉತ್ತರ:" ಎಂಬ ಜಯ ಘೋಷದಿಂದ ಇಂದ್ರ ಪಾರಮ್ಯವನ್ನು ತಿಳಿಯಪಡಿಸಲು ವೇದ ಪುರುಷನ ಅಂಶವೇ ಆಕಾರತಳೆದು ಅವತರಿಸಿದಂತೆ, ಛಂದಸ್ಸುಗಳ ಪ್ರಭೆಯಿಂದ ಅವೈದಿಕವೆಂಬ ಕತ್ತಲೆಯನ್ನು ಹೋಗಲಾಡಿಸಲು-ಆಗಮ ರಹಸ್ಯಗಳ ಕೀಲಿ ಕೈಯ್ಯೇ ಮಾನವ ರೂಪದಲ್ಲಿ ಹುಟ್ಟಿ ಮಹಾ ಶಕ್ತಿ ವಿದ್ಯೆಯನ್ನು ಪ್ರದರ್ಶಿಸಲೆಂಬಂತೆ, ಉಪನಿಷತ್ತು ವಿದ್ಯೆಗಳನ್ನು ತಿಳಿಸಿಕೊಡಲೆಂದು ಋಷಿಯೊಬ್ಬನು ಪುನರ್ಜನ್ಮ ತಳೆದಂತೆ, ಅರಿತುಕೊಳ್ಳಲು ಕಷ್ಟಸಾಧ್ಯವಾದ ತತ್ತ್ವಗಳನ್ನು ರಮಣೀಯ ಕವಿತೆಗಳ ಮೂಲಕ ಮನಗಾಣಿಸುವ ಅಸಾಧಾರಣ-ಸಾರ್ವಭೌಮನಾಗಿ, ಮಂತ್ರ ಮೂರ್ತಿಯೂ-ತಪೋನಿಧಿಯೂ ಆದ ಯಾವುದೋ ಒಂದು ದೈವೀಶಕ್ತಿ ವಿಭೂತಿಯು ಭಾರತ ಭೂಪ್ರದೇಶವನ್ನು ಪ್ರವೇಶಿಸಿ 58 ವರ್ಷಗಳಕಾಲ ತನ್ನ ಲೀಲಾ ವಿಲಾಸ ವೈಭವವನ್ನು ಭಾರತೀಯಭಕ್ತಸಮೂಹದ ಮನದಲ್ಲಿಯೂ, ರಸಭರಿತವಾದ ತನ್ನ ಕೃತಿ-ರಚನೆಗಳಲ್ಲಿಯೂ, ಉಜ್ವಲವಾಗಿ ಬೆಳಗುತ್ತಿರುವಂತೆ ಉಳಿಸಿಟ್ಟು ತನ್ನ ಇಲ್ಲಿಯ ಸ್ಥಾನವನ್ನು ದಾಟಿ, ನಿಜಲೋಕವನ್ನು ಸೇರಿಕೊಂಡಿತು. ಈ ಆಚಾರ್ಯ-ಭಗವಾನ್‌ವಾಸಿಷ್ಠ ಗಣಪತಿ ಮುನಿಗಳಿಗೆ ಜಯವಾಗಲಿ !

ವೇದೈರ್ಭೋಧವತೇ ಗಿರಾಂ ವಿಲಸಿತೈಃ ಸಮ್ಮೋದಮುದ್ರಾವತೇ।
ಧೀರೈರ್ಭಾರತಸೂರಿಭಿರ್ಬಲವತೇ ಪೂರ್ವೈಃ ಪ್ರತಿಷ್ಠಾವತೇ ।
ಮಂತ್ರೈರ್ಮಿತ್ರವತೇ ಮಹರ್ಷಿಚರಣೈರಾಚಾರ್ಯಲಕ್ಷ್ಮೀವತೇ ॥
ಕಾವ್ಯೈಃ ಕಂಠವತೇ ಧಿಯಾ ಧನವತೇ ಕಸ್ಮೈಚಿದಸ್ಮೈ ನಮಃ ॥
(ಪೂರ್ವ ಭಾಗದ ಪ್ರಸ್ತಾವನಾ ಶ್ಲೋಕ-ಕಪಾಲಿ ಶಾಸ್ತ್ರಿಗಳು)

ಅವರು ಆಚಾರ್ಯರೆನಿಸಿದುದು ವೇದಗಳಿಂದ ! ಅವರ ಮನೋಹರ ವಾಗ್ವಿಲಾಸವು ಆನಂದದ ತೆರೆಗಳನ್ನೇ ಉಕ್ಕಿಸುತ್ತಿತ್ತು! ಭಾರತೀಯ ಧೀರವಿದ್ವಜ್ಜನ

ಖಡ್ಗ ಪುರದಲ್ಲಿ ಇನ್ನೊಬ್ಬ ವಾಸಿಷ್ಠ ಭಕ್ತ ಎನ್. ಎಸ್. ನಾರಾಯಣರು ಬರೆದ ಒಂದು ಪತ್ರದಲ್ಲಿ ಹೀಗೆ ಕಂಡುಬರುತ್ತದೆ:-

ಈ ನಾರಾಯಣರಿಗೆ ವೇದುಲ ರಾಮಮೂರ್ತಿಯವರ ಮೂಲಕ ಆಚಾರ್ಯ ವಾಸಿಷ್ಠರ ಸಂದರ್ಶನ ದೊರೆಯಿತು. ಪ್ರಾರಂಭದಲ್ಲಿ ಇವರು ಯಾವ ಉತ್ಸಾಹವನ್ನೂ ತೋರಿಸದಿದ್ದರೂ ನಂತರ ವಾಸಿಷ್ಠರ ವಾಣಿಯನ್ನು ಕೇಳಿ ಪ್ರಭಾವಿತರಾಗಿ ವಾಸಿಷ್ಠರಲ್ಲಿ ಶ್ರದ್ಧೆ ಬೆಳೆಯಿತು. ವೈದಿಕ ಸಂಘದವರ

ರಿಂದ ಬಲಿಷ್ಠರೆನಿಸಿ ತಮ್ಮ ಹಿರಿಯರಿಂದ ಪ್ರತಿಷ್ಠೆ ಪಡೆದವರು ! ಮಂತ್ರಗಳೇ ಅವರ ಸ್ನೇಹಿತರು ! ಮಹರ್ಷಿರಮಣರನ್ನೇ ತಮ್ಮ ಆಚಾರ್ಯ (ಗುರು) ಸಂಪತ್ತಾಗಿ ಹೊಂದಿದ್ದವರು : ಕಾವ್ಯವೇ ಅವರ ಕಂಠ ! ಭೌದ್ಧಿಕ ಶ್ರೇಷ್ಠತೆಯೇ ಸಂಪತ್ತು : ಅಂತಹ ಯಾವ ಮಹನೀಯರೊಬ್ಬರು ಯಾರೋ ಆ ಕಾವ್ಯಕಂಠ ಗಣಪತಿ ವಾಸಿಷ್ಠಮುನಿಗಳಿಗೆ ನಮೋನಮಃ

ಇಲ್ಲಿಗೆ ಶ್ರೀ ಮಹರ್ಷಿ ರಮಣ ಭಗವಾನರ ಪಾದಚಿಂತಕ ಶ್ರೀ ಭಗವಾನ್ ವಾಸಿಷ್ಠಗಣಪತಿಮುನಿಗಳ ಶಿಷ್ಯ ಪೂರ್ಣಯೋಗಾಚಾರ್ಯ ಶ್ರೀ ಅರವಿಂದ ಭಗವತ್ಪಾದಾನುಚಿಂತಕ-ಭಾರದ್ವಾಜ ವಿಶ್ವೇಶ್ವರರಮಗ ಕಪಾಲಿಸುರಚನೆ 'ವಾಸಿಷ್ಠ ವೈಭವಂ' ಉತ್ತರ ಭಾಗ ಮುಗಿಯಿತು. ಅನುವಾದ:– ಬೆಟ್ಟವಳ್ಳಿ ಅಂಗೀರಸ ಗೋತ್ರದ ಬೆಳ್ಳಭಟ್ಟರಮಗ ಹರಿಹರ ಪುರ ಬಿ: ಸುಬ್ರಹ್ಮಣ್ಯಂನಿಂದ ಪೂರ್ಣಗೊಂಡಿದೆ.

"ಓಂ. ತತ್ಸತ್"

ಮೂಲಕ ವಾಸಿಷ್ಠಮುನಿಗಳು ಪ್ರತಿಷ್ಠಾಪಿಸಿದ 'ನಿಂಪುರಾ' ಇಂದ್ರಾಶ್ರಮವು ಈಗಲೂ ವಾಸಿಷ್ಠಮುನಿಗಳ ಅಧಿಷ್ಠಾನವಾಗಿ ಪ್ರಸಿದ್ಧಿ ಪಡೆದಿದೆ.

---

* ವಾಸಿಷ್ಠರ ಜನ್ಮದಿನದಂದು (ಕಾರ್ತಿಕ ಬಹುಳ ಅಷ್ಟಮೀ ಮಘಾನಕ್ಷತ್ರದಲ್ಲಿ) ಜಯಂತೀ ಉತ್ಸವವು ಕರ್ನಾಟಕ-ಆಂಧ್ರ– ದ್ರಾವಿಡ ದೇಶಗಳಲ್ಲಿ ಆಚರಿಸಲ್ಪಡುತ್ತದೆ. ತಮಿಳು ನಾಡಿನಲ್ಲಿ ಮುಖ್ಯಸ್ಥಾನವಾದ ಗುರುಮಹರ್ಷಿಗಳ ಆಶ್ರಮದಲ್ಲಿ–ಕರ್ನಾಟಕದ ಶಿರಸಿಯಲ್ಲಿ–ವಾಸಿಷ್ಠರು ಉಳಿದುಕೊಂಡಿದ್ದ ಸೀತಾರಾಮ ಭಡತಿಯವರ ನಿವಾಸದಲ್ಲಿ-ಅಲ್ಲಲ್ಲಿಯ ಶಿಷ್ಯರು ಪಾರಾಯಣ-ಭಜನೆ–ಸಮಾರಾಧನೆಗಳ ಮೂಲಕ ಜಯಂತ್ಯುತ್ಸವ ಆಚರಿಸುತ್ತಾರೆ.

—o—

ಅನುಬಂಧ

-ಪಂಚಮ ಚಂಡಾಲ ಮೀಮಾಂಸೆ-

**ನೈಯ್ಯಾಯಿಕಾ ವಾ ನನು ಶಾಬ್ದಿಕಾ ವಾ ತ್ರಯೀಶಿರಃಸು ಶ್ರಮ ಶಾಲಿನೋ ವಾ ।
ವಾದಾವಹೆ ಬಿಭ್ರತಿ ಜೈಮಿನೀಯನ್ಯಾಯೋಪರೋಧೇ ಸತಿ ಮೌನಮುದ್ರಾಂ ॥**

(ನ್ಯಾಯ ಶಾಸ್ತ್ರವಿದರಾಗಲೀ–ವ್ಯಾಕರಣ ಪಂಡಿತರಾಗಲೀ-ವೇದಪಾರಂಗತ ರಾಗಲೀ ವಾದ-ವಿವಾದ ನಡೆಯುವಾಗ ಜೈಮಿನೀಯ ನ್ಯಾಯಕ್ಕೆ ವ್ಯತಿರಿಕ್ತ ವಾಗಿ ಕಂಡು ಬರುವ ಸಂದರ್ಭಗಳಲ್ಲಿ ಮೌನ ಮುದ್ರೆಯನ್ನು ತಳೆದು ಬಿಡು ತ್ತಾರೆ)

ಸಂಸ್ಕೃತಮೂಲ :-

ವಾಸಿಷ್ಠ ಪಾದ್ಯೈರೇವಮುಚ್ಯತೆ:- ಧರ್ಮಶಾಸ್ತ್ರೇಷು ನಿಷಿದ್ಧಾಃ ಚಂಡಾಲ ಪದವಾಚ್ಯಾಃ ಪ್ರಕೃತ ಪಂಚಮ ಜಾತೀಯಾ ಭವಿತುಂ ನಾರ್ಹಂತೀತಿ ಪಂಡಿತ ಸಭಾಯಾಂ ಮ್ಮಾಯಾ ಪ್ರತಿಪಾದಿತಂ । ಶ್ರೀ ಜಯನ್ಯೈರ್ಮಯೋಕ್ತಮೇವ-ಮಾಕ್ಷಿಪ್ಯತೆ :-

ಯಥಾ ಶೃಂಗಿತ್ವಾದಿಕಂ ಗಾಂ ಲಕ್ಷಯತಿ ತಥಾ ಸರ್ವಧರ್ಮ ಬಹಿಷ್ಕೃತತ್ವಾದಿಕಂ ಪ್ರಕೃತ ಪಂಚಮಾ ಬ್ರಾಹ್ಮಣೀಶೂದ್ರಜಾತಸಂಕೀರ್ಣಕುಲಜಾ ಲಕ್ಷಯತೀತ್ಯಾಹ ಜಯೆನ ಮಹಾಶಯಃ ॥

ಅತ್ರೇದಮುಚ್ಯತೆ:- ಧರ್ಮಶಾಸ್ತ್ರಾಣಿ ಸರ್ವಧರ್ಮ ಬಹಿಷ್ಕಾರಾದಿಕಂ ತಾದೃಶಸಂಕೀರ್ಣಸ್ಯ ವಿಧಧತೇ ನ ಪುನಸ್ತಸ್ಯ ತಲ್ಲಕ್ಷಣಮಾಹುಃ । ಸಂಕೀರ್ಣತ್ವ ಮೇವ ತಲ್ಲಕ್ಷಣಂ ಭವತಿ। ಶ್ರೀಜಯನಾನಾಂ ನಯೇತ್ಯಿದಂ ತಾವತ್ ಪ್ರಾಪ್ತಂ. ಸರ್ವ

ಧರ್ಮ ಬಹಿಷ್ಕಾರಾದೀನಿ ದೃಷ್ಟ್ವಾ ತಾದೃಶ ಸಂಕೀರ್ಣಂ ಜಾನೀಯಾತ್। ತತಃ ಪೂರ್ವಂ ತಸ್ಯ ಸರ್ವಧರ್ಮ ಬಹಿಷ್ಕಾರಾದೀನಿ ವಿದಧೀತ । ಅಯಂ ಚ ಅನ್ಯೋನ್ಯಾಶ್ರಯದೋಷಃ । ಬಹಿಷ್ಕಾರ ವಿಧೇರ್ನೈವಾವಸರ ಇತಿಚೇದುಚ್ಯೇತ, ಇದಂ ತಾವದಾಪದ್ಯತೆ। ಅಸತಿ ಬಹಿಷ್ಕಾರವಿಧೌ ತಸ್ಮಿನ್ ಶ್ರೌತ-ಸ್ಮಾರ್ತಧರ್ಮಾನ್ ಆಚರಿತುಂ ಪ್ರವೃತ್ತೇ ಗ್ರಾಮ ಮಧ್ಯಾವಾಸಂ ಪರಿಕಲ್ಪಯತಿ ಚ ಭವದ್ ಗೃಹಂ ಪ್ರವೃಷ್ಟೇವಾ ತಮಪರಿಹಾರ್ಯ ತೂಷ್ಣೀಮೇವ ಹಿ ಭವತಾ ಭವಿತವ್ಯಂ !

ಅನುವಾದ :- ವಾಸಿಷ್ಠಮುನಿಗಳು ಹೀಗೆ ಹೇಳುತ್ತಾರೆ :-

"ಧರ್ಮ ಶಾಸ್ತ್ರಗಳಲ್ಲಿ ನಿಷೇಧಕ್ಕೆ ಒಳಗಾಗಿ ಚಂಡಾಲರೆಂದು ಕರೆಯಲ್ಪಡುವವರು ಈಗ ಪಂಚಮರೆಂದು ಹೆಸರಿಸಲ್ಪಡುತ್ತಿರುವವರಲ್ಲ" ಹೀಗೆಂದು ನಾನು (ವಾಸಿಷ್ಠರು) ಪಂಡಿತ ಸಭೆಯಲ್ಲಿ ಪ್ರತಿಪಾದಿಸಿದ್ದೇನೆ. ನನ್ನ ಈ ಪ್ರತಿಪಾದನೆಯನ್ನು ವೇ।ಶ್ರೀ। ರಾಮಕೃಷ್ಣ ಚಯನರೆಂಬ ಮಹಾಶಯರು ಈ ಮುಂದೆ ಕಂಡಂತೆ ಆಕ್ಷೇಪಕ್ಕೆ ಒಳಪಡಿಸಿದ್ದಾರೆ :-

''ಕೋಡು (ಕೊಂಬು) ಮುಂತಾದವುಗಳು ಗೋವಿನ ಲಕ್ಷಣಗಳಾಗಿರುವಂತೆ ಸರ್ವ ಧರ್ಮ ಬಹಿಷ್ಕಾರಾದಿ ಕ್ರಮಗಳೇ ಈಗ ಪಂಚಮರೆಂದು ಕರೆಯಲ್ಪಡುವ ಬ್ರಾಹ್ಮಣ ಸ್ತ್ರೀಗೆ ಶೂದ್ರನಿಂದ ಹುಟ್ಟಿದ-ಸಂಕೀರ್ಣಕುಲಸಂಜಾತರನ್ನು ಗುರುತಿಸಲು ಲಕ್ಷಣವಾಗಿವೆ."

"ಧರ್ಮಶಾಸ್ತ್ರಗಳು ಆ ಬಗೆಯ ಸಂಕೀರ್ಣ ವರ್ಗದವರಿಗೆ ಎಲ್ಲ ಧರ್ಮಾಚರಣೆಗಳಿಂದಲೂ ಬಹಿಷ್ಕಾರ ವಿಧಿಸುವಾಗ ಪುನಃ ಅದಕ್ಕೆ ಅದೇ ಲಕ್ಷಣವನ್ನು ಹೇಳಿಲ್ಲ. ಸಂಕೀರ್ಣತ್ವ ಎಂಬುದೇ ಅದಕ್ಕೆ ಲಕ್ಷಣ" ಶ್ರೀಚಯನರ ಈ ಪ್ರತಿಪಾದನೆಯಿಂದ ಇಷ್ಟು ಸ್ಪಷ್ಟವಾಗುತ್ತದೆ :– "ಸರ್ವಧರ್ಮ ಬಹಿಷ್ಕಾರವನ್ನು ಲಕ್ಷಣವಾಗಿಟ್ಟುಕೊಂಡೇ ಅಂತಹ ಸಂಕೀರ್ಣವರ್ಗವನ್ನು ಗುರುತಿಸಬೇಕು. ಆದರೆ ಹಾಗೆ ಗುರುತಿಸುವ ಮೊದಲು ಆ ಸಂಕೀರ್ಣನಿಗೆ ಬಹಿಷ್ಕಾರ ವಿಧಿಸಲ್ಪಡಬೇಕು." ಹೀಗಾದಾಗ ಇಲ್ಲಿ ಅನ್ಯೋನ್ಯಾಶ್ರಯ ದೋಷ ಪ್ರಾಪ್ತವಾಗುತ್ತದೆ, ಬಹಿಷ್ಕಾರ ವಿಧಿಸಲ್ಪಡಬೇಕಾದ ಅಗತ್ಯವಿಲ್ಲವೆಂದರೆ ಆಗಲೂ ತೊಂದರೆಯೇ ಒದಗುತ್ತದೆ. ಬಹಿಷ್ಕಾರಾದಿ ವಿಧಿಗಳೇ ಇಲ್ಲದಿರುವಾಗ ಆ ಸಂಕೀರ್ಣನು ಶ್ರೌತ-ಸ್ಮಾರ್ತ ಧರ್ಮಗಳನ್ನು ಆಚರಿಸಲು ಪ್ರಾರಂಭಿಸಿದರಾಗಲೀ, ಗ್ರಾಮ ಮಧ್ಯದಲ್ಲಿಯೇ ವಸತಿಯನ್ನು ಕಲ್ಪಿಸಿಕೊಂಡರಾಗಲೀ, ನಿಮ್ಮ ಮನೆಯನ್ನು ಪ್ರವೇಶಿಸಿದರಾಗಲೀ ನೀವು ಆತನನ್ನು ಪ್ರತಿಬಂಧಿಸದೆ ಸುಮ್ಮನೇ ಇರಬೇಕಾಗುತ್ತದೆ.

ಸಂಸ್ಕೃತ ಮೂಲ :-

ಪಂಚಕ್ಷಿತಿ-ಪಂಚಚರ್ಷಣೀ ಪ್ರಭೃತಿಷು ವೈದಿಕ ಪ್ರಯೋಗೇಷು ಪಂಚಸ್ತು ಸಂಕೀರ್ಣಸಾಮಾನ್ಯ ವ್ಯೂಹಮಯಃ ಸಂಕೀರ್ಣ ಇತಿ ವಾ ಪ್ರತಿಪಾದ್ಯ ಸಮನ್ವೇತವ್ಯ ಇತ್ಯಾಹುಃ ಶ್ರೀ ಜಯನ ಮಹಾಶಯಾಃ। ತತ್ಕಾಲಾಚಾರಾನು ಸಾರೇಣ ಶಾಸ್ತ್ರಾರ್ಥ ಸಂಕೋಚನೇ ಮಹದಿದಂ ತೇಷಾಂ ಸಾಹಸಂ। ಕಿಮೇಭಿಃ ಸಂಕೀರ್ಣ-ಪಂಚಮಾಶ್ಚತ್ವಾರೋವರ್ಣಾಃ ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರಸಂಕೀರ್ಣಾ ಇತಿ ವಾ ಯತ್ರ ಕುತ್ರಾಪಿ ಭಾಷ್ಯ ಪ್ರಯೋಗೋ ದರ್ಶಯಿತುಂ ಶಕ್ಯತೆ? ಪಂಚಕ್ಷಿತಿ ಪದ ವ್ಯಾಖ್ಯಾನೇ ಸಾಯಣಃ ಸರ್ವತ್ರ ನಿಷಾದಮೇವ ಬ್ರೂತೆ। ಸಂಕೀರ್ಣವಾದಿನಃ ಶಾಸ್ತ್ರಿ ಜಯನಾಃ ಬ್ರಾಹ್ಮಣಸ್ತ್ರೀಶೂದ್ರಸಂಜಾತ ಸಂಕೀರ್ಣಂ ಪ್ರಾಹುಃ। ಅತ್ರೈಕಂ ಮಂತ್ರಮುದಾಹರಾಮ; "ಯ ಏಕಶ್ಚರ್ಷಣೀನಾಂ ವಸೂನಾಮಿರಜ್ಯತಿ। ಇಂದ್ರಃ ಪಂಚಕ್ಷಿತೀನಾಂ" (ಋಗ್ವೇದ 1-7-6) ಅತ್ರ ಅಸ್ಮಾಕಂ ಪ್ರಸ್ತುತಂ ತು ಉತ್ತರಾರ್ಧಂ। 'ಸ ಇಂದ್ರಃ ಪಂಚಾನಾಂ ನಿಷಾದಪಂಚಮಾನಾಂ ಕ್ಷಿತೀನಾಂ ನಿವಾಸಾರ್ಹಾಣಾಂ ವರ್ಣಾನಾಮನುಗ್ರಹೀತಿ ಶೇಷಃ" ಮಂತ್ರಸ್ಯೇಮಾ ಸಾಯಣ ಭಾಷ್ಯ ಪಂಕ್ತಯಃ। ಯದ್ಯಯಂ ನಿಷಾದಃ ಸಂಕೀರ್ಣಾನಾಮೇಕ ಇತ್ಯುಚ್ಯೇತ, ಇರಸೋರ್ಥ ಸಂಕೋಚ ಆಪದ್ಯೇತ। ಕಸ್ಮಾದಿತರೇ ಸಂಕೀರ್ಣಾಃ ಪರಿವರ್ಜ್ಯಂತೇ? ಕಿಂ ತೇಷಾಂ ನಾವಶ್ಯಕೋ ದೇವತಾನುಗ್ರಹಃ? ತಸ್ಮಾತ್ತೇನ ನಿಷಾದೇನ ಚಂಡಾಲಪ್ಲವಾದ್ಯಪರಪರ್ಯಾಯೇಣೈವ ಭಾವ್ಯಂ। ಸ ಸ್ವತಂತ್ರ ವರ್ಗೀಯ ಏವೇತಿ ಭಾಷಾ ವಿದಾಂ ಮತಂ। ಅಪಿ ಚ ಪಂಚಜನ ಶಬ್ದಸ್ಯಾವಯವಾರ್ಥೇ ವಿಚಾರಿತೇ ಪಂಚಾಪಿ ತೇ ಸ್ವತಂತ್ರವರ್ಗಾ ಇತಿ ಜಾಯತೆ। ನನು ಯಥಾ ಯಜಮಾನಪಂಚಮಾ ಋತ್ವಿಜ ಇತಿ ಪ್ರಯೋಗೇ ಋತ್ವಿಕ್ತ್ವಂ ಯಜಮಾನಸ್ಯ ನ ಪ್ರತೀಯತೆ, ತಥಾ ನಿಷಾದ ಪಂಚಮಾನಾಂ ವರ್ಣಾನಾಂಮಿತ್ಯತ್ರಾಪಿ ನಿಷಾದಪದವಾಚ್ಯಸ್ಯ ಪಂಚಮಸ್ಯ ವರ್ಣತ್ವಪ್ರತೀತಿರ್ನಸ್ಯಾದಿತಿ ಚೇತ್, ಮೈವಂ। ದುರ್ಬಲೇಯಂ ಶಂಕಾ; ಉಭಯತಾಪಿ ಪ್ರಯೋಗಾತ್। 'ಸಪ್ತಾನಾಮೃಷೀಣಾಂ ಅಗಸ್ತ್ಯಾಷ್ಟಮಾನಾಂ' ಇತಿಬೋಧಾಯನಸೂತ್ರ ಪ್ರಯೋಗೆ ಸಿದ್ಧೈವ ಹಿ ಅಗಸ್ತ್ಯಸ್ಯ ಋಷಿತ್ವ ಪ್ರತೀತಿಃ। ತಸ್ಮಾತ್ ತಾದೃಶ ಗ್ರಂಥಕಾರಪ್ರಯೋಗಾಃ ನಿಷಾದ ಪದ ವಾಚ್ಯಸ್ಯ ನ ವರ್ಣತ್ವಭಂಗಕರಾಃ ಸ್ಯುರಿತ್ಯವಗಂತವ್ಯಂ ॥

ಏವಂ ಹಿ, ಪಂಚಮಸ್ಯ ವರ್ಣತ್ವಾಪತ್ತಿರಿತಿ ಚೇತ್, ನ। ಅನಿರವಸಿತ ನಿರವಸಿತಭೇದವಿವಕ್ಷಯಾ ಅವಿರೋಧಾತ್ ಚತುರ್ವರ್ಣ ಸಿದ್ಧಿಃ। ಶ್ರೀಜಯನ್ಯೈ

ರುದಾಹೃತ-ಅಂತಃಕರಣ ಸಂಖ್ಯಾಭೇದೋತ್ರ ಸೂಪಪನ್ನೋ ಭವತಿ । ನ ಚಾನಿರ ವಸಿತ ನಿರವಸಿತಾಖ್ಯೋಭಯವರ್ಗೀಯಾಣಾಂ ಸರ್ವಶಿಲ್ಪಶುಶ್ರೂಷಾವೃತ್ತಿಸು ಮಾನ್ಯೇನೈಕವರ್ಗತಯಾ ಪರಿಗಣನೆ ವಿರೋಧೋ ಭವತಿ । ನ ವಾ ಚತುರ್ವರ್ಣ ಸೃಷ್ಟಿವಾದಿನಾಂ ಮತೇಪಿ ಏಕವರ್ಣಾಃ ಕಾಲೇನಾನೇಕವರ್ಗತಂಷಾ ಭಿಂದ್ಯಂತ ಇತ್ಯತ್ರವಿರೋಧೋ ದೃಶ್ಯತೇ। ಪ್ರತ್ಯಕ್ಷಂಚೇದಂ ಯತ್ಪ್ರಥಮವರ್ಗ ಶೂದ್ರೇಷು ಬಹವೋ ಭವಂತಿ ಸ್ವತಂತ್ರ ಕುಲವರ್ಗಾಃ । ವೈದಿಕ ಪಂಚಕ್ಷಿತ್ಯಾದಿ ಪದೇಷು ಋಜು ವ್ಯಾಖ್ಯಾತೇಷು ನಿರವಸಿತ ಶೂದ್ರಾಣಾಂ ಪ್ರಕೃತ ಪಂಚಮಾನಾಂ ಸ್ವತಂತ್ರಸತ್ತಾ ಸುಬೋಧಾ ಸ್ಯಾತ್ । ಏವಂ ಸರ್ವಾಭಿಃ ಶಾಸ್ತ್ರೀಯಾಭಿರ್ಯುಕ್ತಿಭಿಃ ನಿರವಸಿತ ಶೂದ್ರಾ ಏವ ಪಂಚಮಾ ಇತಿ ಸ್ಪಷ್ಟಂ ಭವತಿ, ನ ಪುನಸ್ತೇ ಬ್ರಾಹ್ಮಣ ಕುಲಸ್ತ್ರೀ ಕಲಂಕೋದ್ಘೋಷಕಾನೇಕಕೋಟಿಸ್ತಂಭಾ ಇತಿ ಧ್ರುವಂ । ತಸ್ಮಾನ್ನೇಮೇ ಸಂಕೀರ್ಣಚಂಡಾಲಪರಸ್ಮೃತಿವಚನಾನಾಂ ವಿಷಯೋ ಭವಿತುಮರ್ಹಂತೀತಿ ಸಿದ್ಧಂ॥

ವೇದಾನುಕೂಲ್ಯಂ

ಅನುವಾದ:- ಪಂಚಕ್ಷಿತಿ-ಪಂಚಚರ್ಷಣೀ ಮೊದಲಾದ ವೈದಿಕಪದಪ್ರಯೋಗಗಳಲ್ಲಿ ಸಂಕೀರ್ಣ ಸಾಮಾನ್ಯ ಗುಂಪಿನಲ್ಲಿ ಸೇರಿ ಹೋಗಿರುವ ಪಂಚಮನನ್ನು ಸಂಕೀರ್ಣ ವಿಶೇಷನೆಂಬುದಾಗಿಯಾದರೂ ಪ್ರತಿಪಾದಿಸಿ ಹೊಂದಿಕೆ ಮಾಡಬೇಕು ಎಂಬುದಾಗಿ ಶ್ರೀಚಯನರು ಹೇಳುತ್ತಾರೆ. ತತ್ಕಾಲದ ಆಚಾರಕ್ಕೆ ಅನುಗುಣವಾಗಿ ಶಾಸ್ತ್ರಾರ್ಥ ವನ್ನು ಸಂಕುಚಿತ ಗೊಳಿಸುವ ಅವರ ಈ ಸಾಹಸ ಮಹತ್ವದ್ದೇ ಸರಿ. ಬ್ರಾಹ್ಮಣ ಕ್ಷತ್ರಿಯ-ವೈಶ್ಯ-ಶೂದ್ರ-ಸಂಕೀರ್ಣರೆಂಬುದಾಗಿ-ಅಂದರೆ ಸಂಕೀರ್ಣರೆಂಬ 5ನೆಯ (ಪಂಚಮ) ವರ್ಣವನ್ನುಳ್ಳ ಚತುರ್ವರ್ಣದ ವಿಷಯ-ಭಾಷ್ಯಪ್ರಯೋಗದಲ್ಲಿ ಎಲ್ಲಿ ಯಾದರೂ ಇದೆಯೆಂಬುದನ್ನು ಇವರು ತೋರಿಸಿಕೊಡಬಲ್ಲರೇನು ? ಸಾಯಣರು ಪಂಚಕ್ಷಿತಿ ಪದಕ್ಕೆ ವ್ಯಾಖ್ಯಾನ ಮಾಡುವಾಗಲೆಲ್ಲಾ ನಿಷಾದನೆಂದೇ ಉಪಯೋಗಿಸು ತ್ತಾರೆ. ಸಂಕೀರ್ಣವಾದಿಗಳಾದ ಶ್ರೀ ಶಾಸ್ತ್ರಿ ಚಯನರು ಆ ನಿಷಾದವನ್ನು ಬ್ರಾಹ್ಮ ಣಸ್ತ್ರೀಗೆ ಶೂದ್ರನಿಂದ ಹುಟ್ಟಿದ ಸಂಕೀರ್ಣ ಎನ್ನುತ್ತಾರೆ. ಇಲ್ಲಿ ಒಂದು ಮಂತ್ರ ವನ್ನು ಉದಾಹರಣೆಗೆ ತೆಗೆದುಕೊಳ್ಳೋಣ :- 'ಯ ಏಕಶ್ಚರ್ಷಣೀನಾಂ ವಸೂನಾಮಿರಜ್ಯತಿ । ಇಂದ್ರಃ ಪಂಚಕ್ಷಿತೀನಾಂ' (ಋಗ್ವೇದ 1-7-6). ಇಲ್ಲಿ ನಮಗೆ ಪ್ರಕೃತ ಬೇಕಾಗಿರುವುದುಉತ್ತರಾರ್ಧ-ಅಂದರೆ-ಇಂದ್ರಃಪಂಚಕ್ಷಿತೀನಾಂ ಎಂಬುದು 'ಆ ಇಂದ್ರನು ಭೂಮಿಯಲ್ಲಿ ವಾಸ ಮಾಡಲು ಅರ್ಹರಾದ ನಿಷಾದನೇ ಐದನೆಯವ (ಪಂಚಮ)ನಾಗಿ ಉಳ್ಳ ಐದು ವರ್ಣಗಳವರಿಗೆ ಅನುಗ್ರಹ ನೀಡಿದನು'. ಈ ಮೇಲ್ಕಂಡ ಮಂತ್ರದ ಉತ್ತರಾರ್ಧದ ಬಗ್ಗೆ ಸಾಯಣ ಭಾಷ್ಯ ಪಂಗ್ತಿಹೀಗಿದೆ. ಈ

ನಿಷಾದನು ಸಂಕೀರ್ಣ ವರ್ಗದವರಲ್ಲಿ ಒಬ್ಬನೆಂದು ಹೇಳುವುದಾದರೆ ಆಗ ವಿರಸಾರ್ಥ ಸಂಕೋಚ ಉಂಟಾಗುತ್ತದೆ-ಅಂದರೆ ಅರ್ಥ ಹೀನವೆನಿಸುತ್ತದೆ. ಬೇರೆ ಸಂಕೀರ್ಣ ರನ್ನು ಇಲ್ಲಿ ಏಕೆ ಕೈಬಿಡಬೇಕು ? ಅವರಿಗೆ ದೇವತಾನುಗ್ರಹದ ಅವಶ್ಯಕತೆ ಇಲ್ಲ ವೇನು ? ಆದ್ದರಿಂದ ನಿಷಾದನನ್ನು ಚಂಡಾಲ ಪ್ಲವ-ಮಾತಂಗ ಮುಂತಾದ ಎರ ಡನೇ ಪರ್ಯಾಯದಲ್ಲಿ ಹೇಳಲ್ಪಟ್ಟವನೆಂದೇ ಭಾವಿಸತಕ್ಕದ್ದು. ಆ ನಿಷಾದನು ಸ್ವತಂತ್ರ ವರ್ಗದವನೆಂದೇ ಭಾಷ್ಯಕಾರರ ಅಭಿಪ್ರಾಯ. ಮತ್ತೆ ಪಂಚಜನ ಶಬ್ದಕ್ಕೆ ಅವಯವಾರ್ಥ ಮಾಡಿದಾಗ ಆ ಐದು ವರ್ಣದವರು (ಈ ಐದನೇ ವರ್ಣದವರು ಕೂಡಾ ಸ್ವತಂತ್ರ ಗುಂಪೆಂಬುದು ತಿಳಿಯುುತ್ತದೆ.) "ಯಜಮಾನ ಪಂಚಮಾ ಋತ್ವಿಜಃ" ಯಜಮಾನನೇ ಐದನೆಯವನಾಗಿ ಉಳ್ಳ ಋತ್ವಿಜರು ಎಂಬುದಾಗಿ ಪ್ರಯೋಗದಲ್ಲಿ ಹೇಳಲ್ಪಟ್ಟಾಗ ಯಜಮಾನನಿಗೆ ಋತ್ವಿಜ ಸ್ಥಾನ ಹೇಗೆ ಅನ್ವಯ ವಾಗುವುದಿಲ್ಲವೋ ಹಾಗೆಯೇ ನಿಷಾದನೇ 5ನೆಯವನಾಗಿ ಉಳ್ಳ ವರ್ಣಗಳು ಎಂದು ಹೇಳಿದಾಗ ನಿಷಾದ ಪದವಾಚ್ಯನಿಗೆ ವರ್ಣತ್ವ-ಉಂಟಾಗುವುದಿಲ್ಲ ಎನ್ನುವು ದಾದರೆ-ಹಾಗಿಲ್ಲ! ಈ ಸಂಶಯ ದುರ್ಬಲವಾದದ್ದು. ಏಕೆಂದರೆ ಎರಡು ರೀತಿಯ ಲ್ಲಿಯೂ ಪ್ರಯೋಗವಿದೆ:- 'ಸಪ್ತಾನಾಮೃಷಿಣಾಂ ಅಗಸ್ತ್ಯಾಷ್ಟಮಾನಾಂ' "ಅಗ ಸ್ತ್ಯರು ಎಂಟನೆಯವರಾಗಿ ಉಳ್ಳ ಸಪ್ತ ಋಷಿಗಳು' ಎಂಬುದಾಗಿ ಭೋಧಾಯನ ಸೂತ್ರ ಪ್ರಯೋಗದಲ್ಲಿ ಅಗಸ್ತ್ಯರಿಗೆ ಋಷಿತ್ವ ಅನ್ವಯಿಸಿಯೇ ಇದೆ. ಅಂದರೆ ಎಂಟನೆಯವರಾದ ಅಗಸ್ತ್ಯರೂ ಸಹ ಸಪ್ತಋಷಿಗಳ ಸಂಗಡ ಋಷಿಯೆಂದೇ ಪರಿಗಣಿ ಸಲ್ಪಡುತ್ತಾರೆ. ಆದ್ದರಿಂದ ಈ ಬಗೆಯ ಗ್ರಂಥಕಾರರ ಪ್ರಯೋಗಗಳು ನಿಷಾ ಧನೆಂಬ ಹೆಸರಿರುವವನ ವರ್ಣತ್ವವನ್ನು ಭಂಗಪಡಿಸಲಾರವು ಎಂದೇ ತಿಳಿಯ ತಕ್ಕದ್ದು.

ಹೀಗಿದ್ದರೂ ಪಂಚಮನಿಗೆ ವರ್ಣತ್ವ ಹೀನತೆ ಉಂಟಾಗುತ್ತದೆ ಎನ್ನುವು ದಾದರೆ :- ಹಾಗಿಲ್ಲ. ಬಹಿಷ್ಕರಿಸಲ್ಪಡದೇ ಇರುವ ಮತ್ತು ಬಹಿಷ್ಕರಿಸಲ್ಪಟ್ಟ ಎಂಬುದರ ಭೇದವಿಲ್ಲದಿರುವುದುರ ವಿವಕ್ಷೆಯು ಅವಿರೋಧವಾಗಿದೆ. ಭೇದವಿಲ್ಲ ದಿರುವುದರ ವಿವರಣೆಯಿಂದ ಚತುರ್ವರ್ಣಗಳು ಸಿದ್ಧವೇ ಆಗಿವೆ. ಶ್ರೀ ಚಯನರು ಉದಾಹರಿಸಿರುವ ಅಂತಃಕರಣ ಸಂಖ್ಯಾ ಭೇದವೆಂಬುದು ಇಲ್ಲಿ ಚೆನ್ನಾಗಿ ಹೊಂದಿಕೆ ಯಾಗುತ್ತದೆ. ಬಹಿಷ್ಕೃತರಲ್ಲದ ಮತ್ತು ಬಹಿಷ್ಕೃತರೆಂಬ ಎರಡು ವರ್ಗಗಳವರಲ್ಲಿ ಕೂಡ ಸರ್ವ ಶಿಲ್ಪ-ಶುಶ್ರೂಷಾ (ಎಲ್ಲ ಬಗೆಯ ಕಿತ್ತನೆಯ ಕಲಾವಿದರು-ಸೇವಾ ವೃತ್ತಿಯವರು) ಕಸುಬಿನದೃಷ್ಟಿಯಿಂದ ಒಂದೇ ವರ್ಗವೆಂದು ಪರಿಗಣಿಸು ವಲ್ಲಿ ಯಾವ ವಿರೋಧವೂ ಉಂಟಾಗುವುದಿಲ್ಲ. ಚಾತುರ್ವರ್ಣ್ಯಸೃಷ್ಟಿವಾದಿಗಳ ಅಭಿಪ್ರಾಯದಂತೆ ಕೂಡಾ ಒಂದೇ ವರ್ಣದವರು ಕಾಲಕ್ರಮದಲ್ಲಿ ಅನೇಕ ವರ್ಗಗ

ಳಾಗಿ ಒಡೆದು ಹೋಗುತ್ತಾರೆ ಎಂಬುದಕ್ಕೂ ಇದು ವಿರೋಧಿಯಲ್ಲ. ಪ್ರಥಮ ವರ್ಗದ ಶೂದ್ರರಲ್ಲಿ ಅನೇಕ ಸ್ವತಂತ್ರ ಕುಲ ವರ್ಗಗಳು ಉಂಟಾಗುತ್ತವೆಂಬುದು ಪ್ರತ್ಯಕ್ಷ ಕಂಡು ಬರುತ್ತಲೇ ಇದೆ. ವೇದಗಳಲ್ಲಿ ಬರುವ 'ಪಂಚಕ್ಷಿತಿ' ಮುಂತಾದ ಪದಗಳನ್ನು ಋಜು ಮಾರ್ಗ(ಪ್ರಾಮಾಣಿಕ) ರೀತಿಯಲ್ಲಿ ವ್ಯಾಖ್ಯಾನಿಸಿದರೆ ಈಗ ಪಂಚಮರೆನಿಸಿರುವ ಬಹಿಷ್ಕೃತ ಶೂದ್ರರು ಸ್ವತಂತ್ರ ವರ್ಣದವರೆಂಬುದು ಚೆನ್ನಾಗಿ ತಿಳಿಯುತ್ತದೆ. ಹೀಗೆ ಎಲ್ಲ ಬಗೆಯ ಶಾಸ್ತ್ರೀಯ ಯುಕ್ತಿಗಳಿಂದ ಬಹಿಷ್ಕೃತ ಶೂದ್ರರೇ ಪಂಚಮರೆಂಬುದು ಸ್ಪಷ್ಟವಾಗುತ್ತದೆಯಲ್ಲದೇ ಅವರು (ಪಂಚಮರು) ಬ್ರಾಹ್ಮಣ ಕುಲ ವನಿತೆಯರಿಗೆ ಕಲಂಕ ಹಚ್ಚುವ ಹಿನ್ನೆಲೆಯುಳ್ಳವರಲ್ಲವೆಂಬುದು ನಿಶ್ಚಿತ–ಸತ್ಯ. ಆದ್ದರಿಂದ ಇವರು ಸ್ಮೃತಿಗಳಲ್ಲಿ ಸಂಕೀರ್ಣ ಚಂಡಾಲ ಪರವಾದ ವಚನಗಳಿಗೆ ವಿಷಯರಲ್ಲವೆಂಬುದು ಸಿದ್ಧವಾದ ವಿಷಯ.

-ನ ಚ ಶ್ರುತ್ಯರ್ಥಃ-

ಸಂಸ್ಕೃತ ಮೂಲ :-

ಚಂಡಾಲದರ್ಶನ-ಸ್ಪರ್ಶ ನನಿಷೇಧಾರ್ಥಂ ಬೃಹದಾರಣ್ಯಕ ಶ್ರುತಿವಚನಮುದಾಹಾರ್ಷುಃ ಶ್ರೀಚರಣಾಃ । ಯದಿ ತತ್ರ ತೇಷಾಂ ಸ್ವಾಭಿಮತಾರ್ಥೋ ಭವೇತ್, ತದ್ವಾದೋ ಬಲವತ್ತರ ಏವ ಸ್ಯಾತ್॥ ತತ್ತು ಶ್ರೂಯತಾಂ। ಸೈಷಾ ಶ್ರುತಿಃ ಭವತಿ- "ಸಾವಾದೇವತೈತಾಸಾಂ ದೇವತಾನಾಂ ಪಾಪ್ಮಾನಂ ಮೃತ್ಯುಮಪಹತ್ಯ ಯತ್ರಾಸಾಂ ದಿಶಾಮಂತಸ್ತದ್ಗಮಯಾಂ ಚಕಾರ । ತದಾಸಾಂ ಪಾಪ್ಮನೋ ವಿನ್ಯದಧಾತ್ । ತಸ್ಮಾನ್ನ ಜನಮಿಯಾನ್ನಾಂತಮಿಯಾನ್ನೇತ್ ಪಾಪ್ಮಾನಂ ಮೃತ್ಯು ಮನ್ವಾಯಾನೀತಿ"(ಬೃಹ-ಉಪ-1-3-10)ಇದಂ ಚ ಪ್ರಾಣ ವಿದ್ಯಾ ಪ್ರಕರಣಸ್ಥಾ ಶ್ರುತಿಃ। ಅತ್ರ ದಿಶಾಮಂತೇ ವಿಜ್ಞಾತೇ, ಸರ್ವಂ ವಿಸ್ಪಷ್ಟಂ ಭವೇತ್। ಶ್ರೀಶಂರಾಚಾರ್ಯಾಃ ಕಿಮತ್ರ ವ್ಯಾಚಕ್ಷತೇ ? ಪಶ್ಯಾಮಸ್ತಾವತ್ :– 'ನನು ನಾಸ್ತಿದಿಶಾಮಂತಃ, ಕಥಂ ಅಂತಂ ಗಮಿತವಾನಿತಿ? ಉಚ್ಯತೇ । ಶ್ರೌತ ವಿಜ್ಞಾನವಜ್ಜನವಧಿನಿಮಿತ್ತಕಲ್ಪಿತತ್ವಾದ್ದಿಶಾಂ, ತದ್ವಿರೋಧಿಜನಾಧ್ಯುಷಿತೋ ದೇಶ ಏವ ದಿಶಾಂ ಅಂತಃ' ಇತಿ ಭಾಷ್ಯೋಕ್ತಿಃ । ಇದಮವಗಮ್ಯತೇ । ಯದ್ಯಪಿದಿಶಾಮಂತೋನಾಸ್ತಿ, ತಥಾಪಿ ವೈದಿಕ ವಿಜ್ಞಾನವಜ್ಜನಾನಾಮಾವಾಸದೇಶಂ ನಿಮಿತ್ತೀಕೃತ್ಯ ದಿಶಾಮನ್ತಃ ಕಲ್ಪಿತಃ ವೈದಿಕ ಜ್ಞಾನವದ್ವಿರೋಧಿ ಜನಾಧ್ಯುಷಿತೋ ದೇಶೋ ದಿಶಾಮಂತ ಇತಿ ಭಾಷ್ಯಾರ್ಥಃ। ವಿರೋಧಿಜನೇತ್ಯುಕ್ತ್ವಾ ವೇದೋಕ್ತಧರ್ಮಾನುಷ್ಠಾತೃ ಬಾಧಕೋ ಜನ ಏವಾತ್ರ ವಿಷಯೋ ಭವೇತ್। ರಾಮಾಯಣ ಕಾಲಿಕ ಮಾರೀ

ಚಾದಿ ರಾಕ್ಷಸಾ ಉದಾಹಾರ್ಯಾಃ। ಶ್ರುತ್ಯುದಾಹೃತಜನ ಶಬ್ದಸ್ಯ ಪೂರ್ವಾಪರಾಧ್ಯಾಹಾರನಿರಪೇಕ್ಷಂ ತಾವಾನರ್ಥೋ ಭವೇದ್ವೇತ್ಯನುಮಾನಂ। ಜನಸ್ಥಾನಂ ವೈದಿಕ ವಿಜ್ಞಾನವದ್ವಿರೋಧಿಸ್ಥಾನಮಿತಿ ವಾ ಸ್ಯಾತ್। ಯಥಾ ಸರ್ವಪ್ರಾಣಿವಾಚಕಸ್ಯ ಭೂತಶಬ್ದಸ್ಯ ಪಿಶಾಚೆ, ತಥಾ ಸರ್ವದ್ವಿಪಾದ್ವಾಚಕಜನಶಬ್ದಸ್ಯ ತಥಾವಿಧೆ ರೂಢಿಃ ಪ್ರಾಚೀನಾನಾಂ ವ್ಯವಹಾರೇ ಅಭವದ್ವಾ। ಅಗ್ರಜಾತೇಃ ಕಾರುಣ್ಯಂ ಪ್ರತಿಪಾಲಯಂತಃ ಪ್ರಕೃತ ಪಂಚಮಾಃ ಕಥಂ ವಿರೋಧಿಜನಾ ಇತಿ ಶಕ್ಯಂ ವದಿತುಂ ? 'ತಂ ಅಂತ್ಯಂ ಜನಂ' ಇತಿ ಭಾಷ್ಯ ವಚನಖಂಡಂ ತು ಸನ್ನಿಕರ್ಷಬಲಾದ್ದಿಗಂತಭವಪರಂ ಬೋಧ್ಯಂ। ತಸ್ಮಾದಿಯಂ ಶ್ರುತಿಃ ಕ್ರೂರ ವಿರೋಧಿ ಸಹಾಯ ನಿರಾಕರಣಪರಾ, ನತು ದೀನತಮಪಂಚಮ ಬಹಿಷ್ಕಾರವಿಧಾಯಿಕೇತ್ಯಲಂ।

ಶ್ರುತಿಗಳ ಅರ್ಥ ಅದಲ್ಲ

ಅನುವಾದ:–

ಚಂಡಾಲದರ್ಶನ (ನೋಡುವುದು) ಸ್ಪರ್ಶನ (ಮುಟ್ಟುವುದು) ನಿಷೇಧಕ್ಕೆ ಶ್ರೀ ಚಯನರು ಬೃಹದಾರಣ್ಯಕ ಉಪನಿಷದ್ವಾಕ್ಯವನ್ನು ಉದಾಹರಿಸಿದ್ದಾರೆ. ಆ ವಾಕ್ಯಕ್ಕೆ ಅವರ (ಚಯನರ) ಅಭಿಮತಕ್ಕೆ ಅನುಗುಣವಾದ ಅರ್ಥವೇನಾದರೂ ಬರುತ್ತಿದ್ದರೆ ಅವರ ವಾದ ಬಲವತ್ತರವೆನಿಸುತ್ತಿತ್ತು. ಇಲ್ಲಿ ಅದೂ ಇಲ್ಲ. ಆ ಶ್ರುತಿವಾಕ್ಯ ಹೀಗಿದೆ;— (ಮೂಲ ಸಂಸ್ಕೃತದಲ್ಲಿ ಪೂರ್ತಿ ವಾಕ್ಯ ಕೊಟ್ಟಿದೆ) ಇದು ಪ್ರಾಣವಿದ್ಯಾ ಪ್ರಕರಣದಲ್ಲಿರುವ ಶ್ರುತಿವಾಕ್ಯ. ಇದರಲ್ಲಿ 'ದಿಶಾಮಂತಃ' (ದಿಕ್ಕುಗಳ ಕೊನೆ) ಎಂದರೆ ಏನು ? ಎಂಬುದನ್ನು ಖಚಿತ ಪಡಿಸಿಕೊಂಡರೆ ಎಲ್ಲವೂ ಸ್ಪಷ್ಟವಾಗುತ್ತದೆ. ಶ್ರೀ ಶಂಕರಾಚಾರ್ಯರು ಇಲ್ಲಿ ಯಾವರೀತಿ ವಿಚಾರ ಮಾಡಿದ್ದಾರೆ ? ನೋಡೋಣ ;– 'ದಿಕ್ಕುಗಳಿಗೆ ಕೊನೆ ಎಂಬುದಿಲ್ಲ. ಹಾಗಾದರೆ ದಿಕ್ಕುಗಳ ಅಂತ್ಯಕ್ಕೆ ಒಯ್ಯಲ್ಪಟ್ಟನೆಂಬುದು ಹೇಗೆ?' ಎಂದರೆ :– ಹೀಗಿದೆ ಅದರ ಅರ್ಥ :– 'ವೈದಿಕ ವಿಜ್ಞಾನವಂತರಿಂದ ಕೂಡಿರುವ ಪ್ರದೇಶವನ್ನು ವಿಷಯವಾಗಿ ಇಟ್ಟುಕೊಂಡು ಅದಕ್ಕೆ ದಿಕ್ಕುಗಳನ್ನು ಕಲ್ಪಿಸಿದಾಗ ಈ ದಿಕ್ಕುಗಳ ಕೊನೆ ಎಂಬುದು ಅವರ ವಿರೋಧಿ ಜನ ಸಮುದಾಯ ವಾಸಿಸುವ ಸ್ಥಳ ಎಂದಾಗುತ್ತದೆ.' ಇದು ಭಾಷ್ಯೋಕ್ತಿ. ಇದರಿಂದ ವ್ಯಕ್ತವಾಗುವುದೇನೆಂದರೆ:– 'ದಿಕ್ಕುಗಳಿಗೆ ಕೊನೆ ಎಂಬುದು ಇಲ್ಲವಾದರೂ ವೈದಿಕ ವಿಜ್ಞಾನವಂತರು ವಾಸಿಸತ್ತಿರುವ ಪ್ರದೇಶವನ್ನು ಉದ್ದೇಶವಾಗಿಟ್ಟುಕೊಂಡು ದಿಕ್ಕುಗಳ ಅಂತ್ಯ ಎಂಬುದು ಕಲ್ಪಿಸಲ್ಪಟ್ಟದ್ದು

ವೈದಿಕ ವಿಜ್ಞಾನವಂತರ ವಿರೋಧಿಗಳು ವಾಸಿಸುವ ಸ್ಥಳವೇ? ಈ ದಿಕ್ಕುಗಳಿಗೆ ಕೊನೆ ಎಂಬುದು ಭಾಷ್ಯ ಪಂಗ್ತಿಯ ಅರ್ಥ. ವಿರೋಧಿ ಜನರು ಎಂದು ಹೇಳಲ್ಪಟ್ಟಿರುವುದರಿಂದ 'ವೇದಧರ್ಮದ ಅನುಷ್ಠಾನ ಮಾಡತಕ್ಕವರಿಗೆ ಅಡ್ಡಿ-ಆತಂಕ ಒಡ್ಡುವ ಜನರು' ಎಂಬುದು ಇಲ್ಲಿ ಮುಖ್ಯ ವಿಷಯ. ಇದಕ್ಕೆ ಉದಾಹರಣೆ :– ರಾಮಾಯಣ ಕಾಲದ ಮಾರೀಚನೇ ಮುಂತಾದ ರಕ್ಕಸರು. 'ಜನ' ಶಬ್ದಕ್ಕೆ (ಮೇಲೆ ಕಂಡ ಮಂತ್ರದಲ್ಲಿಬರುವ) ಮೊದಲಿನ ಮತ್ತು ನಂತರದ ಪದಗಳನ್ನು ಅಧ್ಯಾಹಾರ ಮಾಡದೆಯೇ ಆ ಬಗೆಯ ಅರ್ಥ ಸಿದ್ಧಿಸುತ್ತದೆಯೇ ಎಂಬುದು ಅನುಮಾನ. ಜನಸ್ಥಾನ (ರಾಮಾಯಣದಲ್ಲಿ ಬರುವ) ಎಂಬುದು ವೈದಿಕ ವಿಜ್ಞಾನವಂತರ ಶತ್ರುಗಳ ವಾಸಸ್ಥಾನ ಎಂದೂ ಆಗಿರಬಹುದು. ಎಲ್ಲ ಪ್ರಾಣಿಗಳ ಸಾಮಾನ್ಯ ವಾಚಕವಾದ 'ಭೂತ' ಶಬ್ದವು 'ಪಿಶಾಚಿ' ಎಂಬ ಅರ್ಥದಲ್ಲಿಯೂ ಬಳಕೆಯಲ್ಲಿದೆ. ಅದೇರೀತಿ ಎರಡು ಕಾಲುಗಳುಳ್ಳ ಎಲ್ಲರಿಗೂ ಅನ್ವಯಿಸುವ ಜನ ಶಬ್ದವು ಪ್ರಾಚೀನರಿಂದ ಈ ವ್ಯಕ್ತಿಗಳ ಬಗ್ಗೆಯೂ ಬಳಕೆಯಲ್ಲಿದ್ದಿರಬಹುದು. ಉಚ್ಚ ವರ್ಣದವರ ಕರುಣೆಗೆ ಪಾತ್ರರಾಗಿ ಅವರ ಮಾತನ್ನನುಸರಿಸುವ ಪ್ರಕೃತ ಪಂಚಮರನ್ನು ವಿರೋಧಿಗಳೆಂದು ಹೇಗೆ ತಾನೇ ಹೇಳಲುಸಾಧ್ಯ ? 'ತಂ ಅಂತ್ಯಂ ಜನಂ' ಎಂಬ ಭಾಷ್ಯದ ತುಣುಕು ಸಾನ್ನಿಧ್ಯ ಬಲದಿಂದ "ದಿಕ್ಕುಗಳ ಕೊನೆಯವನು" ಎಂಬುದರ ಪರವಾಗಿದೆಯೆಂದಷ್ಟೇ ತಿಳಿಯಬೇಕು. ಆದ್ದರಿಂದ ಈ ಶ್ರುತಿ ವಾಕ್ಯವು 'ವೈದಿಕ ಜನಸಮುದಾಯಕ್ಕೆ ವಿರೋಧಿಗಳಾಗಿದ್ದವರ ಸಹಾಯವನ್ನು ನಿರಾಕರಿಸುವ ಉದ್ದೇಶವುಳ್ಳದ್ದೇ ಹೊರತು ಅತ್ಯಂತ ದೀನ–ದುರ್ಬಲನಾದ ಪಂಚಮನಿಗೆ ಬಹಿಷ್ಕಾರ ವಿಧಿಸಲು ಹೊರಟದ್ದಲ್ಲ' ಎಂದಿಷ್ಟೇ ಹೇಳಬೇಕಾಗಿದೆ.

ಸ್ಪೃಶ್ಯದ್ವೇಷ ಸ್ಮೃತಿ ಪ್ರಮಾಣಚರ್ಚಾ:-

ಸಂಸ್ಕೃತಮೂಲ :–

ಅಭ್ಯುಪಗಮ್ಯವಾದೇ ವಾದಾರ್ಥಮಹಮೇವಮಪ್ರೋಚಂ :–
ಸಂಕೀರ್ಣಾಃ ಪಂಚಮಾಃ ಇತ್ಯಭ್ಯುಪಗಮೇಪಿ ತದ್ಬಹಿಷ್ಕಾರ ಸ್ಮೃತಯೋ ನ ಪ್ರಮಾಣಂ ಭವಿತುಮರ್ಹಂತಿ ದ್ವೇಷಹೇತುದರ್ಶನಾತ್' ಇತಿ । ತತ್ರ ಶ್ರೀ ಚಯನಾಃ ಚಾರ್ವಾಕಾದಿಷು ಮಾಂ ಪರಿಗಣಯ್ಯ ದೀರ್ಘಗ್ರಂಥವಿನಿಯೋಗ ಪುರಸ್ಸರಂ ಬಹ್ವಾಪತ್ತೀರ್ಮೇ ಪ್ರಾಹುಃ ।

ಮದುಕ್ತಿಷ್ವಂಗೀಕೃತಾಸು, ಹೇತುದರ್ಶನಾತ್ ಪರದಾರಗಮನನಿಷೇಧ ಸ್ಮೃತಯೋಽಪ್ಯಪ್ರಮಾಣಂ ಕಿಲ ಭವೇಯುಃ । ಏಕಸ್ಯಾ ಜಾತೇಃ ಶಾಶ್ವತಾಧಃ

ಪಾತನಂ, ಸ್ವದಾರಗಮನ ಸೌಖ್ಯೇ ಪರೇಷಾಂ ನಿರಾಕರಣಂ, ಇತಿದ್ವಯಂ ಚೇದಂ ತುಲ್ಯಂ ಮನ್ವಾನಾಃ ಕೇ ವಾ ಸಂತಿ ಮತಿಮಂತಃ। ಪರದಾರಗಮನಾಭಾವಾನ್ನ ಕೋಽಪಿ ಹತಾಸ್ಯುಃ । ಸ ಕಥಂ ದ್ವೇಷ ಮೂಲಕೋ ನಿಷೇಧೋ ಭವೇತ್ ? ಏಕಯಾ ಸ್ಮೃತ್ಯಾ ಸರ್ವೌ ದಂಪತೀ ಸಂಕ್ಷೋಭವರ್ಜಂ ಸುಖಜೀವಿನೌ ಭವೇತಾಂ। ಅನ್ಯಯಾ ಸ್ಮೃತ್ಯಾ ಏಕಾ ಜಾತಿಃ ನಿವಾರಣೋಪಾಯಮದರ್ಶಯಂತ್ಯೈವ ಶಾಶ್ವತಾಂಧಕಾರೇ ಪಾತತ್ಯೇ । ಸ್ಮೃತಿದ್ವಯಮೇಕಕೋಟಿಗಂ ಚಮತ್ಕಾರೇಣ ಬ್ರುವತಾಂ ಚಯನಾನಾಂ ವಾದಪ್ರೌಢಿರ್ವಿಸ್ಪಷ್ಟಾಭವತಿ ।

ಅಥ ಶ್ರಾದ್ಧಸ್ಮೃತಯಶ್ಚ ಸ್ವಾದ್ವನ್ನಭಕ್ಷಣರಾಗಹೇತುಕತ್ವಾತ್ ಅಪ್ರಮಾಣಂ ಭವೇಯುರಿತ್ಯಾಹುಃ । ಅಪರಹ್ನಾವಧಿ ನಿರಶನೇನ ನೀರಸಕುಕ್ಷಿಣಾ ಬ್ರಾಹ್ಮಣೇನ ಶ್ರಾದ್ಧಕರ್ಮಾಂತೇ ಸಹೇಷ್ಟೈರ್ಭುಜ್ಯತೇ । ಕಿಂ ಅಪರಾಹ್ನವೇಳಾ ಸ್ವಾದ್ವನ್ನಭೋಜನಕಾಲಃ ? ಪ್ರಾತಶ್ಚೇತ್ ಕುಕ್ಷಿಪ್ರೀಣನಾಯ ಸ್ಯಾತ್ । ಕಥಮಿಹ ಶ್ರಾದ್ಧಸ್ಮೃತಯೋ ರಾಗಮೂಲಕಾಃ ?

ಅಪಿ ಚ ಯಾಜನಾಧ್ಯಯನಪ್ರತಿಗ್ರಹಾಶ್ಚ ರಾಗಮೂಲಕಾ ಭವೇಯುರಿತ್ಯಾಹುಃ । ನೈತದ್ಯುಕ್ತಂ । ಬ್ರಾಹ್ಮಣಸ್ಯ ವೃತ್ತ್ಯಂತರಾಶ್ರಯಣಂ ನಿಷಿದ್ಧಂ ಸ್ಮಾರ್ಯಂ , ಕಥಂ ತಥಾವಿಧತ್ಯಾಗಪೂರ್ವಿಕಾ ಸ್ವವೃತ್ತಿವ್ಯವಸ್ಥಾ ರಾಗಮೂಲಕಾ ಸ್ಯಾತ್ ? ಯಾಜನಾದಿವೃತ್ತೇರಪ್ಯಧಿಕಧನಪ್ರಾಪ್ತಿಕಾರಣಭೂತಾಃ ವೃತ್ತೀ ಬ್ರಾಹ್ಮಣಾದಿತರೇಭ್ಯೋ ವಿಭಜ್ಯ ವಿದಧಾನಾಃ ಸ್ಮೃತಯಃ ಕಥಂ ರಾಗ ಮೂಲಕಾಃ ? ಪ್ರತ್ಯುತ, ತಾಃ ಬ್ರಾಹ್ಮಣಸ್ಯೌದಾರ್ಯಮೇವ ಪ್ರದರ್ಶಯೇಯುಃ ॥

ಕರಣಾಕರಣಯೋಃ ಪಾರಲೌಕಿಕಲಾಭನಷ್ಟಿಪ್ರದರ್ಶಿಕಾಃ ನ ರಾಗಮೂಲಕಾಃ ಭವಂತೀತಿ ಪ್ರಾಹುಃ । ಇದಂ ಚ ಶ್ರೀಚಯನಾನಾಂ ಸ್ವೀಯಂ ಮತಂ । ಹೇತುದರ್ಶನದೋಷಸ್ಯಾಯಮಪವಾದಃ ಇತಿ ಧರ್ಮಮೀಮಾಂಸಾಯಾಂ ನ ಕುತ್ರಾಪಿ ಸೂತ್ರಿತಂ ॥

ಫಲಶ್ರುತೇರಪಿ ದ್ವೇಷಕಥನಂ ಕಲ್ಪನಾಗೌರವಮಿತಿ ಬ್ರೂತೇ । ನ ವಯಂ ಕಲ್ಪಯೇಮ । ಸ್ಮೃತಯೋ ನ ಸ್ವತಃ ಪ್ರಮಾಣಾನೀತಿ ಸರ್ವೇಷಾಂ ಶಾಸ್ತ್ರಕಾರಾಣಾಂ ಸಮ್ಮತಂ । ವಿಧಿನಿಷೇಧವಾಕ್ಯಾನಾಂ ವೇದಮೂಲಕತ್ವಸ್ಯ ಅನುಮೇಯತಯಾ ಕಾರ್ಯೇ ಸಿಧ್ಯತಿ, ಫಲ ಶ್ರುತೀನಾಮಪಿ ಮೂಲವೇದವಾಕ್ಯಕಲ್ಪ

ನಾಯಾಂ ಯುಷ್ಮಾಕಮೇವ ಕಲ್ಪನಾಗೌರವಂ । ಫಲಶ್ರುತಿವಿವರ್ಜಿತಾನಿ ವಿಧಿ ನಿಷೇಧ ವಾಕ್ಯಾನಿ ನೋಪಪನ್ನಾನೀತಿ ನಾಸ್ತಿ ನಿಯಮಃ । ತಸ್ಮಾದ್ವಾದಾರ್ಥಂ ಪ್ರಕೃತ ಪಂಚಮಾಃ ಸಂಕೀರ್ಣಾ ಇತ್ಯಭ್ಯುಪಗಮೇಪಿ ದ್ವೇಷಹೇತುದರ್ಶನಾದ್ಯು ಷ್ಮಾಕಂ ಸ್ಮೃತಯಃ ಪ್ರಮಾಣಪದಮಧಿರೋಢುಮಶಕ್ತಾಃ ಪುಸ್ತಕಾ ಲಂಕಾರತಾಂ ಭಜಂತೇ ॥

-ದ್ವೇಷಮೂಲವುಳ್ಳ ಸ್ಮೃತಿಗಳಪ್ರಾಮಾಣ್ಯದ ಚರ್ಚೆ-

ಅನುವಾದ :-

ಅಭ್ಯುಪಗಮ್ಯವಾದದ ಸಂದರ್ಭದಲ್ಲಿ ವಾದಕ್ಕೋಸ್ಕರ ನಾನು ಈ ಮುಂದೆ ಕಂಡಂತೆ ಹೇಳಿದೆ :– "ಒಂದು ವೇಳೆ ಸಂಕೀರ್ಣರೇ ಪಂಚಮರೆಂದು ಹೇಳುವಂತೆ ಆದಾಗಲೂ ಸಹ ಅವರಿಗೆ ಬಹಿಷ್ಕಾರ ವಿಧಿಸುವ ಸ್ಮೃತಿಗಳನ್ನು ಪ್ರಮಾಣ ಗಳೆಂದು ಪರಿಗಣಿಸಲಾಗುವುದಿಲ್ಲ. ಅವು ದ್ವೇಷ ಕಾರಣವನ್ನು ಹೊಂದಿರುವು ದರಿಂದ ಅವು ಪ್ರಮಾಣಗಳೆನಿಸಲ್ಪಡಲು ಯೋಗ್ಯವಾಗಿಲ್ಲ." ಈ ಸಂದರ್ಭ ದಲ್ಲಿ ಶ್ರೀ ಚಯನರು ನನ್ನನ್ನು ಚಾರ್ವಾಕನೇ ಮೊದಲಾದ ನಾಸ್ತಿಕರ ಸಾಲಿಗೆ ಸೇರಿಸಿ ದೀರ್ಘವಾಗಿ ಗ್ರಂಥಗಳ ಮೂಲಕ ನನ್ನ ಮೇಲೆ ಆಪಾದನೆ ಮಾಡಿದರು.

ನನ್ನ ಪ್ರತಿಪಾದನೆಗಳನ್ನು ಅಂಗೀಕರಿಸಿದಲ್ಲಿ ಪರದಾರಗಮನ (ಬೇರೆಯವರ ಹೆಂಡತಿಯೊಡನೆ ಕೂಡುವಿಕೆ) ವನ್ನು ನಿಷೇಧಿಸುವ ಸ್ಮೃತಿಗಳು ಕೂಡಾ ಪ್ರಮಾಣ ಹೀನಗಳೆಂದೇ ಆಗುತ್ತದೆಯಷ್ಟೆ? ಒಂದು ಜಾತಿಯನ್ನು ಕೆಳಕ್ಕೆ ತಳ್ಳಿಬಿಡು ವುದು ! ತಮ್ಮ ಹೆಂಡತಿಯ ಸಂಗಸುಖವನ್ನು ಇತರರಿಗೆ ನಿರಾಕರಿಸುವುದು; ಈ ಎರಡೂ ಸಮಾನವೆಂದು ತಿಳಿಯುವ ಬುದ್ಧಿವಂತರು ಯಾರಾದರೂ ಇದ್ದಾ ರೆಯೆ ? ಇನ್ನೊಬ್ಬರ ಪತ್ನಿಯ ಸಹವಾಸಕ್ಕೆ ಆಸ್ಪದವಿಲ್ಲದ ಕಾರಣದಿಂದ ಯಾರೂ ಸಾಯುವುದಿಲ್ಲ. ಅಂದ ಮೇಲೆ ಅದು ದ್ವೇಷಮೂಲವನ್ನುಳ್ಳ ನಿಷೇಧ ಹೇಗಾಗು ತ್ತದೆ? ಒಂದು ಸ್ಮೃತಿ ವಾಕ್ಯದಿಂದ ಎಲ್ಲ ದಂಪತಿಗಳೂ ಯಾವ ತಳಮಳವೂ ಇಲ್ಲದ ಸುಖಜೀವನ ಅನುಭವಿಸುತ್ತಾರೆ; ಮತ್ತೊಂದು ಸ್ಮೃತಿವಾಕ್ಯವು ಒಂದು ಜಾತಿಗೆ ಯಾವ ನಿವಾರಣೋಪಾಯವನ್ನೂ ಕಾಣಿಸದೆ ಆ ಜಾತಿಯನ್ನೇ ಶಾಶ್ವತ ಅಂಧಕಾರಕ್ಕೆ ತಳ್ಳಿ ಬಿಡುತ್ತದೆ; ಹೀಗೆ ಎರಡೂ ಸ್ಮೃತಿಗಳನ್ನು ಒಂದೇ ಕೋಟಿಯಲ್ಲಿ ಸೇರಿಸಿ ಚಮತ್ಕಾರವಾಗಿ ಹೇಳುವ ಶ್ರೀ ಚಯನರ ಪಾದಪ್ರೌಢಿಮೆ ಇಲ್ಲಿ ಸ್ಪಷ್ಟವಾಗುತ್ತದೆ.

ಶ್ರೀಚಯನರು" ಶ್ರಾದ್ಧ ಕರ್ಮಗಳ ಸಂಬಂಧವಾದ ಸ್ಮೃತಿಗಳೂ ಕೂಡ ರುಚಿಯಾದ ಸಮೀಚೀನ ಭೋಜನಕ್ಕೆ ತಾವೇ ಭಾಗಿಗಳಾಗಬೇಕೆಂಬ ದುರಾಸೆಯಿದಲೇ ಹೇಳಲ್ಪಟ್ಟಿವೆಯೆಂದು ತರ್ಕಿಸಿದರೆ ಅವುಗಳಿಗೂ ಪ್ರಾಮಾಣ್ಯತೆ ಇಲ್ಲವೆಂದಾಗಿ ಬಿಡಬಹುದು." ಎಂದು ವಾದಿಸುತ್ತಾರೆ. ಮುಂಜಾನೆಯಿಂದ ಅಪರಾಹ್ನದತನಕ ಆಹಾರ ಪಾನೀಯಗಳನ್ನು ಸೇವಿಸದೆ ಬರಿ ಹೊಟ್ಟೆಯಿಂದ ಇರುವ ಬ್ರಾಹ್ಮಣನು ಶ್ರಾದ್ಧ ಕರ್ಮ ಮುಗಿದಮೇಲೆ ಇಷ್ಟಮಿತ್ರರೊಂದಿಗೆ ಊಟಮಾಡುತ್ತಾನೆ ; ಆದರೆ ಅಪರಾಹ್ನದ ಸಮಯವು ಸುಗ್ರಾಸ ಭೋಜನಕ್ಕೆ ತಕ್ಕಕಾಲವೇ ? ಅಥವಾ ಪೂರ್ವಾಹ್ನದಲ್ಲಿಯೇ ಊಟ ಮಾಡಿದರೆ ಅದು ಕೇವಲ ಹೊಟ್ಟೆ ತುಂಬಿಸಿಕೊಳ್ಳುವ ಕ್ರಮವಾದೀತು ! ಅಂದ ಮೇಲೆ ಶ್ರಾದ್ಧ ಸಂಬಂಧದ ಸ್ಮೃತಿಗಳು ದುರಾಸೆಯ ಮೂಲವುಳ್ಳವುಗಳು ಹೇಗಾಗುತ್ತವೆ?

ಮತ್ತೆ ಯಾಜನ(ಯಜ್ಞಾದಿಗಳನ್ನು ಮಾಡಿಸುವುದು: ಪೌರೋಹಿತ್ಯ) ಅಧ್ಯಾಪನ (ವೇದ-ಶಾಸ್ತ್ರಗಳ ಶಿಕ್ಷಣ ನೀಡುವುದು) ಪ್ರತಿಗ್ರಹ (ದಾನ-ದಕ್ಷಿಣೆ ಸ್ವೀಕರಿಸುವುದು) ಇವುಗಳ ಸಂಬಂಧವಾದ ವಿಧಿ ನಿಯಮಗಳು ಕೂಡಾ ಆಸೆಯ ಮೂಲವುಳ್ಳವುಗಳು ಎಂದಾಗಬಹುದು ಎನ್ನುತ್ತಾರೆ. ಶ್ರೀ ಚಯನರು. ಇದು ಸರಿಯಲ್ಲ. ಬ್ರಾಹ್ಮಣನಿಗೆ ಬೇರೆ ವೃತ್ತಿಗಳನ್ನು ಆಶ್ರಯಿಸುವುದು ನಿಷಿದ್ಧ ಎಂಬುದನ್ನು ನೆನಪಿಸಿಕೊಳ್ಳಬೇಕು. ಅಂದಮೇಲೆ ಆ ಬಗೆಯ ತ್ಯಾಗಪೂರ್ವಕ ವೃತ್ತಿ ವ್ಯವಸ್ಥೆಯನ್ನು ತನ್ನ ವರ್ಣಕ್ಕೆ ವಿಧಿಸಿಕೊಂಡಿರುವುದು ಆಸೆಯ ಮೂಲವುಳ್ಳದ್ದೆಂದು ಹೇಳುವುದು ಹೇಗೆ? ಯಜ್ಞ ಮಾಡಿಸುವುದು (ಪೌರೋಹಿತ್ಯ) ಮೊದಲಾದ ವೃತ್ತಿಗಳಿಗಿಂತ ಬಹುಪಾಲು ಹಣಸಂಪಾದನೆಗೆ ಅವಕಾಶವಿರುವ ವೃತ್ತಿಗಳನ್ನು ಬ್ರಾಹ್ಮಣೇತರ ವರ್ಣದವರಿಗೆ ವಿಭಾಗಿಸಿ ಕೊಟ್ಟಿರುವ ಸ್ಮೃತಿಗಳು ಸ್ವಾರ್ಥ ಭಾವನೆಯಿಂದ ಪ್ರೇರಿತವಾಗಿವೆಯೆನ್ನುವುದು ಎಷ್ಟು ಸಮಂಜಸ ? ಅದಕ್ಕೆ ಬದಲು ಬ್ರಾಹ್ಮಣನ ಔದಾರ್ಯವನ್ನೇ ಅದು ಪ್ರದರ್ಶಿಸುತ್ತದೆ.

ಮಾಡ ಬೇಕಾದ ಕರ್ತವ್ಯ-ಮಾಡಬಾರದ ಕೆಲಸ ಇವುಗಳಿಂದಾಗುವ ಪಾರಲೌಕಿಕ ಲಾಭ-ನಷ್ಟಗಳನ್ನು ಎತ್ತಿ ಹೇಳುವ ಸ್ಮೃತಿಗಳು ಮಾತ್ರ ಆಸೆಯ ಮೂಲವುಳ್ಳವುಗಳಲ್ಲ ಎಂದು ಶ್ರೀ ಚಯನರ ಹೇಳಿಕೆ. ಇದು ಅವರ ಸ್ವಂತದ್ದೇ ಅಭಿಪ್ರಾಯ. ಹೊರತು ಹೇತು ದರ್ಶನ ದೋಷಕ್ಕೆ ಇದೊಂದು ಅಪವಾದವೆಂದು ಧರ್ಮಶಾಸ್ತ್ರ ಮೀಮಾಂಸೆಯಲ್ಲಿ ಎಲ್ಲಿಯೂ ಹೇಳಿಲ್ಲ.

ಫಲಶ್ರುತಿಗಳಿಗೆ ಸಹಾ ದ್ವೇಷ ಮೂಲವನ್ನು ಹೇಳಿದರೆ ಕಲ್ಪನಾಗೌರವ ಸಂಭವಿಸುತ್ತದೆ ಎಂದು ಶ್ರೀಚಯನರು ಹೇಳುತ್ತಾರೆ. ಇಲ್ಲಿ ನಾವು ಏನನ್ನೂ

ಕಲ್ಪಿಸುವುದಿಲ್ಲ. ಸ್ಮೃತಿಗಳು ಸ್ವತಃ ಪ್ರಮಾಣಗಳಲ್ಲವೆಂಬುದು ಶಾಸ್ತ್ರ-ಕಾರರೆಲ್ಲರಿಗೂ ಸಮ್ಮತವಾದ ವಿಷಯ. ವಿಧಿನಿಷೇಧವಾಕ್ಯಗಳಿಗೆ ವೇದ ಮೂಲಗಳನ್ನು ತಿಳಿಯುವುದರಿಂದ ಕಾರ್ಯ ಸಿದ್ಧಿಸುವಾಗ ಫಲಶ್ರುತಿಗಳಿಗೂ ಮೂಲವೇದವಾಕ್ಯಗಳನ್ನು ಕಲ್ಪಿಸುವಲ್ಲಿ ನಿಮಗೇ ಕಲ್ಪನಾಗೌರವ ಸಲ್ಲಬೇಕಾಗುತ್ತದೆ. ಫಲಶ್ರುತಿರಹಿತವಾದ ವಿಧಿನಿಷೇಧ ವಾಕ್ಯಗಳು ಯುಕ್ತಿ ಯುಕ್ತವಲ್ಲ ಎಂಬ ನಿಯಮವೇನೂ ಇಲ್ಲ. ಆದ್ದರಿಂದ ವಾದಕ್ಕಾಗಿ ಈಗ ಪಂಚಮರೆಂದು ಕರೆಯಲ್ಪಡುವವರು ಸಂಕೀರ್ಣರೇ ಸರಿ ಎಂದು ಆದಾಗ ಕೂಡ ದ್ವೇಷಮೂಲವಾದ್ದರಿಂದ ನಿಮ್ಮ (ಜಯನರ) ಸ್ಮೃತಿಗಳು ಪ್ರಮಾಣವೆಂಬ ಸ್ಥಾನವನ್ನು ಏರುವ ಸಾಮರ್ಥ್ಯ ಹೊಂದಿಲ್ಲ. ಅವು ಪುಸ್ತಕದಲ್ಲಷ್ಟೇ ಅಲಂಕಾರಪ್ರಾಯವಾಗಿ ಉಳಿಯತಕ್ಕವುಗಳು.

ಸ್ಮೃತಿವಚನ ಶಕ್ತಿ

ಸಂಸ್ಕೃತ ಮೂಲ :—

ಸರ್ವೇ ಶ್ರೌತಸ್ಮಾರ್ತಧರ್ಮಾಶ್ಚಾತುರ್ವರ್ಣ್ಯ ಸಂಬದ್ಧಾ, ನ ತೇ ಭವನ್ಮತಾನುಸಾರೇಣ ಸಂಕೀರ್ಣ ಜಾತಿನಾಮಭಿಃ ಸಂಬಧ್ಯಂತೇ । ಕಾಶ್ಚಿದ್ವೃತ್ತೀಃ ಕೇಷಾಂಚಿದಭ್ಯನುಜ್ಞಾತಮಿತಿ ಚೇತ್, ಸಂತಿ ಸಾಕ್ಷಾತ್ಸಂಕೀರ್ಣಾಃ, ತಸ್ಮಾನ್ನ ತಾಃ ನಿರವಕಾಶಾಃ ತತ್ರಾಪ್ಯನುಜ್ಞಾ ಏವ ನ ವಿಧಯಃ। ವಿಧಯಶ್ಚೇತ್ ವಿದುರಃ ಸ್ವಧರ್ಮತ್ಯಾಗೀ ಭವೇತ್; ಸತುಮಂತ್ರಿತ್ವಮುವಹತ್। "ಮತ್ಸ್ಯಘಾತೋ ನಿಷಾದಾನಾಂ" ಇತಿ ಯುಷ್ಮತ್ಪ್ರದರ್ಶಿತವಚನಾತ್ ತಸ್ಯ ವೃತ್ತಿರ್ಮತ್ಸ್ಯಘಾತವೃತ್ತಿರ್ಭವೇತ್ ॥

ಸಂಕೀರ್ಣಚಂಡಾಲಸ್ಯ ಸರ್ವಧರ್ಮಬಹಿಷ್ಕಾರಶಾಸ್ತ್ರವಿಷಯಭೂತತ್ವಂ ಕಲ್ಪಯಿತುಂ ಲಕ್ಷಣಾಮಾಶ್ರಿತ್ಯ ವೃಥಾ ಮಾ ಕೃಥಾಃ ಪ್ರಯಾಸಂ । ತತ್ರ ಸಾಕ್ಷಾದ್ಬ್ರಾಹ್ಮಣೇಶೂದ್ರಪುತ್ರೋ ಭವತ್ಯೇವ ವಿಷಯಃ ॥

ಏವಂಚೇದಸ್ಮಾಭಿಃ ಸದ್ವೇಷ ಸ್ಮೃತೀನಾಂ ಪ್ರಾಮಾಣ್ಯಮಂಗೀಕೃತಮಿತಿ ಮಾ ಭೂದ್ವೋ ಭ್ರಮಃ । ಅಸತ್ಯಲಬ್ಧೇ ವಾ ತಾದೃಶಸ್ಮೃತೀನಾಂ ಪ್ರತ್ಯಕ್ಷವೇದಮೂಲೆ, ತಾ ಅಪ್ರಮಾಣಮೇವ ಭವಂತಿ । ಹೇತುದರ್ಶನಸೂತ್ರಸ್ಯ ಅಧ್ವರ್ಯವೇ ವಸ್ತ್ರಂ ದದ್ಯಾದ್ವೈಸರ್ಜನೀಯೇ ಹೋಮೇ ಇತಿ ಸ್ಮೃತಿಮಾತ್ರಂ ವಿಷಯ

ಇತ್ಯುಕ್ತ್ವಾ ಸಂಕಟಾನ್ನಿಷ್ಕ್ರಮಾಯ ಪ್ರಯತತೇ ಜಯನಮಹಾಶಯಃ । ತತ್ತು ಹೇತುದರ್ಶನಸ್ಯೋದಾಹರಣತಯಾದತ್ತಂ । ನ ತು ತದೇಕಮೇವ ವಿಷಯ ಇತಿ ನಿಯಮಿತಂ ।ಅಕಾರಾಂತ ಶಬ್ದಸ್ಯೋಹದಾರಣೆ ರಾಮಶಬ್ದೇ ದತ್ತೇ, ಕೃಷ್ಣ ಮುಕುಂದಾದಿ ಶಬ್ದಾಃ ನ ಭವಂತಿ ಅಕಾರಾಂತಾಃ ಇತಿ ವಾದ ಇವ ಶಾಸ್ತ್ರಿಜಯನಾನಾಂ ವಾದಃ ॥

ಮಯಾ ಕಿಲ ಮಹಾಸಭಾಯಾಮಿದಮುಕ್ತಂ :– ಸಂಕೀರ್ಣಚಂಡಾಲವಾದಾಂಗೀಕಾರೆ, ಅಸ್ಮದೀಯ ಪ್ರಾಚೀನಕುಲಸ್ತ್ರೀಣಾಮಪಮಾನಃ ; ಜಾತೇರಪ್ರತಿಷ್ಠಾ ಚಾಪದ್ಯೇಯಾತಾಮಿತಿ । ತಸ್ಯ ಜಯನಾನಾಮಿದಮುತ್ತರಂ ಭವತಿ :– ಹೇತುದರ್ಶನಾಂಗೀಕಾರೆ ಸದ್ವೇಷಾ ಸ್ಮೃತಿಕಾರಾ ಇತಿ ಸಿಧ್ಯೇತ್, ತೇಷಾಮಪಮಾನಶ್ಚ ಇತಿ । ಪೂರ್ವೇಷಾಂ ಗಾಥಸು ಕತಿ ವಾ ನ ಶ್ರೂಯಂತೆ ಶಾಪ ವಾದಿನಃ? ನ ಚ ತಾನಪಮಾನಿತಾನ್ಮನ್ಯಂತೆ ಶ್ರೋತಾರಃ ಕಿಂ ನ ದ್ವೇಷಮೂಲಕಾಃ ಶಾಪಾಃ? ಕುಲಕನ್ಯಾನಾಂ ವ್ಯಭಿಚಾರಕಥಾಃ ನ ಕೇವಲಂ ತಾಸಾಂ, ತಜ್ಜಾತೇಶ್ಚ ಅಪಮಾನಕರ್ಯ ಇತಿ ವಿದಿತಂ ಸರ್ವೇಷಾಂ । ವಸ್ತುತಸ್ತು, ಸ್ಮೃತೀನಾಂ ಕರ್ತಾರ ಇತರೆ, ತನ್ಮೂಲಭೂತ ಮಂತ್ರದ್ರಷ್ಟಾರೋ ಮನ್ವಾದಯ ಋಷಯ ಇತರೆ ॥

ಸ್ಮೃತಿವಾಕ್ಯಗಳ ಸಾಮರ್ಥ್ಯ

ಅನುವಾದ :-

ಎಲ್ಲ ಶ್ರೌತ-ಸ್ಮಾರ್ತಗಳೂ ನಾಲ್ಕು ವರ್ಣಗಳಿಗೆ ಸಂಬಂಧಿಸಿವೆಯೇ ಹೊರತು ಅವು ಸಂಕೀರ್ಣ ವರ್ಗದವರಿಗೆ ಸಂಬಂಧಿಸುತ್ತವೆಯೆಂಬ ನಿಮ್ಮ (ಜಯನರ) ಅಭಿಪ್ರಾಯ ಸರಿಯಲ್ಲ. ಕೆಲವು ವೃತ್ತಿಗಳನ್ನು ಮಾಡಲು ಕೆಲವರಿಗೆ ಅನುಮತಿಕೊಡತಕ್ಕ ವಿಧಿಗಳು ಇವು ಎಂದಾದರೆ ಅದಕ್ಕೆ ಅರ್ಹರಾದ ಸಾಕ್ಷಾತ್ ಸಂಕೀರ್ಣರೇ ಇದ್ದು ಆ ವಿಧಿಗಳು ಅವರಿಗೆ ಅನ್ವಯಿಸಲ್ಪಡಲು ಅವಕಾಶ ಇದ್ದೇ ಇದೆ. ಅಲ್ಲಿ ಕೂಡ ಅನುಮತಿ ಕೊಡಲ್ಪಡಲೇಬೇಕೆಂಬ ಕಡ್ಡಾಯವೇನಿಲ್ಲ. ಅವು ಕಡ್ಡಾಯವೆನ್ನುವುದಾದರೆ ವಿದುರನು ತನ್ನ ಧರ್ಮ ತ್ಯಾಗ ಮಾಡಿದ ದೋಷಕ್ಕೆ ಗುರಿಯಾಗುತ್ತಾನೆ. ಅವನಾದರೋ ಮಂತ್ರಿಪದವಿಯನ್ನು ನಿರ್ವಹಿಸಿದ.

"ಮತ್ಸ್ಯಘಾತೋ ನಿಷಾದಾನಾಂ" ಎಂಬ ನೀವೇ ತೋರಿಸಿದ ವಚನದಂತೆ ವಿದುರನ ನ್ಯಾಯ ಸಮ್ಮತ ಕಸುಬು ಮೀನು ಕತ್ತರಿಸುವುದಾಗುತ್ತದೆ.

ಸಂಕೀರ್ಣ ಚಂಡಾಲನೇ ಸರ್ವಧರ್ಮ ಬಹಿಷ್ಕಾರ ಶಾಸ್ತ್ರಕ್ಕೆ ಮುಖ್ಯ ವಿಷಯನಾಗುತ್ತಾನೆಂದು ಕಲ್ಪಿಸಲು ಲಕ್ಷಣವನ್ನು ಅವಲಂಬಿಸಿಕೊಂಡು ವ್ಯರ್ಥ ಸಾಹಸ ಮಾಡಬೇಡಿ. ಅಲ್ಲಿ ಮುಖ್ಯ ವಿಷಯನಾಗುವವನು ಬ್ರಾಹ್ಮಣಸ್ತ್ರೀ-ಶೂದ್ರ ಪುರುಷಸಂಜಾತನೇ ಹೊರತು ಬೇರೆಯಲ್ಲ.

ಹಾಗಿದ್ದರೆ ನಾವು ಸದ್ವೇಷಸ್ಮೃತಿ ಪ್ರಮಾಣವನ್ನು ಅಂಗೀಕರಿಸುತ್ತೇವೆಯೆ? ಎಂಬ ಭ್ರಮೆಗೆ ಒಳಗಾಗಬೇಡಿ. ಅಂತಹ ಸ್ಮೃತಿಗಳಿಗೆ ಪ್ರತ್ಯಕ್ಷವಾಗಿ ವೇದ ಮೂಲ ಇಲ್ಲದಿದ್ದರೆ–ದೊರೆಯದಿದ್ದರೆ ಅವು (ಸ್ಮೃತಿಗಳು) ಪ್ರಮಾಣಹೀನವೇ ಆಗುತ್ತವೆ. ವೈಸರ್ಜನೀಯ ಹೋಮದಲ್ಲಿ ಆಚಾರ್ಯನಿಗೆ ವಸ್ತ್ರವನ್ನು ಕೊಡಬೇಕು ಎಂಬುದು ಹೇತುದರ್ಶನ ಸೂತ್ರಕ್ಕೆ ಸ್ಮೃತಿ ಮಾತ್ರ ವಿಷಯವಾಗಿದೆಯೆಂದು ಹೇಳಿ ಶ್ರೀ ಚಯನರು ಸಂಕಟದಿಂದ ಪಾರಾಗಲು ಪ್ರಯತ್ನಿಸಿದ್ದಾರೆ. ಹೇತು ದರ್ಶನಕ್ಕೆ ಒಂದು ಉದಾಹರಣೆಯಾಗಿ ಮಾತ್ರ ಆ ವಿಷಯ ಕೊಡಲ್ಪಟ್ಟಿದೆಯೇ ಹೊರತು ವಿಷಯ ಅದೊಂದೇ ಎಂಬ ನಿಯಮವೇನಿಲ್ಲ. ಅಕಾರಾಂತ ಶಬ್ದಕ್ಕೆ ಉದಾಹರಣೆಯಾಗಿ 'ರಾಮ' ಶಬ್ದವನ್ನು ಕೊಟ್ಟಾಗ ಕೃಷ್ಣ ಮುಕುಂದ ಮೊದಲಾದ ಪದಗಳು ಅಕಾರಾಂತಗಳೆನಿಸುವುದಿಲ್ಲ ಎಂಬ ವಾದದಂತಿದೆ ಶಾಸ್ತ್ರಿಚಯನರವಾದ.

ಮಹಾ ಸಭೆಯಲ್ಲಿ ನಾನು ಹೀಗೆ ಹೇಳಿದ್ದೇನೆ :- "ಸಂಕೀರ್ಣ ಚಂಡಾಲ ವಾದವನ್ನು ಅಂಗೀಕರಿಸಿದರೆ ನಮ್ಮ ಪ್ರಾಚೀನ ಕುಲಸ್ತ್ರೀಯರಿಗೆ ಅಪಮಾನ-ಜಾತಿಗೇ ಅಗೌರವ-ಸಂಭವಿಸುತ್ತದೆ. ಅದಕ್ಕೆ ಶ್ರೀ ಚಯನರು "ಹೇತು ದರ್ಶನವನ್ನು ಅಂಗೀಕರಿಸಿದಾಗ ಸ್ಮೃತಿಕಾರರು ದ್ವೇಷ ಭಾವನೆಯುಳ್ಳವರೆಂಬುದು ಸಿದ್ಧವಾಗುತ್ತದೆ. ಇದು ಸ್ಮೃತಿಕಾರರಿಗೆ ಅಪಮಾನ ಮಾಡಿದಂತೆ" ಎಂದು ಪ್ರತ್ಯುತ್ತರ ನೀಡುತ್ತಾರೆ. ಪುರಾತನರ ಕಥಾ ಪ್ರಸಂಗಗಳಲ್ಲಿ ಶಾಪಕ್ಕೆ ಕಾರಣರಾದವರ ವಿಷಯ ಎಷ್ಟೊಂದು ಕೇಳಿ ಬರುತ್ತಿದೆಯಲ್ಲಾ ? ಆ ಕಥೆಗಳನ್ನು ಕೇಳುವವರು ಶಾಪಗಳು ದ್ವೇಷಮೂಲವುಳ್ಳವುಗಳಲ್ಲ ಎಂದು ಶಾಪಕ್ಕೆ ಕಾರಣವಾದವರನ್ನು ಅಪಮಾನಿತರೆಂಬುದಾಗಿ ಭಾವಿಸುವುದಿಲ್ಲವೇನು ? ಕುಲಕನ್ಯೆಯರ ವ್ಯಭಿಚಾರ ಕಥೆಗಳು ಅವರಿಗೆ ಮಾತ್ರವಲ್ಲ ! ಅವರ ಜಾತಿಗೇ ಅಪಮಾನಕರವಾದವುಗಳೆಂಬುದು ಎಲ್ಲರಿಗೂ ತಿಳಿದೇ ಇದೆ. ವಾಸ್ತವಿಕವಾಗಿ ಸ್ಮೃತಿಗಳನ್ನು ರಚಿಸಿದವರೇ ಬೇರೆ ! ಅವುಗಳಿಗೆ ಮೂಲವಾಗಿರುವ ಮಂತ್ರಗಳ ದ್ರಷ್ಟಾರರಾದ ಮನು ಮುಂತಾದ ಋಷಿಗಳೇ ಬೇರೆ!

ಒಟ್ಟಿನಲ್ಲಿ ಅಸ್ಪೃಶ್ಯತೆಯಬಗ್ಗೆ ವಾಸಿಷ್ಠಮುನಿಗಳ ಶಾಸ್ತ್ರೀಯ ಪ್ರತಿಪಾದನೆಯ ಸಾರಾಂಶ ಇಷ್ಟು :– ಈಗ ಆಚರಣೆಯಲ್ಲಿರುವಂತೆ ಪಂಚಮ-ಚಂಡಾಲರೆಂದು ಕರೆಯಲ್ಪಡುವವರು-ಶಾಸ್ತ್ರೀಯ ಆಧಾರಗಳನ್ನು-ತೆರೆದ ಮನದಿಂದ ವಿವೇಚಿಸಿದಾಗ ಅಸ್ಪೃಶ್ಯರಲ್ಲವೆಂಬುದು ಸಿದ್ಧವಾಗುತ್ತದೆ. ಒಂದುಕಾಲದಲ್ಲಿ ವೈದಿಕ ಸಂಪ್ರದಾಯದ ನಿಷ್ಠರಿಗೆ ವಿರೋಧ ಸೂಚಿಸುತ್ತಾ ದೂರದಲ್ಲಿ-ಕೊನೆಯಲ್ಲಿ ಉಳಿದವರೇ ಅಂತ್ಯಜರು ;ಅಸ್ಪೃಶ್ಯರು. (ಅಂದರೆ ಕಿರಾತರು-ಬರ್ಬರರು ಮುಂತಾದವರು)

–ಅನುವಾದಕ–

—o—



ಹರಿಹರಪುರ ಬಿ. ಸುಬ್ರಹ್ಮಣ್ಯಂ

ಸಂಸ್ಕೃತದಲ್ಲಿಯ ಧೀಮಂತ ಕೃತಿಗಂಗೆಯೊಂದನ್ನು ಕನ್ನಡ ಕಾವೇರಿಗೆ ಸೇರಿಸುವ ಸಾಹಸದ ಕೆಲಸವನ್ನು ನಿಷ್ಠೆಯಿಂದ ಕೈಗೆತ್ತಿಕೊಂಡು ಪೂರ್ಣಗೊಳಿಸಿರುವ ಶ್ರೀ ಹರಿಹರಪುರ ಸುಬ್ರಹ್ಮಣ್ಯಂರವರು ಸ್ತುತ್ಯರ್ಹರು. ಶ್ರೀ ರಮಣ ಮಹರ್ಷಿಗಳನ್ನು ಜಗತ್ತಿಗೆ ಪರಿಚಯಿಸಿಕೊಟ್ಟ ಹಿರಿಮೆ ಶ್ರೀ ವಾಸಿಷ್ಠಗಣಪತಿ ಮುನಿಯರದ್ದೇ. ವಿದ್ವಜ್ಜನರು, ದಾರ್ಶನಿಕರು, ಧಾರ್ಮಿಕರು ಬಹಳಕಾಲದಿಂದ ಶ್ರೀ ವಾಸಿಷ್ಠರ ಬರಹಗಳಿಂದ ಬೆಳಕನ್ನು ಕಂಡಿದ್ದಾರೆ.

'ಶ್ರೀ ವಾಸಿಷ್ಠ ವೈಭವಂ' ಶೀರ್ಷಿಕೆಯ ಸಂಸ್ಕೃತದ ಉದ್ಗ್ರಂಥವು ಶ್ರೀ ಕಪಾಲಿ ಶಾಸ್ತ್ರಿಗಳು ತಮ್ಮ ಗುರುಗಳ ಸಚ್ಚರಿತ್ರೆಯನ್ನು ಚಿತ್ರೀಕರಿಸಿದ; ಪ್ರಮಾಣೀಕರಿಸಿದ; ವೈಭವ. ಈ ವೈಭವಕ್ಕೆ ಕನ್ನಡದ 'ಕನ್ನಡಿ–ಕಳಶ' ಹಿಡಿದವರು ಶ್ರೀ ಸುಬ್ರಹ್ಮಣ್ಯಂ.

ಕನ್ನಡ ಓದುಗರಿಗೆ ಈ ಕೃತಿ ಬಹಳ ಉಪಯುಕ್ತವಾಗಿದೆ. ಶ್ರೀ ಪು.ತಿ.ನ.ರವರ ಸಸ್ನೇಹ ಆಶೀರ್ವಾದಗಳನ್ನೂ, ಶ್ರೀ ರಂಗನಾಥ ಶರ್ಮರ ಮುನ್ನುಡಿಯನ್ನೂ, ಗಿಟ್ಟಿಸಿಕೊಂಡ ಶ್ರೀ ಹರಿಹರಪುರ ಸುಬ್ರಹ್ಮಣ್ಯಂ ತುಂಬಾ ಪುರುಷಿನವರು. ಈ ಲೇಖಕರ ಅನುವಾದ ಶ್ರೀಗಂಧವನ್ನು ತೇದು ಹಚ್ಚಿದಂತೆ; ಹಾಲನ್ನುಕುದಿಸಿ, ತಣಿಸಿ–ಉಣಿಸಿದಂತೆ, ಮೇಳೈಸಿದೆ.

ನರಸಿಹ್ಮಮೂರ್ತಿ, ಸೂರಳಿ